
ಸಮಾಜಶಾಸ್ತ್ರ 7ನೇ ತರಗತಿ









IN ANY EMERGENCY
DIAL
100
TELANGANA POLICE
www.tspolice.gov.in
@ Telangana State Police

ರಾಜ್ಯ ವಿದ್ಯಾ, ಪರಿಶೋಧನ ಶಿಕ್ಷಣ ಸಂಸ್ಥೆ
ತೆಲಂಗಾಣ ಹೈದರಾಬಾದು.

ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ

ಸಮಾಜಶಾಸ್ತ್ರ 7ನೇ ತರಗತಿ

ಸಮಾಜಶಾಸ್ತ್ರ

7 ನೇ ತರಗತಿ

FREE

Social Studies
Class VII (Kannada Medium)



ತೆಲಂಗಾಣ ಸರ್ಕಾರದ ಪ್ರಚುರಣೆ
ಹೈದರಾಬಾದು



ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ

SCERT

ಮಕ್ಕಳ ಹಕ್ಕುಗಳ ಕಾಯಿದೆ (ಕಾನೂನು)

18 ವರ್ಷ ಒಳಗಿರುವವರೆಲ್ಲರೂ ಮಕ್ಕಳೇ. ಮಕ್ಕಳ ಪೋಷಣೆ ಮತ್ತು ಸಮಗ್ರಾಭಿವೃದ್ಧಿ ತಂದೆ ತಾಯಿಗಳು ಕನಿಷ್ಟ ಜವಾಬ್ದಾರಿಯಾಗಿದೆ. ರಾಜ್ಯವು ಮಕ್ಕಳ ಹಕ್ಕುಗಳನ್ನು ಗೌರವಿಸಿ ಪರಿರಕ್ಷಿಸುತ್ತದೆ.

- ಸ್ವತಂತ್ರವಾಗಿ ಭಾವವ್ಯಕ್ತೀಕರಣ ನನ್ನ ಹಕ್ಕು, ಆ ಭಾವನೆಗಳನ್ನು ತೀರ್ವವಾಗಿ ಪರಿಗಣಿಸಬೇಕು ಮತ್ತು ಇನ್ನೊಬ್ಬರ ಹೇಳಿಕೆಯನ್ನು ಕೇಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.
- ಆರೋಗ್ಯ ಪರಿರಕ್ಷಣೆ ನನ್ನ ಹಕ್ಕು, ಕುಡಿಯುವ ನೀರು ಎಲ್ಲರಿಗೂ ಸಿಗುವಂತೆ ಸಹಕರಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. (ವಿಧಿ 12,13)
- ನ್ಯಾಯವಾದ ವಿದ್ಯೆ ಹೊಂದುವುದು ನನ್ನ ಹಕ್ಕು, ಮಕ್ಕಳೆಲ್ಲರೂ ಶಾಲೆಗೆ ಹೋಗುವಂತೆ ಪ್ರೋತ್ಸಾಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. (ವಿಧಿ, 28,29,83)
- ಹಾನಿ ಮತ್ತು ದೋಷನೆಗಳುಹೊಂದುತ್ತಾ ಪ್ರೀತಿ ಮತ್ತು ರಕ್ಷಣೆ ಹೋಂದುವುದು ನನ್ನ ಹಕ್ಕು, ಮಕ್ಕಳನ್ನು ಪ್ರೀತಿಸುವುದು, ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ (ವಿಧಿ 19)
- ನನ್ನ ಸಾಮಥ್ಯಗಳನ್ನು ಬೆಳೆಸಿಕೊಳ್ಳುವುದು ನನ್ನ ಹಕ್ಕು. ವಿವಿಧ ಭಿನ್ನತೆ ಇರುವವರನ್ನು ಗೌರವಿಸುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 23)
- ನನ್ನ ವಾರಸತ್ವ, ನಂಬಿಕೆಗಳ ಬಗ್ಗೆ ಗರ್ವವಾಗಿ ಇರುವುದು ನನ್ನ ಹಕ್ಕು ಇತರರ ಸಂಸ್ಕೃತಿಯನ್ನು, ನಂಬಿಕೆಗಳನ್ನು ಗೌರವಿಸುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 29,30)
- ಸುರಕ್ಷಿತ ಸೌಕರ್ಯಯುತವಾದ ಗೃಹ ಹೊಂದುವುದು ನನ್ನ ಹಕ್ಕು. ಮಕ್ಕಳೆಲ್ಲರೂ ಅಂತಹಃ ಮನೆಗಳನ್ನು ಹೊಂದಿರುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 27)
- ತಪ್ಪು ಮಾಡುವುದು ನನ್ನ ಹಕ್ಕು, ತಪ್ಪು ಗ್ರಹಿಕೆಯಿಂದ ಅಭ್ಯಸನ ನಡೆಯುತ್ತದೆ. ಎನ್ನುವ ವಿಷಯವನ್ನು ಅಂಗೀಕರಿಸುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 28)
- ಪೌಷ್ಟಿಕ ಆಹಾರವನ್ನು ಪಡೆಯುವುದು ನನ್ನ ಹಕ್ಕು, ಯಾರು ಹಸಿವೆಯಿಂದ ಸಾಯದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 24)
- ಪರಿಶುಭ್ರವಾದ ಪರಿಸರಗಳು ನನ್ನ ಹಕ್ಕು, ಅವುಗಳನ್ನು ಮಾಲಿನ್ಯವಾಗದಂತೆ ನೋಡುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 29)
- ಹಿಂಸೆ (ಮೌಖಿಕ, ಶಾರೀರಿಕ, ಭಾವೋದ್ವೇಗ,) ಇಲ್ಲದೆ ಜೀವಿಸುವುದು ನನ್ನ ಹಕ್ಕು, ಇತರರೊಂದಿಗೆ ಹಿಂಸಾತ್ಮಕವಾಗಿ ನಡೆದುಕೊಳ್ಳದಿರುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 28,37)
- ಆರ್ಥಿಕ ಶೋಷಣೆಯಿಂದ ರಕ್ಷಿಸಿಕೊಳ್ಳುವುದು ನನ್ನ ಹಕ್ಕು, ಮಕ್ಕಳು ಕೆಲಸಕ್ಕೆ ಹೋಗದಂತೆ ನೋಡಿ ಸ್ವತಂತ್ರದಿಂದ ಕೂಡಿದ ಸುರಕ್ಷಿತ ಪರಿಸರವನ್ನು ಕಲ್ಪಿಸಿಕೊಡುವುದು ಪ್ರತಿಯೊಬ್ಬರ ಜವಾಬ್ದಾರಿ. (ವಿಧಿ 32,34)

ಮೇಲಿನ ಮಕ್ಕಳ ಹಕ್ಕುಗಳು, ಜವಾಬ್ದಾರಿಗಳು ವಿಶ್ವಸಂಸ್ಥೆಯಿಂದ 1989ರಲ್ಲಿ ಪ್ರತಿಪಾದಿಸಲಾಗಿದೆ. ಇವು ಪ್ರಪಂಚದಲ್ಲಿನ ಮಕ್ಕಳ ಮತ್ತು ಯುವಕರ ಹಕ್ಕುಗಳು. ಭಾರತ ಸರ್ಕಾರ ಈ ಪತ್ರಕ್ಕೆ 1992 ರಲ್ಲಿ ಅನುಮೋದಿಸಲಾಗಿದೆ.

ಈ – ಪ್ರಕೃತಿ ವೈಪರೀತ್ಯಗಳನ್ನು ಎದುರಿಸಲು ಮಾಡಬೇಕಾದದ್ದು, ಮಾಡಬಾರದ್ದು ನಿನಗೆ ಗೊತ್ತೇ?











© SCERT TELANGANA

ಸಮಾಜ ಶಾಸ್ತ್ರ

ಏಳನೇ ತರಗತಿ

Social Studies Class-VII (Kannada Medium)

ಸಂಪಾದಕರು

ಶ್ರೀ ಸಿ.ಎಸ್. ಸುಬ್ರಹ್ಮಣ್ಯಂ
ಏಕಲವ್ಯ, ಭೂಪಾಲ, ಮಧ್ಯಪ್ರದೇಶ

ಪ್ರೊ॥ ಐ. ಲಕ್ಷ್ಮಿ,
ಚರಿತ್ರೆ ವಿಭಾಗ,ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್

ಪ್ರೊ॥ ಎಮ್. ಕೊದಂಡರಾಮ್,
ರಾಜನೀತಿಶಾಸ್ತ್ರ ವಿಭಾಗ, ಪಿ.ಜಿ.ಕಾಲೇಜ್, ಸಿಕಿಂದ್ರಾಬಾದ್, ಹೈದರಾಬಾದ್

ಪ್ರೊ॥ ಕೆ. ವಿಜಯಬಾಬು,
ಇತಿಹಾಸ ವಿಭಾಗ, ಕಾಕತೀಯ ಯೂನಿವರ್ಸಿಟಿ,ವರಂಗಲ್

ಡಾ॥ ಎಂ.ವಿ. ಶ್ರೀನಿವಾಸನ್
ಅಸಿಸ್ಟೆಂಟ್ ಪ್ರೊಫೆಸರ್, ಧಿಷ್ ವಿಭಾಗ
ಎನ್.ಸಿ.ಇ.ಆರ್.ಟಿ. ನ್ಯೂಡೆಲ್ಲಿ

ಡಾ॥ ಎಂ.ವಿ.ಎಸ್.ವಿ. ಪ್ರಸಾದ್
ಅಸಿಸ್ಟೆಂಟ್ ಪ್ರೊಫೆಸರ್, ಧಿಷ್ ವಿಭಾಗ
ಎನ್.ಸಿ.ಇ.ಆರ್.ಟಿ. ನ್ಯೂಡೆಲ್ಲಿ

ಡಾ॥ ಸಿ. ದಯಾಕರ್ ರೆಡ್ಡಿ
ಅಸಿಸ್ಟೆಂಟ್ ಪ್ರೊಫೆಸರ್, ಯುನಿವರ್ಸಿಟಿ ಕಾಲೇಜ್ ಫರ್ ಉಮೆನ್, ಕೋಠಿ, ಹೈದರಾಬಾದ್.

ಶ್ರೀ ಕೆ. ಸುರೇಶ್
ಮಂಚಿ ಪುಸ್ತಕಂ, ಹೈದರಾಬಾದ್.

ಪ್ರೋ॥ ಜಿ. ಓಂಕಾರಾನಾಥ್
ಅರ್ಥಶಾಸ್ತ್ರ ವಿಭಾಗ,ಯುನಿವರ್ಸಿಟೀ ಆಫ್ ಹೈದರಾಬಾದ್. ಹೈದರಾಬಾದ್

ಪ್ರೋ॥ ಎಸ್. ಪದ್ಮಜ
ಭೂಗೋಳಶಾಸ್ತ್ರ ವಿಭಾಗ,ಉಸ್ಮಾನಿಯಾ ವಿಶ್ವವಿದ್ಯಾಲಯ ಹೈದರಾಬಾದ್.

ಪ್ರೋ. ಎ. ಸತ್ಯನಾರಾಯಣ (ನಿವೃತ್ತ),
ಇತಿಹಾಸ ವಿಭಾಗ,ಉಸ್ಮಾನಿಯಾ ವಿಶ್ವವಿದ್ಯಾಲಯ ಹೈದರಾಬಾದ್.

ಡಾ॥ ಕೆ.ಕೆ. ಕೈಲಾಸ್,
ರಾಜನೀತಿಶಾಸ್ತ್ರ ವಿಭಾಗ, ಹೆಚ್.ಸಿ.ಯು,ಹೈದರಾಬಾದ್.

ಶ್ರೀ. ಅರವಿಂದ್ ಸರ್ಧಾನ,
ಡೈರೆಕ್ಟರ್, ಏಕಲವ್ಯ, ಭೂಪಾಲ, ಮಧ್ಯಪ್ರದೇಶ

ಡಾ॥ ಕೆ. ನಾರಾಯಣರೆಡ್ಡಿ
ಅಸಿಸ್ಟೆಂಟ್ ಪ್ರೊಫೆಸರ್,ಭೂಗೋಳ ಶಾಸ್ತ್ರ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯ,ಹೈದರಾಬಾದ್.

ಶ್ರೀ. ರಾಮ್ಮೂರ್ತಿ ಶರ್ಮ,
ವಿದ್ಯಾ ವಿಭಾಗ, ಪಂಜಾಬ್.

ಶ್ರೀ ಅಲೆಕ್ಸ್ ಎಂ. ಜಾರ್ಜ್
ಏಕಲವ್ಯ, ಭೂಪಾಲ, ಮಧ್ಯಪ್ರದೇಶ

ಪಠ್ಯಪುಸ್ತಕ ಅಭಿವೃದ್ಧಿ ಪ್ರಚುರಣ ಸಮಿತಿ

ಶ್ರೀಮತಿ ಬಿ. ಶೇಷುಕುಮಾರಿ
ಸಂಚಾಲಕರು
ಎಸ್.ಸಿ.ಇ.ಆರ್.ಟಿ.
ಹೈದರಾಬಾದ್.

ಶ್ರೀ ಬಿ.ಸುಧಾಕರ್
ಸಂಚಾಲಕರು
ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ
ತೆಲಂಗಾಣ,ಹೈದರಾಬಾದ್.

ಡಾ॥ ಎನ್.ಉಪೇಂದರ್ ರೆಡ್ಡಿ, ಪ್ರೊಫೆಸರ್
ವಿದ್ಯಾಪ್ರಣಾಳಿಕೆ–ಪಠ್ಯಪುಸ್ತಕ ವಿಭಾಗ,
ಎಸ್.ಸಿ.ಇ.ಆರ್.ಟಿ., ತೆಲಂಗಾಣ,ಹೈದರಾಬಾದ್.

ತೆಲಂಗಾಣ ಪ್ರಭುತ್ವ ಪ್ರಚುರಣೆ, ಹೈದರಾಬಾದ್.

ವಿದ್ಯೆಯಿಂದ ಬೆಳೆಯಬೇಕು
ವಿನಯದಿಂದ ನಡೆಯಬೇಕು.

ಕಾನೂನನ್ನು ಗೌರವಿಸಿರಿ.
ಹಕ್ಕುಗಳನ್ನು ಪಡೆಯಿರಿ.

SCERT TELANGANA

© Government of Telangana, Hyderabad.

New Edition

First Published 2012

New Impressions 2013, 2014, 2015, 2016, 2017, 2018, 2019, 2020.

All rights reserved.

No part of this publication may be reproduced, stored in a retrieval system, or transmitted, in any form or by any means without the prior permission in writing of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purchaser.

The copy right holder of this book is the Director of School Education, Hyderabad, Telangana. We have used some photographs which are under creative common licence. They are acknowledged at the end of the book.

This Book has been printed on 70 G.S.M. Maplitho
Title Page 200 G.S.M. White Art Card

ತೆಲಂಗಾಣ ಸರ್ಕಾರದ ಉಚಿತ ವಿತರಣೆ 2020–21

Printed in India
at the Telangana Govt. Text Book Press,
Mint Compound, Hyderabad,
Telangana.

— o —

SCERT TELANGANA

ಸಮಾಜಶಾಸ್ತ್ರ
7ನೇ ತರಗತಿ

ರಚನಾಕಾರರು

ಶ್ರೀ ಕೆ. ಲಕ್ಷ್ಮೀನಾರಾಯಣ, ಲೆಕ್ಚರರ್, ಡೈಟ್,ಅಂಗಲೂರು, ಕೃಷ್ಣ ಜಿಲ್ಲೆ
ಶ್ರೀ ಮಡಿತಾಟಿ ನರಸಿಂಹರೆಡ್ಡಿ, ಜಿ.ಹೆಚ್.ಎಂ.ಜಿ.ಪ.ಶಾಲೆ ಪೆದ್ದಜಂಗಂಪಲ್ಲಿ. ವೈ.ಎಸ್.ಆರ್.ಕಡಪ
ಶ್ರೀ ಕೆ. ಸುಬ್ರಮಣ್ಯಂ, ಲೆಕ್ಚರರ್, ಡೈಟ್, ಕರ್ನೂಲ್.
ಶ್ರೀ ಎಮ್. ಪಾಪಯ್ಯ, ಲೆಕ್ಚರರ್ ಎಸ್.ಸಿ.ಆರ್.ಟಿ. ಹೈದರಾಬಾದ್, ತೆಲಂಗಾಣ.
ಡಾ॥ ಬಿ.ವಿ.ಎಸ್.ಸ್ವಾಮಿ, ಸ್ಕೂಲ್ ಅಸಿಸ್ಟೆಂಟ್,ಜಿ.ಪ.ಉ.ಪಾಠಶಾಲೆ,ಹುಜೂರಾಬಾದ್,ಕರೀಂನಗರ್
ಡಾ॥ ಪಿ. ಶ್ರೀನಿವಾಸುಲು, ಸ್ಕೂಲ್ ಅಸಿಸ್ಟೆಂಟ್ ಜಿ.ಪ,ಉ.ಪಾಠಶಾಲೆ,ಬಂಡಪೋಸಾನಿಪಲ್ಲಿ,ವೆಲ್ದುರ್ತಿ,ಮೆದಕ್
ಶ್ರೀ ಅಯಾಚಿತುಲ ಲಕ್ಷಣರಾವು, ಸ್ಕೂಲ್ ಅಸಿಸ್ಟೆಂಟ್. ಜಿ.ಹೆಚ್.ಎಸ್,ಧನಗರ್‌ವಾಡಿ,ಕರೀಂನಗರ್.
ಶ್ರೀಮತಿ ಎಸ್.ಸುವರ್ಣದೇವಿ,ಸರ್ಕಾರಿ ಡಿಗ್ರಿ ಕಾಲೇಜ್, ನರ್ಸಾಪೂರ್,ಮೆದಕ್
ಶ್ರೀ ರಾಚರ್ಲ ಗಣಪತಿ, ಸ್ಕೂಲ್ ಅಸಿಸ್ಟೆಂಟ್,ಜಿ.ಪ.ಉ.ಪಾಠಶಾಲೆ,ಲಾದೆಲ್ಲ,ವರಂಗಲ್
ಶ್ರೀ ಕೊರಿವಿ ಶ್ರೀನಿವಾಸರಾವು,ಎಮ್.ಪಿ.ಯು.ಪಿ.ಎಸ್..ಪಿ.ಆರ್.ಪಲ್ಲಿ.,ಟೆಕ್ಕಲಿ,ಶ್ರೀಕಾಕುಳಂ
ಶ್ರೀ. ಸಿ. ಹೆಚ್. ರಾಧಕೃಷ್ಣ, ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ.ಪಾಠಶಾಲೆ ವೆಂಕಟಾಪುರಂ, ಶ್ರೀಕಾಕುಳಂ
ಶ್ರೀ ಟಿ.ರಾಮಕೃಷ್ಣ, ಸ್ಕೂಲ್ ಅಸಿಸ್ಟೆಂಟ್ ಜಿ.ಪ.ಉ ಪಾಠಶಾಲೆ, ದೇವ ಪೆನುಗೊಂಡ, ಪಶ್ಚಿಮ ಗೋದಾವರಿ
ಶ್ರೀ ಕೆ.ಕುಮಾರ ಸ್ವಾಮಿ, ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ,ದೌಡೇಪಲ್ಲಿ,ಆದಿಲಾಬಾದ್
ಶ್ರೀಮತಿ ಬಿ.ಸರಳ,ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಬಾಲಕಿಯರ.ಉ.ಪಾಠಶಾಲೆ,ಇಂದುಕೂರುಪೇಟೆ,ನೆಲ್ಲೂರು
ಶ್ರೀ ಪಿ.ವಿ.ಕೃಷ್ಣಾರಾವು, ಎಲ್.ಎಫ್.ಎಲ್.ಹೆಚ್.ಎಮ್..ಪ್ರಾ.ಪಾ..ಮೊಹಲ್ಲಾ ನಂ.16,ಇಲ್ಲಂದು,ಖಮ್ಮಂ
ಶ್ರೀ ಎ.ಆರ್.ರಮೇಶ್ರಾವು,ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ,ರೊದ್ದಂ,ಅನಂತಪುರಂ
ಶ್ರೀ ರಥಂಗ ಪಾಣಿರೆಡ್ಡಿ, ಸ್ಕೂಲ್ ಅಸಿಸ್ಟೆಂಟ್,ಜಿ.ಪ.ಉ.ಪಾಠಶಾಲೆ ಪೊಲ್ಕಪಲ್ಲಿ ಅಡ್ಡಾಕಲ್, ಮಹಬೂಬನಗರ್.
ಶ್ರೀ ವಂಗೂರಿ ಗಂಗಿರೆಡ್ಡಿ, ಸ್ಕೂಲ ಅಸಿಸ್ಟೆಂಟ್,ಜಿ.ಪ.ಉ.ಪಾಠಶಾಲೆ ಕೊಂದುರ್ಗು, ಮಹಬೂಬನಗರ್.
ಡಾ॥ ಚಕಿನಾಲ ಶ್ರೀನಿವಾಸ್, ಜಿ.ಹೆಚ್.ಎಂ.ಪ್ರ.ಉ.ಪಾಠಶಾಲೆ, ದುರ್ಗಮ್ಮಗಡ್ಡ, ಕರೀಂನಗರ್.
ಶ್ರೀ ಯು. ಆನಂದಕುಮಾರ್,ಸ್ಕೂಲ ಅಸಿಸ್ಟೆಂಟ್ ಜಿ.ಪ.ಉ.ಪಾಠಶಾಲೆ ಪಾತ ಪಾಲ್ವಂಚ, ಖಮ್ಮಂ.
ಶ್ರೀ ಎನ್.ಸಿ.ಜಗನ್ನಾಥ್,ಪ್ರ.ಉ.ಪಾಠಶಾಲೆ, ಕುಲ್ಸುಂ ಪುರ, ಹೈದರಾಬಾದ್.
ಶ್ರೀಮತಿ ಹೇಮಕಾತ್ರಿ, IGNIS, ಹೈದರಾಬಾದ್. ಪ್ರೂಫ್ ರೀಡಿಂಗ್.

ಸಂಯೋಜಕರು

ಪ್ರೋ॥ ಜೆ.ರಾಘವುಲು, ಎಸ್.ಸಿ.ಇ.ಆರ್.ಟಿ, ಸಿ.ಆರ್.ಟಿ.ವಿಭಾಗಂ, ತೆಲಂಗಾಣ ಹೈದ್ರಾಬಾದ್
ಶ್ರೀ ಮಲ್ಲಾಲ ಪಾಪಯ್ಯ, ಲೆಕ್ಚರರ್, ಎನ್.ಸಿ.ಇ.ಆರ್.ಟಿ., ತೆಲಂಗಾಣ ಹೈದ್ರಾಬಾದ್
ಶ್ರೀ ಸುವರ್ಣ ವಿನಾಯಕ್, ಎಸ್.ಸಿ.ಇ.ಆರ್.ಟಿ, ಸಿ & ಟಿ ವಿಭಾಗಂ, ತೆಲಂಗಾಣ ಹೈದ್ರಾಬಾದ್
ಶ್ರೀ ರಾಚರ್ಲ ಗಣಪತಿ, ಸ್ಕೂಲ್ ಅಸಿಸ್ಟೆಂಟ್,ಜಿ.ಪ.ಉ.ಪಾಠಶಾಲೆ,ಲಾದೆಲ್ಲ,ವರಂಗಲ್
ಶ್ರೀ ಅಯಾಚಿತುಲ ಲಕ್ಷಣರಾವು, ಸ್ಕೂಲ್ ಅಸಿಸ್ಟೆಂಟ್. ಜಿ.ಹೆಚ್.ಎಸ್,ಧನಗರ್‌ವಾಡಿ,ಕರೀಂನಗರ್.
ಡಾ॥ ಪಿ. ಶ್ರೀನಿವಾಸುಲು, ಸ್ಕೂಲ್ ಅಸಿಸ್ಟೆಂಟ್ ಜಿ.ಪ,ಉ.ಪಾಠಶಾಲೆ,ಬಂಡಪೋಸಾನಿಪಲ್ಲಿ,ವೆಲ್ದುರ್ತಿ,ಮೆದಕ್

ಕನ್ನಡ ಅನುವಾದಕರು

ಶ್ರೀ ಸಿದ್ಧಲಿಂಗಪ್ಪ, S.A., M.P.U.P.S., ತಂಗಡ್ಗಿ, ಜಿಲ್ಲೆ ನಾರಾಯಣಪೇಟ್
ಶ್ರೀ ನಾಗಭೂಷಣ, S.A., M.P.U.P.S., ಚೇಗುಂಟಾ, ಜಿಲ್ಲೆ ನಾರಾಯಣಪೇಟ್
ಶ್ರೀ ನಾಗರಾಜ, S.A., Z.P.H.S., ಕೃಷ್ಣ, ಜಿಲ್ಲೆ ನಾರಾಯಣಪೇಟ್
ಶ್ರೀ ಶಾಹೀನ್, S.A.,Z.P.H.S., ಕೃಷ್ಣ, ಜಿಲ್ಲೆ ನಾರಾಯಣಪೇಟ್

ಚಿತ್ರಕಾರರು.

ಶ್ರೀ ಕೊರೆಳ್ಳ ಶ್ರೀನಿವಾಸ, ಸ್ಕೂಲ್ ಅಸಿಸ್ಟೆಂಟ್,ಜಿ.ಪ.ಉ.ಪಾಠಶಾಲೆ, ಪೋಚಂಪಲ್ಲಿ, ನಲ್ಲಗೊಂಡ.
ಶ್ರೀ ಬಿ. ಕಿಷೋರ್ ಕುಮಾರ್, ಎಸ್.ಜಿ.ಟಿ.. ಯು.ಪಿ.ಎಸ್., ಅಲ್ವಾಲ ಅನುಮುಲ(ಮಂ) ನಲ್ಗೊಂಡ
ಶ್ರೀ ಪಿ. ಆಂಜನೇಯುಲು, Geomapper, CESS-DCS, ಹೈದರಾಬಾದ್.

ಡಿಜೈನಿಂಗ್

ಶ್ರೀ ಧಾರ ಕನ್ನಯ್ಯ, ಕಂಪ್ಯೂಟರ್ ಆಪರೇಟರ್, ಎಸ್.ಸಿ.ಇ.ಆರ್.ಟಿ., ತೆಲಂಗಾಣ, ಹೈದರಾಬಾದ್.
ಶ್ರೀ ತಾಟೋಜಿ ಕಿಷನ್, ಕಂಪ್ಯೂಟರ್ ಆಪರೇಟರ್, ಎಸ್.ಸಿ.ಇ.ಆರ್.ಟಿ., ತೆಲಂಗಾಣ, ಹೈದರಾಬಾದ್.
ಶ್ರೀಮತಿ ಪಾವನಿ, ಕಂಪ್ಯೂಟರ್ ಆಪರೇಟರ್, ಹೈದರಾಬಾದ್.

SCERT TELANGANA

ವಿದ್ಯಾರ್ಥಿಗೆ ಉತ್ತರ

ದಿನವೆಲ್ಲ ಹೊಲದಲ್ಲಿ, ಮನೆಯಲ್ಲಿ ಕೆಲಸಮಾಡಿ ದಣಿವಾಗಿ ಅಮ್ಮನ ಜೊತೆ ಕುಳಿತು ನನಗೆ ಹೆಣ್ಣು ಮಕ್ಕಳ ಜೀವನದಲ್ಲಿ ಇಷ್ಟು ಕಷ್ಟ ಏಕೆ ಎನ್ನುವ ಆಲೋಚನೆ ಕದಲಾಡಿತು. ನಾನು ಮನೆಯಿಂದ ಹೊರಟ ವೇಳೆ ವಿವಿಧ ರೀತಿ ಭಾಷೆಗಳು ಮಾತನಾಡುವವರು, ಆಚಾರಗಳನ್ನು ಪಾಲಿಸುವವರನ್ನು ನೋಡುತ್ತಿದ್ದರೆ ಯಾರು ಇವರು? ಏಕೆ ಇಷ್ಟು ವಿದಧ ಜನರು, ಎನ್ನುವ ಭಾವನೆ ನನ್ನನ್ನು ಆಶ್ಚರ್ಯಪಡಿಸಿತು.

ಕಷ್ಟಪಟ್ಟು ಬೇಸಾಯ ಮಾಡಿದ ರೈತರ ನಿರಾಸೆ, ನಿರುತ್ಸಾಹ ಹೊಂದುತ್ತಿದ್ದಾರೆ ಎನ್ನುವ ವಾರ್ತೆಗಳನ್ನು ವಾರ್ತಾಪತ್ರಿಕೆಗಳಲ್ಲಿ ನೋಡಿ ಕಳವಳಗೊಂಡೆನು. ನಗರದ ರಸ್ತೆಗಳಲ್ಲಿ ನಾನು ಹೋಗುತ್ತಿರುವಾಗ ವಿಶಾಲವಾದ ರಸ್ತೆಗಳನ್ನು, ಸುಂದರವಾದ ಕಟ್ಟಡಗಳನ್ನು, ಗುಡಿ, ಚರ್ಚ್,ಮಸೀದಿಗಳನ್ನು ನೋಡಿದಾಗ ಯಾರು ಕಟ್ಟಿಸಿದರು! ಎಷ್ಟು ಖರ್ಚಾಗಿದೆ! ಎಂದು ಆಶ್ಚರ್ಯಪಡುತ್ತೇನೆ. ಸುಂದರವಾದ ಕಟ್ಟಡಗಳಿಂದ ಕೂಡಿದ ಈ ಪಟ್ಟಣಗಳಲ್ಲಿ ವಾಸಿಸಲು ಸ್ಥಳವಿಲ್ಲದೆ ಸಾವಿರಾರು ಜನರು ದುರ್ಭರ ಪರಿಸ್ಥಿತಿಯಲ್ಲಿ ವಾಸಿಸುವ ರೀತಿ ನನ್ನನ್ನು ವಿಸ್ಮಯ ಪಡಿಸುತ್ತದೆ.

ನಮ್ಮ ಹಿರಿಯವರು ಮೇಲಿನ ಸಮಸ್ಯೆಗಳನ್ನು ಮಾತನಾಡುತ್ತಾ ನಾವು ಉತ್ತಮವಾದವರಿಗೆ ಮತ ನೀಡಿ ಆಯ್ಕೆಮಾಡಿಕೊಳ್ಳಬೇಕೆಂದು ಮಾತನಾಡುತ್ತಿದ್ದರೆ ಅದನ್ನು ಕೇಳಿ, ನಮ್ಮನ್ನು ಯಾರು ಪರಿಪಾಲಿಸುತ್ತಿದ್ದಾರೆ? ಹೇಗೆ ಪರಿಪಾಲಿಸುತ್ತಾರೆ ಎನ್ನುವ ಆಸಕ್ತಿ ಬಂದಿದೆ.

ಹಿಂದೆ ರಾಜರು ರಾಜ್ಯಗಳನ್ನು ಪಾರಿಪಾಲಿಸಿದರೆಂದು, ದೇವರು, ಯೋಗಿಗಳು ನಮ್ಮ ಮಧ್ಯೆ ತಂಗಿದ್ದಾರೆಂದು ತಾತ, ಅಜ್ಜಿ ಹೇಳಿದ್ದನ್ನು ಕೇಳಿ ನಿಜವಾಗಿ ಹೀಗೆ ನಡೆಯಲು ಅವಕಾಶವಿದೆಯಾ ಎನ್ನುವ ಭಾವನೆ ನನ್ನಲ್ಲಿ ಉದಯಿಸುತ್ತದೆ. ಈ ವಿಧವಾಗಿ ನನ್ನಲ್ಲಿ ದಿನಾಲೂ ಎಷ್ಟೋ ಪ್ರಶ್ನೆಗಳು ಸಂದೇಹಗಳು ಉದಯಿಸುತ್ತವೆ.

ಈ ಪ್ರಶ್ನೆಗಳಿಗೆ, ಸಮಾಧಾನವು ಎಲ್ಲಿ ದೊರಕುತ್ತದೆ ಎಂದು ಆಲೋಚಿಸುತ್ತೇನೆ. ಬಹುಶಃ ಯಾರೋ ಒಬ್ಬರು ನನ್ನ ಪ್ರಶ್ನೆಗಳಿಗೆಲ್ಲಾ ಸಮಾಧಾನ ಕೊಡದೇ ಇರಬಹುದು ಇಲ್ಲವೆ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಕೆಲವರು ನೀಡಲಾರರೆಂದನಿಸುತ್ತದೆ. ಇವುಗಳಿಗೆ ಸಮಾಧಾನವನ್ನು ನಾನೇ ಹೇಗೆ ಅನ್ವೇಷಿಸಿಕೊಳ್ಳಬೇಕು? ಅದು ಹೇಗೆ? ನನಗೆ ಸಹಾಯ ಮಾಡುವವರು ಯಾರು ?

ಪ್ರಿಯವಾದ ಸ್ನೇಹಿತರೇ?

ನಿಮ್ಮ ಮೆದುಳಿನಲ್ಲಿ ಅಲೆದಾಡುವ ಮುಖ್ಯವಾದ, ಈ ಪ್ರಶ್ನೆಗಳಿಗೆ ಪ್ರತಿಯೊಬ್ಬರು ಸಮಾಧಾನಗಳನ್ನು ಕಂಡುಕೊಳ್ಳುವ ಅವಸರವಿದೆ. ಇವು ಸುಲಭವಾದ ಪ್ರಶ್ನೆಗಳಲ್ಲ. ಈ ಪ್ರಶ್ನೆಗಳಲ್ಲಿ ಯಾವುದು ಕೂಡ ನಿರ್ದಿಷ್ಟವಾದ ಸಮಾಧಾನವಿಲ್ಲ. ನಿಜಕ್ಕೆ ವಿವಿಧ ವ್ಯಕ್ತಿಗಳು ಈ ಪ್ರಶ್ನೆಗಳಿಗೆ ವಿವಿಧ ಪರಿಷ್ಕಾರಗಳನ್ನು ಸೂಚಿಸುತ್ತಾರೆ. ಈ ಸಮಸ್ಯೆಗಳನ್ನು ಸೂಕ್ಷ್ಮವಾಗಿ, ಜಾಗ್ರತೆಯಾಗಿ ಓದಿದ ನಂತರ ನೀನು ಕೂಡ ಸ್ವತಃ ಕೆಲವು ಪರಿಷ್ಕಾರಗಳನ್ನು ಸೂಚಿಸುತ್ತೀಯ. ಸಮಾಜಶಾಸ್ತ್ರವು ಸಮಾಜವನ್ನು ಅರ್ಥಮಾಡಿಕೊಳ್ಳುವುದಕ್ಕೆ ಕೆಲವು ಪ್ರಶ್ನೆಗಳನ್ನು ಅವುಗಳ ಪರಿಷ್ಕಾರಕ್ಕೆ ಕೆಲವು ಪದ್ದತಿಗಳನ್ನು ನಿಮ್ಮ ಮುಂದಿಡುತ್ತೇವೆ.ಪಾಠಶಾಲೆಗಳಿಗಿಂತ ಕಲಾಶಾಲೆಗಳಲ್ಲಿ ಕಡಿಮೆ ಮಂದಿ ಬಾಲಕಿಯರು ಏಕೆ ಅಭ್ಯಾಸಿಸುತ್ತಾರೆಂದು ಪ್ರಶ್ನಿಸಿದರೆ ವಿವಿಧ ರೀತಿಯ ಜನರಿಂದ ವಿವಿಧ ರೀತಿಯ ಉತ್ತರಗಳು ಲಭಿಸುತ್ತವೆ. ಅದೇ ರೀತಿ ಶ್ರೀಮಂತರು ವಾಸಿಸುವ ಕಾಲನಿಗಳು ಶುಭ್ರವಾಗಿ ಸ್ವಚ್ಚಗೊಳಿಸುವ ಹಾಗೆ ಕೊಳಚೆ ಪ್ರದೇಶಗಳು ಏಕೆ ಶುಭ್ರವಾಗಿ ಸ್ವಚ್ಚಗೊಳಿಸಿಲ್ಲವೆಂದು ಲೆಕ್ಕಿಸಿದರೆ ಎಷ್ಟೋ ಉತ್ತರಗಳು ನಿನ್ನ ಮುಂದೆ ಬರುತ್ತವೆ. ಮೇಲಿನ ಪ್ರಶ್ನೆಗಳಿಗೆಲ್ಲಾ ಜನರು ವಿವಿಧ ಸಮಾಧಾನಗಳು ಏಕೆ ಕೊಡುತ್ತಾರೆ? ಈ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಮಾಜಶಾಸ್ತ್ರ ಪ್ರಯತ್ನಿಸುತ್ತದೆ. ಒಂದು ಸಮಸ್ಯೆಗೆ ಬರುವ ವಿವಿಧ ಉತ್ತರಗಳನ್ನು ಕ್ರೂಡೀಕರಿಸುವುದೇ ಸಮಾಜಶಾಸ್ತ್ರದ ಕೆಲಸವಲ್ಲ. ಸಮಸ್ಯೆಗೆ ಪರಿಷ್ಕಾರವನ್ನು ತಿಳಿದುಕೊಳ್ಳಲು ಸಮರ್ಥವಂತವಾದ ಪದ್ದತಿಯನ್ನು ರೂಪಿಸಿ ಅಧ್ಯಯನ ಮಾಡುತ್ತದೆ. ಸಮಸ್ಯೆ ಯಾವ ವಿಧವಾಗಿ ಮೊದಲಾಗುತ್ತದೆ. ಹೇಗೆ ಅಭಿವೃದ್ಧಿ ಹೊಂದಿದೆ, ಏಕೆ, ಎಂತಹ ಬದಲಾವಣೆಗೆ ಒಳಪಟ್ಟಿದೆ, ಪ್ರಪಂಚ ವ್ಯಾಪ್ತಿಯಾಗಿ ಸಮಸ್ಯೆ ಸ್ವಭಾವವು ಒಂದೇ ವಿಧವಾಗಿ ಇದೆಯಾ? ಬದಲಾಗುತ್ತಾ ಇದೆಯಾ ? ಎನ್ನುವ ವಿಭಿನ್ನ ಕೋನಗಳಲ್ಲಿ ಸಮಸ್ಯೆಯನ್ನು ನೋಡುವ ಪ್ರಯತ್ನ ಮಾಡುತ್ತದೆ. ನಮ್ಮ ಮೊದಲ ಪ್ರಶ್ನೆಯನ್ನು ತೆಗೆದು ಕೊಂಡರೆ ಕಲಾಶಾಲೆಗಳಲ್ಲಿ ಹಿಂದೆ ಕೂಡ ಕಡಿಮೆ ಮಂದಿ ಬಾಲಕೀಯರೇ ಅಭ್ಯಸಿಸುತ್ತಿದ್ದರೇ? ಪ್ರಪಂಚ ವ್ಯಾಪ್ತಿಯಲ್ಲಿ ಇದೆಯಾ? ಏಕೆ? ಬಾಲಕಿಯರು ಮಹಾವಿದ್ಯಾಲಯಗಳಿಗೆ ಹೋಗದಿರುವಂತೆ ವಿರೋಧಿಸುವ ಅಂಶಗಳೇನು? ಮಹಾವಿದ್ಯಾಲಯಗಳಲ್ಲಿ ಏಕೆ ಇವರು ಬರುತ್ತಿಲ್ಲ., ಮಹಾವಿದ್ಯಾಲಯಗಳಿಗೆ ಬಾಲಕಿಯರನ್ನು ಕಳಿಸದಿರುವ ಮತ್ತು ಕಳಿಸುವ ತಂದೆ ತಾಯಿಗಳ ಸಮಾಚಾರ ಏನು?ಆ ಮಕ್ಕಳ ಸಮಾಧಾನವೇನು? ಅಧ್ಯಾಪಕರು ಏನೆನ್ನುತ್ತಾರೆ? ಸಮಾಜ ಶಾಸ್ತ್ರಜ್ಞರು ಸಮಸ್ಯೆಗೆ ಸಮಾಧಾನ ನೀಡುವ ಮುಂಚೆ ಇವೆಲ್ಲವುಗಳನ್ನು ಸಮಗ್ರವಾಗಿ ಪರಿಶೀಲಿಸುತ್ತಾರೆ. ಹಾಗೆಂದು ಯಾವ ಸಮಾಜ ಶಾಸ್ತ್ರಜ್ಞ ಇದೆ ಖಚ್ಚಿತವಾದ ಪರಿಷ್ಕಾರವೆಂದು, ಇದೇ ಕೊನೆಯ ಉತ್ತರವೆಂದು ಹೇಳಿಲ್ಲ, ಯಾವ ಸಮಾಧಾನವನ್ನು ಇಲ್ಲದೆ ಪರಿಷ್ಕಾರವನ್ನು ನೀನು ಆಮೋದ ಯೋಗ್ಯವೆಂದು ಭಾವಿಸುತ್ತಿಯೋ ನೀನೇ ನಿರ್ಣಯಿಸಿಕೊಳ್ಳಬೇಕು.

ಎಡಿಟರ್.

SCERT TELANGANA

ಈ ಪುಸ್ತಕದ ಬಗೆಗೆ.....

ನಿನ್ನ ಸುತ್ತಲೂ ಇರುವ ಸಮಾಜವನ್ನು ಅಧ್ಯಯನ ಮಾಡುವ ಪ್ರಕ್ರಿಯೆಯ ಭಾಗದಲ್ಲಿ, ಸಮಾಜಶಾಸ್ತ್ರ ಪಠ್ಯ ಪ್ರಣಾಳಿಕೆಯಲ್ಲಿನ ಭಾಗದಲ್ಲಿ ಈ ಪುಸ್ತಕವನ್ನು ತಯಾರಿಸಲ್ಪಟ್ಟಿದೆ. ಇದು ಆ ಪಠ್ಯ ಯೋಜನೆಯಲ್ಲಿ ಒಂದು ಸಣ್ಣ ಭಾಗವಷ್ಟೇ. ಸಮಾಜ ಶಾಸ್ತ್ರ ಪಠ್ಯ ಯೋಜನೆ ನಿನಗೆ ತಿಳಿದ ಅಂಶಗಳನ್ನು ತರಗತಿ ಕೋಣೆಯಲ್ಲಿ ನಾಲ್ಕು ಜನರೊಂದಿಗೆ ಹಂಚಿಕೊಳ್ಳಲು, ವಿಶ್ಲೇಷಿಸಿಕೊಳ್ಳಲು ಸಹಾಯಕವಾಗುತ್ತದೆ. ಸಮಾಜದಲ್ಲಿನ ವಿವಿಧ ಅಂಶಗಳನ್ನು ಹಾಗೆ ಏಕೆ ಇವೆ ಎಂದು ಪ್ರಶ್ನಿಸಲು, ಸಮಸ್ಯೆಗಳು ಹೀಗೆ ಏಕೆ ಇವೆ ಎಂದು ಆಲೋಚಿಸಲು ಸಮಾಜಶಾಸ್ತ್ರ ಉಪಯೋಗವಾಗುತ್ತದೆ. ನೀನು ನಿನ್ನ ಸ್ನೇಹಿತರ ತರಗತಿ ಕೋಣೆಯಿಂದ ಹೊರ ಪ್ರಪಂಚದಲ್ಲಿನ ಪೇಟೆ, ಪಂಚಾಯಿತಿ, ಮುನ್ಸಿಪಾಲಿಟೀ ಗ್ರಾಮದಲ್ಲಿನ ಹೊಲಗಳು, ದೇವಾಲಯಗಳು, ಮಸೀದಿಗಳು, ವಸ್ತು ಪ್ರದರ್ಶನಾಲಯಗಳು (ಮ್ಯುಜಿಯಂ) ಇನ್ನೂ ಎಷ್ಟೋ ಅಂಶಗಳನ್ನು ತಿಳಿದುಕೊಳ್ಳಲು ಉತ್ತೇಜನ ಗೊಳಿಸುತ್ತದೆ. ರೈತರು, ಅಂಗಡಿ ಮಾಲಿಕರು ಉದ್ಯೋಗಿಗಳು, ಪೂಜಾರಿಗಳು, ಮೊದಲಾದವರೊಂದಿಗೆ ಕರಿತು ಚರ್ಚಿಸುವ ಅವಕಾಶವನ್ನು ಈ ಪುಸ್ತಕವು ಕಲ್ಪಿಸುತ್ತದೆ.

ಈ ಪುಸ್ತಕವು ನಿನ್ನ ಮುಂದೆ ಎಷ್ಟೋ ಸಮಸ್ಯೆಗಳನ್ನು ನೀಡಿ ಅವುಗಳನ್ನು ಅಧ್ಯಯನ ಮಾಡಿ ಅರ್ಥಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ. ಈ ಪುಸ್ತಕದಲ್ಲಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಇರುವುದಿಲ್ಲ. ನೀನು ಈ ಪ್ರಶ್ನೆಗಳಿಗೆ ಸಮಾಧಾನಗಳನ್ನು ಹುಡುಕಬೇಕು ನಿಜವಾಗಿ ಇದು ಸಂಪೂರ್ಣವಾದ ಗ್ರಂಥವಲ್ಲ. ನಿನ್ನ ಸ್ನೇಹಿತರ, ಉಪಾಧ್ಯಾಯರ ಅನುಭವಗಳು, ಸಂದೇಹಗಳನ್ನು ಬಿಡಿಸಿ ಚರ್ಚಿಸಿ ಜೋಡಿಸಿದಲ್ಲಿ ಪರಿಪೂರ್ಣತೆ ಉಂಟಾಗುತ್ತದೆ. ಪುಸ್ತಕದಲ್ಲಿನ ಬಹಳ ಅಂಶಗಳೊಂದಿಗೆ ನೀನು ವಿರೋಧಿಸಬಹುದು, ಸಂಕೋಚವಿಲ್ಲದೆ ಕಾರಣಗಳನ್ನು ಹೇಳಬಹುದು. ಕೊನೆಯದಾಗಿ ಸ್ವತಃ ಪರಿಷ್ಕಾರವನ್ನು ಪಡೆಯಬಹುದು. ಹೀಗೆ ಪಡೆದ ಸಮಾಧಾನವನ್ನು ತೆರೆದು ನೋಡಬೇಕೆಂದೆನಿಸಿದರೆ ಪ್ರಶ್ನೆಗಳೆಲ್ಲವನ್ನು ಜಾಗ್ರತೆಯಾಗಿ ಒಂದು ಪಟ್ಟಿಕೆಯಾಗಿ ತಯಾರುಮಾಡಿ ಸ್ನೇಹಿತರು, ಉಪಾಧ್ಯಾಯರು, ಹಿರಿಯರ ಸಹಾಯಪಡೆದು ಸ್ಥಿರವಾದ ನಿರ್ಣಯವನ್ನು ತೆಗೆದುಕೊಳ್ಳಿರಿ.

ಸಾಮಾಜಿಕ ಜೀವನದಲ್ಲಿ, ವಿಭಿನ್ನ ಪಾರ್ಶ್ವಗಳನ್ನು ಅಧ್ಯಯನ ಮಾಡುವುದಕ್ಕಾಗಿ ಈ ಪುಸ್ತಕದ ಸಹಾಯಕವಾಗುತ್ತದೆ, ಭೂ ಸ್ವರೂಪಗಳು, ಜನರ ಭಿನ್ನತೆಗಳು, ಜನರ ಜೀವನಾಧಾರಗಳು, ಜನರ ಸಾಮೂಹಿಕ ಅವಸರಗಳು, ಅವುಗಳ ನಿರ್ವಹಣೆಯನ್ನು, ಅಸಮಾನತೆಯಿಂದ ಕೂಡಿದ ಸಮಾಜದಲ್ಲಿ ಸಮಾನತೆ ಸಾಧನೆ ಹೇಗೆ, ವಿವಿಧ ದೇವರುಗಳನ್ನು ವಿವಿಧ ಮಾರ್ಗಗಳಲ್ಲಿ ಪೂಜಿಸುವ ವಿಧಾನವನ್ನು ಕೊನೆಯದಾಗಿ ಅವರು ಬೇರೋಬ್ಬರೊಂದಿಗೆ ಸಂಬಂಧ, ಬಾಂಧವ್ಯಗಳನ್ನು ಫಲಿತವಾಗಿ ಹಂಚಿಕೊಳ್ಳುವ ಸಂಸ್ಕೃತಿಯನ್ನು ಅರಿತುಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ. ಸಮಾಚಾರವನ್ನು ಹಂಚಿಕೊಳ್ಳುವುದನ್ನು ಈ ಪುಸ್ತಕವು ಕಲ್ಪಿಸುತ್ತದೆ.

ಮೇಲಿನ ಅಂಶಗಳಲ್ಲಿ ಕೆಲವನ್ನು ಅವಗಾಹನೆ ಮಾಡಿಕೊಳ್ಳಲು ನಾವು ಭೂಮಿ, ಬೆಟ್ಟಗಳು, ಪೀಠಭೂಮಿಗಳು, ಮೈದಾನಗಳು, ನದಿಗಳು ಮತ್ತು ಸಮುದ್ರಗಳು ಮೊದಲಾದವುಗಳನ್ನು ಅಧ್ಯಯನ ಮಾಡಬೇಕಾಗಿದೆ. ಕೆಲವು ವಿಷಯಗಳನ್ನು ಅವಗಾಹನೆ ಮಾಡಿಕೊಳ್ಳಲಾರೆವು. ಒಟ್ಟಿನಲ್ಲಿ ವಿವಿಧ ರೀತಿಯ ಜನರ ಬಳಿಗೆ ಹೋಗಿ ಅವರೊಂದಿಗೆ ಮಾತನಾಡಿದರೆ ಮಾತ್ರ ಸಾಮಾಜಿಕ ಜೀವನ ಅರ್ಥವಾಗುವುದಿಲ್ಲ.

ಈ ಪುಸ್ತಕದಲ್ಲಿನ ಪಾಠಗಳನ್ನು ಬೇಗ ಪೂರ್ಣಗೊಳಿಸುವುದಕ್ಕಿಂತ ನೀಡಿದ ಪ್ರಶ್ನೆಗಳು, ಕೃತ್ಯಗಳನ್ನು ಸಮರ್ಥವಂತವಾಗಿ ನಿರ್ವಹಿಸುವುದು ಅವಸರ, ಈ ಪಠ್ಯ ಪುಸ್ತಕವನ್ನು ಓದುತ್ತಿರುವಾಗ ನಿಮಗೆ ಎಷ್ಟೋ ಪ್ರಶ್ನೆಗಳು, ಕೃತ್ಯಗಳು, ಎದುರಾಗುತ್ತವೆ. ಈ ಪ್ರಶ್ನೆಗಳಿಗೆ ಸಮಾಧಾನಗಳಿಗಾಗಿ ಪ್ರಯತ್ನಿಸಬೇಕು. ಕೊಟ್ಟ ಕೃತ್ಯಗಳನ್ನು, ಯೋಜನೆಗಳನ್ನು ಮಾಡಿದ ನಂತರವೇ ಮತ್ತೊಂದು ಪಾಠ್ಯಾಂಶಕ್ಕೆ ಹೋಗಬೇಕು.

ಬಹಳ ಪಾಠಗಳಲ್ಲಿ ಯೋಜನೆ ಕೆಲಸಗಳು ನೀಡಲಾಗಿದೆ. ಅವುಗಳನ್ನು ನಿರ್ವಹಿಸಲು ಕೆಲವು ದಿನಗಳೂ ಹಿಡಿಯುತ್ತದೆ. ಇವು ಸಮಾಜ ಶಾಸ್ತ್ರದಲ್ಲಿ ವಿಷಯ ಶೇಖರಣೆಗೆ, ವಿಶ್ಲೇಷಣೆಗೆ, ಪ್ರದರ್ಶನೆಗೆ ಬೇಕಾದ ನೈಪುಣ್ಯಗಳನ್ನು ಬೆಳೆಸುತ್ತವೆ. ಪಾಠದಲ್ಲಿ ಇರುವುದನ್ನು ಕಂಠಾಪಾಠ ಮಾಡುವುದಕ್ಕಿಂತ ಅವುಗಳನ್ನು ಕುರಿತು ಆಲೋಚಿಸಿ ಸ್ವೀಯ ಅಭಿಪ್ರಾಯಗಳನ್ನು ಏರ್ಪಡಿಸಿಕೊಳ್ಳುವುದು ಅತ್ಯುತ್ತಮ.

ಸಂಚಾಲಕರು.

ರಾಜ್ಯ ವಿದ್ಯೆ, ಪರಿಶೋಧನೆ, ಶಿಕ್ಷಣ ಸಂಸ್ಥೆ, ತೆಲಂಗಾಣ, ಹೈದರಾಬಾದ್

ಕೃತಜ್ಞತೆಗಳು

ಈ ಪುಸ್ತಕವನ್ನು ಉತ್ತಮವಾಗಿ ತಯಾರಿಸಲು ಸಹಕರಿಸಿದ ಡಾ. ಕೆ.ಎನ್. ಆನಂದನ್ ಭಾಷಾ ಪಂಡಿತ, ಕೇರಳ, ಡಾ. ಪಿ.ದಕ್ಷಿಣಮೂರ್ತಿ ನಿವೃತ್ತ ಉಪಸಂಚಾಲಕರು ತೆಲುಗು ಅಕಾಡಮಿ, ದೀಪಾ ಶ್ರೀನಿವಾಸನ್, ಕ್ರಿತಿಕ್ ವಿಶ್ವನಾಥ್, ಕೆ.ಭಾಗ್ಯಲಕ್ಷ್ಮಿ, ಆರ್.ವಿ.ವ್ಯಾಸ್, ರಾಮಮೂರ್ತಿ ಶರ್ಮ, ರಾಯ್ ಸಿನೋಯಿ ಇವರಿಗೆ ಧನ್ಯವಾದಗಳು. ಲೇಅವುಟ್ ಒದಗಿಸಿದವರಿಗೆ, ತೆಲಂಗಾಣ ರಾಜ್ಯ, ಪುರಾವಸ್ತು ಮ್ಯೂಜಿಯಂ ಅವರಿಗೆ ಪ್ರತ್ಯೇಕ ಧನ್ಯವಾದಗಳು. ಈ ಪುಸ್ತಕದಲ್ಲಿಯ ಕೆಲವು ಚಿತ್ರಗಳನ್ನು ಫ್ಲಿಕ್ಕರ್, ವಿಕೀ ಪೀಡಿಯಾ ಮತ್ತು ಇತರ ಅಂತರ್ಜಾಲ ಸಂಪನ್ಮೂಲದಿಂದ ಸಂಗ್ರಹಿಸಲಾಗಿದೆ. ಅವರೆಲ್ಲರಿಗೂ ಪ್ರತ್ಯೇಕ ಧನ್ಯವಾದಗಳು.

ಅನೇಕ ಮಂದಿ ಪಾಠಶಾಲೆಯ ಉಪಾಧ್ಯಾಯರು, ವಿದ್ಯಾವೇತ್ತರುಗಳು ಮತ್ತು ಇತರರು ತಮ್ಮ ಸಲಹೆ ಸೂಚನೆಗಳ ಮುಖಾಂತರ ಪಠ್ಯಪುಸ್ತಕಗಳನ್ನು ನವೀಕರಿಸುವಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ತಿಳಿಸುತ್ತೇವೆ. ಪಠ್ಯ ಪುಸ್ತಕಗಳನ್ನು ಪೂರ್ಣರೂಪದಲ್ಲಿ ಸಮೀಕ್ಷಿಸಿ ಮೆರುಗುಪಡಿಸುವಲ್ಲಿ ಸಹಕರಿಸಿದ Indian History Awareness & Research (IHAR) ಹ್ಯೂಸ್ಟರ್, ಟೆಕ್ಸಾಸ್, ಅಮೆರಿಕಾ ಸಂಯುಕ್ತ ರಾಷ್ಟ್ರಗಳವರಿಗೆ ಪ್ರತ್ಯೇಕವಾಗಿ ಕೃತಜ್ಞತೆಗಳನ್ನು ತಿಳಿಸುತ್ತೇವೆ.

SCERT TELANGANA



"ಭಾರತ ಸಂವಿಧಾನ ಪೀಠಿಕೆ"

ಭಾರತ ದೇಶದ ಪ್ರಜೆಗಳಾದ ನಾವು ಭಾರತದೇಶವನ್ನು ಸರ್ವಸತ್ತಾತ್ಮಕ, ಸಮಾಜವಾದ, ಲೌಕಿಕ, ಪ್ರಜಾಪ್ರಭುತ್ವ ಗಣತಂತ್ರ, ಸಂವಿಧಾನ ನಿರ್ಮಿಸಿಕೊಳ್ಳಲು ಪೌರರೆಲ್ಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಆಲೋಚನೆ, ಭಾವವ್ಯಕ್ತೀಕರಣ ವಿಶ್ವಾಸ, ಧರ್ಮ, ಆರಾಧನೆಗಳಿಂದ ಸ್ವಾತಂತ್ಯವನ್ನು ಅಂತಸ್ಥಗಳಲ್ಲಿ ಅವಕಾಶಗಳಲ್ಲಿ, ಸಮಾನತೆಯನ್ನು ಒದಗಿಸುವಲ್ಲಿ ಅವರೆಲ್ಲರಲ್ಲಿ ವ್ಯಕ್ತಿಗೌರವವನ್ನು, ರಾಷ್ಟ್ರೀಯ ಸಮೈಕ್ಯತೆಯನ್ನು ಸಂರಕ್ಷಿಸುತ್ತಾ, ಸೌಭ್ರಾತೃತ್ವವನ್ನು ಬೆಳೆಸಲು 1949 ನವೆಂಬರ್ 26ರಂದು ನಮ್ಮ ಸಂವಿಧಾನ ಪರಿಷತ್‌ನಲ್ಲಿ ಆಯ್ಕೆ ಮಾಡಿಕೊಂಡು ಶಾಸನವಾಗಿ ರೂಪಿಸಿಕೊಂಡು ಈ ಸಂವಿಧಾನವನ್ನು ನಮಗೆ ನಾವೇ ಅಳವಡಿಸಿಕೊಳ್ಳುತ್ತಿದ್ದೇವೆ.

ಭಾರತ ಸಂವಿಧಾನದಲ್ಲಿನ ಮೊದಲ ಪುಟ ಭಾರತೀಯರೆಲ್ಲರೂ ಸಮಾನಮಟ್ಟ, ಅವಕಾಶಗಳು ಹೊಂದಲು ಅರ್ಹರೆಂದು ಸ್ಪಷ್ಟಪಡಿಸುತ್ತದೆ.

ವಿಷಯ ಸೂಚಿಕೆ

ಕ್ರ.ಸಂ.	ಪಾಠಗಳ ವಿವರ	ಪುಟಗಳ ಸಂಖ್ಯೆ	ತಿಂಗಳು
I	ಭೂಮಿ–ವೈವಿಧ್ಯತೆ		
1	ವಿವಿಧ ರೀತಿಯ ನಕ್ಷೆಗಳ ಅರ್ಥಮಾಡಿಕೊಳ್ಳುವುದು	1-6	ಜೂನ್
2	ಮಳೆ –ನದಿಗಳು	7-21	ಜೂನ್
3	ಕೆರೆಗಳು –ಭೂಗರ್ಭಜಲಗಳು	22-32	ಜುಲೈ
4	ಮಹಾಸಮುದ್ರಗಳು–ಮೀನು ಹಿಡಿಯುವುದು	33-41	ಜುಲೈ
5	ಯೂರೋಪ್	42-57	ಜುಲೈ
6	ಆಫ್ರಿಕಾ	58-68	ಆಗಸ್ಟ್
II	ಉತ್ಪತ್ತಿ, ವಿನಿಮಯ – ಜೀವನಾಧಾರಗಳು		
7	ಕರಕುಶಲತೆ – ಕೈಮಗ್ಗ ವಸ್ತ್ರಗಳು	69-77	ಆಗಸ್ಟ್
8	ಕೈಗಾರಿಕಾ ಕ್ರಾಂತಿ	78-85	ಆಗಸ್ಟ್
9	ಕಾರ್ಖಾನೆಯಲ್ಲಿ ಉತ್ಪತ್ತಿ – ಕಾಗದದ ಕೈಗಾರಿಕೆ	86-94	ಸೆಪ್ಟೆಂಬರ್
10.	ಸಾರಿಗೆ ವ್ಯವಸ್ಥೆ – ಪ್ರಾಮುಖ್ಯತೆ	95-100	ಸೆಪ್ಟೆಂಬರ್
III	ರಾಜಕೀಯ ವ್ಯವಸ್ಥೆಗಳು – ಪರಿಪಾಲನೆ		
11.	ಹೊಸ ರಾಜ್ಯಗಳು – ರಾಜರು	101-109	ಸೆಪ್ಟೆಂಬರ್
12.	ಪ್ರಾಂತೀಯ ರಾಜ್ಯಗಳ ಉದಯ –ಕಾಕತೀಯರು	110-116	ಅಕ್ಟೋಬರ್
13.	ವಿಜಯನಗರದ ಅರಸರು	117-125	ನವಂಬರ್
14.	ಮೋಘಲ್ ಸಾಮ್ರಾಜ್ಯ	126-134	ನವಂಬರ್
15.	ಭಾರತದೇಶದಲ್ಲಿ ಬ್ರಿಟೀಷ್ ಸಾಮ್ರಾಜ್ಯ ಸ್ಥಾಪನೆ	135-146	ನವಂಬರ್
16.	ರಾಜ್ಯ ಶಾಸನ ಸಭೆ – ಕಾನೂನು ತಯಾರಿ	147-157	ಡಿಸೆಂಬರ್
17.	ಜಿಲ್ಲೆಗಳಲ್ಲಿ ಕಾಯ್ದೆಗಳ ಜಾರಿ	158-164	ಡಿಸೆಂಬರ್
IV	ಸಾಮಾಜಿಕ ವ್ಯವಸ್ಥೀಕರಣ – ಅಸಮಾನತೆಗಳು		
18.	ಜಾತಿ ಬೇಧ –ಸಮಾನತೆಗಾಗಿ ಹೋರಾಟ	165-171	ಜನವರಿ
19.	ಜೀವನಾಧಾರ ಪಟ್ಟಣ ಕಾರ್ಮಿಕರ ಹೋರಾಟಗಳು	172-180	ಜನವರಿ
V	ಮತ – ಸಮಾಜ		
20.	ಜಾನಪದಗಳು – ಧರ್ಮ	181-187	ಫೆಬ್ರವರಿ
21.	ದೈವಸಂಬಂಧ – ಭಕ್ತಿ ಮಾರ್ಗಗಳು	188-196	ಫೆಬ್ರವರಿ
VI	ಸಂಸ್ಕೃತಿ –ಸಮಾಚಾರ		
22.	ರಾಜರು –ಕಟ್ಟಡಗಳು	197-207	ಫೆಬ್ರವರಿ
	ಪುನರಾವರ್ತನೆ – ವಾರ್ಷಿಕ ಪರೀಕ್ಷೆಗಳು		ಮಾರ್ಚ್

SCERT TELANGANA

ರಾಷ್ಟ್ರಗೀತೆ

– ರವೀಂದ್ರನಾಥ ಠಾಗೂರ್

ಜನಗಣ ಮನ ಅಧಿನಾಯಕ ಜಯ ಹೇ !
ಭಾರತ ಭಾಗ್ಯವಿಧಾತಾ !

ಪಂಜಾಬ ಸಿಂಧ್ ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ !

ವಿಂಧ್ಯ ಹಿಮಾಚಲ ಯಮುನಾ ಗಂಗಾ !
ಉಚ್ಛಲ ಜಲಧಿ ತರಂಗಾ !

ತವ ಶುಭ ನಾಮೇ ಜಾಗೇ !
ತವ ಶುಭ ಆಶಿಷ ಮಾಗೇ !
ಗಾಹೇ ತವ ಜಯಗಾಥಾ !

ಜನಗಣ ಮಂಗಳದಾಯಕ ಜಯ ಹೇ !
ಭಾರತ ಭಾಗ್ಯ ವಿಧಾತಾ !

ಜಯ ಹೇ! ಜಯ ಹೇ! ಜಯ ಹೇ !
ಜಯ ಜಯ ಜಯ ಜಯ ಹೇ !

ಪ್ರತಿಜ್ಞೆ

ಪೈಡಿಮರ್ರಿ ವೆಂಕಟ ಸುಬ್ಬರಾವು

ಭಾರತ ದೇಶ ನನ್ನ ಮಾತೃಭೂಮಿ, ಭಾರತೀಯರೆಲ್ಲರೂ ನನ್ನ ಸಹೋದರರು. ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಅತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ ನನ್ನ ದೇಶವನ್ನೂ, ನನ್ನ ತಂದೆ ತಾಯಿಯರನ್ನು, ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ. ಪ್ರಾಣಿಗಳ ಬಗ್ಗೆ ಅನುಕಂಪ ತೋರುತ್ತೇನೆ.

ನನ್ನ ದೇಶದ ಬಗ್ಗೆ, ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡಿತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ.

SCERT TELANGANA

ಅಧ್ಯಾಯ 1

ವಿವಿಧ ರೀತಿಯ ನಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು

ನಾವು ವಾಸಿಸುವ ಪ್ರಪಂಚದಲ್ಲಿ ಅನೇಕ ಭೌತಿಕ ಅಂಶಗಳಿವೆ. ಪರ್ವತಗಳು, ಬೆಟ್ಟಗಳು, ಸಮುದ್ರ ತೀರಗಳು, ಮರುಭೂಮಿಗಳು, ಅಡವಿಗಳು, ಮಂಜಿನಿಂದ ಮುಚ್ಚಿದ ಪ್ರಾಂತಗಳು ಹೀಗೆ ಅನೇಕ ವ್ಯತ್ಯಾಸಗಳು ಏಕೆ ಇವೆ? ಆಯಾ ಪ್ರಾಂತಗಳಲ್ಲಿ ವಾಸಿಸುವ ಪ್ರಜೆಗಳ ಜೀವನಗಳನ್ನು ಈ ವ್ಯತ್ಯಾಸಗಳು ಹೇಗೆ ಪ್ರಭಾವ ಬೀರುತ್ತವೆ? ವಿವಿಧ ರೀತಿಯ ನಕ್ಷೆಗಳ ಸಹಾಯದಿಂದ ಈ ಪ್ರಶ್ನೆಗಳನ್ನು ಓದಿ ನಾವು ಅರ್ಥಮಾಡಿಕೊಳ್ಳುತ್ತೇವೆ. ಕೆಲವು ನಕ್ಷೆಗಳು, ಆಯಾ ಪ್ರದೇಶಗಳು ಎಷ್ಟು ಎತ್ತರ, ಎಷ್ಟು ತಗ್ಗಾಗಿವೆ ಎಂದು ತಿಳಿದುಕೊಳ್ಳಲು, ಕೆಲವು ಪ್ರಾಂತಗಳಲ್ಲಿ ಮಳೆ, ಉಷ್ಣತೆ, ಚಳಿ ಹೇಗೆ ಇವೆ ಎಂದು ತಿಳಿದುಕೊಳ್ಳಲು ಸಹಾಯವಾಗುತ್ತವೆ. ಆ ಪ್ರಾಂತಗಳಲ್ಲಿ ಬೆಳೆಯುವ ಬೆಳೆಗಳು, ಬೆಳೆಯುತ್ತಿರುವ ವಿವಿಧ ತರಹದ ಅಡವಿಗಳನ್ನು ಇನ್ನೂ ಕೆಲವು ರೀತಿಯ ನಕ್ಷೆಗಳು ತಿಳಿಸುತ್ತವೆ. ಹೀಗೆ ನಕ್ಷೆಗಳನ್ನು ಅಧ್ಯಯನ ಮಾಡುವುದರ ಮೂಲಕ ಒಂದಿಷ್ಟು ಆ ಪ್ರಾಂತಗಳ ಕುರಿತು ನಾವು ಬಹಳ ತಿಳಿದುಕೊಳ್ಳಬಹುದು.



ಚಿತ್ರ–1.1 ಕರ್ನಾಟಕ ಪಶ್ಚಿಮ ಘಟ್ಟಗಳಲ್ಲಿನ ನಿತ್ಯ ಹರಿದ್ವರ್ಣದ ಕಾಡು



ಚಿತ್ರ–1.2 ದಕ್ಷಿಣ ಅಮೆರಿಕ –ಬ್ರೆಜಿಲ್ ದೇಶದಲ್ಲಿನ ಕೊಕನಾ ಬೀಚ್



ಚಿತ್ರ–1.3 ಆಫ್ರಿಕಾ ಖಂಡ ಲಿಬಿಯಾ ದೇಶದಲ್ಲಿನ ಸಹರಾ ಮರುಭೂಮಿಯಲ್ಲಿನ ಒಯಾಸಿಸ್



ಚಿತ್ರ–1.4 ಅಂಟಾರ್ಟಿಕಾ ಖಂಡದಲ್ಲಿನ ಮಂಜಿನಿಂದ ಮುಚ್ಚಿರುವ ಪ್ರಾಂತ್ಯ

SCERT TELANGANA

ನಿಮ್ಮ ಶಾಲೆಯಲ್ಲಿನ ಅಟ್ಲಾಸನ್ನು ನೋಡಿ ಅದರಲ್ಲಿ ಎಷ್ಟು ವಿಧಗಳ ನಕ್ಷೆಗಳಿವೆಯೋ ಪರಿಶೀಲಿಸಿರಿ. ನೀವು ಓದಿ ಅರ್ಥಮಾಡಿಕೊಳ್ಳವ ನಕ್ಷೆಗಳ ಪಟ್ಟಿಕೆ ತಯಾರುಮಾಡಿರಿ. ಕೆಲವು ಸಾಧಾರಣ ನಕ್ಷೆಗಳ ಕುರಿತು ನಾವು ಹಿಂದಿನ ವರ್ಷ ಕಲಿತಿದ್ದೇವೆ. ಒಂದು ಪ್ರದೇಶದ ಎತ್ತರವನ್ನು ತಿಳಿಸುವ ನಕ್ಷೆಗಳ ಕುರಿತು ಈ ವರ್ಷ ಕಲಿತುಕೊಳ್ಳೋಣ. ಅದಕ್ಕಿಂತ ಮುಂಚಿತವಾಗಿ ಹಿಂದಿನ ತರಗತಿಯಲ್ಲಿ ಕಲಿತ ನಕ್ಷೆಗಳನ್ನು ನೆನಪಿಸಿಕೊಳ್ಳೋಣ.

◆ ನಿಮ್ಮ ತರಗತಿ ಕೋಣೆಯ ಗೋಡೆಗೆ ಭಾರತ ದೇಶದ ನಕ್ಷೆಯನ್ನು ನೇತು ಹಾಕಿರಿ. ಆ ನಕ್ಷೆಯನ್ನು ಜಾಗ್ರತೆಯಿಂದ ಪರಿಶೀಲಿಸಿ ಈ ಕೆಳ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

1) ಮೆಹರ್ ಹೈದರಾಬಾದ್‌ನಿಂದ ಭೂಪಾಲ್‌ಗೆ ಹೋದಳು. ಆಕೆ ಯಾವ ದಿಕ್ಕಿಗೆ ಪ್ರಯಾಣ ಮಾಡಿದಳು?
2) ಅಶೋಕ್ ಲಕ್ನೋದಿಂದ ಚೆನ್ನೈಗೆ ಹೋದನು. ಆತನು ಯಾವ ದಿಕ್ಕಿಗೆ ಹೋದನು?
3) ರೆಜಿನಾ ಮುಂಬೈದಿಂದ ಭುವನೇಶ್ವರ್‌ಗೆ ಹೋದಳು. ಆಕೆ ಯಾವ ದಿಕ್ಕಿಗೆ ಪ್ರಯಾಣಿಸಿದಳು?
4) ವೆಪ್ರಚು ಕೋಹಿಮಾದಿಂದ ಜೈಪುರ್‌ಗೆ ಹೋದನು. ಆತನ ಯಾವ ದಿಕ್ಕಿಗೆ ಪ್ರಯಾಣಿಸಿದನು?

◆ ಇಂತಹ ಇನ್ನೂ ಹಲವು ಪ್ರಶ್ನೆಗಳನ್ನು ತಯಾರಿಸಿ ನಿಮ್ಮಲ್ಲಿಯೇ ಒಬ್ಬರನ್ನೊಬ್ಬರು ಪ್ರಶ್ನಿಸಿಕೊಳ್ಳಿರಿ.

◆ ನಕ್ಷೆಯ ಮೇಲೆ ತೋರಿಸಿದ ಗುರ್ತುಗಳನ್ನು ನೋಡಿರಿ. ಆಂಧ್ರಪ್ರದೇಶದ ಸರಿಹದ್ದು ಗುರ್ತಿಸಿರಿ. ಆ ಸರಿಹದ್ದು ಗುರ್ತಿನ ಮೇಲೆ ಬೆರಳನ್ನು ಇಟ್ಟು ತೋರಿಸಿರಿ.

◆ ರಾಜ್ಯ ಸರಿಹದ್ದು, ಭಾರತ ಸರಿಹದ್ದು (ಅಂತರಾಷ್ಟ್ರೀಯ ಸರಿಹದ್ದು) ತಿಳಿಸುವ ಗುರ್ತನ್ನು ನಿಮ್ಮ ನೋಟುಪುಸ್ತಕದಲ್ಲಿ ಬರೆಯಿರಿ.

◆ ಆಂಧ್ರಪ್ರದೇಶದ ಉತ್ತರಕ್ಕೆ, ದಕ್ಷಿಣಕ್ಕೆ, ಪಶ್ಚಿಮಕ್ಕೆ ಇರುವ ರಾಜ್ಯಗಳ ಪಟ್ಟಿ ಬರೆಯಬಲ್ಲಿರಾ ? ರಾಜ್ಯಕ್ಕೆ ಪೂರ್ವದಿಕ್ಕಿನಲ್ಲಿ ಏನು ಇದೆ ?

◆ ನಕ್ಷೆಯಲ್ಲಿ ಕೊಟ್ಟ "ಸ್ಕೇಲು" ಸಹಾಯದಿಂದ ಎರಡು ಪ್ರಾಂತ್ಯಗಳ ಮಧ್ಯೆ ಇರುವ ದೂರವನ್ನು ಅಳೆಯುವ ವಿಧಾನವನ್ನು 6ನೇ ತರಗತಿಯಲ್ಲಿ ಕಲಿತಿದ್ದೀರಿ. ಈಗ ಹೈದರಾಬಾದಿನಿಂದ ಜೈಪುರ, ಇಂಫಾಲ್, ಗಾಂಧೀನಗರ, ತಿರುವನಂತಪುರಗಳಂತಹ ರಾಜ್ಯಗಳ ರಾಜಧಾನಿಗಳಿಗೆ ಇರುವ ದೂರವನ್ನು ಅಳೆಯಿರಿ.


ಚಿಹ್ನೆಗಳು (ಗುರ್ತುಗಳು):

ಬಿಂದು, ರೇಖೆ, ಪ್ರದೇಶ:– ಯಾವುದೇ ಭೌತಿಕ ವಸ್ತುವನ್ನು ನಕ್ಷೆಮೇಲೆ ತೋರಿಸಲು ಆ ವಸ್ತುಗಳಿಗೆ ಪ್ರಾತಿನಿಧ್ಯವಹಿಸುವ ಚಿಹ್ನೆಗಳನ್ನು ಉಪಯೋಗಿಸುತ್ತೇವೆ. ನೀವು ಕೆಲವು ಚಿಹ್ನೆಗಳನ್ನು ಕುರಿತು 6ನೇ ತರಗತಿಯಲ್ಲಿ ತಿಳಿದುಕೊಂಡಿರುವಿರಿ.

ಒಂದು ವೇಳೆ ಭಾರತದೇಶ ನಕ್ಷೆಯಲ್ಲಿ ದೆಹಲಿಯನ್ನು ತೋರಿಸು ಎಂದರೆ **(●)** ಚುಕ್ಕೆ ಚಿಹ್ನೆ (ಗುರ್ತು)ಯಲ್ಲಿ ತೋರಿಸಿ ದೆಹಲಿ ಎಂದು ಬರೆಯುತ್ತೇವೆ. ಮಂಜಿರಾ ನದಿಯನ್ನು ತೋರಿಸಿ ಎಂದರೆ ಅದರ ಪ್ರವಾಹ ಮಾರ್ಗವನ್ನು ಹೀಗೆ (~~~~) ರೇಖೆಯಿಂದ ಸೂಚಿಸುತ್ತೇವೆ. ರೈಲುಮಾರ್ಗವನ್ನು ತೋರಿಸಲು (++++++) ಚಿಹ್ನೆಯಿಂದ ಟ್ರಾಕ್‌ನ್ನು ಬರೆಯುತ್ತೇವೆ. ತೆಲಂಗಾಣ ನಕ್ಷೆಯಲ್ಲಿ ಮೆದಕ್ ಅಥವಾ ಹೈದರಾಬಾದ್ ಜಿಲ್ಲೆಯನ್ನು ತೋರಿಸಲು ಸರಿಹದ್ದುಗಳನ್ನು ಬರೆದು ಬೇರೆ ಬೇರೆ ಬಣ್ಣಗಳಿಂದ ಅಥವಾ ಡಿಜೈನ್‌ಗಳಿಂದ ತೋರಿಸುತ್ತೇವೆ. ಅವು ಆ ಪ್ರಾಂತ್ಯವನ್ನು ತೋರಿಸುವ ಚಿಹ್ನೆಗಳು. ಈ ವಿಧವಾಗಿ ಎಲ್ಲಾ ಭೌತಿಕ ವಸ್ತುಗಳನ್ನು ನಕ್ಷೆಯಮೇಲೆ, ಬಿಂದು, ರೇಖೆ, ಪ್ರದೇಶಗಳನ್ನು ಚಿಹ್ನೆಗಳ ಮೂಲಕ ತೋರಿಸುತ್ತೇವೆ.

ಬಿಂದು ಚಿಹ್ನೆ	ರೇಖೆ ಚಿಹ್ನೆ	ಪ್ರದೇಶ ಚಿಹ್ನೆ
1. ಡಿಲ್ಲಿ	1. ನದಿ	1. ಅಟವ್ಯಿ
2	2	2
3	3	3

SCERT TELANGANA




SCERT TELANGANA

ಭೌತಿಕ ನಕ್ಷೆಗಳು:

ನಿಮ್ಮ ಅಟ್ಲಾಸ್‌ನಲ್ಲಿ ಕೆಲವು ಭೌತಿಕ ನಕ್ಷೆಗಳು ಇವೆ ನೋಡಿರಿ. ಎಲೆ ಹಸಿರು, ಹಳದಿ, ಗೋದಿ ಬಣ್ಣವನ್ನು ಹಾಕಿ ವಿವಿಧ ಪ್ರದೇಶಗಳನ್ನು ತಿಳಿಸುವ ನಕ್ಷೆಗಳು ಅವುಗಳಲ್ಲಿ ಇವೆಯೇ ಗಮನಿಸಿರಿ. ಆ ನಕ್ಷೆಗಳು ವಿವಿಧ ಭೂಸ್ವರೂಪಗಳನ್ನು ತಿಳಿಸುತ್ತವೆ. (ಪ್ರಸ್ಥಭೂಮಿ, ಮೈದಾನಗಳು, ಪರ್ವತಗಳು ಮುಂತಾದವುಗಳನ್ನು) ವಿವಿಧ ಪ್ರಾಂತ್ಯಗಳ ಎತ್ತರವನ್ನು ಅವು ಸೂಚಿಸುತ್ತವೆ.

ಸಮತಟ್ಟಾಗಿ ಇರುವ ಕಾಗದದ ಮೇಲೆ ಎತ್ತರವಾದ ಒಂದು ಪ್ರಾಂತ್ಯವನ್ನು ಹೇಗೆ ತೋರಿಸುವಿರಿ? ಆದೇ ವೇಳೆ ಹೀಗೆ ಬರೆದು ತೋರಿಸುಬಹುದು.



ಚಿತ್ರ 1.5 ನಿಂಪೂರು ಗ್ರಾಮಚಿತ್ರ

ನೀನು ನೋಡುತ್ತಿರುವುದು ಚಿತ್ರ, ಇದು ನಕ್ಷೆ ಅಲ್ಲ. ಚಿತ್ರದಲ್ಲಿನ ಎತ್ತರವಾದ ಬೆಟ್ಟಗಳು ಅವುಗಳ ಹಿಂದೆ ಇರುವ ಪ್ರದೇಶವನ್ನು ಕಾಣದ ಹಾಗೆ ಮಾಡಿವೆ. ಆದರೆ ನಕ್ಷೆಯು ಎಲ್ಲಾ ಪ್ರದೇಶಗಳು ಕಾಣುವ ಹಾಗೆ ತೋರಿಸುತ್ತದೆ. ಈ ಪ್ರದೇಶದ ನಕ್ಷೆಯನ್ನು ಹೇಗೆ ಬರೆಯಬಹುದು ಆಲೋಚಿಸಿರಿ.


ಬಣ್ಣವನ್ನು ಉಪಯೋಗಿಸಿ ಎತ್ತರವಾದ ಪ್ರದೇಶಗಳನ್ನು ನಕ್ಷೆಯಲ್ಲಿ ತೋರಿಸುವುದು ಒಂದು ಪದ್ಧತಿ ಇದನ್ನು ಹೇಗೆ ತೋರಿಸುವರೋ ಈಗ ನಾವು ಪರಿಶೀಲಿಸೋಣ.

ಭೂಮಿಮೇಲಿನ ಎತ್ತರವನ್ನು ಅಳೆಯುವುದು:

ಭೂಮಿ ಮೇಲಿನ ಎತ್ತರವನ್ನು ಸಮುದ್ರ ಮಟ್ಟದಿಂದ ಅಳೆಯುತ್ತಾರೆ. ಸಮುದ್ರ ಮಟ್ಟವು ಪ್ರಪಂಚದಲ್ಲಿನ ಎಲ್ಲಾ ಪ್ರಾಂತಗಳಲ್ಲಿ ಅಂದಾಜು ಒಂದೇ ಆಗಿರುತ್ತದೆ. ಏಕೆಂದರೆ, ಪ್ರಪಂಚದಲ್ಲಿನ ಸಮುದ್ರಗಳೆಲ್ಲವೂ ಒಂದಕ್ಕೊಂದು ಕಲೆತಿರುತ್ತವೆ. ಈ ವಿಷಯವನ್ನು ಅರ್ಥಮಾಡಿಕೊಳ್ಳಲು ನಿಂಪೂರು ಗ್ರಾಮ ಚಿತ್ರವನ್ನು ಪರಿಶೀಲಿಸಿರಿ.

ಕೆಳಗಿನ ಚಿತ್ರದಲ್ಲಿ ನಿಂಪೂರ ಗ್ರಾಮ ಸಮುದ್ರ ಮಟ್ಟಕ್ಕಿಂತ 50 ಮೀಟರ್‌ಗಳು ಎತ್ತರವಾಗಿ ಇರುವ ವಿಷಯವನ್ನು ಗುರ್ತಿಸಿರಿ.

- ಗುಡಿ ಸಮುದ್ರಮಟ್ಟಕ್ಕೆ ಎಷ್ಟು ಮೀಟರ್‌ಗಳ ಎತ್ತರದಲ್ಲಿ ಇದೆ?
- ಬೆಟ್ಟದ ಮೇಲಿನ ಭಾಗ ಸಮುದ್ರ ಮಟ್ಟಕ್ಕೆ ಎಷ್ಟು ಮೀಟರ್‌ಗಳ ಎತ್ತರದಲ್ಲಿ ಇದೆ?




ಚಿತ್ರ 1.6 ನಿಂಪೂರು ಗ್ರಾಮ–ಎತ್ತರ

SCERT TELANGANA

ನಕ್ಷೆಯಲ್ಲಿ ಎತ್ತರಗಳನ್ನು ತೋರಿಸುವುದು:

(ನಿಂಪೂರು ಗ್ರಾಮ ನಕ್ಷೆಯನ್ನು ನೋಡಿರಿ. (1.7)) ನಕ್ಷೆಯಲ್ಲಿ ಮೂರು ಆವರಣ (ಜೋನು) (Zones)ಗಳಲ್ಲಿ ಎತ್ತರವನ್ನು ತೋರಿಸಿರುವುದನ್ನು ಗಮನಿಸಿದ್ದೀರಾ? ಮೊದಲ ಆವರಣ "0" ಮೀಟರ್ ಎತ್ತರದಿಂದ 50 ಮೀಟರ್ ಎತ್ತರದವರೆಗೆ. ಎರಡನೇ ಆವರಣ 51 ಮೀಟರ್ ಎತ್ತರದಿಂದ 100 ಮೀಟರ್ ಎತ್ತರದವರೆಗೆ, ಮೂರನೇ ಜೋನ್ 101 ಮೀಟರ್ ಎತ್ತರದಿಂದ 150 ಮೀಟರ್ ಎತ್ತರದವರೆಗೆ ಇವೆ. ಅಂದರೆ 51 ಮೀಟರ್ ಎತ್ತರದಿಂದ 100 ಮೀಟರ್ ಎತ್ತರ ಮಧ್ಯದಲ್ಲಿ ಇರುವ ಯಾವ ಪ್ರಾಂತವಾದರೂ 50 ಮೀಟರ್ ಎತ್ತರಕ್ಕೆ ಮೇಲಿನ ಭಾಗವು 100 ಮೀಟರ್ ಎತ್ತರಕ್ಕೆ ಕೆಳಗೆ ಇರುವ ಹಾಗೆ ತಿಳಿಯಬೇಕು.



ಚಿತ್ರ 1.7


ಎತ್ತರಗಳನ್ನು ವಿವಿಧ ಬಣ್ಣಗಳಿಂದ ತೋರಿಸಬಹುದು.

- ಎತ್ತರಗಳನ್ನು ತೋರಿಸುವ ನಿಂಪೂರ ಗ್ರಾಮ ನಕ್ಷೆಯನ್ನು ನೋಡಿರಿ. ಸಮುದ್ರ ಪಕ್ಕದಲ್ಲಿ ಇರುವ ಪ್ರದೇಶಕ್ಕೆ ಯಾವ ಬಣ್ಣ ಹಾಕಿರುವರೋ ಗಮನಿಸಿರಿ. ಸೂಚನೆಯ ಆಧಾರವಾಗಿ ಆ ಪ್ರಾಂತ್ಯದ ಎತ್ತರ ತಿಳಿದುಕೊಳ್ಳಿ.
- ನಕ್ಷೆಯಲ್ಲಿನ ಅತಿ ಎತ್ತರವಾದ ಪ್ರದೇಶಕ್ಕೆ ಯಾವ ಬಣ್ಣ ಹಾಕಿರುವರೋ ತಿಳಿದುಕೊಳ್ಳಿ.

ಈಗ ನಿಮ್ಮ ಅಟ್ಲಾಸು ಅಥವಾ ಗೋಡೆಗೆ ನೇತುಹಾಕಿದ ಆಂಧ್ರಪ್ರದೇಶದ ಭೌತಿಕ ನಕ್ಷೆಯನ್ನು ನೋಡಿರಿ. ಪಟ್ಟಿ–1ರಲ್ಲಿ ತೋರಿಸಿದ ಪ್ರದೇಶದ ಎತ್ತರ, ಬಣ್ಣವನ್ನು ಚಿಹ್ನೆಗಳನ್ನು ನೋಡಿ ತಿಳಿದುಕೊಂಡು ತುಂಬಿರಿ.

ಕಾಂಟೂರು ಅಥವಾ ಬಾಹ್ಯರೇಖೆಗಳು(Contour Lines)

ಸಮಾನವಾದ ಎತ್ತರದ ಪ್ರಾಂತಗಳನ್ನು ಕೂಡಿಸುತ್ತಾ ಎಳೆಯುವ ರೇಖೆಯನ್ನು ಕಾಂಟೂರ್ ರೇಖೆ ಎನ್ನುವರು. ನಿಂಪೂರ ಗ್ರಾಮದ ನಕ್ಷೆಯಲ್ಲಿ ಆ ಗ್ರಾಮದ ಮೂಲಕ ಹೋಗುವ ಒಂದು ರೇಖೆಯನ್ನು ಗಮನಿಸಿರುತ್ತೀರಿ. ಅದು 50 ಮೀಟರ್ ಗಳ ಕಾಂಟೂರು ರೇಖೆ. ಆ ರೇಖೆಯ ಮೇಲಿರುವ ಎಲ್ಲಾ ಪ್ರಾಂತ್ಯವು 50 ಮೀಟರ್‌ಗಳ ಎತ್ತರದಲ್ಲಿವೆ. ಭೂ ಸ್ವರೂಪಕ್ಕೆ ಅನುಗುಣವಾಗಿ ಈ ಕಾಂಟೂರು ರೇಖೆಗಳು ಆಕಾರ ಬದಲಾಗಿರ ಬಹುದು. ಇವು ಒಂದಕ್ಕೊಂದು ಖಂಡಿಸಲಾರವು. ಎರಡು ಕಾಂಟೂರ್ ರೇಖೆಗಳ ಮಧ್ಯದೂರ ಆ ಭೂಸ್ವರೂಪಗಳ ಮೇಲೆ ಆಧಾರ ಪಟ್ಟಿರುತ್ತವೆ. ಭೂಮಿಯು ಕಡಿದಾದ, ಎತ್ತರವಾಗಿದ್ದರೆ ಕಾಂಟೂರು ರೇಖೆ ಒಂದಕ್ಕೊಂದು ಹತ್ತಿರವಾಗಿರುತ್ತವೆ. ಭೂಮಿಯ ಇಳಿಜಾರು ಅಷ್ಟು ಎತ್ತರವಾಗಿರದಿದ್ದರೆ, ಕಡಿಮೆ ಇದ್ದರೆ ಕಾಂಟೂರು ರೇಖೆಗಳು ದೂರವಾಗಿರುತ್ತವೆ.



ಚಿತ್ರ 1.8



ಚಿತ್ರ 1.7 ನಿಂಪೂರು ಗ್ರಾಮ–ಸಮುದ್ರಮಟ್ಟದಿಂದ ಇರುವ ಎತ್ತರ

ಎತ್ತರಗಳನ್ನು ತೋರಿಸುವ ನಕ್ಷೆಗಳಿಂದ ಉಪಯೋಗಗಳು:

ಈ ನಕ್ಷೆಗಳು ಭೂಭಾಗಗಳ ಮೇಲ್ಮೈ ಸ್ವಭಾವಗಳನ್ನು ತಿಳಿದುಕೊಳ್ಳಲು ಉಪಯೋಗವಾಗುತ್ತವೆ. ಪರ್ವತಗಳು, ಕಣಿವೆಗಳು ಎಲ್ಲಿ ಇವೆ ಎಂದು ತಿಳಿದುಕೊಳ್ಳಬಹುದು. ಆಂಧ್ರಪ್ರದೇಶದ ಭೌಗೋಳಿಕ ನಕ್ಷೆಯನ್ನು ಗಮನಿಸಿದರೆ, ಬಂಗಾಳಕೊಲ್ಲಿ ಜೊತೆಗೆ ಇರುವ ಕರಾವಳಿತೀರ ಮೈದಾನಗಳನ್ನು ಗುರ್ತಿಸಬಹುದು. ಕರಾವಳಿಯಿಂದ ಪಶ್ಚಿಮಕ್ಕೆ ಪ್ರಯಾಣಿಸಿದರೆ ಪ್ರಸ್ಥಭೂಮಿಯೊಳಗೆ ಕಡಿದಾದ ಬೆಟ್ಟ (Escarpments)ಗಳನ್ನು ಗುರ್ತಿಸಬಹುದು. ಈ ಪ್ರಸ್ಥಭೂಮಿ ಪ್ರಾಂತ್ಯವನ್ನು ಕೂಡ ಕೃಷ್ಣಾ, ಗೋದಾವರಿ ನದಿಗಳು ವಿಭಜಿಸುತ್ತಿವೆ. ಆದ್ದರಿಂದ ಆಳವಾದ, ವಿಶಾಲವಾದ ಕಣಿವೆಗಳು ಏರ್ಪಟ್ಟಿವೆ.

ರಸ್ತೆಗಳನ್ನು ಹಾಕುವಾಗ, ಆಣೆಕಟ್ಟುಗಳನ್ನು ಕಟ್ಟುವಾಗ ಎತ್ತರಗಳನ್ನು ತಿಳಿಸುವ ಈ ನಕ್ಷೆಗಳು ಬಹಳ

SCERT TELANGANA

ಉಪಯೋಗವಾಗುತ್ತವೆ. ತಗ್ಗು ದಿನ್ನೆಗಳಿಗಿರುವ ಪ್ರಾಂತ್ಯದಲ್ಲಿನ ಎರಡು ಪ್ರದೇಶಗಳ ಮಧ್ಯೆ ರಸ್ತೆಗಳನ್ನು ನಿರ್ಮಿಸುವಾಗ ಯಾವ ಮಾರ್ಗದಲ್ಲಿ ರಸ್ತೆ ಹಾಕಬೇಕೆಂದು ನಿರ್ಣಯಿಸಲು ಈ ನಕ್ಷೆಗಳು ಉಪಯೋಗವಾಗುತ್ತವೆ. ಹಾಗೆ ಅಣೆಕಟ್ಟುಗಳು ಕಟ್ಟುವಾಗ, ಎಷ್ಟು ಪ್ರದೇಶ ನೀರಿನಿಂದ ಮುಳುಗುತ್ತದೆ ಎಂದು ಲೆಕ್ಕ ಹಾಕಲು ಸಹ ಇವು ಉಪಯೋಗವಾಗುತ್ತದೆ.

ಸಮುದ್ರ ಮಟ್ಟ (Mean Sea level):

ಸಮುದ್ರದ ಮೇಲ್ಮೈ ಮೇಲೆ ದೊಡ್ಡ, ಚಿಕ್ಕ ಸಮುದ್ರದ ಉಬ್ಬರಗಳ ನಿರಂತರವಾಗಿ ಬರುತ್ತಿರುತ್ತವೆ. ಅವು ಯಾವಾಗಲೂ ಸ್ಥಿರವಾಗಿರುವುದಿಲ್ಲ. ಈ ಪ್ರಕ್ರಿಯೆಯಿಂದ ಸಮುದ್ರ ಎತ್ತರ ನಿರಂತರವಾಗಿ ಹೆಚ್ಚುತ್ತಾ, ಕಡಿಮೆಯಾಗುತ್ತಾ ಇರುತ್ತದೆ. ಈ ಎತ್ತರಗಳಲ್ಲಿ ಯಾವ ಎತ್ತರವನ್ನು ನಾವು ಸಮುದ್ರದ ನೀರಿನ ಮಟ್ಟ ಅಥವಾ "0"ಮೀಟರ್ ಎತ್ತರವಾಗಿ ಗುರ್ತಿಸಬೇಕು. ಈ ಸಮಸ್ಯೆಗೆ ಪರಿಷ್ಕಾರವಾಗಿ ಸಮುದ್ರದ ಎತ್ತರವನ್ನು ವಿವಿಧ ಸಮಯಗಳಲ್ಲಿ ಅಳೆದು ಅವುಗಳ ನಿಖರ ಆಧಾರವಾಗಿ ಸಮುದ್ರ ಮಟ್ಟವನ್ನು ಲೆಕ್ಕಹಾಕುತ್ತಾರೆ. ಶಾಸ್ತ್ರಜ್ಞರು ಅನೇಕ ವರ್ಷಗಳಿಂದ ಈ ಅಲೆಗಳ ಎತ್ತರಗಳನ್ನು ಪರಿಶೀಲಿಸಿ, ಲೆಕ್ಕಿಸಿ ಅವರು ಒಂದು ತೀರ್ಮಾನಕ್ಕೆ ಬಂದು ಸಮುದ್ರ ಮಟ್ಟವನ್ನು (Mean Sea Level) ನಿರ್ಣಯಿಸಿದ್ದಾರೆ.

ಚಟುವಟಿಕೆ:

ನಿಮ್ಮ ಮನೆಗೆ ರೈಲ್ವೆಸ್ಟೇಷನ್ ಹತ್ತಿರವಾದರೆ ಅಲ್ಲಿ ಹಾಕಿದ ಬೋರ್ಡ್ ಆಧಾರವಾಗಿ ಆ ಪ್ರಾಂತ್ಯದ ಎತ್ತರವನ್ನು ಗುರ್ತಿಸಿರಿ. ಆ ಎತ್ತರವನ್ನು ನಿಮ್ಮ ನೋಟುಪುಸ್ತಕದಲ್ಲಿ ಬರೆದುಕೊಳ್ಳಿರಿ. ಆ ಎತ್ತರವು " _____ M.S.L." ಆಗಿ ಬರೆದಿರುತ್ತದೆ.


- 1.6 ನೇ ಚಿತ್ರ, 1.7ನೇ ಚಿತ್ರದ ಪ್ರಕಾರ 30 ಮೀಟರ್‌ಗಳು ಎತ್ತರದವರೆಗೆ ಪ್ರವಾಹದ ನೀರು ಬಂದರೆ ನಿಂಪೂರ ಗ್ರಾಮ ಮುಳುಗುತ್ತದೆಯೇ?

1.8ನೇ ಚಿತ್ರವನ್ನು ನೋಡಿ ಉತ್ತರ ಬರೆಯಿರಿ.

- ನದಿ ಪ್ರವಹಿಸುವ ಮಾರ್ಗವನ್ನು ಗುರ್ತಿಸಿರಿ.
- ಅತಿ ಕಡಿಮೆ ಎತ್ತರ ಇರುವ ಭೂಮಿ _____ ಮೀಟರ್‌ಗಳಿಂದ_____ ಮೀಟರ್‌ಗಳ ಮಧ್ಯೆ ಇದೆ.
- ಈ ಚಿತ್ರದಲ್ಲಿ ಎರಡು ಎತ್ತರವಾದ ಪ್ರದೇಶಗಳುಇವೆ. ಅವುಗಳ

ನಿಮ್ಮ ಅಭ್ಯಾಸನವನ್ನು ಅಭಿವೃದ್ಧಿಪಡಿಸಿಕೊಳ್ಳಿ

1) ಪ್ರಪಂಚದಲ್ಲಿರುವ ಸಮುದ್ರ ಮಟ್ಟಗಳೆಲ್ಲಾ ಏಕ ಸಮಾನವಾಗಿ ಇರುತ್ತವೆ?
2) ಸಮುದ್ರ ಮಟ್ಟವನ್ನು ಹೇಗೆ ಲೆಕ್ಕಹಾಕುತ್ತಾರೆ?
3) ಎತ್ತರಗಳನ್ನು ತೋರಿಸುವ ನಕ್ಷೆಗಳಿಂದ ಉಪಯೋಗಗಳು ಯಾವುವು?
4) ಎತ್ತರವಾದ ಪ್ರಾಂತ್ಯಗಳಲ್ಲಿ, ತಗ್ಗು ಪ್ರಾಂತ್ಯಗಳಲ್ಲಿ ವಾಸಿಸುವ ಜನರ ಜೀವನ ವಿಧಾನಗಳಲ್ಲಿ ಯಾವ ವ್ಯತ್ಯಾಸ ಗಳನ್ನು ಗಮನಿಸಿದಿರಿ ?
5) ಪ್ರಜೆಗಳಿಗೆ ನಕ್ಷೆಗಳು (Maps) ಯಾವ ವಿಧವಾಗಿ ಉಪಯೋಗವಾಗುತ್ತವೆ?
6) 5ನೇ ಪುಟದಲಿಲನ "ಕಾಂಟೂರು ಆಥವಾ ಬಾಹ್ಯರೇಖೆಗಳು" ಅಂಶವನ್ನು ಓದಿ. ವಿವರಿಸಿರಿ.
7) ತೆಲಂಗಾಣ ರಾಜ್ಯದ ನಕ್ಷೆಯನ್ನು ಪರಿಶೀಲಿಸಿ 150 MSL ಗಿಂತ ಕಡಿಮೆ ಇರುವ ಜಿಲ್ಲೆಗಳನ್ನು ಹೆಸರಿಸಿರಿ



SCERT TELANGANA

ಅಧ್ಯಾಯ 2

ಮಳೆ–ನದಿಗಳು

ಭೂಮಿಯ ಮೇಲೆ ಪ್ರಾಣಕೋಟಿ ಜೀವಿಸಲು ನೀರು ಮೂಲಾಧಾರ. ಭೂಮಿಯ ಮೇಲ್ಮೈ 71% ಕ್ಕಿಂತ ಹೆಚ್ಚು ಭಾಗ ನೀರಿನಿಂದ ಆವೃತ್ತವಾಗಿದೆ ಎಂದು ನಿಮಗೆಲ್ಲಾ ಗೊತ್ತು. ಬೆಳೆ ಬೆಳೆಯುವುದಕ್ಕೆ ನಾವು ನೀರಿನ ಮೇಲೆ ಆಧಾರ ಪಟ್ಟಿದ್ದೇವೆ.

ಆದರೆ ನಾವು ಇಡೀ ವರ್ಷವೆಲ್ಲಾ ಒಂದೇ ವಿಧವಾದ ನೀರನ್ನು ಪಡೆಯುತ್ತಾ ಇಲ್ಲ. ಎಲ್ಲಾ ಕಡೆ ಒಂದೇ ರೀತಿಯ ನೀರು ಇಲ್ಲ.

ನಿಮಗೆ ಯಾವ ತಿಂಗಳಲ್ಲಿ ಮಳೆ ಬೀಳುತ್ತಿದೆ ? ನಿಮ್ಮ ಹಳ್ಳಿಯಲ್ಲಿ ಅಥವಾ ಪಟ್ಟಣದಲ್ಲಿ ಹೆಚ್ಚು ನೀರು ಯಾವ ಭಾಗದಲ್ಲಿದೆ ? ಕಡಿಮೆ ನೀರು ಯಾವ ಭಾಗದಲ್ಲಿದೆ? ನಿಮಗೆ ಒಳ್ಳೆಯ (ಕುಡಿಯುವ) ನೀರು, ಉಪ್ಪು ನೀರು ಅಥವಾ ಕಠಿಣ ಜಲ ಎಲ್ಲಿ ಲಭ್ಯವಾಗುತ್ತದೆ? ತರಗತಿಯಲ್ಲಿ ಚರ್ಚಿಸಿ ಮುಂದಿನ ಅಧ್ಯಾಯದಲ್ಲಿ ನೀರಿನ



ಲಭ್ಯತೆಯ ವೈವಿಧ್ಯತೆ ಅದರ ಸಾಧ್ಯಸಾಧ್ಯತೆಗಳು ಮೊದಲಾದ ಅಂಶಗಳನ್ನು ಕುರಿತು ತಿಳಿದುಕೊಳ್ಳೋಣ.

ಮೊದಲ ಭಾಗ

ಸೂರ್ಯ, ಮೋಡಗಳು, ವರ್ಷಪಾತ :

ತಡೆಯಲಾರದ ಬಿಸಿಲುಕಾಲವಾದ ಏಪ್ರಿಲ್, ಮೇ, ಜೂನ್ ತಿಂಗಳುಗಳ ನಂತರ ಮಳೆಗಾಲ ಬರುತ್ತದೆ ಕೆಲವು ತಿಂಗಳು ಇರುತ್ತದೆ. ಮಳೆ ಹೇಗೆ ಉಂಟಾಗುತ್ತದೆ ? ಮಳೆ ನೀಡುವ ಮೇಘಗಳು ಎಲ್ಲಿಂದ ಬರುತ್ತವೆ. ನಿಮಗೆ ಗೊತ್ತಾ ? ನಿಮಗೆ ತಿಳಿದಿರುವ ಅಂಶಗಳಾವುವೋ ಆಲೋಚಿಸಿ, ಅವುಗಳ ಬಗ್ಗೆ ನಿಮ್ಮ ತರೆಗತಿಯಲ್ಲಿ ಚರ್ಚಿಸಿರಿ.

ನೀರು ಆವಿ ಆಗುವುದು (ಬಾಷ್ಪೀಭವನ):

ಪ್ರಣವಿ ಸೂರ್ಯೋದಯಕ್ಕೆ ಮುಂಚೆಯೇ ಎದ್ದಿದ್ದಾಳೆ. ಬಿಸಿನೀರಿನಿಂದ ಸ್ನಾನ ಮಾಡಬೇಕೆಂದು ಒಲೆ ಹತ್ತಿಸಿ ಒಂದು ಪಾತ್ರೆಯಲ್ಲಿ ನೀರನ್ನು ಬಿಸಿಮಾಡುತ್ತಿದ್ದಾಳೆ. ನೀರು ಬಿಸಿಯಾಗಿ ನೀರಿನ ಆವಿ ಹೊಗೆ ರೂಪದಲ್ಲಿ ಪಾತ್ರೆ ಮೇಲಿನ ಮುಚ್ಚಳಕ್ಕೆ ತಾಕಿದೆ. ಮುಚ್ಚಳ ತೆಗೆದಾಗ, ಹೊರಗಿನ ತಣ್ಣನೆ ಗಾಳಿ, ಆ ಆವಿಗೆ ತಾಕಿದಾಗ ಮುಚ್ಚಳಕ್ಕೆ ಅದು ನೀರಿನ ಬಿಂದುಗಳಾಗಿ ಮಾರ್ಪಟ್ಟು ಮತ್ತೇ ನೀರಿನ ಪಾತ್ರೆಯಲ್ಲೇ ಬಿದ್ದವು. ಇದನ್ನು ಗಮನಿಸಿದ ಪ್ರಣವಿ ನೀರು ಬಿಸಿಯಾಗಿ ನೀರಿನ ಆವಿಯಾಗಿ,ನೀರಿನ ಆವಿರಿಯಾಗಿ, ನೀರಿನ ಆವಿರಿ ತಣ್ಣಗಾಗಿ ನೀರಾಗಿ ಬದಲಾಗುತ್ತದೆಂದು ತಿಳಿದುಕೊಂಡಳು.

ಮಳೆಯ ಕಥೆ ನೀರಿನ ಆವಿಯಿಂದ ಮೊದಲಾಗುತ್ತದೆ. ನೀರಿನ ಆವಿ ಅಂದರೆ ಏನು ? ನೀವು ನೆನೆಸಿದ ಬಟ್ಟೆಗಳನ್ನು ಹೊರಗಡೆ ಒಣ ಹಾಕಿದರೆ ಸ್ವಲ್ಪ ಹೊತ್ತಿಗೆ ಅದರಲ್ಲಿನ ನೀರು ಅದೃಶ್ಯವಾಗುತ್ತದೆ ಬಟ್ಟೆಗಳು ಒಣಗುತ್ತವೆ. ಆದೇ ರೀತಿ ಒಂದು ಪಾತ್ರೆಯಲ್ಲಿ ಸ್ವಲ್ಪ ನೀರು ಹಾಕಿ ಬಿಸಿಲಿನಲ್ಲಿ ಇಟ್ಟರೆ, ಎರಡು ದಿನಗಳಲ್ಲಿ ಆವಿಯಾಗಬಹುದು. ಬಟ್ಟೆಯಲ್ಲಿನ ನೀರು, ಪಾತ್ರೆಯಲ್ಲಿನ ನೀರು ಆವಿಯಾಗಿ ಗಾಳಿಯಲ್ಲಿ ಸೇರಿಹೋಗುತ್ತದೆ. ಈ ವಿಧಾನವನ್ನೆ ಭಾಷ್ಪೀಭವನ (ಆವಿ ಆಗುವುದು) ಎನ್ನುವರು. ಅಂದರೆ ನೀರನ್ನು ಬಿಸಿಮಾಡದಿದ್ದರೂ ನೀರು ಆವಿ ಆಗುತ್ತದೆ. ಭೂಮಿಯ ಮೇಲ್ಮೈ ಮೇಲೆ ಮಹಾ

SCERT TELANGANA


ಸಮುದ್ರಗಳು, ನದಿಗಳು ಸರೋವರಗಳು ಮೊದಲಾದ ಜಲಭಾಗಗಳಿವೆ. ಇವುಗಳಿಂದ ನೀರು ನಿರಂತರವಾಗಿ ಆವಿಯಾಗುತ್ತಿರುತ್ತದೆ. ಎಲ್ಲಿ ತೇವಾಂಶ ಇದ್ದರೆ ಅಲ್ಲಿ ಆವಿಯಾಗಿ ಗಾಳಿಯಲ್ಲಿ ಸೇರುತ್ತದೆ. ಈ ಭಾಷ್ಪೀಭವನ ನಮ್ಮ ಶರೀರದಿಂದ, ಮರಗಳಿಂದ, ನೆಲದಿಂದ ನಡೆಯುತ್ತದೆ ಈ ಆವಿಯ ವೇಗ ಉಷ್ಣೋಗ್ರತೆ ಹೆಚ್ಚಿದಂತೆಲ್ಲಾ ಹೆಚ್ಚುತ್ತದೆ.

- ಯಾವ ಕಾಲದಲ್ಲಿ ಹೆಚ್ಚು ಭಾಷ್ಪೀಭವನ ಇದೆಯೋ ಆಲೋಚಿಸಿ. ಬೇಸಿಗೆಕಾಲದಲ್ಲಿಯೇ ? ಚಳಿಗಾಲದಲ್ಲಿಯೇ?
- ನೀರು ಆವಿಯಾಗುವುದು ಹಗಲಿನಲ್ಲಿ ಹೆಚ್ಚು ಇರುತ್ತದೆಯೇ ? ರಾತ್ರಿಯಲ್ಲಿ ? 2.1ನೇ ಚಿತ್ರ ನೋಡಿ ನೀರಿನ ಆವಿಯಾಗಿ ಎಲ್ಲೆಲ್ಲಿಂದ ಬದಲಾಗುತ್ತಿದೆಯೋ ತಿಳಿಸುವ ಪಟ್ಟಿಯನ್ನು ತಯಾರಿಸಿ.
- ಗರಿಷ್ಠ ಮಟ್ಟದಲ್ಲಿ ಭಾಷ್ಪೀ ಭವನ ಎಲ್ಲಿಂದ ನಡೆಯುತ್ತದೆಂದು ಭಾವಿಸುತ್ತಿರುವೆ? ಗಿಡಗಳಿಂದಲೇ, ನದಿಗಳಿಂದಲೇ ಮಹಾ ಸಮುದ್ರಗಳಿಂದಲೇ, ನೆಲದಿಂದಲೇ ?

ಮೋಡಗಳು ಉಂಟಾಗುವಿಕೆ – ಮಳೆ ಬೀಳುವಿಕೆ :

ಬಿಸಿಗಾಳಿಗೆ ನೀರು ಹೆಚ್ಚಾಗಿ ಆವಿಯಾಗಿ ಆಕಾಶದಲ್ಲಿ ಮೇಲೆ ಸೇರಿದಾಗ ಅದು ತಂಪಾಗುತ್ತದೆ. ಏಕೆಂದರೆ ಭೂಮಿಯ ಮೇಲ್ಪೈ ಮೇಲಕ್ಕೆ ಹೋದಂತೆಲ್ಲಾ ತಂಪು ಇರುತ್ತದೆ. ಹೀಗೆ ನೀರಿನ ಆವಿ ತಂಪಾಗುತ್ತಾ, ಚಿಕ್ಕ ಚಿಕ್ಕ ನೀರಿನ ಬಿಂದುಗಳಾಗಿ ಬದಲಾಗುತ್ತದೆ. ಈ ಚಿಕ್ಕ ನೀರಿನ ಬಿಂದುಗಳು, ಸುತ್ತಲೂ ಇರುವ ಸೂಕ್ಷ್ಮವಾದ ಧೂಳಿನ ಕಣಗಳಿಂದ ಇಲ್ಲವೇ ಹೊಗೆಯಿಂದ ಬೆರೆತು ನಿಧಾನವಾಗಿ ಅದರ ಪರಿಮಾಣ ಹೆಚ್ಚುತ್ತದೆ. ಹೀಗೆ ಚಿಕ್ಕ ನೀರಿನ ಬಿಂದುಗಳು ಸೇರಿ "ಮೋಡಗಳು" ಉಂಟಾಗುತ್ತವೆ.

- ನೀರಿನ ಆವರಿ ಮೇಘಗಳಾಗಿ ಹೇಗೆ ಬದಲಾಗುತ್ತದೋ ವಿವರಿಸುವ ಚಿತ್ರವನ್ನು ಮೇಲಿನ ಪೆಟ್ಟಿಗೆಯಲ್ಲಿ ಬರೆಯಿರಿ. ಚಿತ್ರದಲ್ಲಿ ಭೂಮಿ, ಆಕಾಶ, ನೀರಿನ ಆವಿರಿ ಧೂಳಿಕಣಗಳು, ನೀರಿನ ಬಿಂದುಗಳು, ಮೇಘಗಳನ್ನು ಗುರ್ತಿಸಿರಿ.




ಚಿತ್ರ–2.1 ನೀರು ಆವಿಯಾಗುವುದು

SCERT TELANGANA

ಮೋಡಗಳು ಮೇಲೆ ಹೋದಂತೆಲ್ಲಾ ಮತ್ತಷ್ಟು ತಂಪಾಗುವುದರಿಂದ ಹೆಚ್ಚು ನೀರಿನ ಬಿಂದುಗಳು ಉಂಟಾಗುತ್ತವೆ. ಈ ಚಿಕ್ಕ ನೀರಬಿಂದುಗಳು ಒಂದಕ್ಕೊಂದು ಸೇರಿ ದೊಡ್ಡ ಬಿಂದುಗಳಾಗಿ ಏರ್ಪಡುತ್ತವೆ. ಇವು ಭಾರವಾಗುವುದರಿಂದ ಗಾಳಿಯಲ್ಲಿ ಇರಲಾರದೆ ಮಳೆಯ ರೂಪದಲ್ಲಿ ಬೀಳುತ್ತವೆ.

- ಮಳೆ ಬೀಳಲು ಮೋಡಗಳು ಮೇಲೆ ಹೋಗುವ ಅವಶ್ಯಕತೆ ಇದೆಯೆಂದು ನೀನು ಭಾವಿಸುತ್ತಿರುವೆಯೇ ?
- ನೀವು ಯಾವಗಲಾದರೂ ಮಂಜು ಬೀಳುವುದನ್ನು ನೋಡಿದ್ದೀರಾ? ಇದು ಎಲ್ಲಿ ರೂಪುಗೊಳ್ಳುತ್ತದೆ ?
- ದಿನದಲ್ಲಿ ಯಾವ ಸಮಯದಲ್ಲಿ ಹೊಗೆಮಂಜು ಬೀಳುತ್ತದೆ?
- ಯಾವ ಕಾಲದಲ್ಲಿ ಹೆಚ್ಚು ಹೊಗೆಮಂಜು ಬಿದ್ದ ದಿನಗಳಿವೆ ?
- ನೀವು ಯಾವಗಲಾದರೂ ಮಂಜು ಬೀಳುವುದನ್ನು ನೋಡಿದ್ದೀರಾ ? ಇದಕ್ಕೆ ಮಳೆ ಬೀಳುವುದಕ್ಕೂ ಇರುವ ವ್ಯತ್ಯಾಸ ಏನು?
- ಯಾವಾಗಲಾದರೂ ಆಲಿಕಲ್ಲುಗಳನ್ನು ನೋಡಿದ್ದೀರಾ ?



ಚಿತ್ರ-2.2 ಜಲ ಚಕ್ರ

ಕೆಲವು ಮುಖ್ಯಪದಗಳು :

ಭಾಷ್ಪೀಭವನ ಅಥವಾ ನೀರಿನ ಆವಿ : ನೀರು ಆವಿಯಾಗಿ ಬದಲಾಗುವುದನ್ನು 'ನೀರಿನ ಆವಿ' ಅಥವಾ 'ಭಾಷ್ಪೀಭವನ' ಎನ್ನುವರು. ನೀರಿನ ಆವಿ ನೀರಾಗಿ ಬದಲಾಗುವುದನ್ನು 'ದ್ರವೀಭವನ' ಎನ್ನುವರು.ಗಾಳಿಯ ಮೇಲ್ಭಾಗದಲ್ಲಿ ಜೋತಾಡುವ ಚಿಕ್ಕ ನೀರಿನ ಬಿಂದುಗಳ ಸಮೂಹವೇ ಮೋಡಗಳು

ಜಲಚಕ್ರ : ಸಮುದ್ರಗಳಿಂದ ನೀರು ಆವಿಯಾಗಿ ಆಕಾಶದಲ್ಲಿ ಮೋಡಗಳಾಗಿ ತಯಾರಾಗಿ ಅವುಗಳಿಗೆ ತಂಪಾದಗಾಳಿ ತಾಕಿದ ತಕ್ಷಣವೇ ಮಳೆಯಾಗಿ ಬೀಳುತ್ತವೆ. ಆ ನೀರು ಭೂಮಿ ಇಳಿಜಾರು ಪ್ರದೇಶಗಳಲ್ಲಿ ಹರಿಯುತ್ತಾ, ನದಿಗಳಾಗಿ ಏರ್ಪಟ್ಟು, ಪುನಃ ಸಮುದ್ರದಲ್ಲಿ ಸೇರುತ್ತದೆ. ಇದೇ ಪ್ರಕ್ರಿಯೆ ನಿರಂತರವಾಗಿ ಸಾಗುತ್ತದೆ. ಇದನ್ನೇ"ಜಲಚಕ್ರ' ಎನ್ನುವರು

ಅವಪಾತ : ವಿವಿಧ ರೂಪಗಳಲ್ಲಿ ಗಾಳಿಯಲ್ಲಿನ ತೇವಾಂಶ ಭೂಮಿಯ ಮೇಲೆ ಬೀಳುವುದನ್ನು 'ಅವಪಾತ' ಎನ್ನುವರು. ಇದು ಮಂಜು ಆಗಿ, ಮಳೆಯಾಗಿ, ಹೊಗೆ ಮಂಜು, ಮಂಜು ಹನಿ, ಆಲಿಕಲ್ಲು ಮೊದಲಾದ ಅನೇಕ ರೂಪಗಳಲ್ಲಿ ಕಾಣಿಸುತ್ತದೆ.

ಆರ್ದ್ರತೆ : ವಾತಾವರಣದಲ್ಲಿ ಅದೃಶ್ಯವಾಗಿರುವ ನೀರಿನ ಆವಿಯನ್ನು ಆರ್ದ್ರತೆ (ತೇವಾಂಶ) ಎನ್ನುವರು. ಉಷ್ಣೋಗ್ರತೆಯ ಜೊತೆಗೆ ತೇವಾಂಶ ಕೂಡ ಹೆಚ್ಚಿದಾಗ ನಮಗೆ ಅಸೌಕರ್ಯವಾಗಿ ಇರುತ್ತದೆ, ಬೆವರು ಬೇಗ ಒಣಗದೆ ಅಂಟಾಗಿ, ಜಿಗುಟಾಗಿ. ಉಪ್ಪುಪ್ಪಾಗಿ ಇರುತ್ತದೆ.

ಪವನಗಳು, ಮೇಘಗಳು :


ಭೂಮಿಯ ಮೇಲ್ಮೈ ಮೇಲೆ ಎಲ್ಲಾ ಪ್ರಾಂತಗಳಲ್ಲಿ ನೀರು ಆವಿಯಾಗಿ ಬದಲಾಗಿ ಮೇಘಗಳಾಗಿ ಏರ್ಪಡುತ್ತಿವೆ. ಮಹಾಸಮುದ್ರಗಳ ಮೇಲ್ಮೈಯಲ್ಲಿ ನೀರು ಅತ್ಯಧಿಕವಾಗಿ ಆವಿಯಾಗಿ ಮೋಡಗಳಾಗುತ್ತವೆ ಒಟ್ಟಿನಲ್ಲಿ ಮಹಾಸಮುದ್ರಗಳು ನೀರಿನಿಂದ ಕೆಲವು ಸಾವಿರ ಕಿಲೋಮೀಟರ್‌ಗಳ ವರೆಗೆ ವ್ಯಾಪಿಸಿವೆ. ಇದರ ಪರಿಣಾಮದಿಂದ ಮಳೆ ಸಮುದ್ರದಲ್ಲಿ ಅತ್ಯಧಿಕವಾಗಿ

SCERT TELANGANA

ಬೀಳುತ್ತದೆ. ಮೋಡಗಳು ಸಹ ಕೆಲವು ಸಾವಿರ ಕಿಲೋಮೀಟರ್‌ಗಳು ಪ್ರಯಾಣಿಸಿ ನಮಗೆ ಮಳೆಯನ್ನು ನೀಡುತ್ತವೆ. ಇವುಗಳನ್ನು ಯಾವುದು ಭೂಮಿಗೆ ಹತ್ತಿರವಾಗಿ ತೆಗೆದುಕೊಂಡು ಬರುತ್ತದೋ ನಮಗೆ ಗೊತ್ತೇ?

♦ಮಳೆಗಾಲದಲ್ಲಿ ಗಾಳಿ ಯಾವ ದಿಕ್ಕಿನಿಂದ ಬೀಸುತ್ತದೆ ?

ಈ ಪವನಗಳು (ಗಾಳಿ) ಅರೇಬಿಯಾ ಸಮುದ್ರದಿಂದ ಬಂಗಾಳ ಕೊಲ್ಲಿಯ ಕಡೆಗೆ ಬೀಸುತ್ತವೆ. ಇವು ಮಳೆಯನ್ನು ಕೊಡುವ ಮೋಡಗಳನ್ನು ಸಾಗಿಸುತ್ತವೆ. ಇವುಗಳನ್ನೇ ಋತುಪವನಗಳು ಎನ್ನುವರು. ಇವು ನೈರುತ್ಯ ದಿಕ್ಕಿನಿಂದ ಬೀಸುತ್ತವೆ. ಆದುದರಿಂದ ಇವುಗಳನುನ "ನೈರುತ್ಯ ಋತುಪವನಗಳು" ಎಂದು ಸಹ ಕರೆಯುವುರು ಇವು ಬೇಸಿಗೆ ಕಾಲದಲ್ಲಿ ಮಾತ್ರ ಬೀಸುತ್ತವೆ. .



SCERT TELANGANA

ಈ ಋತು ಪವನಗಳು ಎರಡು ವಿಧ : ಒಂದು ಅರೇಬಿಯಾ ಸಮುದ್ರದಿಂದ ಬೀಸುವ ಪವನಗಳು. ಎರಡು, ಬಂಗಾಳ ಕೊಲ್ಲಿಯ ಮೇಲಿನಿಂದ ಬೀಸುವ ಪವನಗಳು. ಚಿತ್ರ–1ರಲ್ಲಿನ ಬಾಣದ ಗುರ್ತುಗಳು ಪವನ ದಿಕ್ಕನ್ನು ಸೂಚಿಸುತ್ತವೆ.

- ಬಂಗಾಳಕೊಲ್ಲಿಯಲ್ಲಿ ಏರ್ಪಟ್ಟ ಮೋಡಗಳನ್ನು ಪವನಗಳು ದೇಶದಲ್ಲಿನ ಯಾವ ಪ್ರಾಂತಕ್ಕೆ ತೆಗೆದುಕೊಂಡು ಹೋಗುತ್ತವೆ.
- ಅರೇಬಿಯಾ ಸಮುದ್ರದಲ್ಲಿ ಏರ್ಪಟ್ಟ ಮೇಘಗಳನ್ನು ಪವನಗಳು ದೇಶದಲ್ಲಿನ ಯಾವ ಪ್ರಾಂತ್ಯಕ್ಕೆ ತೆಗೆದುಕೊಂಡು ಹೋಗುತ್ತವೆ ?
- ಪವನಗಳು ಪಶ್ಚಿಮಬಂಗಾಳಕ್ಕೆ, ದೆಹಲಿಗೆ, ಲಕ್ನೋಗೆ, ಋತುಪವನ ಮಳೆಗಳನ್ನು ಯಾವ ದಿಕ್ಕಿನಿಂದ ತೆಗೆದುಕೊಂಡು ಹೋಗುತ್ತವೆ ?
- ಪವನಗಳು ಬೊಂಬಾಯಿಗೆ, ಹೈದರಾಬಾದ್, ಬೆಂಗಳೂರಿಗೆ ಋತುಪವನಗಳನ್ನು ಯಾವ ದಿಕ್ಕಿನಿಂದ ಕೊಂಡೊಯ್ಯುತ್ತವೆ?

ತೆಲಂಗಾಣದಲ್ಲಿ ವರ್ಷಪಾತ :

- ನಿಮ್ಮ ಪ್ರದೇಶದಲ್ಲಿ ಯಾವ ತಿಂಗಳಲ್ಲಿ ಹೆಚ್ಚು ಮಳೆ ಬೀಳುತ್ತದೆ ? ಅತ್ಯಧಿಕ ವರ್ಷಪಾತ ಇರುವ ಮೂರು ತಿಂಗಳುಗಳನ್ನು ಹೆಸರಿಸಿ.
- ನೀವಿರುವ ಪ್ರದೇಶದಲ್ಲಿ ಯಾವ ತಿಂಗಳಲ್ಲಿ ಕಡಿಮೆ ಮಳೆ ಬೀಳುತ್ತದೆ ? ಅತಿ ಕಡಿಮೆ ವರ್ಷಪಾತವಿರುವ ಮೂರು ತಿಂಗಳುಗಳನ್ನು ತಿಳಿಸಿರಿ.
- ನಿಮ್ಮ ಪ್ರದೇಶದಲ್ಲಿ ಪ್ರತಿ ವರ್ಷ ಸಾಧಾರಣ ವರ್ಷಪಾತ ಇರುತ್ತದೆಯೇ? ಇಲ್ಲವೇ ವರ್ಷಕ್ಕೊಮ್ಮೆ ಒಂದೊಂದು ವಿಧವಾಗಿ ಇರುತ್ತದೆಯೇ?
- ಕಡಿಮೆ ಮಳೆ ಬಿದ್ದು, ಬರಗಾಲ ಬಂದ ವರ್ಷಗಳು ನಿಮಗೇನಾದರು ಅನುಭವವಾಗಿವೆಯೇ?
- ಹೆಚ್ಚು ಮಳೆ ಬಿದ್ದು ಪ್ರವಾಹಗಳು ಬಂದ ವರ್ಷಗಳು ನಿಮಗೇನಾದರು ಅನುಭವವಾಗಿವೆಯಾ?

ತೆಲಂಗಣದಲ್ಲಿ ಮಾರ್ಚ ತಿಂಗಳಿನಿಂದ ಪ್ರಾರಂಭವಾಗುವ ಉಷ್ಣೋಗ್ರತೆ ಹೆಚ್ಚಳ ಜೂನ್ ತಿಂಗಳಿನ ವರೆಗೆ ಮುಂದುವರೆಯುತ್ತದೆ. ಜೂನ್ ಮಧ್ಯದವರೆಗೆ ನೈಋತ್ಯ ಋತುಪವನಗಳು ರಾಜ್ಯದಲ್ಲಿ ಪ್ರವೇಶಿಸಿದಂತೆಯೇ, ಅವುಗಳ ಪ್ರಭಾವದಿಂದ ಸುರಿಯುವ ಮಳೆಯಿಂದ ವಾರದಲ್ಲಿಯೇ ಉಷ್ಣೋಗ್ರತೆ ಭಾರಿಯಾಗಿ ಕಡಿಮೆಯಾಗುತ್ತಲೆ ನಕ್ಷೆ –1 ನೋಡಿ.

ನೈಋತ್ಯ ಋತು ಪವನಗಳಿಂದ ತೆಲಂಗಾಣದಲ್ಲಿ ಸಾಧಾರಣವಾಗಿಯೇ ಮಳೆ ಬರುತ್ತದೆ. ಒಟ್ಟಿನಲ್ಲಿ ಉತ್ತರ, ಪೂರ್ವ ಭಾಗಗಳಲ್ಲಿ ಅಧಿಕ ಮಳೆ ಸುರಿಯುತ್ತಿದ್ದರೆ, ತೆಲಂಗಾಣ ಪ್ರಸ್ಥಭೂಮಿಯಲ್ಲಿನ ಭಾಗಗಳು ಅಲ್ಪ ಮಳೆಯನ್ನು ಪಡೆಯುತ್ತವೆ. ರಾಜ್ಯದಲ್ಲಿ ಮಹಾಬೂಬನಗರ್ ಜಿಲ್ಲೆಯು ಕಡಿಮೆ ಮಳೆಗಾಲ ಹೊಂದಿರುತ್ತದೆ. ಚಿತ್ರ –1 ನೋಡಿ.

ಸಮುದ್ರಗಳಿಂದ ನೀರಾವಿಯನ್ನು ಹೊತ್ತು ತರುತ್ತಿರುವ ಪವನಗಳಿಗೆ ಪರ್ವತಗಳು ಅಡ್ಡ ಬಂದಾಗ–ಅವುಗಳಿಂದ ತಪ್ಪಿಸಿಕೊಳ್ಳಲು ಮೇಘಗಳು ಮೇಲೇರುವ ಸಂದರ್ಭದಲ್ಲಿ ಮೇಲೆ ತಂಪಾದ ಗಾಳಿ ತಗುಲಿ ದ್ರವೀಭವನಗೊಂಡು ಮಳೆಯಾಗಿ ನೆಲಕ್ಕೆ ಸುರಿಯುತ್ತದೆ. ಸಾಧಾರಣವಾಗಿ ಇಂತಹ ಮಳೆಯನ್ನು ಪಶ್ಚಿಮ ಘಟ್ಟಗಳಲ್ಲಿ ಕಾಣುತ್ತೇವೆ.

ಮೇ–ಅಕ್ಟೋಬರ್ ನಡುವೆ ಬಂಗಾಳ ಕೊಲ್ಲಿಯಲ್ಲಿ ತುಫಾನುಗಳುಂಟಾಗುತ್ತವೆ. ಈ ತುಫಾನುಗಳಿಂದ ನಮಗೆ ಮಳೆ ಬರಬಹುದು. ಬರದೇ ಇರಬಹುದು. ಅದು ತುಫಾನು ತೀರವನ್ನು ದಾಟುವ ದಿಶೆ, ಅದರ ವಿಸ್ತೃತಿಯನ್ನಾಧರಿಸಿರುತ್ತದೆ. ಕೆಲವು ಸಲ ತುಫಾನು ಋತು ಪವನಗಳು ಸೇರಿ ವಿಸ್ತಾರವಾಗಿ ಮಳೆ ಸುರಿಯುವುದರಿಂದ ಬೆಳೆನಷ್ಟವಾಗುತ್ತದೆ.

ಅಕ್ಟೋಬರ್ ನಂತರ ಗಾಳಿಗಳು ಬಂಗಾಳ ಕೊಲ್ಲಿಯಿಂದ ನೈಋತ್ಯ ದಿಕ್ಕಿನೆಡೆಗೆ ಬೀಸುತ್ತವೆ. ಇದರಿಂದ ತೆಲಂಗಾಣದಲ್ಲಿ ಅಕ್ಟೋಬರ್, ನವಂಬರ್ ತಿಂಗಳಲ್ಲಿ ಕಡಿಮೆ ಮಳೆ ಬೀಳುತ್ತದೆ. ಈ ಪವನಗಳನ್ನು ಈ ಶಾನ್ಯ ಋತುಪವನಗಳು ಅಥವಾ ತಿರೋಗುಮನ ಋತು ಪವನಗಳೆನ್ನುತ್ತಾರೆ.

ಸಿರಿಸಿಲ್ಲ ನಗರದ 10 ವರ್ಷ ಮಳೆ ಬೀಳುವಿಕೆಯ ವಿವರ


ವರ್ಷ	ಮಳೆ ಬೀಳುವಿಕೆ ಮಿ.ಮಿ.ಗಳಲ್ಲಿ	ವರ್ಷ	ಮಳೆ ಬೀಳುವಿಕೆ ಮಿ.ಮಿ.ಗಳಲ್ಲಿ
1996	933	2001	763
1997	695	2002	605
1998	926	2003	819
1999	823	2004	619
2000	895	2005	891

ಸಂಗ್ರಹ: ತಹಶೀಲ್ದಾರ್ ಕಾರ್ಯಾಲಯ ಸಿರಿಸಿಲ್ಲ.

- ಸಿರಿಸಿಲ್ಲ ಪಟ್ಟಣದ ಸರಾಸರಿ ಮಳೆ ಬೀಳುವಿಕೆ ಎಷ್ಟು?
- ಮೇಲಿನ ಮಾಹಿತಿಯನುಸಾರ ಯಾವ ವರ್ಷ ಅತ್ಯಧಿಕ, ಯಾವ ವರ್ಷ ಅತ್ಯಲ್ಪ ಮಳೆಯಾಗಿದೆ?
- ಯಾವ ಎರಡು ವರ್ಷಗಳಲ್ಲಿ ಅತ್ಯಧಿಕ ಮಳೆಯಾಗಿದೆ?

SCERT TELANGANA

ಚಿತ್ರ ಪಟ–2 ತೆಲಂಗಾಣದಲ್ಲಿ ವಾರ್ಷಿಕ ವರ್ಷಪಾತವನ್ನು ಸೂಚಿಸುವ ಚಿತ್ರಪಟ




- ತೆಲಂಗಾಣದಲ್ಲಿನ ವಿವಿಧ ಪ್ರಾಂತಗಳಲ್ಲಿ ವರ್ಷಪಾತವನ್ನು ಸೂಚಿಸುವ ಮೇಲಿನ ಚಿತ್ರಪಟವನ್ನು ಪರಿಶೀಲಿಸಿರಿ.
  - i) ನಿಮ್ಮ ಜಿಲ್ಲೆಯಲ್ಲಿ (ಅಧಿಕ, ಸಾಧಾರಣ, ಅಲ್ಪ ವರ್ಷಪಾತದಲ್ಲಿ) ಎಂತಹ ವರ್ಷಪಾತ ಇರುತ್ತದೆ ?
  - ii) ನಲ್ಗೊಂಡ, ಮಹಬೂಬನಗರ್, ಆದಿಲಾಭಾದ್, ಖಮ್ಮಂ, ಹೈದ್ರಾಬಾದ್ ಪಟ್ಟಣಗಳಲ್ಲಿ ಯಾವ ಪಟ್ಟಣದಲ್ಲಿ ಕಡಿಮೆ ವರ್ಷಪಾತ, ಯಾವ ಪಟ್ಟಣದಲ್ಲಿ ಹೆಚ್ಚು ವರ್ಷಪಾತ ಇದೆ ?
  - iii) ಇಂತಹ ಇನ್ನೂ ಕೆಲವು ಪ್ರಶ್ನೆಗಳನ್ನು ಒಬ್ಬರಿಗೊಬ್ಬರು ಕೇಳಿರಿ.
- ನಿಮ್ಮ ಅಟ್ಲಾಸಿನಲ್ಲಿ ಭಾರತದೇಶ ಭೌತಿಕ ನಕ್ಷೆಯಲ್ಲಿ ಪಶ್ಚಿಮ ಘಟ್ಟಗಳನ್ನು, ಪೂರ್ವ ಘಟ್ಟಗಳನ್ನು ಗುರ್ತಿಸಿ.
- ಪಶ್ಚಿಮ ಘಟ್ಟಗಳು ವ್ಯಾಪಿಸಿದ ರಾಜ್ಯಗಳು _____.
- ಪೂರ್ವ ಘಟ್ಟಗಳು ವ್ಯಾಪಿಸಿದ ರಾಜ್ಯಗಳು _____.
- ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳು ಯಾವ ಪ್ರಾಂತದಲ್ಲಿ ಬೆರೆಯುತ್ತವೆ _____.
- ಭಾರತದೇಶದ ನಕ್ಷೆಯನ್ನು ಬಿಡಿಸಿ ಅದರಲ್ಲಿ ಪೂರ್ವ ಪಶ್ಚಿಮ ಘಟ್ಟಗಳನ್ನು ತೋರಿಸಿರಿ. ತೆಲಂಗಾಣ ಪ್ರಾಂತವನ್ನು ಗುರುತಿಸಿ ಅಲ್ಲಿ ಯಾವ ಯಾವ ತಿಂಗಳುಗಲ್ಲಿ ಮಳೆ ಬೀಳುವುದು ತೋರಿಸಿರಿ.

SCERT TELANGANA

ವರ್ಷಮಾಪಕ :

ವರ್ಷಪಾತವನ್ನು ಅಳೆಯುವ ಪರಿಕರವನ್ನು 'ವರ್ಷಮಾಪಕ' ಎನ್ನುವರು. ಒಂದು ಪ್ರಾಮಾಣಿಕ ಪ್ರದೇಶದಲ್ಲಿ ಬಿದ್ದ ವರ್ಷಪಾತವನ್ನು ಸೆಂಟೀಮೀಟರ್‌ನಲ್ಲಿ ಅಳೆಯುತ್ತಾರೆ. ನಾವು ವರ್ಷಪಾತವನ್ನು ಹೇಗೆ ಅಳೆಯುತ್ತೇವೆ ? ಎಲ್ಲಿ ಹೆಚ್ಚು ಮಳೆ ಬೀಳುತ್ತದೋ, ಎಲ್ಲಿ ಕಡಿಮೆ ಮಳೆ ಬೀಳುತ್ತದೋ ನಾವು ಹೇಗೆ ಹೇಳಬಲ್ಲೆವು ? ನಿಜಾಮಾಬಾದದಲ್ಲಿ ಹೆಚ್ಚು ಮಳೆ ಬೀಳುತ್ತದಾ? ಇಲ್ಲವೆ ರಂಗಾರೆಡ್ಡಿನಲ್ಲಿ ಎನ್ನುವುದನ್ನು ಹೇಗೆ ತಿಳಿದುಕೊಳ್ಳುತ್ತೇವೆ?

ಸ್ವಂತವಾಗಿ ವರ್ಷಮಾಪಕವನ್ನು ತಯಾರಿಸಿ




ವರ್ಷಮಾಪಕವನ್ನು ತಯಾರಿಸಲು ಮೇಲೆ ಸೂಚಿಸಿದ ವಸ್ತುಗಳನ್ನು ಶೇಖರಿಸಿ

(ಚಿತ್ರ –1)



ಸೀಸೆಯ ಮೇಲಿನ ಭಾಗವನ್ನು ಹೀಗೆ ಕತ್ತರಿಸಿರಿ. ಕೆಳ ಭಾಗದ ಮೇಲೆ ಸುತ್ತಳತೆ ಕತ್ತರಿಸಿದ ಭಾಗದ ತಳದ ಸುತ್ತ ಅಳತೆ ಸಮಾನವಾಗಿ ಇರಬೇಕು (ಚಿತ್ರ–2)



ಸೀಸೆಯ ಮೇಲಿನ ಭಾಗವನ್ನು ತಲಕೆಳಗೆ ಮಾಡಿ ಸೀಸೆಯಲ್ಲಿ ಅಳವಡಿಸಿ (ಚಿತ್ರ–3)



ನೀವು ಸೂಚಿಸಿದ ಸೊನ್ನೆ ಗುರ್ತಿನವರೆಗೆ ಸೀಸೆಯನ್ನು ಉಸುಕಿನಿಂದ, ನೀರಿನಿಂದ ತುಂಬಿರಿ (ಚಿತ್ರ–4)

ಸ್ಕೇಲಿನಿಂದ ನೀರಿನ ಎತ್ತರವನ್ನು ಅಳೆಯಿರಿ. ನಿಮ್ಮ ಪ್ರಾಂತದಲ್ಲಿ ಬೀಳುವ ವರ್ಷ ಪಾತವನ್ನು ಸೆಂ ಮೀ.ನಲ್ಲಿ ತಿಳಿಯಬಹುದು.

ಈಗ ಹೊರಗೆ ಖಾಲಿ ಸ್ಥಳದಲ್ಲಿ ಸೀಸೆಯನ್ನು ಇರಿಸಿ. ಸೀಸೆಯೊಳಗೆ ಮಳೆ ಬೀಳುತ್ತಿರುವಾಗ ಏನೂ ಅಡ್ಡಬರಲಾರದಂತೆ ನೋಡಿಕೊಳ್ಳಬೇಕು. ನಂತರ ಸ್ಕೇಲಿನಿಂದ ನೀರಿನ ಪರಿಮಾಣವನ್ನು ಅಳೆಯಬೇಕು.ಕೆಲವು ದಿನಗಳು ಹೀಗೆ ಸೀಸೆಯನ್ನು ಖಾಲೀ ಸ್ಥಳದಲ್ಲಿ ಇರಿಸಿದಂತಾದರೆ, ಒಂದು ವಾರದಲ್ಲಿ ಇಲ್ಲವೇ ತಿಂಗಳಿನಲ್ಲಿ ಎಷ್ಟು ಮಳೆ ಬೀಳುತ್ತದೋ ತಿಳಿಯಬಹುದು.

SCERT TELANGANA

ಎರಡನೇ ಭಾಗ

ನದಿಗಳ ಪ್ರವಾಹ :

ಮಳೆಯಾಗಿ ಸುರಿದ ನೀರು ಭೂಮಿಯ ಮೇಲೆ ಸೇರಿದ ನಂತರ ನೀರು ಏನಾಗುತ್ತದೆ ? ಈ ನೀರು ಸ್ವಲ್ಪ ಭಾಗ ನೆಲದ ಒಳಗಡೆ ಹಿಂಗುತ್ತದೆ. ಸ್ವಲ್ಪ ಭಾಗ ನೆಲದ ಮೇಲ್ಪೈ ಮೇಲೆ ಪ್ರವಹಿಸುತ್ತದೆ. ಉಳಿದ ನೀರು ಆವಿಯಾಗಿ ಗಾಳಿಯಲ್ಲಿ ಕಲೆತು ಹೋಗುತ್ತದೆ. ನೆಲದಲ್ಲಿ ಇಂಗಿದ ನೀರಿನ ಬಗ್ಗೆ ಮುಂಬರುವ ಅಧ್ಯಾಯದಲ್ಲಿ ತಿಳಿಯೋಣ. ಈ ಅಧ್ಯಾಯದಲ್ಲಿ ಭೂಮಿಯ ಮೇಲ್ಪೈ ಮೇಲೆ ಪ್ರವಹಿಸುವ ನೀರಿನ ಬಗ್ಗೆ ತಿಳಿಯೋಣ.

ನದಿಗಳು :

ಭೂಮಿಯ ಮೇಲಿನ ಸಮತಲ ಪ್ರಾಂತಗಳಲ್ಲಿ, ಹಳ್ಳಗಳಲ್ಲಿ ಮಳೆಯು ನೀರು ಪ್ರವಹಿಸುವುದನ್ನು ನೀವು ಯಾವಾಗಲಾದರೂ ನೋಡಿದ್ದೀರಾ ? ಮಳೆ ಕಾಲದಲ್ಲಿ ಮಳೆಯ ನೀರು ಇಳಿಜಾರು ಪ್ರದೇಶಗಳಿಂದ, ಪರ್ವತಗಳ ಇಳಿಜಾರಿನಿಂದ ಪ್ರವಹಿಸುತ್ತದೆ. ಈ ಜಲಪ್ರವಾಹಗಳು ಸ್ವಲ್ಪಕಾಲಕ್ಕೆ ಒಣಗಿಹೋಗುತ್ತವೆ. ಎತ್ತರದ ಪ್ರಾಂತಗಳಿಂದ ಪ್ರವಹಿಸುವ ನೀರಿನಿಂದ ಕಾಲುವೆಗಳು ಏರ್ಪಡುತ್ತವೆ.


ಮಳೆಯು ಪುನಃ ಪ್ರಾರಂಭವಾದರೆ, ನೀರು ಅದೇ ಕಾಲುವೆಗಳ ಮೂಲಕ ಪ್ರವಹಿಸುತ್ತದೆ. ಈ ವಿಧವಾಗಿ ನದಿಗಳ ಮಾರ್ಗಗಳು, ನದಿಕಣಿವೆಗಳು ಏರ್ಪಡುತ್ತವೆ. ಈ ವಿಧಾನವನ್ನು ಕೆಳಗಿನ ಚಿತ್ರದಲ್ಲಿ ಗಮನಿಸೋಣ (ಚಿತ್ರ –2.3)

- ಚಿತ್ರವನ್ನು ಪರಿಶೀಲಿಸಿ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿರಿ.
- ಬಾಣದ ಗುರ್ತುಗಳಿಂದ ನದಿ ಪ್ರವಾಹ ದಿಕ್ಕನ್ನು ತೋರಿಸಿ.
- ಬಾಣದ ಗುರ್ತುಗಳಿಂದ ನೆಲದ ಇಳಿಜಾರು ಪ್ರಾಂತವನ್ನು ಸೂಚಿಸಿ.
- ಭೂಮಿ ಇಳಿಜಾರಿನಂತೆ ನದಿಕೂಡ ಅದೇ ದಿಕ್ಕಿಗೆ ಪ್ರವಹಿಸುತ್ತದೆಯೇ?

ಹೊಳೆಗಳು ಅಗಲವಾದ ನದಿಯಾಗಿ ರೂಪಾಂತರ ಹೊಂದುವುದು :

ಚಿಕ್ಕ ಹೊಳೆಗಳು / ಹಳ್ಳಗಳು ಪ್ರವಹಿಸಿ ದೊಡ್ಡ ನದಿಯಲ್ಲಿ ಸೇರುತ್ತವೆ. ಹೀಗೆ ನದಿಯಲ್ಲಿ ಸೇರುವ ಹೊಳೆಗಳನ್ನು ಅಥವಾ ಚಿಕ್ಕ ಹಳ್ಳಗಳನ್ನು ಉಪನದಿಗಳು ಎನ್ನುವರು. ಹೀಗೆ ನೀರು ಪ್ರಧಾನ ನದಿಗಳಲ್ಲಿ ಹೆಚ್ಚಾಗುತ್ತದೆ. ಇದು ದೊಡ್ಡದಾಗಿ, ಅಗಲವಾಗಿ (ವಿಶಾಲವಾಗಿ) ಏರ್ಪಡುತ್ತದೆ. .

ನದಿ ದೊಡ್ಡವಾಗಿ ವಿಶಾಲವಾಗಿ ಏರ್ಪಟ್ಟ ನಂತರ ನೀರಿನ ಪ್ರವಾಹ ಪ್ರಶಾಂತವಾಗಿ ಸಾಗುತ್ತದೆ. ಇದು ಹೊಡೆದುಕೊಂಡು ಬಂದ ಕಸ, ಮಣ್ಣು ಮೊದಲಾದವು ನದಿಯ ತಳ ಭಾಗಕ್ಕೆ, ತೀರಕ್ಕೆ ಸೇರಿ ಸಮತಲವಾಗುತ್ತದೆ. ಇದು ಮೈದಾನಗಳು ಏರ್ಪಡಲು ಕಾರಣವಾಗುತ್ತದೆ.




ಚಿತ್ರ-2.3 ಇಳಿಜಾರು ನದಿಗಳು ಏರ್ಪಡುವುದು

SCERT TELANGANA

ನದಿ ಸಮುದ್ರಕ್ಕೆ ಹತ್ತಿರವಾಗಿ ಬರುತ್ತಿರುವಾಗ ಇನ್ನೂ ಸ್ವಲ್ಪ ಪ್ರಶಾಂತವಾಗಿ ಪ್ರವಹಿಸುತ್ತಾ, ಉಸುಕನ್ನು, ಮೆಕ್ಕಲುಮಣ್ಣನ್ನು ತನ್ನ ಜೊತೆ ತೆಗೆದುಕೊಂಡು ಹೋಗುವುದಿಲ್ಲ. ಇವೆಲ್ಲಾ ಆ ಪ್ರಾಂತ್ಯದಲ್ಲಿ ಕೂಡಿ ಹಾಕುತ್ತವೆ. ಆದರೆ ಪ್ರವಾಹಗಳು ಬಂದಾಗ ನದಿ ಹೊಸ ಮಾರ್ಗಗಳನ್ನು ಏರ್ಪಡಿಸಿಕೊಂಡು ಸಮುದ್ರದಲ್ಲಿ ಸೇರುತ್ತದೆ. ಪೂರ್ವ ಕರಾವಳಿಯಲ್ಲಿ ಎರಡು ವಿಶಾಲವಾದ ಡೆಲ್ಟಾಗಳು ಕೃಷ್ಣಾ–ಗೋದಾವರಿ ನದಿಗಳಿಗೆ ಇವೆ. ಕೃಷ್ಣ ಗೋದಾವರಿ ಎನ್ನುವ ನದಿಗಳು ವರ್ಷ ವಿಡೀ ನೀರಿನಿಂದ ತುಂಬಿರುತ್ತವೆ. ಮಳೆಗಾಲದಲ್ಲಿ ಮಾತ್ರ ಹರಿಯುವ ಚಿಕ್ಕನದಿಗಳು ಕೂಡ ಇವೆ. ಹೀಗೇಕೆ ನಡೆಯುತ್ತದೆ?

ಕೃಷ್ಣ ಗೋದಾವರಿ ನದಿಗಳು ಹುಟ್ಟುವ ಪಶ್ಚಿಮ ಘಟ್ಟಗಳಲ್ಲಿ ಅಧಿಕ ಮಳೆ ಸುರಿಯುತ್ತದೆ. ಮಳೆನೀರು ನಿಧಾನವಾಗಿ ಭೂಮಿಯಲ್ಲಿ ಇಂಕಿ ಹೋಗುತ್ತವೆ. ಅದು ವರ್ಷವಿಡೀ ನದಿಗೆ ಸೇರಿಕೊಳ್ಳುತ್ತದೆ. ದಿಂಡಿ, ಮಂಜೀರ, ಮೂಸಿ ನದಿಗಳು ವರ್ಷಭಾವ ಪ್ರದೇಶದಲ್ಲಿ ಹುಟ್ಟುತ್ತವೆ. ಪೂರ್ವ ಘಟ್ಟಗಳಲ್ಲಿ ಸಾಧಾರಣ ಮಳೆ ಸುರಿಯುತ್ತದೆ. ಅದಕ್ಕಾಗಿ ಪೂರ್ವ ಘಟ್ಟಗಳಲ್ಲಿ ಹುಟ್ಟುವ ನದಿಗಳು ಮಳೆಗಾಳ ಮುಗಿಯುವುದರೊಂದಿಗೆ ಒಣಗಿ ಹೋಗುತ್ತವೆ.

ಚಿತ್ರ ಪಟ–3– ತೆಲಂಗಾಣದ ನದಿಗಳು



SCERT TELANGANA

- ಚಿತ್ರ – 3 ರಾಜ್ಯದಲ್ಲಿಯ ಮುಖ್ಯ ನದಿಗಳನ್ನು ತೋರಿಸುತ್ತದೆ. ಇದರಲ್ಲಿ ಕೃಷ್ಣಾನದಿಯ ಸ್ವಲ್ಪ ಭಾಗ ತೆಲಂಗಾಣಕ್ಕೆ ದಕ್ಷಿಣ ಸರಹದ್ದಾಗಿ ಮತ್ತು ಗೋದಾವರಿ ನದಿ ತೆಲಂಗಾಣಕ್ಕೆ ಈಶಾನ್ಯ ಸರಹದ್ದಾಗಿದೆ.
- ನಿಮ್ಮ ಜಿಲ್ಲೆಯ ಪ್ರಧಾನ ಹಳ್ಳಗಳನ್ನು ಗುರ್ತಿಸಿ ಅವು ಯಾವ ನದಿಗಳಲ್ಲಿ ಸೇರುತ್ತವೆಯೋ ಪಟ್ಟಿಯನ್ನು ತಯಾರಿಸಿರಿ.
- ನಿಮ್ಮ ಜಿಲ್ಲೆಯ ಹಳ್ಳಿಗಳು ವರ್ಷವಿಡೀ ಪ್ರವಹಿಸುತ್ತವೆಯೇ ? ಅಥವಾ ಮಳೆಗಾಲದಲ್ಲಿ ಮಾತ್ರವೇ ಪ್ರವಹಿಸುತ್ತವೆಯೇ? ಗುರುತಿಸಿರಿ.

ಜಿಲ್ಲೆ	ಪ್ರವಾಹದ ಹೆಸರು (ಹಳ್ಳ/ಹರಿವು)	ಸೇರುವ ನದಿ

- ತೆಲಂಗಾಣ ಚಿತ್ರ ಪಟದಲ್ಲಿ ಇಳಿಜಾರು ದಿಕ್ಕಿನಲ್ಲಿ ಏನನ್ನು ಗಮನಿಸಿದ್ದೀಯಾ ? ಉತ್ತರದಿಂದ ದಕ್ಷಿಣವೇ? ಪೂರ್ವದಿಂದ ಪಶ್ಚಿಮವೇ ? ಅಥವಾ ಪಶ್ಚಿಮ ದಿಂದ ಪೂರ್ವಕಡೆಯಾ ?

ಪ್ರವಾಹ ಮೈದಾನಗಳು, ಪ್ರವಾಹಗಳು :

ಯಾವ ನದಿಯಲ್ಲಿಯೂ ವರ್ಷವೆಲ್ಲಾ ಒಂದೇ ವಿಧವಾದ ನೀರಿನ ಪ್ರವಾಹ ಇರುವುದಿಲ್ಲ. ಮಳೆಗಾಲದಲ್ಲಿ ನದಿ ತುಂಬಿ ಹರಿದರೆ, ಬೇಸಿಗೆಗಾಲದಲ್ಲಿ ನೀರು ಇಂಗಿ ಹೋಗುತ್ತದೆ. ಚಿತ್ರ – 2.4, 2.5 ನೋಡಿರಿ. ಚಿತ್ರ ಪಟವನ್ನು ಗಮನಿಸಿದರೆ, ಇಡೀ ನದಿ ತುಂಬಾ ಅಗಲವಾಗಿ, ಎತ್ತರವಾದ ತೀರನಿಂದ ಇದೆ. ಇದರ ಒಳಗೆ ಮರಳು ಕಲ್ಲಿನಿಂದ ತುಂಬಿ ಇರುತ್ತದೆ. ಇದರ ಮಧ್ಯ ನದಿ ಚಿಕ್ಕ ಕಾಲುವೆಯ ಹಾಗೆ ಹರಿಯುತ್ತದೆ. ಆದಕಾರಣ ಮರಗಳು ಬೆಳೆಯುವ ಅವಕಾಶವಿಲ್ಲ ಅಧಿಕ ಮಳೆಯ ಕಾರಣ ಚಿಕ್ಕ ಮರ ನೆಡಲು, ದೊಡ್ಡಮರ ಬೆಳೆಯಲು ಅವಕಾಶ ಇರುವುದಿಲ್ಲ. ಈ ಮರಗಳು ಇಲ್ಲದ ಭಾಗವನ್ನು ನದಿ ಸಂಬಂಧಿತ ಪ್ರವಾಹ ಮೈದಾನ ಎನ್ನುವರು. ಎಲ್ಲಾ ದೊಡ್ಡ ನದಿಗಳಿಗೆ ಇಂತಹ ಪ್ರವಾಹ ಮೈದಾನಗಳು ಇರುತ್ತವೆ.


ದೇಶದಲ್ಲಿ ಹೆಚ್ಚು ಮಳೆಯಕಾರಣ ಮಳೆಕಾಲದಲ್ಲಿ ಪ್ರವಾಹಗಳು ಬರುತ್ತವೆಂದು ನೀವು ತಿಳಿದುಕೊಂಡಿದ್ದೀರಿ. ಕೃಷ್ಣ, ಗೋದಾವರಿ, ಬ್ರಹ್ಮಪುತ್ರ, ಗಂಗ ಇಂತಹ ನದಿಗಳಲ್ಲಿ ಇದರ ಪ್ರಭಾವ ಕಾಣಿಸುತ್ತದೆ.

2.5ಚಿತ್ರವನ್ನು ಜಾಗ್ರತೆಯಾಗಿ ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

- ನದಿಯ ಜಲ ಪ್ರವಾಹ ಮೈದಾನವನ್ನು ಎಲ್ಲವನ್ನು ಆವರಿಸಿದೆಯಾ, ವರ್ಷಾಭಾವ ಕಾಲದಲ್ಲಿ ಹರಿಯುವ ಚಿಕ್ಕ ಕಾಲುವೆಯಾಗಿ ಮಾತ್ರ ಹರಿಯುತ್ತದಾ?
- ನದಿಯ ಜಲ ಪ್ರವಾಹ ಮೈದಾನಕ್ಕೆ ಸೀಮಿತವೇ, ನದಿ ತೀರದಲ್ಲೂ ಸಹ ಹರಿಯುತ್ತದೆಯೇ ?
- ಗ್ರಾಮಗಳನ್ನು, ವ್ಯವಸಾಯ ಭೂಮಿಗಳನ್ನು ಮರಗಳನ್ನು ಪ್ರವಾಹಗಳು ಯಾವ ವಿಧವಾಗಿ ಪ್ರಭಾವಗೊಳಿಸುತ್ತವೆ ?
- ಪ್ರವಾಹಗಳು ಸಹ ವ್ಯವಸಾಯ ಭೂಮಿಗಳಿಗೆ ಲಾಭದಾಯಕ ಎಂದು ನೀನು ಹೇಗೆ ಹೇಳಬಲ್ಲೆ?

ನಮ್ಮ ದೇಶದಲ್ಲಿ ಪ್ರಸ್ತುತ ಕಾಲದಲ್ಲಿ ಪ್ರವಾಹಗಳು ದೊಡ್ಡ ಸಮಸ್ಯೆಯಾಗಿ ತಯಾರಾಗಿವೆ. ದೇಶದಲ್ಲಿ ಸ್ವಲ್ಪ ಭಾಗ ಪ್ರತೀ ವರ್ಷ ಮಳೆಕಾಲದಲ್ಲಿ ಪ್ರವಾಹಕ್ಕೆ ತುತ್ತಾಗುತ್ತದೆ. ಇಂತಹವುಗಳಿಂದ ಪ್ರಜೆಗಳಿಗೆ, ಬೆಳೆಗಳಿಗೆ, ಜೀವಕೋಟಿಗೆ ಹಾನಿ ಉಂಟಾಗುತ್ತದೆ. ಪ್ರವಾಹ ನಿವಾರಣೆಗೆ ಎಂತಹ ಕಾರ್ಯಕ್ರಮ ಕೈಗೊಳ್ಳಬೇಕೋ ತಿಳಿದುಕೊಂಡು ನಮ್ಮ ಕೈಲಾದ ಸಹಾಯ ಕಾರ್ಯಗಳನ್ನು ಕೈಗೊಳ್ಳಬೇಕು.

SCERT TELANGANA




ಚಿತ್ರ –2.4 ಪ್ರವಾಹ ಮೈದಾನಗಳು

ಭೂಮಿಯ ಮೇಲೆ ಸಸ್ಯಗಳನ್ನು ಬೆಳೆಸುವುದರಿಂದ (ಮರಗಳು, ಸಸ್ಯ, ಹುಲ್ಲು) ಮಳೆಯ ನೀರಿನ ಪ್ರವಾಹ ವೇಗವನ್ನು ಕಡಿಮೆ ಮಾಡಬಹುದು. ಪ್ರವಾಹ ವೇಗವನ್ನು ಕಡಿಮೆ ಮಾಡಿದರೆ, ನೀರು ಭೂಮಿಯೊಳಗೆ ಇಂಗುವುದಕ್ಕೆ ಅವಕಾಶವಿದೆ. ನದಿಯಲ್ಲಿ ಒಂದೇ ಬಾರಿ ಬಹಳ ನೀರು ಸೇರುವುದರಿಂದ ಸಾಧಾರಣವಾಗಿ ಪ್ರಭಾವಗಳು ಬರುತ್ತವೆ. ಮರಗಳಿಂದ ನದಿಗೆ ನೀರು ನಿಧಾನವಾಗಿ ಸೇರುತ್ತದೆ. ಇದರಿಂದ ಆಕಸ್ಮಿಕವಾಗಿ ಸಂಭವಿಸುವ ಪ್ರವಾಹಗಳನ್ನು ತಡೆಯಬಹುದು. ಅಷ್ಟೇಅಲ್ಲ ಮಳೆಯ ನೀರಿನಿಂದ ಸಂಭವಿಸುವ ಮಣ್ಣಿನ ಸವೇತವನ್ನು ಕಡಿಮೆ ಮಾಡಬಹುದು.

ಮರಗಳನ್ನು ಬೆಳೆಸುವುದರಿಂದ ಪ್ರವಾಹಗಳು ಬಾರದಂತೆ ರಕ್ಷಿಸಿಕೊಳ್ಳಬಹುದು. ಮಳೆಯ ನೀರಿನ ಮೂಲಕ ಬರುವ ಭೂಮಿಯ ಕೊರತವನ್ನು ನಿವಾರಿಸಬಹುದು. ಒಂದುವೇಳೆ ಸ್ವಲ್ಪ ಸಹ ಮರಗಳು ಇಲ್ಲವಾದರೆ ಭೂಮಿಯ ಮೇಲಿನ ಪದರನ್ನು ಮಳೆಯ ನೀರಿನಿಂದ ಕೊಚ್ಚಿಕೊಂಡು ಹೋಗುತ್ತದೆ. ಇದೆಲ್ಲಾ ನದಿಯಲ್ಲಿ ಸೇರಿ ನದಿ ಆಳವನ್ನು ಕಡಿಮೆ ಮಾಡುತ್ತದೆ. ಇದರಿಂದ, ನದಿಯಲ್ಲಿ ಸಂಗ್ರಹವಾಗುವ ನೀರು ಕಡಿಮೆಯಾಗುತ್ತದೆ.

ಆಗ ಕಡಿಮೆ ಮಳೆ ಸುರಿದರೂ, ಪ್ರವಾಹಗಳು ಬಂದು ಅಧಿಕ ಪ್ರವಾಹದಿಂದ ನಷ್ಟಉಂಟಾಗುತ್ತದೆ. ಭೂಮಿಯ ಮೇಲ್ಮೈಯನ್ನು ಸಸ್ಯಗಳು ಆವರಿಸಿದ್ದರೆ ಮಣ್ಣನ್ನು ಕೊಚ್ಚಿಕೊಂಡು ಹೋಗುವುದನ್ನು ಎಷ್ಟೋ ಮಟ್ಟಿಗೆ ನಿಯಂತ್ರಿಸಬಹುದು.

ಉದಾಹರಣೆಗೆ ಗಂಗಾನದಿ : ಹಿಂದಿನ ಕಾಲದಲ್ಲಿ ಗಂಗಾ ನದಿಗೂ, ಅದರ ಉಪನದಿಗಳಿಗೂ ಜನ್ಮಸ್ಥಳವಾದ ಹಿಮಾಲಯದಲ್ಲಿ ಕಾಡುಗಳು ಹೇರಳವಾಗಿ ಇರುತ್ತಿದ್ದವು



ಚಿತ್ರ –2.5 ಪ್ರವಾಹ

ಪ್ರಸ್ತುತ ಕಾಲದಲ್ಲಿ ಹಿಮಾಲಯಗಳ ಹತ್ತಿರ ಕಾಡುಗಳನ್ನು ಅಧಿಕವಾಗಿ ಕಡಿದು ಹಾಕುವುದದರಿಂದ ಅಲ್ಲಿ ಕಾಡುಗಳ ವಿಸ್ತೀರ್ಣ ಕಡಿಮೆಯಾಗುತ್ತಿದೆ. ಇದರ ಪರಿಣಾಮವಾಗಿ ಹೆಚ್ಚು ಮಳೆ ಬಿದ್ದತೆಲ್ಲಾ ಸಮತಲ ಪ್ರಾಂತಗಳಿಗೆ ಮಳೆಯ ನೀರು ವೇಗವಾಗಿ ಕೆಳಕ್ಕೆ ಪ್ರವಹಿಸಿ, ಪ್ರವಾಹಗಳು ಹೋಗುವಿಕೆ, ಪ್ರವಾಹ ಮೈದಾನಗಳು ಏರ್ಪಡುವುದು ನಡೆಯುತ್ತಿವೆ. ಪದೇ ಪದೇ ಪ್ರವಾಹಗಳು ಬರುವುದು, ಅಧಿಕ ಮೊತ್ತದಲ್ಲಿ ನದಿಗಳಲ್ಲಿ ಮಣ್ಣು ಶೇಖರಣೆ ಯಾಗುವುದು ಇಂತಹ ಅಂಶಗಳು ನದಿ ತೀರದಲ್ಲಿ ವಾಸಿಸುವವರ ಜೀವನಕ್ಕೆ, ಆಸ್ತಿಪಾಸ್ತಿಗಳಿಗೆ ಹಾನಿ ಮಾಡುತ್ತವೆ.

ಇದರಿಂದ ನಮ್ಮ ಕಾಡುಗಳ ರಕ್ಷಣೆಗೆ ಇರುವ ಪ್ರಾಮುಖ್ಯತೆ, ಭೂಮಿಯ ಮೇಲೆ ಮರಗಳನ್ನು ಬೆಳೆಸಬೇಕಾಗಿರುವ ಅವಶ್ಯಕತೆಯನ್ನು ತಿಳಿಸುತ್ತದೆ.

- ಪ್ರವಾಹಗಳ ನಿವಾರಣೆಯಲ್ಲಿ ವೃಕ್ಷಸಂಪತ್ತು. ಕಾಡುಗಳು ಹೇಗೆ ಸಹಕರಿಸುತ್ತವೆಯೋ ವಿವರಿಸುವಿರಾ?
- ಬರಗಾಲ (ಅತಿ ಕಡಿಮೆ ವರ್ಷಪಾತ) ಪ್ರಭಾವವನ್ನು ಕಡಿಮೆಗೊಳಿಸುವಲ್ಲಿ ಕಾಡುಗಳು ವೃಕ್ಷಸಂಪತ್ತು ಸಹಕರಿಸಬಲ್ಲವೇ?

ತುಫಾನುಗಳು, ಪ್ರವಾಹ ಸಮಯದಲ್ಲಿ ಎದುರಾಗುವ ತೊಂದರೆಗಳು :


ಭಾರತ ದೇಶಕ್ಕೆ ಉದ್ದವಾದ ತೀರರೇಖೆ ಇರುವುದಿರಂದ ವಿನಾಶಕರವಾದ ತುಫಾನುಗಳು ಬಂಗಾಳಕೋಲ್ಲಿಯಿಂದ ಸಂಭವಿಸುತ್ತವೆ. ಸಮುದ್ರದಿಂದ ಬೀಸುವ ಗಾಳಿಗಳು ಕೆಲವು ಸಂದರ್ಭಗಳಲ್ಲಿ

SCERT TELANGANA

ಭೂಪ್ರಾಂತಗಳಿಗೆ ನಷ್ಟವನ್ನು ಉಂಟು ಮಾಡುತ್ತವೆ. ಎತ್ತರವಾದ ಸಮುದ್ರದ ಅಲೆಗಳು ಸಮುದ್ರತೀರ ಪ್ರಾಂತಗಳಿಗೆ ಭಾರೀ ಪ್ರಮಾಣದ ನಷ್ಟವನ್ನುಂಟು ಮಾಡುತ್ತವೆ. ಈ ಪರಿಸ್ಥಿತಿಗಳು ಜೂನ್ –ಡಿಸೆಂಬರ್ ತಿಂಗಳುಗಳ ಮಧ್ಯಕಾಲದಲ್ಲಿ ಸಂಭವಿಸುತ್ತವೆ. ನಮ್ಮ ರಾಜ್ಯದಲ್ಲಿ ಭಯಂಕರ ತುಫಾನು 1977 ನವಂಬರ್‌ನಲ್ಲಿ ಸಂಭವಿಸಿದೆ. 6 ಮೀಟರ್ ಎತ್ತರ ಇರುವ ಸಮುದ್ರದ ಅಲೆಗಳು ಆಂಧ್ರತೀರಪ್ರದೇಶದಲ್ಲಿ ಕನಿಷ್ಟ 100 ಗ್ರಾಮಗಳನ್ನು ಸರ್ವನಾಶ ಮಾಡಿ 9941 ಜನ ಪ್ರಾಣಗಳನ್ನು ಬಲಿತೆಗೆದುಕೊಂಡಿದೆ. ಎತ್ತರದಿಂದ ನೋಡಿದರೆ, ಈ ಪ್ರಾಂತಗಳು ಪ್ರವಾಹ ನೀರಿನಲ್ಲಿ ತೇಲಾಡುತ್ತಿರುವ ಹಾಗೆ ಕಾಣಿಸುತ್ತದೆ.

ತುಫಾನುಗಳು ಪ್ರಕೃತಿ ನಿರ್ಮಿತವಾದವುಗಳು. ಮಾನವ ನಿಯಂತ್ರಣ ವಿಲ್ಲದ ತುಫಾನುಗಳು ಸಹಜವಾಗಿ ಏರ್ಪಟ್ಟಂತೆ ಕಾಣಿಸುತ್ತವೆ. ನಮ್ಮ ಸಾಮಾಜಿಕ ನಿರ್ಮಾಣವನ್ನು ಅನುಸರಿಸಿ, ಸಂಸಿದ್ದತೆಗನುಗುಣವಾಗಿ ಇಂತಹ ವೈಪರೀತ್ಯಗಳ ಪ್ರಭಾವ ಅಧಿಕವೋ, ಅಲ್ಪವೋ ಇರಬಹುದು. ಉದಾಹರಣೆಗೆ, ತುಫಾನುಗಳು ಹೆಚ್ಚಾಗಿ ಸಂಭವಿಸುವ ತೀರಪ್ರಾಂತದಲ್ಲಿ ವಾಸಿಸುವ ಬಡಜನರಿಗೆ ಇವನ್ನು ಎದುರಿಸುವ ಸಾಧನಗಳು ಸಾಮರ್ಥ್ಯಗಳು ಕಡಿಮೆ. ಈ ತೀರ ಪ್ರಾಂತಗಳಲ್ಲಿರುವ ಮತ್ಸ್ಯಕಾರರ ಗುಡಿಸಿಲುಗಳು ಇರುತ್ತವೆ. ಹಾಗೇಯೇ ನಗರಗಳಲ್ಲಿ ನೇರೆಹಾವಳಿಗೆ ಗುರಿಯಾಗುವ ತಗ್ಗು ಪ್ರಾಂತಗಳಲ್ಲಿ ಬಡಜನರ ಕೊಳಚೆ ಪ್ರದೇಶಗಳು ಇರುತ್ತವೆ. ಕಾಂಕ್ರೀಟ್ ಕಟ್ಟಡಗಳಲ್ಲಿರುವ ಜನರು ಅವಶ್ಯಕವಾದ ಆಹಾರ ನೀರು ಸ್ವಲ್ಪ ದಿನಗಳಿಗೆ ಸರಿಹೊಂದುವಂತೆ ಶೇಖರಿಸಿಕೊಳ್ಳುವರು. ಈ ವಿಧವಾಗಿ ಈ ವೈಪರಿತ್ಯಗಳ ಕಾರಣ ಬಡ ಜನರು ಹೆಚ್ಚಾಗಿ ತೊಂದರೆಗೆ ಗುರಿಯಾಗುತ್ತಿದ್ದಾರೆ.

ಪ್ರವಾಹ ಕಡಿಮೆಯಾದ ನಂತರ ಕುಡಿ ಯುವ ನೀರಿನ ಸಂಪನ್ಮೂಲಗಳೆಲ್ಲಾ ಕಲುಷಿತವಾಗಿ ನೀರು ಕುಡಿಯಲು ಬಾರದಂತೆ ಆಗುತ್ತದೆ. ಅದರೆ ಬಡಜನರು ವಿಧಿಇಲ್ಲದ ಪರಿಸ್ಥಿತಿಯಲ್ಲಿ ಈ ಕಲುಷಿತ ನೀರನ್ನು ಕುಡಿಯುವುದಿರಿಂದ ಕಲರಾ, ಕಾಮಾಲೆಯಂತಹ ಅಂಟು ರೋಗಗಳ ಬಲೆಗೆ ತುತ್ತಾಗುತ್ತಾರೆ. ಸ್ವಲ್ಪಜನಕ್ಕೆ ಮಾತ್ರವೇ ಶುದ್ಧವಾದ ಒಳ್ಳೆಯ ನೀರು ಕುಡಿಯುವ ಅವಕಾಶ ಇರುತ್ತದೆ. ಅಧಿಕ ಮಳೆಯ ಕಾರಣ ಹಾಳಾದ ರಸ್ತೆಗಳನ್ನು ಪುನರ್‌ನಿರ್ಮಾಣಗೊಳಿಸುವುದು ಅಷ್ಟು ಸುಲುಭವಾದ



ಚಿತ್ರ –2.6 :ಬಂಗಾಳಕೊಲ್ಲಿಯಲ್ಲಿನ ತುಫಾನು

ಕೆಲಸವಲ್ಲ. ಇಂತಹ ಪ್ರಾಂತಗಳಲ್ಲಿ ಪ್ರಜೆಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದ್ದಕ್ಕಾಗಿ ಸ್ವಂತ ಸಂಪನ್ಮೂಲಗಳ ಮೇಲೆಯೇ ಆಧಾರವಾಗಿರುತ್ತಾರೆ.

ಜನನಷ್ಟ, ಬೆಳೆನಷ್ಟ, ಆಸ್ತಿನಷ್ಟ ಮೊದಲಾದವು ತುಫಾನಿನ ಮೂಲಕ ಆಗುವ ತಕ್ಷಣ ದುಷ್ಪರಿಣಾಮಗಳು. ಇವುಗಳಿಂದ ದೀರ್ಘಕಾಲದಲ್ಲಿ ಆಗುವ ನಷ್ಟಗಳು ಸಹ ಇರುತ್ತವೆ. ಅವು ಯಾವುವೆಂದರೆ ಬಡಜನರು ತಮ್ಮ ಅವಶ್ಯಕತೆಗಳ ಸಲುವಾಗಿ ಗೃಹಗಳಲ್ಲಿ ಸಂಗ್ರಹಿಸಿರುವ ಆಹಾರ ಪದಾರ್ಥಗಳು, ವಸ್ತುಗಳು, ಪ್ರಾಣಿಗಳು, ವಾಹನಗಳು, ಚಿಕ್ಕ ಚಿಕ್ಕ ಅಂಗಡಿಗಳು, ದೋಣಿಗಳು, ಬಲೆಗಳು ಮುಂತಾದವು ನಾಶವಾಗುತ್ತವೆ. ಇವರು ಪುನಃ ಕೆಲಸಕ್ಕೆ ಹೋಗುವುದಕ್ಕೆ ಈ ಹಾಳಾದ ವಸ್ತುಗಳೆಲ್ಲವನ್ನು ಕೊಳ್ಳಬೇಕಾಗುವುದು. ಹೆಚ್ಚು ಕುಟುಂಬದವರು ತಮ್ಮ ಸದಸ್ಯರನ್ನು ಸಹ ಕಳೆದುಕೊಳ್ಳುತ್ತಾರೆ. ದಿನಕೂಲಿ ಕಾರ್ಮಿಕರು ವೈಪರೀತ್ಯಗಳು ಏರ್ಪಟ್ಟ ನಂತರ ಮಾಮೂಲು ವಾತವರಣ ಏರ್ಪಡುವವರೆಗೆ ಕೆಲವು ವಾರಗಳವರೆಗೆ ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ರೈತರು ತಮ್ಮ ಬೆಳೆಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೇ ವ್ಯವಸಾಯ ಭೂಮಿಗೆ ಏರ್ಪಟ್ಟ ನಷ್ಟವನ್ನು ಸಹ ಅನುಭವಿಸಬೇಕು.

SCERT TELANGANA

ತುಫಾನುಗಳು, ಪ್ರವಾಹಗಳಂತಹ ವೈಪರೀತ್ಯಗಳನ್ನು ಪ್ರಜೆಗಳು ಯಾವ ವಿಧವಾಗಿ ಎದುರಿಸಬೇಕು?

ಸರ್ಕಾರಗಳು ತಯಾರುಮಾಡುವ ದೀರ್ಘಕಾಲಿಕ ಯೋಜನೆಗಳು, ಪ್ರಜೆಗಳು – ಪ್ರಭುತ್ವ ಸಂಸ್ಥೆಗಳ ಮಧ್ಯೆ ಇರುವ ಸಹಾಯ ಸಹಕಾರಗಳ ಮೇಲೆ ಈ ವೈಪರೀತ್ಯಗಳನ್ನು ಎದುರಿಸುವ ವಿಧಾನ ಆಧಾರವಾಗಿರುತ್ತದೆ. ಈ ದಿನಗಳಲ್ಲಿ ತುಫಾನುಗಳು, ಪ್ರವಾಹಗಳಂತಹ ಪ್ರಕೃತಿ.

ವೈಪರೀತ್ಯಗಳು ಸಂಭವಿಸುವ ಅವಕಾಶವಿರುವ ಪ್ರಾಂತಗಳಲ್ಲಿ ಅವಸರವಾದ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಪ್ರಕೃತಿ ವೈಪರೀತ್ಯಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂರಕ್ಷಣಾ ಕಾರ್ಯಗಳು ಮೊದಲಾದ ಅಂಶಗಳೆಲ್ಲವನ್ನು ಪ್ರಜೆಗಳಿಗೆ ತಿಳಿಯಪಡಿಸಬೇಕು.

ಪ್ರಜೆಗಳೆಲ್ಲರಿಗೆ ಪಕ್ಕಾ ಮನೆಗಳು ದೀರ್ಘಕಾಲ ರಕ್ಷಣೆ ಹೊಂದುವ ವಿಧವಾಗಿ ನಿರ್ಮಿಸಬೇಕು. ಪ್ರಕೃತಿ ವೈಪರೀತ್ಯಗಳಿಗೆ ತಡೆದುಕೊಂಡು ನಿಲ್ಲುವ ರಸ್ತೆಗಳ ನಿರ್ಮಾಣ, ತೀರಪ್ರಾಂತ ಪ್ರಜೆಗಳಿಗೆ ಪ್ರಕೃತಿ ವೈಪರೀತ್ಯಗಳು ಏರ್ಪಟ್ಟಾಗ ಆಹಾರ, ವೈದ್ಯಕೀಯ ಸೌಲಭ್ಯಗಳು, ಕುಡಿಯುವ ನೀರಿನ ಸೌಲಭ್ಯಗಳು ಮೊದಲಾದವುಗಳ ವಿಷಯಗಳಲ್ಲಿ ಸಹ ಸರ್ಕಾರಗಳು ಜವಾಬ್ದಾರಿ ತೆಗೆದುಕೊಳ್ಳಬೇಕು.

◆ **ವೈಪರೀತ್ಯಗಳ ಸಲುವಾಗಿ ಪ್ರಜೆಗಳಿಗೆ ಯಾವ ವಿಧವಾಗಿ ಸಂಸಿದ್ಧಗೊಳಿಸಬೇಕು?**

1. ತುಫಾನುಗಳು, ಪ್ರಾವಾಹಗಳು ಕಾಲಾನುಗುಣವಾಗಿ (seasonal) ಸಂಭವಿಸುತ್ತವೆ. ಈ ಕಾಲದಲ್ಲಿ ಟಿ.ವಿ. ರೇಡಿಯೋಗಳು ಮೊದಲಾದ ಪ್ರಸಾರಮಾಧ್ಯಮಗಳ ಮೂಲಕ ಅಥವಾ ಮನೆಮನೆಗೆ ತಿರುಗಿ ಹೇಳಿ ಪ್ರಜೆಗಳನ್ನು ಎಚ್ಚರಗೊಳಿಸಬೇಕು.
2. ಪ್ರತಿ ಮನೆಯಲ್ಲಿ ಅತ್ಯವಸರ ಕಿಟ್ (Emergency Kit) ಸಿದ್ಧವಾಗಿ ಇರುವಂತೆ ನೋಡಬೇಕು ಈ ಕಿಟ್‌ನಲ್ಲಿ ಕೆಲವು ಪೇಪರ್‌ಗಳು, ಆಹಾರ ಪದಾರ್ಥಗಳು, ಹಣ, ಅತ್ಯವಸರ ಸಮಯದಲ್ಲಿ ಸಂಪರ್ಕಿಸಲು ಉಪಯೋಗಿಸುವ ಫೋನ್ ನಂಬರ್‌ಗಳು, ಕೈಗೆಟಕುವಂತೆ ಇಡಬೇಕು.
3. ತುಫಾನು ಸಂಭವಿಸಿದರೆ ರಕ್ಷಣೆಗೆ ಹತ್ತಿರವಿರುವ ಪುನರಾವಾಸ ಕೇಂದ್ರವನ್ನು ಮೊದಲೇ ಗುರ್ತಿಸಿಕೊಳ್ಳಬೇಕು.
4. ಅಗತ್ಯವಾದರೆ ಮನೆಯ ಗೋಡೆಗಳು, ಮೇಲ್ಛಾವಣಿ, ಬಾಗಿಲುಗಳು, ಕಿಟಕಿಗಳು ಗಟ್ಟಿಯಾಗಿರುವಂತೆ ಏರ್ಪಡಿಸಿಕೊಳ್ಳಬೇಕು.
5. ತುಫಾನು ಎಚ್ಚರಿಕೆ ತಿಳಿದ ತಕ್ಷಣ ಕುಡಿಯುವ ನೀರು, ಆಹಾರಪದಾರ್ಥಗಳು ತೇವವನ್ನು ತಡೆಯುವ (water proof bag) ಚೀಲದಲ್ಲಿ ಸಿದ್ದಮಾಡಿಕೊಳ್ಳಬೇಕು.
6. ಎಚ್ಚರಿಕೆಗಳು ತಿಳಿದ ನಂತರ ಹೊರಗಡೆ ಮುಖ್ಯವಾಗಿ ಸಮುದ್ರತೀರ ಪ್ರಾಂತಗಳಿಗೆ ಹೋಗಬಾರದು
7. ಬಾಗಿಲುಗಳು, ಕಿಟಕಿಗಳು ಮುಚ್ಚಿ ಮನೆಯ ಒಳಗಡೆಯೇ ಇರಬೇಕು.
8. ಮನೆಯ ಒಳಗಡೆ ಇರುವುದಕ್ಕೆ ನಿಮ್ಮ ಮನೆ ಸುರಕ್ಷಿತ ಅಲ್ಲವೆಂದು ನೀವು ಭಾವಿಸುವುದಾದರೆ ಹತ್ತಿರವಿರುವ ಪಕ್ಕಾ ಭವನದೊಳಗೆ ಹೋಗಬೇಕು.
9. ನೀವು ವಾಹನದ ಮೇಲೆ ಇರುವಾಗ ತುಫಾನು ಉಂಟಾದರೆ. ವಾಹನವನ್ನು ನಿಲ್ಲಿಸಿ ಸಮುದ್ರತೀರ, ಮರಗಳು, ಎಲಕ್ಟ್ರೀಕ್ ಸ್ತಂಭಗಳಿಗೆ ದೂರವಾಗಿರಬೇಕು. ಇಲ್ಲವಾದರೆ ಪ್ರಚಂಡವಾದ ಗಾಳಿಗೆ ಅವು ನಮ್ಮ ಮೇಲೆ ಬೀಳುತ್ತವೆ.
10. ತುಫಾನ್ ಗಾಳಿ ತಕ್ಷಣವೆ ನಿಂತು ಹೋದರೆ, ಅಧಿಕಾರ ಯಂತ್ರಾಂಗ ಪ್ರಕಟಿಸುವರೆಗೆ ಬರಬಾರದು.
11. ರೇಡಿಯೋಗಳ ಮೂಲಕ ಪ್ರಸಾರವಾಗುವ ಸಲಹೆಗಳನ್ನು ಪಾಲಿಸಬೇಕು.
12) ತುಫಾನು ಅಪಾಯ (ಪ್ರಮಾದ) ಇಲ್ಲವೆಂದು ತಿಳಿದ ಮೇಲೆ, ನಾವು ಪುನಃ ಮರಳಿ ಮನೆಗೆ ಹೋಗುವಾಗ

SCERT TELANGANA

ದಾರಿಯಲ್ಲಿ ರಸ್ತೆಯ ಮೇಲೆ ಬಿದ್ದ ಕರೆಂಟ್ ಸ್ಥಂಭಗಳು, ಮರಗಳಂತಹವುಗಳು ಬರುತ್ತಿರುತ್ತವೆ. ಆದಕಾರಣ ಜಾಗ್ರತ್ತೆಯಾಗಿ ಹೋಗಬೇಕು.

13) ಬಿಲಗಳಿಂದ ಹಾವುಗಳು ಬರುತ್ತಿರುತ್ತವೆ. ಆಧಕಾರಣ ಜಾಗ್ರತೆಯಾಗಿ ಹೋಗಬೇಕು.

14) ಪ್ರವಾಹನೀರಿನಲ್ಲಿ ಹೋಗಬಾರದು ಅವು ತುಂಬಾ ಆಳವಾಗಿ ಇರಬಹುದು.

15) ವಿದ್ಯಾರ್ಥಿಗಳಾಗಿ ನಿವೆಲ್ಲರೂ ಮೇಲೆ ಹೆಸರಿಸಿದ ಸಂರಕ್ಷಣ ಪದ್ದತಿಗಳನ್ನು ಸುರಕ್ಷಿತ ಕಾರ್ಯಗಳನ್ನು ವಿಸ್ತರಿಸುವಂತೆ ಮಾಡುವುದರಲ್ಲಿ, ಇವುಗಳ ಬಗ್ಗೆ ಪ್ರಜೆಗಳನ್ನು ಚೈತನ್ಯಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು.

◆ **ಪ್ರಕೃತಿ ವೈಪರೀತ್ಯಗಳು – ಮನೆಯನ್ನು ಖಾಲಿ ಮಾಡುವ ಸಂದರ್ಭ ಬಂದರೆ :**

1) ಬಟ್ಟೆಗಳು ಅವಸರವಾದ ಔಷಧಗಳು, ಬೆಲೆಯುಳ್ಳ ವಸ್ತಗಳು, ಬಟ್ಟೆಗಳು ಮೊದಲಾದವು ತೇವಕ್ಕೆ ತಟ್ಟುಕೊಳ್ಳುವ (water proof) ಬ್ಯಾಗಿನಲ್ಲಿಟ್ಟು ಸುರಕ್ಷಿತ ಪ್ರಾಂತ್ಯಕ್ಕೆ ಹೋಗಬೇಕು.

2) ಅಡುಗೆ ಸಾಮಾಗ್ರಿ, ಸ್ಟೀಲು ಹಿತ್ತಾಳೆ ವಸ್ತುಗಳು, ವಸ್ತ್ರಗಳು, ಫರ್ನೀಚರ್ ಮೊದಲಾದವುಗಳನ್ನು ಮಂಚದ ಮೇಲೆ ಇಡಬೇಕು

3) ವಿದ್ಯುತ್ ಶಕ್ತಿಯನ್ನು ನಿಲುಗಡೆ ಮಾಡಬೇಕು.(Turn off power)

4) ನೀವು ಮನೆಯಲ್ಲಿದ್ದರೂ, ಹೊರಗಡೆ ಹೋದರೂ ಟಾಯ್ ಲೆಟ್ ಮೇಲ್ಭಾಗವನ್ನು ಮರಳಿನ ಚೀಲದಿಂದ ಮುಚ್ಚಬೇಕು. ಕೊಳೆ ನೀರು ಹಿಂದಕ್ಕೆ ಬಾರದಂತೆ ಡ್ರೈನೇಜಿ (ಚರಂಡಿ) ರಂಧ್ರಗಳನ್ನು ಮುಚ್ಚಬೇಕು.

5) ಮನೆಗೆ ಬೀಗ ಹಾಕಬೇಕು. ಸುರಕ್ಷಿತ ಪ್ರದೇಶಕ್ಕೆ ಹೋಗುವ ಮಾರ್ಗವನ್ನು ತಿಳಿದುಕೊಳ್ಳಬೇಕು.

6) ಆಳ ತಿಳಿಯದ ಪ್ರವಾಹದೊಳಗೆ ಅಥವಾ ಕುಣಿಯೊಳಗೆ ಇಳಿಯಬಾರದು. ವಿದ್ಯುತ್‌ಗೆ ದೂರವಾಗಿರಬೇಕು.

◆ **ಪ್ರವಾಹ ಸಮಯದಲ್ಲಿ :**

1. ಕುದಿಸಿ ಆರಿಸಿದ ನೀರನ್ನು (Boiled)ಕುಡಿಯಬೇಕು.

2. ಆಹಾರ ಪದಾರ್ಥಗಳ ಮೇಲೆ ಮುಚ್ಚಳವಿರಬೇಕು.ಊಟ ಮಿತವಾಗಿರಬೇಕು.

3. ಡಯೇರಿಯಾ ಹೆಚ್ಚಾದಾಗ ಟೀ (raw-tea) ಗಂಜಿ, ಎಳೆನೀರು ಮೊದಲಾದವುಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು.

4. ಮಕ್ಕಳನ್ನು ಖಾಲಿ ಹೊಟ್ಟೆಯಲ್ಲಿ ಇರಲು ಬಿಡಬಾರದು.

5. ರೋಗಗಳು ವಿಸ್ತರಿಸದಂತೆ ಸುತ್ತಮುತ್ತ ಬ್ಲೀಚಿಂಗ್ ಪೌಡರ್ ಚೆಲ್ಲಬೇಕು.

6. ಪ್ರವಾಹ ನೀರಿನಲ್ಲಿ ಹೋಗಬಾರದು ಒಂದು ವೇಳೆ ಹೋಗುವುದಾದರೆ, ಆದರ ಆಳ ಎಷ್ಟೀದೇಯೋ ಒಂದು ಕಟ್ಟಿಗೆಯಿಂದ ಅಳೆದು ಮೊಣಕಾಲಿನ ಆಳದವರೆಗೆ ಇದ್ದರೆ ಮಾತ್ರ ಹೋಗಬೇಕು.

7. ಪ್ರವಾಹನೀರಿನಿಂದ ತಯಾರಿಸಿದ ಆಹಾರವನ್ನು ತೆಗೆದುಕೊಳ್ಳಬಾರದು.

8. ಗ್ರಾಮೀಣ ಪ್ರಾಂತದಲ್ಲಿ ನೀರನ್ನು ಕುದಿಸಿ ಕುಡಿಯಬೇಕು. ನೀರನ್ನು ಶುದ್ಧಗೊಳಿಸಲು ಹಾಲೋಜಿನ್ ಗುಳಿಗೆ (Halogen Tablets) ಗಳನ್ನು ಬಳಸಬೇಕು.(ಇವುಗಳ ಬಗ್ಗೆ ನಿಮ್ಮ ಗ್ರಾಮ ಆರೋಗ್ಯ ಕಾರ್ಯಾಕರ್ತರನ್ನು ಕೇಳಿರಿ).

9. ಪ್ರವಾಹಗಳ ಸಮಯದಲ್ಲಿ ಹಾವುಗಳ ಕಚ್ಚುವಿಕೆ ಸಾಮಾನ್ಯ. ಆದಕಾರಣ ಹಾವುಗಳ ವಿಷಯದಲ್ಲಿ ತುಂಬಾ ಜಾಗ್ರತೆಯಾಗಿ ಇರಬೇಕು

ಮುಖ್ಯವಾದ ಪದಗಳು : ನದಿಗಳು ಉಪನದಿಗಳು ದ್ರವೀಭವನ
ವಾರ್ಷಿಕ ವರ್ಷಪಾತ ಪ್ರವಾಹ ಮೈದಾನಗಳು

SCERT TELANGANA

ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ :

1) ನೀರು, ನೀರಿನ ಆವಿಯಾಗಿ ಹೇಗೆ ಬದಲಾಗುತ್ತದೆ. ನೀರಿನ ಆವಿಯಿಂದ ಮೋಡಗಳು ಹೇಗೆ ಏರ್ಪಡುತ್ತವೆಯೋ ತಿಳಿಸಿರಿ.

2) ಬಾಷ್ಪೀಭವನ, ಮೋಡಗಳು ಏರ್ಪಡುವುದು ಹೆಚ್ಚಾಗಿ ಎಲ್ಲಿ ನಡೆಯುತ್ತದೆ ?

3) ಮೋಡಗಳು ಸಮುದ್ರದಿಂದ ಬಹಳ ದೂರದಲ್ಲಿರುವ ಭೂಭಾಗವನ್ನು ಹೇಗೆ ಸೇರುತ್ತವೆ.

4) ಎಲ್ಲಿ ಹೆಚ್ಚು ಮಳೆ ಬೀಳುತ್ತದೆ ? ಸರಿಯಾದುದನ್ನು ಆರಿಸಿಕೊಳ್ಳಿ

ಎ) ಪವನ ದಿಕ್ಕಿನಲ್ಲಿ ಇರುವ ಸಮುದ್ರ ತೀರ ಪ್ರಾಂತ

ಬಿ) ಪವನ ದಿಕ್ಕಿನಲ್ಲಿ ಇರುವ ಪರ್ವತ ಪ್ರಾಂತ

ಸಿ) ಸಮುದ್ರಕ್ಕೆ ದೂರವಾಗಿರುವ ಭೂಭಾಗ

5) ಆವರಣದಲ್ಲಿ ನೀಡಿರುವ ಪದಗಳಿಂದ ಖಾಲಿ ಸ್ಥಳವನು ಸರಿಯಾಗಿ ತುಂಬಿರಿ. (ತೀರ, ಉಪನದಿಗಳು, ಪ್ರವಾಹ ಮೈದಾನ, ನದಿಕಣಿವೆ)

a) ನದಿ _____ ಮೂಲಕ ಹರಿಯುತ್ತದೆ.

b) ಹೊಳೆಗಳು ಅಥವಾ ನದಿಗಳು ದೊಡ್ಡನದಿಯಲ್ಲಿ ಸೇರಿದರೆ ಅವುಗಳನ್ನು ಪ್ರಧಾನ ನದಿಗೆ _____ ಎನ್ನುವರು.

c) ಪ್ರವಾಹಗಳು ಸಂಭವಿಸಿದಾಗ ನದಿಯೆಲ್ಲಾ ನೀರಿನಿಂದ ತುಂಬಿದ್ದರೆ, ಆಳವಾದ ಪ್ರಾಂತ್ಯವನ್ನು _____ ಎನ್ನುತ್ತಾರೆ.

6) ಗೋದಾವರಿ ನದಿ ಪಶ್ಚಿಮದಿಂದ ಪೂರ್ವಕೆ ಏಕೆ ಹರಿಯುತ್ತದೆ ?

7) ಜಲಚಕ್ರದ ಪ್ರಧಾನ ಭಾಗಗಳನ್ನು ವಿವರಿಸಿ.

8) ನಿಮ್ಮ ಗ್ರಾಮ ಅಥವಾ ಪಟ್ಟಣದ ಸಮೀಪದಲ್ಲಿ ಹೊಳೆಗಳು ಇಲ್ಲವೇ ನದಿಗಳು ಇದ್ದಿರಬಹುದು ಅವುಗಳ ಕುರಿತು ತಿಳಿದುಕೊಂಡು ಈ ಕೆಳಗಿನ ಪಟ್ಟಿಯನ್ನು ತುಂಬಿರಿ.

ಕ್ರ	ಹೆಸರು	ನದಿಗಳ ಜನ್ಮಸ್ಥಾನ	ಸೇರುವ ನದಿಯ	ಸೇರುವ ಸಮುದ್ರ

9) ನಿಮ್ಮ ಪ್ರಾಂತದಲ್ಲಿನ ನದಿಗಳು/ಹಳ್ಳಗಳಲ್ಲಿ ವರ್ಷವೆಲ್ಲಾ ನೀರು ಇರುತ್ತದಯೇ? ಅವುಗಳಲ್ಲಿ ಹಿಂದಿನ ಕಾಲದಲ್ಲಿ ಹೆಚ್ಚು ನೀರು ಇರುತ್ತಿತ್ತೋ ? ನಿಮ್ಮ ಹಿರಿಯರನ್ನು ಕೇಳಿ ತಿಳಿದುಕೊಳ್ಳಿ.

10) ವೈಪರಿತ್ಯಗಳನ್ನು ಎದುರಿಸಲು ಪ್ರಜೆಗಳನ್ನು ಯಾವ ವಿಧವಾಗಿ ಸಿದ್ಧಪಡಿಸಬೇಕು ?

11) ತುಫಾನ್‌ಗಳು, ಪ್ರವಾಹಗಳ ಚಿತ್ರಗಳನ್ನು ಶೇಖರಿಸಿ, ಆಲ್ಬಮ್ ತಯಾರು ಮಾಡಿರಿ.

12) ಪ್ರವಾಹದ ಪ್ರಳಯವನ್ನು ತೋರಿಸುವ ಪೋಷ್ಟರ್‌ನ್ನು ತಯಾರು ಮಾಡಿರಿ.

ಪ್ರಾಜೆಕ್ಟ : ನಿಮ್ಮ ಪ್ರಾಂತದಲ್ಲಿ ನೀರು ಪೋಲು ಮಾಡುವುದನ್ನು ಪರಿಶೀಲಿಸಿ ಪಟ್ಟಿಯಲ್ಲಿ ಬರೆಯಿರಿ. ಕಾರಣಗಳನ್ನು ಚರ್ಚಿಸಿ ನೀರನ್ನು ಉಳಿತಾಯ ಮಾಡುವ ಮಾರ್ಗಗಳನ್ನು ಸೂಚಿಸಿರಿ?

ಕ್ರ.ಸಂ.	ನೀರು ಪೋಲು ಆಗುತ್ತಿರುವ ಪ್ರಾಂತ	ಕಾರಣ	ನಿಯಂತ್ರಿಸುವ/ಉಳಿತಾಯ ಮಾರ್ಗಗಳು

SCERT TELANGANA

ಅಧ್ಯಾಯ 3

ಕೆರೆಗಳು, ಭೂಗರ್ಭಜಲಗಳು

ಮೊದಲ ಭಾಗ

ಕೆರೆಗಳು :


ಸಾವಿರಾರು ವರ್ಷಗಳಿಂದ ನಮ್ಮ ಪೂರ್ವಿಕರು ಭೂಮಿಯ ಮೇಲೆ ಹರಿಯುವ ನೀರನ್ನು ಸಂಗ್ರಹ ಮಾಡುವುದಕ್ಕೆ ಕೆರೆಗಳನ್ನು ತೋಡಿಸಿದರು. ಬೃಹತ್ ಶಿಲಾಯುಗದಲ್ಲೇ ಕೆರೆಗಳನ್ನು ನಿರ್ಮಿಸಿ, ಸಂಗ್ರಹ ಮಾಡಿದ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿರುವರೆಂಬ ಆಧಾರಗಳು ನಮಗೆ ಬಹಳ ಇವೆ. ತೆಲಂಗಾಣ, ರಾಯಲಸೀಮೆ ಪ್ರಾಂತಗಳಲ್ಲಿ ಸಾವಿರಾರು ಕೆರೆಗಳನ್ನು ಕಾಕತೀಯರು, ವಿಜಯನಗರ ರಾಜರು, ನಾಯಕರು ನಿರ್ಮಿಸಿರುವ ವಿಷಯವನ್ನು ನೀವು ಓದಿರುವಿರಿ.ಈ ಕೆರೆಗಳ ನಿರ್ಮಾಣ, ವ್ಯವಸಾಯವನ್ನು ಈ ಪ್ರಾಂತದಲ್ಲಿ ವಿಸ್ತರಿಸಲು ಸಹಾಯವಾಗಿದೆ. ಈಗಲೂ ಈ ಪ್ರಾಂತಗಳಲ್ಲಿನ ಅನೇಕ ಗ್ರಾಮಗಳಲ್ಲಿ ಕನಿಷ್ಠ ಒಂದೋ ಎರಡೋ ದೊಡ್ಡ ಕೆರೆಗಳಿವೆ.

ಕೆರೆಗಳನ್ನು ಹೇಗೆ ನಿರ್ಮಿಸಿದ್ದಾರೆ?

ಕೆರೆಗಳನ್ನು ಸಾಧಾರಣವಾಗಿ ಇಳಿಜಾರಾಗಿ ಪ್ರವಹಿಸುವ ಹಳಕ್ಕೆ, ಕಲ್ಲು, ಮಣ್ಣಿನಿಂದ ಗೋಡೆಕಟ್ಟಿ ನಿರ್ಮಿಸುವರು. ಗಟ್ಟಿಯಾಗಿ ಕಟ್ಟಿದ ಆ ಗೋಡೆಗೆ ಒಂದುಕಡೆ ನೀರು ಸಂಗ್ರಹ ಇದ್ದು, ಅಲ್ಲಿ ದೊಡ್ಡದಾದ ಕೆರೆ ಕುಂಟೆಗಳು ಏರ್ಪಡುತ್ತವೆ. ಕೆಳಗಿನ ಚಿತ್ರವನ್ನು ನೋಡಿರಿ.

ಈ ಕೆರೆಗಳನ್ನು ಒಂದೊಂದು ಸಾರಿ ರಾಜರಾಗಲಿ, ಸೈನ್ಯಾಧ್ಯಕ್ಷರಾಗಲಿ, ನಾಯಕರಾಗಲಿ ನಿರ್ಮಿಸುತ್ತಿದ್ದರು. ಆದರೆ ಹೆಚ್ಚಿನ ಸಂದರ್ಭದಲ್ಲಿ ಆ ಗ್ರಾಮ ಪ್ರಜೆಗಳೇ ಸ್ವತಃ ನಿರ್ಮಿಸಿಕೊಂಡಿದ್ದಾರೆ. ಹೀಗೆ ಕೆರೆಗಳ ನಿರ್ಮಾಣ ಮಾಡಿದವರನ್ನು ಕಥೆಗಳ ಮೂಲಕವಾಗಲಿ, ದೇವಾಲಯಗಳ ಹತ್ತಿರವಾಗಲಿ, ಹಬ್ಬಗಳ ಸಂದರ್ಭಗಳಲ್ಲಾಗಲಿ, ಆ ಗ್ರಾಮ ಪ್ರಜೆಗಳು ಸ್ಮರಣೆ ಮಾಡುತ್ತಿರುತ್ತಾರೆ. ಗ್ರಾಮದಲ್ಲಿ ಪ್ರತಿಯೊಬ್ಬರು ಶ್ರಮವಹಿಸಿ. ವೆಚ್ಚವನ್ನು ಭರಿಸಿ ಕೆರೆ ಕಟ್ಟೆಗಳಿಗೆ ಅವಶ್ಯಕವಾದ ದುರಸ್ತಿಗಳನ್ನು ಮಾಡಿ ಎಲ್ಲರೂ ಕೂಡಿ ಆ ಕೆರೆಗಳನ್ನು ಕಾಪಾಡಿಕೊಳ್ಳವರು. ಕೆರೆಯಲ್ಲಿನ ಊಳನ್ನು ಒಟ್ಟಿಗೆ ಕೆಲಸಮಾಡಿ ತೆಗೆಯುವರು. ಕೆರೆಯೊಳಗೆ ಬರುವ ನೀರನ್ನು ಯಾರೂ ಬೇರೆಕಡೆಗೆ ತಿರುಗಿಸುವದಾಗಲಿ, ನಿಲ್ಲಿಸುವುದಾಗಲಿ, ಮಲೀನ ಮಾಡುವುದಾಗಲಿ, ಮಾಡದ ಹಾಗೆ ಜಾಗ್ರತೆವಹಿಸುವರು. ಕೆರೆಯೊಳಗಿನ ನೀರು ಸಕ್ರಮ ವಿನಿಯೋಗಕ್ಕೆ "ನೀರು ಕಟ್ಟುವ ಮನುಷ್ಯ" ಎಂಬ ಒಬ್ಬ ಮನುಷ್ಯನನ್ನು ಪ್ರತ್ಯೇಕವಾಗಿ ನಿಯಮಿಸಿಕೊಳ್ಳುವರು. ಆ ಪ್ರಾಂತ್ಯದಲ್ಲಿ ಇತನನ್ನು "ನೀರಟಿ" ಎಂದು ಕರೆಯುವರು.

ಚಿತ್ರ–3.1ಎ ಕರೆಯ ನಿರ್ಮಾಣ–ಸಾಗುವಳಿ ಭೂಮಿ



SCERT TELANGANA

ಕೆರೆಗಳು ಹೇಗೆ ಸಹಾಯವಾಗುತ್ತವೆ?

ಕೆರೆಗಳು ಪ್ರಜೆಗಳ ನೀರಿನ ಅವಸರಗಳನ್ನು ತೀರಿಸಲು ಪಶುಗಳ ದಾಹ ತೀರಿಸುವುದಲ್ಲದೆ ತೀರ್ವವಾದ ಬರ ಪರಿಸ್ಥಿತಿಯಲ್ಲಿ ಕೂಡ ಯಾವುದೋ ಒಂದು ಬೆಳೆಯನ್ನು ಸ್ವಲ್ಪಮಟ್ಟಿಗೆ ಬೆಳಸಿಕೊಳ್ಳಲು ಸಹಾಯ ಮಾಡುತ್ತವೆ. ಹತ್ತಿರದಲ್ಲಿನ ಬಾವಿಗಳಲ್ಲಿ ನೀರಿನಮಟ್ಟ ಹೆಚ್ಚುವುದಕ್ಕೆ ಉಪಯೋಗವಾಗುತ್ತವೆ.

ಮಳೆ ಕಡಿಮೆಯಾಗಿ ಕೆರೆಗಳು ಬತ್ತಿಹೋದಾಗ ಆ ಕೆರೆಯ ತಗ್ಗು ಪ್ರದೇಶದಲ್ಲಿ ಕೆಲವು ಬೆಳೆಗಳನ್ನು ಬೆಳೆಯುವರು. ಕೆರೆಯಿಂದ ಬಹಳ ಮುಖ್ಯವಾದ ಉಪಯೋಗ ನೀರಿನ ಪ್ರವಾಹವನ್ನು ತಡೆಗಟ್ಟುವುದು. ಭೂಸವೆತವನ್ನು ನಿವಾರಿಸುವುದು. ಪ್ರತಿ ವರ್ಷ ಕೆರೆಯಲ್ಲಿನ ಒಂಡು ಮಣ್ಣನ್ನು ಬೆಳೆ ಬೆಳೆಯುವ ಭೂಮಿಗಳಿಗೆ ಗೊಬ್ಬರವಾಗಿ ಹಾಕುತ್ತಾರೆ. ಈ ವಿಧವಾಗಿ ಭೂಮಿ ಫಲವತ್ತತೆಯನ್ನು ಹೆಚ್ಚಿಸುತ್ತಾರೆ.

ಕೆರೆ ಯಾರೊಬ್ಬರ ಆಸ್ತಿಯಲ್ಲ. ಅದು ಗ್ರಾಮಸ್ಥರೆಲ್ಲರಿಗೂ ಸೇರಿದ ಆಸ್ತಿ ಎಂಬುದನ್ನು ಗುರ್ತಿಸಬೇಕು. ಕೆರೆಗಳು ಯಾರೊಬ್ಬರಿಗೋ ಇಬ್ಬರಿಗೋ ಅಲ್ಲದೇ ಗ್ರಾಮ ಪ್ರಜೆಗಳಿಗೆಲ್ಲ ಉಪಯೋಗವಾಗುತ್ತವೆ.

ಈ ದಿನಗಳಲ್ಲಿ ಕಣ್ಮರೆಯಾಗುತ್ತಿರುವ ಕೆರೆಗಳು:–

ಕಳೆದ ಇಪ್ಪತ್ತು ಮೂವತ್ತು ವರ್ಷಗಳಿಂದ ಕೆರೆಗಳನ್ನು ನಿರ್ಲಕ್ಷ್ಯಮಾಡುವುದರಿಂದ ಅವು ಎಲ್ಲಿಂದಲ್ಲೆ ಒಡೆದು ಹೋಗುತ್ತಿವೆ. ಕೆರೆಗಳಲ್ಲಿ ಒಂಡು ತೆಗೆಯುವುದು, ದುರಸ್ತಿಮಾಡುವುದು ಸಕ್ರಮವಾಗಿ ನಡೆಯುತ್ತಿಲ್ಲ. ಪ್ರಜೆಗಳು ಸಹ ಕ್ರಮವಾಗಿ ಕೆರೆಯ ಭೂಮಿಯನ್ನು ಮನೆ ನಿರ್ಮಾಣಕ್ಕೂ ವ್ಯವಸಾಯಕ್ಕೂ ಉಪಯೋಗಿಸಲು ಪ್ರಾರಂಭಿಸಿದರು. ಆದ್ದರಿಂದ ರಾಜ್ಯದ ಎಲ್ಲಾ ಪ್ರಾಂತದಲ್ಲಿನ ಕೆರೆಗಳು ಭತ್ತಿಹೋಗಿ ಅವುಗಳನ್ನು ಹಿಡಿಸಿಕೊಳ್ಳುವವರೇ ಇಲ್ಲವಾಗಿದ್ದರೆ, ಕೆರೆಗಳನ್ನು ಕಾಪಾಡಿಕೊಳ್ಳುವ ಬದಲು ಕೆಲವರು ಹೆಚ್ಚು ಹಣ ಖರ್ಚುಮಾಡಿ, ಬಹಳ ಆಳವಾದ ಬೋರು ಬಾವಿಗಳನ್ನು ತೋಡುತ್ತಿರುವರು. ಆದರೆ ಆ ಕೊಳವೆ ಬಾವಿಗಳು ಸ್ವಲ್ಪ ಜನರಿಗೆ ಉಪಯೋಗವಾಗುತ್ತಿವೆ. ಅವು ಮುಂಬರುವ ದಿನಗಳಲ್ಲಿ ನೀರಿನ ಕೊರತೆಗೆ ಕಾರಣವಾಗುತ್ತಿವೆ.ಕೆರೆಗಳಾದರೆ ನೀರಿನ ಸಂಪನ್ಮೂಲಗಳಾಗಿ ನಿಲ್ಲುತ್ತವೆ.

ಪ್ರಾಜೆಕ್ಟ್ ಕೆಲಸ :

ನಿಮ್ಮ ಪ್ರಾಂತದಲ್ಲಿನ ಕೆರೆಯನ್ನು ಪರಿಶೀಲಿಸಿ ಅದನ್ನು ಕುರಿತು ಒಂದು ವರದಿಯನ್ನು ತಯಾರಿಸಿರಿ.

- ಕೆರೆ ಅದರ ಪರಿಸರದ ನಮೂನೆ ಚಿತ್ರಪಟ ತಯಾರುಮಾಡಿರಿ.
- ಆ ಕೆರೆಗೆ ನೀರು ಎಲ್ಲಿಂದ ಬರುತ್ತದೆ ಹೆಚ್ಚಾದ ನೀರು ಎಲ್ಲಿಗೆ ಹೋಗುತ್ತದೆ ಕಂಡುಕೊಳ್ಳಿರಿ.
- ಆ ಕೆರೆ ಯಾವ ಹಳ್ಳದ ಹತ್ತಿರ, ನದಿಹತ್ತಿರ ನಿರ್ಮಿಸಿರುವರೋ, ಅದು ಯಾವ ಬೆಟ್ಟದ ಸಮೀಪದಲ್ಲಿ ಇರುವದೊ ಅವುಗಳ ಹೆಸರುಗಳನ್ನು ತಿಳಿದುಕೊಳ್ಳಿರಿ.
- ಆ ಕೆರೆಯ ಕಟ್ಟೆಯನ್ನು ಯಾವುದರಿಂದ ಕಟ್ಟಿರುವರೋ, ಈಗ ಅದನ್ನು ಯಾರು ಸಂರಕ್ಷಿಸುವರೋ ತಿಳಿದುಕೊಳ್ಳಿರಿ.
- ಆ ಕೆರೆಯನ್ನು ಯಾರು, ಯಾವಾಗ ನಿರ್ಮಾಣ ಮಾಡಿರುವರೋ ತಿಳಿದುಕೊಳ್ಳಿರಿ,
- ಆ ಕೆರೆಯ ಕುರಿತು ಯಾವುದಾದರೂ ಕಥೆಗಳಿದ್ದರೆ ಬರೆಯಿರಿ,
- ಕೆರೆಯ ಫೋಟೋಗಳನ್ನು ಶೇಖರಿಸಿ, ಆ ಕೆರೆಗೆ ಸಂಬಂಧಿಸಿದ ಇತರ ವಿಷಯಗಳನ್ನು ವಿವರಣೆಗಳನ್ನು ಶೇಖರಿಸಿ.
- ಆ ಕೆರೆಯ ನೀರಿನಿಂದ ಯಾವ ಬೆಳೆಗಳು ಬೆಳೆಯುತ್ತಾರೆ, ಆ ನೀರಿನ ಕಾರ್ಯನಿರ್ವಹಣೆ ಯಾರುಮಾಡುವರು ಆ ನೀರನ್ನು ಹೇಗೆ ಸಕ್ರಮವಾಗಿ ಉಪಯೋಗಿಸುವರೋ ತಿಳಿದುಕೊಂಡುದಾಖಲೆ ಮಾಡಿರಿ.



ಚಿತ್ರ–3.1ಬಿ ರಾಮಪ್ಪ ಕೆರೆ,ವರಂಗಲ್ ಜಿಲ್ಲೆ

SCERT TELANGANA

ಮಿಷನ್ ಕಾಕತೀಯ (ನಮ್ಮ ಊರು–ನಮ್ಮ ಕೆರೆ)

ತೆಲಂಗಾಣ ಹೊಸ ರಾಜ್ಯವಾಗಿ ಅವತರಿಸಿದ ನಂತರ ರಾಜ್ಯ ಸರಕಾರವು ರಾಜ್ಯದಲ್ಲಿರುವ ಸಣ್ಣ ನೀರಾವರಿ, ಕೆರೆಗಳ ಅಭಿವೃದ್ಧಿಗಾಗಿ ಒಂದು ಹೊಸ ಕಾರ್ಯವನ್ನು ಪ್ರಾರಂಭಿಸಿದೆ. ಅದುವೇ "ಮಿಷನ್ ಕಾಕತೀಯ" ನಮ್ಮ ಊರು – ನಮ್ಮ ಕೆರೆ ರಾಜ್ಯದಲ್ಲಿಯ 47,000 ಕೆರೆಗಳ ಹೂಳೆತ್ತುವುದು, ಕೆರೆ ಕಟ್ಟೆಗಳನ್ನು ನಿರ್ಮಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಕಾರ್ಯಕ್ರಮವು ನಿಮ್ಮ ಭಾಗದಲ್ಲಿ ಯಾವ ರೀತಿಯಲ್ಲಿ ನಡೆಯುತ್ತಿದೆಯೋ ಕಂಡುಕೊಳ್ಳಿರಿ. ಎಷ್ಟು ಕೆರೆಗಳು ಅಭಿವೃದ್ಧಿ ಹೊಂದಿವೆ? ಇದರಿಂದ ಜನರಿಗೇನಾದರೂ ಲಾಭವಾಗಿದೆಯೇ?



ಕೆರೆಗಳು – ಮೀನು ಹಿಡಿಯುವುದು

ಕೆರೆಗಳು ನಮಗೆ ಕುಡಿಯುವ ಮತ್ತು ವ್ಯವಸಾಯಕ್ಕೆ ನೀರೋದಗಿಸುವದಲ್ಲದೆ, ಎಷ್ಟೋ ಜನ ಮೀನುಗಾರಿಕೆಗೆ ಜೀವನಾಧಾರವಾಗಿಯೂ ಕೂಡ ಉಪಯೋಗವಾಗುತ್ತಿವೆ. ಸಾಂಪ್ರದಾಯ ಬದ್ಧವಾಗಿ ಮೀನು ಹಿಡಿಯುವ ಕುಟುಂಬಗಳದ ಗಂಗಪುತ್ರ (ಬೆಸ್ತ), ಗೂಂಡ್ಲು ಮತ್ತು ಮುದಿರಾಜ್ (ತೆಲುಗು) ಕುಲಕ್ಕೆ ಸೇರಿದ ಜನರು ತಮ್ಮ ಜೀವನವನ್ನು ಸಾಗಿಸಲು ಈ ಕೆರೆಗಳು, ನದಿಗಳ ಮೇಲೆ ಆಧಾರ ಪಟ್ಟಿದ್ದಾರೆ. ಅಂತಹ ಜೀವನ ನಡೆಸುವವರ ಬಗ್ಗೆ ಇನೂನ ತಿಳಿದುಕೊಳ್ಳಲು ನಲ್ಗೊಂಡ ಜಿಲ್ಲೆಯಲ್ಲಿನ ಒಂದು ಗ್ರಾಮಕ್ಕೆ ಹೋಗೋಣ ಬನ್ನಿ.

ಬೇತವೋಲು ಗ್ರಾಮ

ಈ ಗ್ರಾಮವು ಸೂರ್ಯಪೇಟೆಯ ಹತ್ತಿರವಿರುವ ಕೋದಾಡಕ್ಕೆ 16 ಕಿ.ಮೀ. ದೂರದಲ್ಲಿದೆ. ಗ್ರಾಮದ ಹಿರಿಯರು ಹೇಳಿದ ಪ್ರಕಾರ, ಕಾಕತೀಯರ ಸಾಮಂತ



ಚಿತ್ರ 3.1(ಸಿ) ವೀರಳಾದೇವಿ ಕೆರೆ



ಚಿತ್ರ 3.1(ಡಿ) ಕಟ್ಟಾ ಮೈಸಮ್ಮ ದೇವತೆ

ರಾಜನಾದ ಬೇತಾಳರೆಡ್ಡಿಯವರ ಹೆಸರಿನಿಂದ ಈ ಊರಿಗೆ ಬೇತವೋಲು ಎಂಬ ಹೆಸರು ಬಂದಿದೆ. ಈತನು ತನ್ನ ಮಡದಿ "ವೀರಳಾದೇವಿ"ಯ ಹೆಸರಿನಲ್ಲಿ ಒಂದು ಕೆರೆಯನ್ನು ತೋಡಿಸಿದನು. ಅದಕ್ಕಾಗಿ ಊರಿನವರು ಈ ಕೆರೆಯನ್ನು ವೀರಳಾದೇವಿಕೆರೆ ಎಂದು ಕರೆಯುತ್ತಾರೆ. 3000 ಎಕರೆ ಜಮೀನಿಗೆ ನೀರುಣಿಸುವ ಉದ್ದೇಶದಿಂದ ಈ ಕೆರೆಯನ್ನು ತೋಡಿಸಿದ್ದಾರಾದರೆ, ಈಗ ಅದು 1900 ಎಕರೆ ಜಮೀನಿಗೆ ಮಾತ್ರ ನೀರನ್ನು ಪೂರೈಸುತ್ತದೆ. ಕೆರೆಯ ನೀರು ಸಂಗ್ರಹವಾಗುವ ಭೂಮಿಯು ಆಕ್ರಮಣಕ್ಕೆ ಗುರಿಯಾಗಿರುವುದರಿಂದ, ಕೆರೆಯ ತಗ್ಗು ತುಂಬಿಕೊಂಡು ನೀರು ಸ್ವಲ್ಪವೇ ಸಂಗ್ರಹವಾಗಿ ವ್ಯವಸಾಯ ಕ್ಷೇತ್ರಕ್ಕೆ ನೀರು ಸಾಕಾಗುವುದಿಲ್ಲ. ಕೆರೆಯ ಕಟ್ಟಿಯ ಮೇಲೆ ಕಟ್ಟಿ ಮೈಸಮ್ಮ, ಗಂಗಮ್ಮ ದೇವರ ಗುಡಿಗಳಿವೆ. ಈ ದೇವತೆಗಳು ಕೆರೆಯನ್ನು ರಕ್ಷಿಸುತ್ತಾರೆಂಬ ನಂಬಿಕೆ ಜನರದ್ದಾಗಿತ್ತು. ಮೀನು ಹಿಡಿಯಲು ಹೋಗುವವರು, ಗ್ರಾಮಸ್ಥರು ಈ ದೇವತೆ ಗಳನ್ನು ಪೂಜಿಸುತ್ತಾರೆ. ಪ್ರತಿ ವರ್ಷ ದೊಡ್ಡ ಹಬ್ಬವನ್ನೇ ಮಾಡುತ್ತಾರೆ.

ಬೇತವೋಲು ಗ್ರಾಮದಲ್ಲಿ ಬೆಸ್ತ(ಗಂಗಪುತ್ರ), ಮುದಿರಾಜ್ ಕುಲಕ್ಕೆ ಸೇರಿದ 600 ಕುಟುಂಬಗಳು ವಾಸಿಸುತ್ತವೆ. ಇವರಲ್ಲಿ ಕೇವಲ 60–70 ಕುಟುಂಬಗಳು ಮಾತ್ರ ಮೀನು

SCERT TELANGANA



ಚಿತ್ರ 3.1(ಇ) ಬಲೆ ಬೀಸುವುದು



ಚಿತ್ರ 3.1(ಎಫ್) ಮೀನು ಹಿಡಿಯುವುದು

ಹಿಡಿಯುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡಿವೆ. ಸಾಮಾನ್ಯವಾಗಿ ಇವರು ಮಾರ್ಚ, ಏಪ್ರಿಲ್ ತಿಂಗಳಿನಲ್ಲಿಯೇ ಮೀನಿನ ಬೇಟೆಯಾಡುತ್ತಾರೆ. ಉಳಿದ ತಿಂಗಳಲ್ಲಿ ಸಣ್ಣ ರೈತರಾಗಿ, ವ್ಯವಸಾಯ ಕೂಲಿಗಳಾಗಿ ಜೀವನ ಸಾಗಿಸುತ್ತಾರೆ.

ಕೆರೆಗಳು – ಮೀನುಗಳು

ಹಿಂದೆ ಈ ಕೆರೆಯಲ್ಲಿ ಬುಡ್ಡಪರಕ, ಜೆಲ್ಲೆಮೀನು, ಕೊಡಿಸೆ, ಚಂದಮಾಮ, ಕುಂಟು ಮುಕ್ಕ, ಪುಲಿಶ, ಇಸುಕದೊಂದು, ಪಾಪೆರ, ಗಂಡಪರಕ, ಗುರಿಯಪಿಲ್ಲ, ಕೊರ್ರೆಮೀನು, ವಾಲಗಮೀನು ಎಂಬ ನಾನಾ ತರಹದ

ಮೀನುಗಳು ಇರುತ್ತಿದ್ದವು. ಈ ನಡುವೆ ಈ ಮೀನುಗಳೆಲ್ಲಾ ಕಣ್ಮರೆಯಾಗಿ ಹೋಗಿವೆ. ವ್ಯವಸಾಯ ಭೂಮಿಯಲ್ಲಿ ಬಳಸುವ ಕೀಟನಾಶಕ ಹಾಗೂ ರಸಾಯನಿಕ ಗೊಬ್ಬರಗಳ ಬಳಕೆಯ ಕಾರಣದಿಂದ ಈ ಮೀನುಗಳು ಕಣ್ಮರೆಯಾಗುತ್ತವೆ. ಇಂದು ಕೃತಕ ಮೀನು ಸಾಕಾಣಿಕಾ ಕೇಂದ್ರಗಳಲ್ಲಿ ಮೀನಿನ ಮರಿಗಳ (ಬೀಜ) ಸೀಡ್ಸ್ ಉತ್ಪತ್ತಿಮಾಡಿ, ಕೆರೆಗಳಿಗೆ ಬಿಡುತ್ತಾರೆ. ಮೀನುಗಳು ಬೆಳೆದು ದೊಡ್ಡವಾದ ಮೇಲೆ ಹಿಡಿದು ಮಾರುತ್ತಾರೆ. ಇವುಗಳಲ್ಲಿ ಮರಿಗೆ, ರವ್ಸ, ಕಟ್ಲ, ಬಂಗಾರು ವರ್ಣದ ಮೀನುಗಳು ಮುಖ್ಯವಾದುವು. ಈ ತೆರನಾದ ಮೀನುಗಳೇ ಇಂದು ಮಾರುಕಟ್ಟೆಯಲ್ಲಿ ಅತಿಯಾಗಿ ಲಭಿಸುತ್ತವೆ. ಪ್ರತಿ ಮೀನು ಪ್ರತ್ಯೇಕ ರುಚಿಯನ್ನು ಹೊಂದಿರುತ್ತದೆ. ನೀವು ಯಾವಾಗ ಲಾದರೂ ಇಂತಹ ಮೀನಿನ ಸವಿ ನೋಡಿದ್ದೀರಾ ?

- ಕೆಲವು ವಿಧದ ಮೀನುಗಳನ್ನೇ ನಾವು ಏಕೆ ತಿನ್ನುತ್ತಿದ್ದೇವೆ?
- ಕ್ಯಾಟ್ ಫಿಷ್ ಏಕೆ ನಿಷೇಧಿಸಿದ್ದಾರೆ ?

ಬಲೆಗಳು – ವಿಧಗಳು

ಕೆರೆಯಲ್ಲಿಯು ಮೀನಿನ ಗಾತ್ರವನ್ನಾಧರಿಸಿ ಬಲೆಯನ್ನುಪಯೋಗಿಸುತ್ತಾರೆ. ಚಿಕ್ಕ ಪರಿಷಕ್ಕೆ 30 ಕಣ್ಣುಗಳು, ದೊಡ್ಡ ಪರಿಶಕ್ಕೆ 69 ಕಣ್ಣುಗಳು ಇರುತ್ತವೆ. ಇವುಗಳನ್ನು ಸಣ್ಣನೆ ಬಲೆ, ದಪ್ಪ ಬಲೆ ಎಂದು ಕೂಡ ಕೆಲವು ಕಡೆ ಕರೆಯುತ್ತಾರೆ. ಬಲೆಗಳಿಗೆ ಕಬ್ಬಿಣ ಇಲ್ಲವೇ ಸೀಸದಿಂದ ಮಾಡಿದ ಮಣಿಗಳು ಇರುತ್ತವೆ. ಚಿಕ್ಕಬಲೆಯು ಹಗುರವಾಗಿರುತ್ತದೆ. ಇದರಿಂದ ಚಿಕ್ಕ ಚಿಕ್ಕ ಮೀನುಗಳನ್ನು ಹಿಡಿಯುತ್ತಾರೆ. 100 ಗ್ರಾಂ ನಿಂದ 5 ಕಿ.ಲೋ.ಗ್ರಾಂ ವರೆಗೆ ಭಾರವಿರುವ ಮೀನುಗಳನ್ನು ಹಿಡಿಯಲು ದಪ್ಪ ಬಲೆಯನ್ನು ಬಳಸುತ್ತಾರೆ. ದಪ್ಪ ಬಲೆಯು ಅಧಿಕ ಭಾರವಾಗಿರುತ್ತದೆ. ಸಣ್ಣ ಬಲೆ, ದಪ್ಪ ಬಲೆಗಳ ತಯಾರಿಕೆಗೆ ಬಳಸುವ ದಾರವು ಬೇರೆಯಾಗಿರುತ್ತದೆ. ಏಕೆ? ಆಲೋಚಿಸಿರಿ.

- ನಿಮ್ಮ ಪ್ರಾಂತದಲ್ಲಿರುವ ಮೀನುಗಾರರ ಮನೆಗಳಿಗೆ ಭೇಟಿನೀಡಿ, ಮೀನು ಹಿಡಿಯುವ ವಿಧಾನ ಕುರಿತು ತಿಳಿದುಕೊಳ್ಳಿರಿ.
- ನಿಮ್ಮ ಪ್ರಾಂತದ ಮೀನುಗಾರರು ಎಂತಹ ಬಲೆಗಳನ್ನು ಬಳಸುತ್ತಾರೋ ಗುರುತಿಸಿರಿ. ತರಗತಿ ಕೋಣೆಯಲ್ಲಿ ಚರ್ಚಿಸಿರಿ.

ಮೀನು ಹಿಡಿಯುವವರು ಮೀನು ಹಿಡಿಯಲು ಎರಡು ಪದ್ಧತಿಗಳನ್ನು ಅಳವಡಿಸುತ್ತಾರೆ. ನೀರು ಕಡಿಮೆ ಇದ್ದಾಗ ಒಂದು ತರಹ, ನೀರಿನ ಆಳ ಹೆಚ್ಚು ಇದ್ದಾಗ ಇನ್ನೊಂದು ತರಹದಲ್ಲಿ ಮೀನನ್ನು ಹಿಡಿಯುತ್ತಾರೆ. ಕೆರೆಯಲ್ಲಿ ನೀರಿನ ಆಳ ಕಡಿಮೆ ಇದ್ದಾಗ ಎಸೆಯುವ

SCERT TELANGANA

ಬಲೆಯನ್ನು ಉಪಯೋಗಿಸುತ್ತಾರೆ. ಕಚ್ಚು ಬಲೆಯು ಹಗುರವಾಗಿರುವುದರಿಂದ ಬಹಳ ದೂರದ ವರೆಗೆ ನಿಶ್ಚಲ ನೀರಿನ ಮೇಲೆ ತೆಪ್ಪಗಳ ಮೇಲೆ ಹೋಗಿ ಬಲೆಯನ್ನು ಹಾಸಿ ಬರುತ್ತಾರೆ. ಆಳವಾದ ನೀರಿರುವ ಪ್ರಾಂತದಲ್ಲಿ ಕೈಬಲೆಯನ್ನು ಬೀಸಿ ಮೀನು ಹಿಡಿಯಲಾಗದ ಸಂದರ್ಭದಲ್ಲಿ ಕಚ್ಚು ಬಲೆಯನ್ನು ಹೆಚ್ಚಾಗಿ ಬಳಸುತ್ತಾರೆ.

◆ ನೀರಿನ ಆಳವನ್ನು ಹಿಡುದು ಯಾವ ಬಲೆಯನ್ನು ಆಯ್ದುಕೊಳ್ಳುವರೋ ? ಚರ್ಚಿಸಿ.

ಮೀನು ಹಿಡುಯುವುದು

ಮೀನು ಹಿಡಿಯುವುದನ್ನು ಬೆಳಿಗಿನ ಜಾವದಲ್ಲಿಯೇ ಪ್ರಾರಂಭಿಸುತ್ತಾರೆ. ಕೆಲವರು ಕಡಿಮೆ ಆಳದ ನೀರಿನಲ್ಲಿ ಎಸೆಯುವ ಬಲೆಯಿಂದಲೇ ಮೀನನ್ನು ಹಿಡಿಯುತ್ತಾರೆ. ಕೆಲವರು ಥರ್ಮಾಕೋಲನಿಂದ ಮಾಡಿದ ತೆಪ್ಪಗಳ ಮೇಲೆ ನೀರಿನ ಮೇಲೆ ಪ್ರಯಾಣಿಸಿ, ಆಳವಾದ ಪ್ರಾಂತಕ್ಕೆ ಹೋಗಿ ಕಚ್ಚು ಬಲೆ (ಬೆಂಡುಗಳಿರುವ) ಯಿಂದ ಮೀನನ್ನು ಹಿಡಿಯುತ್ತಾರೆ. ದಿನಕ್ಕೆರಡು ಸಲ ಮೀನಿನ ಬೇಟೆಗೆ ಹೋಗುತ್ತಾರೆ. ಬೆಳಿಗ್ಗೆ 4:00 ಗಂಟೆಯಿಂದ ಎಂಟು ಗಂಟೆಯವರೆಗೆ ಮೀನನ್ನು ಹಿಡಿದು ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಾರೆ. ಇವರು ಬಿಸಿಲು, ಮಳೆ, ಚಳಿಯನ್ನು ಲೆಕ್ಕಿಸದೇ ಮೀನಿನ ಬೇಟೆಗೆ ಇಳಿಯುತ್ತಾರೆ. ಮಾರಾಟವಾಗಲಾರದ ಮೀನನ್ನು ಸ್ವಚ್ಛವಾಗಿ ತೊಳೆದು ಒಣಗಿಸಿ ಒಣ ಮೀನನ್ನಾಗಿಸಿ ತಯಾರಿಸುತ್ತಾರೆ. ಮೀನುಗಳು ಕಡಿಮೆ ಲಭಿಸಿದಾಗ ಕೋದಾಡ, ಸೂರ್ಯಪೇಟೆ ನಗರಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಹೆಚ್ಚು ಮೀನು ಸಿಕ್ಕಾಗ ಹೈದರಾಬಾದನಂತಹ ದೊಡ್ಡ ನಗರಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಸಾಧಾರಣವಾಗಿ ಗಂಡಸರು ಮೀನುಗಳನ್ನು ಹಿಡಿದು ತರುತ್ತಾರೆ. ಹೆಂಗಸರು ಮಾರುಕಟ್ಟೆಯಲ್ಲಿ ಮಾರುತ್ತಾರೆ.

ಮೀನುಗಾರರ ಸಹಕಾರ ಪರಪತಿ ಸಂಘ

ಕೆರೆಗಳಲ್ಲಿ ಮೀನು ಹಿಡಿಯಲು ಪರಪತಿ ಸಂಘದಲ್ಲಿ ಸದಸ್ಯೆನಾಗಿರಬೇಕು. ಇದರಲ್ಲಿಯ ಸದಸ್ಯತ್ವವು ಕೆರೆಯ ಆಯಕಟ್ಟಿನ ವಿಸ್ತೀರ್ಣದ ಮೇಲೆ ಆಧಾರಪಟ್ಟಿರುತ್ತದೆ. ಒಂದು ಹೆಕ್ಟೇರು (ಎರಡೂವರೆ ಎಕರೆ) ವಿಸ್ತೀರ್ಣಕ್ಕೆ ಒಬ್ಬ ಸದಸ್ಯೆನಿರಬೇಕಾದದ್ದು ಒಂದು ನಿಯಮವಾಗಿತ್ತು. ಈ ಪರಪತಿ ಸಂಘದಲ್ಲಿ 339 ಜನ ಸದಸ್ಯರಿದ್ದಾರೆ. ಈ ಪರಪತಿ ಸಂಘವು ಕೆರೆಗಳನ್ನು ಉಪಯೋಗಿಸಿ ಕೊಂಡುದಕ್ಕಾಗಿ ಮತ್ಸ್ಯ ಇಲಾಖೆಯವರಿಗೆ 2,35,000 ರೂಪಾಯಿಗಳನ್ನು ಕಟ್ಟುತ್ತದೆ. ಸಂಘವೇ ಮರಿ ಮೀನುಗಳನ್ನು ಕೊಂಡು ಕೆರೆಗಳಲ್ಲಿ ಬಿಡುತ್ತದೆ ಹಾಗೂ ಅವುಗಳನ್ನು ರಕ್ಷಿಸುತ್ತದೆ. ಇದರಿಂದ ಬಂದ ಲಾಭವನ್ನು



ಚಿತ್ರ 3.1(ಜಿ) ಮೀನುಗಳ ಮಾರುಕಟ್ಟೆ

ಸದಸ್ಯರೆಲ್ಲರಿಗೂ ಸಮಾನವಾಗಿ ಹಂಚಲಾಗುತ್ತದೆ.

◆ ನಿಮ್ಮೂರಿನ ಪರಪತಿ ಸಂಘದ ಸದಸ್ಯೆರನ್ನು ಭೇಟಿಮಾಡಿ ಅವುಗಳ ಕಾರ್ಯಗಳೇನೆಂಬುದನ್ನು ತಿಳಿದುಕೊಳ್ಳಿರಿ.

◆ ಮೀನು ಹಿಡಿಯುವವರು ಮತ್ಸ್ಯ ಇಲಾಖೆಗೆ ಕಂದಾಯವನ್ನು ಏಕೆ ಕಟ್ಟಬೇಕೆಂದು ನೀವು ಭಾವಿಸುವಿರಿ ?

ಇತ್ತೀಚಿನ ದಿನಗಳಲ್ಲಿ ಮೀನಿನ ಕೆರೆಗಳಲ್ಲಿ ಒಂದು ಹೊಸ ವಿಧಾನ ಜಾರಿಯಾಗುತ್ತಿದೆ. ಮೀನು ಹಿಡಿಯುವವರು ಕಡುಬಡವ ರಾದ್ದರಿಂದ ಅವರ ಕುಟುಂಬ ಪೋಷಣೆಗಾಗಿ ಸಾಲ ಪಡೆಯಬೇಕಾಗುತ್ತದೆ. ಮೀನಿನ ಕೇಂದ್ರದಿಂದ ಮರಿ ಮೀನಿನ ಸೀಡ್ಸನ್ನು ಕೊಳ್ಳುವ ಸಾಮರ್ಥ್ಯ ಅವರಿಗೆ ಇಲ್ಲದಿರುವುದರಿಂದ ವ್ಯಾಪಾರಿಗಳಿಂದ ಸಾಲವನ್ನು ತೆಗೆದುಕೊಳ್ಳುತ್ತಾರೆ. ಈ ವ್ಯಾಪಾರಿಗಳೇ ಮರಿ ಮೀನಿನ ಸೀಡ್ಸಗಳನ್ನು ಕೆರೆಯಲ್ಲಿ ಬಿಟ್ಟು, ಅವು ಬೆಳೆದ ಮೇಲೆ ಅವುಗಳನ್ನು ತಾವೇ ಖರೀದಿಸುತ್ತಾರೆ. ಇಲ್ಲಿ ಮೀನಿನ ಬೆಲೆಯನ್ನು ವ್ಯಾಪಾರಸ್ಥರೇ ನಿರ್ಣಯಿಸುತ್ತಾರೆ. ಅದು ಅಸಲಿ ಬೆಲೆಯಲ್ಲಿ ಶೇಕಡಾ 10 ರಿಂದ 20 ರ ವರೆಗೆ ಮಾತ್ರ ಇರುತ್ತದೆ. ಈ ರೀತಿಯಾಗಿ ವ್ಯಾಪಾರಿಗಳು ಅತ್ಯಧಿಕ ಲಾಭ ಪಡೆಯುತ್ತಾರೆ. ಮೀನುಗಾರರ ಸಹಕಾರ ಸಂಘಗಳಿಗೆ ಬ್ಯಾಂಕುಗಳು ಸಾಲ ನೀಡಿ ಸಹಕರಿಸಿದರೆ ಮೀನುಗಾರರು ವ್ಯಾಪಾರಿಗಳ, ಕಾಂಟ್ರಾಕ್ಟರಗಳಿಂದ ಸ್ವತಂತ್ರರಾಗುತ್ತಾರೆ.

◆ ಮೀನುಗಾರರಿಗೆ ಸಾಲ ನೀಡುವಲ್ಲಿ ಬ್ಯಾಂಕುಗಳು ನಿಷ್ಕಾಳಜೀವಹಿಸುತ್ತಿವೆ ಎಂದು ನೀವು ಭಾವಿಸುವಿರಾ ? ಏಕೆ ?

SCERT TELANGANA

ಎರಡನೆ ಭಾಗ


ಭೂಗರ್ಭ ಜಲಗಳು

ಮಳೆನೀರು ಹಳ್ಳಕೊಳ್ಳಗಳಲ್ಲಿ, ನದಿಗಳೊಳಗೆ ಪ್ರವಹಿಸುವುದಲ್ಲದೆ, ಮಣ್ಣಿನಲ್ಲಿ ಕೂಡ ಕ್ರಮೇಣ ಇಂಗಿ ಹೋಗುವುದು ಈ ರೀತಿ ಇಂಗಿಹೋದ ನೀರು ಭೂಮಿಯೊಳಗಿನ ಮರಳು, ಕಲ್ಲು, ಕಲ್ಲಿನ ಪೊರೆಗಳ ಮಧ್ಯದಲ್ಲಿ ಸೇರುತ್ತದೆ. ಈ ನೀರನ್ನು ಭೂಗರ್ಭಜಲ ಎನ್ನುವರು. ಈ ನೀರನ್ನೇ ನಾವು ಬಾವಿ ಕೊಳವೆಬಾವಿ ಮೂಲಕ ಹೊರ ತೆಗೆಯುತ್ತಿದ್ದೇವೆ. ಸೀಳು, ಸಣ್ಣ ರಂಧ್ರಗಳು ಇದ್ದು ನೀರಿನಿಂದ ಕೂಡಿದ ಕಲ್ಲಿನ ಪೊರೆಯನ್ನು ಮೃದುವಾದ ಕಲ್ಲುಪೊರೆ ಎನ್ನುವರು. ಈ ಪೊರೆಯೊಳಗೆ ನೀರು ಸೇರುತ್ತದೆ. ಆಂಧ್ರಪ್ರದೇಶದೊಳಗಿನ ಖಮ್ಮಂ ಜಿಲ್ಲೆಯಲ್ಲಿನ ಮರಳು ಕಲ್ಲು, ಕಡಪಜಿಲ್ಲೆಯಲ್ಲಿನ ಸುಣ್ಣದ ಕಲ್ಲುಗಳಂತಹ ಕಲ್ಲಿನ ಪೊರೆಗಳಿವೆ. ಇವಕ್ಕೆ ರಂಧ್ರಗಳಿಲ್ಲದೆ ಗಟ್ಟಿಯಾಗಿರುತ್ತವೆ. ಇದರೊಳಗೆ ನೀರು ಸೇರುವುದಿಲ್ಲ. ಭೂಗರ್ಭಜಲಗಳು ಅಂತಹ ಕಲ್ಲಿನ ಮೇಲ್ಭಾಗದಲ್ಲಿ ನಿಂತಿರುತ್ತದೆ. ಏಕೆಂದರೆ ಆ ಕಲ್ಲಿನಡಿಯಲ್ಲಿ ನೀರು ಸೇರುವುದಿಲ್ಲ. ಇವುಗಳನ್ನು ನೀರು ಸೇರದ ಗಟ್ಟಿಕಲ್ಲಿನ ಪೊರೆ ಎನ್ನುವರು.

ನಮ್ಮ ರಾಜ್ಯದಲ್ಲಿನ ಬಹಳ ಭಾಗದ ಗಟ್ಟಿ ಕಲ್ಲಿನ ಪೊರೆಗಳಿವೆ. ರಾಜ್ಯದಲ್ಲಿನ ನದಿಗಳ ಪಕ್ಕದಲ್ಲಿರುವ ಕೆಲವು ಪ್ರಾಂತಗಳಲ್ಲಿ ಹೆಚ್ಚಾಗಿ ಮರಳು, ಕಲ್ಲು ಮಣ್ಣಿನಿಂದ ಕೂಡಿದ ಭೂಮಿ ಪೊರೆಗಳಿವೆ. ಈ ಭೂಮಿ ಪೊರೆಗಳಲ್ಲಿ ಕೂಡ ನೀರು ಸೇರುತ್ತದೆ.

ಭೂಮಿಯೊಳಗಿನ ಕಲ್ಲುಪೊರೆಗಳ ಮಧ್ಯೆ ಸೇರಿದ ನೀರಿನ ಪೊರೆಯನ್ನು (Aquifer) ಜಲಸ್ತರ ಎನ್ನುವರು. ಈ ನೀರಿನ ಪೊರೆಯ ದಪ್ಪ ಆ ಪ್ರಾಂತದಲ್ಲಿ ಸಿಗುವ ಭೂಗರ್ಭಜಲಗಳ ಲಭ್ಯತೆಯನ್ನು ನಿರ್ಧರಿಸುತ್ತದೆ.

ನಿಮ್ಮ ಪ್ರಾಂತದಲ್ಲಿನ ಬಾವಿಗಳನ್ನು ಪರಿಶೀಲಿಸಿ ಎಷ್ಟು ಅಡಿ ಒಳಗೆ ಭೂಗರ್ಭಜಲಗಳಿವೆ ತಿಳಿದುಕೊಳ್ಳಿರಿ. ತಳಭಾಗದಲ್ಲಿ ಯಾವುದಾದರೂ ಕಲ್ಲಿನ ಪೊರೆ ಇದೆಯಾ? ಇದ್ದರೆ ಅದು ಯಾವ ವಿಧವಾದ ಕಲ್ಲಿನಪೊರೆ ತಿಳಿದುಕೊಳ್ಳಿರಿ ಆ ಬಾವಿ ಯಜಮಾನ ಯಾರು? ಅದನ್ನು ಯಾವಾಗ ಅಗೆದಿರುವರು? ಅದನ್ನು ಅಗೆದು, ನಿರ್ಮಾಣ ಮಾಡುವುದಕ್ಕೆ ಎಷ್ಟು ಖರ್ಚುಆಗುತ್ತದೆ. ಮೊದಲಾದ ವಿಷಯಗಳನ್ನು ಕೂಡ ತಿಳಿದುಕೊಳ್ಳಿರಿ. ಈ ಸಮಗ್ರ ಸಮಾಚಾರದೊಂದಿಗೆ "ನಮ್ಮ ಗ್ರಾಮದಲ್ಲಿ / ಪಟ್ಟಣದಲ್ಲಿ ಬಾವಿ" ಎಂಬ ಒಂದು ವರದಿ ತಯಾರು ಮಾಡಿರಿ.



ಚಿತ್ರ–3.2 ಭೂಮಿ ಮಟ್ಟಕ್ಕಿಂತ ಕೆಳಗಿರುವ ಕಲ್ಲು ನೀರು

- ನೀರು ಸೇರಲು ಅವಕಾಶವಿಲ್ಲದ ಶಿಲೆಗಳು ಇಲ್ಲದಿದ್ದರೆ ಭೂಗರ್ಭಜಲ ಇರುತ್ತಿದೆಯೆಂದು ನೀನು ಭಾವಿಸುವೆಯಾ?
- ಈ ನೀರು ಸೇರಲು ಅವಕಾಶವಿಲ್ಲದ ಶಿಲೆಗಳ ತಳದಲ್ಲಿ ರಂಧ್ರಗಳುಳ್ಳ ಮೃದುವಾದ ಶಿಲೆಗಳಿದ್ದರೆ ಏನಾಗುತ್ತಿತ್ತು? ಭೂಗರ್ಭಜಲಗಳು ಎಲ್ಲಿಗೆ ಸೇರುತ್ತವೆ?

SCERT TELANGANA

ನೀರಿನ ಮಟ್ಟ ಅಥವಾ ಭೂಗರ್ಭಜಲ ಮಟ್ಟ :


3.3ನೇ ಚಿತ್ರದಲ್ಲಿನ ಎಲ್ಲಾ ಬಾವಿಗಳಲ್ಲಿ ಭೂಗರ್ಭಜಲಗಳು ಒಂದೇ ಮಟ್ಟದಲ್ಲಿ ಇರುವ ವಿಷಯವನ್ನು ಪರಿಶೀಲಿಸಿರಿ. ಇದು ಮಳೆ ಬಿದ್ದ ಮೇಲೆ ನೀರಿನ ಮಟ್ಟ ಈ ಬಾವಿಗಳಲ್ಲೆಲ್ಲಾ 5 ಮೀಟರ್ ಒಳಗೆ ನೀರಿರುವ ವಿಷಯವನ್ನು ಗಮನಿಸಿರಿ. ಅಂದರೆ ಅದೇ ಪ್ರಾಂತದಲ್ಲಿ ಹೊಸ ಬಾವಿಯನ್ನು ಅಗೆದರೆ ಆ 5ಮೀಟರ್ ಒಳಗೆಯೇ ನೀರು ಬೀಳುವ ಅವಕಾಶವಿರುತ್ತದೆ. ಇದನ್ನೆ ಭೂಗರ್ಭಜಲದ ಮಟ್ಟ ಅಥವಾ ವಾಟರ್ ಟೆಬುಲ್ ಎನ್ನುವರು. (3.3ನೇ ಚಿತ್ರ) ಭೂಗರ್ಭಜಲಗಳ ಮಟ್ಟ ಮಳೆಗಾಲದಲ್ಲಿ ಮೇಲೇರಿ ಮಳೆ ಇಲ್ಲದ ಬೇಸಿಗೆಕಾಲದಲ್ಲಿ ಬತ್ತಿಹೋಗುತ್ತವೆ. ಸ್ಥಿರವಾಗಿ ಇರುವುದಿಲ್ಲ.

3.3 ನೇ ಚಿತ್ರವನ್ನುನೋಡಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

i. ಭೂಮಿ ಮಟ್ಟಕ್ಕಿಂತ ಭೂಗರ್ಭಜಲಗಳ ಮಟ್ಟ _____ ಮೀಟರ್ ಕೆಳಗೆ ಇರುತ್ತದೆ.

ii. ಬೇಸಿಗೆಕಾಲದಲ್ಲಿ ಭೂಮಿಮಟ್ಟಕ್ಕಿಂತ 10 ಮೀಟರ್ ಕೆಳಗೆ ಭೂಗರ್ಭ ಜಲಗಳು ಹೋದರೆ ಈ ನಾಲ್ಕರಲ್ಲಿ ಯಾವ ಬಾವಿಗಳು ಒಣಗಿ ಹೋಗುತ್ತವೆ.

iii. ಯಾವ ಬಾವಿಯಲ್ಲಿ ಹೆಚ್ಚಿನ ನೀರು ಸಿಗುತ್ತದೆ?



ಚಿತ್ರ–3.3ಭೂಗರ್ಭಜಲ ಮಟ್ಟ


ತೆಲಂಗಾಣದಲ್ಲಿನ ಶಿಲೆಗಳು ಭೂಗರ್ಭಜಲಗಳು :

ತೆಲಂಗಾಣದಲ್ಲಿನ ಭೂಮಿ ಒಳಗಿನ ಪೊರೆಯಲ್ಲಿ ಹೆಚ್ಚಿನ ಭಾಗ ಗಟ್ಟಿಯಾಗಿ, ನೀರು ಹೀರಿಕೊಳ್ಳದ ಗ್ರಾನೈಟ್ ಪೊರೆಯಲ್ಲಿ ಇದೆ, ಆದರೆ ಈ ಪೊರೆ ಮೇಲ್ಭಾಗದಲ್ಲಿ (ಸುಮಾರು 20ಮೀಟರ್) ಸೀಳು ಇದ್ದು ಅಲ್ಲಿ ನೀರು ಸೇರಿರುತ್ತದೆ. ಇದರಲ್ಲಿ ಬಹಳಕಲ್ಲಿನ ಪೊರೆ 50 ರಿಂದ 100 ಮೀಟರುವರೆಗೆ ಬಿರುಕುಗಳಿರುತ್ತವೆ ಈ ಬಿರುಕುಗಳಲ್ಲಿ ಕೂಡ ನೀರುಸೇರಿ ಇರುತ್ತದೆ. ಸಾಧಾರಣವಾಗಿ ನಾವು ಅಗೆಯುವ ಬಾವಿಗಳು ಮೇಲಿನ ಪೊರೆನೀರನ್ನು ಪಡೆಯಲು ಉಪಯೋಗವಾಗುತ್ತವೆ. ಆದರೆ ಯಂತ್ರಗಳ ಸಹಾಯದಿಂದ ಅಗೆಯುವ ಕೊಳವೆ ಬಾವಿಗಳು ಒಳ ಬಿರುಕಿನವರೆಗೆ ಹೋಗಿ ಅಲ್ಲಿ ಸೇರಿದ ನೀರನ್ನು ಹೊರತೆಗೆಯಲು ಸಹಾಯಮಾಡುತ್ತವೆ.

ಚಿತ್ರ 3.4 ಆಧಾರವಾಗಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿರಿ.

- ಕಠಿಣವಾದ ಕಲ್ಲಿನಪೊರೆ ತಳದಲ್ಲಿರುವ ಕಲ್ಲಿನ ಸೀಳಿಕೆಯೊಳಗೆ ನೀರು ಹೇಗೆ ಸೇರಿದೆಯೋ ಕಂಡುಕೊಳ್ಳುವಿರಾ?
- ಬೇಸಿಗೆ ಕಾಲದಲ್ಲಿ ಯಾವ ಬಾವಿ ಮೊದಲಿಗೆ ಒಣಗಿಹೋಗುತ್ತದೆ? ಕಾರಣ ತಿಳಿಸಿರಿ.
- ಕಲ್ಲಿನಲ್ಲಿ ಸೀಳಿಕೆ ಇಲ್ಲದಿದ್ದರೂ ಆ ಕಲ್ಲಿನ ಪೊರೆಯಲ್ಲಿ ಅಗೆದ ಬಾವಿಯಲ್ಲಿ ನೀರು ಇರುತ್ತದೆಯಾ?

SCERT TELANGANA



ಚಿತ್ರ–3.4 ಭೂಮಿಮಟ್ಟ ಕೆಳಗಿನ ಕಲ್ಲು ನೀರು

ಬಹಳ ಮಂಡಲಗಳಲ್ಲಿನ ಕಲ್ಲಿನ ಪೊರೆಗಳು ಹೆಚ್ಚಾಗಿ ಗ್ರಾನೈಟ್ ಪೊರೆಗಳಲ್ಲ ಆದರೆ ಕಡಪ ರೀತಿಯ ಕಲ್ಲಿನಪೊರೆಗಳು ಸುಣ್ಣದ ಕಲ್ಲಿನ ಪೊರೆಗಳು ಇವು ಕೂಡ ಕಠಿಣವಾದವುಗಳೆ ಆದರೆ ಅವುಗಳಿಗೆ ಸೀಳಿಕೆಗಳು, ಬಿರುಕುಗಳು ಇರುತ್ತವೆ. ಆದುದರಿಂದ ಅದರಲ್ಲಿ ನೀರು ಸಂಗ್ರಹವಾಗುವ ಅವಕಾಶವಿದೆ. ಈ ಕಲ್ಲಿನ ಪೊರೆಗಳಲ್ಲಿ ಸಾಧಾರಣವಾಗಿ 3 ರಿಂದ 15 ಮೀಟರ್ ಆಳನೀರು ಲಭಿಸುತ್ತದೆ.ಅದಕ್ಕಾಗಿಯೇ ಇಲ್ಲಿ ಬಾವಿಗಳನ್ನು 16ಮೀಟರ್ ಆಳದವರೆಗೆ ಅಗೆಯುವರು.

ಕೃಷ್ಣ, ಗೋದಾವರಿಯಂತ ಮಹಾನದಿಗಳ ಪರಿವಾಹಕ ಪ್ರಾಂತಗಳಲ್ಲಿ ದಪ್ಪನಾದ ಮರಳು, ಮೆಕ್ಕಲು ಮಣ್ಣಿನ ಪೊರೆಗಳಿವೆ. ಇಲ್ಲಿ ನೀರಿನ ಮಟ್ಟ ನದಿಯಲ್ಲಿನ ನೀರಿನ ಮೇಲೆ ಆಧಾರಪಟ್ಟಿದೆ. ಈ ಪ್ರಾಂತದಲ್ಲಿ ಸಾಧಾರಣವಾಗಿ ಭೂಮಟ್ಟಕ್ಕೆ 5 ರಿಂದ 7 ಮೀಟರ್ ಆಳದಲ್ಲಿ ಸಮೃದ್ಧವಾಗಿ ನೀರು ಸಿಗುತ್ತದೆ. ಅದಕ್ಕಾಗಿ ಇಲ್ಲಿ ಬಾವಿಗಳನ್ನು ಅಗೆಯುವುದು ಬಹಳ ಸುಲಭ.

- ನೀವು 6ನೇ ತರಗತಿಯಲ್ಲಿ ಓದಿದ ಪೆನಮಕೂರು ಸಲಕಂಚೆರವು ಗ್ರಾಮದಲ್ಲಿನ ಬಾವಿಗಳು, ಕೊಳವೆ ಬಾವಿಗಳನ್ನು ಗುರ್ತು ಮಾಡಿಕೊಳ್ಳಿವಿರಾ?

ಭೂಗರ್ಭಜಲಗಳನ್ನು ಪುನಃ ಭರ್ತಿಮಾಡುವುದು:

ಕಲ್ಲು,ಗಿಡ, ಹುಲ್ಲಿಲ್ಲದ ಭೂಮಿಯಮೇಲೆ ನೀರು ವೇಗವಾಗಿ ಪ್ರವಹಿಸಿ ಹಳ್ಳ ಕೊಳ್ಳಗಳನ್ನು ಸೇರುತ್ತದೆ. ಅಲ್ಲಿಂದ ನದಿಗಳನ್ನು ಸೇರುತ್ತದೆ. ಆದರೆ ಮಳೆನೀರಿನ ಪ್ರವಾಹವನ್ನು ಗಿಡಗಳನ್ನು ಬೆಳೆಸುವುದರ ಮೂಲಕ, ಅಣೆಕಟ್ಟುಗಳ ಮೂಲಕ ನಿಲ್ಲಿಸಿದರೆ, ಆ ನೀರು ಭೂಮಿಯೊಳಗೆ ಹಿಂಗಿಹೋಗಿ ಭೂಗರ್ಭಜಲಗಳಲ್ಲಿ ಸೇರುವ ಅವಕಾಶವಿದೆ. ಬೆಟ್ಟದ ಇಳಿಜಾರು ಪ್ರದೇಶದ ಮೇಲೆ ಹುಲ್ಲು ಬೆಳಸಿ ಕಟ್ಟೆಗಳನ್ನು ಕಟ್ಟಿ, ಇವುಗಳನ್ನು ಹೆಚ್ಚಿನ ಕಾಲ ಬೆಳೆಸಿ ಸಂಗ್ರಹಮಾಡು ತ್ತಾರೆ. ಹೀಗೆ ಮಾಡುವುದರಿಂದ ಭೂಗರ್ಭಜಲಗಳನ್ನು ಪುನಃ ಭರ್ತಿ ಮಾಡುವುದಕ್ಕೆ ಅವಕಾಶವಿದೆ.

ಆದರೆ ರಾಜ್ಯದಲ್ಲಿ ಅನೇಕ ಪ್ರಾಂತದಲ್ಲಿ ಭೂಮಿಯಲ್ಲಿ ಸೇರುವ ನೀರಿಗಿಂತ ಹೆಚ್ಚಿನ ನೀರನ್ನು ತೆಗೆಯುತ್ತಿದ್ದೇವೆ. ಅಂದರೆ ನಾವು ಭೂಗರ್ಭಜಲಗಳನ್ನು ಅಲ್ಲಿ ಸೇರುತ್ತಿರುವ ನೀರಿಗಿಂತ ಹೆಚ್ಚಾಗಿ ಬಳಸುತ್ತಿದ್ದೇವೆ. ಕಾಡುಗಳನ್ನು ಕಡೆಯುವುದರಿಂದ ಕೂಡ ಭೂಮಿಯೊಳಗೆ ಇಂಗುವ ನೀರಿನ ಮಟ್ಟ ಕಡಿಮೆಯಾಗುತ್ತದೆ. ಆದುದರಿಂದ ನೀರಿನ ಮಟ್ಟ ವೇಗವಾಗಿ ಕಡಿಮೆಯಾಗಿ ಪ್ರತಿವರ್ಷ ಅರ್ಧಮೀಟರ್‌ನಿಂದ ಎರಡುಮೀಟರ್‌ರವರೆಗೆ ನೀರಿನ ಮಟ್ಟ ಕೆಳಕ್ಕೆ ಕುಸಿಯುತ್ತಿದೆ.

ಹೀಗೆ ನಾವು ಪ್ರತಿಸಾರಿ ಭೂಮಿಯೊಳಗೆ ಸೇರುವ ನೀರಿಗಿಂತ ಹೆಚ್ಚಿನನೀರನ್ನು ತೆಗೆಯುವದರಿಂದ ಸ್ವಲ್ಪ ಕಾಲಕ್ಕೆ ಒಟ್ಟು ಭೂಗರ್ಭಜಲ ಕಡಿಮೆಯಾಗುತ್ತದೆ. ಕೊನೆಗೆ ಭೂಗರ್ಭಜಲಗಳು ಬತ್ತಿಹೋಗಿ, ಪೂರ್ತಿಯಾಗಿ ಇಲ್ಲ ವಾಗುತ್ತವೆ. ಕೆಲವು ವರ್ಷಗಳಿಂದ ನಡೆಯುತ್ತಿರುವುದಿದೇ.

SCERT TELANGANA

- ಭೂಗರ್ಭಜಲಗಳು ವ್ಯರ್ಥವಾಗದಂತೆ ಕಡಿಮೆ ಬಳಕೆಗೆ ಬೇಕಾದ ಮಾರ್ಗಗಳನ್ನುಕುರಿತು ಆಲೋಚಿಸುವಿರಾ?

ದೇಶದಲ್ಲಿ ನಮ್ಮ ಪ್ರಾಂತದಲ್ಲಿ ಕೇವಲ ಮೂರು ನಾಲ್ಕು ತಿಂಗಳುಗಳು ಮಾತ್ರ ಮಳೆ ಬೀಳುತ್ತವೆ. ಉಳಿದ ತಿಂಗಳುಗಳಲ್ಲಿ ನಾವು ಭೂಗರ್ಭಜಲಗಳ ಮೇಲೆ ಆಧಾರ ಪಡುತ್ತಿದ್ದೇವೆ. ನದಿಗಳು,ಬಾವಿಗಳು, ಕುಂಟೆ ಎಲ್ಲಾ ಕೂಡ ಈ ಭೂಗರ್ಭಜಲಗಳಿಗೆ ಸಹಾಯವಾಗುತ್ತದೆ.

ಭೂಗರ್ಭಜಲಗಳು ಹೆಚ್ಚಾಗಲು ನಾವು ಸಹಾಯ ಮಾಡಬಲ್ಲೆವಾ? ಭೂಮಿಯ ಮೇಲೆ ಗಿಡ, ಮರ, ಕಲ್ಲು ಮಣ್ಣು ಇಲ್ಲದಿದ್ದರೆ ಮಳೆನೀರು ವೇಗವಾಗಿ ಪ್ರವಹಿಸು ವುದನ್ನು ನೀವು ಗಮನಿಸಿರುವಿರಿ. ತಡೆಗಳಿಲ್ಲದಿರುವುದರಿಂದ ನೀರು ಸರಾಸರಿ ಹಳ್ಳಕೊಳ್ಳಗಳ ಮೂಲಕ ಪ್ರವಹಿಸಿ ನದಿಗಳಲ್ಲಿ ಸೇರುತ್ತದೆ. ಆದುದರಿಂದ ಮರಗಳನ್ನು ಬೆಳೆಸುತ್ತಾ, ಗಿಡಗಳಿಂದ, ಆನೆಕಟ್ಟುಗಳಿಂದ, ಹುಲ್ಲನ್ನು ಬೆಳೆಸುವುದ ರಿಂದ, ನೀರಿನ ವೇಗವನ್ನು ಕಡಿಮೆ ಮಾಡಿದರೆ ಭೂಮಿ ಯೊಳಕ್ಕೆ ಇಂಗಿ ಭೂಗರ್ಭಜಲಗಳು ಹೆಚ್ಚಾಗುವ ಅವಕಾಶ ಹೆಚ್ಚಾಗುತ್ತದೆ.

ಈ ಪದ್ಧತಿಯ ಮೂಲಕ ನೀರಿನ ಸಂಗ್ರಹಣೆ ಯನ್ನು ಹೆಚ್ಚಿಸುವ ಪ್ರಯತ್ನಗಳು ಕೆಲವರ್ಷಗಳಿಂದ ನಡೆಯುತ್ತಿವೆ. ಈ ಪ್ರಯತ್ನಗಳನ್ನು "ಭೂಗರ್ಭಜಲ ಅಭಿವೃದ್ಧಿ ಯೋಜನೆ" ಎನ್ನುವರು. ಈ ಯೋಜನೆಯ ಕೆಳಗೆ ಹಳ್ಳ ಪ್ರಾರಂಭವಾಗುವ ಪ್ರಾಂತಗಳಾದ ಬೆಟ್ಟದ ಇಳಿಜಾರುಗಳಲ್ಲಿ ಗಿಡ ನೆಡುವುದು, ಹುಲ್ಲು ಬೆಳೆಸುವುದು, ಸಣ್ಣಕಟ್ಟೆಗಳನ್ನು ಕಟ್ಟುವುದರ ಮೂಲಕ ನೀರಿನ ಪ್ರವಾಹದ ವೇಗವನ್ನು ಕಡಿಮೆ ಮಾಡಿ, ಹೆಚ್ಚಿನ ನೀರು ಭೂಗರ್ಭಜಲ ಗಳನ್ನು ಸೇರುವ ಹಾಗೆ ಮಾಡಬಹುದು. ಹಳ್ಳಗಳಿಗೆ ಕಟ್ಟುವ ಸಣ್ಣಸಣ್ಣ ಆಣೆಕಟ್ಟುಗಳು ಕೂಡ ನೀರನ್ನು ಹೆಚ್ಚಿನಕಾಲ ಸಂಗ್ರಹಮಾಡಲು ಉಪಯೋಗವಾಗುತ್ತವೆ. ಈ ಪ್ರಯತ್ನಗಳೆಲ್ಲ ಭೂಗರ್ಭಜಲಗಳು ಹೆಚ್ಚುವದಕ್ಕೆ ಅಥವಾ ಭೂಗರ್ಭ ಜಲಗಳನ್ನು "ಮರಳಿ ತುಂಬಲು" ಸಹಾಯ ಮಾಡುತ್ತವೆ.

- ನಿಮ್ಮ ಪ್ರಾಂತದಲ್ಲಿ ಭೂಗರ್ಭಜಲ ಅಭಿವೃದ್ಧಿ ಯೋಜನೆಗಳು ಏನಾದರು ಇದೆಯಾ? ಆ ಪ್ರಾಂತವನ್ನು ಸಂದರ್ಶಿಸಿ ಅದು ಹೇಗೆ ಅನುಷ್ಠಾನ ಮಾಡಿರುವರೋ ಅಧ್ಯಯನ ಮಾಡಿರಿ. ಆ ಯೋಜನೆ ಇರುವ ಪ್ರಾಂತದ "ಸ್ಕೆಚ್‌ಪಟ" ಬರೆಯುವ ಪ್ರಯತ್ನಮಾಡಿರಿ.

ಭೂಗರ್ಭಜಲಗಳ ಗುಣಾತ್ಮಕತೆ :

ಭೂಗರ್ಭಜಲಗಳು ಸಾಧಾರಣವಾಗಿ ಅನೇಕ ಖನಿಜಗಳಿಂದ ಕೂಡಿರುತ್ತದೆ. ಈ ನೀರು ಒಂದೊಂದು ಸಾರಿ ಉಪ್ಪಾಗಿ ಮತ್ತೊಂದು ಸಾರಿ ಸಿಹಿಯಾಗಿ ಇರುತ್ತವೆ.

- ಕೆರೆ, ಹಳ್ಳ, ಬಾವಿ, ಕೊಳವೆ ಬಾವಿಯಿಂದ ನೀರನ್ನು ಶೇಖರಿಸಿ, ಕೆಲವು ಬಾವಿಗಳು ನೀರು ಸಿಹಿಯಾಗಿ, ಕೆಲವೊಂದು ಬಾವಿಗಳ ನೀರು ಉಪ್ಪಾಗಿ ಇರುತ್ತದೆ ಹೀಗೆ ನೀರಿನ ರುಚಿಗಳಲ್ಲಿ ವ್ಯತ್ಯಾಸ ಏಕಿರುತ್ತದೆ ವಿವರಿಸುವಿರಾ?

ಈ ವ್ಯತ್ಯಾಸಕ್ಕೆ ಕಾರಣ ಭೂಗರ್ಭಜಲಗಳಲ್ಲಿ ಬೆರೆತಿರುವ ಖನಿಜಗಳೆ. ಈ ಖನಿಜಗಳು ಭೂಮಿಯೊಳಗೆ ಇರುವ ಕಲ್ಲಿನ ಪೊರೆಗಳು, ಮರಳು ಪೊರೆಗಳಿಂದ ಬರುತ್ತವೆ. ಆದುದರಿಂದ ನೀರಿನ ರುಚಿ, ಸ್ವಭಾವ ಆ ನೀರಿನಲ್ಲಿ ಬೆರೆತ ಖನಿಜಲವಣಗಳ ಮೇಲೆ ಆಧಾರ ಪಟ್ಟಿರುತ್ತದೆ. ನಮ್ಮ ರಾಜ್ಯದ ಅನೇಕ ಮಂಡಲಗಳಲ್ಲಿ ನೀರಿನಲ್ಲಿ ಉಪ್ಪು, ಫ್ಲೋರೈಡ್, ಕ್ಲೋರೈಡ್, ಕಬ್ಬಿಣ, ನೈಟ್ರೇಟ್, ಮೊದಲಾದ ಖನಿಜ ಲವಣಗಳು ಬಹಳ ಹೆಚ್ಚಿನ ಪ್ರಮಾಣದಲ್ಲಿದೆ. ಅಂತಹ ನೀರನ್ನು ಕುಡಿದು ಮೂಳೆ, ದಂತಗಳು ರೋಗಗಳು ಬರುತ್ತವೆ. ಅದು ಆರೋಗ್ಯಕ್ಕೆ ಎಷ್ಟು ಮಾತ್ರ ಒಳ್ಳೆಯದಲ್ಲ. ಈ ಪರಿಸ್ಥಿತಿಯಲ್ಲಿ ಶುದ್ಧಿಮಾಡಿದ ಶುದ್ಧನೀರು ನೀಡಬೇಕು.

ಯಥೇಚ್ಛವಾಗಿ ಉಪಯೋಗಿಸುವ ಕ್ರಿಮಿ ಸಂಹಾರಕಗಳು, ಗೊಬ್ಬರಗಳು, ಬೆರೆಯುವಿಕೆಯಿಂದ ನೀರು ಕಲುಷಿತವಾಗುತ್ತದೆ. ನಮ್ಮ ದೇಶದಲ್ಲಿ ಈ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರ ನಿವಾರಣೆಗೆ ಕ್ರಮ ಕೈಗೊಳ್ಳದಿದ್ದರೆ, ಬಹಳ ಬಾವಿಗಳು, ನದಿಗಳಲ್ಲಿನ ನೀರು ಕುಡಿಯಲು ಬಾರದಹಾಗೆ, ಕೊನೆಗೆ ಸ್ನಾನಕ್ಕೆ ಸಹ ಬಾರದಾಗುತ್ತದೆ.

ಭೂಗರ್ಭಜಲಗಳ ಉಪಯೋಗ:

ನದಿಗಳಲ್ಲಿನ ನೀರಿನ ಹಾಗೆ ಭೂಗರ್ಭಜಲಗಳು ಕೂಡ ಪ್ರಜೆಗಳೆಲ್ಲರ ಆಸ್ತಿ. ಅದು ಆ ಭೂಮಿಯ ಮೇಲೆ ಹಕ್ಕುಳ್ಳ ಕೆಲವರ ಆಸ್ತಿಯಲ್ಲ. ಆದರೆ ಈಗ ಭೂಗರ್ಭಜಲಗಳನ್ನು ಭೂಮಿಯ ಮೇಲೆ ಹಕ್ಕುಳ್ಳ ಕೆಲವರೇ ಉಪಯೋಗಿಸುತ್ತಿದ್ದಾರೆ.

ಭೂಗರ್ಭಜಲವಿರುವ ಪ್ರಾಂತದಲ್ಲಿ ಭೂಮಿ ಯಜಮಾನ ಹೆಚ್ಚಿನ ನೀರನ್ನು ಬಳಸಿಕೊಂಡು, ಪಕ್ಕದವರಿಗೆ

SCERT TELANGANA



ಚಿತ್ರ–3.5 ಫ್ಲೋರೈಡ್ ವ್ಯಾಧಿ ಸೋಕಿದ ವ್ಯಕ್ತಿ

ನೀರು ಉಳಿಯದಂತೆ ಮಾಡುತ್ತಿದ್ದಾರೆ. ಆಳವಾದ ಕೊಳವೆ ಬಾವಿಗಳನ್ನು ಅಗೆದು ಎಲ್ಲಾ ನೀರನ್ನು ತೋಡಿ, ನೀರಿನ ಮಟ್ಟವನ್ನು ಕಡಿಮೆಯಾಗುವಂತೆ ಮಾಡುವುದರಿಂದ ಸಮೀಪದಲ್ಲಿರುವ ಬಾವಿಗಳು ಬತ್ತಿಹೋಗುತ್ತವೆ. ಅದಕ್ಕಾಗಿ ಭೂಗರ್ಭಜಲಗಳನ್ನು ಎಲ್ಲರ ಆಸ್ತಿ ಎಂದು ಭಾವಿಸಿ, ಅದನ್ನು ಎಲ್ಲರೂ ಜಾಗ್ರತೆಯಾಗಿ ಬಳಸಿಕೊಂಡರೆ ವಿನಹ ಎಲ್ಲರೂ ಅವುಗಳಿಂದ ಪ್ರಯೋಜ ಹೊಂದಲಾರೆವು. ಇನ್ನೂ ಹೇಳಬೇಕೆಂದರೆ ಹೀಗೆ ಸ್ವಲ್ಪಕಾಲ ಮುಂದುವರೆದರೆ ಕೊಳವೆಬಾವಿಗಳು ಇರುವವರು ಕೂಡ ತೋಡಲು ಅಸಲು ಭೂಗರ್ಭಜಲಗಳೇ ಇಲ್ಲದಂತೆ ಹೋಗುತ್ತವೆ.

- ಭೂಮಿ ಇಲ್ಲದವರು ಕೂಡ ಸಮವಾಗಿ ನೀರನ್ನು ಉಪಯೋಗಿಸಿಕೊಳ್ಳುವ ಅವಕಾಶಗಳು ನಿಮ್ಮ ಪ್ರಾಂತದಲ್ಲಿ ಏನಾದರೂ ಇವೆಯೇನು ಆಲೋಚಿಸಿರಿ. ಅಂತಹ ಯೋಜನೆಯನ್ನು ರೂಪಿಸಿಕೊಂಡು ನಿಮ್ಮ ತರಗತಿಯಲ್ಲಿನ ಇತರರೊಂದಿಗೆ ಚರ್ಚಿಸಿ.

ಈ ತಲೆ ಮಾರಿನವರು ನೀರನ್ನು ಹಿಂದಿನ ತಲೆಮಾರಿನವರಿಂದ ಪವಿತ್ರವಾದ ಆಸ್ತಿಯಾಗಿ ಪಡೆದಿರುವರು ನಾವು ಪಡೆದ ಹಾಗೆ ನಮ್ಮ ಮುಂಬರುವ ತಲೆ ಮಾರಿನವರಿಗೆ ಈಆಸ್ತಿಯನ್ನು ಕೊಡಬೇಕು. ನೀರನ್ನು ಉಳಿತಾಯದಿಂದ ಉಪಯೋಗಿಸುವ ಪದ್ದತಿಗಳನ್ನು ಅಭಿವೃದ್ಧಿ ಪಡಿಸಬೇಕು. ಇಲ್ಲವಾದರೆ ಭವಿಷ್ಯತ್ತಿನ ತಲೆಮಾರಿನವರು ನೀರಿಗಾಗಿ ವಿನಾಶಕರವಾದ ಯುದ್ಧಗಳನ್ನು ಮಾಡಬಹುದು. ಅದಕ್ಕಾಗಿ ಈತಲೆಮಾರಿನವರಾದ ನಾವೇ ಭಾಧ್ಯತೆ ವಹಿಸಿಬೇಕು.

ಮುಖ್ಯಪದಗಳು :

1) ನೀರು ಹೀರುವ ಕಲ್ಲು (Pervious)
2) ನೀರು ಹೀರದ ಕಲ್ಲು (Impervious)
3) ಸಹಜವಾದ ವೃಕ್ಷಜಾತಿ (Vegetation)
4) ಜಲಸ್ತರಗಳು (aquifers)
5) ಬೃಹತ್ ಶಿಲಾಯುಗ (Megalithic age)

ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1) ತಪ್ಪಾಗಿರುವ ವಾಕ್ಯಗಳನ್ನು ಸರಿಮಾಡಿರಿ.

ಎ. ನೀರು ಮೈದಾನಗಳಿಂದ ಪ್ರಸ್ಥಭೂಮಿಗಳಿಗೆ ಪ್ರವಹಿಸುತ್ತದೆ.


ಬಿ. ಮೈದನದಲ್ಲಿ ದಪ್ಪವಾದ ಮರಳು, ಜಲ್ಲಿಕಲ್ಲಿನ ಪೊರೆಗಳಿರುತ್ತವೆ.

ಸಿ. ಭೂಗರ್ಭಜಲಗಳು ಯಾವಾಗಲು ಬತ್ತುವುದಿಲ್ಲ.

ಡಿ. ಮಹಬೂಬನಗರದಲ್ಲಿ ಬಾವಿಗಳನ್ನು ಅಗೆಯುವುದು ಸುಲಭ.

SCERT TELANGANA

2) ಚಿತ್ರದಲ್ಲಿ ತೋರಿಸಿದ ಬಾವಿಗಳು ಗೋದಾವರಿ ಮೈದಾನ ಪ್ರಾಂತದಲ್ಲಿನವು. ಆದರೆ ಪಟದಲ್ಲಿ ಯಾವುದೋ ತಪ್ಪುಇದ್ದಂತೆ ಅನಿಸುತ್ತದೆ. ಆ ತಪ್ಪನ್ನು ನೀವು ಸರಿಪಡಿಸಬಲ್ಲಿರಾ?



3) ಕೆಳಗಿನ ಚಿತ್ರದಲ್ಲಿ ಯಾವ ಪ್ರಾಂತದಲ್ಲಿ ನೀರು ಹೆಚ್ಚಾಗಿ ಇಂಗುತ್ತದೆ?



4) ಪಲ್ಲೆಲ್ಲ ಗ್ರಾಮದಲ್ಲಿನ ಕೆಲವು ಬಾವಿಗಳ ಯಜಮಾನರು ಹೆಚ್ಚಿನ ಶಕ್ತಿಯುತವಾದ ಮೋಟರ್‌ಗಳನ್ನು ಉಪಯೋಗಿಸಿ ನೀರನ್ನು ತೋಡುವುದು ಪ್ರಾರಂಭಿಸಿದ್ದಾರೆ. ಇದರಿಂದ ಇತರ ಬಾವಿಗಳು ಬತ್ತಿಹೋಗುತ್ತಿವೆ ಎಂದು ಅದರ ಯಜಮಾನರು ಗುರ್ತಿಸಿದರು. ಈ ಸಮಸ್ಯೆಗೆ ಪರಿಷ್ಕಾರ ಕುರಿತು ಚರ್ಚಿಸಿರಿ.

5) ಭೂಗರ್ಭ ಜಲಗಳ ಕೊರತೆ ಇದ್ದ ಪ್ರಾಂತಗಳಲ್ಲಿ ಕೊಳವೆ ಬಾವಿಗಳನ್ನು ಅಗೆಯುವುದರ ಮೇಲೆ ಯಾವುದಾದರೂ ನಿಯಂತ್ರಣವಿದೆಯಾ? ಏತಕ್ಕೆ?

6) ನಿಮ್ಮ ಪ್ರಾಂತಗಳಲ್ಲಿ ಭೂಗರ್ಭಜಲಗಳನ್ನು ಮರಳಿ ತುಂಬಲು ತೆಗೆದುಕೊಳ್ಳಬೇಕಾದ ಮಾರ್ಗಗಳನ್ನು ಕುರಿತು ಆಲೋಚಿಸಿರಿ.

7) ಪಾಠದಲ್ಲಿನ 3.1ಎ ಚಿತ್ರನೋಡಿ ನಿಮ್ಮ ಪ್ರಾಂತಕ್ಕೆ ಹೋಲಿಸಿ.

8) ನಿಮ್ಮ ಗ್ರಾಮದ ನಕ್ಷೆಯನ್ನು ಎಳೆದು, ನಿಮ್ಮ ಗ್ರಾಮದಲ್ಲಿನ ನೀರಿನ ಸಂಪನ್ಮೂಲಗಳನ್ನು ಗುರ್ತಿಸಿರಿ.

9) 27ನೇ ಪುಟದಲ್ಲಿನ ಭೂಗರ್ಭಜಲದ ಗುಣಾತ್ಮಕತೆ ಎಂಬ ಶೀರ್ಷಿಕೆ ಕೆಳಗಿರುವ 3ನೇ ಪುಟವನ್ನು ಓದಿ, ವಿವರಿಸಿರಿ.

ಪ್ರಾಜೆಕ್ಟ್: ನಿಮ್ಮ ಊರಿನ ಕೆರೆ ಮತ್ತು ಕುಂಟೆಗಳಿಗೆ ಸಂಬಂಧಿಸಿದ ಈ ಕೆಳಗಿನ ವಿವರಗಳನ್ನು ಶೇಖರಿಸಿರಿ.

ಕ್ರ. ಸಂ.	ಕೆರೆ/ಕುಂಟೆ ಹೆಸರು	ಸಾಗುವಳಿ ಕ್ಷೇತ್ರ(ಎಕರೆಗಳಲ್ಲಿ)		ಕೆರೆಯ ಇತರ ಉಪಯೋಗಗಳು	ದುರಸ್ತಿ ಮಾಡದಿರುವುದಕ್ಕೆ ಕಾರಣಗಳು	ದುರಸ್ತಿಮಾಡಿರುವುದರಿಂದ ಆಗುವ ಲಾಭಗಳು
		ಹಿಂದೆ	ಈಗ			

SCERT TELANGANA

ಅಧ್ಯಾಯ 4

ಮಹಾ ಸಮುದ್ರಗಳು ಮೀನು ಹಿಡಿಯುವುದು

ಮೊದಲ ಭಾಗ

ಗ್ರಹಗಳಲ್ಲಿ ನೀರು ಸಮೃದ್ಧಿಯಾಗಿ ಇರುವ ಒಂದೇ ಒಂದು ಗ್ರಹ ಭೂಮಿ.ಆದುದರಿಂದ, ಭೂಮಿ ಜಲಯುತ ಗ್ರಹ. ಭೂಮಿ ಮೇಲ್ಮೈ ಮೇಲೆ 71% ಮಹಾಸಮುದ್ರಗಳಿಂದ,ಸಮುದ್ರಗಳಿಂದ ತುಂಬಿರುತ್ತದೆಂದು ಅಂದಾಜು ಮಾಡುವರು.ಮಹಾಸಮುದ್ರಗಳನ್ನು ಅಥವಾ ಸಮುದ್ರಗಳನ್ನು ಕುರಿತು ನೀನು ಏನೆಂದು ಭಾವಿಸುವೆ? ಮಹಾಸಮುದ್ರಗಳನ್ನು ಅಥವಾ ಸಮುದ್ರಗಳನ್ನು ಕುರಿತು ನೀನು ನೋಡಿದ ಕೇಳಿದ ಅಂಶಗಳೇನು? ಭೂಮಿ ಮೇಲೆ ಉಪ್ಪು ನೀರಿನಿಂದ ವಿಸ್ತರಿಸಿರುವ ಭಾಗವೇ ಸಮುದ್ರ. ವಿಶಾಲವಾದ ಸಮುದ್ರ ಪ್ರಾಂತಗಳೇ ಮಹಾಸಮುದ್ರಗಳು, ಮಹಾಸಮುದ್ರಗಳೆಂಬುವವು ಸಾಧಾರಣವಾಗಿ ಖಂಡಗಳಿಂದ ವಿಭಜಿಸಲ್ಪಟ್ಟ ದೊಡ್ಡ ದೊಡ್ಡ ಜಲ ಭಾಗಗಳು.


- ನಿಮ್ಮ ಗ್ರಾಮ/ಪಟ್ಟಣದಲ್ಲಿನ ನೀರು ಕುಡಿಯುವ ಶುದ್ಧ ನೀರಾ,ಉಪ್ಪು ನೀರಾ?ವಿವಿಧ ಪ್ರಾಂತ ಗಳಲ್ಲಿನ ನೀರು ವಿವಿಧ ರೀತಿಯಾಗಿವೆಯೇ?
- ನೀನು ಉಪಯೋಗಿಸುವ ವಿವಿಧ ಜಲಾಶಯ ಗಳ ಹೆಸರು ತಿಳಿಸಿ.ದೊಡ್ಡ,ಸಣ್ಣ ಜಲಭಾಗಗಳಿಗೆ ಬೇರೆ ಬೇರೆ ಹೆಸರುಗಳಿವೆಯೇ?
- ಗ್ಲೋಬಿನಮೇಲೆ ಅಥವಾ ನಕ್ಷೆಯಲ್ಲಿ ಐದು ಸಮುದ್ರಗಳು, ಮಹಾಸಮುದ್ರಗಳ ಹೆಸರುಗಳನ್ನು ಕಂಡುಕೊಳ್ಳಿ. ಇವು ಇರುವ ಪ್ರಾಂತಗಳನ್ನು ಕೈಯಿಂದ ಮುಟ್ಟಿರಿ.

ನೀರಿನ ಕೆಳಗೆ ಏನಿರುತ್ತವೆಯೋ ತಿಳಿದುಕೊಳ್ಳಲು ಆಸಕ್ತಿಕರವಾಗಿರುತ್ತದೆ. ನೀರಿನ ಅಡಿ ಭಾಗದಲ್ಲಿರುವುದನ್ನು ನೀರಿನ ಮೆಲ್ಮೈಮೂಲಕ ತಿಳಿದುಕೊಳ್ಳಲಾಗದು, ನದಿ, ಹೊಳೆ, ಕೆರೆ ಅಡಿಭಾಗ ಹೇಗೆ ಇರುವುದೋ ನೀವು ಮುಟ್ಟಿ ತಿಳಿದುಕೊಳ್ಳುವ ಅವಕಾಶವಿದೆ.

- ನೀರಿನ ಮೇಲ್ಮೈ ಕೆಳೆಗೆ ನೀನು ಗಮನಿಸಿದವುಗಳ ನ್ನು ಕುರಿತು ತಿಳಿಸಿ, ಚರ್ಚಿಸು.
- ಜಲಭಾಗಗಳು ಎಷ್ಟು ಮೀಟರ್ ಆಳ ಇರುವುದನ್ನು ನೀನು ನೋಡಿರುವೆ?

ಸಮುದ್ರ ತಳದ ಸ್ವರೂಪ:

ಮಹಾ ಸಮುದ್ರಗಳ ಕೆಳಭಾಗ ಭೂಮಿ ಮೇಲ್ಮೈ ಹಾಗೆ ಇರುತ್ತದೆ. ಸಮುದ್ರದ ಕೆಳಭಾಗ ಸಮತಲವಾಗಿರುವುದಿಲ್ಲ ಇದು ಬೆಟ್ಟಗಳಿಂದ, ಪರ್ವತಗಳಿಂದ, ಪ್ರಸ್ಥ ಭೂಮಿಗಳಿಂದ ತುಂಬಿರುತ್ತದೆ. ಬಹಳ ಕಂದಕಗಳು ಹೆಚ್ಚು ಆಳವಾಗಿರುತ್ತವೆ. ಎವರೆಸ್ಟ್ ಪರ್ವತವನ್ನು ಇದರಲ್ಲಿ ಮುಳುಗಿಸಿದರೆ ಮುಳುಗಿ ಹೋಗುತ್ತದೆ. ಮಹಾ ಸಮುದ್ರಗಳಲ್ಲಿನ ಹೆಚ್ಚಿನ ಭಾಗಕ್ಕೆ, ಸಮುದ್ರ ಮಟ್ಟಕ್ಕೆ 3 ರಿಂದ 6ಕಿ.ಮೀ. ಆಳ ಇರುತ್ತದೆ.




ಚಿತ್ರ–4.1 ಸಮುದ್ರದ ತಗ್ಗು ದಿನ್ನೆ

SCERT TELANGANA

ಇಂತಹ ಸಮುದ್ರದ ಕೆಳಭಾಗದ ನೆಲದ ಸ್ವರೂಪ ಗಳನ್ನು ತಿಳಿಸುವ ಸ್ಕೆಚ್ ನಕ್ಷೆ (4.1) ಪರಿಶೀಲಿಸಿರಿ. ನಮ್ಮ ದೇಶದ ಸುತ್ತಲೂ ಇರುವ ಮಹಾಸಮುದ್ರದೊಳಗಿನವು ಗಳನ್ನು ತೋರಿಸುವ ಚಿತ್ರ (4.2) ಕೂಡ ಪರಿಶೀಲಿಸಿರಿ.

ಈ ಚಿತ್ರದಲ್ಲಿ ಭಾರತ ಭೂಭಾಗವನ್ನು ಗುರ್ತಿಸಿ ಬಂಗಾಳಾಕೊಲ್ಲಿ, ಅರೇಬಿಯಾ ಸಮುದ್ರ.ಹಿಂದೂ ಮಹಾ ಸಾಗರಗಳ ಕೆಳಭಾಗದ ನೆಲದ ಮೇಲೆ ಪರ್ವತಗಳು ಮೈದಾನ ಗಳು, ಕಂದಕಗಳನ್ನು ಗುರ್ತಿಸಲು ಪ್ರಯತ್ನಿಸಿರಿ.



ಚಿತ್ರ–4.2 ಹಿಂದೂ ಮಹಾಸಾಗರದ ತಳಭಾಗವನ್ನು ತೋರಿಸುವ ಚಿತ್ರ

ಮಹಾ ಸಮುದ್ರದಲ್ಲಿನ ನೀರು ಯಾವಾಗಲೂ ನಿಶ್ಚಲವಾಗಿ ಇರುವುದಿಲ್ಲ. ಅವುಗಳಲ್ಲಿ ವಿವಿಧ ರೀತಿಯ ಚಲನೆಗಳಿರುತ್ತವೆ.

- ನದಿ ನೀರಿನಲ್ಲಿ ಏರ್ಪಡುವ ವಿವಿಧ ಚಲನೆ ಗಳನ್ನು ಎಂದಾದರೂ ಗಮನಿಸಿರುವಿರಾ? ನೀವು ತರಂಗಗಳು, ಪ್ರವಾಹಗಳು, ನೆರೆಹಾವಳಿ ಬರುವುದನ್ನು ಕಡಿಮೆಯಾಗುವುದನ್ನು ಗಮನಿಸಿರುವಿರಿ. ನಿಮ್ಮ ಅನುಭವಗಳನ್ನು ತರಗತಿ ಕೋಣೆಯಲ್ಲಿ ಚರ್ಚಿಸಿರಿ.

ಸಮುದ್ರ ಚಲನೆಗಳು 3 ವಿಧ:

1. ತರಂಗಗಳು (Waves) : ಸಮುದ್ರ ಮೇಲ್ಮೈ ನೀರಿನ ಮಟ್ಟ ಏರಿಳಿತವನ್ನು ತರಂಗಗಳು ಎನ್ನುವರು. ಸಮುದ್ರದ ಮೇಲ್ಮೈ ಮೇಲೆ ಬೀಸುವ ಮೃದುವಾದ ಗಾಳಿಗಳಿಂದ ತರಂಗಗಳು ಏರ್ಪಡುತ್ತವೆ. ಈ ಗಾಳಿಗಳು ಎಷ್ಟು ವೇಗವಾಗಿ ಬೀಸುತ್ತವೆಯೋ ತರಂಗಗಳು ಅಷ್ಟು ದೊಡ್ಡದಾಗಿರುತ್ತವೆ.

2. ಪ್ರವಾಹಗಳು (Currents): ಸಮುದ್ರದ ಜಲ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ದೊಡ್ಡ ಪ್ರವಾಹವಾಗಿ ಹರಿಯುತ್ತದೆ. ಈ ಪ್ರವಾಹವು ಒಂದು ನಿರ್ದಿಷ್ಟ ದಿಕ್ಕಿಗೆ ನಿರಂತರವಾಗಿ ಸಮುದ್ರದ ಮೇಲ್ಮೈ ಮೇಲೆ ಪ್ರವಹಿಸುತ್ತಿರುತ್ತದೆ. ಇವುಗಳನ್ನು ಸಮುದ್ರ ಪ್ರವಾಹಗಳು ಎನ್ನುವರು. ಸಮುದ್ರ ಪ್ರವಾಹಗಳು ಎರಡು ವಿಧ ಉಷ್ಣ ಪ್ರವಾಹಗಳು, ಶೀತಲ ಪ್ರವಾಹಗಳು. ಉಷ್ಣ ಪ್ರವಾಹಗಳು ಭೂಮಧ್ಯ ರೇಖಾ ಪ್ರಾಂತದಿಂದ ಧ್ರುವಗಳೆಡೆಗೆ ಪ್ರವಹಿಸುವವು. ಶೀತಲ ಪ್ರವಾಹಗಳು ಧ್ರುವಗಳಿಂದ ಭೂಮಧ್ಯೆರೇಖಾ ಪ್ರಾಂತಗಳ ಕಡೆ ಪ್ರವಹಿಸುತ್ತವೆ. ಸಮುದ್ರ ಪ್ರವಾಹಗಳು ಪ್ರಧಾನವಾಗಿ ಪವನಗಳು. ಸಮುದ್ರ ಜಲದ ಉಷ್ಣೋಗ್ರತೆ, ಲವಣಗಳ ವ್ಯತ್ಯಾಸದಿಂದ ಏರ್ಪಡುತ್ತವೆ.

3. ಉಬ್ಬರ–ಇಳಿತಗಳು (Tides): ಸಮುದ್ರದಲ್ಲಿ ಪ್ರತಿದಿನ ನೀರಿನ ಮಟ್ಟ ಲಯಬದ್ಧವಾಗಿ ಹೆಚ್ಚು–ಕಡಿಮೆಯಾಗು ವುದನ್ನು ಉಬ್ಬರ–ಇಳಿತ ಎನ್ನುವರು. ಸಮುದ್ರ ತೀರ ಪ್ರಾಂತದಲ್ಲೆಲ್ಲಾ ಕೆಲವು ಗಂಟೆಗಳ ಕಾಲ ಚಿಮ್ಮಿದ ಉಬ್ಬರವಿಳಿತಗಳು, ಸ್ವಲ್ಪ ಸಮಯಕ್ಕೆ ಇಳಿದ ಉಬ್ಬರವಿಳಿತ ಗಳು ಬರುತ್ತಿರುತ್ತವೆ. ಇವು ಪ್ರತಿದಿನ ಒಂದೇ ಎತ್ತರದಲ್ಲಿ ಇರುವುದಿಲ್ಲ. ಚಿಮ್ಮಿದ ಉಬ್ಬರವಿಳಿತಗಳು ಬಂದಾಗ ಸಮುದ್ರ ತೀರಕೆ ಸ್ವಲ್ಪ ಮುಂದಿನವರೆಗೆ ನೀರು ಬರುತ್ತದೆ. ಇಳಿದ ಉಬ್ಬರವಿಳಿತಗಳು ಬಂದಾಗ ಸಮುದ್ರ ತೀರದಲ್ಲಿ ನೀರು ಸ್ವಲ್ಪ ಒಳಕ್ಕೆ ಹೋಗುತ್ತದೆ. ಉಬ್ಬರವಿಳಿತಗಳು ಮೀನು ಹಿಡಿಯಲು ಅನುಕೂಲ. ಇವು ಕೆಲವು ಪ್ರಾಂತಗಳಲ್ಲಿ ನದಿಗಳು ತರುವ ಕೆಸರುಮಣ್ಣು ಸಮುದ್ರದೊಳಕ್ಕೆ ತೆಗೆದುಕೊಂಡು ಹೋಗಿ ಮರುಳು ದಿನ್ನೆಗಳು ಉಂಟಾಗದಂತೆ ನೋಡುತ್ತವೆ.

© SCERT TELANGANA



ತೀರಮೈದಾನದಲ್ಲಿ ಮತ್ಸ್ಯಕಾರರ ಗ್ರಾಮ :

ಸಮುದ್ರಜಲ ಯಾವಾಗಲು ಉಪ್ಪಾಗಿ ಇರುತ್ತದೆ. ಇದರಲ್ಲಿ ಅನೇಕ ಖನಿಜಲವಣಗಳು ಇರುತ್ತವೆ. ಮಳೆಬೀಳಲು ಸಮುದ್ರಗಳೇ ಮುಖ್ಯ ಸಂಪನ್ಮೂಲ. ಸಮುದ್ರಗಳು ಮತ್ಸ್ಯಸಂಪತ್ತಿಗೆ, ಸಮುದ್ರ ಸಂಬಂಧವಾದ ಇತರ ಆಹಾರ ಪದಾರ್ಥಗಳಿಗೆ ನಿಲಯಗಳಾಗಿವೆ. ಲವಣಗಳಿಗೆ ಸಮುದ್ರಗಳು ಮುಖ್ಯ ಸಂಪನ್ಮೂಲಗಳು. ಅಂತರಾಷ್ಟ್ರೀಯ ವಾಣಿಜ್ಯಕ್ಕೆ ಸಹಜ ಮಾರ್ಗಗಳು ಆಂಧ್ರಪ್ರದೇಶದ ಸಮುದ್ರ ತೀರದ ಒಂದು ಗ್ರಾಮವನ್ನು ಸಂದರ್ಶಿಸಿ ಅಲ್ಲಿನ ಪ್ರಜೆಗಳ ಜೀವನ ವಿಧಾನವನ್ನು ಅಧ್ಯಯನ ಮಾಡೋಣ. ಅದೇ ಆಂಧ್ರಪ್ರದೇಶ ತೀರ ಮೈದಾನದ ಮತ್ಸ್ಯಕಾರರ ಗ್ರಾಮ "ಭಾವನಪಾಡು".

- ಆಂಧ್ರಪ್ರದೇಶದ ನಕ್ಷೆಯಲ್ಲಿ ಕಡಲತೀರವನ್ನು ಗಮನಿಸಿ ತೀರರೇಖೆಯ ಮೂಲಕ ಇರುವ ಜಿಲ್ಲೆಗಳನ್ನು ಗುರುತಿಸಿರಿ.
- ಭಾವನಪಾಡು ಯಾವ ಜಿಲ್ಲೆಯಲ್ಲಿದೆ ಕಂಡುಕೊಳ್ಳಿರಿ.
- ಭಾವನಪಾಡು ಗ್ರಾಮ ನಕ್ಷೆಯನ್ನು ಪರಿಶೀಲಿಸಿ ಕೆಳಗಿನ ಅಂಶಗಳನ್ನು ತಿಳಿಸಿರಿ.

i) ಪಟದಲ್ಲಿ ಜಲಭಾಗಗಳನ್ನು ಗುರ್ತಿಸಿರಿ.

ii) ಗ್ರಾಮದಲ್ಲಿ ವ್ಯವಸಾಯೇತರ ಕಾರ್ಯಕ್ರಮಗಳಿಗೆ ಉಪಯೋಗಿಸುವ ಭೂಮಿ ಇದೆಯೇ? ಇದ್ದರೆ ಆ ಭೂಮಿಯನ್ನು ಯಾವುದಕ್ಕೆ ಉಪಯೋಗಿ ಸುತ್ತಿದ್ದಾರೆ?

ಮೀನು ಹಿಡಿಯುವುದು:

ಅಪ್ಪಲಕೊಂಡ ಬೆಳಗಿನ ಜಾವ 4ಗಂಟೆಗೆ ತನ್ನ ಹೆಂಡತಿ ಧನಮ್ಮ ಕೊಟ್ಟ ತಂಗಳ ಅನ್ನ, ಅಂಬಲಿ ತಿಂದು 5ಗಂಟೆಗೆ ಸಮುದ್ರದೊಳಕ್ಕೆ ಮೀನು ಹಿಡಿಯಲು ಹೊರಟನು. ಆತನ ಸ್ನೇಹಿತರು ಸಮದ್ರ ತೀರದಲ್ಲಿ ಆತನಿಗಾಗಿ ಕಾಯುತ್ತಿದ್ದರು. ಇವರೆಲ್ಲಾ ಬಡವರಾದ್ದರಿಂದ ಸ್ವಂತ ಹಡಗು, ಬಲೆ ಇಲ್ಲದಿರುವುದರಿಂದ ತಾತರಾವು ಯಂತ್ರದ ಹಡಗಿನಲ್ಲಿ ಕೆಲಸಮಾಡುತ್ತಿದ್ದರು. ತಾತರಾವು ಕೂಡ ಅವರೊಂದಿಗೆ ಬೇಟೆಗೆ ಹೊರಟನು. ಒಟ್ಟು 20 ಜನ ಮತ್ಸ್ಯಕಾರರು ಯಂತ್ರದ ಹಡಗಿನಲ್ಲಿ ಮೀನು ಹಿಡಿಯಲು ಹೊರಟರು. ಬೇಟೆಗೆ ಹೋಗಲು ಈ ಯಂತ್ರದ ಹಡಗಿಗೆ ಬೇಕಾದ ಸಾಮಗ್ರಿಯೊಂದಿಗೆ ಹಿಂದಿನ ದಿನವೇ ಸಿದ್ಧಮಾಡಿದ್ದರು.

ಹಡಗು ಸಮುದ್ರದೊಳಗೆ ಹೋಗುವಮುನ್ನ ಇವರು ಇಂಜನ್, ಹಗ್ಗವನ್ನು ಎಳೆದುಬಿಡುವ

ಚಿತ್ರ–4.3 ಭಾವನ ಪಾಡು ಗ್ರಾಮ



SCERT TELANGANA



ಚಿತ್ರ–4.4 ಮೇಲಿಂದ ಕಾಣುವ ಭಾವನಪಾಡು ಗ್ರಾಮ

ಯಂತ್ರಗಳನ್ನು ಪರೀಕ್ಷಿಸಿಕೊಂಡರು. ಹೆಚ್ಚಿನ ಡೀಜೆಲ್, ಆಹಾರದ ಪೊಟ್ಟಣಗಳನ್ನು ತೆಗೆದುಕೊಂಡು ತಾವು ದೃಢವಾಗಿ ನಂಬಿದ ದೇವತೆಯನ್ನು ಪೂಜಿಸಿದರು.

ತಾತರಾವು ಈ ಯಂತ್ರದ ಹಡಗನ್ನು ಒಡಿಷಾ ದಲ್ಲಿನ ಮಾರ್ಕೊಂಡದಲ್ಲಿ ಕೊಂಡನು. ಇದರ ಬೆಲೆ ಸುಮಾರು 6ಲಕ್ಷ ರೂಪಾಯಿಗಳು ಈ ಹಣವನ್ನು ಬಡ್ಡಿ ವ್ಯಾಪಾರಿಯಿಂದ ಹೆಚ್ಚಿನ ಬಡ್ಡಿಗೆ ತಂದಿದ್ದನು. ಸ್ಥಿರಾಸ್ತಿಗಳು ಇಲ್ಲದಿರುವುದರಿಂದ ಬ್ಯಾಂಕಿನಿಂದ ಸಾಲ ಪಡೆಯಲಾಗಲಿಲ್ಲ. ಪ್ರತಿದಿನ ಮೀನಿನ ಬೇಟೆಗೆ ಹೋಗಲು ಕೂಡ ಮಧ್ಯವರ್ತಿಗಳಿಂದ ಸಾಲ ತರಬೇಕಾದುದೆ. ಒಂದು ಸಾರಿ ಮೀನಿನ ಬೇಟೆಗೆ ಹೋಗಿಬರಲು ಡೀಜೆಲ್, ಕೂಲಿ ಇತರ ಖರ್ಚುಗಳೀಗೆ 5 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಮಧ್ಯವರ್ತಿಗಳಿಂದ ಸಾಲತಂದ ತಾತರಾವು ಆ ದಿನ ಬೇಟೆಯಾಡಿದ ಮೀನುಗಳನು ಮಧ್ಯವರ್ತಿಗೆ ಮಾತ್ರ.ಅದು ಆತನು ನಿರ್ಣಯಿಸಿದ ದರಕ್ಕೆ ಮಾರಬೇಕು. 20 ಜನ ಮತ್ಸ್ಯಕಾರರು ಹಡಗುಗಳನ್ನು ಹತ್ತಿದರು. ಅವರು ಸಮುದ್ರದೊಳಗೆ 15–20 ಕಿ.ಮೀ. ವರೆಗೆ ಹೋಗುವರು.

ಅಪ್ಪಲಕೊಂಡನ ಹೆಂಡತಿ ಧನಮ್ಮ ಮನೆಗೆಲಸವನ್ನು 9 ಗಂಟೆಗೆ ಮುಗಿಸಿಕೊಂಡು ಕೆಲಸಕ್ಕಾಗಿ ಉಪ್ಪಿನಮಡಿಗಳಿಗೆ ಹೋಗುವಳು. ಒಂದೊಂದುಸಾರಿ ಈಕೆ ವ್ಯವಸಾಯದ ಕೆಲಸಕ್ಕೆ ಕೂಡ ಹೋಗುವಳು. ಇವರಿಗೆ ವ್ಯವಸಾಯ ಭೂಮಿಯಾಗಲಿ ಉಪ್ಪಿನ ಮಡಿಗಳಾಗಲಿ ಇಲ್ಲದಿರುವುದರಿಂದ ಇವರ ಕುಟುಂಬ ದಿನಕೂಲಿ ಮೇಲೆ ಆಧಾರಪಟ್ಟಿದೆ. ಉಪ್ಪಿನ ಮಡಿಯಲ್ಲಿ ಕೆಲಸಮಾಡುತ್ತಿದ್ದಾಗ ಕೂಡ ಧನಮ್ಮ ತನ್ನ ಗಂಡನ ಫೋನ್‌ಗೋಸ್ಕರ ಕಾಯುತ್ತಿರುತ್ತಾಳೆ. ಬೇಟೆಗೆ ಹೋದ ಗಂಡ ಸುರಕ್ಷಿತವಾಗಿ ಬರಬೇಕು, ಬೇಟೆಯಲ್ಲಿ ಹೆಚ್ಚಿನ ಮೀನುಸಿಗಬೇಕೆಂದು ಎದುರುನೋಡುತ್ತಿದ್ದಳು. ಬೇಟೆಯಲ್ಲಿ ಹೆಚ್ಚಿನ ಮೀನುಸಿಕ್ಕರೆ ಇವರಿಗೆ ಬಂದ ಮೊತ್ತದಲ್ಲಿ ಭಾಗ ಸಿಕ್ಕು ಮನೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗಬಹುದೆಂದು ಆಶಿಸುವಳು.

ಮತ್ಸ್ಯಕಾರರು ಸಾಧಾರಣವಾಗಿ ಮಧ್ಯಾಹ್ನ 1ಗಂಟೆಯಿಂದ ರಾತ್ರಿ 8 ಗಂಟೆಯ ಮಧ್ಯೆ ಹಿಂದಿರುಗುವರು. ಕೆಲವು ಸಾರಿ ರಾತ್ರಿ ಬಹಳ ತಡವಾಗಬಹುದು. ಆದರೆ ಆ ದಿನ "ಪಾರ" ಎಂಬ ಜಾತಿಮೀನು ಹೆಚ್ಚಾಗಿ ಹಿಡಿದಿದ್ದರಿಂದ ಮಧ್ಯಾಹ್ನ 3ಗಂಟೆಗೆ ತೀರವನ್ನು ಸೇರಿದರು. ಹಡಗಿನಿಂದ ಇಳಿಸಿದ ಮೀನುಗಳನ್ನು ಹರಾಜು ಪ್ರಾಂತ್ಯಕ್ಕೆ ತಂದು ಮೀನುಗಳನ್ನು ಕೋಣೆಯಲ್ಲಿ ಹಾಕಿದರು. ಆ ಹೋತ್ತಿಗೆ ಮಧ್ಯವರ್ತಿಗಳ ಅಲ್ಲಿಗೇ ಸೇರಿಕೊಂಡರು.

ಕೆಲವು ಮಧ್ಯವರ್ತಿಗಳು ಮೀನುಗಳನ್ನು ಬೇರ್ಪಡಿಸಿ ಅವುಗಳನ್ನು ಶೀತಲೀಕರಣ ಪೆಟ್ಟಿಗೆಯಲ್ಲಿ ಇಟ್ಟು ಕೊಲ್ಕತ್ತ, ಬೆಂಗಳೂರು, ಚೆನ್ನೈ, ಹೈದರಾಬಾದ್

SCERT TELANGANA



ಚಿತ್ರ–4.5 ಬೇಟೆಗೆ ಸಿದ್ದವಿರುವ ಹಡಗು



ಚಿತ್ರ–4.6 ಬೋಟು ಇಂಜಿನ್,ಊಟದ ಕ್ಯಾರಿಯರ್‌ಗಳು,ದುರ್ಗಮ್ಮನ ಫೋಟೋ

ಕೇರಳದಂತಹ ದೂರ ಪ್ರಾಂತಗಳಿಗೆ ಕಳುಹಿಸುವರು. ಮೀನುಗಳು ಹಿಡಿಯವವರಿಗಿಂತ ಇವರಿಗೆ 4ರಷ್ಟು ಅಧಿಕ ಮೊತ್ತದ ಆದಾಯ ಬರುತ್ತದೆ. ಸ್ಥಾನಿಕ ಮಧ್ಯವರ್ತಿ ತಾಣದ ಚಿತ್ರ (4.9) ವನ್ನು ಪರಿಶೀಲಿಸಿರಿ.

- ಮತ್ಸ್ಯಕಾರರಿಗಿಂತ ಮಧ್ಯವರ್ತಿಗಳಿಗೆ ಅಧಿಕ ಆದಾಯ ಬರಲು ಕಾರಣವೇನು?
- ಮಧ್ಯವರ್ತಿಗಳ ತಾಣದಲ್ಲಿ ಥರ್ಮಕೋಲ್ ಪೆಟ್ಟಿಗೆಗಳನ್ನು ಚಿತ್ರದಲ್ಲಿ ನೋಡಬಹುದು ಅವು ಏತಕ್ಕೆ?

ಇಲ್ಲಿಯವರೆಗೆ ದೊಡ್ಡ ಮೀನುಗಳ ವ್ಯಾಪಾರ ಕುರಿತು ಚರ್ಚಿಸಿದ್ದೇವೆ. ಗ್ರಾಮಗಳಲ್ಲಿ ಸಣ್ಣ ಮೀನುಗಳ ವ್ಯಾಪಾರಿಗಳು ಕೂಡ ಮೀನುಗಳನ್ನು ಮಾರುತ್ತಾರೆ. ಸ್ಥಳೀಯವಾಗಿ ತಯಾರುಮಾಡಿದ ಕಟ್ಟಿಗೆ ತೆಪ್ಪಗಳಮೇಲೆ 5 ಕಿ.ಮೀ. ವರೆಗೆ ಸಮುದ್ರದೊಳಕ್ಕೆ ಹೋಗಿ ಸ್ವಲ್ಪ ಪ್ರಮಾಣದ ಮೀನುಗಳನ್ನು ಬೇಟೆಯಾಡುತ್ತಾರೆ. ಇವುಗಳನ್ನು ಮತ್ಸ್ಯಕಾರರ ಹೆಂಡತಿಯರು ಸಮೀಪದಲ್ಲಿನ ಪಟ್ಟಣಗಳಾದ ನೌಪಡ, ಟೆಕ್ಕಲಿ, ಪೂಂಡಿ, ಪಲಾಸಗಳಲ್ಲಿ ಮಾರುತ್ತಾರೆ. ಇವರನ್ನು ಬೇರಗತ್ತೆಯರು ಎನ್ನುವರು.

ಕಟ್ಟಿಗೆ ತೆಪ್ಪೆಗಳೊಂದಿಗೆ ಹೋಲಿಸಿಕೊಂಡರೆ ಯಂತ್ರದ ದೋಣಿಗಳಲ್ಲಿ ಬೇಟೆಯಾಡುವುದು ಪ್ರಮಾದಕರ ಸಮುದ್ರದೊಳಕ್ಕೆ ಬಹಳ ದೂರದವರೆಗೆಹೋಗಬೇಕಾಗುತ್ತದೆ. ಅಲ್ಲಿ ಅಪಘಾತ ನಡೆದರೆ ಈಜಿಕೊಂಡು ದಡಕ್ಕೆ ಸೇರುವುದು ಕಷ್ಟ, ದೊಡ್ಡ ಹಡಗಿನಲ್ಲಿ ಕೂಡ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಲೈಫ್ ಜಾಕೆಟ್‌ಗಳು ಇಲ್ಲದಿರುವುದು ಶೋಚನೀಯ, ಮೀನಿನ ಬೇಟೆ ಸಾಹಸೋಪೇತವಾದುದು, ಅಪಾಯದಿಂದ ಕೂಡಿದ ವೃತ್ತಿ.



ಚಿತ್ರ–4.7 ಹರಾಜು ನಡೆಯುವ ಹಾಲ್‌ಗೆ ಮೀನುಗಳನ್ನು ತೆಗೆದುಕೊಂಡು ಹೋಗುವುದು



ಚಿತ್ರ–4.8 ಹರಾಜು ಹಾಕುವ ಹಾಲಿನಲ್ಲಿ ಸಿದ್ದಮಾಡಿದ ಮೀನುಗಳು – ಅಲ್ಲಿ ಕಾದಿರುವ ಮಧ್ಯವರ್ತಿಗಳು

SCERT TELANGANA



ಚಿತ್ರ–4.9 ಮಧ್ಯವರ್ತಿಗಳ ತಾಣ, ತೂಕ ಹಾಕುವ ಯಂತ್ರಗಳು,ಶೀತಲೀಕರಣ ಪೆಟ್ಟಿಗೆಗಳು



ಚಿತ್ರ–4.10 ಮಧ್ಯವರ್ತಿಗಳ ತಾಣದಲ್ಲಿ ನಗರಗಳಲ್ಲಿ ಮಾರಲು ವಾಹನಗಳಲ್ಲಿ ಲೋಡ್ ಮಾಡುತ್ತಿರುವ ದೃಶ್ಯ

ಬಲೆಗಳು:

ಮನೆಗೆ ಸೇರಿದ ಅಪ್ಪಲಕೊಂಡ ಮಧ್ಯಾಹ್ನ ಊಟ ಮುಗಿಸಿಕೊಂಡು ಹರಿದ ಬಲೆಗಳನ್ನು ತೆಗೆದುಕೊಂಡು ತುಫಾನು ಷಲ್ಟರ್‌ಗೆ ಹೋಗಿ ರಿಪೇರಿ ಮಾಡಲು ಪ್ರಾರಂಭಿಸಿದನು. ಭಾವನಪಾಡು ಗ್ರಾಮದಲ್ಲಿ ಅನೇಕ ಪ್ರಾಂತದಲ್ಲಿ ಇದು ಸಾಧಾರಣವಾಗಿ ನಡೆಯುವ ಕಾರ್ಯಕ್ರಮ. ನೂಲುಕಟ್ಟಿಗೆ, ನೂಲುಕಂಡ, ಕಟ್ಟಿಗೆಬಡ್ಡೆ ಯಂತ್ರ ಪರಿಕರಣಗಳಿಂದ ಕೂಡಿದ "ಟೂಲ್‌ಕಿಟ್" ಬಲೆಗಳ ರಿಪೇರಿಗಾಗಿ ಪ್ರತಿ ಮತ್ಸ್ಯಕಾರನ ಹತ್ತಿರ ಇರುತ್ತದೆ. ಪದರುಗಳನ್ನಿಡಿದು, (Rings) ರಂಧ್ರಗಳನ್ನಿಡಿದು ಬಲೆಗಳು ವಿವಿಧ ರೀತಿ. ಇತ್ತೀಚೆಗೆ ಹೊಸದಾಗಿ ಬಂದ ರಿಂಗ್‌ಬಲೆಗಳನ್ನು ಅಧಿಕವಾಗಿ ಮೀನಿನ ಬೇಟೆಗೆ ಮತ್ಸ್ಯಕಾರರು ಬಳಸುತ್ತಿದ್ದಾರೆ.

ಅವುಗಳ ಮೂಲಕ ಗ್ರಾಮದಲ್ಲಿ ವಲಸೆಗಳು ಕಡಿಮೆಯಾಗಿವೆ. ಹಿಂದೆ ನೂಲಿನಿಂದ ತಯಾರಾದ ಬಲೆಗಳಿದ್ದವು. ಪ್ರಸ್ತುತ ಇವುಗಳ ಸ್ಥಾನದಲ್ಲಿ ಪ್ಲಾಸ್ಟಿಕ್, ನೈಲಾನ್ ಇತರ ಸಿಂಥಟಿಕ್ ದಾರಗಳಿಂದ ತಯಾರಾದ ಬಲೆಗಳು ಬಂದಿವೆ. ಒಂದು ಬಲೆ 4,5 ವರ್ಷ ಇರುತ್ತದೆ. ಬಲೆಗಳು ರಿಂಗಿನ ಆಕಾರವಿಡಿದು ತೂಕಕ್ಕೆ ಕೊಂಡುಕೊಳ್ಳುತ್ತಾರೆ. ಬಲೆಗಳು ಕಿಲೋ 250–300ರೂಪಾಯಿಗಳು ಮಧ್ಯೆ ಇರುತ್ತದೆ. ರಿಂಗು ಬಲೆ ತೂಕ 500 ಕಿಲೋ ಇರುತ್ತದೆ. ಈ ಪ್ರಾಂತದ ಮತ್ಸಕಾರರು



ಚಿತ್ರ–4.11 ಪಟ್ಟಣಗಳಲ್ಲಿ ಮಾರಲು ಮೀನುಗಳನ್ನು ತಟ್ಟೆಗಳಲ್ಲಿ ಹಾಕಿ ಕೊಳ್ಳಲು ತಮ್ಮ ಸರದಿಗಾಗಿ ಕಾಯುತ್ತಿರುವ ಬೇರಗತ್ತೆಯರು

© NCERT NOT TO BE REPUBLISHED



ಚಿತ್ರ 4 . 12 (A) ಬಲೆ ರಿಪೇರಿಗಳು, (B)ಮತ್ಸ್ಯಕಾರನು ಬಲೆಯನ್ನು ಎಣೆಯುವುದು , (C) ನೂಲು ಕಟ್ಟಿಗೆಗಳು (D) ನೀರಿನ ಮೇಲೆ ತೆಲುವ ಬೆಂಡುಗಳು ,(E) ನೀರಿನ ಮೇಲೆ ತೆಲುವ ಪ್ಲಾಸ್ಟೀಕ್ ಚಂಡುಗಳು.

ಒರಿಸ್ಸಾದಲ್ಲಿನ ಬರಂಪೂರು ನಿಂದ ಬಲೆಗಳನ್ನು ಕೊಂಡುಕೊಳ್ಳುವರು.

ವ್ಯವಸಾಯ–ಪಶುಪೋಷಣೆ:

ಭಾವನಪಾಡು ಗ್ರಾಮದಲ್ಲಿ ಮೀನು ಹಿಡಿಯುವುದು ಮಾತ್ರವೇ ವೃತ್ತಿ ಅಲ್ಲ. ಇವರು ವ್ಯವಸಾಯ ಮಾಡಿ ಬೆಳೆಗಳನ್ನು ಬೆಳೆಸುವುದು ಪ್ರಾಣಿಗಳ, ಪಕ್ಷಿಗಳ ಸಾಕಾಣಿಕೆಯಂತಹ ಕೆಲಸಗಳನ್ನು ಸಹಮಾಡುತ್ತಿರುತ್ತಾರೆ.

ಈ ಗ್ರಾಮದಲ್ಲಿನ ನೆಲಗಳು ಪ್ರಧಾನವಾಗಿ ಜೇಡಿಮಣ್ಣು (ಮರಳಿನಿಂದ ಕೂಡಿದ ಒಂಡು ಮಣ್ಣು) ಭೂಮಿಗಳು, ಭತ್ತ ಮುಖ್ಯ ಬೆಳೆ. ಸ್ವಲ್ಪ ಎಕರೆ ಭೂಮಿಗೆ ಮಾತ್ರ ನೀರಾವರಿ ಸೌಲಭ್ಯವಿದೆ. ವಂಶಧಾರಾ ನದಿಕಾಲುವೆ ಕೊನೆಗೆ ಭಾವನಪಾಡು ಗ್ರಾಮವಿದೆ. ಈ ಗ್ರಾಮಕ್ಕೆ ಸಮೀಪದಲ್ಲಿ ಮರ್ರಿಪಾಡು ಗ್ರಾಮ ನೀರಾವರಿ ಸೌಲಭ್ಯ ತೀರಿದಾಗ ಮಾತ್ರ ಭಾವನಪಾಡು ಗ್ರಾಮಕ್ಕೆ ನೀರು ಬರುತ್ತದೆ. ಆದುದರಿಂದ ಭಾವನಪಾಡಿನಲ್ಲಿ ಹೆಚ್ಚಿನಭಾಗ ವ್ಯವಸಾಯ ವರ್ಷಾಧಾರವೇ ಈ ಗ್ರಾಮದಲ್ಲಿ ಭೂಮಾಲಿಕರಿಲ್ಲ. ಭಾವನಾಪಾಡು ಗ್ರಾಮದಲ್ಲಿ ಬಹಳ ಮಂದಿ ವ್ಯವಸಾಯದಾರರು, ಚಿಕ್ಕ ಹಿಡುವಳಿದಾರರು, ಇವರು ವಾಣಿಜ್ಯ ಬೆಳೆಗಳನ್ನು ಬೆಳೆಸುವುದಿಲ್ಲ, ಆದರೆ ಕೆಲವರು ಆಕಳು, ಎಮ್ಮೆಗಳನ್ನು ಸಾಕುತ್ತಿದ್ದಾರೆ.

ಈ ಗ್ರಾಮದಲ್ಲಿ ಎರಡು ಕೋಳಿಫಾರಂಗಳು ಲಾಭದಲ್ಲಿ ನಡೆಯುತ್ತವೆ. ಇವರು ಬೆಳೆಸಿದ ಭತ್ತ ಇವರ ಅವಸರಗಳಿಗೆ ಸಾಕಾಗಾದಿರುವುದರಿಂದ ಬಿಳಿರೇಷನ್ ಕಾರ್ಡುಮೇಲೆ ನ್ಯಾಯಬೆಲೆ ಅಂಗಡಿಯಿಂದ ಅಥವಾ ಬಜಾರುಗಳಲ್ಲಿ ಅಕ್ಕಿಕೊಂಡುಕೊಳ್ಳುತ್ತಾರೆ.

ಲವಣೀಯತೆ, ಕುಡಿ (ಶುದ್ಧ)ಯುವ ನೀರು:

ಗ್ರಾಮದಲ್ಲಿ ಲವಣೀಯತೆ ಸಮಸ್ಯೆ ಇದೆ. ಸಮುದ್ರ ತೀರದಲ್ಲಿ 8ರಿಂದ 10ಅಡಿ ಆಳ ಅಗೆದರೆ ಶುದ್ಧನೀರು ಬರುತ್ತದೆ. ಬೇಸಿಗೆಕಾಲದಲ್ಲಿ ಭಾವಿಗಳಲ್ಲಿ ನೀರು ತಳ ಭಾಗಕ್ಕೆ ಇಂಗಿಹೋಗುತ್ತದೆ. ಈ ಬಾವಿಗಳು ಮತ್ತೆ ತುಂಬುವುದಕ್ಕೆ ಬಹಳ ಸಮಯ ಹಿಡಿಯುತ್ತದೆ. ಒಂದುಗಂಟೆಕಾಲ ಕಾದುನೋಡಿದರೆ ಒಂದು ಕೊಡ ನೀರು ಸಿಗುತ್ತವೆ. ಶುದ್ಧನೀರಿಗಾಗಿ ಮಹಿಳೆಯರು ಬಹಳ ಸಮಯ ಕಾಯಬೇಕು, ಇಲ್ಲವೇ 2 ಕಿ.ಮೀ. ದೂರ ನಡೆದುಕೊಂಡು ಹೋಗಬೇಕಾಗುತ್ತದೆ.

SCERT TELANGANA

ಚಿತ್ರ 4.13, 4.14 ಲವಣಯುಕ್ತ ಭೂಮಿಗಳನ್ನು ಸಮ ಮಾಡಿ ನೀರು ಹೀರದ ನೆಲವಾಗಿ ಮಾರ್ಪಡಿಸುವದು.



ಚಿತ್ರ 4.13



ಚಿತ್ರ 4.14

ಸರ್ಕಾರ ಈ ಗ್ರಾಮಕ್ಕೆ ಒಂದು ಸುರಕ್ಷಿತ ಶುದ್ಧನೀರಿನ ಯೋಜನೆ ಮಂಜೂರು ಮಾಡಿದೆ. ಈ ಯೋಜನೆಗೆ ಸಮೀಪದಲ್ಲಿನ ಸೂರ್ಯಮಣಿಪುರಂನಿಂದ ಪೈಪುಗಳ ಮೂಲಕ ನೀರನ್ನು ಹಾಯಿಸುವರು. ಈ ಯೋಜನೆ ಕೆಲವು ಕಾಲ ನೆಮ್ಮದಿತಂದಿದೆ. ಆದರೆ ಪ್ರಧಾನ ನೀರಿನ ಟ್ಯಾಂಕ್ ಅಪರಿಶುಭ್ರತೆ, ಯಾವಾಗಲೂ ಮೋಟಾರು ರಿಪೇರಿ ಮಾಡಬೇಕಾಗಿರುವುದರಿಂದ ಪ್ರಧಾನ ಅಡಚಣೆಯಾಗಿ ಪರಿಣಮಿಸಿದೆ. ಕೆಲವು ಕಾಲ ಯುವಜನ ಸಂಘಗಳು ಈ ಯೋಜನೆ ಕೆಲಸಮಾಡಲು ಸಹಕರಿಸಿವೆ. ಆದರೆ ಈಗ ಅದು ನಿಂತುಹೋಗಿದೆ.

ಸಾಮಾಜಿಕ ಜೀವನ:

ಭಾವನಪಾಡು ಪ್ರಜೆಗಳಲ್ಲಿ ಹೆಚ್ಚಿನ ಜನ ಗಂಗಮ್ಮನನ್ನು, ಗೌರಿಯನ್ನು, ಶಿವನನ್ನುಪೂಜಿಸುವರು. ಇವರು ತಮ್ಮ ಹಡಗುಗಳಿಗೆ, ಬಲೆಗಳಿಗೆ ಪೂಜೆ ಮಾಡುವರು. ಇವರ ಪ್ರಧಾನವಾದ ಹಬ್ಬ ಗೌರಿಹುಣ್ಣಿಮೆ. ಇವರ ಗ್ರಾಮ ಸಾಮಾನ್ಯ ನಿಧಿಯಿಂದ ಈ ಹಬ್ಬಗಳಿಗೆ ಖರ್ಚುಮಾಡುತ್ತಾರೆ. ಚಿತ್ರ–4.16ನ್ನು ಗಮನಿಸಿರಿ.



ಚಿತ್ರ 4.15 ಸುದೂರ ಪ್ರಾಂತಗಳಿಂದ ಓ ವೃದ್ಧೆ ಮಹಿಳೆ ನೀರನ್ನು ತರುವ ದೃಶ್ಯ



ಚಿತ್ರ 4.16 ಪ್ರಜೆಗಳು ಅಚ್ಚಯನ್ನು ಏತಕ್ಕೆ ಹಾಕಿಸಿಕೊಳ್ಳವರೆಂದು ಭಾವಿಸುವೇ? ಅಪ್ಪಲಕೊಂಡನ ಕೈಗಳ ಮೇಲಿರುವ ಗುರ್ತು ಏನು? ಇದು ಯಾವುದನ್ನು ಸೂಚಿಸುತ್ತದೆ.

ಅಪ್ಪಲಕೊಂಡನಂತೆ ಬಹಳ ಜನ ಅಚ್ಚೆ ಹಾಕಿಸಿಕೊಳ್ಳುತ್ತಾರೆ. ಈ ಗ್ರಾಮದಲ್ಲಿ ಒಂದು ಬಹಿರಂಗ ವೇದಿಕೆ ಇದೆ. ಇದರ ಮೇಲೆ ನಾಟಕಗಳು, ಬುರ್ರ ಕಥೆಗಳು, ಹರಿಕಥೆಗಳು ರಿಕಾರ್ಡ್ ಡ್ಯಾನ್ಸುಗಳು ಪ್ರದರ್ಶಿಸುವರು.

ಈ ಕಾರ್ಯಕ್ರಮಗಳನ್ನೆಲ್ಲಾ ಎಲ್ಲಾರು "ಪಿಲ್ಲಾಸ್" ಎಂದು ಕರೆಯುವ ಕುಲದ ಯಜಮಾನ ನಿರ್ವಹಿಸುವನು. ಇವರು ಪ್ರಜೆಗಳ ಆಚಾರ, ವ್ಯವಹಾರಗಳನ್ನು ನಿರ್ಣಯಿಸುವರು. ಇವರು ವಿವಾದಗಳನ್ನು ಪರಿಷ್ಕರಿಸುತ್ತಾರೆ. ಶುಲ್ಕಗಳನ್ನು ವಿಧಿಸುವರು. ಈ ವಿಧವಾಗಿ ವಸೂಲಾದ ಹಣ ಗ್ರಾಮ ಸಾಮಾನ್ಯ ನಿಧಿಗೆ ಜಮಮಾಡುವರು.

SCERT TELANGANA

ಮುಖ್ಯ ಪದಗಳು


1. ಟೂಲ್ ಕಿಟ್ 2. ಕಣ್ಣುಗಳು 3. ಬುರ್ರಕಥೆ 4. ಯಾಂತ್ರಿಕದೋಣಿ

ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ.

1) ಭಾವನಪಾಡು ನಿಮ್ಮ ಗ್ರಾಮದ ಹಾಗೆ, ನಿಮ್ಮ ಪಟ್ಟಣಕ್ಕೆ ಸಮೀಪವಿರುವ ಗ್ರಾಮದ ಹಾಗೆ ಕಾಣುತ್ತದೆಯೆ? ನೀವು ಆಲೋಚಿಸಿ ಹೋಲಿಕೆಗಳನ್ನು, ಭೇದಗಳನ್ನು ಕೆಳಗಿನ ಅಂಶಗಳನು ದೃಷ್ಟಿಯಲ್ಲಿಟ್ಟುಕೊಂಡು ಬರೆ.
   ಎ) ಜೀವನ ಆಧಾರಕ್ಕೆ ಮೂಲವಾದವು ಬಿ) ವಿವಿಧ ರೀತಿಯ ಜೀವನಾಧಾರಗಳು
   ಸಿ) ನೀರಿನ ಸೌಲಭ್ಯಗಳು ಡಿ) ವ್ಯವಸಾಯ ಪದ್ದತಿಗಳು
2) ಸಮುದ್ರ ಚಲನೆಗಳು ಎಷ್ಟು ವಿಧ ? ಇದರಲ್ಲಿ ಯಾವ ಚಲನೆ ಮತ್ಸ್ಯಕಾರರಿಗೆ ಉಪಯೋಗಕರ ?
3) ಯಂತ್ರದ ದೋಣಿಯ ಮೇಲೆ ಮೀನಿನ ಬೇಟೆಗೆ, ಕಟ್ಟಿಗೆ ತೆಪ್ಪೆಗಳ ಮೇಲೆ ಮೀನಿನ ಬೇಟೆಗೆ ಇರುವ ವ್ಯತ್ಯಾಸ ತಿಳಿಸಿರಿ.
4) ಯಂತ್ರದ ದೋಣಿಗಳನ್ನು ಮೀನಿನ ಬೇಟೆಗೆ ಸಿದ್ದಮಾಡುವ ವಿಧಾನವನ್ನು ತಿಳಿಸಿರಿ.
5) ಮತ್ಸ್ಯಕಾರರ "ಟೂಲ್‌ಕಿಟ್"ನಲ್ಲಿ ಏನೇನು ಇರುತ್ತವೆ?
6) ಭೂಮಿ ಮೇಲ್ಮೈಗೆ ಸಮುದ್ರದ ತಳಭಾಗಕ್ಕೆ ಮಧ್ಯೆ ಇರುವ ಹೋಲಿಕೆಗಳೇನು?
7) ನಿಮ್ಮ ಗ್ರಾಮ/ಪಟ್ಟಣ ಹತ್ತಿರದಲ್ಲಿರುವ ವಿವಿಧ ಜಲ ಭಾಗಗಳ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಶೇಕರಿಸಿ ಅವುಗಳ ಲಾಭಗಳನ್ನು ವಿಶ್ಲೇಷಿಸಿ.

ಕ್ರಮ ಸಂಖ್ಯೆ	ಜಲಭಾಗದ ಹೆಸರು	ಉಪಯೋಗಗಳು	ಪರಿಮಿತಿಗಳು

8) ಮತ್ಸ್ಯಕಾರರ ಜೀವನ ವಿಧಾನದ ಮೇಲೆ ಚಿತ್ರಗಳನ್ನು ಶೇಕರಿಸಿ ಆಲ್ಬಮ್ ತಯಾರು ಮಾಡಿರಿ.
9) ಮತ್ಸ್ಯಕಾರರು ಹಣಕ್ಕೋಸ್ಕರ ಮಧ್ಯವರ್ತಿಗಳ ಮೇಲೆ ಆಧಾರ ಪಡದೇ ಇರಬೇಕೆಂದರೆ ನೀವು ಸೂಚಿಸುವ ಪರಿಷ್ಕಾರಗಳು ಯಾವುವು.
10) ಕಳೆದ ನಾಲ್ಕು ಪಾಠಗಳಲ್ಲಿ ನೀರಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಓದಿದ್ದಿರಿ. ಭೂಮಿಯ ಮೇಲೆ ನೀರಿನ ಲಭ್ಯತೆ ಕುರಿತು ಮತ್ತಷ್ಟು ಸಮಾಚಾರ ಕೊಡಲಾಗಿದೆ. ಜಾಗ್ರತೆಯಿಂದ ಪರಿಶೀಲಿಸಿರಿ, ಭೂಮಿಯ ಮೇಲೆ ನೀರಿನ ಲಭ್ಯತೆ ಬಗ್ಗೆ ವ್ಯಾಖ್ಯಾನಿಸಿರಿ.



11) "ಮೀನುಗಾರರ ಜೀವನ ಸಮುದ್ರಗಳೊಂದಿಗೆ ಮುಡಿಪಟ್ಟಿದೆ." ಇದನ್ನು ನೀನು ಹೇಗೆ ಸಮರ್ಥಿಸುತ್ತೀಯಾ ?
12) 32ನೇ ಪುಟದಲ್ಲಿನ "ತೀರ ಮೈದಾನದಲ್ಲಿನ ಮೀನುಗಾರರ ಗ್ರಾಮ" ಪ್ಯಾರವನ್ನು ಓದಿ, ವಿವರಿಸಿರಿ.

SCERT TELANGANA

ಅಧ್ಯಾಯ 5

ಯೂರೋಪ್

ಯೂರೋಪ್ ನೆಲೆ:

ಯೂರೋಪ್‌ನ ನೆಲೆಯನ್ನು ಭಾರತದೇಶದಿಂದ ಯೂರೋಪ್‌ಗೆ ಇರುವ ದೂರವನ್ನು ತಿಳಿಯಲು ನಿಮಗೆ ಗ್ಲೋಬು ಅಥವಾ ಅಟ್ಲಾಸ್ ಅವಶ್ಯಕ. ಚಿತ್ರ –1ರಲ್ಲಿ ಯೂರೋಪ್‌ನ್ನು ಕಪ್ಪು ಬಣ್ಣದಿಂದ ತೋರಿಸಲಾಗಿದೆ. ಖಂಡಗಳ ಸರಿಹದ್ದನ್ನು ಗುರುತಿಸಿ. ಯೂರೋಪ್‌ನ ಉತ್ತರಕ್ಕೆ ಸಮುದ್ರ ಇದೆ. ನಕ್ಷೆಯಲ್ಲಿ ಅದನ್ನು ಗುರುತಿಸಿ. ಈ ಸಮುದ್ರವು ವರ್ಷವಿಡೀ ಗಡ್ಡೆಕಟ್ಟಿರುತ್ತದೆ.

- ಯೂರೋಪ್ ಖಂಡದಲ್ಲಿ ಪಶ್ಚಿಮದಲ್ಲಿರುವ ಸಮುದ್ರದ ಹೆಸರೇನು?


ಈ ಮಹಾಸಮುದ್ರವು ಯೂರೋಪ್‌ನ್ನು, ಉತ್ತರ ಅಮೇರಿಕಾ ಖಂಡವನ್ನು ಬೇರ್ಪಡಿಸುತ್ತದೆ. 500 ವರ್ಷಗಳ ಹಿಂದೆ ಯೂರೋಪ್‌ನಿಂದ ಅಮೇರಿಕಾದವರೆಗೆ ಸಮುದ್ರ ಮಾರ್ಗವನ್ನು ಕಂಡುಹಿಡಿದರು. ಲಕ್ಷಾಂತರ ಐರೋಪಾದ ಜನರು ಅಮೇರಿಕಾಕ್ಕೆ ವಲಸೆ ಬಂದು ನೆಲಸಿದ್ದರು.

- **ಯೂರೋಪ್‌ನ ದಕ್ಷಿಣಕ್ಕೆ ಇರುವ ಸಮುದ್ರದ ಹೆಸರನ್ನು ಅಟ್ಲಾಸ್ ನೋಡಿ ಗುರುತಿಸಿ.**

ಈ ಸಮುದ್ರದ ಉತ್ತರಕ್ಕೆ, ಯೂರೋಪ್, ದಕ್ಷಿಣಕ್ಕೆ ಆಫ್ರಿಕಾಗಳಿವೆ. ಈ ಸಮುದ್ರಕ್ಕೆ "ಮೆಡಿಟರೇನಿಯನ್ ಸಮುದ್ರ" ಎಂಬ ಹೆಸರು ಏಕೆ ಬಂದಿತು ಗೊತ್ತೇ?
ಇದು ಪ್ರಪಂಚದ ಮಧ್ಯಭಾಗವೆಂದು ಭಾವಿಸುವುದರಿಂದ ಇದಕ್ಕೆ ಆ ಹೆಸರು ಬಂದಿದೆ. ಪ್ರಾಚೀನ ಕಾಲದಲ್ಲಿ ಐರೋಪಾ ದೇಶದವರಿಗೆ ಅಮೇರಿಕಾ, ಆಸ್ಟ್ರೇಲಿಯಾದಂತಹ ಇತರೆ ಖಂಡಗಳ ಬಗ್ಗೆ ತಿಳೀಯದು. ಕೇವಲ ಯೂರೋಪ್, ಪಶ್ಚಿಮ ಏಷಿಯಾ, ಆಫ್ರಿಕಾದ ಉತ್ತರ ಪ್ರಾಂತಗಳು ಮಾತ್ರ ಅವರಿಗೆ ಗೊತ್ತು. ಈ ಪ್ರಾಂತ್ಯಗಳೆಲ್ಲ ಮೆಡಿಟೆರೀನಿಯನ್ ಸಮುದ್ರದ ಸುತ್ತಲು ಆವರಿಸಿವೆ. ಆದ್ದರಿಂದ ಐರೋಪ್ಯದವರು ಪ್ರಪಂಚದ ಮಧ್ಯದಲ್ಲಿ "ಸಮುದ್ರವಿದೆ" ಎಂದು ಭಾವಿಸಿದರು. ಇಂದಿಗೂ ಸಹಾ ಅದೇ ಹೆಸರು ಮುಂದುವರಿಯುತ್ತಲಿದೆ.

- ಯುರೋಪ್‌ಗೆ ಪೂರ್ವಕ್ಕೆ ಇರುವ ಪರ್ವತಗಳ ಹೆಸರುಗಳನ್ನು ತಿಳಿಸಿ.

ಇವು ಬಹಳಷ್ಟು ಎತ್ತರವಾದ ಪರ್ವತಗಳಲ್ಲ. ಇವು ಯುರೋಪಿಗೆ ಪೂರ್ವ ಸರಿಹದ್ದುಗಳಾಗಿವೆ. ಈ ಪರ್ವತ ಗಳಿಗೆ ಪೂರ್ವಕ್ಕೆ ಏಷಿಯಾ, ಪಶ್ಚಿಮಕ್ಕೆ ಯೂರೋಪ್ ಗಳಿವೆ. ವಾಸ್ತವವಾಗಿ ಏಷಿಯಾ, ಯೂರೋಪ್‌ಗಳು ಬೆರೆತಿವೆ. ಆದ್ದರಿಂದ ಈ ಪ್ರಾಂತವನ್ನು "ಯುರೇಷಿಯಾ" ಎಂದು ಕರೆದರು.



ಪಟ 1 ಯೂರೋಪ್ ಖಂಡದ ನೆಲೆ

SCERT TELANGANA

- ಈಗ ಯೂರೋಪ್ ನೆಲೆ ಬಗ್ಗೆ ನಿಮಗೆ ಚೆನ್ನಾಗಿ ತಿಳಿಯಿತು. ಯೂರೋಪ್‌ನಲ್ಲಿರುವ ದೇಶಗಳ ಹೆಸರುಗಳನ್ನು ನಕ್ಷೆ–2ನ್ನು ನೋಡಿ ಬರೆಯಿರಿ. ನೀವು ಯಾವಾಗಲಾದರು ಅಂತಹ ದೇಶಗಳ ಹೆಸರುಗಳನ್ನು ಕೇಳಿರುವಿರಾ?
- ಚಿತ್ರಪಟ–3ನ್ನು ಖಾಲಿ ಬಿಡಲಾಗಿದೆ ಅದನ್ನು ನೀವು ಬಳಸಿಕೊಳ್ಳಲು ಕೊಡಲಾಗಿದೆ. ಅದರಲ್ಲಿ ಐರೋಪಾ ದೇಶಗಳನ್ನು ಗುರುತಿಸಿ ಅವುಗಳಿಗೆ ವಿವಿಧ ಬಗೆಯ ಬಣ್ಣಹಾಕಿರಿ. ಯಾವ ಎರಡು ಅಕ್ಕಪಕ್ಕದ ರಾಷ್ಟ್ರಗಳಿಗೆ ಒಂದೇ ವಿಧವಾದ ಬಣ್ಣ ಹಾಕಬಾರದು.

ಪರ್ವತಗಳು, ಮೈದಾನಗಳು, ನದಿಗಳು:

ನಾವೀಗ ನಕ್ಷೆ–4ರಲ್ಲಿ ಯೂರೋಪ್‌ನಲ್ಲಿರುವ ಪರ್ವತಗಳು, ನದಿಗಳು, ಮೈದಾನಗಳ ಬಗ್ಗೆ ಮತ್ತಷ್ಟು ತಿಳಿಯೋಣ. ಯರೋಪ್‌ನಲ್ಲಿ ಅಧಿಕವಾದ ಮಂಜುಗಡ್ಡೆಯಿಂದ ಆವೃತಗೊಂಡ ಹಿಮಪರ್ವತಗಳು ಇವೆ. ಚಿತ್ರಪಟದಲ್ಲಿ ಆಲ್ಪ್ಸ್, ಪೈರಿನೀಸ್, ಪರ್ವತಗಳನ್ನು ಗಮನಿಸಿ ಆಲ್ಪ್ಸ್ ಪರ್ವತ ಶ್ರೇಣಿಗಳು ಬಹಳ ಮುಖ್ಯವಾದವುಗಳು. ಇವು ವರ್ಷವಿಡೀ ಮಂಜುಗಡ್ಡೆಯಿಂದ ಮುಚ್ಚಲ್ಪಟ್ಟಿರುತ್ತದೆ.

- ಅನೇಕ ದೇಶಗಳಿಗೆ ಅಂಟಿಕೊಂಡಿರುವ "ಆಲ್ಪ್ಸ್" ಪರ್ವತ ಶ್ರೇಣಿಗಳನ್ನು 2.4 ನಕ್ಷೆಗಳಲ್ಲಿ ಹೋಲಿಸಿ ದೇಶಗಳನ್ನು ಗುರುತಿಸಿ.
- ಆಲ್ಪ್ಸ್ ಪರ್ವತಗಳಲ್ಲಿ ಪ್ರಾರಂಭವಾಗುವ ಎರಡು ನದಿಗಳ ಹೆಸರುಗಳನ್ನು ಬರೆಯಿರಿ.
- ಪೈರಿನೀಸ್ ಪರ್ವತಗಳಿಗೆ ಅಂಟಿಕೊಂಡಿರುವ ಸರಿಹದ್ದು ದೇಶಗಳ ಹೆಸರುಗಳನ್ನು ಬರೆಯಿರಿ.
- ಪೂರ್ವ ಐರೋಪಾ ಸರಿಹದ್ದಿನಲ್ಲಿರುವ ಪರ್ವತ ಶ್ರೇಣಿಗಳು ಯಾವುವು?
- ಯೂರೋಪ್‌ನಲ್ಲಿರುವ ಇತರೆ ಪರ್ವತ ಶ್ರೇಣಿಗಳು ಯಾವುವು?
- ಯೂರೋಪ್ ನಲ್ಲಿ ಇತರ ಪರ್ವತ ಶ್ರೇಣಿಗಳನ್ನು ಗುರುತಿಸಿ ಒಂದು ಪಟ್ಟಿಕೆ ತಯಾರಿಸಿ.



ಚಿತ್ರ 5.1 ಪಶ್ಚಿಮ ಯೂರಪ್‌ನಲ್ಲಿರುವ ಹಂಗರಿ ದೇಶ, ಡಾನ್ಯೂಬ್ ನದಿ ದಂಡೆಯಲ್ಲಿರುವ ಬುಡಾಪೆಸ್ಟ್ ನಗರ

ದಕ್ಷಿಣ ಯೂರೋಪ್ ಖಂಡದ ಸರಿಹದ್ದಿನಲ್ಲಿ ಕ್ಯಾಸ್ಪಿಯನ್ ಸಮುದ್ರಕ್ಕೂ, ಕಪ್ಪು ಸಮುದ್ರಕ್ಕೂ ಮಧ್ಯದಲ್ಲಿ "ಕಾನಸ್ ಪರ್ವತಗಳು" ಇವೆ. ಇವು ಸಹ ಬಹಳ ಎತ್ತರವಾಗಿವೆ. ವರ್ಷವಿಡೀ ಮಂಜಿನಿಂದ ಆವೃತ್ತಗೊಂಡಿರುತ್ತದೆ.

ಯೂರೋಪ್, ಏಷಿಯಾ ಖಂಡಗಳ ಮಧ್ಯೆ ಬಹಳ ವ್ಯತ್ಯಾಸ ಕಾಣಿಸುತ್ತಿದೆ. ಏಷಿಯಾದಲ್ಲಿ ಬಹಳ ವಿಶಾಲವಾದ "ಪ್ರಸ್ಥ ಭೂಮಿಗಳಿವೆ". ಆದರೆ ಯೂರೋಪ್ ನಲ್ಲಿ ಇಂತಹ ಪ್ರಸ್ಥಭೂಮಿಗಳಿಲ್ಲ. ಆದರೆ ಜರ್ಮನಿ, ಫ್ರಾನ್ಸ್, ಸ್ಪೆಯಿನ್‌ಗಳಲ್ಲಿ ಚಿಕ್ಕ ಚಿಕ್ಕ ಪ್ರಸ್ಥ ಭೂಮಿಗಳಿವೆ. ಯೂರೋಪ್‌ನಲ್ಲಿ ವಿಶಾಲವಾದ ಮೈದಾನಗಳಿವೆ. ಪೂರ್ವ ಪ್ರಾಂತದಲ್ಲಿ ರಷ್ಯಾ, ಉಕ್ರೇಯಿನ್, ಪೋಲೆಂಡ್, ಬೈಲೋ ರಷ್ಯಾ ದೇಶಗಳವರೆಗೂ ವಿಸ್ತರಣೆಗೊಂಡಿವೆ. ಈ ಮೈದಾನಗಳು ಹೆಚ್ಚು ಮಂಜುಗಡ್ಡೆಯಿಂದ ಕೂಡಿಕೊಂಡಿರುವುದರಿಂದ ಚಳಿಗಾಲದಲ್ಲಿ ಅತ್ಯಧಿಕವಾಗಿ ಚಳಿಗಾಳಿ ಬೀಸುತ್ತವೆ. ಬೇಸಿಗೆಯಲ್ಲಿ ಮಂಜುಕರಗಿ ಚಿಕ್ಕ ಕಾಲುವೆಗಳಾಗಿ ನೀರು ಹರಿದು ದೊಡ್ಡ ನದಿಗಳುಂಟಾಗುತ್ತವೆ. ಯೂರೋಪನಲ್ಲಿನ ಉದ್ದವಾದ ನದಿಗಳಾದ ಓಲ್ಗಾ, ನೈಪರ್ ನದಿಗಳು ಹೇಗೆ ಏರ್ಪಟ್ಟು ಪ್ರವಹಿಸುವವುಗಳು.

ಯೂರೋಪ್‌ನಲ್ಲಿರುವ ನದಿಗಳು ಕೇವಲ ವ್ಯವಸಾಯ ನೀರಿನ ಸರಬರಾಜಿಗೆ ಅಲ್ಲದೇ ಜಲಸಾರಿಗೆ ವ್ಯವಸ್ಥೆಗೂ ಅನುಕೂಲವಾಗಿರುತ್ತವೆ. ಹಡಗುಗಳು, ಸ್ಟೀಮರ್ ಮುಂತಾದವುಗಳು ಒಂದು ಪ್ರಾಂತ್ಯದಿಂದ ಮತ್ತೊಂದು

SCERT TELANGANA

ಪಟ.2 ಯುರೋಪ್ ರಾಜಕೀಯ
ಭೂಪಟ

© SCERT TELANGANA

ಯೂರೋಪ್ ಖಂಡ್ಯದ
ಭೂಪಟ



SCERT TELANGANA

ಭೂಪಟ.3 ಯೂರೋಪ್ ಭೌತಿಕ
ಯೂರಲ್ ಪರ್ವತಗಳು
ಓಲ್ಗಾ ನದಿ
ಸೈಬೀರಿಯಾ
ಕ್ಯಾಸ್ಪಿಯನ್ ಸಮುದ್ರ
ಕಾಕಸಸ್
ಕಪ್ಪು ಸಮುದ್ರ
ಆರ್ಕ್‌ಟಿಕ್ ಸಮುದ್ರ
ಉತ್ತರ ಡಿವಿನಾ ನದಿ
ಪೆಚೋರಾ ನದಿ
ಪೆಚೋರಾ ನದಿ
ಬಿಸ್ಕೆ ಕೊಲ್ಲಿ
ಸ್ಕಾಂಡಿನೇವಿಯನ್ ಪರ್ವತಗಳು
ಬಿಸ್ಕೆ ಕೊಲ್ಲಿ
ಪೆನ್ನೀನ್ ಪರ್ವತಗಳು

ಪ್ರಾಂತ್ಯಕ್ಕೆ ಸರಕುಗಳನ್ನು, ಮನುಷ್ಯರನ್ನು ಕೊಂಡೊಯ್ಯುತ್ತವೆ. ಈ ನದಿಗಳು ಅನೇಕ ದೇಶಗಳೊಂದಿಗೆ ಸಾರಿಗೆ ಸೌಕರ್ಯಗಳು ವ್ಯವಸ್ಥೆಯಿದ್ದು, ಅಂತರ್ಜಾತಿಯ ವ್ಯಾಪಾರಕ್ಕೆ ಅನುಕೂಲ ವಾಗಿದ್ದು, ಅಟ್ಲಾಂಟಿಕ್ ಮಹಾ ಸಮುದ್ರದಲ್ಲಿ ಸೇರುತ್ತವೆ. ಈ ನದಿಗಳ ತೀರದ ಉದ್ದಕ್ಕೂ ಮೂಲಭೂತ ಕಾರ್ಖಾನೆಗಳು, ಖನಿಜಗಳು, ಪಟ್ಟಣಗಳು ಇವೆ. ಅನೇಕ ಪಟ್ಟಣಗಳ ಜೊತೆ ಖಂಡಾಂತರ ವ್ಯಾಪಾರ ವೊಲ್ಗಾ ನದಿ ಮೂಲಕ ನಡೆಯುತ್ತದೆ. ಹಾಗೆಯೇ "ವೊಲ್ಗಾ" ನದಿಯು ಕಾಸ್ಪಿಯನ್ ಸಮುದ್ರದಲ್ಲಿ ಸೇರುವುದು. ಅದು ಒಂದು ದೊಡ್ಡ ಸರೋವರದಂತ್ತಿದೆ. ಈ ನದಿ ಮೂಲಕ ವ್ಯಾಪಾರ ಮಾಡುವುದು ಕಷ್ಟವೇ. ಆದ್ದರಿಂದ ಓಲ್ಗಾ ನದಿಯ ಮೂಲಕ ಜಲಸಾರಿಗೆಯಿಂದ ಖಂಡಗಳ ಮಧ್ಯೆ ವ್ಯಾಪಾರ ಮಾಡಲಿಕ್ಕೆ ಸಾಧ್ಯವಿಲ್ಲದಂತಾಗಿದೆ.

- **2,4 ಚಿತ್ರ ಪಟದ ಸಹಾಯದಿಂದ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

  "ರೈನ್"ನದಿ ಯಾವ ದೇಶಗಳಲ್ಲಿ ಪ್ರವಹಿಸುತ್ತದೆ?
  (1) ..... (2) .....
  (3) ..... (4) .....
  (5) .....

- ಡಾನ್ಯೂಬ್ ನದಿ ಯಾವ ದೇಶಗಳಲ್ಲಿ ಪ್ರವಹಿಸುತ್ತದೆ?
  (1) ..... (2) .....
  (3) ..... (4) .....
  (5) .....

- "ಹಂಗೇರಿ" ಮೈದಾನ ಪ್ರಾಂತದ ಸರಿಹದ್ದುಗಳಲ್ಲಿ ಇರುವ "ಎರಡು ಪರ್ವತ ಶ್ರೇಣಿಗಳ" ಹೆಸರು ಬರೆಯಿರಿ.
  (1) ..... (2) .....

- "ಕಪ್ಪು ಸಮುದ್ರದ" ಸುತ್ತಲು ಯಾವ ಯಾವ ದೇಶಗಳಿವೆ?
  (1) ..... (2) .....
  (3) ..... (4) .....
  (5) .....

- ಈ ಕೆಳಗೆ ತಿಳಿಸಿದ ನದಿಗಳ ಯಾವ ಮಹಾಸಾಗರದಲ್ಲಿ ಅಥವಾ ಸಮುದ್ರದಲ್ಲಿ ಸೇರುತ್ತಿವೆ?


ನದಿಗಳು	ಮಹಾಸಮುದ್ರ/ಸಮುದ್ರ
1. ಸ್ಪೆಯಿನ್	
2. ರೈನ್	
3. ಓಡರ್	
4. ಪೊ	
5. ಡಾನ್ಯೂಬ್	
6. ವಿಸ್ಟೂಲ್	
7. ವೊಲ್ಗಾ	
8. ನೈಫರ್	
9. ಡಾನ್	
10. ವಿನಾ	

ಪರ್ಯಾಯದ್ವೀಪ, ದ್ವೀಪಗಳು, ಕೊಲ್ಲಿಗಳು: (Peninsulas,Islands and Bays) :

ನಕ್ಷೆಯಲ್ಲಿ ಯೂರೋಪ್ ಸಮುದ್ರ ತೀರವನ್ನು ನೋಡಿದರೆ ಸಮುದ್ರ ತೀರವು ಒಂದೇ ವಿಧವಾಗಿ ಇರುವುದಿಲ್ಲ ಎಂದು ತಿಳಿಯುತ್ತದೆ. ಬಹಳ ಪ್ರಾಂತ್ಯಗಳಲ್ಲಿ ಸಮುದ್ರ ತೀರ ಪ್ರಾಂತ್ಯವು ಭೂಭಾಗದೊಳಕ್ಕೆ ಆಳವಾಗಿ, ಬಾಲ್ಟಿಕ್ ಸಮುದ್ರದೊಳಕ್ಕೆ ಚೊಚ್ಚಿಕೊಂಡು ಬಂದಂತಿರುತ್ತದೆ.

ಭೂಭಾಗವು ಇಟಲೀ ಸಮುದ್ರತೀರದಂತೆ ಬಹಳ ವಿಶಾಲವಾಗಿ ವಿಸ್ತರಿಸುತ್ತದೆ.

ಇಟಲಿ ದೇಶಕ್ಕೆ ಮೂರು ಕಡೆ ಸಮುದ್ರವು ಆವರಿಸಿದ್ದು, ಭೂಭಾಗದ ಮೂರು ಕಡೆ ಸಮುದ್ರದಿಂದ ಆವೃತ್ತವಾಗಿದ್ದು, ನಾಲ್ಕನೇ ಕಡೆ ಪ್ರಧಾನ ಭೂಭಾಗದ ಜೊತೆ ಬೆರೆತಿರುತ್ತದೆ. ಅಂದರೆ ಮೂರು ಕಡೆ ನೀರು ಇದ್ದು ಒಂದು ಕಡೆ ಭೂಭಾಗವಿದ್ದರೆ ಅದನ್ನು "ಪರ್ಯಾಯ ದ್ವೀಪ" ಎನ್ನುವರು (ಚಿತ್ರ2) ನಾರ್ವೆ



ಚಿತ್ರ 5.2 ಪರ್ಯಾಯ ದ್ವೀಪ, ಕೊಲ್ಲಿ

SCERT TELANGANA

ಸ್ವೀಡನ್‌ಗಳು ಸಹಾ ಇದರಲ್ಲಿಯ ಭಾಗಗಳೇ ನೋಡಿರಿ. ಈ ಪರ್ಯಾಯ ದ್ವೀಪನ್ನು "ಸ್ಕಾಂಡಿನೇವೆಯಾ" "ಪರ್ಯಾಯ ದ್ವೀಪ" ಎನ್ನುವರು.

- ಈ ಎರಡರಲ್ಲಿ ಯಾವುದು ಪರ್ಯಾಯ ದ್ವೀಪ– ಗ್ರೀಸ್, ಫ್ರಾನ್ಸ್. .
- ಸೈಯಿನ್, ಪೋರ್ಚುಗಲ್ ಸಹ ಪರ್ಯಾಯ ದ್ವೀಪಗಳೇ?
- ಸ್ಕಾಂಡಿನೇನಿಯಾ ಪರ್ಯಾಯ ದ್ವೀಪದಲ್ಲಿ ಇರುವ ಪರ್ವತ ಶ್ರೇಣಿಗಳನ್ನು ಹೆಸರಿಸಿ.

ಯೂರೋಪ್ ಖಂಡದಲ್ಲಿ ಕೆಲವು ದೇಶಗಳು ಮೂರು ಕಡೆ ನೀರು ಇಲ್ಲದೆ, ನಾಲ್ಕುಕಡೆ ನೀರಿದ್ದು, ಒಂದು ಕಡೆಯು ಭೂಭಾಗವಿಲ್ಲದ "ದ್ವೀಪ" ದೇಶಗಳಿವೆ. ಅದರಲ್ಲಿ "ಗ್ರೇಟ್ ಬಿಟನ್" ಒಂದು.

- ಯೂರೋಪ್‌ನಲ್ಲಿರುವ ಇನ್ನೂ ಕೆಲವು ದ್ವೀಪ ದೇಶಗಳನು ಗುರುತಿಸಿರಿ.

ಪ್ರಾಚೀನ ಕಾಲದಿಂದಲೂ ಸಮುದ್ರಗಳು, ಪರ್ಯಾಯ ದ್ವೀಪಗಳು, ದ್ವೀಪಗಳು, ಪ್ರಜೆಗಳ ಜೀವನ ವಿಧಾನವನ್ನು ಬಹಳ ಪ್ರಭಾವಿತಗೊಳಿಸಿವೆ. ಮಧ್ಯ, ದಕ್ಷಿಣ ಯೂರೋಪ್‌ನಲ್ಲಿ ಹೆಚ್ಚಿನ ಭಾಗವು ಪರ್ವತ ಪ್ರಾಂತಗಳು ಆದ್ದರಿಂದ ಸಾರಿಗೆ ಬಹಳ ಕಷ್ಟಕರವಾದದ್ದು, ಹಾಗೂ ಖರ್ಚಿನಿಂದ ಕೂಡಿಕೊಂಡಿದ್ದು ಇದಕ್ಕೆ ಹೋಲಿಸಿದರೇ "ಸಮುದ್ರ ಪ್ರಯಾಣ" ಸುಲಭವಾದದ್ದು. ಸಾರಿಗೆ ಖರ್ಚು ತುಂಬಾ ಕಡಿಮೆ. ಆದ್ದರಿಂದಲೇ ಹಿಂದಿನ ಕಾಲದಲ್ಲಿ ಐರೋಪ್ಯ ದೇಶದವರು ಸಮುದ್ರ ಮಾರ್ಗಗಳನ್ನು ಹೆಚ್ಚಾಗಿ ಬಳಸಿದ್ದರು.

ದೊಡ್ಡ ಸಂಖ್ಯೆಯಲ್ಲಿರುವ ಆಳವಾದ ಕೊಲ್ಲಿಗಳು, ಭೂ ಭಾಗದೊಳಕ್ಕೆ ಚುಚ್ಚಿಕೊಂಡು ಬಂದಿರುವ ಸಮುದ್ರಗಳು (ಗಲ್ಫ್) ಸಮುದ್ರ ಪ್ರಯಾಣಕ್ಕೆ ಅವಕಾಶ ಒದಗಿಸಿದಂತಿದೆ. ಇವು ಮೂರುಕಡೆ ನೀರು ಆವರಿಸಿದವು. ಕೊಲ್ಲಿಗಳು ಮುಖದ್ವಾರದ ಹತ್ತಿರ ಸಾಧಾರಣವಾಗಿ ಅಗಲವಾಗಿ "ಬಂಗಾಳಕೊಲ್ಲಿ" ಯಂತಿರುತ್ತದೆ. "ಗಲ್ಫ್" ಮುಖದ್ವಾರವು ಬಹಳ ಇಕ್ಕಟ್ಟಾಗಿ ಇರುತ್ತದೆ. ಬಾಲ್ಟಿಕ್ ಸಮುದ್ರವನು ಚಿತ್ರಪಟದಲ್ಲಿ ನೋಡಿಸಿದರೆ ಅದು ಅತಿದೊಡ್ಡ "ಗಲ್ಫ್" ಪ್ರಾಂತ್ಯವಾಗಿ ಗುರುತಿಸಬಹುದು. ಕೊಲ್ಲಿಗಳು, "ಗಲ್ಫ್" ಪ್ರಾಂತ್ಯಗಳು ಇರುವುದರಿಂದ ಸಮುದ್ರದ ತುಫಾನ್ ಗಳಿಂದ "ನೌಕಾಶ್ರಯಗಳಿಗೆ" ರಕ್ಷಣೆಯಾಗಿ ನಿಲ್ಲುವವು. ಸರಕುಗಳನ್ನು ತುಂಬಲು, ಇಳಿಸಲು ಹಡಗುಗಳನ್ನು ಒಂದು ಕಡೆ ನಿಲ್ಲಿಸಲು ಅವು ಬಹಳ ಉಪಯುಕ್ತವಾಗಿವೆ. ನೌಕಾಶ್ರಯಗಳನ್ನು ನಿರ್ಮಿಸಲು ಸಮುದ್ರದ ಅಂತರ್ ಭೂಭಾಗಗಳಿಗೆ ಪ್ರಾಧಾನ್ಯತೆ ನೀಡುವುದರಿಂದ ಹಡಗಿನ ಕೆಳಭಾಗವು ಭೂಮಿಯನ್ನು ತಾಕುವುದಿಲ್ಲ.

- ಚಿತ್ರ ಪಟ–3ನ್ನು ಪರಿಶೀಲಿಸಿ ಬಾಲ್ಟಿಕ್ ಸಮುದ್ರದ ಮೂರು ಕಡೆ ಇರುವ ದೇಶಗಳ ಹೆಸರುಗಳನ್ನು ಬರೆಯಿರಿ.

ಶೀತೋಷ್ಣ ಸ್ಥಿತಿ:

ಯೂರೋಪ್ ಶೀತೋಷ್ಣ ಸ್ಥಿತಿ ನಮ್ಮ ದೇಶಕ್ಕಿಂತ ಬಹಳ ತಂಪಾಗಿರುತ್ತದೆ. ಅನೇಕ ದೇಶಗಳಲ್ಲಿ ಚಳಿಗಾಲದಲ್ಲಿ ಮಂಜು ಬೀಳುತ್ತದೆ. ಅಲ್ಲಿ ಬೇಸಿಗೆ ಕಾಲದಲ್ಲಿ ನಮ್ಮಲ್ಲಿ ಬೇಸಿಗೆಯ ತಾಪಮಾನಕ್ಕಿಂತ ಕಡಿಮೆ ಇರುತ್ತದೆ.

- ಐರೋಪ್ಯ ದೇಶದ ವಾತಾವರಣವು ಭಾರತ ದೇಶಕ್ಕಿಂತ ಭಿನ್ನವಾಗಿರುತ್ತದೆ ಎಂದು ನೀವು ಏಕೆ ಭಾವಿಸುತ್ತೀರಾ? ನಿಮ್ಮ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

ಭೂಮಧ್ಯರೇಖೆಯಿಂದ ದೂರ:

ಭೂಮಧ್ಯರೇಖೆಯ ಪ್ರಾಂತ್ಯದಿಂದ ನಾವು ಉತ್ತರದ ಕಡೆಗಾಗಲೀ, ದಕ್ಷಿಣದ ಕಡೆಗಾಗಲಿ ದೂರಕ್ಕೆ ಹೋದಹಾಗೆ ಆ ಪ್ರಾಂತ್ಯಗಳು ವರ್ಷವಿಡೀ ತಂಪಾಗಿರುತ್ತವೆ. ವಾಸ್ತವವಾಗಿ ಧ್ರುವಗಳ ಹತ್ತಿರ ವರ್ಷವೆಲ್ಲ ಮಂಜುಗಡ್ಡೆಯಿಂದ ಮುಚ್ಚಲ್ಪಟ್ಟಿರುತ್ತದೆ. ನಕಾಶೆ–1ನ್ನು ಪರಿಶೀಲಿಸಿರಿ.

- ಉತ್ತರ ಯೂರೋಪ್ ಭೂಮಧ್ಯ ರೇಖೆಯಿಂದ ಎಷ್ಟು ದೂರದಲ್ಲಿಯೋ ಗ್ಲೋಬಿನ ಮೇಲೆ ನೋಡಿ ತಿಳಿಯಿರಿ.
- ಭೂಮಧ್ಯ ರೇಖೆಗೆ ಉತ್ತರ ಯೂರೋಪ್ ಭಾರತದೇಶಕ್ಕಿಂತ ಬಹಳ ದೂರದಲ್ಲಿದೆಯಾ?
- ಇಟಲಿಗಿಂತ ನಾರ್ವೆ ಬಿಸಿಯಾಗಿರುತ್ತದೆ ಏಕೆ ?

ಅಟ್ಲಾಂಟಿಕ್ ಮಹಾಸಮುದ್ರ:

ಭೂಮಧ್ಯ ರೇಖೆಯಿಂದ ದೂರ ಮಾತ್ರವಲ್ಲ, ಇತರೆ ಕಾರಕಗಳು ಯೂರೋಪ್‌ನ್ನು ಪ್ರಭಾವಿತಗೊಳಿಸಿದೆ. ಅಟ್ಲಾಂಟಿಕ್ ಮಹಾಸಾಗರ, ಪವನಗಳು ಯೂರೋಪ್ ದೇಶದ ಶೀತೋಷ್ಣ ಸ್ಥಿತಿಯ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ. ಒಳಭಾಗದಲ್ಲಿರುವ ಭೂಭಾಗಗಳಿಗಿಂತ ಅಟ್ಲಾಂಟಿಕ್ ಮಹಾಸಾಗರದ ತೀರದಲ್ಲಿರುವ ಪ್ರಾಂತ್ಯಗಳೂ ಹೆಚ್ಚು ಪ್ರಭಾವಿತಗೊಂಡಿವೆ.

- ಅಟ್ಲಾಂಟಿಕ್ ಮಹಾಸಾಗರದ ಸಾಲಿನಲ್ಲಿರುವ ಯೂರೋಪ್ ಪ್ರಾಂತ್ಯಗಳನ್ನು ಗುರುತಿಸಿ ಅವು ಪೂರ್ವತೀರ ಪ್ರಾಂತ್ಯಗಳಾ, ಪಶ್ಚಿಮ ತೀರ ಪ್ರಾಂತಗಳಾ ?

ಶೀತಕಾಲದಲ್ಲಿ ಪಶ್ಚಿಮ ಯೂರೋಪಿನಲ್ಲಿ ಸಂಪೂರ್ಣ

SCERT TELANGANA

ತಂಪಾಗಿ, ಪೂರ್ವ ಯುರೋಪಿನಲ್ಲಿ ಮತ್ತಷ್ಟು ತಂಪಾಗಿ ಇರುತ್ತದೆ. ಆದ್ದರಿಂದ ಪೋಲಾಂಡ್‌ನಲ್ಲಿ ರಷ್ಯಾದಲ್ಲಿ ತೀರ್ವವಾದ ತಂಪು ಇರುತ್ತದೆ. ಫ್ರಾನ್ಸ್‌ನಲ್ಲಿ, ಗ್ರೇಟ್ ಬ್ರಿಟನ್‌ನಲ್ಲಿ ಬಿಸಿ ವಾತಾವರಣ ಇರುತ್ತದೆ. ಅವುಗಳಿಗಿಂತ ರಷ್ಯಾದಲ್ಲಿ ಶೀತಕಾಲದಲ್ಲಿ ಬಹಳ ತಂಪಾಗಿ ನದಿಗಳು, ಸಮುದ್ರಗಳು ಗಡ್ಡಿಕಟ್ಟುತ್ತವೆ. ಯಾವುದೇನಾದರೂ ಪಶ್ಚಿಮ ಯೂರೋಪ್ ಸಮುದ್ರತೀರದ ಪ್ರದೇಶಗಳಲ್ಲಿ ಇಂತಹ ಪರಿಸ್ಥಿತಿಗಳಿಲ್ಲ.

- ಸೈಯಿನ್ ಅಥವಾ ಸ್ಲೋವೇಕಿಯಾಗಳಲ್ಲಿ ಯಾವ ದೇಶದಲ್ಲಿ ಬಿಸಿ ತಾಪಮಾನ ಇರುತ್ತದೆ? ಚಿತ್ರಪಟ ನೋಡಿ ಗುರುತಿಸಿ.

ಪಶ್ಚಿಮ ಯೂರೋಪ್ ಅಟ್ಲಾಂಟಿಕ್ ಮಹಾಸಾಗರಕ್ಕೆ ಹತ್ತಿರದಲ್ಲಿರುವುದರಿಂದ ಅಲ್ಲಿಯ ಪರಿಸ್ಥಿತಿಯನ್ನು ನೀವು ಅಂದಾಜು ಹಾಕಿರುವಿರಿ. ಈ ಮಹಾ ಸಾಗರವು ಯೂರೋಪ್ ಶೀತೋಷ್ಣಸ್ಥಿತಿಯ ಮೇಲೆ ಹೇಗೆ ಪ್ರಭಾವಗೊಳಿಸುವುದೋ ನೋಡೋಣ.

ಪಶ್ಚಿಮ ಪವನಗಳು (Westerlies) :


ವರ್ಷವಿಡೀ ಅಟ್ಲಾಂಟಿಕ್ ಮಹಾಸಮುದ್ರದಿಂದ ಪವನಗಳು (ಗಾಳಿಯು) ಯೂರೋಪ್ ಕಡೆ ಬೀಸುವವು. ಪಶ್ಚಿಮ ದಿಶೆಯಿಂದ ಬೀಸುವ ಈ ಗಾಳಿಯನ್ನು "ಪಶ್ಚಿಮ ಪವನಗಳು" ಎಂದು ಕರೆಯುತ್ತಾರೆ. (ಈ ಗಾಳಿಗಳು ನೈರುತಿ ದಿಶೆಯಿಂದ ಈಶಾನ್ಯದ ಕಡೆ ಬೀಸುತ್ತವೆ) ಇವು ಭೂಮಿಯ ಮೇಲಿನ ಉಷ್ಣತೆಗಿಂತ ಹೆಚ್ಚಿನ ತೇವಾಂಶವನ್ನು ಒಳಗೊಂಡಿದೆ. ಈ ಪಶ್ಚಿಮ ಪವನಗಳು ವರ್ಷವಿಡೀ ಬೀಸುತ್ತಾ ಯೂರೋಪ್ ಶೀತೋಷ್ಣ ಸ್ಥಿತಿಯನ್ನು ಪ್ರಭಾವಿತಗೊಳಿಸಿವೆ.

- ಪಶ್ಚಿಮ ಪವನಗಳು ಯೂರೋಪ್ ಮೇಲೆ ಎಂತಹ ಪ್ರಭಾವ ಬೀರುತ್ತವೆಯೋ ಹೇಳಿರಿ.


ಕವೋಷ್ಣ ಸಮುದ್ರ ಪ್ರವಾಹಗಳು (Warm Ocean Currents) :

ಸಮುದ್ರ ಜಲಗಳು ಯಾವಾಗಲು ನಿಶ್ಚಲವಾಗಿರುವುದಿಲ್ಲ. ಅವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಖಂಡಗಳೂದ್ದಕ್ಕೂ ಪ್ರವಹಿಸುವವು. ಇವುಗಳನ್ನೆಲ್ಲ "ಸಮುದ್ರಪ್ರವಾಹಗಳು" ಎನ್ನುವರು. ಇವು ಸಾವಿರಾರು ಕಿ.ಮೀ.ವರೆಗೂ ನದಿಗಳಂತೆ ಪ್ರವಹಿಸುತ್ತವೆ.

ಇಂತಹ ಸಮುದ್ರ ಪ್ರವಾಹಗಳು ಅಟ್ಲಾಂಟಿಕ್ ಮಹಾಸಾಗರದಲ್ಲಿ ಕಂಡು ಬರುತ್ತವೆ. ಭೂಮಧ್ಯರೇಖೆಯ ಹತ್ತಿರ ಇರುವ ಉಷ್ಣತೆಯಿಂದ ವರ್ಷವಿಡೀ ಈ ಪ್ರವಾಹಗಳು ಪ್ರವಹಿಸುವವು. ಆದ್ದರಿಂದ ಇವುಗಳನ್ನು "ಕವೋಷ್ಣ ಸಮುದ್ರ ಪ್ರವಾಹಗಳು" ಎಂದು ಕರೆಯುವರು. ಈ ಪವನಗಳು ಪಶ್ಚಿಮ ದಿಶೆ ಯಿಂದ ಉತ್ತರ ಅಮೇರಿಕಾದ ಕಡೆಗೆ ಪಯಣಿಸುವವು. ಅಮೇರಿಕಾ ಈಶಾನ್ಯ ತೀರ ಪ್ರಾಂತ್ಯಗಳನ್ನು ಈ ಪವನಗಳು ಪ್ರಭಾವಿತಗೊಳಿಸುವವು. ಆನಂತರ ಯೂರೋಪ್ ಕಡೆಗೆ ಬೀಸುವವು. ಈ



ಚಿತ್ರ 4 ಪಶ್ಚಿಮ ಪವನಗಳು



ಚಿತ್ರ 5 ಗಲ್ಫ್‌ಸ್ಟ್ರೀಮ್ .

SCERT TELANGANA

ಪ್ರವಾಹಗಳು ಯೂರೋಪ್‌ನಲ್ಲಿರುವ ಪಶ್ಚಿಮ ತೀರಗಳನ್ನು ತಾಕುವವು. ಈ ಪ್ರವಾಹಗಳನ್ನು "ಅಮೇರಿಕಾ ಗಲ್ಫ್" ಸ್ಟ್ರೀಮ್‌ಗಳೆಂದು ಯೂರೋಪ್‌ನಲ್ಲಿ "ಡ್ರಿಫ್ಟ್" ಎಂದು ಕರೆಯುವರು.

ಗಲ್ಫ್ ಪ್ರವಾಹಗಳಿಗೆ ಕಾರಣದಿಂದ ಉತ್ತರ ಅಮೇರಿಕಾದ ಪೂರ್ವ ತೀರಪ್ರಾಂತ್ಯದ ಜಲಗಳು, ಯೂರೋಪ್‌ನ ಪಶ್ಚಿಮತೀರದ ಜಲಗಳು ಗಡ್ಡೆ ಕಟ್ಟುವುದಿಲ್ಲ. ಆದ್ದರಿಂದ ಹಡಗುಗಳು ಚಳಿಗಾಲದಲ್ಲೂ ಸಹ ತೀರಪ್ರಾಂತ್ಯದ "ಬಂದರುಗಳಿಗೆ" ಸೇರುತ್ತವೆ.

- ಉಷ್ಣ ಪ್ರವಾಹಗಳು ಪೂರ್ವ ಯೂರೋಪ್ ಶೀತೋಷ್ಣ ಸ್ಥಿತಿಯನ್ನು ಏಕೆ ಗಂಭೀರವಾಗಿ ಪರಿಣಾಮಗೊಳಿಸುವುದಿಲ್ಲವೆಂದು ನೀವು ಭಾವಿಸುವಿರಿ?
- **ಖಾಲೀ ಸ್ಥಳಗಳನ್ನು ತುಂಬಿರಿ:**
- ಭೂ ಮಧ್ಯರೇಖೆಗೆ ಹತ್ತಿರದಲ್ಲಿರುವ ಜಲ ..... ರೀತಿಯಲ್ಲಿರುತ್ತವೆ (ಬಿಸಿಯಾದ, ತಂಪಾದ, ಬಹಳ ತಂಪಾಗಿ (icy-cold))
- ಭೂಮಧ್ಯ ರೇಖೆಗೆ ಹತ್ತಿರದಲ್ಲಿರುವ ಉಷ್ಣ ಪ್ರವಾಹಗಳು.....ಅಮೇರಿಕಾ ತೀರ ಪ್ರಾಂತ್ಯಗಳಿಗೆ ಸೇರುತ್ತವೆ. (ಪೂರ್ವದೆಡೆಗೆ,ಪಶ್ಚಿಮದೆಡೆಗೆ,ಉತ್ತರದ ಕಡೆಗೆ)
- ಉಷ್ಣ ಪ್ರವಾಹಗಳು ..... ದಿಂದ ಪ್ರಾರಂಭಗೊಳ್ಳುವವು (ಅಟ್ಲಾಂಟಿಕ್ ಮಹಾ ಸಾಗರ/ ಮೆಡಿಟೆರೀಯನಿನ್ ಸಮುದ್ರ ಸಮುದ್ರ/ ಕಪ್ಪು ಸಮುದ್ರ)
- ಯೂರೋಪ್ ತೀರವನ್ನು ..... / ಗಲ್ಫ್ ಸ್ಟ್ರೀಮ್ ಪ್ರವಾಹದ ಜಲಗಳು ತಾಕುವವು (ತಂಪಾದ/ಬಿಸಿಯಾದ/ ಹಿಮದಿಂದ ಕೂಡಿದ).
- ಪಶ್ಚಿಮ ಪವನಗಳು ಅಟ್ಲಾಂಟಿಕ್ ಮಹಾಸಮುದ್ರ ದಿಂದ ಯೂರೋಪ್ ಕಡೆಗೆ ..... ಬೀಸುವವು. (ಚಳಿಗಾಲದಲ್ಲಿ/ಬೇಸಿಗೆಯಲ್ಲಿ/ವರ್ಷವಿಡೀ)
- ಈ ಪವನಗಳು **.....** (ಶುಷ್ಕಗಾಳಿ, ತೇವವಾದ ಗಾಳಿ, ಅತಿಶೀತಲ ಗಾಳಿ.)

ಪಶ್ಚಿಮ ಯೂರೋಪ್: ವರ್ಷವಿಡೀ ತುಂತುರು ಮಳೆ

(Western Europe - Showers all the year round) :

ಉತ್ತರ ಯೂರೋಪ್, ಪಶ್ಚಿಮ ಯೂರೋಪ್ ಪ್ರಾಂತ್ಯಗಳಲ್ಲಿ ಪಶ್ಚಿಮ ಪವನಗಳು ಅಪರಿಮಿತವಾದ ತೇವಾಂಶವನ್ನು ತುಂಬುವವು. ಈ ಪವನಗಳು ವರ್ಷವಿಡೀ ತೇವಾಂಶವನ್ನು ಹಿಡಿದಿಟ್ಟು ಕೊಂಡಿರುವುದ ರಿಂದ ಮಳೆ ಬರುವುದಕ್ಕೆ ಕಾರಣವಾಗಿದೆ. ಈ ಎರಡು ಪ್ರಾಂತ್ಯಗಳಲ್ಲಿ ವರ್ಷವಿಡೀ ಮಳೆ ಬೀಳುತ್ತದೆ. ಆದರೆ ನಮ್ಮ ದೇಶದಲ್ಲಿ ಮಳೆಮಾತ್ರ ಕೆಲವು ತಿಂಗಳುಗಳವರೆಗೆ ಮಾತ್ರ ಬರುತ್ತದೆ. ಪಶ್ಚಿಮ ಯೂರೋಪ್‌ನಲ್ಲಿ ವರ್ಷವಿಡೀ ತುಂತುರುಮಳೆ ಬೀಳುತ್ತಲೇ ಇರುತ್ತದೆ. ಆಕಾಶ ಯಾವಾಗಲೂ ಮೋಡಗಳಿಂದ ಕೂಡಿರುತ್ತದೆ. ಅದೇ ನಮ್ಮ ದೇಶದಲ್ಲಿ ಅಂತಹ ತುಂತುರು ಮಳೆಗಾಗಿ ಎದುರು ನೋಡುವೆವು. ಪಶ್ಚಿಮ ಯೂರೋಪ್‌ನಲ್ಲಿ ಪ್ರಕಾಶಮಾನವಾದ ಬಿಸಿಲಿಗೆ ಎದುರು ನೋಡುವರು.

- ಭಾರತದೇಶದ ಶೀತೋಷ್ಣ ಸ್ಥಿತಿಗೂ, ಯೂರೋಪ್ ದೇಶದ ಶೀತೋಷ್ಣ ಸ್ಥಿತಿಗೂ ಮಧ್ಯೆ ಎಂತಹ ವ್ಯತ್ಯಾಸ ಗಮನಿಸಿರುವೆ ?

ಪಶ್ಚಿಮ ಯೂರೋಪ್ ಪ್ರಾಂತ್ಯಗಳು ಉಷ್ಣ ಪ್ರವಾಹಗಳಿಂದ ಮತ್ತೊಂದು ರೀತಿಯ ಪ್ರಯೋಜನ ಪಡೆಯುವರು. ಮೀನುಗಳ ಸಾಕಾಣಿಕೆ ಉಷ್ಣ ಪ್ರವಾಹಗಳು ಅವಶ್ಯಕ. ಆದ್ದರಿಂದ ಮೀನುಗಳಿಗೆ ಬೇಕಾದ ಆಹಾರ ಲಭ್ಯವಾಗುತ್ತದೆ. ಬ್ರಿಟನ್‌ಗೆ ಸಮೀಪದಲ್ಲಿರುವ ಉತ್ತರ ಸಮುದ್ರದ ಹತ್ತಿರ "ಮತ್ಸ್ಯ ಪರಿಶ್ರಮ" ತುಂಬಾ ಅಭಿವೃದ್ಧಿಗೊಂಡಿದೆ. ಈ ಪ್ರಾಂತವನು "ಡಾಗರ್ ಬ್ಯಾಂಕು" ಎಂದು ಕರೆಯುತ್ತಾರೆ. ಐರೋಪಾ ಜನರಿಗೆ ಪ್ರಮುಖ ಮೀನು ಆಹಾರ. ಆದ್ದರಿಂದ ಮೀನು ಸಾಕಾಣಿಕೆ ಒಂದು "ಪ್ರಮುಖ ವೃತ್ತಿಯಾಗಿ" ಬದಲಾಗಿದೆ.

- ಡಾಗರ್ ಬ್ಯಾಂಕಿನಿಂದ ಎಷ್ಟು ಪ್ರದೇಶಗಳು ಪ್ರಯೋಜನ ಪಡೆಯುವವು?

ದಕ್ಷಿಣ ಯೂರೋಪ್‌ನಲ್ಲಿ ಮೆಡಿಟರೇನಿಯನ್ ಸಮುದ್ರ ಶೀತೋಷ್ಣ ಸ್ಥಿತಿ:

ದಕ್ಷಿಣ ಯೂರೋಪ್ ದೇಶಗಳನ್ನು ನಾವು ಗಮನಿಸಿದಂತಾದರೆ ಅವುಗಳಿಗೆ ದಕ್ಷಿಣದಲ್ಲಿ "ಮೆಡಿಟರೇನಿಯನ್ ಸಮುದ್ರ ಸಮುದ್ರ" ಇದೆ ಎಂದು ತಿಳಿಯುತ್ತದೆ. ಆದ್ದರಿಂದ ಅವುಗಳನ್ನು ಮೆಡಿಟರೇನಿಯನ್ ಸಮುದ್ರ ದೇಶಗಳೆಂದು ಕರೆಯುವರು. ಅಲ್ಲಿ ವಿಶಿಷ್ಟವಾದ ಶೀತೋಷ್ಣಸ್ಥಿತಿ ಇರುವುದಿರಂದ ಅದನ್ನು "ಮೆಡಿಟರೇನಿಯನ್ ಸಮುದ್ರ ಶೀತೋಷ್ಣ ಸ್ಥಿತಿ" ಎಂದು ಕರೆಯುವರು.

SCERT TELANGANA

- ನಕ್ಷೆ–2ನ್ನು ನೋಡಿ ನಾಲ್ಕು ಮೆಡಿಟರೇನಿಯನ್ ಸಮುದ್ರ ದೇಶಗಳ ಹೆಸರುಗಳನ್ನು ಬರೆಯಿರಿ. .

ಮೆಡಿಟರೇನಿಯನ್ ಸಮುದ್ರ ದೇಶಗಳು ಯೂರೋಪ್ ನಲ್ಲಿ ಹೆಚ್ಚಾಗಿ ದಕ್ಷಿಣ ಭಾಗದಲ್ಲಿವೆ. ಫಲಿತವಾಗಿ ಇಲ್ಲಿ ಚಳಿಗಾಲದಲ್ಲಿ ಚಳಿ ತುಂಬಾಕಡಿಮೆ. ಆದರೆ ಬೇಸಿಗೆಯಲ್ಲಿ ಬೆಚ್ಚಗೆ ಇರುತ್ತದೆ. ಇಲ್ಲಿ ವರ್ಷವಿಡೀ ಪಶ್ಚಿಮ ಯೂರೋಪ್‌ನ ಹಾಗೆ ಮಳೆ ಬೀಳುವುದಿಲ್ಲ. ಪಶ್ಚಿಮ ಗಾಳಿಗಳು ಇಲ್ಲಿ ಚಳಿಗಾಲದಲ್ಲಿ ಬೀಸುವವು. ಈ ಗಾಳಿಗಳು ಮೆಡಿಟರೇನಿಯನ್‌ಸಮುದ್ರ ದೇಶಗಳಿಗೆ ಮಳೆನೀಡುವವು. ಅಂದರೆ ಇಲ್ಲಿ ಚಳಿಗಾಲದಲ್ಲಿ ಮಳೆ, ಬೇಸಿಗೆಯಲ್ಲಿ ಶುಷ್ಕ ಪರಿಸ್ಥಿತಿಯಿಂದ **"ಮೆಡಿಟರೇನಿಯನ್‌ಸಮುದ್ರ ಶೀತೋಷ್ಣ ಸ್ಥಿತಿ"** ಎಂಬ ಪದ ಸ್ಥಿರವಾಯಿತು. ಇತರೆ ಖಂಡಗಳಲ್ಲಿಯು ಸಹಾ ಅನೇಕ ಪ್ರಾಂತಗಳಲ್ಲಿ **"ಮೆಡಿಟರೇನಿಯನ್‌ಸಮುದ್ರ ಶೀತೋಷ್ಣ ಸ್ಥಿತಿ"** ಇರುವುದು. ಈ ಶೀತೋಷ್ಣ ಸ್ಥಿತಿಯಿಂದ ಹಣ್ಣಿನ ತೋಟಗಳ ಬೆಳವಣಿಗೆಗೆ ತುಂಬಾ ಅನುಕೂಲ. ದ್ರಾಕ್ಷೀ, ಕಿತ್ತಳೆ, ಆಲಿವ್, ಫಿಗ್ಸ್ (ಅಂಜೂರ) ಮೊದಲಾದ ಹಣ್ಣಿನ ತೋಟಗಳನ್ನು ದಕ್ಷಿಣ ಯೂರೋಪ್‌ನಲ್ಲಿ ಬಹಳಷ್ಟು ಬೆಳೆಸುವರು.

- ಮೆಡಿಟರೇನಿಯನ್‌ಸಮುದ್ರ, ತೆಲಂಗಾಣ ಶೀತೋಷ್ಣತೆ ಸ್ಥಿತಿ ಈ ಕೆಳಗಿನವುಗಳ ಪರವಾಗಿ ಹೋಲಿಸಿ. (ಋತುಗಳು, ವರ್ಷಪಾತ)
- ನಿಮ್ಮ ರಾಜ್ಯದಲ್ಲಿ ಮಳೆಗಳು ಯಾವಾಗ ಹೆಚ್ಚು ಬೀಳುತ್ತದೆ?

  (ಬೇಸಿಗೆಕಾಲ, ಚಳಿಗಾಲದಲ್ಲಿ)
- ನಿಮ್ಮ ಪ್ರಾಂತ್ಯದಲ್ಲಿ ಚಳಿಗಾಲದಲ್ಲಿ ತುಂತುರು ಮಳೆ ಬಿದ್ದರೆ ಅದನ್ನು ನಿಮ್ಮ ಪ್ರದೇಶಿಕ ಭಾಷೆಯಲ್ಲಿ ಏನೆಂದು ಕರೆಯುವಿರಿ?
- ಮೀನುಗಳು ಹಿಡಿಯಲು ಪ್ರಧಾನವಾದ ಪ್ರಾಂತ .....
- ಹಣ್ಣಿನ ತೋಟಗಳ ಬೆಳವಣಿಗೆಗೆ ಪ್ರಮುಖ ವಾದ್ದು.....

ನಾಲ್ಕು ಕಾಲಗಳು – ವ್ಯವಸಾಯ :

ನಮ್ಮ ದೇಶದಲ್ಲಿ ಚಳಿಕಾಲ, ಬೇಸಿಗೆಕಾಲ, ಮಳೆಗಾಲ ಎಂಬ ಮೂರು ಕಾಲಗಳಿವೆ. ಬಹಳಷ್ಟು ಯುರೋಪ್ ದೇಶಗಳಲ್ಲಿ ನಾಲ್ಕು ಕಾಲಗಳಿವೆ. ಅವು ಚಳಿಗಾಲ, ವಸಂತಕಾಲ, ಬೇಸಿಗೆಕಾಲ, ಶರತ್ಕಾಲ. ಕಾಲಗಳಿಗನುಗುಣವಾಗಿ ಆಯಾ ಪ್ರದೇಶಗಳ ದೃಶ್ಯ ಬದಲಾಗುತ್ತದೆ. ಹಾಗೆಯೇ ವ್ಯವಸಾಯ ಬೆಳೆಗಳು ಬದಲಾಗುತ್ತವೆ. ನಿಮಗೆ ಕೊಟ್ಟ ಚಿತ್ರಗಳ ಮೂಲಕ ಕಾಲಗಳಿಗನುಗುಣವಾಗಿ ಬದಲಾದ ಪ್ರದೇಶಗಳನ್ನು ಗಮನಿಸಿಬಹುದು.

ಚಳಿಗಾಲ : ನವೆಂಬರ್ ತಿಂಗಳು ಪ್ರಾರಂಬದಲ್ಲೇ ನಡುಗಿಸುವ ಚಳಿಯಿಂದ ಪ್ರಾರಂಭವಾಗುವ ಚಳಿಗಾಲ ಡಿಸೆಂಬರ್‌ದಿಂದ ಅತಿ ಶೀತಲವಾಗಿ ಬದಲಾಗುತ್ತದೆ. ಪರ್ವತಗಳ ಮೇಲೆ ಹೆಚ್ಚಾಗಿ ಮೈದಾನಗಳ ಮೇಲೆ ಕಡಿಮೆಯಾಗಿ ಮಂಜು ಬೀಳುತ್ತದೆ. ಸೂರ್ಯನು ಬಹಳ ತಡವಾಗಿ 9 ಅಥವಾ 10 ಗಂಟೆಗೆ ಉದಯಿಸಿ ಮಧ್ಯಾಹ್ನ 4 ಗಂಟೆಗೆ ಅಸ್ತಮವಾಗುತ್ತದೆ. ಮಬ್ಬಾದ ಆಕಾಶದಿಂದ ಕತ್ತಲೆ ಆವರಿಸುತ್ತದೆ. ಫ್ರಾನ್ಸ್ ದೇಶದಲ್ಲಿ ಅಗಲವಾದ ಎಲೆ ಇರುವ ಗಿಡಗಳು ತಮ್ಮ ಎಲೆಗಳನ್ನು ಉದರಿಸಿ ಕೊಂಡು ಎಲೆಗಳಿಲ್ಲದ ಮರಗಳಾಗಿ ಮಾರ್ಪಡುತ್ತವೆ.

ನಮ್ಮ ದೇಶದೊಂದಿಗೆ ಹೋಲಿಸಿದರೆ ಅತಿ ಕಡಿಮೆ ಜನರು ಮಾತ್ರ ವ್ಯವಸಾಯದ ಮೇಲೆ ಆಧಾರ ಪಟ್ಟಿರುತ್ತಾರೆ. ಹೆಚ್ಚು ಜನರು ಕೈಗಾರಿಕೆಗಳು, ಸೇವಾರಂಗಗಳಾದ ಬ್ಯಾಂಕು, ಸಾರಿಗೆ ಮೊದಲಾದವುಗಳಲ್ಲಿ ಕೆಲಸ ಮಾಡುತ್ತಾರೆ. ವ್ಯವಸಾಯ ರಂಗದವರಿಗೆ ಆದಾಯ ಕಡಿಮೆ ಬರುತ್ತದೆ. ಆದ್ದರಿಂದ ಸರಕಾರ ರೈತರಿಗೆ ಭಾರಿ ಪ್ರಮಾಣದ ಸಬ್ಸಿಡಿ ನೀಡುತ್ತದೆ. ಗ್ರಾಮೀಣ ಪ್ರಾಂತಗಳಲ್ಲಿ ವ್ಯವಸಾಯವನ್ನು ಮುಂದುವರೆಸಲು ಸರಕಾರ ಈ ರೀತಿಯನ್ನು ಸಹಾಯಮಾಡುತ್ತದೆ.

ವಸಂತಕಾಲ : ಮಾರ್ಚಿ ತಿಂಗಳು ಆರಂಭಗೊಳ್ಳುತ್ತಲೇ ಫ್ರಾನ್ಸ್‌ನಲ್ಲಿ ಭೂಮಿಯ ದೃಶ್ಯಬದಲಾಗುತ್ತದೆ. ಹಗಲು ಹೆಚ್ಚುಕಾಲ ರಾತ್ರಿ ಕಡಿಮೆ ಅವಧಿ ಇರುತ್ತದೆ. ಮಂಜು ಕರಗುವುದು ಪ್ರಾರಂಭವಾಗಿ ಗಿಡಗಳು ಚಿಗುರಲು ಪ್ರಾರಂಭವಾಗುತ್ತವೆ. ಅಚ್ಚ ಹಸಿರಿನ ಎಲೆಗಳಿಂದ ಸುಂದರವಾದ ಹೂಗಳಿಂದ ಎಲ್ಲವೂ ತುಂಬಿಕೊಳ್ಳುತ್ತವೆ. ಬಯಲುಗಳಲ್ಲಿ ಹುಲ್ಲು ಚಿಗುರಲು ಪ್ರಾರಂಭವಾಗುತ್ತದೆ.

ವಸಂತ ಋತುವಿನಲ್ಲಿ ಭೂಮಿಯನ್ನು ಸಾಗುವಳಿ ಮಾಡಿ ಬಿತ್ತನೆ ಮಾಡುತ್ತಾರೆ. ಗೋಧಿ, ರೇ, ಬಾರ್ಲಿ, ಮೆಕ್ಕೆಜೋಳ, ಬೀಟ್‌ರೂಟ್, ಓಟ್ಸ್ ಮುಖ್ಯವಾದ ಬೆಳೆಗಳು.

SCERT TELANGANA









ಬೇಸಿಗೆ ಕಾಲ : ಯೂರೋಪ್ ಜೂನ್‌ನಿಂದ ಆಗಷ್ಟುವರೆಗೆ ಬೇಸಿಗೆ ಕಾಲ. ಈ ಕಾಲದಲ್ಲಿ ಅಧಿಕವಾದ ಉಷ್ಣೋಗ್ರತೆ ಇರುತ್ತದೆ. ಮಳೆ ಬೀಳುವುದಿಲ್ಲ. ಹಗಲಿನ ಸಮಯ ನಮ್ಮ ದೇಶಕ್ಕಿಂತ ಬಹಳ ಹೆಚ್ಚು. ಬೆಳಗಿನ ವೇಳೆ 4 ಗಂಟೆಗೆ ಸೂರ್ಯೋದಯವಾಗುತ್ತದೆ. ರಾತ್ರಿ 8 ಗಂಟೆಗೆ ಸೂರ್ಯಾಸ್ತಮಯವಾಗುತ್ತದೆ. ವಾಸ್ತವವಾಗಿ ನಾರ್ವೆ, ಸ್ವೀಡನ್ ನಂತಹ ಕೆಲವು ಉತ್ತರಾದಿ ದೇಶಗಳಲ್ಲಿ ಸೂರ್ಯಾಸ್ತವೇ ಇರಲಾರದು ಇಂತಹ ದೇಶಗಳನ್ನು ನಡುರಾತ್ರಿ ಸೂರ್ಯ ಕಾಣುವ ದೇಶಗಳೆಂದು ಕರೆಯುತ್ತಾರೆ. ಇಲ್ಲಿ ಅಧಿಕ ಉಷ್ಣೋಗ್ರತೆ ಕೂಡ ಇರಲಾರದು. ಏಕೆಂದರೆ ಸೂರ್ಯನು ಆಕಾಶದಲ್ಲಿ ಬಹಳ ಎತ್ತರದಲ್ಲದೆ ಬಹಳ ಹತ್ತಿರವಾಗಿ ಅಂದರೆ ಭೂಮಯಕಾಶೆಗಳು ಬೆರೆತಂತೆ ಇರುವ ರೇಖೆಯ ಹತ್ತಿರ ಇರುತ್ತಾನೆ.

ಯೂರಪದಲ್ಲಿ ಬೇಸಿಗೆಯು ವ್ಯವಸಾಯಕ್ಕೆ ಅನುಕೂಲವಾಗಿರುತ್ತದೆ. ಈ ಕಾಲದಲ್ಲಿ ಬೆಳೆ ಬೆಳೆಯುತ್ತದೆ. ಹದ ಮಳೆಯಾಗುವುದರಿಂದ ನೀರಾವರಿಯ ಅಗತ್ಯವಿಲ್ಲ. ಬೇಸಿಗೆಯ ಕೊನೆಗೆ ಬೆಳೆ ಕೊಯ್ಲಿಗೆ ಬರುತ್ತದೆ.

ನಮ್ಮ ದೇಶದಲ್ಲಿ ಎರಡು ವ್ಯವಸಾಯ ಕಾಲಗಳಿವೆ. ಅವು ರಬೀ, ಖರೀಫ್. (ಚಳಿಗಾಲ, ಮಳೆಗಾಲ). ಆದ್ದರಿಂದ 8 ರಿಂದ 10 ತಿಂಗಳುಗಳ ಕಾಲ ಬೆಳೆಗಳನ್ನು ಬೆಳೆಸುವವು. ಆದರೆ ಫ್ರಾನ್ಸನಲ್ಲೂ ಇತರ ಯೂರೋಪ್ ದೇಶಗಳಲ್ಲೂ 6, 7 ತಿಂಗಳುಗಳು ಮಾತ್ರವೇ ಬೆಳೆಗಳು ಬೆಳೆಯುತ್ತವೆ.

ಶರದೃತು – ಶರತ್ಕಾಲ : ಸೆಪ್ಟೆಂಬರ್ ದಿಂದ ಅಕ್ಟೋಬರ್ ವರೆಗೆ ಮತ್ತೇ ವಾತಾವರಣ ಬದಲಾಗುತ್ತದೆ. ಗಿಡದ ಎಲೆಗಳು ಕೆಂಪು ಮತ್ತು ಹಳದಿ ಬಣ್ಣಕ್ಕೆ ಬದಲಾಗಿ ಉದುರಿಹೋಗುತ್ತವೆ. ವ್ಯವಸಾಯದ ಕೆಲಸಗಳು ನಿಂತು ಹೋಗುತ್ತವೆ. ಚಳಿಗಾಲದಲ್ಲಿ ಬಳಸಲು ಹುಲ್ಲು ಕೊಯ್ದು ಒಣಗಿಸುತ್ತಾರೆ. ದ್ರಾಕ್ಷಿ ಇತರ ಹಣ್ಣುಗಳ ಜಾತಿಗಳನ್ನು ಕಿತ್ತಿ ಮದಿರೆ (wine), ಜಾಮ್, ಹಣ್ಣಿನ ರಸಗಳನ್ನು ತಯಾರಿಸಿ ವಿವಿಧ ಪದ್ದತಿಗಳಲ್ಲಿ ಶೇಖರಿಸುತ್ತಾರೆ.

ಭೂಮಿ ವ್ಯವಸಾಯ

(Land and Agriculture) :

ಯೂರೋಪ್‌ನಲ್ಲಿರುವ ಮೈದಾನಗಳು, ನದಿ ಪರಿವಾಹಕ ಪ್ರಾಂತ್ಯಗಳು ಫಲವತ್ತಾದವುಗಳು. ವರ್ಷವಿಡೀ ಮಳೆ ಬೀಳುವುದರಿಂದ ಯಾವ ನದಿಗಳೂ ಒಣಗುವುದಿಲ್ಲ. ಎಲ್ಲಾ ಕಾಲದಲ್ಲಿ ನದಿಗಳು ಪ್ರವಹಿಸುವವು. ಮೈದಾನ ಭೂಮಿಗಳ ವ್ಯವಸಾಯಕ್ಕೆ ಸೂಕ್ತವಾದವುಗಳು. ಆದರೂ ಯೂರೋಪ್‌ನಲ್ಲಿರುವ ಪರ್ವತಪ್ರಾಂತ್ಯ ಭೂಭಾಗಗಳು ವ್ಯವಸಾಯಕ್ಕೆ ಬರುವುದಿಲ್ಲ. ಕೆಲವು ದೇಶಗಳಲ್ಲಿ ಕಡಿಮೆ ನೀರಾವರಿ ಭೂಮಿಗಳಿವೆ. ನಾರ್ವೇಯಲ್ಲಿ 3%, ಇಂಗ್ಲೆಂಡನಲ್ಲಿ 30%, ಜರ್ಮಿನಿನಲ್ಲಿ 40% ವ್ಯವಸಾಯ ಭೂಮಿ ಇರುವುದು. ಭಾರತ ದೇಶದಲ್ಲಿ ಸುಮಾರು 55% ವ್ಯವಸಾಯ ಭೂಮಿ ಇದೆ.

SCERT HELP

ಹಾಲೆಂಡ್ (ಡಚ್)ನಲ್ಲಿ ವ್ಯವಸಾಯಕ್ಕೆ ಬೇಕಾಗುವ ಭೂಮಿಲ್ಲ. ಅವರಿಗೆ ತೀವ್ರವಾದ ಭೂಭಾಗದ ಕೊರತೆ ಇದೆ. ಆದ್ದರಿಂದಲೇ ಅವರು ಹಿಂದಿನ ಕಾಲದಲ್ಲಿ ಸಮುದ್ರ ಜಲದಿಂದ ಆವೃತಗೊಂಡ ಪ್ರಾಂತ್ಯದಲ್ಲಿ ನೀರನ್ನು ಹಿಂದಕ್ಕೆ ಕಳುಹಿಸಿ ಗೋಡೆಗಳನ್ನು ನಿರ್ಮಿಸಿ ಆ ಪ್ರಾಂತ್ಯಗಳಲ್ಲಿ ಸಣ್ಣ ಹಿಡುವಳಿದಾರರು ವ್ಯವಸಾಯ ಮಾಡುವರು. ಅದನ್ನೆ "ಪೊಲ್ಡರ್ ವ್ಯವಸಾಯ" ಎಂದು ಕರೆಯುವರು.

ಉತ್ತರ, ಪೂರ್ವ ಯೂರೋಪ್‌ನಲ್ಲಿ ಚಳಿಗಾಲದಲ್ಲಿ ಅತಿ ಶೀತಲ ಪರಿಸ್ಥಿತಿಯಿಂದ ವ್ಯವಸಾಯ ಮಾಡುವುದು ಕಷ್ಟ. ಆ ಪ್ರಾಂತ್ಯಗಳು ಆರು ತಿಂಗಳವರೆಗೂ ಮಂಜಿನಿಂದ ಆವೃತಗೊಂಡಿರುತ್ತವೆ. ವಸಂತ ಋತುವಿನಲ್ಲಿ ಮಂಜು ಕರಗುವುದರಿಂದ ಸಾಗುವಳಿ ಮಾಡಿದ ಬೆಳೆ ಪರಿಪಕ್ವತೆಗೆ ಬೇಕಾಗವ ಸಮಯ ಇರುವುದಿಲ್ಲ. ಬೇಸಿಗೆಯಲ್ಲಿ ಬೆಳೆ ಪರಿಪಕ್ವತೆ ಹೊಂದಿ ಎಲೆ ಉದುರಿಸುವ ಸಮಯದಲ್ಲಿ ಕೊಯ್ಯಲು ಬರುತ್ತದೆ. ಇದರ ಫಲವಾಗಿ ವರ್ಷಕ್ಕೆ ಒಂದೇ ಬೆಳೆಮಾತ್ರ ಬೆಳೆಯುತ್ತಾರೆ. ಅದೇ ದಕ್ಷಿಣ ಯೂರೋಪ್‌ನಲ್ಲಿ ವರ್ಷಕ್ಕೆ ಎರಡು ಬೆಳೆ ಬೆಳೆಯುವರು.

- ಮೆಡಿಟರೇನಿಯನ್‌ಸಮುದ್ರ ದೇಶಗಳಲ್ಲಿ ಎರಡು ಬೆಳೆ ಬೆಳೆಯಲಿಕ್ಕೆ ಇರುವ ಕಾರಣಗಳನ್ನು ನೀನು ಹೇಳಬಲ್ಲೆಯಾ?

ಯೂರೋಪ್ ಮೈದಾನಗಳಲ್ಲಿ ಪ್ರಮುಖವಾದ ಬೆಳೆ ಗೋಧಿ. ಇದನ್ನು ಫ್ರಾನ್ಸ್, ಜರ್ಮನಿ, ರಷ್ಯಾ, ಉಕ್ರೇಯಿನ್, ಪೋಲೆಂಡ್, ಇಟಲೀ, ಗ್ರೀಸ್ ಮೊದಲಾದ ದೇಶಗಳಲ್ಲಿ ಗೋಧಿ ಹೆಚ್ಚಾಗಿ ಬೆಳೆಸುವರು. ದಕ್ಷಿಣ ಯೂರೋಪ್ ಹಣ್ಣಿನ ತೋಟಗಳ ಬೆಳವಣಿಗೆಗೆ ಖ್ಯಾತಿ ಪಡೆದಿದೆ. ದ್ರಾಕ್ಷಾ ಸಾರಾಯಿಗೆ ಮೆಡಿಟರೇನಿಯನ್ ಸಮುದ್ರ ದೇಶಗಳಾದ ಪೋರ್ಚುಗಲ್, ಸ್ಪೆಯಿನ್, ಇಟಲೀ, ದಕ್ಷಿಣ ಫ್ರಾನ್ಸ್ ಖ್ಯಾತಿ ಪಡೆದಿವೆ.



ಚಿತ್ರ 5.3 ಶೇಖರಿಸಿದ ಪಶುಗ್ರಾಸ(ಹುಲ್ಲು)

ಯೂರೋಪ್‌ನಲ್ಲಿ ಬಾರ್ಲಿ, ಓಟ್ಸ್, ರೈ, ಬೀಟ್‌ರೂಟ್, ಆಲುಗಡ್ಡೆ, ಮುಂತಾದವುಗಳು ಪ್ರಮುಖ ಬೆಳೆಗಳು. ರಷ್ಯಾ, ಉಕ್ರೇಯಿನ್, ಜರ್ಮನಿ, ದೇಶಗಳಲ್ಲಿ ಬೀಟ್‌ರೂಟ್‌ಗಳಿಂದ "ಸಕ್ಕರೆ" ಉತ್ಪಾದನೆ ಮಾಡುವರು.

ವ್ಯವಸಾಯ ಕ್ರಾಂತಿ (Agricultural Revolution) :

ಆಸಿಯಾದಂತೆಯೇ ಯ್ಯುರೋಪ್ ಕೂಡ ದೊಡ್ಡ ಭೂ ಮಾಲೀಕರೊಂದಿಗೆ ಚಿಕ್ಕ ರೈತರಿರುವ ಖಂಡವಾಗಿದ್ದಿತು. ಆದರೆ ಕಳೆದ ಎರಡು ಶತಮಾನಗಳಿಂದ ವ್ಯವಸಾಯ ರಂಗದಲ್ಲಿ ಸಂಪೂರ್ಣ ಬದಲಾವಣೆಗೊಳಗಾಗಿದೆ. ಈಗ ಭಾರತದಲ್ಲಿದ್ದಂತೆ ಸಣ್ಣ ರೈತರು ಇಲ್ಲ. ತಾಂತ್ರಿಕ ವಲಯದಲ್ಲಿ ಬಂದ ಬದಲಾವಣೆಯಿಂದ ದೊಡ್ಡ ರೈತರು ವಿಶಾಲವಾದ ವ್ಯವಸಾಯ ಕ್ಷೇತ್ರಗಳನ್ನು ಹಿಡಿದುಕೊಂಡು, ಕೆಲವು ಜನ ಕೂಲಿಗಳಿಂದ ಯಂತ್ರಗಳಿಂದ, ರಸಾಯನಿಕ ಗೊಬ್ಬರಗಳು, ಮೊದಲಾದವುಗಳನ್ನು ಉಪಯೋಗಿಸಿ ವ್ಯವಸಾಯ ಮಾಡುತ್ತಿದ್ದಾರೆ. ಮುಖ್ಯವಾಗಿ ವ್ಯಾಪಾರ ಬೆಳೆಗಳನ್ನು ಬೆಳೆಸುತ್ತಾರೆ. ಜಮೀನುದಾರರು, ಬಂಡವಾಳಶಾಹಿಗಳ ಕೈಗಳಿಗೆ ಭೂಮಿಗಳು ವಶವಾಗಿದ್ದರಿಂದ ಸಣ್ಣ ರೈತರು ವ್ಯವಸಾಯವನ್ನು ಬಿಟ್ಟು ನಗರಗಳಿಗೆ ವಲಸೆ ಹೋಗಿ ಕೈಗಾರಿಕೆಗಳಲ್ಲಿ ಸೇವಾರಂಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಯೂರೋಪ್ ವ್ಯವಸಾಯ ಕ್ಷೇತ್ರಗಳು :

ಯೂರೋಪನಲ್ಲಿ 50 ರಿಂದ 100 ಎಕರೆ ವಿಸ್ತೀರ್ಣ ಇರುವ ಹೊಲಗಳಲ್ಲಿ ವ್ಯವಸಾಯ ಮಾಡುತ್ತಾರೆ. ಸಾಧಾರಣವಾಗಿ ರೈತರು ತಮ್ಮ ಹೊಲಗಳಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಆದ್ದರಿಂದ ಫ್ರಾನ್ಸ್‌ನಲ್ಲಿ ದೊಡ್ಡ ಗ್ರಾಮಗಳು ಕಾಣುವುದಿಲ್ಲ. ಮನೆಗಳು ದೊಡ್ಡದಾಗಿರುತ್ತವೆ. ವಿವಿಧ ಅವಸರಗಳಿಗಾಗಿ ಅನೇಕ ಕೊಠಡಿಗಳು ಇರುತ್ತವೆ. ಇಲ್ಲಿಯೇ ಪಶುಗಳಿಗಾಗಿ ಷೆಡ್ಡು, ಧಾನ್ಯಗಳನ್ನಿರಿಸಲು ಉಗ್ರಾಣಗಳು, ಪಕ್ಷಿಗಳಿಗೆ ಗೂಡುಗಳು, ಹಂದಿಗಳಿಗಾಗಿ ಷೆಡ್ಡುಗಳು ಇರುತ್ತವೆ.

ದೊಡ್ಡ ರೈತರು ಕೆಲಸಗಳಿಗಾಗಿ ಕೂಲಿಗಳನ್ನು ನಿಯಮಿಸುತ್ತಾರೆ. ಇವರು ವ್ಯವಸಾಯಕ್ಕೆ ಅಧಿಕವಾಗಿ

SCERT TELANGANA

ಟ್ರಾಕ್ಟರ್, ಬೆಳೆಗಳನ್ನು ಕಟಾವು ಮಾಡುವ ಯಂತ್ರಗಳನ್ನು ಉಪಯೋಗಿಸುತ್ತಾರೆ. ಬೆಳೆಗಳೆಲ್ಲವುಗಳನ್ನು ಬಜಾರಿನಲ್ಲಿ ಮಾರುತ್ತಾರೆ. ಕೆಲವು ಸಲ ರೈತರು ಹತ್ತಿರದ ಸಹಕಾರ ಸಂಘಗಳಿಂದ ಯಂತ್ರಗಳನ್ನು ಬಾಡಿಗೆಗೆ ತರುತ್ತಾರೆ.

- ನಿಮ್ಮ ಪ್ರಾಂತ್ಯದಲ್ಲಿ ಸರಾಸರಿ ವ್ಯವಸಾಯ ಕ್ಷೇತ್ರ ಎಷ್ಟು ಇರುತ್ತವೆ.
- ನಿಮ್ಮ ಪ್ರಾಂತ್ಯದಲ್ಲಿಯೂ ಸಹ ರೈತರು ಟ್ರಾಕ್ಟರುಗಳನ್ನು ಬಾಡಿಗೆ ತರುತ್ತಾರಾ?

ವಿಶಾಲವಾದ ವ್ಯವಸಾಯ ಕ್ಷೇತ್ರಗಳು, ಯಂತ್ರಗಳಿಂದ ಫ್ರೆಂಚ್ ರೈತರು ಆರ್ಥಿಕ ಅಂತಸ್ತು ಹೆಚ್ಚಾಗುತ್ತದೆ. ಇವರು ಎಲ್ಲಾ ಸೌಕರ್ಯಗಳಿರುವ ವಿಲಾಸವಂತವಾದ ಮನೆಗಳಲ್ಲಿ ವಾಸಿಸುತ್ತಾರೆ. ಇವರು ಅಡುಗೆ ಮಾಡಲು ವಿದ್ಯುತ್ ಸ್ಟೌವ್, ಗ್ಯಾಸ್ ಸ್ಟೌವ್‌ಗಳನ್ನು ಬಳಸುತ್ತಿದ್ದರು. 50 ವರ್ಷಗಳ ಕೆಳಗೆ ರೈತರು ತಮಗೆ ಬೇಕಾದ ರೊಟ್ಟಿಗಳನ್ನು ಅವರೇ ತಯಾರುಮಾಡಿ ಕೊಳ್ಳುತ್ತಿದ್ದರು. ಆದರೆ ಇಂದು ಇವರು ಬೆಳೆಗಳನ್ನು ಮಾರಿ ಬಜಾರಿನಿಂದ ರೊಟ್ಟಿಗಳನ್ನು ಕೊಳ್ಳುತ್ತಿದ್ದಾರೆ.

ಇವರ ಆಹಾರದಲ್ಲಿ ಮುಖ್ಯವಾದ ತಾಜಾ ಮಾಂಸದ ಕೋಳಿಗಳು, ಪಶುಗಳು, ಹಂದಿಗಳಿಂದ ಲಭಿಸುತ್ತದೆ. ಮಾಂಸವನ್ನು ಒಣಗಿಸುವುದು, ಹೆಪ್ಪುಗಟ್ಟಿಸುವುದು, ಹೊಗೆಯಲ್ಲಿಡುವಂತಹಾ ಪ್ರಕ್ರಿಯೆ ಗಳಿಂದ ಸಂಗ್ರಹಿಸುತ್ತಾರೆ. ಪ್ರತಿ ಮನೆಯಲ್ಲಿ ಮದಿರೆ (Wine), ಗಿಣ್ಣ, ಮಾಂಸವನ್ನು ಸಂಗ್ರಹಿಸಲು ಆಹಾರದ ಬೀರ್ವಾಗಳು, ಆಹಾರದ ನೆಲಮಾಳಿಗೆಗಳಿವೆ. ಇವುಗಳನ್ನು ಶೀತಲ ಉಗ್ರಾಣಗಳಲ್ಲಿಯೂ ಸಂಗ್ರಹಿಸುತ್ತಾರೆ.

ರೈತರು ತಮಗೆ ಬೇಕಾದ ಸಾಮಗ್ರಿಗಳನ್ನು ಪಟ್ಟಣಗಳಿಂದ ತಂದುಕೊಳ್ಳುತ್ತಾರೆ. ರೊಟ್ಟಿಗಳು, ಆಹಾರ ಪದಾರ್ಥಗಳೊಂದಿಗೆ ವ್ಯವಸಾಯ ಸಾಮಾಗ್ರಿಗಳನ್ನು, ಯಂತ್ರಗಳನ್ನು ಇವರು ಸಮೀಪದಲ್ಲಿನ ಪಟ್ಟಣಗಳಿಂದ ತರುತ್ತಾರೆ.

ಆಧುನಿಕ ವ್ಯವಸಾಯ :

ಯುರೋಪ್‌ನಲ್ಲಿ ಇತರ ದೇಶಗಳಂತೆ, ಫ್ರಾನ್ಸ್‌ನಲ್ಲಿ ವ್ಯವಸಾಯವು ಒಂದು ಕೈಗಾರಿಕೆಯಾಗಿ ಸಾಗುತ್ತೀದೆ. ಇವರು ಬೆಳೆದ ಬೆಳೆಗಳೆನ್ನೆಲ್ಲಾ ಬಜಾರಿನಲ್ಲಿ ಮಾರಿ ತಮಗೆ ಬೇಕಾದ ವಸ್ತುಗಳನ್ನು ಕೊಂಡು ಕೊಳ್ಳುತ್ತಾರೆ. ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದಿದ ತಂತ್ರಜ್ಞಾನದಿಂದ ರಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು ಹೆಚ್ಚು ಇಳುವರಿ ಬರುವ ಹೈಬ್ರೀಡ್ ಜೀಜಗಳು ಕೂಡ ಇರುತ್ತವೆ. ನಮ್ಮ ದೇಶದೊಂದಿಗೆ ಹೋಲಿಸಿದರೆ ಅತಿ ಕಡಿಮೆ ಜನರು ಮಾತ್ರ ವ್ಯವಸಾಯದ ಮೇಲೆ ಆಧಾರಪಟ್ಟಿರುತ್ತಾರೆ. ಹೆಚ್ಚು ಜನರು ಕೈಗಾರಿಕೆಗಳು, ಸೇವಾರಂಗಗಳಾದ ಬ್ಯಾಂಕು, ಸಾರಿಗೆ ಮೊದಲಾದವುಗಳಲ್ಲಿ ಕೆಲಸ ಮಾಡುತ್ತಾರೆ. ವ್ಯವಸಾಯ ರಂಗದವರಿಗೆ ಆದಾಯ ಕಡಿಮೆ ಬರುತ್ತದೆ. ಆದ್ದರಿಂದ ಸರಕಾರ ರೈತರಿಗೆ ಭಾರಿಪ್ರಮಾಣದ ಸಬ್ಸಿಡಿ ನೀಡುತ್ತದೆ. ಗ್ರಾಮೀಣ ಪ್ರಾಂತಗಳಲ್ಲಿ ವ್ಯವಸಾಯವನ್ನು ಮುಂದುವರೆಸಲು ಸರಕಾರ ಈ ರೀತಿಯನ್ನು ಸಹಾಯಮಾಡುತ್ತದೆ.


ಸಮುದ್ರ ಮಾರ್ಗ ಕಂಡುಹಿಡಿದದ್ದು (Discovery of Sea Routes) :

ಪಶ್ಚಿಮ ಯೂರೋಪ್‌ನ ಯಾವ ಭಾಗವು ಸಹಾ ಸಮುದ್ರಕ್ಕೆ ದೂರವಿಲ್ಲ. ಆದರೆ ಏಷಿಯಾದಲ್ಲಿ ಅನೇಕ ದೇಶಗಳು ಸಮುದ್ರಕ್ಕೆ ಸಾವಿರಾರು ಕಿ.ಮೀ.ಗಳ ದೂರದಲ್ಲಿದೆ.

- ತರಗತಿಯಲ್ಲಿ ಅಟ್ಲಾರ್ಸ ಅಥವಾ ಅಟ್ಲಾಸ್ ನೋಡಿ ಯೂರೋಪ್‌ನ ಸಮುದ್ರ ತೀರದಲ್ಲಿರುವ ಕನಿಷ್ಠ ಆರು ಪಟ್ಟಣಗಳ ಹೆಸರುಗಳನ್ನು ಬರೆಯಿರಿ.

ನೂರಾರು ವರ್ಷಗಳಿಂದ ಜನರು ಸಮುದ್ರ ತೀರದಲ್ಲಿ ಸಾವಿರ ಸಂಖ್ಯೆಯಲ್ಲಿ ನಿವಾಸಗಳನ್ನು ಸ್ಥಾಪಿಸಿಕೊಂಡು, ಸಮುದ್ರದಲ್ಲಿ ಲಭಿಸುವ ಉತ್ಪತ್ತಿಗಳನ್ನು ಶೇಖರಿಸಿ ಜೀವನ ನಡೆಸುವರು. ಐರೋಪ್ಯ ದೇಶದ ನಾವಿಕರು ಅನೇಕ ಶತಮಾನಗಳ ಸಮುದ್ರ ಪ್ರಯಾಣದ ಅನುಭವ, ಧೈರ್ಯವಿರುವುದಲ್ಲದೇ, ಹಡಗುಗಳ ನಿರ್ಮಾಣದಲ್ಲಿ ಬಹಳ ನೈಪುಣ್ಯವುಳ್ಳವರು. ಮೊದಲು ಆಳವಾದ ಸಮುದ್ರದಲ್ಲಿ ಮೀನುಗಳನ್ನು ಹಿಡಿಯುವ ಹಡಗುಗಳನ್ನು ತಯಾರಿಸಿದರು. ಹಡಗುಗಳನ್ನು ಕ್ರಮವಾಗಿ

SCERT TELANGANA



ಚಿತ್ರ 6 ವ್ಯಾಪಾರ ವರ್ತಕ ಮಾರ್ಗಗಳು

ಅಂತರ್ಜಾತೀಯ ವ್ಯಾಪಾರಕ್ಕೆ ಉಪಯೋಗಿಸಿದರು.

ಪೂರ್ವಕಾಲದಿಂದಲೂ ಯೂರೋಪ್ ದೇಶದವರು ಭಾರತದೇಶದ ಜೊತೆ, ಇತರೆ ಏಷಿಯಾ ದೇಶಗಳಾದ ಚೈನಾ, ಇಂಡೋನೇಷಿಯಾದ ಜೊತೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದರು. ಹೆಚ್ಚಿನದಾಗಿ ರೇಷ್ಮೆ ವಸ್ತ್ರಗಳು, ರತ್ನಗಳು, ದಂತ ವಸ್ತುಗಳು, ಲವಂಗಗಳು, ಮೆಣಸುಗಳು, ಚಿಕ್ಕೆಯಂತಹ ಸುಗಂಧ ದ್ರವ್ಯಗಳು ಐರೋಪ್ಯದಲ್ಲಿ ಲಭಿಸದ ಕಾರಣ ಅವರು ಬೆಳ್ಳಿ, ಬಂಗಾರಗಳಿಂದ ವಸ್ತು ಬದಲಾವಣೆ ಮಾಡಿಕೊಂಡು ಯೂರೋಪ್‌ಗೆ ಕೊಂಡೊಯ್ಯುತ್ತಿದ್ದರು. ಅವರು ಯೂರೋಪ್ ದೇಶಕ್ಕೆ ಯಾವ ಮಾರ್ಗವಾಗಿ ತೆಗೆದುಕೊಂಡು ಹೋಗುತ್ತಿದ್ದರೋ ನಿಮಗೆ ಗೊತ್ತೆ? ಚಿತ್ರ–6ರಲ್ಲಿ ಎರಡು ಪ್ರಮುಖ ಮಾರ್ಗಗಳನ್ನು ನೀಡಲಾಗಿದೆ. ಅದರಲ್ಲಿ ಮಧ್ಯಪೂರ್ವ ಪ್ರಾಂತ್ಯಗಳು, ಇರಾನ್, ಆಫ್ಘಾನಿಸ್ಥಾನ್ ನಿಂದ ಭೂಮಾರ್ಗ, ಮತ್ತೊಂದು ಕೆಂಪುಸಮುದ್ರ, ಅರೇಬಿಯಾ ಸಮುದ್ರದ ಮೂಲಕ ಸಮುದ್ರ ಮಾರ್ಗ.

500ವರ್ಷಗಳ ಹಿಂದೆ ಪಶ್ಚಿಮ ಯೂರೋಪ್ ನಾವಿಕರು, ವ್ಯಾಪಾರಸ್ಥರು, ಭಾರತ ದೇಶಕ್ಕೆ ಹೊಸ ಮಾರ್ಗಗಳನ್ನು ಹುಡುಕಲು ಪ್ರಾರಂಭಿಸಿದರು. ಅರಬ್ ದೇಶದವರು ಪದೇ ಪದೇ ಯೂರೋಪ್‌ನವರೊಂದಿಗೆ ಯುದ್ಧಗಳು ಮಾಡುವುದರಿಂದ ಅವರಿಗೆ ಹೊಸಮಾರ್ಗಗಳ ಅವಶ್ಯಕತೆಯಾಯಿತು. ಮೆಡಿಟರೇನಿಯನ್ ಸಮುದ್ರ ಸಮುದ್ರದ ಮೇಲೆ ಇಟಲೀ ವ್ಯಾಪಾರಿಗಳ ಆಳ್ವಿಕೆ ಇರುವುದರಿಂದ ಇತರೆ ದೇಶಗಳಿಗೆ ಅಷ್ಟು ಸುಲಭವಾಗಿ ಅನುಮತಿ ದೊರೆಯುತ್ತಿರಲಿಲ್ಲ. ಆದ್ದರಿಂದಲೇ ಇತರ ದೇಶದ ನಾವಿಕರು ಭಾರತ ದೇಶಕ್ಕೆ ಹೊಸ ಮಾರ್ಗಗಳನ್ನು ಕಂಡುಹಿಡಿಯುವ ಅವಶ್ಯಕತೆಯನ್ನು ಗುರ್ತಿಸಿದರು. ಏಕೆಂದರೆ ಮೆಡಿಟರೇನಿಯನ್ ಸಮುದ್ರದ ಇಟಲಿಯವರ ಅಧೀನದಲ್ಲಿರುವ ಅರಬ್ಬರು ಬಹಳ ಅಡಚಣೆ ಮಾಡಿದ್ದರಿಂದ ಹೊಸಮಾರ್ಗಗಳನ್ನು ಅನ್ವೇಷಿಸುವುದು ಪ್ರಾರಂಭವಾಯಿತು.

- ನಕ್ಷೆಯನ್ನು ನೋಡಿ ಹೊಸಮಾರ್ಗ ಯಾವುದಾದರು ಇರಬಹುದೆಂದು ಹೇಳಬಲ್ಲಿರಾ?

ಬಹುಶಃ ಇಂತಹ ಚಿತ್ರ ಪಟಗಳು ಆ ದಿನಗಳಲ್ಲಿ ಇಲ್ಲ. ಭೂಮಿ ದುಂಡಾಗಿದೆಯೇ ವಿನಃ ಸಮತಲವಾಗಿ ಇಲ್ಲವೆಂದು ಭಾವಿಸಿದರು. ಇಟಲೀ ನಾವಿಕ "ಕ್ರಿಸ್ಟೊಫರ್ ಕೊಲಂಬಸ್" ಭೂಮಿ ದುಂಡಾಗಿರುವುದರಿಂದಲೇ ಭಾರತದೇಶವನ್ನು ಪಶ್ಚಿಮದಿಂದ ಪ್ರಯಾಣಿಸಿ ಸೇರಬಹುದೆಂದು ಭಾವಿಸಿದನು. ಒಂದು ವೇಳೆ ಅಟ್ಲಾಂಟಿಕ್ ಮಹಾಸಾಗರದ ಮೇಲೆ ಪಶ್ಚಿಮಕ್ಕೆ ಪ್ರಯಾಣಿಸಿದರೆ ಚೈನಾಕ್ಕೇ, ಭಾರತದೇಶಕ್ಕೇ ಹಿಂದೊ ಮುಂದೋ ಸೇರಬಹುದೆಂದು ಭಾವಿಸಿದ್ದನು.

- ಗ್ಲೋಬು ಆಗಲಿ, ಅಟ್ಲಾಸ್‌ಆಗಲಿ ನೋಡಿ ಕೊಲಂಬಸ್ ಭಾವಿಸಿದ್ದು ನಿಜವೊ, ಅಲ್ಲವೋ ಪರಿಶೀಲಿಸಿರಿ.

SCERT TELANGANA

ಕ್ರಿ.ಶ.1492 ರಲ್ಲಿ ಕೊಲಂಬಸ್ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಲು ಮೂರು ನೌಕೆಗಳಲ್ಲಿ ಪ್ರಯಾಣ ಬೆಳೆಸಿದನು. ಮೂರು ತಿಂಗಳು ಪ್ರಯಾಣಿಸಿದ ನಂತರ ಆತನು ಒಂದು ಭೂಭಾಗಕ್ಕೆ ಸೇರಿಕೊಂಡನು. ಆಗ ಆತನು ಭಾರತ ದೇಶಕ್ಕೆ ಸೇರಿದ್ದೇನೆಂದು ಭಾವಿಸಿದನು. ವಾಸ್ತವಾಗಿ ಭಾರತದೇಶಕ್ಕೆ ಆತನು ಬಹಳ ದೂರದಲ್ಲಿದ್ದನು.

ಆತ ಸೇರಿದ್ದು ವೆಸ್ಟ್ ಇಂಡೀಸ್. ಅದು ಅಮೇರಿಕಾದ ಹತ್ತಿರವಿರುವ ಅನೇಕ ಪರ್ಯಾಯ ದ್ವೀಪ ಸಮೂಹ. ಕೊಲಂಬಸ್‌ಗಿಂತಲು ಮೊದಲು ಯೂರೋಪ್‌ನವರಿಗೆ ಅಮೇರಿಕಾ ದೇಶದ ಬಗ್ಗೆ ತಿಳಿದಿಲ್ಲ. ತಪ್ಪಾಗಿ ಅಮೇರಿಕಾ ಸೇರಿದೆವು ಎಂದು ಗುರುತಿಸಿದರು. ಕೊಲಂಬಸ್ ಸೇರಿರುವುದು ಭಾರತ ಅಲ್ಲವೆಂದು ಆತನು ತನಗೆ ತಿಳಿಯದ ಹೊಸಖಂಡವನ್ನು ಸೇರಿರುವನೆಂದು ಐರೋಪ್ಯ ದೇಶದವರು ವಾಸ್ತವವನ್ನು ತಿಳಿದರು. ಆ ನಂತರ ಅನೇಕ ಜನ ಯೂರೋಪ್ ವಾಸಿಗಳು ವ್ಯಾಪಾರಕ್ಕಾಗಿ ಹೋಗಿ ಸ್ಥಾನಿಕನ ಮೇಲೆ ದರ್ಪ ಸಾಧಿಸಿ ಸ್ಥಿರ ನಿವಾಸ ಏರ್ಪಾಟು ಮಾಡಿಕೊಂಡರು.

ಆ ದಿನಗಳಲ್ಲಿ ನೌಕಾಯಾನಕ್ಕೆ ಬೀಸುವ ಪವನಗಳನ್ನು ಶಕ್ತಿಯಾಗಿ ಬಳಸಿಕೊಂಡರು. ಪಶ್ಚಿಮಕ್ಕೆ ಅಮೇರಿಕಾದ ಕಡೆಬೀಸುವ ಗಾಳಿಯಿಂದ (ಪವನಗಳಿಂದ) ನೌಕಾ ಪ್ರಯಾಣ ಮಾಡಿದರು. ಅವು ಪಶ್ಚಿಮ ಪವನಗಳಾ? ಅಲ್ಲ ? ಇವು ಯೂರೋಪ್ ಕಡೆ ಬೀಸುವ ಗಾಳಿಗಳಾ? (ಪವನಗಳು) ಅಲ್ಲ ? ಇವು ಪ್ರತ್ಯೇಕವಾದ ಪವನಗಳು. ಇವು ವರ್ಷವಿಡೀ ಬೀಸುವವು. ನೈರುತ್ಯ ಯೂರೋಪ್ ನಿಂದ ಅಮೇರಿಕಾದ ಪೂರ್ವ ತೀರಕ್ಕೆ ಬೀಸುವ ಗಾಳಿಗಳನ್ನು "ವ್ಯಾಪಾರ ಪವನಗಳು" ಎನ್ನುವರು.

ಹಾಗೆ ಪಶ್ಚಿಮ ಪವನಗಳು ನೈರುತ್ಯ ದಿಶೆಯಿಂದ ಈಶಾನ್ಯದ ಕಡೆಗೆ, ಈಶಾನ್ಯ ದಿಶೆಯಿಂದ ನೈರುತ್ಯ ಕಡೆಗೆ ಬೀಸುವವು. (ಈ ಎರಡು ಪವನಗಳು ವರ್ಷವಿಡೀ ವಿರುದ್ಧ ದಿಕ್ಕಿನಲ್ಲಿ ಬೀಸುತ್ತವೆ) ಈ ಎರಡು ವಿಧವಾದ ಪವನಗಳನ್ನು ನಕ್ಷೆ–6ರಲ್ಲಿ ತೋರಿಸಲಾಗಿದೆ. ಈ ಗಾಳಿಗಳೇ ಯೂರೋಪ್ ವಾಸಿಗಳಿಗೆ, ಅಮೇರಿಕಾಗೆ ಬಂದು ಹೋಗಲು ಸಹಾಯವಾಗುತ್ತವೆ. ಅವರು ಇಂತಹ ವ್ಯಾಪಾರ ಪವನಗಳನ್ನು ಅಮೇರಿಕಾಗೆ ಹೋಗಲು ಬಳಸಿಕೊಂಡಿರುವರು.

- ನಕ್ಷೆ–6 ನೋಡಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
- ಯೂರೋಪ್‌ನಿಂದ ಅಮೇರಿಕಾಗೆ ಹೋಗಲು ನಾವಿಕರು ಯಾವ ಪವನಗಳನ್ನು ಉಪಯೋಗಿಸಿಕೊಂಡರು?
- ಯೂರೋಪ್‌ಗೆ ಮತ್ತೇ ಮರಳಿ ಬರಲು ವ್ಯಾಪಾರ ಪವನಗಳನ್ನು ಬಳಸಿ ಕೊಂಡಿರುವರೇ? ಕಾರಣಗಳನ್ನು ತಿಳಿಸಿ.

ಕೊಲಂಬಸ್ ನಂತರ ಯೂರೋಪ್ ವಾಸಿಗಳು ಅನೇಕ ಸಮುದ್ರ ಮಾರ್ಗಗಳನ್ನು ಕಂಡುಹಿಡಿದರು. ಅವರು ಕೇವಲ ಅಮೇರಿಕಾ ಅಲ್ಲದೇ ಆಫ್ರಿಕಾ, ಭಾರತದೇಶ, ಆಸ್ಟ್ರೇಲಿಯಾ, ದೇಶಗಳಿಗೂ ಸಮುದ್ರಯಾನ ಮಾಡಿದರು. ಈ ದೇಶಗಳಲ್ಲಿ ವ್ಯಾಪಾರ ನಡೆಸಿ ಅಪಾರ ಸಂಪತ್ತನ್ನು ಕೊಂಡೊಯ್ದರು. ಈ ಸಂಪತ್ತು ಯೂರೋಪ್ ದೇಶದ ಕೈಗಾರಿಕ ಉತ್ಪತ್ತಿಗಳಿಗೆ ಸಹಕಾರವಾಯಿತು.

ಮುಖ್ಯ ಪದಗಳು

1. ಪರ್ಯಾಯ ದ್ವೀಪ
2. ದ್ವೀಪ
3. ಕೊಲ್ಲಿ
4. ಪ್ರವಾಹಗಳು
5. ಗಲ್ಫ್
6. ಶೀತೋಷ್ಣ ಸ್ಥಿತಿ

SCERT TELANGANA

ನಿಮ್ಮ ಅಭ್ಯಾಸನವನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1) ಯೂರೋಪ್ ವಾಸಿಗಳ ಜೀವನದ ವಿಧಾನದ ಮೇಲೆ, ಶೀತೋಷ್ಣಸ್ಥಿತಿ ಮೇಲೆ ಅಟ್ಲಾಂಟಿಕ್ ಮಹಾಸಮುದ್ರ ತೀವ್ರ ಪ್ರಭಾವ ತೋರಿಸುತ್ತಿದೆ. ಅದಕ್ಕೆ ಸಂಬಂಧಿಸಿದ ಆಧಾರಗಳನ್ನು ತೋರಿಸುತ್ತಾ ಒಂದು ವ್ಯಾಸವನ್ನು ಬರೆಯಿರಿ.

2) ಪಾಠ್ಯಾಂಶಗಳಲ್ಲಿ ಕೊಟ್ಟಿರುವ ನಕ್ಷೆಗಳ ಆಧಾರವಾಗಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.

- ಈ ಕೆಳಗಿನ ತಿಳಿಸಿದ ದೇಶಗಳಲ್ಲಿ ಸುತ್ತಲೂ ಭೂಭಾಗವಿಲ್ಲದ್ದು.
  (ಹಂಗೇರಿ/ರುಮೇನಿಯ/ಪೋಲೆಂಡ್/ಸ್ವಿಟ್ಜರ್ಲ್ಯಾಂಡ್)
- ಕಾಸ್ಪಿಯನ್ ಸಮುದ್ರಕ್ಕೆ, ಕಪ್ಪುಸಮುದ್ರಕ್ಕೆ ಮಧ್ಯದಲ್ಲಿ ಯಾವ ಪರ್ವತಗಳಿವೆ?
  (ಆಲ್ಪ್ಸ್/ಕಾಕಸಸ್ ಪರ್ವತಗಳು)
- ಆರ್ಕಟಿಕ್ ಸಮುದ್ರದ ತೀರದಲ್ಲಿರುವ ದೇಶಗಳು ಯಾವುವು?
  (ರಷ್ಯಾ/ಜರ್ಮನಿ/ಸ್ವೀಡನ್/ನಾರ್ವೆ)
- ಕಪ್ಪು ಸಮುದ್ರದಿಂದ ಅಟ್ಲಾಂಟಿಕ್ ಮಹಾಸಮುದ್ರಕ್ಕೆ ಹಡಗಿನಲ್ಲಿ ಹೋಗಬಲ್ಲಿರಾ ? ಹೌದಾದರೆ ಆ ಸಮುದ್ರ ಮಾರ್ಗವನ್ನು ಎಳೆಯಿರಿ.

3) ಬಂದರುಗಳನ್ನು ಆಳವಾದ ಸಮುದ್ರದ ಭಾಗದಲ್ಲಿ, ಕೊಲ್ಲಿಗಳಲ್ಲಿ ಏಕೆ ನಿರ್ಮಿಸುತ್ತಾರೆ?

4) ಪೂರ್ವ ಯುರೋಪ್‌ಗಿಂತ ಪಶ್ಚಿಮ ಯೂರೋಪನಲ್ಲಿ ಚಳಿಗಾಲ ಏಕೆ ಕಡಿಮೆ ತೀವ್ರತೆಯಲ್ಲಿರುತ್ತದೆ?

5) ಕಪ್ಪು ಸಮುದ್ರದ ತೀರದ ಮುಖಾಂತರ ಇರುವ ನಾಲ್ಕು ದೇಶಗಳ ಹೆಸರುಗಳನ್ನು ಬರೆಯಿರಿ.

6) ಪಶ್ಚಿಮ ಯೂರೋಪ್ ಪ್ರಜೆಗಳಿಗೆ ಪಶ್ಚಿಮ ಪವನಗಳು ಹೇಗೆ ಲಾಭವನ್ನು ಒದಗಿಸುತ್ತವೆ ?

7) ಮೆಡಿಟರೇನಿಯನ್ ಪ್ರಾಂತ್ಯದ ಶೀತೋಷ್ಣಸ್ಥಿತಿಯ ಲಕ್ಷಣಗಳು ಯಾವುವು? ಆ ಪ್ರಾಂತ್ಯದಲ್ಲಿನ ದೇಶಗಳ ಹೆಸರುಗಳೇನು?

8) ಯಾವ ಅಂಶಗಳು ಯೂರೋಪ್ ವ್ಯವಸಾಯ ರಂಗವನ್ನು ಪರಿಮಿತ ಮಾಡುತ್ತಿವೆ?

9) ದಕ್ಷಿಣ ಯೂರೋಪ್‌ನಲ್ಲಿ ಮುಖ್ಯವಾದ ಬೆಳೆಗಳನ್ನು ತಿಳಿಸಿರಿ.

10) ಯೂರೋಪ್ ನಾವೀಕರು ಹೊಸ ಸಮುದ್ರ ಮಾರ್ಗಗಳನ್ನು ಕಂಡು ಹಿಡಿಯುವುದರಿಂದ ದೇಶಗಳ ನಡುವೆ ವ್ಯಾಪರ, ಸಾಂಸ್ಕೃತಿಕ ಸಂಬಂಧಗಳು ಏರ್ಪಟ್ಟಿವೆಂದು ನೀನು ಹೇಗೆ ಹೇಳಬಲ್ಲೇ ?

11) ಈ ಪಾಠ್ಯದಲ್ಲಿನ ಕೊನೆಯ ಪ್ಯಾರವನ್ನು ಓದಿರಿ, ಅದರ ಮೇಲೆ ವ್ಯಾಖ್ಯಾನಿಸಿರಿ.

12) ಯುರೋಪಿನ ವ್ಯವಸಾಯಕ್ಕೂ ನಮ್ಮ ದೇಶದ ವ್ಯವಸಾಯಕ್ಕೂ ಇರುವ ಹೋಲಿಕೆ ವ್ಯತ್ಯಾಸಗಳೇನು?

SCERT TELANGANA


ಅಧ್ಯಾಯ 6

ಆಫ್ರಿಕಾ

ಭಾರತದೇಶದ ಪಶ್ಚಿಮ ಭಾಗಕ್ಕೆ ಒಂದು ದೊಡ್ಡ ಖಂಡ ಇದೆ. ಈ ಖಂಡದಲ್ಲಿ ಬಹುದೊಡ್ಡ ಮರು ಭೂಮಿಗಳು ದಟ್ಟವಾದ ಕಾಡುಗಳು, ಅತಿ ಉದ್ದವಾದ ಅಗಲವಾದ ನದಿಗಳು, ಲೆಕ್ಕವಿಲ್ಲದಷ್ಟು ದೊಡ್ಡ ಸರೋವರಗಳು, ವಿಶಾಲವಾದ ಹಸಿರು ಮೈದಾನಗಳು ಸಾವಿರ ಮೈಲುಗಳಲ್ಲಿ ವ್ಯಾಪಿಸಿವೆ. ನಮ್ಮ ದೇಶದಲ್ಲಿ ಇರದ ಬಹು ವಿಧದ ಪ್ರಾಣಿಗಳು ಈ ಖಂಡದಲ್ಲಿವೆ. ಪ್ರಪಂಚದಲ್ಲಿಯೇ ಅತಿ ದೊಡ್ಡ ಬಂಗಾರ, ವಜ್ರದ ಗಣಿಗಳು ಈ ಖಂಡದಲ್ಲಿವೆ. ಈ ಖಂಡದ ಹೆಸರು ಆಫ್ರಿಕಾ ಒಂದು ವಿಷಯ ಹೇಳಿದರೆ ನೀವು ಆಶ್ಚರ್ಯ ಪಡುವಿರಿ. ಆಫ್ರಿಕಾವನ್ನು ಮಾನವ ಜನಾಂಗದ ತವರುಮನೆ ಎಂದು ಹೇಳಬಹುದು ಅಂದರೆ ಮಾನವ ಜನಾಂಗ ಈ ಖಂಡದಿಂದ ಪ್ರಾರಂಭದಲ್ಲಿ ಉದಯಿಸಿದೆ. ನಂತರ ಇಲ್ಲಿಂದ ಇತರ ಖಂಡಗಳಿವೆ ವ್ಯಾಪಿಸಿದೆ.



ಚಿತ್ರ –7.1 ಭೂಮಧ್ಯ ರೇಖಾ ಪ್ರಾಂತದ ಅಡವಿಗಳು–ಉಗಾಂಡಾ



ಚಿತ್ರ 7.2 ಕೆನ್ಯಾದಲ್ಲಿಯ ಸವಾನ್ನಾ



ಚಿತ್ರ 7.3 ನೈಲುನದಿ ದಂಡೆಯ ಕೈಗೋ ನಗರ

SCERT KARNATAKA

- ಆಫ್ರಿಕಾ ಖಂಡವನ್ನು ಪ್ರಪಂಚ ನಕ್ಷೆಯಲ್ಲಿ ನೋಡಿ ಪರಿಶೀಲಿಸಿರಿ. ಅದರ ಸುತ್ತ ಇರುವ ಸಮುದ್ರಗಳ ಹೆಸರುಗಳನ್ನು ಬರೆಯಿರಿ. ಈ ಖಂಡಕ್ಕೆ ಸುತ್ತಮುತ್ತಲು ಇರುವ ಖಂಡಗಳು ಯಾವುವು?

ಆಫ್ರಿಕಾ – ವಿಶಾಲವಾದ ಪ್ರಸ್ಥಭೂಮಿ :


ಆಫ್ರಿಕಾದ ಭೌತಿಕ ನಕ್ಷೆಯನ್ನು ಪರಿಶೀಲಿಸಿರಿ. ಈ ಖಂಡದಲ್ಲಿ ಯಾವುದಾದರು ಅತಿ ದೊಡ್ಡ ಮೈದಾನಗಳು ಇರುವುದನ್ನು ಗಮನಿಸಿರುವಿರಾ ? ತೀರ ಪ್ರಾಂತ್ಯಗಳಲ್ಲಿ ಇಕ್ಕಟ್ಟಾದ ಮೈದಾನಗಳು ಇವೆಯಾ ? ಉಳಿದ ಖಂಡವೆಲ್ಲಾ ಬಹಳ ವಿಸ್ತಾರವಾದ ಪ್ರಸ್ಥಭೂಮಿ ನೀವು ನಕ್ಷೆಯನ್ನು ಜಾಗ್ರತೆಯಿಂದ ಪರಿಶೀಲಿಸಿದರೆ ಈ ಪ್ರಸ್ಥಭೂಮಿ ಎತ್ತರ ಎಲ್ಲಾ ಪ್ರಾಂತ್ಯಗಳಲ್ಲಿ ಸಮಾನವಾಗಿ ಇಲ್ಲದ ವಿಷಯವನ್ನು ಗಮನಿಸುತ್ತೀರಿ. ನೈಲು ಕಾಂಗೋ ನದಿ ಪರಿವಾಹಕ ಪ್ರಾಂತ್ಯವನ್ನು ಪರಿಸೀಲಿಸಿರಿ. ಈ ಪ್ರಸ್ಥಭೂಮಿಯ ಮೇಲೆ ಅನೇಕ ಪರ್ವತ ಶ್ರೇಣಿಗಳು ಇವೆ. ಆಫ್ರಿಕಾದಲ್ಲಿ ಅತ್ಯಂತ ಎತ್ತರವಾದ ಪರ್ವತ ಶಿಖರ ಟಾಂಜಿನಿಯಾದಲ್ಲಿನ ಕಿಲಿಮಂಜಾರೋ ಪರ್ವತ.

ಎತ್ತರವಾದ ಪ್ರಸ್ಥ ಭೂಮಿಗಳಲ್ಲಿ ಬಹಳ ಉದ್ದವಾದ ಇಕ್ಕಟ್ಟಾದ ಕಣಿವೆಗಳು ಇವೆ. ಈ ಕಣಿವೆಗಳಲ್ಲಿ ವಿಶಾಲವಾದ ಸರೋವರಗಳು ಅನೇಕ ಇವೆ.

- ಆಫ್ರಿಕಾದಲ್ಲಿ ವಿಕ್ಟೋರಿಯಾ ಸರೋವರ ಅಲ್ಲದೆ ಎರಡು ಇತರ ಸರೋವರಗಳು ಗುರ್ತಿಸಿರಿ. ಅವುಗಳ ಹೆಸರುಗಳನ್ನು ಬರೆಯಿರಿ.
- ಆಫ್ರಿಕಾ ನಕ್ಷೆಯಲ್ಲಿ ಕೆಳಗೆ ತೋರಿಸಿದ ನದಿಗಳನ್ನು ಗುರ್ತಿಸಿರಿ. ನಕ್ಷೆ–7ನ್ನು ಉಪಯೋಗಿಸಿ ಆಫ್ರಿಕಾ ಖಂಡದಲ್ಲಿಯ ದೇಶಗಳನ್ನು ಗುರ್ತಿಸಿರಿ. ಯಾವ ದೇಶದ ಮೂಲಕ ಕೆಳಗಿನ ನದಿಗಳು ಪ್ರವಹಿಸುತ್ತವೆ? ಹಾಗೆಯೇ ಸಮುದ್ರದಲ್ಲಿ ಸೇರಿಕೊಳ್ಳುತ್ತವೆ ಗುರ್ತಿಸಿರಿ.

ನದಿ		ದೇಶ	ಸಮುದ್ರ
1.	ನೈಲು		
2.	ನೈಜರ್		
3.	ಕಾಂಗೋ		
4.	ಜಾಂಬೇಜಿ		

ನಕ್ಷೆ–1 : ಆಫ್ರೀಕ ಭೌಗೋಳಿಕ ನಕ್ಷೆ



- ನಕ್ಷೆ–1 ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
- ಇಕ್ಕಟ್ಟಾದ ತೀರ ಮೈದಾನಗಳ ಸರಾಸರಿ ಎತ್ತರ ಎಷ್ಟು ?
- ಹೆಚ್ಚು ಪ್ರಾಂತ್ಯವನ್ನು ಆಕ್ರಮಿಸಿದ ಪ್ರಸ್ಥ ಭೂಮಿಯ ಎತ್ತರ ಎಷ್ಟು ?
- ಆಫ್ರಿಕಾದಲ್ಲಿ ದಕ್ಷಿಣ ಪೂರ್ವ ಭಾಗಗಳಲ್ಲಿ ಪ್ರಸ್ಥಭೂಮಿಗಳ ಪ್ರಮಾಣ.....
- ಉತ್ತರಕ್ಕೆ ಇರುವ ಪರ್ವತಯಾವುದು .....

SCERT TELANGANA

ಈ ಖಂಡದ ಉತ್ತರ ಪ್ರಾಂತ್ಯದಲ್ಲಿ ಯಾವ ನದಿಗಳು ನಮಗೆ ಕಾಣಿಸುವುದಿಲ್ಲ. ಈ ಪ್ರಾಂತ್ಯದ ಹೆಸರು ಸಹರಾ ಮರುಭೂಮಿ. ಇಲ್ಲಿ ವರ್ಷಪಾತ ಬಹಳ ಕಡಿಮೆ. ನೈಲು ನದಿ ಮಾತ್ರ ಈ ಸಹಾರಾ ಮರುಭೂಮಿ ಮೂಲಕ ಪ್ರವಹಿಸುತ್ತದೆ.

ಪ್ರಸ್ಥಭೂಮಿಯಲ್ಲಿ ವಿಶಾಲವಾದ ಸರೋವರ ಗಳನ್ನು ನೋಡಿರಿ. ಆಫ್ರಿಕಾದಲ್ಲಿಯ ಸರೋವರಗಳಲ್ಲಿ ವಿಕ್ಟೋರಿಯಾ ಸರೋವರ ದೊಡ್ಡದು ಇದು ಪ್ರಪಂಚದಲ್ಲಿಯೇ ಪರಿಶುಭ್ರವಾದ ನೀರು ಸಿಗುವ ದೊಡ್ಡ ಸರೋವರ ಗಳಲ್ಲೊಂದು ನೈಲುನದಿ ಈ ಸರೋವರದಿಂದ ಹುಟ್ಟುತ್ತದೆ.

ಈ ನದಿ ಹುಟ್ಟುವ ಪ್ರಾಂತ್ಯಗಳಲ್ಲಿ ಹೆಚ್ಚಿನ ವರ್ಷಪಾತ ಇರುವುದರಿಂದ ಹೆಚ್ಚಿನ ನೀರು ಸಹರಾ ಮರುಭೂಮಿ ಮೂಲಕ ಪ್ರವಹಿಸುತ್ತಾ ಮಧ್ಯಧರಾ ಸಮುದ್ರದಲ್ಲಿ ಸೇರುತ್ತವೆ. ನೈಲು ನದಿ ಈಜಿಪ್ಟ್ ಮೂಲಕ ಪ್ರವಹಿಸುತ್ತದೆ. ಈಜಿಪ್ಟ್‌ನಲ್ಲಿ ಬಹಳ ಭಾಗ ಮರುಭೂಮಿಯಿಂದ ಕೂಡಿದೆ.

ನೈಲು ನದಿ ನಾಗರೀಕತೆ ಅಭಿವೃದ್ದಿ ಹೊಂದುವುದಕ್ಕೆ ಸಹಕಾರಿಯಾಗಿದೆ. ಈಜಿಪ್ಟ್ ನಾಗರೀಕತೆ ಬಹಳ ಪ್ರಾಚೀನವಾದದ್ದು ಎಷ್ಟೋ ಸಾವಿರ ವರ್ಷಗಳಿಂದ ನೈಲುನದಿ ನೀರಿನ ಮೂಲಕ ಈಜಿಪ್ಟ್‌ನಲ್ಲಿಯ ಭೂಮಿಗಳ ಸಾಗುವಳಿ ಆಗುತ್ತಿವೆ (ನಕ್ಷೆ–3 ನೋಡಿರಿ)

ಶೀತೋಷ್ಣ ಸ್ಥಿತಿ :

ನೀವು ಆಫ್ರಿಕಾ ಖಂಡವನ್ನು ಗ್ಲೋಬಿನಲ್ಲಿ ಪರಿಶೀಲಿಸಿದರೆ ಭೂಮಧ್ಯರೇಖೆ ಈ ಖಂಡದ ಮಧ್ಯದ ಮೂಲಕ ಹೋಗುವುದನ್ನು ಗಮನಿಸುತ್ತೀರಿ. ಈ ವಿಧವಾಗಿ ಆಫ್ರಿಕಾದ ಉತ್ತರ ದಕ್ಷಿಣ ಭಾಗಗಳಾಗಿ ಬೇರೆ ಮಾಡುತ್ತದೆ.



- ಆಫ್ರಿಕಾ ನಕ್ಷೆಯನ್ನು ಪರಿಶೀಲಿಸಿ ಕರ್ಕಾಟಕರೇಖೆಯನ್ನು ಗುರ್ತಿಸಿ ನಕ್ಷೆ–2ನ್ನು ನೋಡಿರಿ. ಭೂಮಧ್ಯರೇಖೆಗೆ ದಕ್ಷಿಣ ಭಾಗಕ್ಕೆ ಮಕರ ರೇಖೆ ಇದೆ. ಈ ರೇಖೆಯನ್ನು ಗುರ್ತಿಸಿ ನಕ್ಷೆಯಲ್ಲಿ ತೋರಿಸಿ.
- ಭೂಮಧ್ಯರೇಖೆ ಇನ್ನೂ ಯಾವುದಾದರು ಖಂಡಗಳ ಮಧ್ಯ ಭಾಗದ ಮೂಲಕ ಹಾದು ಹೋಗುತ್ತದೆಯೇ?

ಕರ್ಕಾಟಕರೇಖೆ, ಮಕರ ರೇಖೆ ಮಧ್ಯವಿರುವ ಪ್ರಾಂತ್ಯಗಳಲ್ಲಿ ಶೀತೋಷ್ಣಸ್ಥಿತಿ ಬೆಚ್ಚಗಿರುತ್ತದೆ. ಇದು ಪ್ರಪಂಚದಲ್ಲಿಯೇ ಅತಿ ಉಷ್ಣಮಂಡಲದ ಪ್ರಾಂತ್ಯ. ಇಲ್ಲಿ ಚಳಿ ಇರುವುದಿಲ್ಲ. ಈ ಪ್ರಾಂತ್ಯವನ್ನು ಉಷ್ಣ ಮಂಡಲ (Tropic Region) ಎನ್ನುವರು.

- ಆಫ್ರಿಕಾ ನಕ್ಷೆಯಲ್ಲಿ ಈ ಪ್ರಾಂತ್ಯವನ್ನು ಗುರ್ತಿಸಿ ಅಲ್ಲಿ "ಅಯನ ರೇಖಾಪ್ರಾಂತ್ಯ" ಎಂದು ಬರೆದು, ಭೂ ಮಧ್ಯ ರೇಖೆಗೆ ಉತ್ತರ ದಿಕ್ಕಿಗೆ ಇರುವ ಪ್ರಾಂತ್ಯವನ್ನು ಒಂದು ಬಣ್ಣದಿಂದ ದಕ್ಷಿಣದ ದಿಕ್ಕಿಗೆ ಇರುವ ಪ್ರಾಂತ್ಯವನ್ನು ಬೇರೊಂದು ಬಣ್ಣವನ್ನು ತುಂಬಿರಿ.

ಅಯನ ರೇಖೆಗಳ ದಕ್ಷಿಣ ಉತ್ತರದ ಕಡೆಗೆ ಇರುವ ಪ್ರಾಂತ್ಯಗಳಲ್ಲಿ ಬೇಸಿಗೆಕಾಲ ಚಳಿಗಾಲ ಇರುತ್ತದೆ. ಇವುಗಳನ್ನು ಸಮಶೀತೋಷ್ಣ ಪ್ರಾಂತ್ಯಗಳು (Temperate Regions) ಎನ್ನುವು .

ಇಲ್ಲಿಯವರೆಗೆ ನಾವು ಬೇಸಿಗೆ ಕಾಲ, ಮತ್ತು ಚಳಿಗಾಲ ಕುರಿತು ಚರ್ಚಿಸಿದ್ದೇವೆ. ಆದರೆ ಹೆಚ್ಚು ಹೊಂದುವ ಉಷ್ಣಮಂಡಲಗಳ ಪ್ರಾಂತಗಳಿಗಿಂತ ಕಡಿಮೆ ವರ್ಷಪಾತ ಹೊಂದುವ ಪ್ರಾಂತಗಳು ವಿವಿಧ ಶೀತೋಷ್ಣ ಸ್ಥಿತಿಗಳನ್ನು ಹೊಂದಿರುತ್ತದೆ.

ಅತ್ಯಧಿಕ ವರ್ಷಪಾತ ಇರುವ ಪ್ರಾಂತ್ಯಗಳು :


ಭೂಮಧ್ಯ ರೇಖೆಗೆ ಎರಡು ಕಡೆ ಆಫ್ರಿಕಾದಲ್ಲಿಯ ಬಹಳ ಪ್ರಾಂತ್ಯಗಳಲ್ಲಿ ಅತ್ಯಧಿಕ ವರ್ಷಪಾತ ಇರುತ್ತದೆ. ನಕ್ಷೆ–3 ರಲ್ಲಿ ಅತ್ಯಧಿಕ ವರ್ಷಪಾತ ಇರುವ ಪ್ರಾಂತ್ಯಗಳನ್ನು ಗುರ್ತಿಸಿರಿ. ಆಫ್ರಿಕಾದಲ್ಲಿಯ ಪಶ್ಚಿಮ ಭಾಗದಲ್ಲಿ, ಮಧ್ಯ ಭಾಗದಲ್ಲಿ ಈ ಪ್ರಾಂತ್ಯಗಳಿವೆ. ಹೆಚ್ಚು ವರ್ಷಪಾತ, ಬಿಸಿ ವಾತಾವರಣದಿಂದ ಇಲ್ಲಿ ದಟ್ಟವಾದ ಕಾಡುಗಳು ಇವೆ

ಅತಿಕಡಿಮೆ ಇಲ್ಲವೆ ಪರಿಮಿತಿ ವರ್ಷಪಾತ ಇರುವ ಪ್ರಾಂತ್ಯಗಳು :


ನಕ್ಷೆ–3ನ್ನು ಪರಿಶೀಲಿಸಿ ಮಿತವಾದ ವರ್ಷ ಪಾತ ದಾಖಲು ಆಗುವ ಪ್ರಾಂತ್ಯಗಳನ್ನು ಗುರ್ತಿಸಿ ಒಂದು ಮಾದರಿಯ ಮಳೆ ದಾಖಲು ಆಗುವ ಪ್ರಾಂತ್ಯಗಳು ಅತ್ಯಧಿಕ

SCERT TELANGANA

ನಕ್ಷೆ–3 ಆಫ್ರಿಕಾ – ವರ್ಷಪಾತ ವಿಸ್ತರಣೆ



ನಕ್ಷೆ–4 ಆಫ್ರಿಕಾದಲ್ಲಿಯ ಸಹಜ ವೃಕ್ಷ ಸಂಪತ್ತು



SCERT TELANGANA

ವರ್ಷಪಾತ ದಾಖಲೆ ಆಗುವ ಪ್ರಾಂತ್ಯಗಳಿಗೆ ಅಂಟಿಕೊಂಡಿವೆ. ವರ್ಷಾಪಾತ ಕಡಿಮೆ ಇರುವ ಪ್ರಾಂತ್ಯಗಳಲ್ಲಿ ಮಳೆಯು ಬೇಸಿಗೆ ಕಾಲದಲ್ಲಿಯೆ ಬೀಳುತ್ತದೆ. ಆದರೆ ಭೂಮಧ್ಯರೇಖಾ ಪ್ರಾಂತ್ಯದಲ್ಲಿ ವರ್ಷವೆಲ್ಲಾ ಮಳೆ ಬೀಳುತ್ತದೆ.

ನಮ್ಮ ದೇಶದಲ್ಲಿಯ ಹಾಗೆ ಆಫ್ರಿಕಾದಲ್ಲಿ ಮಾಧ್ಯಮಿಕ ಮಳೆ ಬೀಳುವ ಪ್ರಾಂತ್ಯಗಳಲ್ಲಿ ಒಣಹವೆ, ತೇವ ವಾತಾವರಣ ಇದೆ. ಈ ಪ್ರಾಂತ್ಯಗಳಲ್ಲಿ ಈ ವಿಧವಾದ ವರ್ಷಪಾತದಿಂದ ಉದ್ದವಾದ ಹುಲ್ಲು ಬೆಳೆಯುತ್ತದೆ. ಆನೆಯು ಕೂಡ ಕಾಣಿಸದಷ್ಟು ಎತ್ತರವಾಗಿ ಈ ಹುಲ್ಲು ಇರುತ್ತದೆ. ಇವುಗಳನ್ನೇ ಸವನ್ನಾ ಹುಲ್ಲು ಭೂಮಿಗಳು ಎನ್ನುವರು. ನಕ್ಷೆ–4ನ್ನು ಪರಿಶೀಲಿಸಿರಿ ಎಷ್ಟೋ ವಿಧವಾದ ಕ್ರೂರ ಪ್ರಾಣಿಗಳು ಈ ಪ್ರಾಂತ್ಯಗಳಲ್ಲಿ ಇವೆ. ಇವುಗಳನ್ನು ಕುರಿತು ನೀವು ಆನಂತರ ತಿಳಿದು ಕೊಳ್ಳುತ್ತಿರಿ.

ಆಫ್ರಿಕಾದಲ್ಲಿ ಹೆಚ್ಚು ಭೂಭಾಗದಲ್ಲಿ ವರ್ಷಪಾತ ಅತಿ ಕಡಿಮೆ ಇರುವ ಇಲ್ಲವೇ ಬಹಳ ವರ್ಷಗಳಿಂದ ವರ್ಷಪಾತ ಇಲ್ಲದಂತಹ ಇರುವ ಪ್ರಾಂತ್ಯವೆಲ್ಲಾ ಒಣಹವೆ ಇರುವ ಶುಷ್ಕಪ್ರಾಂತ್ಯ.

- ನಕ್ಷೆ–3ರಲ್ಲಿ ಈ ಶುಷ್ಕ ಪ್ರಾಂತ್ಯವನ್ನು ಗುರ್ತಿಸಿರಿ.

ಆಫ್ರಿಕಾದಲ್ಲಿಯ ಉತ್ತರ ಭೂಭಾಗದಲ್ಲಿಯ ಅರ್ಧಭಾಗ ಶುಷ್ಕ (arid) ಪ್ರಾಂತ್ಯ. ಈ ಪ್ರಾಂತ್ಯವನ್ನು 'ಸಹಾರಾ ಮರುಭೂಮಿ' ಎಂದು ಕರೆಯುತ್ತಾರೆ. ಈ ಮರುಭೂಮಿ ಪ್ರಾಂತ್ಯದ ಕೆಲವು ಕಡೆ ಮುಳ್ಳಿನ ಪೊದೆಗಳು ಸಣ್ಣ ಸಣ್ಣ ಹುಲ್ಲು ಸಸ್ಯಗಳು ಬೆಳೆಯುತ್ತವೆ. ಉಳಿದ ಪ್ರಾಂತ್ಯ ಪೂರ್ಣ ಮರಳು ದಿಬ್ಬಗಳಿಂದ, ಗುಡ್ಡಗಳು, ಪರ್ವತಗಳು, ಕಲ್ಲುಗಳು, ಚಿಕ್ಕ ಚಿಕ್ಕ ಕಲ್ಲುಗಳಿಂದ ಕೂಡಿದೆ. ದಕ್ಷಿಣ ಭಾಗದಲ್ಲಿ ಉಷ್ಣ ಮಂಡಲ ಪ್ರಾಂತ್ಯವು ಇದೆ. ಇದನ್ನೆ ಕಲಹರಿ ಮರುಭೂಮಿ ಎಂದು ಕರೆಯುತ್ತಾರೆ.

- ನಕ್ಷೆ–2 2.4ನು ಹೋಲಿಸಿ ಈ ಕೆಳಗಿನವುಗಳಿಗೆ ಉತ್ತರ ಕೊಡಿ
- ಅತ್ಯಧಿಕ ವರ್ಷಪಾತ ಇರುವ ಪ್ರಾಂತ್ಯಗಳಲ್ಲಿ .....ಗಿಡಪೆ
- ಸಾಧಾರಣ ವರ್ಷಪಾತ ಇರುವ ಪ್ರಾಂತ್ಯಗಳಲ್ಲಿ .....ಗಿಡಪೆ
- ವರ್ಷಪಾತ ಇಲ್ಲದ ಪ್ರಾಂತ್ಯಗಳಲ್ಲಿ ..... ಗಿಡಗಳಿವೆ.

ಈ ಪಾಠದ ಪ್ರಾರಂಭದಲ್ಲಿ ಆಫ್ರಿಕಾದಲ್ಲಿಯ ವಿವಿಧ ಪ್ರಾಂತ್ಯಗಳನ್ನು ತೋರಿಸುವ ಚಿತ್ರವಿದೆ. ಈ ಚಿತ್ರದಲ್ಲಿ ಎಷ್ಟೋ ವೈವಿಧ್ಯತೆ ಇದೆ. ಕೆಲ ಭಾಗದಲ್ಲಿ ದಟ್ಟವಾದ ಕಾಡುಗಳಿವೆ. ಇನ್ನೊಂದು ಕಡೆ ಗಿಡಗಳು, ಹುಲ್ಲು ಬೆಳೆಯುವುದು. ಉಳಿದ ಕೆಲವು ಪ್ರಾಂತ್ಯಗಳಲ್ಲಿ ಹುಲ್ಲುಗಳು, ಮುಳ್ಳಿನ ಪೊದೆಗಳು, ಇನ್ನೊ ಕೆಲವು ಪ್ರಾಂತ್ಯಗಳಲ್ಲಿ ಯಾವುದೇ ವಿಧವಾದ ಗಿಡಗಳು, ಮರಗಳು ಇಲ್ಲಿ ಇರುವುದಿಲ್ಲ.

ಆಫ್ರಿಕಾ ಜನರು :

ವಿವಿಧ ಭಾಷೆಗಳು ಮಾತನಾಡುವ ಜನರು ವಿವಿಧ ಜೀವನ ಶೈಲಿಗಳು, ಅಭ್ಯಾಸಗಳೊಂದಿಗೆ ಬೇರೆ ಬೇರೆ ಪ್ರಾಂತ್ಯಗಳಲ್ಲಿ ವಾಸಿಸುತ್ತಾರೆ. ಪ್ರಾಚೀನಕಾಲದಿಂದ ಇಲ್ಲಿಯ ಜನರು ಸಣ್ಣ ಬುಡಕಟ್ಟು ಜಾತಿಯಾಗಿದ್ದು, ಪ್ರಾಣಿಗಳನ್ನು ಬೇಟೆಯಾಡಿ, ಪಶುಪೋಷಣೆ, ವ್ಯವಸಾಯ ಮಾಡುತ್ತ ಜೀವಿಸುತ್ತಿದ್ದಾರೆ. ಇವರು ಭೂ ಮಧ್ಯರೇಖಾ ಪ್ರಾಂತ್ಯದಲ್ಲಿ ಮರುಭೂಮಿ ಪ್ರಾಂತ್ಯದಲ್ಲಿ ವಾಸಿಸುತ್ತಾರೆ. ಪಶುಪೋಷಣೆ ಮಾಡುವವರು ಎತ್ತರವಾದ ಪ್ರಸ್ಥಭೂಮಿಯಲ್ಲಿ ಇರುವ ಸವನ್ನಾ ಹುಲ್ಲು ಭೂಮಿಗಳಲ್ಲಿ ತಮ್ಮ ಪ್ರಾಣಿಗಳನ್ನು ಮೇಯ್ಯಿಸುತ್ತಿದ್ದರು. ನದಿ ಪರಿವಾಹಕ ಪ್ರಾಂತ್ಯಗಳಲ್ಲಿ ಕಾಡಿನ ಭಾಗದ ಅಂಚುಗಳಲ್ಲಿ ವ್ಯವಸಾಯ ವನ್ನು ಬಹಳ ದಿನಗಳಿಂದ ಮಡುತ್ತಿದ್ದಾರೆ. ಸಮುದ್ರ ತೀರಪ್ರಾಂತ್ಯದಲ್ಲಿ ಎಷ್ಟೋ ಪಟ್ಟಣಗಳು ಇವೆ. ಅಲ್ಲಿಗೆ ಎಷ್ಟೋ ದೂರದಿಂದ ವ್ಯಾಪಾರಸ್ಥರು ಬಂದು ವ್ಯಾಪಾರ ಮಾಡುತ್ತಿದ್ದರು.

ಆಫ್ರಿಕಾ, ಯೂರೋಪ್, ಏಷಿಯಾ :

ಬಹಳ ಕಾಲದ ವರೆಗೂ ಇತರ ಖಂಡದವರಿಗೆ ಆಫ್ರಿಕಾದ ಬಗ್ಗೆ ತಿಳಿದಿಲ್ಲ. ಯೂರೋಪಿಯನ್ನರಿಗೆ ಆಫ್ರಿಕಾ ಸಮುದ್ರ ತೀರ ಪ್ರಾಂತ್ಯಗಳಲ್ಲಿನ ಉತ್ತರ ಪ್ರಾಂತ್ಯಗಳು ತಿಳಿದಿದ್ದರಿಂದ ಭಾರತೀಯರಿಗೆ, ಅರಬ್ಬ ವ್ಯಾಪಾರಸ್ಥರಿಗೆ ಪೂರ್ವ ತೀರ ಪ್ರಾಂತ್ಯದ ಬಗ್ಗೆ ತಿಳಿದಿತು.

- ನಕ್ಷೆಯನ್ನು ಪರಿಶೀಲಿಸಿ ಯುರೋಪಿಯನ್ನರು ಆಫ್ರಿಕಾದಲ್ಲಿಯ ಉತ್ತರ ಸಮುದ್ರ ತೀರ ಪ್ರಾಂತ್ಯವನ್ನು ಯಾವ ವಿಧವಾಗಿ ಸೇರಿ ಕೊಂಡರೋ ಊಹಿಸಿರಿ. ಯುರೋಪ್‌ನಿಂದ ಆಫ್ರಿಕಾಕ್ಕೆ ಹೋಗಲು ಯಾವ ಮಾರ್ಗದ ಮೂಲಕ ಹೋಗ ಬೇಕು ? ಮಾರ್ಗದಲ್ಲಿ ಯಾವ ಸಮುದ್ರವನ್ನು ದಾಟಬೇಕಾಗುತ್ತದೆ ?



ಚಿತ್ರ –7.4
ಬೋಬಾಟ್ ಗಿಡ

SCERT PLANNING

ಈ ತೀರಪ್ರಾಂತ್ಯಗಳನ್ನು ಬಿಟ್ಟರೆ ಯುರೋಪಿಯನ್ನರಿಗೆ ಭಾರತೀಯ ಇಲ್ಲವೆ ಅರಬ್ ವರ್ತಕರಿಗೆ ಆಫ್ರಿಕಾದಲ್ಲಿ ಉಳಿದ ಪ್ರಾಂತ್ಯಗಳು ಬಗ್ಗೆ ತಿಳಿದಿರಲಿಲ್ಲ.

500 ವರ್ಷಗಳ ಹಿಂದೆ ಯೂರೋಪಿಯನ್ನರು ಸಮುದ್ರ ಮಾರ್ಗದ ಮೂಲಕ ಭಾರತ ದೇಶವನ್ನು ಸೇರಿಕೊಳ್ಳುವುದಕ್ಕೆ ಆಫ್ರಿಕಾವನ್ನು ಸುತ್ತಿ ಬರುತ್ತಿದ್ದರು. ಅಟ್ಲಾಂಟಿಕ್ ಮಹಾಸಮುದ್ರವನ್ನು ದಾಟಿ ಅವರು ಸೆಯಿಂಟ್ ಮದಿರ, ಅಜೋರ್ಸ್ ದ್ವೀಪಗಳಲ್ಲಿ ಇರುತ್ತಿದ್ದರು. ಈ ದ್ವೀಪಗಳಿಂದ ದಕ್ಷಿಣದ ಕಡೆಗೆ ಪ್ರಯಾಣಿಕಸುವುದಕ್ಕಾಗಿ ಇವರು ಭಯ ಪಡುತ್ತಿದ್ದರು. ಏಕೆಂದರೆ ಅಲ್ಲಿ ಬಹಳ ಬಿಸಿ ಇದೆಯೆಂದು ಸಮುದ್ರವೂ ಸಹಾ ಬಿಸಿ ನೀರಿನಿಂದ ಕುದಿಯುತ್ತಿದೆಂದು ಭಾವಿಸಿದ್ದರು. ನಂತರ 1498 ವರ್ಷದಲ್ಲಿ ಪೊರ್ಚಿಗಿಸರ ನಾವಿಕ ವಾಸ್ಕೋಡಿಗಾಮ ಆಫ್ರಿಕಾದ ದಕ್ಷಿಣ ತುದಿಗೆ ಹೋಗಿ ಅಲ್ಲಿಂದ ಭಾರತದೇಶವನ್ನು ಸೇರಿಕೊಂಡನು.

ನಕ್ಷೆಯನ್ನು ಪರಿಶೀಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಿ.

- ಯಾರಾದರು ಆಫ್ರಿಕಾದಿಂದ ಭಾರತಕ್ಕೆ ಬರಬೇಕೆಂದರೆ ಯಾವ ಮಾರ್ಗದ ಮೂಲಕ ಪ್ರಯಾಣಿಸಬೇಕು ? ಯಾವ ಸಮುದ್ರವನ್ನು ದಾಟುತ್ತೇವೆ ?
- ಏಷಿಯಾ, ಆಫ್ರಿಕಾ ಖಂಡಗಳು ಭೂಮಾರ್ಗದ ಮೂಲಕ ಕಲಿತು ಹೋಗಿವೆಯಾ ?

ಆಫ್ರಿಕಾ ತೀರಪ್ರಾಂತ್ಯ :

ನೀವು ಯೂರೋಪ್ ಕುರಿತು ಓದುತ್ತಿರುವಾಗ ಅಲ್ಲಿಯ ಸಮುದ್ರ ತೀರ ಖಂಡ ಖಂಡಗಳಾಗಿ ಇರುವುದನ್ನು ಗಮನಿಸಿರುವಿರಿ. ಸಮುದ್ರ ತೀರದೊಳಗೆ ಚೊಚ್ಚಿಕೊಂಡು ಬಂದ ಭೂಭಾಗಗಳನ್ನು, ಕೊಲ್ಲಿಗಳನ್ನು ಕುರಿತು ನೀವು ಓದಿರುವಿರಿ. ಇವು ಯೂರೋಪಿಯನ್ನರ ಸಮುದ್ರ ಪ್ರಯಾಣಕ್ಕೆ ಯಾವ ವಿಧವಾಗಿ ಉಪಯೋಗ ವಾಗುತ್ತವೆಯೋ ನೆನಪು ಮಾಡಿಕೊಳ್ಳಿ.



ಚಿತ್ರ : 7.5 ದಕ್ಷಿಣ ಆಫ್ರಿಕಾದಲ್ಲಿಯ ಕೇಪ್ ಆಫ್ ಗುಡ್ ಹೋಪ್

- ಆಫ್ರಿಕಾ ಖಂಡ ಸಮುದ್ರತೀರ ಪ್ರಾಂತ್ಯವನ್ನು ನೋಡಿರಿ ಭಗ್ನವಾದ (Broken Coast) ತೀರ ಪ್ರಾಂತ್ಯವು ನಿಮಗೆ ಕಾಣಿಸುತ್ತಿದೆಯಾ ? ಇಲ್ಲವೆ ಹಸನಾಗಿರುವ ತೀರ ಪ್ರಾಂತ್ಯವು ಕಾಣಿಸುತ್ತಿದೆಯಾ?
- ಯೂರೋಪಿನಲ್ಲಿ ಇರುವಂತೆ ಇಲ್ಲಿ ಸಹ ಬಹಳ ಕೊಲ್ಲಿಗಳು ಸಮುದ್ರ ತೀರಗಳು ಇವೆಯೇ ? ಆಫ್ರಿಕಾದಲ್ಲಿ ಇರುವ ಒಂದು ಕೊಲ್ಲಿಯನ್ನು, ಸಮುದ್ರವನ್ನು ನಕ್ಷೆ–6ರಲ್ಲಿ ಪರಿಶೀಲಿಸಿ ಹೇಳಿರಿ.

ಯೂರೋಪಿಯನ್ನರು ಮೊದಲು ಆಫ್ರಿಕಾದೊಳಗೆ ಹೋಗಲು ಪ್ರಯತ್ನಿಸಿದಾಗ ಎಷ್ಟೋ ಆಫ್ರಿಕಾ ಬುಡಕಟ್ಟು ಜನಾಂಗದೊಂದಿಗೆ ಯುದ್ಧವಾಡಿದರು. ಯೂರೋಪಿಯನ್ನರು ವ್ಯಾಪಾರದಲ್ಲಿ ಆಫ್ರಿಕನ್ನರನ್ನು ಮೋಸಮಾಡಿ, ಅವರನ್ನು ಗುಲಾಮರನ್ನಾಗಿ ಮಡಿಕೊಂಡು ಇತರ ದೇಶಗಳಲ್ಲಿ ಮಾರುತ್ತಿದ್ದರು. ಯುರೋಪಿಯನ್ನರು ಆಫ್ರಿಕಾದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿ ಅಲ್ಲಿ ಇರುವ ಸಂಪನ್ಮೂಲಗಳನ್ನು ಸಂಪತ್ತನ್ನು ದೋಚಿಕೊಳ್ಳಬೇಕೆಂದು ಕೊಂಡರು. ಅದಕ್ಕಾಗಿ ಆಫ್ರಿಕಾ ಪ್ರಜೆಗಳು ಅವರ ಪ್ರಯತ್ನಗಳನ್ನು ತಡೆದು ಅವರನ್ನು ತಮ್ಮ ಭೂಭಾಗದಲ್ಲಿ ಬರದಂತೆ ಮಾಡಿದರು.

ಗುಲಾಮರ ವ್ಯಾಪಾರ (Slave Trade):

16ನೇ ಶತಮಾನದಲ್ಲಿ ಯೂರೋಪಿಯನ್ನರು ಅಮೇರಿಕಾಗೆ ವಲಸೆ ಹೋದರು. ಅಲ್ಲಿಯ ಭೂಮಿಗಳನ್ನು ಕೃಷಿಮಾಡಿದರು ಅಲ್ಲಿ ಎಷ್ಟೋ ಭೂಮಿ ಇತ್ತು ಆದರೆ ಭೂಮಿಗಳಲ್ಲಿ ಕೆಲಸ ಮಡುವುದಕ್ಕೆ ಸರಿಹೋಗುವಂತಹ ಜನರು ಇಲ್ಲ. ಈ ಅವಸರವನ್ನು ತೀರಿಸಿಕೊಳ್ಳುವುದಕ್ಕೆ ಆಫ್ರಿಕಾದಿಂದ ಗುಲಾಮರ ವ್ಯಾಪಾರ ಪ್ರಾರಂಭವಾಯಿತು.

ಸಮುದ್ರ ತೀರಪ್ರಾಂತ್ಯದ ಗಿನಿಯಾದಲ್ಲಿ ಆಫ್ರಿಕಾ ಪೂರ್ವತೀರ ಪ್ರಾಂತ್ಯದಲ್ಲಿ ಇರುವವರನ್ನು ಹಿಡಿದು ಕೊಂಡು ಅವರನ್ನು ಗುಲಾಮರಾಗಿ ಮಾಡಿ ಕೊಂಡರು. ಈವಿಧವಾಗಿ ಹಿಡಿದುಕೊಂಡವರನ್ನು ಸಮುದ್ರ ತೀರಕ್ಕೆ ತೆಗೆದುಕೊಂಡು ಬಂದು ಯೂರೋಪಿಯನ್ನರಿಗೆ ಮಾರುತ್ತಿದ್ದರು ಇದಕ್ಕೆ ಪ್ರತಿಫಲವಾಗಿ ಆಫ್ರಿಕಾದಲ್ಲಿಯ ಕೆಲವು ಬುಡಕಟ್ಟು ಹಿರಿಯರು ಯೂರೋಪಿಯನ್ನ ರಿಂದ ಬಂದೂಕುಗಳು, ಕಬ್ಬಿಣದ ಆಯುಧಗಳು, ಮದ್ಯ, ವಸ್ತ್ರಗಳನ್ನು ಪಡೆಯುತ್ತಿದ್ದರು.


ಈ ವಿಧವಾಗಿ ಗುಲಾಮರನ್ನಾಗಿ ಮಾಡಿದವರಿಗೆ ಎಷ್ಟೋ ಕಷ್ಟಗಳನ್ನು ಕೊಡುತ್ತಿದ್ದರು. ಎಷ್ಟೋ ಜನ ಪ್ರಯಾಣ ಪೂರ್ಣಗೊಳಿಸದೇ ಬಂದರು ಸೇರಿಕೊಳ್ಳದೇ ಮಾರ್ಗ ಮಧ್ಯದಲ್ಲಿಯೇ ಮರಣಿಸು ತ್ತಿದ್ದರು. ನೌಕೆಗಳು ಪೂರ್ತಿಯಾಗಿ ಗುಲಾಮರಿಂದ ತುಂಬಿರುತ್ತಿದ್ದವು. ಅವರಿಗೆ

SCERT TELANGANA

ಅವಶ್ಯಕವಾದ ಆಹಾರ, ನೀರು, ಔಷಧಗಳು ದೊರಕುತ್ತಿರಲಿಲ್ಲ. ಆ ದಿನಗಳಲ್ಲಿ ಆಫ್ರಿಕಾ ದಿಂದ ಅಮೇರಿಕಾಗೆ ಹೋಗು ವದಕ್ಕೆ ಎಷ್ಟೋ ದಿನಗಳು ಹಿಡಿಯುತ್ತಿತ್ತು. ಅದರಿಂದ ಅನಾರೋಗ್ಯದಿಂದ, ಪೌಷ್ಟಿಕ ಆಹಾರ ಲೋಪದಿಂದ ಎಷ್ಟೋಜನ ಗುಲಾಮರು ಪ್ರಯಾಣದಲ್ಲಿಯೆ ಸಾಯುತ್ತಿದ್ದರು.

ಅಮೇರಿಕಾದಲ್ಲಿ ಕೂಡ ಇವರ ಮೇಲೆ ಅಮಾನವೀಯವಾಗಿ ಕಠಿಣ ಕ್ರಮ ಗಳನ್ನು ತೆಗೆದು ಕೊಳ್ಳುತ್ತಿದ್ದರು. ಅವರಿಂದ ಎಷ್ಟೋ ಕೆಲಸ ಮಾಡಿಸಿ ಕೊಳ್ಳುತ್ತಾ ಅವರಿಗೆ ಸರಿಹೊಂದುವ ಆಹಾರ, ಇರುವುದಕ್ಕೆ ವಸತಿ ಕಲ್ಪಿಸಲಿಲ್ಲ. ಈ ವಿಧವಾಗಿ ಆಫ್ರಿಕಾದಿಂದ ಎಷ್ಟೋ ಲಕ್ಷಗಳ ಜನರನ್ನು ಗುಲಾಮ ರನ್ನಾಗಿ ಅಮೇರಿಕಾದ ದಕ್ಷಿಣ, ಉತ್ತರ ಪ್ರಾಂತ್ಯಗಳಿಗೆ, ಹತ್ತಿರದಲ್ಲಿಯ ದ್ವಿಪಗಳಿಗೆ ಸಾಗಿಸುತ್ತಿದ್ದರು. ಇವರಲ್ಲಿ ಲಕ್ಷಗಟ್ಟಲೆ ಜನ ಮರಣಿಸುತ್ತಿದ್ದರು. 16ನೇ 17ನೇ ಶತಮಾನಗಳಲ್ಲಿ ಈ ವಿಧವಾದ ಗುಲಾಮಗಿರಿ ವ್ಯಾಪಾರವನ್ನು ಎಷ್ಟೊ ಕಂಪನಿಗಳು ನಿರ್ವಹಿಸಿದವು. 19ನೇ ಶತಮಾನದಲ್ಲಿ ಈ ವ್ಯಾಪಾರವು ಮುಗಿಯಿತು. ಅಮೇರಿಕಾದಲ್ಲಿ ಈ ವಿಧವಾಗಿ ಬಂದ ಗುಲಾಮರನ್ನು ಅನೇಕ ಹೋರಾಟಗಳ ನಂತರ ಸ್ವೇಚ್ಛಾಯುತ ಅಮೇರಿಕಾ ಪೌರರನ್ನಾಗಿ 1860 ರಲ್ಲಿ ಪ್ರಕಟಿಸಿದರು.

ನಕ್ಷೆ–5 1913ರಲ್ಲಿ ಯೂರೋಪಿಯನ್ನರ ವಲಸೆ ಪ್ರಾಂತಗಳು



ಯೂರೋಪ್ ವಸಹಾತುಗಳು :

ಯುರೋಪಿಯನ್ನರು ಭಾರತ ದೇಶವನ್ನು ಸೇರುವು ದಕ್ಕೆ ಆಫ್ರಿಕಾವನ್ನು ಸುತ್ತಿ ಬರುತ್ತಿದ್ದರೆಂದು ನೀವು ತಿಳಿದು ಕೊಂಡಿದ್ದೀರಿ. ಆ ಪ್ರಯತ್ನದಲ್ಲಿ ಅವರು ಆಫ್ರಿಕಾ ನೌಕಾಶ್ರ ಯದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ನಂತರ ಪೋರ್ಚುಗೀಸರು, ಡಚ್ಚರು, ಆಂಗ್ಲೇಯರು, ಫ್ರೇಂಚ್, ಜರ್ಮನ್ನರು ಆಫ್ರಿಕಾ ಖಂಡದಲ್ಲಿನ ಒಳ ಭೂಭಾಗದಲ್ಲಿ ಪ್ರವೇಶಿಸಿ ಅಲ್ಲಿಯ ಪ್ರಾಂತ್ಯಗಳನ್ನು ವಸಾಹತುಗಳಾಗಿ ಮಾಡಿಕೊಂಡರು. 19ನೇ ಶತಮಾನ ಕಾಲದ ಆಫ್ರಿಕಾದ ರಾಜಕೀಯ ನಕ್ಷೆಯನ್ನು ನೋಡಿರಿ. ಈ ನಕ್ಷೆ 5 ಯೂರೋಪಿಯನ್ನರು ವಸಹಾತುಗಳಾಗಿ ಮಾಡಿಕೊಂಡ ಪ್ರಾಂತ್ಯಗಳನ್ನು ತೋರಿಸುತ್ತದೆ.

ನೈಜೀರಿಯಾದಲ್ಲಿನ ಬೆಳೆಗಳು/ತೋಟಗಳು:

ನಿಮಗೆ ಚಾಕ್ಲೇಟ್ ತಿನ್ನುವದೆಂದರೆ ತುಂಬಾ ಇಷ್ಟವಲ್ಲವೇ



ಚಿತ್ರ 7.6
ಸಂಕೋಲೆಗಳೊಂದಿಗೆ ಗುಲಾಮರು

? ಅವುಗಳನ್ನು ನೈಜೀರಿಯಾದಲ್ಲಿ ಬೆಳೆಯುವ ಕೋಕೋದಿಂದ ತಯಾರಿಸುತ್ತಾರೆ. ದಕ್ಷಿಣ ನೈಜೀರಿಯಾದಲ್ಲಿ ಕೋಕೋ ಮಾತ್ರವಲ್ಲದೇ ರಬ್ಬರು ತೋಟಗಳು ಕೂಡಾ ಇವೆ. ಪಾಮ್ ಆಯಿಲ್ ಮರಗಳನ್ನು ಕೂಡಾ ಹೆಚ್ಚಾಗಿ ಬೆಳೆಸುತ್ತಾರೆ. ಇವುಗಳ ಬೀಜಗಳಿಂದ ಎಣ್ಣೆ ತೆಗೆಯುತ್ತಾರೆ. ಹಡಗಿನಲ್ಲಿ ನೈಜರ್ ನದಿಯನ್ನು ದಾಟಿ ಪಾಮ್ ಆಯಿಲ್ ಹಣ್ಣುಗಳನ್ನು, ಬೀಜಗಳನ್ನು ಶೇಖರಿಸುತ್ತಾರೆ. ಹಿಂದಿನ ಕಾಲದಲ್ಲಿ ಕಾಡಿನಲ್ಲಿಯೇ ಪಾಮ್ ಆಯಿಲ್ ಗಿಡಗಳನ್ನು ಬೆಳೆಸುತ್ತಿದ್ದರು. ಬೇಡಿಕೆ ಹೆಚ್ಚಾಗಿದ್ದರಿಂದ ಅರಣ್ಯ ಪ್ರಾಂತಗಳಲ್ಲಿ ಇವುಗಳ ಉತ್ಪಾದನೆ ಹೆಚ್ಚಾಗಿದೆ. ನೈಜೀರಿಯಾದಿಂದ ಕೋಕೋ, ರಬ್ಬರ್, ಪಾಮ್ ಆಯಿಲ್ ರಫ್ತು ಮಾಡಿ ವಿದೇಶಿ ಮಾರಕ ದ್ರವ್ಯವನ್ನು ಹೊಂದುತ್ತಿದ್ದಾರೆ.

SCERT TELANGANA

ನೈಜೀರಿಯಾದಲ್ಲಿ ಈ ಬೆಳೆಗಳನ್ನು ಬೆಳೆಸುವ ಪ್ರಾಂತಗಳನ್ನು ನಕಾಶೆ–4 ರಲ್ಲಿ ಗುರ್ತಿಸಿರಿ.

ಬ್ರಿಟಿಷರು ತೋಟಗಳನ್ನು ಬೆಳೆಸುವದನ್ನು ಪ್ರಾರಂಭಿಸಿದರು. ಅರಣ್ಯದಿಂದ ಬರುವ ಉತ್ಪಾದನೆಗಳೊಂದಿಗೆ ಬ್ರಿಟಿಷರು ತೃಪ್ತಿಪಡುತ್ತಿರಲಿಲ್ಲ. ಅವರು ಅಧಿಕ ಉತ್ಪಾದನೆ ಮಾಡಿ ರಫ್ತು ಮಾಡುತ್ತಿದ್ದರು.

ತೋಟಗಳು ಅವರಿಗೆ ಅನೇಕ ಕೆಲಸಗಳನ್ನು ಸುಲಭಗೊಳಿಸಿದವು. ಮೊದಲಿಗೆ ಅವರು ಅರಣ್ಯಕ್ಕೆ ತೆರಳಿ ಪಾಮ್ ಆಯಿಲ್ ಮರಗಳನ್ನು ಗುರುತಿಸುವ ಅವಶ್ಯಕತೆಯಿರಲಿಲ್ಲ. ಎಲ್ಲಾ ಗಿಡಗಳನ್ನು ಒಂದೇ ಕಡೆ ಬೆಳೆಸಿದ್ದರಿಂದ ಅವುಗಳನ್ನು ರಕ್ಷಿಸುವದು, ಬೆಳೆ ಕೊಯ್ಯುವದು ಸುಲಭವಾಯಿತು. ವ್ಯಾಪಾರಕ್ಕೆ ಅವಸರವಾದ ಉತ್ಪಾದನೆ ತುಂಬಾ ಹೆಚ್ಚಾಯಿತು. ನೈಜೀರಿಯಾ ಪ್ರಜೆಗಳು ಆ ತೋಟಗಳಲ್ಲಿ ಕೆಲಸಮಾಡುವದನ್ನು ಆರಂಭಿಸಿದರು. ಬ್ರಿಟೀಷರು ಈ ತೋಟಗಳಿಗೆ ಮ್ಯಾನೇಜರುಗಳಾಗಿ ಇರುತ್ತಿದ್ದರು. ಈ ವಿಧವಾಗಿ ನೈಜೀರಿಯಾದಲ್ಲಿ ಪಾಮ್ ಆಯಿಲ್ ಗಿಡಗಳು, ಕೋಕೋ, ರಬ್ಬರನಂತಹ ವಾಣಿಜ್ಯ ವ್ಯವಸಾಯ ಆರಂಭವಾಯಿತು.

ಇದಲ್ಲದೇ ತೋಟಗಳಿರುವ ಪ್ರಾಂತದಲ್ಲಿ ಅನೇಕ ಪ್ರಾಸೆಸಿಂಗ್ ಕೈಗಾರಿಕೆಗಳನ್ನು ಸ್ಥಾಪಿಸಿದರು. ಇವುಗಳಲ್ಲಿ ಕೋಕೋ ಹಣ್ಣುಗಳಿಂದ ಬೀಜ ತೆಗೆಯುವದು, ಅವುಗಳನ್ನು ಒಣಗಿಸುವದು, ಪಾಮ್ ಗಿಡಗಳ ಹಣ್ಣುಗಳಿಂದ ಎಣ್ಣೆ ತೆಗೆಯುವುದು, ಗಿಡಗಳಿಂದ ರಬ್ಬರು ತೆಗೆಯುವಂತಹವುಗಳು ಮುಖ್ಯವಾದವುಗಳು.

ಇವುಗಳಿಂದ ಬರುವ ಲಾಭವನ್ನು ಹೆಚ್ಚಾಗಿ ಬ್ರಿಟೀಷರೇ ಪಡೆಯುತ್ತಿದ್ದರು. ನೈಜೀರಿಯಾದ ಪ್ರಜೇಗಳು ಕೇವಲ ವ್ಯವಸಾಯ ಕೂಲಿಗಳಾಗಿ ಕೆಲಸ ಮಾಡುತ್ತಿದ್ದರು. ಭಾರತ ದೇಶದಲ್ಲಿ ಬ್ರಿಟೀಷರ ಕಾಲದಲ್ಲಿ ಕೇವಲ ವ್ಯಾಪಾರಕ್ಕಾಗಿಯೇ ಟೀ, ಕಾಫಿ, ತೋಟಗಳು ಆರಂಭಗೊಂಡವು. 1960 ರವರೆಗೆ ನೈಜೀರಿಯಾ ಬ್ರಿಟೀಷರ ಆಧಿನದಲ್ಲಿದ್ದು, ಸ್ವಾತಂತ್ರ್ಯ ಪಡೆಯಿತು. ಆ ನಂತರ ಕ್ರಮವಾಗಿ ತೋಟಗಳನ್ನು ಬೆಳೆಸುವದು ಮತ್ತು ಈ ತೋಟಗಳಿಗೆ ಸಂಬಂಧಿಸಿದ ವ್ಯಾಪಾರ ನೈಜೀರಿಯಾ ಪ್ರಜೆಗಳ ನಿಯಂತ್ರಣದಲ್ಲಿ ಬರುವದರೊಂದಿಗೆ ಅವರು ಪ್ರಯೋಜನ ಪಡೆಯುತ್ತಿರುವರು.

- ಆಫ್ರಿಕಾದಲ್ಲಿಯ ವಸಾಹತು ಏರ್ಪಡಿಸಿ ಕೊಂಡು ಯೂರೋಪ್ ದೇಶಗಳನ್ನು ಯೂರೋಪ್ ನಕ್ಷೆಯಲ್ಲಿ ನೀವು ಗುರುತಿಸಿರಿ.
- ಸೂಡಾನ್, ಜೈರೀಯಾದಲ್ಲಿ ವಸಹಾತು ಏರ್ಪಾಟು ಮಾಡಿಕೊಂಡ ಐರೋಪ್ಯ ದೇಶಗಳು ಯಾವುವು?
- ಆಫ್ರಿಕಾದಲ್ಲಿ ವಸಹಾತುಗಳು ಏರ್ಪಡದ ಯವುವುದಾದರು ಒಂದು ಪ್ರಾಂತ್ಯವನ್ನು ನೀವು ಗುರ್ತಿಸಬಲ್ಲಿರಾ?

ಯೂರೋಪಿಯನ್ನರು ಆಫ್ರಿಕಾದಲ್ಲಿ ವಸಹಾತು ಏರ್ಪಡಿಸುತ್ತ ಖಂಡಾಂತರ ಭಾಗದೊಳಗೆ ಹೋದರು. ಅವರು ನೈಲುನದಿ ಹುಟ್ಟವ ಸ್ಥಳದವರೆಗೆ ಉತ್ತರದ ಕಡೆ ಪ್ರಯಾಣಿಸಿದರು. ಪಶ್ಚಿಮ ಪ್ರಾಂತ್ಯದ ನೈಜರ್ ಕಣಿವೆ ಪ್ರಾಂತ್ಯವನ್ನು ಆಕ್ರಮಿಸಿಕೊಂಡರು ದಕ್ಷಿಣದ ಕಡೆ ಕೇಪ್‌ಟಾನ್ ವರೆಗೆ ಹೋಗಿ ಜಾಂಬೇಜಿ ನದಿ ಪರಿವಾಹಕ ಪ್ರಾಂತ್ಯವನ್ನು ಆವಿಷ್ಕರಿಸಿದರು.

ಯೂರೋಪಿಯನ್ನರು ಆಫ್ರಿಕಾ ಸೌದೆ. ಖನಿಜ ಸಂಪತ್ತನ್ನು ದೊಡ್ಡ ಪ್ರಮಾಣದಲ್ಲಿ ಯೂರೋಪಿಗೆ ರಫ್ತು ಮಾಡಿದರು. ವಾಸ್ತವಾಗಿ ಆಫ್ರಿಕಾಖಂಡ ದಕ್ಷಿಣ ಪ್ರಾಂತ್ಯ ದಲ್ಲಿಯ ಬಂಗಾರದ ಗಣಿಗಳು, ವಜ್ರದಗಣಿಗಳು ಇಂದಿಗೂ ಯೂರೋಪಿಯನ್ ಕಂಪನಿಗಳ ಅಧೀನದಲ್ಲಿವೆ. ಜಾಂಬಿಯಾ, ಜಿಂಬಾಬ್ವೇಗಳಲ್ಲಿ ಬೆಲೆಕಟ್ಟಲಾಗದ ರಾಗಿ ಗಣಿಗಳು ಇವೆ. ಎಷ್ಟೋಕಾಲ ದಿಂದಲೂ ಈ ಖನಿಜಗಳು ಅವರಿಗೆ ಬಹಳ ಮುಖ್ಯವಾದ ರಫ್ತಾಗಿದೆ. ಯೂರೋಪಿಯ ನ್ನರು ಆಫ್ರಿಕಾದಿಂದ ಸಂಪನ್ಮೂಲಗಳನ್ನು ರಫ್ತು ಮಾಡು ವುದನ್ನು ನಿಲ್ಲಿಸಲಿಲ್ಲ. ಅವರು ಟೀ, ಕಾಫಿ, ರಬ್ಬರು, ತಂಬಾಕು ಮೊದಲಾದ ತೋಟಗಾರಿಕೆ ಬೆಳೆಗಳನ್ನು ಪ್ರಾರಂಭಿಸಿ ಅವುಗಳನ್ನು ಯೂರೋಪ್‌ಗೆ ರಫ್ತು ಮಾಡುತ್ತಿದ್ದರು.

ಸ್ವತಂತ್ರ ಆಫ್ರಿಕಾ :

ಆಫ್ರಿಕಾ ದೇಶಗಳು ಯೂರೋಪಿಯನ್ನರ ಆಧಿಕಾರ ದಿಂದ ಶತಮಾನಗಳ ಕಾಲದಿಂದ ಸ್ವತಂತ್ರ ಪಡೆಯುತ್ತಿದ್ದಾರೆ. ಹೊಸ ದೇಶಗಳ ಉದಯವಾಗಿ ಅಲ್ಲಿಯ ಜನರು ನೂತನ ಸರ್ಕಾರಗಳನ್ನು ಏರ್ಪಟು ಮಾಡಿ ಕೊಂಡರು. ಆದರೆ ಎಷ್ಟೋ ಜನ ಯೂರೋಪಿಯನ್ನರು ಆಫ್ರಿಕಾ ಖಂಡದಲ್ಲಿ ಸ್ಥಿರನಿವಾಸ ಏರ್ಪಾಟು ಮಾಡಿ ಕೊಂಡರು. ಆದರೆ ಆಫ್ರಿಕನ್ನರು ನಿಧಾನವಾಗಿ ತಮ್ಮ ದೇಶದ ಮೇಲೆ, ತಮ್ಮ ಕಾಡುಗಳ ಮೇಲೆ, ಗಣಿಗಳ ಮೇಲೆ, ವ್ಯವಸಾಯ ಉತ್ಪತ್ತಿಗಳ ಮೇಲೆ ತಮ್ಮ ಅಧಿಪತ್ಯ ಸಾಧಿಸುತ್ತಾ ಅವುಗಳ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.

- ಆಫ್ರಿಕಾ ದೇಶಗಳನ್ನು ತಿಳಿದುಕೊಂಡು ಅವುಗಳನ್ನು ನಕ್ಷೆ–7 ರಲ್ಲಿ ಬಣ್ಣಗಳನ್ನು ಹಾಕಿ, ದೇಶಗಳ ಹೆಸರುಗಳನ್ನು ಬರೆಯಿರಿ.

SCERT TELANGANA

ಆಫ್ರಿಕಾದಲ್ಲಿ ಖನಿಜ ಸಂಪತ್ತು

ಇದ್ದಿಲು, ರಾಗಿ, ತವರ ಮೊದಲಾದ ಖನಿಜಗಳು ಆಫ್ರಿಕಾ ಖಂಡದಲ್ಲಿ ಹೇರಳವಾಗಿ ಲಭಿಸುತ್ತವೆ. ಚಿನ್ನ, ವಜ್ರದಂತಹ ಬೆಲೆಬಾಳುವ ಖನಿಜಗಳು ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಲಭಿಸುತ್ತದೆ. ಇಲ್ಲಿಯ ಜನರನ್ನು ಗುಲಾಮರನ್ನಾಗಿ ಕೆಲಸ ಮಾಡಿಸಿಕೊಂಡು, ಖನಿಜ ಸಂಪತ್ತನ್ನು ದೋಚಿಕೊಳ್ಳುವುದೇ ಯುರೋಪಿಯನ್ನರ ಮುಖ್ಯ ಉದ್ದೇಶವಾಗಿತ್ತು. ಆಫ್ರಿಕಾ ದೇಶಗಳು ಸ್ವಾತಂತ್ರ್ಯ ಪಡೆದಾಗ್ಯೂ, ಖನಿಜ ಸಂಪತ್ತಿನ ಮೇಲೆ ಇಂದಿಗೂ ಯೂರೋಪಿಯನ್ನರ ಆಧಿಪತ್ಯ ನಡೆಯುತ್ತಲೇ ಇದೆ. ಉದಾ: ನೈಜೀರಿಯಾ ಸಹಜ ಸಂಪನ್ಮೂಲಗಳಲ್ಲಿ ಖಚ್ಚಾ ತೈಲ ಅಥವಾ ಪೆಟ್ರೋಲಿಯಂ ಅತಿ ಪ್ರಧಾನವಾದದು. ಈ ದೇಶಗಳಲ್ಲಿಯ ತೈಲಶುದ್ಧಿ ಕೈಗಾರಿಕೆಗಳ ಮೇಲೆ ಡಚ್ ಕಂಪನಿಗಳು ಅಧಿಪತ್ಯ ಚಲಾಯಿಸುತ್ತವೆ.

1958 ನೈಜೀರಿಯಾ ಕಚ್ಚಾ ತೈಲವನ್ನು ರಫ್ತು ಮಾಡುತ್ತಲೇ ಇದೆ. ತೈಲ ಶುದ್ಧೀ ಕೈಗಾರಿಕೆಗಳು ಹಾರ್ ಕೋರ್ಟ್, ವಾರಿ ಪೋರ್ಟನಲ್ಲಿ ಸ್ಥಾಪಿಸಲಾಗಿದೆ. ಇಂದಿಗೂ ಈ ಕಾರ್ಖಾನೆಗಳು ವಿದೇಶಿ ಕಂಪೆನಿಗಳ ಆಧಿನದಲ್ಲಿವೆ. ನೈಜೀರಿಯಾ ಸರಕಾರದ ಭಾಗ ಬಹಳ ಕಡಿಮೆ. ನೈಜೀರಿಯಾದಲ್ಲಿ ಸಿಗುವ ಇತರ ಖನಿಜಗಳ ಪರಿಸ್ಥಿತಿ ಕೂಡ ಹೀಗೆಯೇ ಇದೆ.

ಆಧುನಿಕ ಸಾಂಕೇತಿಕ ಪರಿಜ್ಞಾನದಿಂದ ದೊಡ್ಡ ಪ್ರಮಾಣದ ಬಂಡವಾಳ ಹೂಡಿ ವಿದೇಶಿ ಕಂಪೆನಿಗಳು, ಆಫ್ರಿಕಾದಲ್ಲಿನ ಖನಿಜಗಳನ್ನು ಹೊರತೆಗೆದು, ಶುದ್ಧಿ ಕರಿಸುವ ಕಾರ್ಖಾನೆಗಳನ್ನು ಸ್ಥಾಪಿಸಿ ಸ್ಥಳೀಯರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸುತ್ತಿವೆ. ಕಾರ್ಮಿಕರಿಗೆ ಕಡಿಮೆ ಸಂಬಳ ಕೊಟ್ಟು ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದಾರೆ. ಕಂಪೆನಿಗಳೆಲ್ಲಾ ಪರಿಸರ ಸಂರಕ್ಷಣೆಯನ್ನು ನಿರ್ಲಕ್ಷಿಸುತ್ತಿವೆ. ಇದರಿಂದ ಪ್ರಜೆಗಳಿಗೆ, ಪರಿಸರಕ್ಕೆ ಅತೀವ ನಷ್ಟವಾಗುತ್ತಿದೆ. ಇದರ ಪ್ರಭಾವ ಭೂಮಿಯ ಗುಣಮಟ್ಟದ ಮೇಲೆ ಜನರ ಜೀವನದ ಮೇಲೆ ತೀವ್ರ ಪ್ರಭಾವ ತೋರಿಸುತ್ತಿದೆ.

- ಆಫ್ರಿಕಾ ದೇಶಗಳನ್ನು ನಕ್ಷೆ 7 ಗುರುತಿಸಿ ಬಣ್ಣಹಾಕಿ ಹೆಸರು ಬರೆಯಿರಿ.

ನಿಮ್ಮ ಅಭ್ಯಾಸವನ್ನು ಉತ್ತಮ ಪಡಿಸಿಕೊಳ್ಳಿರಿ

1) ಯೂರೋಪ್‌ನಿಂದ ಆಫ್ರಿಕಾದಲ್ಲಿಯ ಉತ್ತರ ಭಾಗವನ್ನು ಸೇರಿಕೊಳ್ಳುವುದಕ್ಕೆ ಮಾರ್ಗ ಮಧ್ಯದಲ್ಲಿ ಯಾವ ಸಮುದ್ರವನ್ನು ದಾಟಬೇಕು?

2) ಯೂರೋಪಿಯನ್ನರು ಆಫ್ರಿಕಾದಲ್ಲಿಯ ಅಂತರ್ ಭೂಭಾಗಗಳು ಸೇರಿಕೊಂಡಾಗ ಅವರು ಎದುರಿಸಿದ ಮೂರು ತೊಂದರೆಗಳು ಯಾವುವು?

3) ಆಫ್ರಿಕಾದಲ್ಲಿಯ ಎರಡು ದೊಡ್ಡ ಮರುಭೂಮಿಗಳು ಯಾವುವು?

4) ಈ ಪಾಠದಲ್ಲಿ ಆಫ್ರಿಕಾಗೆ ಸಂಬಂದಿಸಿದ ಎರಡು ರಾಜಕೀಯ ನಕ್ಷೆಗಳನ್ನು ಕೊಡಲಾಗಿದೆ. ಆ ಎರಡು ನಕ್ಷೆಗಳನ್ನು ಪರಿಶೀಲಿಸಿ ನೈಜೀರಿಯಾ, ಜಿಂಬಾಬ್ವೆ ದೇಶಗಳು ಯಾವ ಯೂರೋಪಿಯನ್ ದೇಶದ ನಿಯಂತ್ರಣದಲ್ಲಿ ಇದೆಯೋ ಗುರ್ತಿಸಿರಿ.

5) ಆಫ್ರಿಕಾದಲ್ಲಿಯ ಭೂಮಧ್ಯರೇಖಾ ಪ್ರಾಂತ್ಯದಲ್ಲಿಯ ಅರಣ್ಯಗಳಿರುವ ದೇಶಗಳಲ್ಲಿ ಎರಡನ್ನು ಗುರ್ತಿಸಿರಿ.

6) ಆಫ್ರಿಕಾದಲ್ಲಿ ಯೂರೋಪಿಯನ್ನರು ಯಾವ ವಸ್ತುಗಳ ವ್ಯಾಪಾರ ಮಾಡುತ್ತಿದ್ದರು ? ಅವರು ವ್ಯಾಪಾರಗೊಸ್ಕರ ಯಾವ ರೀತಿಯ ವ್ಯವಸಾಯ ಉತ್ಪತ್ತಿಗಳನ್ನು ಪ್ರೋತ್ಸಾಹಿಸುತ್ತಿದ್ದರು?

7) ಗುಲಾಮಗಿರಿ ವ್ಯಾಪಾರದಲ್ಲಿ ಯಾರು ಲಾಭಪಡೆದರು ? ಅಮೇರಿಕಾದವರಿಗೆ ಗುಲಾಮರು ಏತಕ್ಕೆ ಅವಸರವಾದರು ?

8) ಗುಲಾಮಗಿರಿ ವ್ಯಾಪಾರ ಬಹಳ ಹೇಯವಾದುದೆಂದು ನೀನು ಹೇಗೆ ಹೇಳಬಲ್ಲೇ ?

9) ಈ ಪಾಠ್ಯಾಂಶದ ಕೊನೆಯ ಪ್ಯಾರವನ್ನು ಓದಿ, ವ್ಯಾಖ್ಯಾನಿಸಿರಿ.

SCERT TELANGANA

ನಕ್ಷೆ–6 ಆಫ್ರಿಕಾ ದೇಶಗಳು



SCERT TELANGANA

ನಕ್ಷೆ–6 ರ ಸಹಾಯದಿಂದ ಈ ನಕ್ಷೆಯಲ್ಲಿರುವ ದೇಶಗಳನ್ನು ಗುರ್ತಿಸಿರಿ. ಅವುಗಳಿಗೆ ವಿವಿಧ ರೀತಿಯ ಬಣ್ಣಗಳನ್ನು ತುಂಬಿರಿ. ಯಾವ ಎರಡು ಸರಿಹಯದ್ದು ದೇಶಗಳಿಗೆ ಕೂಡ ಒಂದೇ ರೀತಿಯ ಬಣ್ಣವನ್ನು ತುಂಬದ ಹಾಗೆ ಜಾಗ್ರತೆ ವಹಿಸಿರಿ.

ನಕ್ಷೆ–7 ಆಫ್ರಿಕಾ ದೇಶಗಳು



SCERT TELANGANA

ಘಟಕ 7

ಕರಕುಶಲಗಾರಿಕೆ –ಕೈಮಗ್ಗ ವಸ್ತ್ರಗಳು

ಒಂದನೇ ಭಾಗ

ಅಂದುಗುಲ ಗ್ರಾಮಕ್ಕೆ ಸೇರಿದ ಬುಟ್ಟಿ ಹೆಣೆಯುವವರು (ಮೇದಾರರು):

ಪೋಲಯ್ಯ ಕರಕುಶಲ ಕೆಲಸದವನು. ಅವನು ಬುಟ್ಟಿಗಳನ್ನು ಹೆಣೆಯುತ್ತಾನೆ. ಅವನ ಸ್ವಂತ ಗ್ರಾಮ ಮೆಹಬೂನ್‌ನಗರ ಜಿಲ್ಲೆಯ ಕಲ್ವಕುರ್ತಿ ಮಂಡಲದ ಅಂದಗುಲ ಅವನ ವಯಸ್ಸು 35 ವರ್ಷ. ಅವನದು ಗಿರಿಜನ ಜಾತಿ ಸಂಬಂಧವಾದ ಎರುಕುಲ ಕುಲ. ಆತನ ಹೆಂಡತಿ ಭಾಗ್ಯಮ್ಮ ಸಹ ಬುಟ್ಟಿ ಹೆಣೆಯುತ್ತಾಳೆ. ಬುಟ್ಟಿಗಳು ಹೆಣೆಯುವುದು ವಂಶಪಾರಂಪರ್ಯವಾಗಿ ನಡೆದುಬಂದ ವೃತ್ತಿ. ಪೋಲಯ್ಯನಿಗೆ ಮೂವರು ಮಕ್ಕಳು. ಅವರ ವೃತ್ತಿಗೆ ಗ್ರಾಮದಲ್ಲಿ ಆಧ್ಯತೆ ಇಲ್ಲದಂತಾಗಿ 30ವರ್ಷಗಳ ಕೆಳಗೆ ಪೋಲಯ್ಯ ತಂದೆಯ ಜೊತೆ ಮತ್ತೆ 25 ಕುಟುಂಬಗಳು ಹೈದರಾಬಾದಿಗೆ ವಲಸೆ ಬಂದು ಸ್ಥಿರಪಟ್ಟರು. ಪೋಲಯ್ಯ ಚಾದರ ಘಾಟ್ ಪುಟ್‌ಪಾತ್ ಪಕ್ಕದಲ್ಲಿ ಬುಟ್ಟಿಗಳನ್ನು ಮಾರುತ್ತಾರೆ.

ಪೋಲಯ್ಯ ಈಚಲು ಗರಿಗಳನ್ನು ತೆಗೆದುಕೊಂಡು ಬಂದು ಕತ್ತಿಯಿಂದ ಕೆತ್ತಿ ಸ್ವಲ್ಪ ದಿನಗಳು ಒಣಗಿಸಿ ಅವುಗಳಿಂದ ಬುಟ್ಟಿಗಳನ್ನು ಹೆಣೆಯುತ್ತಾನೆ. ಈತನು ಅವರ ಸ್ವಗ್ರಾಮವಾದ ಅಂದುಗುಲದಲ್ಲಿ ಸ್ಥಾನಿಕರು ಶೇಖರಿಸಿದ ಈಚಲ ಗರಿಗಳ ಕಟ್ಟುಗಳನ್ನು ಕೊಂಡು ಹೈದರಾಬಾದಿಗೆ ತೆಗೆದುಕೊಂಡು ಬರುತ್ತಾನೆ. ಅಂದಗುಲ ಗ್ರಾಮ ಹೈದರಾಬಾದ್‌ಗೆ 60ಕಿ.ಮೀ ದೂರದಲ್ಲಿದೆ.

- ಬುಟ್ಟಿಗಳನ್ನು ಹೆಣೆಯುವಿಕೆಗೆ ಯಾವ ಕಚ್ಚಾಸರಕು ಗಳನ್ನು ಬಳಸುತ್ತಾರೆ? ಅವುಗಳನ್ನು ಯಾರು ಶೇಖರಿಸಿ ಮಾರುತ್ತಾರೆ?
- ಬುಟ್ಟಿಗಳು ಹೆಣೆಗಾರಿಕೆಗೆ ಯಾವ ಸಲಕರಣೆಗಳನ್ನು ಉಪಯೋಗಿಸುತ್ತಾರೆ.

ಪೋಲಯ್ಯ ಈಚಲು ಗರಿಗಳ ಕಟ್ಟುಗಳನ್ನು ಒಂದಕ್ಕೆ ರೂ. 120ರಂತೆ ಒಟ್ಟು 10 ಕಟ್ಟುಗಳನ್ನು ಖರೀದಿಸಿ ತೆಗೆದುಕೊಂಡು ಬರುತ್ತಾನೆ. ಅವು ಎರಡು ತಿಂಗಳ ವರೆಗೆ ಬುಟ್ಟಿಗಳ ತಯಾರಿಕೆಗೆ ಸರಿಹೋಗುತ್ತವೆ. ಒಂದು ಕಟ್ಟಿಗೆ 25ರಂತೆ ಒಟ್ಟು ಕಟ್ಟಿಗೆಗಳಿಗೆ 250 ಬುಟ್ಟಿಗಳನ್ನು ಹೆಣೆಯುತ್ತಾನೆ. ಒಂದು ಬುಟ್ಟಿ ಹೆಣೆಯಲು 30 ನಿಮಿಷಗಳ ಸಮಯ ಬೇಕಾಗುತ್ತದೆ. ಪ್ರತಿದಿನ ಉದಯ 10 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ಕೆಲಸ ಮಾಡುತ್ತಾನೆ. ಮಧ್ಯದಲ್ಲಿ ಊಟಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳತ್ತಾನೆ.

ಪೋಲಯ್ಯ ಪ್ರತಿ ಬುಟ್ಟಿಯನ್ನು 20ರೂ. ರಂತೆ ಮಾರುತ್ತಾನೆ. ಹಬ್ಬಗಳ ಸಮಯದಲ್ಲಿ ದೊಡ್ಡ ಸೈಜು ಬುಟ್ಟಿಗಳನ್ನು ಸಹ ಮಾರುತ್ತಾನೆ. ಇವುಗಳ ಬೆಲೆ ಬುಟ್ಟಿಗೆ



ಚಿತ್ರ –7.1 ಬುಟ್ಟಿಗಳನ್ನುಮಾರುತ್ತಿರುವ ಪೋಲಯ್ಯ.

ಬಳಸಿದ ಕಚ್ಚಾವಿನ ಮೇಲೆ ಆಧಾರವಾಗಿರುತ್ತದೆ. ಆತನು ವರ್ಷವಿಡೀ ಬುಟ್ಟಿಗಳನ್ನು ಮಾರುತ್ತಾನೆ.

ಪ್ರತಿ ತಿಂಗಳು ರೂ.5000/– ಬೆಲೆಯುಳ್ಳ ಬುಟ್ಟಿಗಳನ್ನು ಮಾರುತ್ತಾನೆ. ಆದ್ದರಿಂದ ರೂ.1200/– ರಷ್ಟು ಕಚ್ಚಾಸರುಕಿನ

SCERT TELANGANA



ಚಿತ್ರ 7.2 ಬುಟ್ಟಿಗಳ ಹೆಣಿಕೆ

ಖರ್ಚು, ರೂ.100/– ಸಾರಿಗೆ ಖರ್ಚನ್ನು ತೆಗೆದು ಹಾಕಲು ಪೋಲಯ್ಯನ ಕುಟುಂಬಕ್ಕೆ ಉಳಿಯುವುದು ರೂ.3700/– ಮಾತ್ರ. ಅದು ಎರಡು ತಿಂಗಳುಗಳ ಆದಾಯ. ಕುಟುಂಬದ ಖರ್ಚಿಗೆ ಸರಿಹೊಂದುವುದಿಲ್ಲ. ಅದಕ್ಕೆ ಬುಟ್ಟಿಗಳ ಜೊತೆ ಬಿದಿರು ಉತ್ಪತ್ತಿಗಳ ಅಂಚುಗಳು, ಸ್ಟಾಂಡುಗಳು ಸಹಕೊಂಡು ಮಾರುವುದರಿಂದ ಸ್ವಲ್ಪ ಆದಾಯವನ್ನು ಹೆಚ್ಚು ಮಾಡಿಕೊಳ್ಳುತ್ತಾನೆ.

ಬುಟ್ಟಿಗಳ ತಯಾರಿ ಎನ್ನುವುದು ಕಲಾತ್ಮಕವಾದ ಕೆಲಸ. ಅದಕ್ಕೆ ಸಂಬಂಧಿಸಿದ ಈಚಲು ಗರಿಗಳು, ಬಿದಿರುಗಳು ಕಾಡಿನ ಸಂಪತ್ತು. ಈ ಸಂಪತ್ತು ದೊಡ್ಡ ಕೈಗಾರಿಕೆಗಳ ವಿಪರೀತವಾದ ಸುಲಿಗೆಯ ಕಾರಣದಿಂದ ದಿನದಿನಕ್ಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಸಾಂಪ್ರದಾಯಕವಾಗಿ ಕಾಡನ್ನೇ ಅವಲಂಬಿಸಿ ಜೀವಿಸುತ್ತಿರುವವರ ಮೇಲೆ ಅದು ಪ್ರಭಾವ ತೋರಿಸುತ್ತದೆ. ಇಂತಹ ಉತ್ಪತ್ತಿಗಳಿಗೆ ಬೇಡಿಕೆ ಸಹ ಕಡಿಮೆಯಾಗುತ್ತದೆ. ಅವರು ಇನ್ನು ಬೇರೆ ದಾರಿಯಿಲ್ಲದೆ ಗ್ರಾಮೀಣ ಜೀವನ ಬಿಟ್ಟು ಪಟ್ಟಣ ಜೀವನಕ್ಕೆ ಸಿದ್ಧರಾಗಬೇಕಾಗುತ್ತದೆ. ಇದು ಕೇವಲ ಬುಟ್ಟಿಗಳನ್ನು ತಯಾರಿಸುವವರ ಮೇಲೆಯೇ ಅಲ್ಲದೇ ಅನೇಕ ಸಾಂಪ್ರದಾಯಿಕ ವೃತ್ತಿಗಳ ಮೇಲೆ ಪ್ರಭಾವ ತೋರಿಸುತ್ತದೆ. ಗ್ರಾಮೀಣ ಪ್ರಾಂತಗಳಿಂದ ವಲಸೆ ಬಂದು ನಗರದಲ್ಲಿ ಜೀವಿಸುವವರಿಗೆ ಕನಿಷ್ಟ ಸೌಕರ್ಯಗಳು ಸಿಗುತ್ತಿಲ್ಲ.

ನಗರದಲ್ಲಿ ಕೊಳಚೆ ಪ್ರದೇಶಗಳು:

ಪೋಲಯ್ಯ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಾನೆ. ಅಲ್ಲಿ ನೊಣಗಳು, ಸೊಳ್ಳೆಗಳು, ಕೊಳಚೆ ನೀರು, ದುರ್ವಾಸನೆಯಂತಹ ಅನೇಕ ಸಮಸ್ಯೆಗಳ ಮಧ್ಯೆ ಜೀವಿಸುತ್ತಿದ್ದಾನೆ. ಕುಡಿಯುವ ನೀರು ಆಗಲಿ, ವಿದ್ಯುತ್ ಸೌಕರ್ಯ ಆಗಲಿ ಇಲ್ಲ. ಅವರು ವಾಸಿಸುವ ಗುಡಿಸಿಲುಗಳು ತಡಿಕೆಗಳಿಂದ, ಪ್ಲಾಸ್ಟಿಕ್ ಕವರ್‌ನಿಂದ ಮುಚ್ಚಿದ್ದು, ತಡಿಕೆಗಳಿಂದ ನಿರ್ಮಿತವಾಗಿದೆ. ಮಳೆಕಾಲದಲ್ಲಿ ನೀರು ಗುಡಿಸಿಲುಗಳ ಒಳಗೆ ಬರುವುದು, ಮೇಲ್ಚಾವಣಿ ಬೀಳುವಂತಹ ವಿಷಮ ಪರಿಸ್ಥಿತಿಗಳು, ನಗರ ಮುನ್ಸಿಪಲ್ ಅಧಿಕಾರಿಗಳು ಪದೇ ಪದೇ ಗುಡಿಸಲುಗಳನ್ನು ಖಾಲಿಮಾಡಿಸುವುದು, ಅವರು ಪುನಃ ಅವುಗಳನ್ನು (ಗುಡಿಸಲು) ಹಾಕಿಕೊಳ್ಳುವುದು. ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆ.'

ಶ್ರಮಪಟ್ಟು ಕೆಲಸಮಾಡುವ ಪೋಲಯ್ಯ ನಂತಹವರಿಗೆ ರೇಷನ್ ಕಾರ್ಡು, ಓಟು ಹಕ್ಕು ಇಲ್ಲ. ಅವರಿಗೆ ಕನಿಷ್ಠ ಯಾವ ಗುರುತಿನ ಕಾರ್ಡು ಕೂಡ ಇರುವುದಿಲ್ಲ. ಇದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರು ಪಾಲ್ಗೊಳ್ಳುತ್ತಾ ಇಲ್ಲ. ಬಡವರಿಗೆ ಸಿಗುವ ಸೌಕರ್ಯಗಳು ಕೂಡ ಹೊಂದುತ್ತಿಲ್ಲ.

ಬುಟ್ಟಿಗಳನ್ನು ಹೆಣೆಯುವವರು:

ನಮ್ಮ ರಾಜ್ಯದಲ್ಲಿ ಅನೇಕ ಪ್ರಾಂತ್ಯಗಳಲ್ಲಿ ಎರುಕುಲ ಜಾತಿಯವರು ವಾಸಿಸುತ್ತಿದ್ದಾರೆ. ಅವರಲ್ಲಿ ಬಹಳ ಜನ ಬುಟ್ಟಿಗಳನ್ನು ಹೆಣೆಯುವವರೇ ಅಲ್ಲದೆ ಎರುಕುಲ ಸ್ತ್ರೀಯರಿಗೆ ವಂಶಪಾರಂಪರ್ಯವಾಗಿ ಬರುತ್ತಿರುವ ಕಣಿ ಹೇಳುವುದು ಬರುತ್ತಿದೆ. ಕಣಿ ಎಂದರೆ ವ್ಯಕ್ತಿಗಳ ಭವಿಷ್ಯತ್ತಿನ ಬಗ್ಗೆ ಹೇಳುವುದು ಅವರು ಮಾತ ನಾಡುವುದು ಒಂದು ರೀತಿಯ ಮಾಂಡಲೀಕವಾದ ಎರುಕುಲ ಭಾಷೆ.



ಚಿತ್ರ 7.3 ಬುಟ್ಟಿಗಳ ಹೆಣಿಕೆ.

© SCERT TELANGANA

ಎರುಕುಲ ಭಾಷೆ, ತೆಲುಗು, ತಮಿಳು, ಕನ್ನಡ ಭಾಷೆಗಳ ಪದಗಳನ್ನು ಇವರು ತಮ್ಮ ಭಾಷೆಯಲ್ಲಿ ಬಳಸುತ್ತಾರೆ.

ಸರಿಯಾದುದನ್ನು ಆರಿಸಿಕೊಳ್ಳಿ:

a. ಕಾಡುಗಳು ತುಂಬಾ ಕಡಿಮೆಯಾಗುತ್ತಿವೆ. (ಕೈಗಾರಿಕಗಳಿಂದ/ಬುಟ್ಟಿಗಳ ತಯಾರಿಕೆ ಯಿಂದ)

b. ಪೋಲಯ್ಯ ಬಿದಿರು ವಸ್ತುಗಳನ್ನು ಎಲ್ಲಿ ಕೊಳ್ಳುತ್ತಾನೆ? (ಮಂಡಿಯಲ್ಲಿ ವ್ಯಾಪಾರಗಾರರ ಹತ್ತಿರ/ಅಂದುಗುಲ ಗ್ರಾಮದಲ್ಲಿ) .

- ಬುಟ್ಟಿಗಳ ತಯಾರಿಕೆಗೆ ಆಗುವ ಕಚ್ಚಾಸರಕುಗಳ ಖರ್ಚನ್ನು, ಬರುವ ಆದಾಯವನ್ನು ಒಂದು ಪಟ್ಟಿಯಲ್ಲಿ ಬರೆಯಿರಿ.
- ಪೋಲಯ್ಯನಂತಹವರಿಗೆ ರೇಷನ್ ಕಾರ್ಡು ಕೊಡಬಹುದಾ? ಓಟು ಹಕ್ಕು ಕಲ್ಪಿಸಬಹುದಾ?

ಮೇಲಿನ ವಿಷಯದ ಮೂಲಕ ನಮಗೆ ತಿಳಿಯುತ್ತಿರುವುದೇನೆಂದರೆ, ಬುಟ್ಟಿಗಳನ್ನು ಹೆಣೆಯುವುದು ಒಂದು ಮಾಮೂಲು ಉತ್ಪಾದನೆ, ಅದಕ್ಕೆ ಬೇಕಾಗಿರುವುದು ಕಾಡಿನಲ್ಲಿ ಸಿಗುವ ಈಚಲು ಮರ, ಅವುಗಳ ಗರಿಗಳು ಇಂತಹ ಸಹಜ ಸಂಪತ್ತು. ಆದರೆ ಕೆಲವು ಉತ್ಪತ್ತಿಗಳ ತಯಾರಿ ತುಂಬಾ ಕಷ್ಟವಾಗಿರುತ್ತದೆ. ಅವುಗಳ ಕಚ್ಚಾಸರಕುಗಳ ತಯಾರಿ, ಆ ಸಲಕರಣೆಗಳು ಸಂಕ್ಲಿಷ್ಟವಾಗಿರುತ್ತದೆ. ಉದಾಹರಣೆಗೆ ನೂಲು, ರೇಷ್ಮೆ ವಸ್ತ್ರಗಳನ್ನು ಕೈಮಗ್ಗಗಳು, ಚರಕ ಮಗ್ಗಗಳು, ದೊಡ್ಡ ಮಿಲ್ಲುಗಳು ತಯಾರಿಸುತ್ತಿವೆ. ನಾವೀಗ ಕೈಮಗ್ಗ ಕೆಲಸದವರು ಬಟ್ಟೆಗಳನ್ನು ಹೇಗೆ ನೇಯುತ್ತಾರೋ ತಿಳಿಯೋಣ.

ಎರಡನೆ ಭಾಗ

ಕೈಮಗ್ಗ ಕಾರ್ಮಿಕರು: ಪೋಚಂಪಲ್ಲಿ :

ತೆಲಂಗಾಣದಲ್ಲಿ ಪೋಚಂಪಲ್ಲಿ, ನಲ್ಲಗೊಂಡ ಜಿಲ್ಲೆಯಲ್ಲಿನ ಒಂದು ಚಿಕ್ಕ ಊರು. ಅಲ್ಲಿ ಕೈಮಗ್ಗ ಕಾರ್ಮಿಕರು ಪ್ರತ್ಯೇಕವಾದ ಇಕ್ಕತ್ ಟೈ ಅಂಡ್ ಡೈ ಸೀರೆಗಳನ್ನು ನೇಯುತ್ತಾರೆ. ಅವು ಪ್ರಪಂಚ ಪ್ರಖ್ಯಾತಿ ಹೊಂದಿರುವ ಸೀರೆಗಳು, ಇಕ್ಕತ್ ಎಂದರೆ ಮಗ್ಗದ ಮೇಲೆ ನೇಯುವ ಮೊದಲೇ ನೂಲಿಗೆ ಒಂದು ಪ್ರತ್ಯೇಕ ಪದ್ಧತಿಯಲ್ಲಿ ಬಣ್ಣಗಳು ಆದ್ದುವುದು. ಇದನ್ನೇ ಬಂಧಿನಿ ಅಥವಾ ಪೋಚಂಪಲ್ಲಿಯಾಗಿ ಕರೆಯುತ್ತಾರೆ. ನಾಣ್ಯವಾದ ರೇಷ್ಮೆಸೀರೆಗಳನ್ನು ಸ್ಥಾನಿಕವಾಗಿ ರೂಪುಗೊಳಿಸಿದ ಡಿಜೈನ್‌ನಲ್ಲಿ ನೇಯುತ್ತಾರೆ. ಇವು ಮೂರು ಛಾಯಗಳಾಗಿ ಕಾಣುವಂತೆ ನೇಯುವರು. ಅಲ್ಲಿಗೆ ಹತ್ತಿರವಿರುವ 100 ಗ್ರಾಮದಲ್ಲಿ ಸುಮಾರು 10000 ಕುಟುಂಬದವರು ಈ ಕೆಲಸ ಮಾಡುವರು.

ಪೋಚಂಪಲ್ಲಿ ಸೀರೆಗಳಿಗೆ ಒಂದು ಪ್ರತ್ಯೇಕತೆ ಇದೆ. ಅದು ಬಣ್ಣಗಳಲ್ಲೂ, ಡಿಜೈನ್‌ಗಳಲ್ಲೂ ಪ್ರಸಿದ್ಧಿ ಹೊಂದಿದೆ. ಇದು ಬೇರೆ ರೇಷ್ಮೆಸೀರೆಗಳಿಗಿಂತ ಭಿನ್ನವಾದುದು, ಅದಕ್ಕಾಗಿ ಭಾರತದೇಶದಲ್ಲಿ ಮೊಟ್ಟಮೊದಲು ಪೋಚಂಪಲ್ಲಿ ಸೀರೆಗಳಿಗೆ ಪೇಟೆಂಟ್ ಹಕ್ಕು ಲಭಿಸಿದೆ. ಆದುದರಿಂದ ಪ್ರಪಂಚದಲ್ಲಿ ಎಲ್ಲಿಯೂ ಸಹ ಪೋಚಂಪಲ್ಲಿ ಇಕ್ಕತ್ ಡಿಜೈನನ್ನು ಉಪಯೋಗಿಸಿಕೊಳ್ಳಲು ಅವಕಾಶವಿಲ್ಲ. ಪ್ರಧಾನವಾಗಿ ಇಕ್ಕತ್ ಸೀರೆ ಎಂದಾಕ್ಷಣ ಪೋಚಂಪಲ್ಲಿ ನೆನಪಾಗುತ್ತದೆ. ಪೋಚಂಪಲ್ಲಿ ಸೀರೆಗಳಿಗೆ ಇಕ್ಕತ್ ಬ್ರಾಂಡ್ ಇದೆ. ಪೋಚಂಪಲ್ಲಿ ಸುತ್ತಮುತ್ತ ಗ್ರಾಮಗಳವರು ಸಹ ಈ ಬ್ರಾಂಡುಗಳಿಂದ ನೇಯ್ದು ಸೀರೆಗಳನ್ನು ಮಾರುತ್ತಾರೆ. ಇವುಗಳನ್ನು ದೇಶವಿದೇಶಗಳಲ್ಲಿ ಹೆಚ್ಚಿನ ಬೆಲೆಗೆ ಮಾರುತ್ತಾರೆ.

ಸೀರೆಗಳ ತಯಾರಿಗೆಬೇಕಾದ ರೇಷ್ಮೆದಾರ, ಬಣ್ಣಗಳು, ನೂಲು ಮೊದಲಾದವುಗಳಿಗೆ ನೇಕಾರರು ಸ್ವಂತವಾಗಿ ಉತ್ಪತ್ತಿ ಮಾಡುವುದಿಲ್ಲ. ಅವುಗಳನ್ನು ಮಾರ್ಕೆಟ್‌ನಿಂದ ಕೊಳ್ಳುವರು. ರೇಷ್ಮೆದಾರ ರೇಷ್ಮೆಹುಳುವಿನಿಂದ ತೆಗೆಯುವರು. ಸ್ಥಾನಿಕ ರೈತರು ಮಲ್ಬರೀ ತೋಟಗಳನ್ನು ಬೆಳೆಸಿ, ರೇಷ್ಮೆ ಹುಳುಗಳನ್ನು ಬೆಳೆಸುತ್ತಾರೆ. ನೂಲು ದಾರ ಕೈಗಾರಿಕೆಯಿಂದ ಅಥವಾ ಮನೆಯಲ್ಲಿ ನೇಯುವವರಿಂದ ಶೇಖರಿಸುವರು. ಬಣ್ಣಗಳು ಸ್ಥಾನಿಕ ಮಾರುಕಟ್ಟೆಯಿಂದ ಕೊಳ್ಳುವರು.

ಸಲಕರಣೆಗಳು: ಕೈಮಗ್ಗ ಕಾರ್ಮಿಕರಿಗೆ ಮರ ಮುಟ್ಟಿನಿಂದ ತಯಾರಿಸಿದ ಸ್ವಂತ ಮಗ್ಗಗಳಿರುತ್ತವೆ. ಅವೇ ನೇಯ್ಗೆಗೆ ಪ್ರಧಾನ ಸಲಕರಣೆಗಳು, ಇದರ ಜೊತೆಗೆ ಕತ್ತಿಗಳನ್ನು, ಇತರ ಸಲಕರಣೆಗಳನ್ನು ಬಳಸುವರು. ಡಿಜೈನ್ ಹಾಕಲು ನೇಯ್ಗೆ ಕಾರ್ಮಿಕರು ಆಧ್ಯತೆ ನೀಡುವರು.

SCERT TELANGANA

ಪ್ರತ್ಯೇಕವಾದ ಡಿಜೈನನ್ನು ಮೊದಲು ಗ್ರಾಫ್ ಕಾಗದದ ಮೇಲೆ ಹಾಕಿ ಅದನ್ನು ಆಧರಿಸಿ ನೂಲಿಗೆ ಬಣ್ಣ ಅಂಟಬಾರದ ಕಡೆ ಕಟ್ಟುಗಳನ್ನು ಕಟ್ಟುವರು. ನಂತರ ಬಣ್ಣದಲ್ಲಿ ಮುಳುಗಿಸುತ್ತಾರೆ. ಅದೇ ವಿಧವಾಗಿ ಕಾರ್ಮಿಕರು ಈ ಕೆಲಸದಲ್ಲಿ ತಪ್ಪುಗಳಾಗದಂತೆ ಜಾಗ್ರತೆವಹಿಸುವರು. ವಂಶಪಾರಂಪರ್ಯವಾಗಿ ನೇಯ್ಗೆ ಕಾರ್ಮಿಕರು ಕೆಲಸಮಾಡುತ್ತಿರುವುದರಿಂದ ಅವರು ಅನೇಕ ಹೊಸ ಡಿಜೈನ್‌ಗಳನ್ನು ಸಹ ಹಾಕುತ್ತಾರೆ.

- ಯಾವುದಾದರೂ ಒಂದು ಸೀರೆಯನ್ನು ಪರಿಶೀಲಿಸಿ ಒಂದು ಸಾಮಾನ್ಯ ಡಿಜೈನ್ ಹಾಕಿ.

ಸೀರೆ ನೇಯುವುದರಲ್ಲಿ ವಿವಿಧ ಹಂತಗಳು :


ಸೀರೆನೇಯುವುದರಲ್ಲಿ ವಿವಿಧ ಹಂತಗಳಿವೆ. ಮೊದಲನೆಯದು ರೇಷ್ಮೆದಾರವನ್ನು ಸಿದ್ಧಪಡಿಸುವುದು. ನಂತರ ರೇಷ್ಮೆದಾರವನ್ನು ಚರಕದ ಮೂಲಕ ಕಂಡಿಕೆಗಳಾಗಿ ಸುತ್ತುತ್ತಾರೆ. ಈ ದಾರದ ಮೇಲೆ ಡಿಜೈನ್‌ಗುರ್ತುಗಳನ್ನು ಹಾಕಿ, ಬಣ್ಣ ಅಂಟದಂತೆ ಬೆಳ್ಳಗೆ ಇರುವ ಕಡೆ ಕಟ್ಟುಗಳನ್ನು ಕಟ್ಟಿ, ಬಣ್ಣವನ್ನು ಅದ್ದುತ್ತಾರೆ. ಬಣ್ಣಗಳನ್ನು ಹಾಕಲುಈ ಗುರ್ತುಗಳು ಸಹಕರಿಸುತ್ತವೆ. ದಾರದ ಮೇಲೆ ಬಣ್ಣಗಳನ್ನು ಅದ್ದಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಪ್ರತಿ ಬಣ್ಣವನ್ನು ಅದ್ದುವುದು, ಒಣಗಿಸುವುದು ನಡೆಯುತ್ತದೆ. ಬಣ್ಣಗಳು ಡಿಜೈನ್‌ಗಳ ನಂತರ ನೇಯ್ಗೆ ಮಾಡಲು ಮಗ್ಗದ ಕಡೆಗೆ ಕಳಿಸುತ್ತಾರೆ.

ದಾರಕ್ಕೆ ಬಣ್ಣಗಳನ್ನು ಅದ್ದುವುದು :

ರೇಷ್ಮೆದಾರಕ್ಕೆ ಕಟ್ಟುಗಳನ್ನು ಕಟ್ಟಿ ಬಣ್ಣಗಳಲ್ಲಿ ಅದ್ದಿ, ಅದನ್ನು ಒಣಗಿಸುವರು. ಪುನಃ ಕಟ್ಟುಗಳನ್ನು ಬಿಚ್ಚಿ ಬಣ್ಣದ ಭಾಗಕ್ಕೆ ಮೇಲೆ ಕಟ್ಟುಗಳನ್ನು ಕಟ್ಟಿ ಪುನಃ ಬೇರೆ ಬಣ್ಣವನ್ನು ಅದ್ದುವುದು, ಒಣಗಿಸುವುದು ನಡೆಯುತ್ತದೆ. ಇದನ್ನೇ ಟೈ ಅಂಡ್ ಡೈ ಎಂದು ಕರೆಯುತ್ತಾರೆ. ಕೆಂಪು, ಗೋದಿ ಬಣ್ಣಗಳ ಛಾಯೆಗಳ ಮಧ್ಯದಲ್ಲಿ ಕಪ್ಪು, ಬಿಳಿ ಬಣ್ಣಗಳ ಬರಲು ಅಲಿಜಾರಿನ್ ಬಣ್ಣಗಳನ್ನು ಬಳಸುತ್ತಾರೆ. ದಾರವನ್ನು ಔಡಲ, ಕ್ಷಾರಜಲದ ಮಿಶ್ರಮದಲ್ಲಿ ನೆನೆಸಿ ಸ್ವಲ್ಪ ಸಮಯದ ನಂತರ ಒಣಗಿಸಿ ಅಲಜಾರಿನ ಪೇಸ್ಟ್‌ನಲ್ಲಿ ಮುಳುಗಿಸಿ ಕೆಂಪು ಬಣ್ಣ ಬರುವವರೆಗೆ ಕುದಿಸುತ್ತಾರೆ. ಕಪ್ಪು ಬಣ್ಣವಾಗಿ ಕಬ್ಬಿಣದ ಚೂರನ್ನು ವೈನಿಗರ್ ಕ್ಷಾರವನ್ನು ಕಲಿಸುತ್ತಾರೆ.

ಹಾಸು ಎಳೆ (ಉದ್ದ ಎಳೆ) ಅಡ್ಡ ಎಳೆ (ವಾರ್ಪ್-ವೇಫ್ಟ್)

ಬಟ್ಟೆಯಲ್ಲಿ ದಾರಗಳನ್ನು ನೀವು ಗಮನಿಸಿರುತ್ತೀರಿ. ಉದ್ದ ದಾರಗಳು ಮೇಲಿನಿಂದ ಕೆಳಗಿನವರೆಗೆ ಇರುತ್ತವೆ. ಅಡ್ಡೆಳೆ ದಾರಗಳು ಎಡಗಡೆಯಿಂದ ಬಲಗಡೆಗೆ ಅಡ್ಡವಾಗಿ ಇರುತ್ತವೆ. (ಈ ವಿಧವಾಗಿ #)



ಚಿತ್ರ ಹಾಸುದಾರದ ಎಳೆಗಳು,

SCERT TELANGANA

ನಾವೀಗ ಪೋಚಂಪಲ್ಲಿ ನೇಯ್ಗೆ ಕಾರ್ಮಿಕನ ಕುಟುಂಬಕ್ಕೆ ಹೋಗಿ ಇಕ್ಕತ್ ಸೀರೆಯ ಬಗ್ಗೆ ಇನ್ನೂ ಸ್ವಲ್ಪ ತಿಳಿದುಕೊಳ್ಳೋಣ.

ಜಗತಯ್ಯ ಪೋಚಂಪಲ್ಲಿ ಗ್ರಾಮನಿವಾಸಿ. ಆತನು, ಆತನ ಕುಟುಂಬ ಸದಸ್ಯರು ನಾಲ್ಕು ಜನ: ಅವನು, ಅವನ ಹೆಂಡತಿ, ಮಗ, ಸೊಸೆ ಎಲ್ಲರೂ ನೇಯ್ಗೆ ಕೆಲಸದವರೇ. ನಾವು ಹೋಗುವುದರೊಳಗೆ ಕುಟುಂಬ ಸದಸ್ಯರು ಎಲ್ಲರೂ ಸೇರಿ ನೇಯ್ಗೆಗೆ ಸಂಬಂಧಿಸಿದ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದರು. ಅವನು ಹಾಸು ಎಳೆಗೆ ಬಳಸುವ ದಾರವನ್ನು ಕಂಡಿಗಳಾಗಿ ಸುತ್ತುತ್ತಿರುವಾಗ ಅವನ ಮಗ ಮುರಳಿ ಮನೆಯಲ್ಲಿ ಹೊಂದಿಸಿದ ಕುಣಿಯಿರುವ ಮಗ್ಗದಲ್ಲಿ ನೇಯ್ಗೆ ನೇಯುತ್ತಿದ್ದಾನೆ. ಟೈ ಅಂಡ್ ಡೈ ರಬ್ಬರು ಚೂರುಗಳನ್ನು ಸುತ್ತಿ ಕೊಳವೆಗಳನ್ನು ಮಾಡಿ, ಹಾಸು ಎಳಗೆ ಬಳಸುವ ದಾರವನ್ನು ಕುಂಚದಿಂದ ಬಾಚಿ ಹಚ್ಚುಹಾಕುವುದು ಸುರುಳಿಸುತ್ತಿ ಮಗ್ಗದ ಹತ್ತಿರಕ್ಕೆ ತರುವುದು ಮೊದಲಾದ ವಿವಿಧ ರೀತಿಯ ಕೆಲಸಗಳ ಮೂಲಕ ಇಕ್ಕತ್ ಸೀರೆ ತಯಾರಾಗು ತ್ತದೆ. ಈ ನೇಯ್ಗೆಗೆ ಸಂಬಂಧಿಸಿದ ಸಲಕರಣೆಗಳು ಕಟ್ಟಿಗೆಯಿಂದ ಮಾಡಿದ ವಸ್ತುಗಳೇ ಆಗಿರುತ್ತವೆ.

ಜಗತಯ್ಯನ ಹೆಂಡತಿ, ಸೊಸೆ ಚರಕದ ಮೇಲೆ ದಾರದ ಕಂಡಿಕೆಗಳನ್ನು ಸುತ್ತುವ ಕೆಲಸವನ್ನು ಸಹ ಮಾಡುತ್ತಾರೆ. ಅವನ ಮೊಮ್ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿ ದ್ದರು. ಹೊರಗಡೆ ಹಾಸು ಎಳೆಗಳನ್ನು ನಿಲ್ಲಿಸಿ ಒಣಗಿಸಿ ಎಲ್ಲರೂ ಸೇರಿ ಕೆಲಸ ಮಾಡುತ್ತಾರೆ.

ಜಗತಯ್ಯನ ಮಗ ಮುರಳಿ ಮಾಸ್ಟರ್ ವೀವರ್ ಹತ್ತಿರಿಂದಾಲಾಗಲಿ, ಸೊಸೈಟಿ ಯಿಂದಲಾಗಲಿ, ರೇಷ್ಮದಾರ, ಜರಿ ಬಣ್ಣಗಳು ಡಿಜೈನ್‌ಗಳನ್ನು ಸರಿಹೊಂದಿಸಿಕೊಳ್ಳುತ್ತಾನೆ. ಅವನು ಸೊಸೈಟಿಯ ಸದಸ್ಯರು ಒಂದುಸಾರಿ 8 ಸೀರೆಗಳಿಗೆ ಬೇಕಾದ ಕಚ್ಚಾ ಸರಕನ್ನು ಆತ ತೆಗೆದುಕೊಳ್ಳುತ್ತಾನೆ. ಕುಟುಂಬ ಸದಸ್ಯ ರೆಲ್ಲಾ ಸೇರಿ ದಿನಕ್ಕೆ 12–15 ಗಂಟೆಯವರೆಗೆ



ಚಿತ್ರ 7.4 ಕುಣಿಯಿರುವ ಮಗ್ಗದ ಮೇಲೆ ಸೀರೆನೇಯುವುದು.



ಚಿತ್ರ 7.5 ದಾರವನ್ನು ಸುತ್ತುವುದು.

SCERT TELANGANA



ಚಿತ್ರ 7.6 ಕಂಡಿಕೆ ಸುತ್ತುವುದು

ಕೆಲಸ ಮಾಡುತ್ತಾರೆ. 8 ಸೀರೆಗಳನ್ನು ನೇಯಲು 50 ದಿನಗಳಾಗುತ್ತವೆ. ಅವರು ಒಂದು ಸೀರೆಗೆ ಸರಾಸರಿ ರೂ. 1200/– ಸಂಪಾದಿಸುತ್ತಾರೆ. ಇಕ್ಕತ್ ಸೀರೆಗಳನ್ನು ನೇಯುವುದು ಜಗತಯ್ಯನ ಕುಟುಂಬಕ್ಕೆ ವಂಶಪಾರಂಪರ್ಯವಾಗಿ ಬಂದ ವೃತ್ತಿ. ಕುಟುಂಬ ಸದಸ್ಯರೆಲ್ಲರೂ ಸೇರಿ ಕೆಲಸಮಾಡಿದರೂ ಅವರಿಗೆ ಸರಿಹೋಂದುವ ಆದಾಯ



ಚಿತ್ರ 7.7 ಡಿಜೈನ್ ಹಾಕುವುದು

ಬರುತ್ತಿಲ್ಲ. ಇದರಿಂದ ಅವರ ಕುಟುಂಬ ನಡೆಸಲು ಕಷ್ಟವಾಗುತ್ತಿದೆ.

ಮಾರ್ಚ್‌ನಿಂದ ಮೇ ವರೆಗೆ ಜಗತಯ್ಯನ ಕುಟುಂಬ ಸದಸ್ಯರು ಕೆಲವು ಗಂಟೆಗಳು ಮಾತ್ರ ಕೆಲಸಮಾಡಬಲ್ಲರು. ಏಕೆಂದರೆ ಆಗ ಅತ್ಯಧಿಕ ಉಷ್ಣೋಗ್ರತೆಯಿಂದ ಪದೇ ಪದೇ ದಾರ ತುಂಡಾಗುತ್ತದೆ. ಆದಕಾರಣ ಮಧ್ಯಾಹ್ನದ ವರೆಗೆ ಮಾತ್ರ ಕೆಲಸಮಾಡಲು ಸಾಧ್ಯವಾಗುತ್ತದೆ. ಕೈಮಗ್ಗ ಮಹಿಳೆಯರು, ವೃತ್ತಿಕೆಲಸ ಮಾಡುತ್ತಲೇ ಕುಟುಂಬವನ್ನು ನೋಡಿಕೊಳ್ಳುವುದು, ಅಡಿಗೆ, ನೀರಿನ ಸಮಸ್ಯೆ, ಮಕ್ಕಳನ್ನು ಶಾಲೆಗಳಿಗೆ ಕಳಿಸುವುದು ಇಂತಹ ಹೊಣೆಗಾರಿಕೆಯಿಂದ ಕಷ್ಟಪಡುತ್ತಾ ಇರುತ್ತಾರೆ.

ಈ ಹಿಂದೆ ಜಗತಯ್ಯನ ಕುಟುಂಬ ಸೊಸೈಟಿಯಲ್ಲಿ ಕೆಲಸಮಾಡುತ್ತಿತ್ತು. ಇದರಲ್ಲಿನ ಸದಸ್ಯರು ಅಸ್ವಸ್ಥರಾದಾಗ, ಅಕಾಲಮರಣ ಹೊಂದಿದಾಗ ಸೊಸೈಟಿಯಿಂದ ವಿಮೆಯ ಮೂಲಕ ಆರ್ಥಿಕ ಸಹಾಯ ಸಿಗುತ್ತಿತ್ತು. ಮನೆ ನಿರ್ಮಾಣಕ್ಕೆ ಸೊಸೈಟಿಯಿಂದ ಸಾಲ ಸಿಗುತ್ತಿತ್ತು. ಈಗ ಸೊಸೈಟಿಯಿಂದ ಬೇಕಾದಷ್ಟು ಕೆಲಸ ಸಿಗುತ್ತಿಲ್ಲ. ಅದಕ್ಕಾಗಿ ನೇಕಾರ ಕೆಲಸದ ಜೊತೆ ಮುಂಗಡವಾಗಿ ಏನಾದರೂ ಆದಾಯ ಸಿಗುವ ಕೆಲಸಮಾಡಿ ಕುಟುಂಬವನ್ನು ಪೋಷಿಸುತ್ತಿದ್ದಾನೆ. ಮಾಸ್ಟರ್ ವೀವರ್ಸ್ ಕೆಲಸವನ್ನು ಕಲ್ಪಿಸಿಕೊಂಡು ಆದಾಯವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸುತ್ತಿದ್ದಾರೆ.

ಜಗತಯ್ಯ ತಮ್ಮ ಮಾಸ್ಟರ್ ವೀವರ್‌ಗೋಸ್ಕರ ಇಕ್ಕತ್ ಸೀರೆನೇಯುತ್ತಿದ್ದಾನೆ.

ಮುಂಬರುವ ದಿನಗಳಲ್ಲಿ ಸೊಸೈಟಿಗಳ ಮೂಲಕ ಕೆಲಸ ಸಿಗುವ ಅವಕಾಶವಿದೆಯೆಂದು ಜಗತಯ್ಯ ಆಶಾಭಾವನೆಯನ್ನು ವ್ಯಕ್ತಪಡಿಸಿದನು. ಆದುದರಿಂದ ಸಹಕಾರ ಸಂಘಗಳ ಸದಸ್ಯತ್ವವನ್ನು ಮುಂದುವರೆಸಿದನು.

ಕೈಮಗ್ಗ ಕಾರ್ಮಿಕರ ಸಮಸ್ಯೆಗಳು, ಸಹಕಾರ ಸಂಘಗಳು:

ಭಾರತ ದೇಶದಲ್ಲಿ, ತೆಲಂಗಾಣ ಕೈಮಗ್ಗದ ರಂಗದಲ್ಲಿ "ಬಂಗಾಳ"ದ ನಂತರ ದ್ವಿತೀಯ ಸ್ಥಾನದಲ್ಲಿದೆ. ಕೈಮಗ್ಗ ಕಾರ್ಮಿಕರು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರು ಮಿಲ್ಲಿನ ಬಟ್ಟೆ, ಯಂತ್ರದ ಮಗ್ಗಗಳಿಂದ ಸ್ಪರ್ಧಿಸಲಾರದೇ ಹೋಗುತ್ತಿದ್ದಾರೆ. ಸಿಂಥಟಿಕ್ ದಾರವನ್ನು ಬಳಸುತ್ತಿದ್ದಾರೆ. ಇವುಗಳ ಬೆಲೆ ರೇಷ್ಮೆ ಅಥವಾ ಕಾಟನ್ ದಾರಗಳಿಗಿಂತ ಕಡಿಮೆ ಬೆಲೆಗೆ

SCERT TELANGANA

ಸಿಗುವುದರಿಂದ ಇವರ ಉತ್ಪತ್ತಿಗಳಿಗೆ ಪ್ರಾಮುಖ್ಯತೆ ಕಡಿಮೆ.

ಆದರೂ ಸಹ ಒಳ್ಳೆಯ ನಾಣ್ಯತೆ ಹೊಂದಿ ಪ್ರಪಂಚ ಪ್ರಸಿದ್ಧಿ ಹೊಂದಿದ ಅಂದವಾದ ಸೀರೆಗಳಾಗಿ ಹೆಸರು ಪಡೆದಿದೆ. ಪೋಚಂಪಲ್ಲಿ ಸೀರೆಗಳ ಬೆಲೆ ಹೆಚ್ಚಿದರೂ, ಅವರಿಗೆ ಲಾಭ ಸಿಗುತ್ತಿಲ್ಲ.

ಮಧ್ಯವರ್ತಿಗಳ ಪ್ರಮೇಯದಿಂದ ನೇಯ್ಗೆಯವರಿಗೆ ಸರಿಯಾದ ಲಾಭ ಸಿಗುತ್ತಿಲ್ಲ. ಕೊಳ್ಳುವವರು ಪ್ರಪಂಚದಲ್ಲೆಲ್ಲಾ ಇದ್ದರೂ ನೇಯ್ಗೆ ಕಾರ್ಮಿಕರೊಂದಿಗೆ ಅವರ ಸಂಬಂಧಗಳಿಲ್ಲ. ದಿನನಿತ್ಯ ವಿನಿಯೋಗದಾರರ ಫ್ಯಾಷನ್‌ಗಳು ಬದಲಾಗುತ್ತಿವೆ. ಬದಲಾಗುವ ಡಿಜೈನ್‌ಗಳ ಬಗ್ಗೆಯಾಗಲೀ, ಹೆಚ್ಚು ಬೇಡಿಕೆ ಇರುವ ಡಿಜೈನ್‌ಗಳ ಬಗ್ಗೆಯಾಗಲೀ, ನೇಯ್ಗೆ ಕಾರ್ಮಿಕರಿಗೆ ಗೊತ್ತಾಗುತ್ತಿಲ್ಲ.

ಮಧ್ಯವರ್ತಿಗಳ ಮೂಲಕ ಬಳಕೆ ಯಲ್ಲಿರುವ ಡಿಜೈನ್ ತಿಳಿದುಕೊಂಡು ಬದಲಾಯಿಸಬೇಕು. ಕಚ್ಚಾಸರಕು ಕೊಳ್ಳುವಿಕೆಯನ್ನು ಸಹ ಅವರು ಮಧ್ಯವರ್ತಿಗಳ ಮೇಲೆಯೇ ಆಧಾರವಾಗಿದ್ದಾರೆ. ಮಧ್ಯವರ್ತಿಗಳು ಕೈಮಗ್ಗ ರಂಗದಲ್ಲಿ ಮುಖ್ಯಪಾತ್ರ ವಹಿಸಿ ಕೊಳ್ಳುವುದರಿಂದ ದೊಡ್ಡ ಮೊತ್ತದಲ್ಲಿ ಲಾಭವನ್ನು ಆಪೇಕ್ಷಿಸುತ್ತಿದ್ದಾರೆ.



ಚಿತ್ರ 7.8 ಕೈಮಗ್ಗ ಪ್ರಕ್ರಿಯೆ

ಕೈಮಗ್ಗ ಕಾರ್ಮಿಕರ ಸಮಸ್ಯೆ ಗಳನ್ನು ನಿವಾರಿಸಬೇಕಾದರೆ ಸರಕಾರವೇ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸ ಬೇಕು. ಕಚ್ಚಾಸರಕುಗಳನ್ನು ಕಡಿಮೆ ಬೆಲೆಗೆ ಸಿಗುವಂತೆ ಉತ್ಪತ್ತಿಗಳಿಗೆ ಮಾರುಕಟ್ಟೆ ಸೌಕರ್ಯ ಕಲ್ಪಿಸಿ ಮಧ್ಯವರ್ತಿಗಳ, ವರ್ತಕರ (ವ್ಯಾಪಾರಗಾರರ) ಪಾತ್ರ ವನ್ನು ಕಡಿಮೆ ಗೊಳಿಸಬೇಕು. ಸೊಸೈಟಿಯವರು ಹೊಸ ಡಿಜೈನ್‌ಗಳ ರೂಪಕಲ್ಪನೆಗೆ ಶಿಕ್ಷಣ ಕೇಂದ್ರಗಳನ್ನು ಏರ್ಪಡಿಸಿಕೊಳ್ಳಬೇಕು.

ಏನೇ ಆದರೂ ಪ್ರಸ್ತುತ ಸಮಯದಲ್ಲಿ ಬಹಳ ಕುಟುಂಬಗಳಿಗೆ ಸೊಸೈಟಿಗಳಿಂದ ತಕ್ಕಷ್ಟು ಕೆಲಸ ಸಿಗುತ್ತಿಲ್ಲ. ಕಚ್ಚಾಸರಕು ಶೇಖರಣೆಯಲ್ಲಿ, ಮಾರುವಿಕೆ, ನೀತಿಗಳ ನಿರ್ಣಯದಲ್ಲಿ ಸದಸ್ಯರಿಗೆ ಸೊಸೈಟಿಗಳು ತಕ್ಕಷ್ಟು ಪ್ರಾಧಾನ್ಯತೆ ನೀಡುತ್ತಿಲ್ಲ. ಬದಲಾಗುತ್ತಿರುವ ವಿನಿಯೋಗದಾರರ ಅಭಿರುಚಿಗಳ ಮೇರೆಗೆ ಸೊಸೈಟಿಗಳು ನೇಯ್ಗೆಕಾರ್ಮಿಕರಿಗೆ ಅವಕಾಶ ಕಲ್ಪಿಸುತ್ತಿಲ್ಲ. ಪುನಃ ಮಧ್ಯವರ್ತಿಗಳ, ವ್ಯಾಪಾರಸ್ತರ ಆದಿಪತ್ಯಕ್ಕೇ ಅವರು ತಲೆ ತಗ್ಗಿಸಬೇಕಾಗುತ್ತಿದೆ.




ಚಿತ್ರ 7.9 ಪಡುಗು ಮಾಡುವುದು

ಸೊಸೈಟಿಗಳಿಗಿಂತ ಮಾಸ್ಟರ್ ವೀವರ್ಸ್ ಹೆಚ್ಚು ಕೆಲಸ ಕಲ್ಪಿಸುತ್ತಿದ್ದಾರೆ. ವ್ಯಾಪಾರಸ್ಥರು ಮಾಸ್ಟರ್ ವೀವರ್ಸ್ ಕಚ್ಚಾಸರಕನ್ನು ಶೇಖರಿಸಿ ಕೈಮಗ್ಗ ಕಾರ್ಮಿಕರಿಗೆ ಸಾಗಣೆಗೊಳಿಸಿ, ಸಿದ್ದವಾದ ಬಟ್ಟೆಗಳನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ನಂತರ ಅವರು ಸಗಟು ವ್ಯಾಪಾರಸ್ಥರಿಗೆ ಮಾರುತ್ತಿದ್ದಾರೆ. ಕೈಮಗ್ಗ

SCERT TELANGANA

ಕಾರ್ಮಿಕರಿಗೆ ಮಾತ್ರ ಒಪ್ಪಂದ ಮಾಡಿಕೊಂಡ ಮೇರೆಗೆ ವೇತನ ಸಲ್ಲಿಸುತ್ತಿದ್ದಾರೆ. ಬಹಳ ಜನ ಮಾಸ್ಟರ್ ವೀವರ್ಸ್ ನೇಯ್ಗೆಗೆ ಸಂಬಂಧಿಸಿದ ಮಗ್ಗಗಳು, ಸಲಕರಣೆಗಳು, ಕಚ್ಚಾಸರಕುಗಳನ್ನು ಒದಗಿಸುತ್ತಿದ್ದಾರೆ. ಆದರೆ ಸಿದ್ಧವಾದ ಸೀರೆಗಳನ್ನು ಬೇರೆ ಮಾಸ್ಟರ್ ವೀವರ್ಸ್‌ಗೆ ಮಾರಬಾರದು. ಅವರು ಮಾಡಿದ ಕೆಲಸಕ್ಕೆ ಕೂಲಿಕೊಡುತ್ತಾರೆ. ಒಂದು ವೇಳೆ ನೇಯ್ಗೆ ಕಾರ್ಮಿಕರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಪ್ರಯತ್ನಿಸಿದರೂ ಕಡಿಮೆ ಕೂಲಿಗೆ ಕೆಲಸಮಾಡುವವರಿಗೆ ಅವರು ಕೆಲಸವನ್ನು ಒಪ್ಪಿಸುತ್ತಾರೆ. ನೇಯ್ಗೆ ಕುಟುಂಬಗಳನ್ನು ಈ ದುಸ್ಥಿತಿಯಿಂದ ಕಾಪಾಡಲು ತಕ್ಕಷ್ಟು ಕೆಲಸ ಕಲ್ಪಿಸಿ ಮಾಸ್ಟರ್ ವೀವರ್‌ಗಳಿಂದ ರಕ್ಷಿಸುವ ಜವಾಬ್ದಾರಿ ಕೈಮಗ್ಗ ಸೊಸೈಟಿಗಳ ಮೇಲಿದೆ.

- ಇಕ್ಕತ್ ಸೀರೆ ತಯಾರುಮಾಡಲು ಬೇಕಾದ ಕಚ್ಚಾಸರಕನ್ನು,ಸಲಕರಣೆಗಳನ್ನು ತಿಳಿಸುವ ಪಟ್ಟಿಯನ್ನು ತಯಾರಿಸಿ.
- ಜಗತಯ್ಯನ ಕುಟುಂಬ ಮಾಸ್ಟರ್ ವೀವರ್ಸ್ ಕಡೆಯೇ ಏಕೆ ಕೆಲಸಮಾಡುತ್ತಿದೆ?



ಚಿತ್ರ 7.10 ಇಕ್ಕತ್ ಸೀರೆಯನ್ನು ಮಡಚುವುದು

ಪ್ರಮುಖ ಪದಗಳು

1. ಕಚ್ಚಾಸರಕು 2. ಕಣಿ ಹೇಳುವುದು, ಇಕ್ಕತ್ 3. ಪೇಟೆಂಟ್ ಹಕ್ಕು 4. ಟೈ ಅಂಡ್ ಡೈ
5. ಹಾಸು ಎಳೆ–ಅಡ್ಡ ಎಳೆ (ವಾರ್ಪ್–ವೆಫ್ಟ್) 6. ಸಹಕಾರ ಸಂಘಗಳು,

ನಿಮ್ಮ ಕಲಿಕೆಯನ್ನು ಹೆಚ್ಚಿಸಿಕೊಳ್ಳಿರಿ.

1. ಬುಟ್ಟಿಗಳ ಹೆಣೆಯುವಿಕೆಯಲ್ಲಿ, ನೇಯ್ಗೆ ಕೆಲಸದಲ್ಲಿ ಅವಸರಕ್ಕೆ ಮೀರಿದ ಆದಾಯ ಸಿಗುತ್ತದೆಂದು ನೀನು ಭಾವಿಸುತ್ತಿರುವೆಯಾ?
2. ನಿಮ್ಮ ತಂದೆ–ತಾಯಿಯರ ಹತ್ತಿರ ಚರ್ಚಿಸಿ ಬುಟ್ಟಿಗಳಿಗೆ ಪ್ರತ್ಯಾಮ್ನಯವಾಗಿ (ಬದಲಾಗಿ) ಯಾವ ಯಾವ ವಸ್ತುಗಳೀವೆಯೋ ಪಟ್ಟಿಮಾಡಿರಿ.
3. ಕೈಮಗ್ಗ ಕಾರ್ಮಿಕರ ಉತ್ಪತ್ತಿಗಳ ಸ್ಥಾನದಲ್ಲಿ ಎಷ್ಟೋ ಇತರ ಉತ್ಪತ್ತಿಗಳು ಬಂದು ಸೇರಿವೆ. ಅವುಗಳನ್ನು ಗುರ್ತಿಸಿ, ಅವು ಏಕೆ ಉತ್ಪತ್ತಿಯಾಗಿವೆಯೋ ತಿಳಿದುಕೊಳ್ಳಿ. ಅವು ಅವರ ಜೀವನವನ್ನು ಹೇಗೆ ಪ್ರಭಾವಿತಗೊಳಿಸುತ್ತದೋ ಚರ್ಚಿಸಿ.
4. ಪೋಲಯ್ಯನ ಕುಟುಂಬ ಹೈದರಾಬಾದಿಗೆ ಏಕೆ ಬಂದಿದೆ? ಪೋಲಯ್ಯನಿಗೆ ಹೈದರಾಬಾದಿನಲ್ಲಿ ಓಟು ಹಕ್ಕು (ಮತಚಲಾಯಿಸುವ ಹಕ್ಕು) ಏಕೆ ಇಲ್ಲ?

SCERT TELANGANA

5. ಬುಟ್ಟಿಗಳೇ ಅಲ್ಲದೆ ಇತರ ವಸ್ತುಗಳನ್ನು ತಯಾರಿಸುವವರನ್ನು ನೀವು ನೋಡಿರುತ್ತೀರಿ. ಅಂತಹ ವ್ಯಕ್ತಿಗಳ ಬಗ್ಗೆ ವಿವರಗಳನ್ನು ಶೇಖರಿಸಿ ಈ ಕೆಳಗಿನ ಪಟ್ಟಿಕೆಯಲ್ಲಿ ಬರೆಯಿರಿ.

ಕ್ರಮ ಸಂಖ್ಯೆ	ಕರಕುಶಲಗಾರನ ಹೆಸರು	ಉತ್ಪತ್ತಿಯಾದ ವಸ್ತು	ಒಂದುಇಲ್ಲವೆ ಎರಡು ಬಳಸಿದ ಕಚ್ಚಾಸರಕುಗಳ	ಕಚ್ಚಾಸರಕುಗಳು ಎಲ್ಲಿ ಸಿಗುತ್ತವೆ?
1	ಪೋಲಯ್ಯ	ಬಟ್ಟೆಗಳು	ಈಚಲ ಗರಿಗಳು	ಅಂದುಗಲ ಗ್ರಾಮ
2				
3				

6. ಪೋಚಂಪಲ್ಲಿ ಇಕ್ಕತ್ ಸೀರೆಗೆ ಪೇಟೆಂಟ್ ಹಕ್ಕು ಸಿಕ್ಕಿದ್ದರಿಂದ ಪೋಚಂಪ್ಲಲಿ ಕೈಮಗ್ಗ ಕೆಲಸದವರಿಗೆ ಹೇಗೆ ಉಪಯೋಗವಾಗುತ್ತಿದೆ?

7. ಕೈಮಗ್ಗ ಕಾರ್ಮಿಕರು ಕಚ್ಚಾಸರಕನ್ನು ಸಂಗ್ರಹಿಸಿಕೊಂಡು ಇಕ್ಕತ್ ಸೀರೆಯನ್ನು ತಯಾರಿಸಿ ಸ್ವಂತವಾಗಿ ಪ್ರಜೆಗಳಿಗೆ ಮಾರುತ್ತಾರಾ? ಇದರಲ್ಲಿ ಅವರು ಎದುರಿಸುವ ಸಮಸ್ಯೆಗಳಾವುವು?

8. ಬುಟ್ಟಿಗಳ ಹೆಣೆಯುವಿಕೆಯಲ್ಲಿ, ಕೈಮಗ್ಗ ವಸ್ತ್ರಗಳ ನೇಯ್ಗೆಯಲ್ಲಿ ನಡೆಯುವ ವಿವಿಧ ಉತ್ಪತ್ತಿ ಹಂತಗಳನ್ನು ಫ್ಲೋಚಾರ್ಟ್ ರೂಪದಲ್ಲಿ ತೋರಿಸಿರಿ.

9. ಬಟ್ಟೆಗಳ ಹೆಣಿಕೆಗೆ, ಇಕ್ಕತ್ ಸೀರೆಗಳ ತಯಾರಿಕೆಗೆ ಇರುವ ಹೋಲಿಕೆಗಳನ್ನು ವ್ಯತ್ಯಾಸಗಳನನು ಈ ಕೆಳಗಿನ ಪಟ್ಟಿಕೆಯಲ್ಲಿ ಬರೆಯಿರಿ.

ಉತ್ಪತ್ತಿ	ಉಪಯೋಗಿಸಿದ ಕಚ್ಚಾಸರಕು	ಉಪಯೋಗಿಸಿದ ಸಲಕರಣೆಗಳು	ವಸ್ತುಗಳನ್ನು ಮಾರುವ ವಿಧಾನ
ಬುಟ್ಟಿಗಳ ಹೆಣೆಯುವಿಕೆ			
ಕೈಮಗ್ಗ ವಸ್ತ್ರಗಳು			

10. ಆಂಧ್ರಪ್ರದೇಶದಲ್ಲಿ ಯಾವ ಯಾವ ಪ್ರಾಂತಗಳಲ್ಲಿ ಯಾವ ಯಾವ ಕೆಲಸಗಳಿವೆಯೋ ಪಟ್ಟಿ ಮಾಡಿ, ಬರೆದು ಒಂದು ಚಾರ್ಟ್ ತಯಾರಿಸಿರಿ.

ಚರ್ಚೆ : ಸ್ಥಳೀಯವಾಗಿ ಲಭ್ಯವಿರುವ ಕರಕುಶಲರಿಗೊಬ್ಬರನ್ನು ಶಾಲೆಗೆ ಆಹ್ವಾನಿಸಿ ಅವರ ವೃತ್ತಿಯ ಬಗ್ಗೆ ಚರ್ಚಿಸಿರಿ.

ಪ್ರಾಜೆಕ್ಟ್ ಕೆಲಸ :

1) ನಿಮ್ಮ ತರಗತಿ ಕೋಣೆಗೆ ಕೈಮಗ್ಗದವನನ್ನು ಆಹ್ವಾನಿಸಿ ಮಾತನಾಡಿಸಿ ಅಥವಾ ನೇಯ್ಗೆ ಕಾರ್ಮಿಕನು ಕೆಲಸಮಾಡುವ ಸ್ಥಳಕ್ಕೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಅವನ ಉತ್ಪತ್ತಿ ಹಂತಗಳನ್ನು ಒಂದು ಪೇಪರ್‌ನ ಮೇಲೆ ಬರೆಸಿರಿ.

2) ನಿಮ್ಮ ಗ್ರಾಮ, ಪ್ರಾಂತದಲ್ಲಿಯ ಕರಕುಶಲಿಗರನ್ನು ಭೇಟಿಮಾಡಿ ಅವರ ವಿವರಗಳನ್ನು ಪಟ್ಟಿಯಲ್ಲಿ ಬರೆದು ತರಗತಿಯಲ್ಲಿ ಚರ್ಚಿಸಿರಿ.

ಕ್ರಮ ಸಂಖ್ಯೆ	ಕರಕುಶಲಿಗನ ಹೆಸರು	ವೃತ್ತಿ	ಮುಂದುವರೆಸುತ್ತಿದ್ದಾರೆಯೇ	ಬಿಟ್ಟರೆ ಕಾರಣ ಕೊಡಿ	ಮುಂದುವರೆಸಿದರೆ ಸಂತೋಷವಾಗಿದ್ದಾರೆ

SCERT TELANGANA

ಅಧ್ಯಾಯ 8

ಕೈಗಾರಿಕಾ ಕ್ರಾಂತಿ

ಹಿಂದಿನ ಪಾಠಗಳಲ್ಲಿ ವಿವಿಧ ವೃತ್ತಿಕೆಲಸದವರು ವಿವಿಧ ಪದ್ದತಿಗಳಲ್ಲಿ ವಸ್ತುಗಳನ್ನು ಯಾವ ವಿಧವಾಗಿ ತಯಾರಿಸುತ್ತಾರೆ ಎಂದು ತಿಳಿದು ಕೊಂಡಿದ್ದೀರಿ. ಅವರು ತಯಾರಿಸಿದ ವಸ್ತುಗಳು ಯಂತ್ರಗಳಿಂದ ತಯಾರಾದ ವಸ್ತುಗಳಿಂದ ಸ್ಪರ್ಧಿಸುವುದಿಲ್ಲವೆಂದು ಅವರಲ್ಲಿ ಬಹಳ ಜನ ತಮ್ಮ ವೃತ್ತಿಗಳನ್ನು ಬಿಟ್ಟು ಬಿಡುತ್ತಿದ್ದಾರೆ. ಯಂತ್ರಗಳು ವಸ್ತು ಉತ್ಪತ್ತಿಯಲ್ಲಿ ಯಾವ ವಿಧವಾಗಿ ಪ್ರಾಮುಖ್ಯತೆಯನ್ನು ಪಡೆದಿವೆಯೋ ಅವು ಸಮಾಜದಲ್ಲಿ ಜನರ ಜೀವನ ವಿಧಾನವನ್ನು ಯವ ವಿಧವಾಗಿ ಪ್ರಭಾವ ಬೀರಿದವೋ ಈ ಅಧ್ಯಾಯದಲ್ಲಿ ನಾವು ಚರ್ಚಿಸೋಣ.

ಹೆಚ್ಚಾದ ವ್ಯಾಪಾರಿಗಳ ನಿಯಂತ್ರಣ

ಸಾ.ಶ.ಪೂ. 1500 ರಿಂದ 1800 ವರ್ಷಗಳ ಮಧ್ಯ ಕಾಲದಲ್ಲಿ ಆಫ್ರಿಕಾ, ಅಮೇರಿಕಾ, ಏಷಿಯಾ, ಯೂರೋಪ್ ಖಂಡಗಳ ದೇಶಗಳ ಮಧ್ಯೆ ವ್ಯಾಪರ ಬಹುವಿಧಗಳಾಗಿ ವೃದ್ಧಿಯಾಗಿದೆ ವಸ್ತ್ರ ವ್ಯಾಪಾರವು ಕೂಡ ವಿಸ್ತರಿಸುವುದು ಪ್ರಾರಂಭವಾಯಿತು. ಈಗ ಯೂರೋಪಿಯನ್ ವರ್ತಕರು. ಸಬ್ ಕಾಂಟ್ರಾಕ್ಟ್ ಪದ್ದತಿಯನ್ನು (Putting out system))ಪ್ರಾರಂಭಿಸಿ ವಸ್ತ್ರ ಪರಿಶ್ರಮಕ್ಕೆ ಅವಶ್ಯವಕವಾದ ಸಾಮಗ್ರಿಯನ್ನು ಉತ್ಪತ್ತಿ ಮಾಡುವುದಕ್ಕೆ ಕರಕುಶಲ ಕೆಲಸಿಗರಿಗೆ ಸಣ್ಣ ರೈತರಿಗೆ ಮುಂಗಡ ಹಣ ಕೊಡುತ್ತಿದ್ದರು ಈ ಕಾಲದಲ್ಲಿ ವ್ಯವಸಾಯದಿಂದ ಬರುವ ಆದಾಯವು ಕ್ಷೀಣಿಸಿದಾಗ ಅನೇಕ ಜನ ವ್ಯವಸಾಯದಲ್ಲಿನ ನಷ್ಟಗಳನ್ನು ಗಮನಿಸಿ ವ್ಯವಸಾಯು ಭೂಮಿಗಳನ್ನು ಪಶುಗಳನ್ನು ಮೇಯಿಸುವುದಕ್ಕೆ (gazing) ಉಪಯೋಗಿಸಿದರು? ಆದ್ದರಿಂದ ಇವರಿಗೆ ಜೀವಿಸುವುದಕ್ಕೆ ಬೇಕಾದ ಆದಾಯ ವಸ್ತ್ರ ಕೈಗಾರಿಕೆಗಳಲ್ಲಿ ಕೆಲಸ ಮಾಡುವುದರ ಮೂಲಕ ಲಭಿಸಿದೆ.

ಸಬ್ ಕಾಂಟ್ರಾಕ್ ಪದ್ದತಿಯ ಕೆಳಗೆ ಬ್ರಿಟನ್‌ನಲ್ಲಿ ಒಂದು ವಸ್ತ್ರ ವ್ಯಾಪರಿಯು ಕಚ್ಚಾನೂಲನ್ನು ಅವುಗಳ ಸಾಗಾಣಿಕೆದಾರನ ಹತ್ತಿರ ಕೊಂಡು ಇದನ್ನು ನೂಲುವವನ (spinner) ಹತ್ತಿರ ತೆಗೆದುಕೊಂಡು ಹೋಗಿ ದಾರವನ್ನಾಗಿ ಮಾಡಿನಂತರ ನೇಯುವವರ ಹತ್ತಿರ ತೆಗೆದು ಕೊಂಡು ಹೋಗುತ್ತಾನೆ. ನಂತರ ವಸ್ತ್ರವನ್ನು ಶುಭ್ರಮಾಡುವ ಏಣೆಯುವವರ ಹತ್ತಿರ, ಕೊನೆಗೆ ವಸ್ತ್ರಕ್ಕೆ ಬಣ್ಣ ಅದ್ದುವುದರೊಂದಿಗೆ ವಸ್ತ್ರ ತಯಾರಿ ಪೂರ್ತಿಯಾಗುತ್ತದೆ. ಈ ಹಂತಗಳೆಲ್ಲ ದೇಶದಲ್ಲಿ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿವೆ ವಸ್ತ್ರವನ್ನು ಇತರದೇಶಗಳಿಗೆ ಮಾರುವ ಮುಂಚೆ ನಡೆಯುವ ಕೊನೆಯ ಕೆಲಸವು(finishsing work) ಲಂಡನ್ ನಲ್ಲಿ ನಡೆಯುತ್ತದೆ. ಈ ವಿಧವಾಗಿ ವಸ್ತ್ರಗಳನ್ನು ವ್ಯಾಪರಿಗಳು ನಿಯಂತ್ರಿಸುವ ಅನೇಕ ಮಂದಿ ಉತ್ಪತ್ತಿದಾರರು ಉತ್ಪತ್ತಿ ಮಡುತ್ತಾರೆ. ಇಲ್ಲಿ ಕಾರ್ಖಾನೆಯ ವ್ಯವಸ್ಥೆಯಿಲ್ಲ ವಸ್ತ್ರಗಳ ತಯಾರಿಕೆಯಲ್ಲಿರುವ ವಿವಿಧ ಹಂತಗಳಲ್ಲಿ / ಪದ್ದತಿಗಳಲ್ಲಿ ಒಂದೇ ಸ್ಥಳದಲ್ಲಿ ಅಲ್ಲದೆ ವಿವಿಧ ಕುಟುಂಬಗಳಲ್ಲಿ ಕೆಲಸ ನಡೆಯುತ್ತಿದ್ದವು ಪ್ರತಿ ವ್ಯಾಪರಸ್ಥರು ವಸ್ತ್ರಗಳ ತಯಾರಿಯಲ್ಲಿ ಪ್ರತಿ ಹಂತದಲ್ಲಿ 20 ರಿಂದ 25 ಮಂದಿ ಕರಕುಶಲ ಕಾರ್ಮಿಕರನ್ನು ವಿನಿಯೋಗಿಸುತ್ತಿದ್ದರು.

ಕೆಲವು ಕಾಲದ ನಂತದ ವಸ್ತ್ರ ವ್ಯಾಪಾರಿಗಳು ಕರಕುಶಕಲ ಕೆಲಸದವರಲ್ಲಿ ಪ್ರತಿಯೊಬ್ಬರ ಮನೆಗೆ ಹೋಗದಂತೆ ಇವರೆಲ್ಲರನ್ನು ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ತಮಗೆ ಬೇಕಾದ ವಿಧದಲ್ಲಿ ವಸ್ತು ಉತ್ಪತ್ತಿ ಮಾಡಿಸುತ್ತಿದ್ದರು. ಈ ವಿಧವಾಗಿ ಏರ್ಪಾಟು ಮಾಡಿದ ಕೆಲಸದ ಕೇಂದ್ರಗಳನ್ನು ಕಾರ್ಖಾನೆ ಎಂದು ಕರೆಯುತ್ತಿದ್ದರು. ಕೆಲಸದವರು ತಮ್ಮ ಸ್ವಂತ ಸಲಕರಣೆಗಳಿಂದ ಕಾರ್ಖಾನೆಗೆ ಬಂದು ವರ್ತಕನು ಕೊಡುವ ಕಚ್ಚಾ ಪದಾರ್ಥಗಳಿಂದ ವಸ್ತಗಳನ್ನು ತಯಾರಿಸುತ್ತಿದ್ದರು. ಇವುಗಳನ್ನು ವರ್ತಕನು ಮಾರುಕಟ್ಟೆಯಲ್ಲಿ ಮಾರುತ್ತಿದ್ದನು. ಈ ವಿಧವಾಗಿ ಹಸ್ತ ಕರಕುಶಲ ಮೇಲೆ ವರ್ತಕನ ನಿಯಂತ್ರಣವು ಹೆಚ್ಚಾಯಿತು. ಈ ಹಂತವನ್ನು ಪೂರ್ವ ಪಾರಿಶ್ರಮಿಕ ಅಭಿವೃದ್ಧಿ ಹಂತ

SCERT TELANGANA

ಎಂದು (Proto-Industrialisation) ಎನ್ನುತ್ತಾರೆ. ಈ ಹಂತದಲ್ಲಿ ಕರಕುಶಲ ಉತ್ಪತಿ ಪ್ರಕ್ರಿಯೆಯಲ್ಲಿ ಪಾಲ್ಗೊಳುವುದು ವರ್ತಕರು ಕಾರ್ಮಿಕರ ಮೇಲೆ, ಮಾರುಕಟ್ಟೆಗಳ ಮೇಲೆ ನಿಯಂತ್ರಣ ಸಾಧಿಸಿ ಹಸ್ತ ಕಲಾತ್ಮಕ ಉತ್ಪತ್ತಿಗಳನ್ನು ಪ್ರಪಂಚಾದ್ಯಂತ ಮಾರು ಕಟ್ಟೆಯನ್ನು ಅಭಿವೃದ್ಧಿ ಪಡಿಸಿದರು.

ಕೈಗಾರಿಕಾ ಕ್ರಾಂತಿ ಪ್ರಾರಂಭ ಸಾ.ಶ.ಪೂ. 1750–1850:

ಈ ಕಾಲದಲ್ಲಿ ಅನೇಕ ಬದಲಾವಣೆಗಳು ಸಂಭವಿಸಿದವು. 1750ನೇ ವರ್ಷದಲ್ಲಿ ವಸ್ತುಗಳ ತಯಾರಿಕೆಯಲ್ಲಿ, ಸಾರಿಗೆಯಲ್ಲಿ, ಪ್ರಜಾ ಸಾರಿಗೆಯಲ್ಲಿ, ಯಂತ್ರಗಳಬಳಕೆ, ಹಬೆಯ ಶಕ್ತಿಯ ಉಪಯೋಗ ಹೆಚ್ಚಿದವು. ಬಹಳ ಜನರು ಜೀವನಾಧಾರಕ್ಕಾಗಿ ಗ್ರಾಮಗಳಿಂದ ಪಟ್ಟಣಗಳಿಗೆ ವಲಸೆ ಹೋದರು ಇಂದು ನಾವು ಎಷ್ಟೋ ಯಂತ್ರಗಳನ್ನು, ಯಂತ್ರದಿಂದ ತಯಾರಿಸಿದ ವಸ್ತುಗಳನ್ನು ಉಪಯೋಗಿಸುತ್ತಿದ್ದೇವೆ. ಇದೇ ಬ್ರಿಟನ್‌ನಲ್ಲಿ ಯಾಂತ್ರಿಕ ಯುಗಕ್ಕೆ ನಾಂದಿಯಾಯಿತು.

ವಸ್ತ್ರಗಳಿಗೆ ಬೇಡಿಕೆ ಹೆಚ್ಚಿದ್ದರಿಂದ ಹಸ್ತಕಳಾಕಾರರು ಆಶ್ಚರ್ಯಪಟ್ಟು ಸಾಗಾಣಿಕೆಯನ್ನು ಯಾವ ವಿಧವಾಗಿ ಹೆಚ್ಚಿಸಬೇಕೆಂದು ಅನೇಕ ವಿಧದಲ್ಲಿ ಅಲೋಚಿಸಿದರು. ಇವರಲ್ಲಿ ಕೆಲವರ ಅಲೋಚನೆ ಹೀಗಿದೆ "ಈದಿನಗಳಲ್ಲಿ ನಮ್ಮ ವಸ್ತ್ರಗಳಿಗೆ ಬೇಡಿಕೆ ವಿಪರೀತವಾಗಿದೆ ಈ ಬೇಡಿಕೆಗೆ ಅನುಗುಣವಾಗಿ ಸಾಗಣಿಕೆ ನಾವು ಮಾಡಲಾರೆವು. ಅಷ್ಟೇ ಅಲ್ಲದೇ, ನಮ್ಮ ಮಗ್ಗಗಳ ಮೇಲೆ ವಸ್ತ್ರಗಳ ತಯಾರಿಕೆ ಅಧಿಕ ಖರ್ಚಿನಿಂದ ಕೂಡಿದೆ. ವೇಗವಾಗಿ ನೂಲು ತೆಗೆಯುವ ಯಂತ್ರವನ್ನು, ನೇಯುವ ಯಂತ್ರವನ್ನು ತಯಾರು ಮಾಡಿದ್ದಾದರೆ. ನಾವು ಕಡಮೆ ಬೆಲೆಗೆ ಅಧಿಕ ವಸ್ತ್ರವನ್ನು ಉತ್ಪತ್ತಿ ಮಾಡಬಹುದು. ಆಗ ಹೆಚ್ಚು ಜನ ಬಟ್ಟೆಗಳನ್ನು ಹೆಚ್ಚಾಗಿ ಕೊಳ್ಳುವುದು, ಮಾರುವುದು ಮಾಡುತ್ತಾರೆ. ಅಧಿಕವಾಗಿ ಆದಾಯ ಪಡೆಯುತ್ತಾರೆ.


ವ್ಯಾಪಾರದ ಕೆಲಸದ ಒತ್ತಡಗಳ ಫಲವಾಗಿ ಅನೇಕ ಜನ ಯಂತ್ರಗಳ ತಯಾರಿಗೆ ಪ್ರಯತ್ನವನ್ನು ಪ್ರಾರಂಭಿಸಿರು ಈ ಪ್ರಯತ್ನಗಳ ಫಲವಾಗಿ ಬಹಳ ಕಾಲಕ್ಕೆ ಹೆಚ್ಚು ನೂಲನ್ನು ಕಡಿಮೆ ಕಾಲದಲ್ಲಿ ತೆಗೆಯುವ ಯಂತ್ರವನ್ನು (ಚಿತ್ರ – 10) ಕಂಡು ಹಿಡಿದರು. ಇದರ ಭಾರ ಬಹಳ ಹೆಚ್ಚು ಇದನ್ನು ಉಪಯೋಗಿಸುವುದುರಲ್ಲಿ ಕಾರ್ಮಿಕರು ಅಧಿಕ ಶಕ್ತಿಯನ್ನು ವಿನಿಯೋಗಿಸುವುದರಿಂದ ಇವರು ತೀವ್ರ ದಣಿವಿಗೆ ಗುರಿಯಾಗಿ ಯಂತ್ರ ತನ್ನಷ್ಟಕ್ಕೆ ಅದೇ ನಡೆಯುವ ವಿಧವಾಗಿ ಇದ್ದರೆ ಚೆನ್ನಾಗಿರುತ್ತಿತ್ತು ಎಂದು ಕೊಳ್ಳುತ್ತಿದ್ದರು. ಈ ಆಲೋಚನೆ ಜೇಮ್ಸ್ ವ್ಯಾಟ್‌ನ ಅವಿಷ್ಕಾರದಿಂದ, ಅಂದರೆ ಆವಿ ಯಂತ್ರದಿಂದ ನಿಜವಾಯಿತು.


ಜೇಮ್ಸ್ ವ್ಯಾಟ್ ಆವಿಷ್ಕಾರ ;

ಜೇಮ್ಸ್ ವ್ಯಾಟ್‌ನು ಇಂಗ್ಲಾಂಡ್ ದೇಶದ ಹಸ್ತಕಳಾಕಾರ, ಯಂತ್ರಗಳ ತಯಾರಕ. ನೀರಿನ ಆವಿಗೆ ಬಹಳ ಭಾರವನ್ನು ಕದಲಿಸುವ ಶಕ್ತಿ ಇದೆ ಎಂದು ಈತನು ಗುರುತಿಸಿದನು ಈ ಆಲೋಚನೆಯಿಂದ ಜೇಮ್ಸ್ ವಾಟ್ ಮಾನವ, ಪ್ರಾಣಿಗಳ ಶಕ್ತಿ ಅವಸರವಿಲ್ಲದಂತಯೆ ಆವಿರಿ ಶಕ್ತಿಯಿಂದ ನಡೆಯುವ ಯಂತ್ರವನ್ನು ತಯಾರಿಸಿದನು.

ಜೇಮ್ಸ್ ವ್ಯಾಟ್ ತಾನು ತಯಾರಿಸಿದ ಯಂತ್ರವನ್ನು ಬೌಲ್ಟನ್ ಎನ್ನುವ ಉದ್ಯಮದಾರನಿಗೆ ತೋರಿಸಿ, ಅವರಿಬ್ಬರು ಪಾಲುದಾರರಾಗಿ ಈ ಯಂತ್ರಗಳನ್ನು ತಯರಿಸುವುದನ್ನು

ಚಿತ್ರ 8.1 ನೂಲು ತೆಗೆಯುವ ಯಂತ್ರ





ಚಿತ್ರ 8.2 ಜೇಮ್ಸ್ ವ್ಯಾಟ್ ಕಂಡುಹಿಡಿದ ಒಂದು ವಿಧವಾದ ಆವಿರಿಯಂತ್ರ ಆವಿರಿಯಿಂದ ಏರ್ಪಡುವ ಒತ್ತಡದ ಬಲ, ಚಕ್ರಕ್ಕೆ ಇರುವ ಕಡ್ಡಿಯನ್ನು ಕೆಳಕ್ಕೆ ಮೇಲಕ್ಕೆ ತಳ್ಳುವುದರಿಂದ ಚಕ್ರ ತಿರುಗುತ್ತದೆ.

SCERT TELANGANA

ಪ್ರಾರಂಭಿಸಿದರು ಬೌಲ್ಟನ್ ಬಂಡವಾಳವನ್ನು ಹೊಂದಿಸುವುದಲ್ಲದೆ ವಾಟ್‌ಗೆ ವೇತನ ಕೂಡ ಕೊಡುತ್ತಿದ್ದನು ಇವರಿಬ್ಬರು ಸೇರಿ ಯಂತ್ರಗಳನ್ನು ತಯಾರಿಸಿ ಲಾಭಗಳನ್ನು ಗಳಿಸಿದರು. ಲಾಭಗಳಲ್ಲಿ 2/3 ಭಾಗ ಬೌಲ್ಟನ್ 1/3 ಭಾಗ ವಾಟ್ ಹಂಚಿಕೊಂಡರು ಇವರು ಆವಿರಿ ಯಂತ್ರಗಳನ್ನು ತಯಾರಿ, ಮಾರಿ ಬಹಳ ಲಾಭ ಗಳಿಸಿದರು ಯಂತ್ರಗಳು ಆವಿ ಶಕ್ತಿಯಿಂದ ಕೆಲಸ ಮಾಡುತ್ತಿ ಎಂದು ತಿಳಿದು ಕೊಂಡನಂತರ ಅನೇಕ ವಿಧವಾದ ಯಂತ್ರಗಳನ್ನು ನೂಲು ತೆಗೆಯುವುದಕ್ಕೆ, ನೇಯುವುದಕ್ಕೆ, ಕಬ್ಬಿಣ ವಸ್ತುಗಳ ತಯಾರಿಗೆ, ವಾಹನಗಳು, ಹಡಗುಗಳನ್ನು ನಡೆಸುವಂತಹ ಕೆಲಸಗಳಿಗಾಗಿ ತಯಾರು ಮಾಡಿದರು.

- ಇಂಗ್ಲೆಂಡಿನಲ್ಲಿ ಸ್ವಯಂಚಾಲಕ (sself driven) ಯಂತ್ರಗಳ ಆರ್ವಿಭಾವದ ಅವಶ್ಯಕತೆ ಯಾವ ವಿಧವಾಗಿ ಏರ್ಪಟ್ಟಿತು?
- ಮೇಲೆ ಹೆಸರಿಸಿದ ಉದಾಹರಣೆಯಲ್ಲಿ ಶಾಸ್ತ್ರಜ್ಞನಿಗೆ ಬಂಡವಾಳ ದಾರನಿಗೂ ಮಧ್ಯ ನಡೆದ ಒಪ್ಪಂದವು ನ್ಯಾಯವು ಬದ್ದವಾದುದೆಂದು ನೀನು ಭಾವಿಸುತ್ತಿಯಾ ?

ಉತ್ಪತ್ತಿಯಲ್ಲಿ ಕೈಗಾರಿಕಾ ವಿಧಾನ :

ಕ್ರೀ.ಶ. 1750–1850 ಮಧ್ಯಕಾಲದಲ್ಲಿ "ಕೈಗಾರಿಕಾ ವಿಧಾನ" ಎನ್ನುವ ಹೊಸ ಪದ್ಧತಿ ಉದಯಿಸಿತು. ಸಾಧಾರಣ ಸಲಕರಣೆಗಳು ಮಾನವ ಕಾರ್ಮಿಕ ಶಕ್ತಿ ಸ್ಥಾನದಲ್ಲಿ ಹೊಸ ಯಂತ್ರಗಳು ಆವಿ ಶಕ್ತಿ ಬಳಕೆ ಹೆಚ್ಚಿತು ಉತ್ಪತ್ತಿನಡೆಯುವ ಪ್ರದೇಶವು ಮನೆಯಿಂದ ಕೈಗಾರಿಕೆಗೆ ಬದಲಾಯಿತು ನೂರಾರು ಜನ ಕಾರ್ಮಿಕರನ್ನು ಉದ್ಯೋಗದ ನಿಮಿತ್ಯ ಕೈಗಾರಿಕೆಗಳ ಹತ್ತಿರ ಸಾಗಿಸಿದರು ಚಿಕ್ಕಸಲಕರಣೆಗಳು, ಕೈಮಗ್ಗಗಳ ಸ್ಥಾನಗಳಲ್ಲಿ ಯಂತ್ರಗಳಿಗೆ ಪ್ರಧಾನ್ಯತೆ ಹೆಚ್ಚಿತು ಇವು ಹೆಚ್ಚಿನ ರೀತಿಯಲ್ಲಿ ವಸ್ತುಗಳನ್ನು ಉತ್ಪತ್ತಿ ಮಾಡಿದವು.

ಉತ್ಪತ್ತಿಗೆ ಸಂಭದಿಸಿದ ಸೌಕಾರ್ಯಗಳಿದ್ದು. ನಿರ್ವಹಣೆ ಮಾಡುವ ವ್ಯಕ್ತಿಗಳನ್ನು ಬಂಡವಾಳದಾರರು ಎನ್ನುತ್ತಾರೆ. ಇವರು ಯಂತ್ರಗಳಿಗಾಗಿ ಕಾರ್ಮಿಕರಿಗಾಗಿ ಬಂಡವಾಳ ವನ್ನು ವ್ಯಯ ಮಾಡುತ್ತಾರೆ. ಕಾರ್ಖಾನೆ, ಕಚ್ಚಾ ಪದಾರ್ಥ ಗಳು, ತಯಾರಾದ ವಸ್ತುಗಳ ಮೇಲೆ ಪೂರ್ತಿ ಅಧಿಕಾರ ಯಜಮಾನದ್ದೇ. ವರ್ತಕ ಶ್ರೇಣಿಗಳ ವಿಧಾನ (guild system)ದಂತಲ್ಲದೇ ಕಾರ್ಮಿಕರು ವೇತನಕ್ಕಾಗಿ ಕೆಲಸಮಾಡುತ್ತಾರಲ್ಲದೆ ಉತ್ಪತ್ತಿಯ ಮೇಲೆ ಇವರಿಗೆ ಅಧಿಕಾರ ಇರುವುದಿಲ್ಲ. ಪ್ರಾರಂಭದಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಡುವುದಕ್ಕೆ ಬಹಳ ಭಯಂಕರ ಪರಿಸ್ಥಿತಿಗಳಿದ್ದವು ಪ್ರಾರಂಭ'ದಲ್ಲಿ ಕಾರ್ಮಿಕರ ಗಣಿಕಾರ್ಮಿಕರ ಅನುಭವಗಳನ್ನು ಪರಿಶೀಲಿಸೋಣ.

19ನೇಯ ಶತಮಾನದ ಬಾಲ ಕಾರ್ಮಿಕನ ಅನುಭವ :

19ನೇ ಶತಮಾನದಲ್ಲಿ ಯುರೋಪ್‌ನಲ್ಲಿ ಕೈಗಾರಿಕಾ ಕಾರ್ಮಿಕರು ಬಹಳ ಭಯಂಕರವಾದ ಕಷ್ಟಗಳನ್ನು ಎದುರಿಸಿದರು. ಈಗ ನಾವು ಇಂಗ್ಲಾಂಡ್‌ನಲ್ಲಿ ಇದ್ದಿಲು ಗಣಿಯಲ್ಲಿ ಕೆಲಸಮಾಡುವ ಒಬ್ಬ ಬಾಲಕಾರ್ಮಿಕನ ಅನುಭವವನ್ನು ಪರಿಶೀಲಿಸೋಣ.

"ನಾನು ಈ ಗಣಿಗಳಲ್ಲಿ 4 ವರ್ಷದ ವಯಸ್ಸಿ ನಿಂದ ಕೆಲಸ ಮಡುತ್ತಿದ್ದೇನೆ. ಕಾಮಿಕರು ಕೊಡಲಿ ಗಳಂತಹ ಪರಿಕರಗಳಿಂದ ಇದ್ದಿಲನ್ನು ಅಗೆದು "ವೇಗನ್" ಗಳಲ್ಲಿ ತುಂಬುತ್ತಾರೆ. ಈ ವೇಗನ್‌ಗಳನ್ನು ಕುದುರೆ, ಹೆಸರಗತ್ತೆಗಳು ಎಳೆದು ಕೊಂಡು ಹೋಗುತ್ತವೆ. ಈ ವೇಗನ್‌ಗಳಿಗೆ ಹಿಂದಿನಿಂದ ತಳ್ಳುವುದು ನಮ್ಮ ಕೆಲಸ ಈ ವೇಗನ್‌ಗಳು ನೀರು, ಬುರುದೆ ಎತ್ತರ ವಿರುವ ಪ್ರಾಂತ್ಯಗಳ ಮೂಲಕ ಹೋಗುವುದರಿಂದ ನಾವು ಬೇಗನೇ ದಣಿಯುತ್ತೇವೆ ದಿನಕ್ಕೆ 12 ಗಂಟೆಗಳ ಕಾಲ ಕೆಲಸ ಮಡುವುದರಿಂದ ದಣಿದು ವಾಪಾಸು ಮನೆಗೆ ಹೋಗುವು ದರೊಳಗಾಗಿ ಊಟ ಮಾಡುವ ಬಯಕೆ ಕೂಡ ಇರುತ್ತಿರಲಿಲ್ಲ ನಿನ್ನೆ, ನಾನು ಮನೆಗೆ ಹೋಗುವ ದಾರಿಯಲ್ಲಿಯೇ ನಿದ್ದೆ ಹೋದೆನು ನಮ್ಮ ಅಮ್ಮ ಹುಡುಕುತ್ತಾ ನನ್ನನ್ನು ಹಿಡಿದುಕೊಂಡು ಮನೆಗೆ ಕರೆದುಕೊಂಡು ಹೋದಳು"

ಕೈಗಾರಿಕೆಯಲ್ಲಿ, ಗಣಿಗಳಲ್ಲಿ ಈ ವಿಧವಾಗಿ ಮಕ್ಕಳಿಂದ



ಚಿತ್ರ 8.3 ಇದ್ದಿಲು ಬಾವಿಯಲ್ಲಿ ಮಕ್ಕಳು ಬಂಡಿಯನ್ನು ತಳ್ಳುವುದು

SCERT TELANGANA

ಕೆಲಸ ಮಾಡಿಸುವುದನ್ನು ನಿಯಂತ್ರಿಸುವುದಕ್ಕೆ ಅನೇಕ ಕ್ರಾಂತಿಗಳು ನಡೆದವು. ಈ ಕ್ರಾಂತಿಗಳ ಫಲವಾಗಿ ಬಾಲಕಾರ್ಮಿಕ ವ್ಯವಸ್ಥೆಯನ್ನು ಯೂರೋಪ್ ಮತ್ತು ಅಮೇರಿಕಾಗಳಲ್ಲಿ 1936 ನಂತರ ನಿಷೇಧಿಸಿದರು.

ಪ್ರಾರಂಭದ ಕಾರ್ಖಾನೆಗಳಲ್ಲಿ ಪರಿಸ್ಥಿತಿಗಳು :

ನೂತನ ಯಂತ್ರಗಳ ಆಗಮನದಿಂದ ಕೈಗಾರಿಕೆಗಳಲ್ಲಿ ಭಾರೀ ಬದಲಾವಣೆಗಳು ಬಂದವು. ನೈಪುಣ್ಯವಿಲ್ಲದ ಕಾರ್ಮಿಕರು ಸಹ ಯಂತ್ರಗಳೊಂದಿಗೆ ಕೆಲಸ ಮಾಡುತ್ತಿದ್ದರು ಈ ವಿಧವಾಗಿ ನೈಪುಣ್ಯತೆಯಿರುವ ಕಾರ್ಮಿಕರ ಅವಶ್ಯಕ ವಿಲ್ಲದಾಯಿತು ಬಹಳ ಜನ ಸ್ತ್ರೀಯರು ಮಕ್ಕಳು ಅವರ ಪ್ರಾಂತ್ಯಗಳಲ್ಲಿಯ ಕೈಗಾರಿಕೆಗಳಲ್ಲಿ ಅತ್ಯಲ್ಪ ವೇತನಗಳಿಗೆ ಕೆಲಸ ಮಾಡುತ್ತಿದ್ದರು.

ಯಂತ್ರಗಳ ತಯಾರಿಕೆಯ ಖರ್ಚು ಅಧಿಕ ವಾಗಿರುವುದರಿಂದ ಸಾಧಾರಣ ಹಸ್ತಕಲಾ ಕಾರ್ಮಿಕರಿಗೆ ಈ ಖರ್ಚನ್ನು ಭರಿಸುವ ಶಕ್ತಿ ಇರಲ್ಲಿಲ್ಲ ಶ್ರೀಮಂತ ವರ್ತಕರು ಮಾತ್ರವೇ ಯಂತ್ರ ಆಧಾರಿತ ಕಾರ್ಖಾನೆ ಗಳನ್ನು ನಿರ್ಮಿಸುತ್ತಿದ್ದರು.

ಇದು ಅಂದಿನ ಕಾರ್ಮಿಕರು ಹೇಳಿದ ಅವರ ದುರಾವಸ್ಥೆಯನ್ನು ತಿಳಿಸುತ್ತದೆ. ಪ್ರತಿದಿನ ನಾವು ಕಾರ್ಖಾನೆಗೆ ಕೆಲಸಕ್ಕಾಗಿ ಮುಂಜಾನೆ 6 ಗಂಟೆಗೆ ಬಂದು ಸಾಯಂಕಾಲ 8.30 ನಿ॥ ವರೆಗೆ ಕೆಲಸ ಮಡುತ್ತಿದ್ದೇವು. ಮಧ್ಯಾಹ್ನ ಊಟದ ವಿರಾಮ 1 ಗಂಟೆ ಮಾತ್ರ ಸಾಯಂಕಾಲಕ್ಕೆ ಬಹಳ ದಣಿವಾಗಿ ಕೆಲಸ ಮಾಡದ ಸ್ಥಿತಿಯಲ್ಲಿದ್ದರೂ ಕಾರ್ಖಾನೆಯ ಯಜಮಾನ ಬಂದು ಇನ್ನೂ ಕೆಲಸ ಮಾಡಿರಿ ಎಂದು ಒತ್ತಡ ತರುತ್ತಿದ್ದನು"


"ಇಂದಿನ ದಿನಗಳಲ್ಲಿ ಹೊಸ ಹೊಸ ಯಂತ್ರಗಳು ಬರುತ್ತಿವೆ. ಅನೇಕ ಜನ ಮಾಡುವ ಕೆಲಸವನ್ನು ಈ ಯಂತ್ರಗಳು ಮಾಡುವುದರಿಂದ ಕಾರ್ಮಿಕರ ಅವಸರ ಕಡಿಮೆಯಾಯಿತು. ಒಂದು ಹೊಸ ಯಂತ್ರಬಂದಾಗ ಪ್ರತಿಬಾರಿ ನಮ್ಮಲ್ಲಿ ಕೆಲವು ಜನ ಉದ್ಯೋಗ ಕಳೆದುಕೊಂಡು ಬೀದಿಗೆ ಬೀಳುತ್ತಿದ್ದರು.

ಈ ಕಾರ್ಮಿಕರು ಇದಕ್ಕೆ ಮೊದಲು ಅವರವರ ಭೂಮಿಗಳನ್ನು ಕಳೆದುಕೊಂಡಿದ್ದರಿಂದ ಇವರಲ್ಲಿ ಬಹಳ ಜನರಿಗೆ ಯಂತ್ರಗಳ ಆಗಮನದಿಂದ ಉದ್ಯೋಗಕ್ಕಾಗಿ ಬೇರೆ ಮಾರ್ಗಗಳು ಇಲ್ಲದಂತಾವು ಸಣ್ಣ ಸಣ್ಣ ಹಸ್ತ ಕಳಾಕಾರರು ಅವರವರ ಅಂಗಡಿಗಳನ್ನು ಮುಚ್ಚಬೇಕಾಗಿ ಬಂದಿತು. ಕ್ರಮೇಣ ಕೈಗಾರಿಕಾ, ಗಣಿಕಾರ್ಮಿಕರು ಸಂಘಗಳಾಗಿ ಏರ್ಪಟ್ಟು ಕೆಲಸದ ಪರಿಸ್ಥಿತಿಗಳಿಗೆ ವಿರುದ್ಧವಾಗಿ ಹೋರಾಡಿದರು. ಪ್ರಾರಂಭಕಾಲದಲ್ಲಿ ಇವರ ಬೇಡಿಕೆಗಳು ಯಾವುವೆಂದರೆ ದಿನಕ್ಕೆ 8 ಅಥವಾ 10 ಕೆಲಸದ ಗಂಟೆಗಳು ಅಧಿಕ ಸಂಬಳಗಳೂ, 14 ವರ್ಷ ದೊಳಗಿನ ಮಕ್ಕಳಿಂದ ಕೆಲಸ ಮಾಡಿಸದೆ ಇರುವುದು ಮೊದಲಾದುವು ಕೆಲವು ಕಾಲಕ್ಕೆ ಅವರ ಹೋರಾಟಗಳ ಫಲವಾಗಿ ಕಾರ್ಮಿಕರ ಸ್ಥಿತಿಗಳು ಅಭಿವೃದ್ಧಿಗೊಂಡಿವೆ.





ಚಿತ್ರ 8.4
ಕೈಗಾರಿಕೆಯಲ್ಲಿ ವಸ್ತ್ರಗಳ ಮೇಲೆ ಚಿತ್ರಗಳನ್ನು ಗೀಚುತ್ತಿರುವ ದೃಶ್ಯ

© SCERT TELANGANA



ಚಿತ್ರಗಳು
8.5, 8.6, 8.7





- ಕೈಗಾರಿಕಾ ಕ್ರಾಂತಿ ಕಾಲದ ಚಿತ್ರಗಳನ್ನು ಪರಿಶೀಲಿಸಿ.
- ಇವು ಫೋಟೋಗ್ರಾಫ ಗಳಲ್ಲ ಲೋಹಗಳ ಮೇಲೆ ರಸಾಯನಿಕ ಪದಾರ್ಥ ಗಳನ್ನು ಉಪಯೋಗಿಸಿ ರೂಪಿಸಿದ ಚಿತ್ರಗಳು. ಇವುಗಳು ಕೈಗಾರಿಕಾ ಕ್ರಾಂತಿಯ ಕಾಲದಲ್ಲಿ ತಯಾರಿಸಿದವುಗಳು. ಹಿಂದಿನ ಪುಟದಲ್ಲಿ ಬಣ್ಣ ಎಂದ ಹಾಕಿದ ಚಿತ್ರ ಕೂಡಾ ಇದೆ. ಈ ಚಿತ್ರಗಳು ಅದಕ್ಕಿಂತ ಹೇಗೆ ಭಿನ್ನವಾಗಿವೆ ? ಯಾವ ಚಿತ್ರ ಹೆಚ್ಚು ವಿವರಗಳನ್ನು ಕೊಡುತ್ತದೆ. ಈ ಚಿತ್ರ ಗಳಲ್ಲಿ ನೀವು ಮಕ್ಕಳನ್ನು ಗಮನಿಸಿ ದ್ದೀರಾ ? ಒಂದು ಕೈಗಾರಿಕೆ ಸಂಬಂಧಿಸಿದ ಯಾವ ಯಾವ ವಿವರಗಳನ್ನು ಗಮನಿಸಿದ್ದೀರಿ ?

© NCERT NOT TO BE REPUBLISHED

- ಯಂತ್ರಗಳ ಮೂಲಕ ಕೆಲಸ ಮಾಡುವುದಕ್ಕೆ ಯಾರಿಗೆ ಉದ್ಯೋಗಗಳನ್ನು ಕಲ್ಪಿಸಿದ್ದಾರೆ ?
- ನಿಮಗೆ ಹತ್ತಿರವಿರುವ ಯಾವುದಾದರು ಕಾರ್ಖಾನೆಯ ಬಗ್ಗೆಯಾದರೂ ನಿಮಗೆ ತಿಳಿದಿದೆಯೇ? ಈ ಕಾರ್ಖಾನೆಯಲ್ಲಿನ ಕೆಲಸದ ಪರಿಸ್ಥಿತಿಗಳನ್ನು 150 ವರ್ಷಗಳಿಗೆ ಮೊದಲಲ್ಲಿದ್ದ ಇಂಗ್ಲಾಂಡಿನಲ್ಲಿ ಕೈಗಾರಿಕೆಗಳೊಂದಿಗೆ ಹೋಲಿಸಿ.

ಪ್ರಸ್ತುತ ಕೈಗಾರಿಕೆಗಳು ಕೂಡ ಬದಲಾಗಿವೆ ಈಗ ಎಲ್ಲ ವಿಧವಾದ ಕೆಲಸಗಳನ್ನು ಕಂಪ್ಯೂಟರ್ಸ್ ಸೂಚನೆಗಳ ಮೂಲಕ ಕೆಲಸ ಮಾಡುವ ಯಂತ್ರಗಳು ಮಾಡುತ್ತಿವೆ. ಇವುಗಳ ನಿರ್ವಹಣೆಗೆ ಕಡಿಮೆ ಸಂಖ್ಯೆಯಲ್ಲಿ ಕಾರ್ಮಿಕರು ಕನಿಷ್ಠ ಸಂಖ್ಯೆಯಲ್ಲಿ ಮಾನವ ಶ್ರಮಿಕ ಶಕ್ತಿ ಅವಶ್ಯಕ.

ಶಕ್ತಿ ಆಧಾರಗಳು ಕೈಗಾರಿಕಾ ಅಭಿವೃದ್ಧಿ

ಕಾರ್ಖಾನೆಗಳಲ್ಲಿನ ಯಂತ್ರಗಳು ನಡೆಯುವುದಕ್ಕೆ ಶಕ್ತಿ (ಪವರ್) ಅವಶ್ಯಕಇದ್ದಿಲು, ವಿದ್ಯುತ್,. ಪೆಟ್ರೋಲ್ ಮೊದಲಾದುವುಗಳಿಂದ ಶಕ್ತಿ ಲಭಿಸುತ್ತದೆ. ಪ್ರಾಥಮಿಕವಾಗಿ ಕೈಗಾರಿಕೆಗಳು ಶಕ್ತಿಗಾಗಿ ಇದ್ದಿಲ ಮೇಲೆ, ನೀರಿನ ಆವಿಯ ಮೇಲೆ ಆಧಾರಪಟ್ಟಿವೆ. ಅನಂತರ ಥರ್ಮಲ್ ವಿದ್ಯುತ್ ಶಕ್ತಿಗಳನ್ನು ಪೆಟ್ರೋಲ್, ಡೀಜಲ್, ಗ್ಯಾಸ್, ಅಣುಶಕ್ತಿ, ಸೌರಶಕ್ತಿ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದಾರೆ.

ಸಾರಿಗೆ ಕ್ಷೇತ್ರದಲ್ಲಿ ಕ್ರಾಂತಿ :

ಸ್ಟೀಮ್ ಇಂಜಿನ್/ಆವಿ ಯಂತ್ರ ಆವಿಷ್ಕಾರದಿಂದ ನೌಕಾ ನಿರ್ಮಾಣ ಕೈಗಾರಿಕಾ ಅಭಿವೃದ್ಧಿಗೆ ನಾಂದಿ ಯಾಯಿತು. ಜಲಸಾರಿಗೆ, ರಸ್ತೆ ಸಾರಿಗೆಯಲ್ಲಿ 1/3 ಭಾಗ ಖರ್ಚು ಕಡಿಮೆಯಾಯಿತು. ಆದರೂ ಜನರು ಇನ್ನೂ ಉತ್ತಮ ಸಾರಿಗೆ ವಿಧಾನಕ್ಕಾಗಿ ನಿರೀಕ್ಷಿಸುತ್ತಿದ್ದರು. ನೋಡಿದರು ಚಲಿಸುವ ಯಂತ್ರಕ್ಕೆ (locomotives) ಆವಿ ಯಂತ್ರವನ್ನು ಅಳವಡಿಸುವುದು ಸಾರಿಗೆ ಕ್ಷೇತ್ರದಲ್ಲಿ ಭಾರಿ ಬದಲಾವಣೆಗೆ ನಾಂದಿಯಾಯಿತು ಜಾರ್ಜ್ ಸ್ಟೀವನ್ಸನ್‌ನ ಚಲನಶಕ್ತಿ ಯಂತ್ರ ಲಿವರ್ ಪೂಲ್‌ನಿಂದ ಮಾಂಚೆಸ್ಟರ್ ವರೆಗೆ ಇರುವ 64 ಕಿ.ಮಿ.ಗಳ ಮಾರ್ಗವನ್ನು 46 ಕಿ.ಮಿ. ಗಂಟೆಗಳ ವೇಗದಿಂದ ಭಾರಿ ಸಾಮಗ್ರಿಯನ್ನು ಸಾಗಿಸಲಾಯಿತು. 1840ರಲ್ಲಿ ಜನ್ ಲೇಡನ್ ಮೆಕ್‌ಡಮ್ ಜೆಲ್ಲಿ ಕಲ್ಲುಗಳಿಂದ ರಸ್ತೆಯನ್ನು ನಿರ್ಮಿಸುವ ಪದ್ಧತಿಯನ್ನು ಕಂಡುಹಿಡಿದನು. ಈ ವಿಧಾನ ರಸ್ತೆ ನಿರ್ಮಾಣದಲ್ಲಿ ಒಂದು ಮೈಲುಗಲ್ಲು. ಮೊತ್ತೊಂದು ದಶಕದಲ್ಲಿ ಪ್ರಸ್ತುತ ನಾವು ನೋಡುವ ತಾರು ರಸ್ತೆಗಳ ನಿರ್ಮಾಣ ಪ್ರಾರಂಭವಾಯಿತು ಈ ವಿಧವಾದ ರಸ್ತೆಗಳು ಮೋಟಾರು ವಾಹನ ಚಾಲಕರಿಗೆ ಬಹಳ ಉಪಯೋಗಕರವಾಗಿವೆ.

20 ನೇ ಶತಮಾನದ ಪ್ರಾರಂಭದಲ್ಲಿ ರೈಟ್ ಸಹೋದರರು ವಿಮಾನವನ್ನು (air crafts) ಕಂಡು ಹಿಡಿದದ್ದರಿಂದ ಸಾರಿಗೆ ಕ್ಷೇತ್ರದಲ್ಲಿ ವಾಯು ಸಾರಿಗೆ ಮುಖ್ಯ ಸಾರಿಗೆ ಮಾರ್ಗವಾಗಿ ಏರ್ಪಟ್ಟಿತು.

ಕೈಗಾರಿಕೆ ಉತ್ಪತ್ತಿಗಳು – ವ್ಯಾಪಾರ :

ಕೈಗಾರಿಕೆ ಉತ್ಪತ್ತಿಗಳು ಭಾರಿ ವೊತ್ತದಲ್ಲಿ ಬೆಳೆದದ್ದರಿಂದ ತಮ್ಮ ಸ್ವಂತ ದೇಶಗಳಲ್ಲಿ ಒಟ್ಟು ಉತ್ಪತ್ತಿಗಳನ್ನು ಮಾರಟಕ್ಕೆ ಸಾಧ್ಯವಾಗಲಿಲ್ಲ. ಕೈಗಾರಿಕ ಯಜಮಾನರು ಹೆಚ್ಚಿನ ಉತ್ಪತ್ತಿಯನ್ನು ಇತರ ಪ್ರದೇಶಗಳಲ್ಲಿ ಸಹ ಮಾರುವುದಕ್ಕೆ ಪ್ರಾರಂಭಿಸಿದರು. ಯಂತ್ರದ ತಯಾರಿ ವಸ್ತುಗಳು ಕಡಿಮೆ ಬೆಲೆಯುಳ್ಳವು ಉತ್ತಮ ಗುಣಮಟ್ಟ ವಾಗಿವೆ. ಅದ್ದರಿಂದ ಇವುಗಳಿಗೆ ಪ್ರಪಂಚ ವ್ಯಾಪ್ತವಾಗಿ ಗಿರಾಕಿ ಹೆಚ್ಚಿತು. ಇದರಿಂದ ಇಂಗ್ಲೆಂಡ್ ನಲ್ಲಿಯೂ ಇತರ ದೇಶಗಳಲ್ಲಿಯೂ ಕೈಗಾರಿಕೆಗಳಿಗೆ ಪ್ರೋತ್ಸಾಹ ಲಭಿಸಿತು. ಆದರೆ ಕೈಗಾರಿಕಾ ದೇಶಗಳಿಗೆ ತಮ್ಮ ಉತ್ಪತ್ತಿಗೆ ಅವಸರವಾದ ಕಚ್ಚಾ ಪದಾರ್ಥಗಳ ಲಭ್ಯತೆ ಇರಲಿಲ್ಲ. ಉದಾಹರಣೆಗೆ ವಸ್ತ್ರಗಳ ತಯಾರಿಕೆಗೆ ಅವಶ್ಯಕವಾದ ಕಚ್ಚಾ ಹತ್ತಿಯನ್ನು ಭಾರತದಿಂದ ಇತರ ದೇಶಗಳಿಂದ ಖರೀದಿಸಿ ಕೈಗಾರಿಕಾ ಯಜಮಾನರಿಗೆ ಮಾರುತ್ತಿದ್ದರು ನಂತರ ವ್ಯಾಪಾರಿಗಳು ತಯಾರದ ವಸ್ತುಗಳನ್ನು ಖರೀದಿಸಿ ಭಾರತ ಅಮೇರಿಕಾ ಗಳಂತಹ ದೇಶಗಳಲ್ಲಿ ಮಾರುತ್ತಿದ್ದರು.

ತಮ್ಮ ವ್ಯಾಪಾರಕ್ಕಾಗಿ ಕೈಗಾರಿಕಾಭಿವೃದ್ಧಿಯ ಅವಶ್ಯ ಕತೆಗಳ ನಿಮಿತ್ತ ಯುರೋಪಿಯನ್ನರು ಕಚ್ಚಾ ಪದಾರ್ಥಗಳು ಲಭಿಸುವ ದೇಶಗಳನ್ನು ಆಕ್ರಮಿಸಿದರು. ತಮ್ಮ ಮಾತೃ ದೇಶಗಳಾಗಿ ಪರಿಗಣಿಸಲ್ಪಟ್ಟವು. ಇಂಗ್ಲೆಂಡ್, ಫ್ರಾನ್ಸ್ ಜರ್ಮನಿ, ಸ್ಪೆಯಿನ್, ಪೋರ್ಚುಗಲ್, ಬೆಲ್ಜಿಯಂ ಹಾಲೆಂಡ್ ಇತರ ಯುರೋಪಿಯನ್ ದೇಶಗಳು ಏಷ್ಯ ಆಫ್ರಿಕಾ, ಆಸ್ಟ್ರೇಲಿಯಾ ಅಮೇರಿಕಾ ಖಂಡಗಳಲ್ಲಿ ವಸಹಾತು ಗಳನ್ನು ಏರ್ಪಡಿಸಿಕೊಂಡವು (ಯಾವ ದೇಶದ ಸಹಜ ಸಂಪತ್ತುಗಳು ಇತರ ದೇಶಗಳ ಪ್ರಯೋಜನಗಳೆಗಾಗಿ ಉಪಯೋಗವಾಗುತ್ತವೆಯೋ ಆದೇಶವನ್ನು ವಸಹಾತು ದೇಶಗಳಾಗಿ ಹೆಸರಿಸುತ್ತಾರೆ). ಈ ಯುರೋಪಿಯನ್ ದೇಶಗಳು ಇತರ ಖಂಡಗಳಲ್ಲಿ ವಸಹಾತು ದೇಶಗಳನ್ನು ದೋಚಿಕೊಳ್ಳುತ್ತ ಶ್ರೀಮಂತ ದೇಶಗಳಾದವು.


ಪಟ್ಟಣೀಕರಣ – ಕೊಳಚೆ ಪ್ರದೇಶಗಳು

ಕೈಗಾರಿಕಾ ಕ್ರಾಂತಿಯ ಫಲವಾಗಿ ಕ್ರಮೇಣ ಜನಗಳು ಗ್ರಾಮಗಳಿಂದ ಪಟ್ಟಣಗಳಿಗೆ ವಲಸೆ ಹೋಗುವ ಪರಿಸ್ಥಿತಿ ಏರ್ಪಟ್ಟಿತು. ಕೈಗಾರಿಕೆಗಳು ಇತರ ಪಟ್ಟಣ

SCERT TELANGANA

ಕಾರ್ಯಕಲಾಪಗಳು ಜನರಿಗೆ ಜೀವನಾಧಾರವನ್ನು ದೊರಕಿಸಿದವು. ಹೊಸದಾಗಿ ಏರ್ಪಟ್ಟ ಪಟ್ಟಣಗಳಿಗೆ ಜನಗಳು ಹೆಚ್ಚಾಗಿ ವಲಸೆ ಹೋಗುವುದಿರಿಂದ ಇವರು ಮನೆ ಗುಡಿಸಲುಗಳು (shelters) ಇಕ್ಕಟಿನ ಪ್ರದೇಶದಲ್ಲಿ ನಿರ್ಮಿಸಿ ಕೊಂಡುದರಿಂದ ಇವು ಪರಿಶುಭ್ರತೆ ಇನ್ನಿತರ ಸೌಕರ್ಯಗಳ ಕಲ್ಪನೆಗೆ ಆತಂಕವಾಗಿ ಬದಲಾದವು. ಅಪಘಾತಗಳು ಅಂಟುವ್ಯಾದಿಗಳ ವ್ಯಾಪ್ತಿಯು ಇಲ್ಲಿ ಸಾಧಾರಣವಾಗಿದೆ. ಬಹಳ ಜನ ಕಾರ್ಮಿಕರ ನಿವಾಸಗಳು ಬೆಳಕು, ಆರೋಗ್ಯ, ಪರಿಶುಭ್ರ ಸೌಕರ್ಯಗಳಿಲ್ಲದೆ ಇರುತ್ತವೆ. ಕೈಗಾರಿಕೆಗಳು ಗಣಿಗಳ ಹತ್ತಿರ ಕೊಳಚೆ ಪ್ರದೇಶಗಳೆನ್ನುವವು ಸರ್ವ ಸಾಧಾರಣವಾಗಿದ್ದವು. ಈ ಪಟ್ಟಣಗಳಲ್ಲಿಯೆ ಶ್ರೀಮಂತರಿಗಾಗಿ ವಿಶಾಲವಾದ ರಸ್ತೆಗಳಿಂದ ಪರಿಶುಭ್ರವಾದ ಸೌಕರ್ಯಗಳಿಂದ, ಕುಡಿಯುವ ನೀರಿನ ಸರಬರಾಜು ಮತ್ತು ಇತರ ಸೌಕರ್ಯಗಳಿಂದ ಕೂಡಿದ ನಿವಾಸಗಳು (ಕ್ವಾರ್ಟರ್ಸ್) ನಿರ್ಮಿತವಾಗಿವೆ. ಕ್ರಮೇಣ ಜನಗಳು ಪೌರಹಕ್ಕುಗಳು, ಕಾರ್ಮಿಕರ ಸ್ಥಿತಿಗತಿಗಳು, ನಿವಾಸಗಳ ನಿರ್ಮಾಣ ಅಭಿವೃದ್ಧಿಯ ಬಗ್ಗೆ ಹೋರಾಟಗಳನ್ನು ನಡೆಸಿದರು.

ಕೆಳಗೆ ಕೊಟ್ಟಿರುವ ನಕ್ಷೆ–1 ರಲ್ಲಿ ಯೂರೋಪಿಯನ್ ದೇಶಗಳು ಮತ್ತು ಅವುಗಳ ವಲಸೆಗಳನ್ನು ಗಮನಿಸಬಹುದು.



ನಕ್ಷೆ–1 : ಕ್ರಿ.ಶ 1800 ವರ್ಷದಲ್ಲಿನ ಪ್ರಪಂಚದಲ್ಲಿನ ಯೂರೋಪ್ ದೇಶಗಳ ವಸಾಹತುಗಳು

ಅತ್ಯಧಿಕ ವಲಸೆಗಳು ಭಾರತ ದೇಶದಲ್ಲೂ ಕೂಡಾ, ಕರಾವಳಿ ಪ್ರಾಂತದಲ್ಲಿರುವದಾಗಿ ಗಮನಿಸಿರಿ. ಆಫ್ರಿಕಾ ಪಾಠದಲ್ಲಿನ ನಕಾಶೆ–5 ನ್ನು ಗಮನಿಸಿ ಬದಲಾವಣೆಗಳನ್ನು ವಿವರಿಸಿರಿ.

ಮುಖ್ಯ ಪದಗಳು :

1. ಕ್ರಾಂತಿ
2. ಉತ್ಪತ್ತಿ
5. ನ್ಯೂಕ್ಲಿಯರ್ ಎನರ್ಜಿ (ಅಣುಶಕ್ತಿ)
3. ಕೈಗಾರಿಕೆ
4. ನಿರ್ವಹಣೆ
6. ಪಟ್ಟಣೀಕರಣ
7. ಬಾಲಕಾರ್ಮಿಕರು
8. ಕೊಳಚೆ ಪ್ರದೇಶಗಳು

SCERT TELANGANA

ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ !

1) ಈ ವಾಕ್ಯಗಳನ್ನು ಸರಿಪಡಿಸಿ

- ಸಬ್ ಕಾಂಟ್ರಾಕ್ಟರ್ ವಿಧಾನ (Putting out system) ದಲ್ಲಿ
  - a) ನೂಲು ತೆಗೆಯುವವರು ದಾರವನ್ನು ನೇಯುವವರ ಹತ್ತಿರ ತೆಗೆದುಕೊಂದು ಹೋಗುತ್ತಾರೆ.
  - b) ವರ್ತಕ ಶ್ರೇಣಿಗಳ ಪದ್ಧತಿಯಲ್ಲದೆ ಯಾವ ಪದ್ಧತಿಯಲ್ಲಿ ಉತ್ಪತ್ತಿ ಮಾಡಬೇಕೋ ವ್ಯಾಪಾರಿಗಳೇ ನಿರ್ಣಯಿಸುತ್ತಾರೆ.
  - c) ಒಟ್ಟು ಕೆಲಸವನ್ನು ಒಂದೇ ಸಮೂಹ ಮಾಡುತ್ತದೆ.
- ವರ್ತಕ ಶ್ರೇಣಿಗಳು (Guild System)
  - a) ಸಣ್ಣ ರೈತರೆಲ್ಲರಿಗೂ ನೇಯುವ ಕೆಲಸ ಕಲಿತು ಕೊಳ್ಳುವ ಅವಕಾಶ ಕಲ್ಪಿಸಲಾಯಿತು.
  - b) ನೇಯುವವರು ಉತ್ಪತ್ತಿಗಳ ಗುಣ ಮಟ್ಟವನ್ನು ಬೆಲೆಯನ್ನು ನಿರ್ಣಯಿಸುತ್ತಾರೆ.

2) ವಸ್ತ್ರ, ಕೈಗಾರಿಕೆಯಲ್ಲಿ ಸಬ್ ಕಾಂಟ್ರಾಕ್ಟ್ ಪದ್ಧತಿ ಕೈಗಾರಿಕಾ ವಿಧಾನಕ್ಕಿಂತ ಉತ್ತಮವಾಗಿದೆ. ನೀನು ಅಂಗೀಕರಿಸುತ್ತೀಯಾ? ಕಾರಣಗಳನ್ನು ತಿಳಿಸು.

3) "ಭಾರತದೇಶದಲ್ಲಿ ರೈಲ್ವೆಗಳನ್ನು ಜನಗಳ ಸೌಕಾರ್ಯಕ್ಕಾಗಿ ವಸಾಹತು ಆಡಳಿತಗಾರರು ನಿರ್ಮಿಸಿದ್ದಾರೆ" ಎಂದು ಕೃತ್ತಿಕ ಎನ್ನುವ ವಿದ್ಯಾರ್ಥಿ ವಾದಿಸುತ್ತಿರುವಾಗ, ಈ ವಾದನೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

4) ಕಾರ್ಮಿಕರ ವೇತನದ ಅಭಿವೃದ್ಧಿಯು ಕೈಗಾರಿಕೆ ಉತ್ಪತ್ತಿಯನ್ನು ಹೇಗೆ ಪ್ರಭಾವಿತಗೊಳಿಸುತ್ತದೆ ?

5) ಕೈಗಾರಿಕಾ ಯಜಮಾನರು ಕಾರ್ಮಿಕರಿಗೆ ಕಡಿಮೆ ವೇತನ ಕೊಟ್ಟು ಹೆಚ್ಚಿನ ಸಮಯ ಕೆಲಸ ಮಾಡಬೇಕೆಂದು ಹೇಗೆ ಒತ್ತಡ ತರುತ್ತಿದ್ದರು?

6) ಕೈಗಾರಿಕೆಗಳಲ್ಲಿ ಕೆಲಸದ ಪರಿಸ್ಥಿತಿಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಏಕೆ ಅಂದುಕೊಳ್ಳುತ್ತೀಯೆ?

7) ಕೈಗಾರಿಕೆಗಳಲ್ಲಿ ಕೆಲಸದ ಪರಿಸ್ಥಿತಿಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಕಾನೂನುಗಳನ್ನು ಏಕೆ ಮಾಡಬೇಕು?

8) ಮಕ್ಕಳನ್ನು ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ನಿಯಮಿಸಬಾರದೆಂದು ಏಕೆ ಹೇಳುತ್ತಾರೆ ?

9) "ಸಾರಿಗೆ ವ್ಯವಸ್ಥೆಯು ಕೈಗಾರಿಕಾ ಅಭಿವೃದ್ಧಿಗೆ ಸಹಕಾರಿಯಾಗಿದೆ" ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿರಿ.

10) ಪ್ರಪಂಚ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ.

ಎ) ಇಂಗ್ಲೇಡ್ ಬಿ) ಪೋರ್ಚ್‌ಗಲ್ ಸಿ) ಫ್ರಾನ್ಸ್ ಡಿ) ಸ್ಪೇನ್

11) "ಪಟ್ಟಣೀಕರಣ ಕೊಳಚೆ ಪ್ರದೇಶಗಳು" ಪ್ಯಾರವನ್ನು ಓದಿ, ವ್ಯಾಖ್ಯಾನಿಸಿರಿ.

ನಿಯೋಜಿತ ಕಾರ್ಯ :

1) 6ನೇ ತರಗತಿಯಲ್ಲಿಯ, ವ್ಯವಸಾಯ, ವ್ಯಾಪಾರ ಪಾಠದ ಅಂಶಗಳನ್ನು ನೆನಪಿಸಿಕೊಳ್ಳಿ. ತೆಲಂಗಾಣದ ರೈತರು, ವ್ಯಾಪಾರರ ಸ್ವಭಾವಗಳನ್ನು ಬ್ರಿಟನ್ ಅಥವಾ ಯುರೋಪಿನ ವ್ಯಾಪಾರಗಳೊಂದಿಗೆ ಹೋಲಿಸಿರಿ. ಇದಕ್ಕಾಗಿ ನೀವು ಯಾವುದೇ ಪದ್ಧತಿಯನ್ನು ಪಟ್ಟಿಯನ್ನು ಬಳಸಿಕೊಳ್ಳಬಹುದು.

2) ನಿಮ್ಮ ಸುತ್ತಮುತ್ತಲಿನ ಪ್ರಾಂತದಲ್ಲಿ ಕಾರ್ಖಾನೆಗಳಲ್ಲಿ ಅಂಗಡಿಗಳಲ್ಲಿ ಬಾಲ ಕಾರ್ಮಿಕರಿದ್ದಾರೆಯೇ ಇದರ ಬಗ್ಗೆ ನಿನ್ನ ಸ್ಪಂದನೆ ಏನು ?

SCERT TELANGANA

ಅಧ್ಯಾಯ 9

ಕಾರ್ಖಾನೆಯಲ್ಲಿ ಉತ್ಪತ್ತಿ–ಕಾಗದದ ಕೈಗಾರಿಕೆ

ಸಣ್ಣ ಕುಟುಂಬಗಳಲ್ಲಿ ಕೆಲವು ಸಲಕರಣೆಗಳನ್ನು ಉಪಯೋಗಿಸಿ ಮನೆಯಲ್ಲಿಯೇ ಕರಕುಶಲ ವಸ್ತುಗಳನ್ನು ತಯಾರು ಮಾಡುತ್ತಾರೆ. ಇದಕ್ಕೆ ಭಿನ್ನವಾಗಿ ಕೈಗಾರಿಕೆಗಳಲ್ಲಿ ಭಾರಿ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪತ್ತಿ ಮಾಡುತ್ತಾರೆ. ಈ ಕಾರ್ಖಾನೆಗಳಲ್ಲಿ ಯಂತ್ರಗಳನ್ನು ಉಪಯೋಗಿಸುತ್ತಾ ಅನೇಕ ಜನ ಕಾರ್ಮಿಕರು ಕೆಲಸಮಾಡುತ್ತಾರೆ. ದೊಡ್ಡ ಕೈಗಾರಿಕೆಗಳಲ್ಲಿ ಉತ್ಪತ್ತಿ ಹೇಗೆ ನಡೆಯುತ್ತದೆಯೋ ನೋಡೋಣ.

- ನೀವು ಯಾವಾಗಲಾದರೂ ಯಾವುದಾದರೂ ಕಾರ್ಖಾನೆಯನ್ನು ನೋಡಿದ್ದೀರಾ? ಅದರ ಬಗ್ಗೆ ವಿವರಿಸಿರಿ.
- ನಿಮ್ಮ ಊಹಾಶಕ್ತಿಯನ್ನು ಉಪಯೋಗಿಸಿ, ನೀವು ನೋಡಿದ ಕಾರ್ಖಾನೆಯ ಚಿತ್ರವನ್ನು ಎಳೆಯಿರಿ. ಆ ಕಾರ್ಖಾನೆಯಲ್ಲಿ ಏನು ನಡೆಯುತ್ತದೋ 300 ಪದಗಳಲ್ಲಿ ವಿವರಿಸಿ.

ನಾವು ಬಹಳ ಕಾಗದವನ್ನು ಬಳಸುತ್ತೇವೆ. ಪುಸ್ತಕಗಳು, ರಿಕಾರ್ಡುಗಳು, ರಿಜಿಸ್ಟರುಗಳು, ಪ್ರಗತಿ ಪತ್ರಗಳು, ವಾರ್ತಾಪತ್ರಿಕೆಗಳು ಮೊದಲಾದವುಗಳನ್ನು ಯಾವುದರಿಂದ ತಯಾರಿಸುತ್ತಾರೋ ನಿಮಗೆ ಗೊತ್ತೇ? ತೆಲಂಗಾಣದಲ್ಲಿ ಎರಡು ಪ್ರಮುಖ ಕಾಗದದ ಕಾರ್ಖಾನೆಗಳು ಇವೆ. ಅವು ಸಿರ್‌ಪುರ್, ಕಾಗಜ್‌ನಗರ್ (ಕೊಮರಂಭೀಂ ಜಿಲ್ಲೆ) ಭದ್ರಾಚಲಂ, (ಖಮ್ಮಂ ಜಿಲ್ಲೆ)ಯಲ್ಲಿ ಇವೆ.

- ತೆಲಂಗಾಣ ನಕ್ಷೆಯಲ್ಲಿ ಕಾಗದದ ಕೈಗಾರಿಕೆ ಗಳಿರುವ ಈ ಎರಡು ಜಿಲ್ಲೆಗಳನ್ನು ಗುರುತಿಸಿ, ಅವುಗಳನ್ನು ಅಲ್ಲಿ ಏಕೆ ಸ್ಥಾಪಿಸಿದ್ದಾರೋ ಆಲೋಚಿಸಿ.

ಕಚ್ಚಾ ಸರಕುಗಳು:

ಒಂದು ವಸ್ತುವನ್ನು ತಯಾರಿಸುವುದಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಕಚ್ಚಾ ಪದಾರ್ಥಗಳು ಅಥವಾ ಕಚ್ಚಾ ಸರಕುಗಳು ಎನ್ನುತ್ತಾರೆ. ಕಾರ್ಖಾನೆಗಳಿಗೆ ಕಚ್ಚಾ ಸರಕುಗಳು ದೊಡ್ಡ ಪ್ರಮಾಣದಲ್ಲಿ ನಿರಂತರ ಪೂರೈಕೆ ಆಗಬೇಕಾಗಿದೆ. ಪ್ರತಿದಿವಸ ಡಜನ್‌ಗಳ ಮೊತ್ತದಲ್ಲಿ



ಚಿತ್ರ – 9.1 ದೂರದಿಂದ ಕಾಣುತ್ತಿರುವ ಕಾರ್ಖಾನೆ

SCERT TELANGANA



ಚಿತ್ರ – 9.2 ಬಿದಿರು ಲೋಡಿನಿಂದ ನಿಂತಿರುವ ಲಾರಿ

ಕಚ್ಚಾಸರಕುಗಳು ಲಾರಿಗಳಲ್ಲಿ ಬರುವುದನ್ನು ನೀವು ನೋಡಿರುತ್ತೀರಿ. ಕಾಗದದ ಕೈಗಾರಿಕೆಗಳಲ್ಲಿ ಸಾಧಾರಣವಾಗಿ ಬಿದಿರು, ಯಾಕಲಿಪ್ಟಸ್, ಸುಬಾಬುಲ್‌ನ್ನು ಉಪಯೋಗಿಸುತ್ತಾರೆ. ಇಂದು ಸುಬಾಬುಲ್ ಮರದ ಕಟ್ಟಿಗೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಇದರ ಜೊತೆಗೆ ಹೆಚ್ಚಿನ ಮೊತ್ತದಲ್ಲಿ ರಸಾಯನಗಳು, ಸಾಧಾರಣ ಉಪ್ಪು, ಕಾಸ್ಟಿಕ್ ಸೋಡಾ ಮೊದಲಾದವುಗಳನ್ನು ವಿವಿಧ ಹಂತಗಳಲ್ಲಿ ಉಪಯೋಗಿಸುತ್ತ ಕಾಗದ ತಯಾರಿಸುತ್ತಾರೆ. ಕೆಲಸಕ್ಕೆ ಬಾರದ ಕಾಗದಗಳಿಂದ (Scrap paper) ಸಹ, ಕಾಗದದ ಮಿಲ್ಲುಗಳಲ್ಲಿ ಮತ್ತೆ ಹೊಸ ಕಾಗದವನ್ನು ತಯಾರಿಸುತ್ತಾರೆ. (Recyciling).

ಕಾರ್ಖಾನೆಗಳಲ್ಲಿ ವಿದ್ಯುತ್‌ನಿಂದ ನಡೆಯುವ ಭಾರಿಯಂತ್ರಗಳನ್ನು ಬಳಸುತ್ತಾರೆ. ಕಾರ್ಖಾನೆಗೆ ಬಹಳ ವಿದ್ಯುತ್ ಅವಶ್ಯಕ ಚಿತ್ರದಲ್ಲಿ ಕಾಣಿಸುತ್ತಿರುವ ಕಾಗದದ ಕಾರ್ಖಾನೆಗೆ ವರ್ಷಕ್ಕೆ ಅಂದಾಜು 25 ಮೆಗಾ ವ್ಯಾಟ್‌ಗಳ ವಿದ್ಯುತ್ ಬೇಕು. ಅರ್ಧಕ್ಕಿಂತ ಹೆಚ್ಚು ವಿದ್ಯುತ್ತನ್ನು ಕೈಗಾರಿಕೆ ಸ್ವಂತವಾಗಿ ಉತ್ಪತ್ತಿ ಮಾಡಿಕೊಳ್ಳುತ್ತದೆ. ವಿದ್ಯುತ್‌ನ ಜೊತೆ ಹೆಚ್ಚಿನ ಮೊತ್ತದಲ್ಲಿ ಶುಭ್ರವಾದ ನೀರು ವರ್ಷವೆಲ್ಲಾ ಅವಶ್ಯಕ.

ಕಾಗದದ ಕಾರ್ಖಾನೆಗಳು–ಕಾಣೆಯಾಗುತ್ತಿರುವ ಬಿದಿರು:–

ಕಾಗದ ತಯಾರಿಸುವುದಕ್ಕೆ ಅವಶ್ಯಕವಾದ ಕಚ್ಚಾ ಪದಾರ್ಥಗಳು ಅರಣ್ಯಗಳಲ್ಲಿ ಲಭ್ಯವಾದರೂ, ಅವುಗಳನ್ನು ಶೇಖರಿಸುವುದು ಸುಲಭವಲ್ಲ. ಸಾಧಾರಣವಾಗಿ ಬಿದಿರು, ಮೆತ್ತನೆಯ ಕಟ್ಟಿಗೆ ಸಿಗುವ ಅರಣ್ಯ ಪ್ರಾಂತಗಳ ಸಮೀಪದಲ್ಲಿಯೇ ಕಾಗದದ ಕೈಗಾರಿಕೆಗಳನ್ನು ಸ್ಥಾಪಿಸುತ್ತಾರೆ.

ಕಾಗದದ ಕಾರ್ಖಾನೆಗಳಲ್ಲಿ ಇತರ ಕಚ್ಚಾ ಸರಕುಗಳನ್ನು ತರುವುದಕ್ಕೆ ಕಂಟ್ರಾಕ್ಟರ್‌ಗಳನ್ನು ವಿನಿಯೋಗಿಸುತ್ತಾರೆ. ಕೆಲವು ದಶಕಗಳ ಮೊದಲು ಅರಣ್ಯಗಳಲ್ಲಿ ಬಿದಿರು ಕಡಿಯುವುದಕ್ಕೆ ಗಿರಿಜನರನ್ನು (ನೀವು 6ನೆಯ ತರಗತಿಯಲ್ಲಿ ಓದಿದ ಕೂನವರ ನಿವಾಸಗಳಂತಹವರು) ಉಪಯೋಗಿಸುತ್ತಿದ್ದರು. ಈ ಹಿಂದೆ ಅಧಿಕವಾಗಿ ಬಿದಿರನ್ನು ಕಡಿದು ಹಾಕಿದ್ದರಿಂದ ಕಾಗದದ ಕಾರ್ಖಾನೆಗಳಿಗೆ ಸಮೀಪದಲ್ಲಿ ಕಚ್ಚಾಸರಕು ಲಭಿಸದ ಸ್ಥಿತಿ ಏರ್ಪಟ್ಟಿದೆ.

ಈಗ ಕಾಗದದ ಕಾರ್ಖಾನೆಗಳು ಗ್ರಾಮಗಳಲ್ಲಿ ಬೆಳೆಸುತ್ತಿರುವ ಸಬಾಬುಲ್‌ಗಳಂತಹ ಪರ್ಯಾಯ ಕಚ್ಚಾಸರಕು ಮೇಲೆ ಆಧಾರಪಡುತ್ತಿವೆ. ಇದು ಸರ್ಕಾರದ ವ್ಯವಸಾಯ ಭೂಮಿಗಳಲ್ಲಿ ಸಬಾಬುಲ್ ಮರಗಳನ್ನು ಬೆಳೆಸುವುದನ್ನು ಪ್ರೋತ್ಸಾಹಿಸುವಂತೆ ಮಾಡಿದೆ. ಇತ್ತೀಚಿನ ದಿನಗಳಲ್ಲಿ ಕಾಗದದ ಕೈಗಾರಿಕೆಗೆ ಬಹಳ ದೂರ ಪ್ರದೇಶಗಳಿಂದ ಕಟ್ಟಿಗೆಯನ್ನು ತರುತ್ತಾರೆ.

- ಕಾಗದದ ಕೈಗಾರಿಕೆಗಳಿಗೆ ಅತಿಮುಖ್ಯವಾದ ಕಚ್ಚಾ ಪದಾರ್ಥಗಳಾವುವು?
- ವಿದ್ಯುತ್ತನ್ನು ಒಂದು ಕಚ್ಚಾಸರಕಾಗಿ ಭಾವಿಸಬಹುದೆ? ಕಾರಣಗಳನ್ನು ತಿಳಿಸಿ,
- ನಿಮಗೆ ತಿಳಿದಿರುವ ಕೈಗಾರಿಕೆಗಳ ಬಗ್ಗೆ ನಿಮ್ಮ ಉಪಾಧ್ಯಾಯರೊಂದಿಗೆ ಚರ್ಚಿಸಿ ಈ ಪಟ್ಟಿಯನ್ನು ಪೂರ್ತಿಗೊಳಿಸಿ.

ನಾವು ಕಾಗದದ ಕಾರ್ಖಾನೆ ಹತ್ತಿರ ಹೋಗಿದ್ದೇವೆ. ಸುಬಾಬುಲ್ ಕಟ್ಟಿಗೆ ಲೋಡಿನಿಂದ 4, 5 ಲಾರಿಗಳು

ಕ್ರ.ಸಂ	ಉತ್ಪತ್ತಿ	ಕಾರ್ಖಾನೆಯ ಹೆಸರು	ಕಚ್ಚಾಪದಾರ್ಥ
1	ಚಪ್ಪಲಿಗಳು/ಬೂಟುಗಳು	ಚಪ್ಪಲಿ ಕೈಗಾರಿಕೆ	ಚರ್ಮ/ರಬ್ಬರ್/ಕೇನ್ವಾಸ್
2			
3			
4			

SCERT TELANGANA

- ನಾವು ಕಾಗದವನ್ನು ಹೆಚ್ಚಾಗಿ ಬಳಸಿದ್ದಾದರೆ, ನಾವು ಸಹ ಹೆಚ್ಚಾಗಿ ಅರಣ್ಯಗಳನ್ನು ಕಡಿಯಬೇಕಾಗುತ್ತದೆ. ಇಲ್ಲವೇ ಆಹಾರದ ಬೆಳೆಗಳನ್ನು ಬೆಳೆಸುವ ಪ್ರದೇಶವನ್ನು ಕಡಿಮೆ ಮಾಡಬೇಕಾಗುತ್ತದೆಯೆಂದು ನೀನು ಭಾವಿಸುತ್ತೀಯಾ? ತರಗತಿಯಲ್ಲಿ ಚರ್ಚಿಸು.



ಚಿತ್ರ – 9.3 ಲಾರಿ ಲಿಫ್ಟರ್

ಗೇಟಿನ ಹೊರಗೆ ನಿಂತಿವೆ. ಮುಂಜಾನೆ 9.30 ರ ನಂತರ ಮಾತ್ರ ಅವುಗಳನ್ನು ಒಳಗಡೆಗೆ ಹೋಗಲು ಅನುಮತಿ ನೀಡುತ್ತಾರೆ. ಕಾರ್ಮಿಕರಿಗಾಗಿ ಒಂದು ಗೇಟು, ವಾಹನಗಳಿಗಾಗಿ ಮತ್ತೊಂದು ಗೇಟು ಬೇರೆ ಬೇರೆಯಾಗಿವೆ. ಆ ಕೈಗಾರಿಕೆಯನ್ನು ನೋಡುವುದಕ್ಕೆ ಅಧಿಕಾರಿಗಳಿಂದ ಮುಂದೆಯೇ ಅನುಮತಿ ತೆಗದುಕೊಂಡೆವು. ಭದ್ರತಾ ಅಧಿಕಾರಿಯ ಹತ್ತಿರ ಇರುವ ರಿಜಿಸ್ಟರ್‌ನಲ್ಲಿ ನಮ್ಮ ಹೆಸರು ಬರೆದು, ಕಾರ್ಖಾನೆ ಒಳಗೆಹೋದವು. ನಂತರ ಲಾರಿಗಳು ಒಳಗಡೆ ಬಂದವು.

ಕಾಗದ ತಯಾರಿಸುವ ಪ್ರಕ್ರಿಯೆ:–

ಕಾಗದದ ಕಾರ್ಖಾನೆಯೊಳಗೆ ಸುಬಾಬುಲ್ ಕಟ್ಟಿಗೆಯನ್ನು ಲಾರಿಯಿಂದ ಇಳಿಸಿ ಪಕ್ಕದಲ್ಲಿರುವ ಕಬ್ಬಿಣದ ಪ್ಲಾಟ್‌ಫಾರಂ (Plat Form) ಮೇಲೆ ಹಾಕುತ್ತಿರುವ ಕ್ರೇನ್‌ಗಳಂತಹ ಯಂತ್ರವನ್ನು ನೋಡಿದೆವು. ಒಂದು ಕನ್ವೆಯರ್ ಬೆಲ್ಟ್ ಆ ಕಟ್ಟಿಗೆಯನ್ನು ಕಟಿಂಗ್‌ಮಾಡುವ ಯಂತ್ರಕ್ಕೆ ಸೇರಿಸುತ್ತದೆ. ವಾಸ್ತವವಾಗಿ ಕಾಗದವು ಐದುಹಂತಗಳಲ್ಲಿ ತಯಾರಾಗುತ್ತದೆ. ಈ ಕಾರ್ಖಾನೆಗಳಲ್ಲಿ ಪ್ರತಿಹಂತಕ್ಕೂ ಒಂದು ಪ್ರತ್ಯೇಕವಾದ ವಿಭಾಗ ಇದೆ. ವಿವಿಧ ಹಂತಗಗಳಲ್ಲಿ ಇವುಗಳ ಯಂತ್ರಗಳು ಕಚ್ಚಾಸರಕನ್ನು ವಿನಿಯೋಗಿಸುತ್ತವೆ. ಆ ಹಂತಗಳು ಹೀಗಿವೆ.

1. ತುಂಡು ಹಾಕುವುದು:– (Chipping) :

ಈ ಹಂತದಲ್ಲಿ ದೊಡ್ಡ ಕಟ್ಟಿಗೆಯ ತುಂಡುಗಳನ್ನು ಯಂತ್ರಗಳ ಸಹಾಯದಿಂದ ಸಣ್ಣ ತುಂಡುಗಳಾಗಿ ಮಾಡುತ್ತಾರೆ. ಈ ವಿಭಾಗದಲ್ಲಿ ಅಂದಾಜು 15–20 ಮಂದಿ ಕಾರ್ಮಿಕರು ಕೆಲಸಮಾಡುತ್ತಾರೆ. ತುಂಡುಗಳನ್ನು ಅವುಗಳ ಪರಿಮಾಣದ ಆಧಾರವಾಗಿ ಬೇರೆ ಮಾಡುತ್ತಾರೆ. ದೊಡ್ಡ ತುಂಡುಗಳನ್ನು ಸಣ್ಣತುಂಡುಳಾಗಿ ಮಾಡುತ್ತಾರೆ. ಒಂದು ಲಾರಿ ಕಟ್ಟಿಗೆಯನ್ನು ಯಂತ್ರಗಳ ಸಹಾಯದಿಂದ 30 ನಿಮಿಷಗಳಲ್ಲಿ ಸಣ್ಣತುಂಡುಗಳನ್ನಾಗಿ ಮಾಡುತ್ತಾರೆ. ಈ ವಿಧವಾಗಿ ದಿನವೆಲ್ಲಾ (24ಗಂಟೆಗಳು) ಕಾರ್ಖಾನೆ ನಡೆಯುವುದಕ್ಕೆ ಎಷ್ಟು ಗಿಡಗಳನ್ನು ಕಡೆಯಬೇಕಾಗುತ್ತದೆಯೋ ಊಹಿಸಬಲ್ಲಿರಾ?

2. ಕಟ್ಟಿಗೆಯನ್ನು ಮೆದುಮಾಡುವ ವಿಧಾನ:

ಸಣ್ಣಕಟ್ಟಿಗೆ ತುಂಡುಗಳನ್ನು ಫೈಬರ್‌ಲೈನ್ ವಿಭಾಗಗಳಿಗೆ ಕಳಿಸುತ್ತಾರೆ. ಅಲ್ಲಿ ದೊಡ್ಡ ಪಾತ್ರೆಗಳಲ್ಲಿ ರಸಾಯನಗಳನ್ನು ಸೇರಿಸಿ ಬಹಳ ಕುದಿಸುತ್ತಾರೆ. ಈ ಪ್ರಕ್ರಿಯೆಯ ಮೂಲಕ ತುಂಡುಗಳು ಮೆದುವಾಗಿ ಬದಲಾಗುತ್ತವೆ. ಈ ದ್ರವರೂಪದಲ್ಲಿನ ಮೆದುವಿಗೆ ರಸಾಯನಗಳನ್ನು ಸೇರಿಸಿ



ಚಿತ್ರ – 9.4 ತುಂಡು ಮಾಡುವ ವಿಭಾಗದಲ್ಲಿ ಕಾರ್ಮಿಕ



ಚಿತ್ರ – 9.5 ಸೆಟ್ಟಿಂಗ್ ಯಂತ್ರದಹತ್ತಿರ ಕೆಲಸದವರು

© NCERT NOT TO BE REPUBLISHED



ಚಿತ್ರ – 9.6 ಮೆದು ಮಾಡುವ ವಿಭಾಗ

ಬಿಳಿಯಾಗಿ ಕಾಣುವಂತೆ ಮಾಡುತ್ತಾರೆ. ನಂತರ ಇದು ಯಾವುದೇ ಧೂಳವಿಲ್ಲದ ಹಾಲಿನಂತಹ ಬಿಳಿಯಾದ ತಿರುಳಾಗಿ (Cryamy) ಬದಲಾಗುತ್ತದೆ.

3. ಮೆದು ತಿರುಳನ್ನು ಹರಡುವಿಕೆ (Spreading):

ದ್ರವರೂಪದಲ್ಲಿರುವ ಮೆದುವಿನ ತಿರುಳನ್ನು ಸಿಲೆಂಡರ್‌ಗಳಿಂದ ತೆಳ್ಳಗಿನ ಪರದೆಯ ಮೇಲೆ ಹರಡುತ್ತಾರೆ. ಅಗಲ, ಉದ್ದ, ದಪ್ಪಬೇಕಾದ ವಿಧವಾಗಿ ಹೊಂದಿಸುವ ಈ ಹಂತವು ಕಾಗದದ ತಯಾರಿಯಲ್ಲಿ ಅತ್ಯಂತ ಮುಖ್ಯವಾದುದು. ಇದರಲ್ಲಿನ ನೀರು ಹೊರಗಡೆ ಹೋಗುವುದಕ್ಕೆ ಬಿಸಿಯಾಗಿ ಆವಿಯಾಗುವುದರಿಂದ ಮೆದುವಿನ ತಿರುಳು ತಣ್ಣಗಾಗುತ್ತದೆ. ಈಹಂತ ಪೂರ್ತಿಯಾದ ನಂತರ ಮೆದು ಕನ್ವೆಯರ್ ಬೆಲ್ಟಿನ ಮೇಲೆನಿಂದ ಮುಂದಕ್ಕೆ ಹೋಗುತ್ತದೆ.

4. ಒತ್ತುವುದು, ಒಣಗಿಸುವುದು, ಸುತ್ತುವುದು (Pressing):-

ಮೆದುವಿನ ತಿರುಳನ್ನು ರೋಲರ್‌ಗಳಿಂದ ಒತ್ತಲ್ಪಟ್ಟು ತೆಳುವಾಗಿ ಮಾಡುತ್ತಾರೆ. ಮೆದುತಿರುಳು ಪೂರ್ತಿ ಆರಿದ ನಂತರ ಸಿಲಿಂಡರ್‌ಗೆ ಸುತ್ತಿಕೊಳ್ಳುತ್ತದೆ.

5. ಕತ್ತರಿಸುವಿಕೆ (Cutting) :–

ಬೇಕಾದ ಪರಿಮಾಣದಲ್ಲಿ ಯಂತ್ರಗಳಿಂದ ಕಾಗದವನ್ನು ಕತ್ತರಿಸುತ್ತಾರೆ. ಕಾಗದವನ್ನು ಸುತ್ತುಗಳಾಗಿಯಾಗಲಿ ಷೀಟುಗಳಾಗಿಯಾಗಲಿ ಮಾಡುತ್ತಾರೆ. ಅವುಗಳನ್ನು ಪ್ಯಾಕ್‌ಮಾಡಿ ಗೋದಾಮುಗಳಿಗೆ ಕಳಿಸುತ್ತಾರೆ.

ಕಾರ್ಖಾನೆಗಳಲ್ಲಿ ಉತ್ಪತ್ತಿ ಎಲ್ಲಾ ಸಮಯದಲ್ಲಿಯೂ, ಏಕಕಾಲದಲ್ಲಿ ಎಲ್ಲಾ ವಿಭಾಗಗಳಲ್ಲಿ ನಡೆಯುತ್ತಿರುತ್ತದೆ.

ತಂಡ (Batches) :–

ಸುತ್ತುಗಳು, ಷೀಟ್‌ಗಳಾಗಿ ರುವ ಕಾಗದವನ್ನು ಗೋದಾಮುಗಳಲ್ಲಿ ಸಂಗ್ರಹಿಸುತ್ತಾರೆ. ಪ್ರತಿಯೊಂದು ಸುತ್ತಿನಮೇಲೆ ಬ್ಯಾಚ್ ನಂ/ಲಾಟ್ ನಂ. ಭಾರ ಮೊದಲಾದ ವಿವರಗಳನ್ನು ತಿಳಿಸುವ ಲೇಬಲ್ ಹಾಕುತ್ತಾರೆ. ಬ್ಯಾಚ್ ಎಂದರೇನು? ಕಾರ್ಖಾನೆಯಲ್ಲಿ ಒಂದು ಲಾರಿ ಲೋಡು ಕಟ್ಟಿಗೆ ಬಂದರೆ, ಆ ಎಲ್ಲಾ ಕಟ್ಟಿಗೆಗೆ ಒಂದು ಬ್ಯಾಚ್‌ನ ನಂಬರ್ ಕೊಡುತ್ತಾರೆ. ಈ ಬ್ಯಾಚ್‌ಗಳನ್ನು ವಿವಿಧ ವಿಭಾಗಗಳಿಗೆ ಒಂದರ ನಂತರ ಮತ್ತೊಂದನ್ನು ಕಳಿಸುತ್ತಾರೆ ಒಂದು ಬ್ಯಾಚ್‌ಗೆ ಸಂಬಂಧಿಸಿದ ಕಚ್ಚಾ ಸರಕನ್ನು ಪ್ರತಿಹಂತದಲ್ಲಿಯೂ ಕಾಗದ ತಯಾರಿಕೆಗೆ ಉಪಯೋಗಿಸುತ್ತಾರೆ. ಉದಾಹರಣೆಗೆ ಬ್ಯಾಚ್ ನಂ. 201 ಕಟ್ಟಿಗೆಯನ್ನು ಸಣ್ಣ ತುಂಡುಗಳಾಗಿ ಮಾಡುತ್ತಿರುವಾಗ ಅದಕ್ಕೀಂತ ಮುಂಚಿನ ಬ್ಯಾಚ್ ನಂ. 200 ಮೆದುತಯಾರಿ ವಿಭಾಗದಲ್ಲಿಯೂ, ಬ್ಯಾಚ್ ನಂ. 199 ಹಾಸುವುದು, ಆರಿಸುವುದರ ವಿಭಾಗದಲ್ಲಿರಬಹುದು. ಬ್ಯಾಚ್ ನಂ. 201 ತುಂಡು ಮಾಡಿದ ನಂತರ, ಬೇರೆ ವಿಭಾಗದಲ್ಲಿ ಹೋದಕೂಡಲೇ ಬ್ಯಾಚ್ ನಂ. 202 ಕತ್ತರಿಸುವುದಕ್ಕಾಗಿ ತರುತ್ತಾರೆ.

ಒಂದು ಬ್ಯಾಚ್‌ಗೆ ಸಂಬಂಧಿಸಿದ ಎಲ್ಲಾ ಕಾಗದ ಗಳಿಗೂ ಒಂದೇ ವಿಧವಾದ ಕಚ್ಚಾಪದಾರ್ಥಗಳು ಪ್ರಕ್ರಿಯೆ, ಗುಣಮಟ್ಟ ಇರುತ್ತವೆ. ಗುಂಪು ಪದ್ಧತಿ ದಿನವೆಲ್ಲಾ ಮುಂದುವರಿಯುವಂತೆ ಮಾಡುತ್ತದೆ. ಪ್ರತಿ ವಿಭಾಗದಲ್ಲಿಯೂ ನಿರಂತರ ಕೆಲಸ ಇರುತ್ತದೆ. ಯಾವ ಬ್ಯಾಚ್‌ನಲ್ಲಾದರೂ ಏನಾದರೂ ಪೊರಪಾಟು ನಡೆದರೆ ಮೇನೇಜರ್‌ಗಳು ಅದನ್ನು ಸುಲಭವಾಗಿ ತಿಳಿದುಕೊಳ್ಳುತ್ತಾರೆ.

ಕೆಲಸದ ಗಂಟೆಗಳು–ಷಿಫ್ಟುಗಳು:

ಈ ಕಾಗದದ ಕಾರ್ಖಾನೆ ದಿನದಲ್ಲಿ 24 ಗಂಟೆಗಳ ಕಾಲ ಕೆಲಸಮಾಡುತ್ತಾ ಇರುತ್ತದೆ. ಕಾರ್ಮಿಕರು 3 ಷಿಫ್ಟುಗಳಲ್ಲಿ 8 ಗಂಟೆಗಳಂತೆ ಕೆಲಸಮಾಡುತ್ತಾರೆ. ಅವು ಎ, ಬಿ, ಸಿ,ಷಿಫ್ಟುಗಳು, ಪ್ರತಿ ಷಿಫ್ಟುಗಳಲ್ಲೂ 800–900 ಮಂದಿ ಕಾರ್ಮಿಕರು ಕೆಲಸಮಾಡುತ್ತಾರೆ.

ಎ–ಷಿಫ್ಟು:– ಮುಂಜಾನೆ 6ಗಂಟೆ ಯಿಂದ ಮಧ್ಯಾಹ್ನ 2ಗಂಟೆಯ ವರೆಗೆ.

ಬಿ–ಷಿಫ್ಟು:– 2 ಗಂಟೆಯಿಂದ ರಾತ್ರಿ 8ಗಂಟೆಯ ವರೆಗೆ

ಸಿ–ಷಿಫ್ಟು:– ರಾತ್ರಿ 8ಗಂಟೆಯಿಂದ ಮುಂಜಾನೆ 6ಗಂಟೆಯವರೆತಗೆ (ರಾತ್ರಿ ಷಿಫ್ಟು)

ರಾತ್ರಿ ಷಿಫ್ಟುಗಳಲ್ಲಿ ಕೆಲಸಮಾಡುವ ಕಾರ್ಮಿಕರಿಗೆ

SCERT TELANGANA

ಪ್ರತ್ಯೇಕ ಭತ್ಯೆಕೊಡತ್ತಾರೆ. ಕಾರ್ಮಿಕರು ಷಿಫ್ಟುಗಳನ್ನು ಬದಲಾಗುತ್ತಿರುತ್ತಾರೆ. ಪ್ರತಿವಾರ ಎ–ಷಿಫ್ಟಿನಿಂದ ಬಿ–ಷಿಫ್ಟಿಗೆ ಬದಲಾಗುತ್ತಾರೆ. ಮುಂಜಾನೆ 9–30ರಿಂದ ಸಾಯಂಕಾಲ 5ಗಂಟೆಯವರೆಗೆ ನಿರ್ವಹಣೆ, ಆಡಳಿತ ಸಿಬ್ಬಂದಿಗಳಿಗಾಗಿ ಸಾಮಾನ್ಯ ಷಿಫ್ಟು ಇರುತ್ತದೆ. ಇವರು ಖಾತೆಗಳ ನಿರ್ವಹಣೆ ವ್ಯಾಪಾರ, ಮಾರಾಟ ಕಾರ್ಮಿಕರ ಸಂರಕ್ಷಣೆ ಮೊದಲಾದ ಅಂಶಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಾರೆ.

ಕಾಗದದ ಮಾರಾಟ:– ಈ ಕಾಗದದ ಕಾರ್ಖಾನೆಗೆ ಬೇರೆ ಬೇರೆ ನಗರಗಳಲ್ಲಿ ಮಾರಾಟದ ಡಿಪೋಗಳಿವೆ. ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ, ಮಲೇಷಿಯಾ, ಸಿಂಗಾಪೂರ್, ನೈಜೀರಿಯಾ, ದಕ್ಷಿಣಾಫ್ರಿಕ ದೇಶಗಳೊಂದಿಗೆ ಕಾಗದದ ವ್ಯಾಪಾರ ನಡೆಯುತ್ತಿದೆ. ಈ ಡಿಪೋಗಳ ಮೂಲಕ ಕಾಗದದ ಮಾರಾಟ ನಡೆಯುತ್ತದೆ.

ಇಲ್ಲಿ ಅಭಿವೃದ್ಧಿ ಹೊಂದಿದ ರಸ್ತೆ ಮಾರ್ಗ, ರೈಲುಮಾರ್ಗ ಇದೆ. ಆದ್ದರಿಂದ ಕಟ್ಟಿಗೆ, ಕಾಗದದ ಸಾಗಾಣಿಕೆ ಸುಲಭವಾಗುತ್ತಿದೆ.

ಚರ್ಚೆ:

- ಕಾಗದದ ಸುತ್ತುಗಳ ಮೇಲೆ ಬ್ಯಾಚ್ ನಂಬರ್, ಲೇಬಲ್‌ಹಾಕುವುದರ ಅವಸರವೇನು?
- ಕಾಗದದ ಕಾರ್ಖಾನೆ ರಾತ್ರಿ, ಹಗಲು ಏತಕ್ಕಾಗಿ ಕೆಲಸಮಾಡುತ್ತಿವೆ ಎಂದು ಬಾವಿಸುತ್ತೀಯಾ? ಇದನ್ನು ವ್ಯವಸಾಯದ ಕೆಲಸಗಳಿಗೆ ಹೋಲಿಸಿ.
- ಗೇಟಿನ ಹತ್ತಿರ ಸೆಕ್ಯುರಿಟಿ ಗಾರ್ಡ್ ಏಕೆ ಇರುತ್ತಾನೆ? ವಾಚ್‌ಮ್ಯಾನ್ ನಂತೆ ನೀನು ನಟಿಸಿ ತೋರಿಸುವೆಯಾ? ಈತನು ಯಾರನ್ನು ಒಳಗಡೆ ಬಿಡುತ್ತಾನೆ? ಯಾರನ್ನು ಬಿಡುವುದಿಲ್ಲ?


ಕಾಗದದ ಕಾರ್ಖಾನೆಗಳಲ್ಲಿ ಕೆಲಸ:

ಒಂದು ಕಾರ್ಖಾನೆಯಲ್ಲಿ ವಿವಿಧ ರೀತಿಯ ಅನೇಕ ಜನ ಕಾರ್ಮಿಕರನ್ನು ಕೆಲಸದಲ್ಲಿ ತೆಗೆದುಕೊಳ್ಳುತ್ತಾರೆ. ಕೆಲವರು ಯಂತ್ರಗಳಿಂದ ಕೆಲಸಮಾಡಿದರೆ, ಇನ್ನೂ ಕೆಲವರು ಅವರಿಗೆ ಸಹಕರಿಸುತ್ತಾರೆ. ಕೆಲವರು ವಿದ್ಯುತ್‌ನ ದುರಸ್ತಿಯಲ್ಲಿ ಕೆಲಸ ಮಾಡುತ್ತಾರೆ. ಇನ್ನೂ ಕೆಲವರು ಸಾರಿಗೆಗೆ ಸಹಾಯ ಮಾಡುತ್ತಾರೆ. ಅದರಲ್ಲಿ ಕೆಲವರು ಉನ್ನತ ವಿದ್ಯಾರ್ಹತೆ ಇರುವ ಇಂಜಿನಿಯರ್‌ಗಳಾಗಿದ್ದಾರೆ. ಇನ್ನೂ ಕೆಲವರು ಐ.ಟಿ.ಐ. ಇಲ್ಲವೆ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಓದಿರುತ್ತಾರೆ. ಅನಕ್ಷರಸ್ಥರು ಕೆಲವು ಜನ ಶುಭ್ರಮಾಡುವಂತಹ ಕೆಲಸಗಳಲ್ಲಿರುತ್ತಾರೆ. ಕಾರ್ಖಾನೆಗಳಲ್ಲಿ ಕೆಲವರನ್ನು ವಿವಿಧ ನಿರ್ಬಂಧನೆಗಳಿಂದ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ.

ಕೆಲವರು ಶಾಶ್ವತ ಉದ್ಯೋಗಸ್ಥರಾದರೆ, ಇನ್ನೂ ಕೆಲವರು ದಿನಗೂಲಿಗಳು. ಈ ಕೂಲಿಗಳು ಕೆಲಸ ಇದ್ದಾಗ ಮಾತ್ರ ಅವಶ್ಯಕವಾಗುತ್ತಾರೆ. ಇವರ ಜೊತೆ ಕಾಂಟ್ರ್ಯಾಕ್ಟ್ ಕಾರ್ಮಿಕರೂ ಕೂಡ ಇರುತ್ತಾರೆ. ಇದನ್ನು ವಿವರವಾಗಿ ಚರ್ಚಿಸೋಣ.

ಸೂರಜ್ ಕಾಗದದ ಕಾರ್ಖಾನೆಯಲ್ಲಿ ಒಬ್ಬ ಶಾಶ್ವತ ಕಾರ್ಮಿಕನಾಗಿದ್ದಾನೆ. ಪ್ರೆಸ್ಸಿಂಗ್ ವಿಭಾಗ (Pressing

- ಈ ಕೆಳಗಿನ ಭಾಗವನ್ನು ಓದಿ,ನಿಮ್ಮ ಸ್ವಂತ ವಾಕ್ಯಗಳಿಂದ ಖಾಲಿ ಸ್ಥಳಗಳನ್ನು ಪೂರ್ತಿಮಾಡಿರಿ.



SCERT TELANGANA

Section) ನಲ್ಲಿ ಕೆಲಸ ಮಾಡುವ ಈತನು ನೀಲಿಬಣ್ಣದ ಅಂಗಿ, ಖಾಕಿ ಪ್ಯಾಂಟ್ ಧರಿಸಿಕೊಂಡು ಬರುತ್ತಾನೆ. ಹತ್ತುವರ್ಷಗಳಿಂದ ಕೆಲಸಮಾಡುತ್ತಾ ತಿಂಗಳಿಗೆ ಪ್ರಸ್ತುತ ರೂ.15,000/– ವೇತನವನ್ನು ಪಡೆಯುತ್ತಾನೆ. ಪ್ರಾವಿಡೆಂಟ್ ಫಂಡ್ (ಪದವಿ ವಿರಮಣ ನಂತರ ಪಡೆಯುವ ಮೊತ್ತ) ಆರೋಗ್ಯ ಪಾಲಸಿಗಳಂತಹ ಶಾಶ್ವತ ಉದ್ಯೋಗಿಗಳು ಪಡೆಯುವ ಪ್ರಯೋಜನಗಳೆಲ್ಲವನ್ನು ಸೂರಜ್ ಪಡೆಯುತ್ತಿದ್ದಾನೆ. ಯಾವುದಾದರೂ ಕಾರಣಗಳಿಂದ ಆತನನ್ನು ಉದ್ಯೋಗದಿಂದ ತೆಗೆದುಹಾಕಿದರೂ ಇಲ್ಲವೇ, ಅಪಘಾತ ಸಂಭವಿಸಿ ಕೆಲಸ ಬಿಟ್ಟರು ಆತನಿಗೆ ಕಾರ್ಖಾನೆ ಸ್ವಲ್ಪ ಹಣವನ್ನು ಪರಿಹಾರವಾಗಿ ಕೊಡುತ್ತದೆ. ಪ್ರತಿವರ್ಷವು ಸೂರಜ್ ವೇತನವು ಹೆಚ್ಚಾಗುತ್ತದೆ. ಆತನಿಗಾಗಲೀ, ಆತನ ಕುಟುಂಬದ ಸದಸ್ಯರಿಗಾಗಲೀ, ಅನಾರೋಗ್ಯಕ್ಕೆ ಗುರಿಯಾದರೆ ಸರ್ಕಾರದ ದವಾಖಾನೆಯಲ್ಲಿ ಉಚಿತವಾಗಿ ವೈದ್ಯಕೀಯ ಸೌಕರ್ಯವನ್ನು ಪಡೆಯಬಹುದು. (E.S.I. Employees State Insurance) ಇದಕ್ಕಾಗಿ ಆತನು ಸ್ವಲ್ಪ ಹಣವನ್ನು ಕಟ್ಟಿದರೆ. ಕಾರ್ಖಾನೆಯ ಯಜಮಾನನು ಮತ್ತಷ್ಟು ಹಣವನ್ನು ಹಾಕಿ ಕಟ್ಟಿ ಈ ಸೌಕರ್ಯವನ್ನು ಕಲ್ಪಿಸುತ್ತಾನೆ. ಸೂರಜ್ ವಾರದಲ್ಲಿ ಒಂದು ದಿವಸ ವಾರಾಂತ್ಯ ರಜ, ಹಬ್ಬಗಳು, ಕೆಲವು ಹೆಚ್ಚುವರಿ ರಜೆಗಳು, ಸಾಧಾರಣ ರಜೆಗಳನ್ನು ಪಡೆಯುತ್ತಾನೆ. ಸಮವಸ್ತ್ರ (Uniform) ಕೊಳ್ಳುವುದಕ್ಕೆ ಶುಭ್ರಮಾಡಿಕೊಳ್ಳುವುದಕ್ಕೆ ಅಲವೆನ್ಸ್ ಕೊಡುತ್ತಾರೆ. ಕಾರ್ಖಾನೆ ಅಧಿಕ ಲಾಭವನ್ನು ಪಡೆದಾಗ ಸ್ವಲ್ಪ ಹೆಚ್ಚಿನ ಹಣವನ್ನು ಆತನಿಗೆ ಬೋನಸ್ ಕೊಡುತ್ತಾರೆ. ಈ ಕಾರ್ಖಾನೆಯಲ್ಲಿ ಸುಮಾರು 1800 ಜನ ಕೆಲಸ ಮಾಡುತ್ತಿದ್ದಾರೆ.

ಚಂದು ಶಾಶ್ವತ ಕಾರ್ಮಿಕ ಅಲ್ಲದಿದ್ದರೂ ಪ್ರತಿದಿನ ಬಂದು ಕೆಲಸಮಾಡುತ್ತಾನೆ. ಆತನು ವಾಹನಗಳಿಂದ ಕಚ್ಚಾ ವಸ್ತುಗಳನ್ನು ಇಳಿಸುವುದು ಪ್ಯಾಕಿಂಗ್ ಮಾಡುವುದು, ಕಾಗದವನ್ನು ಲಾರಿಗಳಲ್ಲಿ ತುಂಬುವಂತಹ ಕೆಲಸ ಮಾಡುತ್ತಾನೆ. ಕಳೆದ ವರ್ಷ ಈತನು ಮಹಾರಾಷ್ಟ್ರದಲ್ಲಿನ ತನ್ನ ಗ್ರಾಮದಲ್ಲಿ ತನಗೆ ಈ ಕಾರ್ಖಾನೆಯಲ್ಲಿ ಉದ್ಯೋಗ ಕೊಡಿಸುತ್ತೇನೆಂದು ಹೇಳಿದ ಕಂಟ್ರ್ಯಾಂಕ್ಟರ್‌ನನ್ನು ಭೇಟಿಯಾದನು. ಶಾಶ್ವತ ಉದ್ಯೋಗಳಿಗಿಂತ ಚಂದು ನಂತಹ ಕಾರ್ಮಿಕರಿಗೆ ಕಡಿಮೆ ವೇತನ ಕೊಡುತ್ತಾರೆ. (ತಿಂಗಳಿಗೆ ರೂ.8000/–) ಇತರ ಅಲವೆನ್ಸ್‌ಗಳು ವೈದ್ಯಕೀಯ ಸಹಾಯ, ಬೋನಸ್‌ಗಳಂತಹ ಹಣವನ್ನು ಕೊಡುವುದಿಲ್ಲ. ವೇತನದಿಂದ ಕೂಡಿದ ರಜೆಗಳಿರುವುದಿಲ್ಲ. ಆದರೂ ಇಡೀ ವರ್ಷವೆಲ್ಲಾ ಕೆಲಸ ಸಿಗುತ್ತದೆ. ಎರಡು ಮೂರು ವರ್ಷಗಳ ನಂತರ ಶಾಶ್ವತ ಕಾರ್ಮಿಕನನ್ನಾಗಿ ಆತನ ಸೇವೆಯನ್ನು ಕ್ರಮಬದ್ಧೀಕರಿಸುತ್ತಾರೆ.

ಈ ಕಾಗದದ ಕಾರ್ಖಾನೆಯಲ್ಲಿ ಕೆಲಸಮಾಡುವ ಸ್ತ್ರೀಯರು ಸಾಧಾರಣವಾಗಿ ಕಸಗೂಡಿಸಿ, ಶುಭ್ರಮಾಡುವುದು ಕಾಗದ ಪ್ಯಾಂಕಿಂಗ್‌ಗಳ ಮೇಲೆ (ಲೇಬಲ್ಸ್) ಅಂಟಿಸುವಂತಹ ಕೆಲಸಗಳನ್ನುಮಾಡುತ್ತಾರೆ. ತಾರ ಈ ಕಾರ್ಖಾನೆಯಲ್ಲಿ ಒಬ್ಬ ದಿನಗೂಲಿ ಕಾರ್ಮಿಕಳಾಗಿ ಕೆಲಸ ಮಾಡುತ್ತಾಳೆ. ಆಗಾಗ ಕೆಲಸ ಸಿಗುವವರನ್ನು ದಿನಗೂಲಿ ಕಾರ್ಮಿಕರೂಎಂದು ಕರೆಯುತ್ತಾರೆ. ತಾರ ಕೆಲಸ ಇದೆ ಎಂದು ಪ್ರತಿದಿನವೂ ಬೆಳಿಗ್ಗೆ ಕಾರ್ಖಾನೆಗೆ ಬರುತ್ತಾಳೆ. ವಾರದಲ್ಲಿ ನಾಲ್ಕು–ಐದು ದಿನಗಳು ಒಳಗಿನ ನೆಲವನ್ನು ಶುಭ್ರಮಾಡುತ್ತಾಳೆ. ಕಟ್ಟಿಗೆತುಂಡು ಹಾಕುವ ಸ್ಥಳದಲ್ಲಿ ಬಹಳತುಂಡುಗಳಿಂದ ದೂಳೂ ಸೇರಿರುತ್ತದೆ. ದೂಳು ಒಡೆದು ಶುಭ್ರಮಾಡುತ್ತಾಳೆ. ಯಂತ್ರಗಳನ್ನು ಶುಭ್ರಪಡಿಸುತ್ತಾಳೆ. ಮೂರು ವರ್ಷದಿಂದ ಅವಳು ಇಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಅವಳಿಗೆ ತಿಂಗಳಿಗೆ ರೂ. 2500/ ಕೊಡುತ್ತಾರೆ. ಅವಳಿಗೆ ದಿನಕ್ಕೆ ರೂ.100 ರಿಂದ 150 ಕೊಡುತ್ತಾರೆ. ಆಕೆಗೆ ದಿನಗೂಲಿ ಕೊಡುತ್ತಾರೆ. ಸೂರಜ್ ನಂತಹ ಶಾಶ್ವತ ಉದ್ಯೋಗಿಗಳು ಪಡೆಯುವ ಪ್ರಯೋಜನಗಳನ್ನು ಈಕೆ ಯಾವನ್ನು ಪಡೆಯುತ್ತಿಲ್ಲ.



ಪಟ –9.7 **ಕತ್ತರಿಸುವ (ಕಟಿಂಗ್) ಯಂತ್ರ**

ಸಾಧಾರಣವಾಗಿ ಕಾರ್ಖಾನೆಗಳ ಯಜಮಾನಿಗಳು ಉತ್ಪತ್ತಿಯ ಖರ್ಚುಕಡಿಮೆ ಮಾಡುತ್ತಾ ಪ್ರತಿದಿವಸ ಇರುವ ಕೆಲಸಕ್ಕೆ ಕೂಡ ದಿನಗೂಲಿಯವರನ್ನು ಉಪಯೋಗಿಸುತ್ತಾರೆ. ಕೆಲವು ಸಮಯದಲ್ಲಿ ಕಡಿಮೆ ಜನರ ಸಹಾಯದಿಂದ ನಡೆಯುವ ಯಂತ್ರಗಳನ್ನು ಕೊಳ್ಳುತ್ತಾರೆ. ಅಂತಹ ಪರಿಸ್ಥಿತಿಗಳಲ್ಲಿ ಕಾರ್ಮಿಕರು, ಯುನಿಯನ್‌ಗಳು ಚಳುವಳಿಗಳನ್ನು ಮಾಡಿ ಪರಿಸ್ಥಿತಿಯನ್ನು ಸುಧಾರಿಸು

SCERT TELANGANA

ವುದಕ್ಕೆ ಯಾಜಮನ್ಯದ ಜೊತೆ ಚರ್ಚೆಗಳನ್ನು ನಡೆಸುತ್ತಾರೆ.

ಪ್ರೈವೇಟ್ ಯಜಮಾನ್ಯ ದೊಂದಿಗೆ ನಡೆಯುವ ಕಾರ್ಖಾನೆಗಳಲ್ಲಿ ಕಾರ್ಮಿಕ ರೊಂದಿಗೆ ಕಾರ್ಖಾನೆಯಲ್ಲಿ ಲೆಕ್ಕಿಗರು, ಕ್ಲರ್ಕ್‌ಗಳು, ಮೇನೇಜರ್‌ಗಳು ಇರುತ್ತಾರೆ. ಇವರಿಗೆ ಹೆಚ್ಚು ವೇತನವನ್ನು ಕೊಡುತ್ತಾರೆ. ಸೀನಿಯರ್ ಮೇನೇಜರ್‌ಗಳಾಗಿ ಅಂದಾಜು ಯಜಮಾನಿಗಳ ಕುಟುಂಬಗಳಿಗೆ ಸಂಬಂಧಿಸಿ ದವರೆ ಇದ್ದು ಅಧಿಕ ವೇತನ ಪಡೆಯುತ್ತಾರೆ. ಅನೇಕ ಅಲವೆನ್ಸ್‌ಗಳು, ಉಚಿತನಿವಾಸ, ಮಕ್ಕಳಿಗೆ ಉಚಿತ ಶಿಕ್ಷಣಗಳಂತಹ ಸೌಕರ್ಯಗಳನ್ನು ಪಡೆಯುತ್ತಾರೆ.



ಚಿತ್ರ – 9.8 ಕಾಗದ ಉದ್ದಿಮೆಯಲ್ಲಿನ ಒಂದುಭಾಗ

- ಸೂರಜ್, ಚಂದು, ತಾರಳನ್ನು ಹೋಲಿಸುತ್ತಾ ಈ ಕೆಳಗಿನ ಪಟ್ಟಿಯನ್ನು ಭರ್ತಿಗೊಳಿಸಿ.

ಕ್ರ.ಸಂ	ಹೆಸರು	ಕೆಲಸ	ಅನುಭವ	ಆದಾಯ	ಇತರೆ ಪ್ರಯೋಜನಗಳು
1	ಸೂರಜ್				
2	ಚಂದು				
3	ತಾರ				

- ಕಾರ್ಖಾನೆಗಳಲ್ಲಿ ಶಾಶ್ವತ, ತಾತ್ಕಾಲಿಕ ದಿನನಿತ್ಯ ಕಾರ್ಮಿಕರು ಏಕೆ ಅವಶ್ಯಕ?
- ತಾತ್ಕಾಲಿಕ ಕಾರ್ಮಿಕರಿಗೆ ಯಾವ–ಯಾವ ಸಮಸ್ಯೆಗಳು ಇರುತ್ತವೆಂದು ಭಾವಿಸುತ್ತೀಯಾ?
- ಆಂಧ್ರಪ್ರದೇಶದಲ್ಲಿ ಕಾಗದದ ಕೈಗಾರಿಕೆಗಳಲ್ಲಿ ಕೆಲಸಮಾಡುವುದಕ್ಕೆ ಪ್ರಜೆಗಳು ಬಹಳ ದೂರ ಪ್ರಾಂತ್ಯಗಳಿಂದ ಏಕೆ ಬರುತ್ತಾರೋ, ಆಲೋಚಿಸಿ.

ಕಾಗದದ ಕಾರ್ಖಾನೆ ಯಾರ ಸ್ವಂತ?

ಈ ಕಾಗದದ ಕಾರ್ಖಾನೆಗೆ ಯಾರೊಬ್ಬರು ಯಜಮಾನರಲ್ಲ. ಕೆಲವು ಜನಸೇರಿ ಒಂದು ಕಂಪನಿಯಾಗಿ ಏರ್ಪಟ್ಟು, ಈ ಕಾರ್ಖಾನೆಗೆ ಯಜಮಾನನನ್ನಾಗಿ ವಹಿಸುತ್ತಾರೆ. ಇವರು ಹೆಚ್ಚಿನ ಮೊತ್ತದಲ್ಲಿ ಬಂಡವಾಳಹಾಕಿ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡು ಇದನ್ನು ಪ್ರಾರಂಭಿಸುತ್ತಾರೆ. ಮ್ಯಾನೇಜರ್‌ಗಳನ್ನು, ಕಾರ್ಯಾಲಯ ಸಿಬ್ಬಂದಿಯನ್ನು ಕೆಲವರು ಶಾಶ್ವತ ಉದ್ಯೋಗಿಗಳನ್ನು ನೇಮಿಸಿದ್ದಾರೆ. ಇವರಿಗೆ ವೇತನವನ್ನು ಕೊಡುತ್ತಾರೆ. ಆದರೆ ಯಜಮಾನರು ವೇತನವನ್ನು ಪಡೆಯುವುದಿಲ್ಲ. ವೇತನಗಳು ಖರ್ಚುಗಳನ್ನು ಬಿಟ್ಟು, ಉಳಿದ ಲಾಭವನ್ನು ಯಜಮಾನಿಗಳು ಹಂಚಿಕೊಳ್ಳುತ್ತಾರೆ. ಲಾಭಗಳ ಜೊತೆಗೆ ನಷ್ಟಗಳನ್ನು ಕೂಡ ಅನುಭವಿಸುತ್ತಾರೆ.

SCERT TELANGANA

◆ ಕೆಳಗಿನ ಅಂಶಗಳನ್ನು ಉಪಯೋಗಿಸಿ ಕೈಗಾರಿಕ ಉತ್ಪತ್ತಿಯ ಪ್ರಧಾನ ಲಕ್ಷಣಗಳನ್ನು ವಿವರವಾಗಿ ತಿಳಿಸಿ.

1 ಯಂತ್ರಗಳು

2. ಕಚ್ಚಾಸರಕುಗಳು

3 ಶಕ್ತಿ (ವಿದ್ಯುತ್ ನೀರು)

4. ಉತ್ಪತ್ತಿ

5 ಕಾರ್ಮಿಕರು

6. ಮ್ಯಾನೇಜರ್‌ಗಳು

7 ಮಾರುಕಟ್ಟೆ

8. ಯಜಮಾನರು.

ಕೆಲವು ಕಾರ್ಖಾನೆಗಳು ಒಂದೇ ಯಾಜಮಾನ್ಯದೊಂದಿಗಾಗಲೀ, ಒಂದು ಸಮೂಹ ಯಾಜಮಾನ್ಯದಲ್ಲಾಗಲೀ, ಇರದಂತೆ ಸರಕಾರಿ ಯಾಜಮಾನ್ಯದಲ್ಲಿ ಇರುತ್ತವೆ. ಇವುಗಳನ್ನು ಸರ್ಕಾರವು ಪ್ರಜೆಗಳ ರಕ್ಷಣೆಗಾಗಿ ನಿರ್ವಹಿಸುತ್ತದೆ.

ಕಾರ್ಖಾನೆಗಳಿಗೆ ಬಹಳ ಮೊತ್ತದಲ್ಲಿ ಕಚ್ಚಾಸರಕು ಅವಶ್ಯಕವಾಗುತ್ತಿರುವುದರಿಂದ ಸಹಜ ಸಂಪತ್ತುಗಳಾದ ಅರಣ್ಯಗಳು, ನದಿಗಳು, ಗಣಿಗಳಂತಹವು ವೇಗವಾಗಿ ಹಾಳಾಗುತ್ತಿವೆ. ಅಷ್ಟೇಅಲ್ಲದೆ, ಇವು ಹೊಗೆಯನ್ನು ಹೊರಗಡೆ ಬಿಡುತ್ತವೆ. ನದಿಗಳನ್ನು ಪರಿಸರದಲ್ಲಿನ ಭೂಮಿಯನ್ನು ವಿಷಪೂರಿತ ವಸ್ತುಗಳಿಂದ ತುಂಬಿಸುತ್ತವೆ. ಆದ್ದರಿಂದ ಪರಿಸರವನ್ನು ಕಾಪಾಡಿಕೊಳ್ಳುವ ಪದ್ಧತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಅವಶ್ಯಕ.

ಕಾರ್ಖಾನೆಗಳು ಹೆಚ್ಚಿನ ಜನರಿಗೆ ಉದ್ಯೋಗವನ್ನು ಕಲ್ಪಿಸುತ್ತವೆ. ಆಗಾಗ ಕೆಲಸದ ಒತ್ತಡ ಹೆಚ್ಚಾಗುವದರಿಂದಾಗಲೀ, ದೂಳು ರಸಾಯನ ಪದಾರ್ಥಗಳಿಂದಾಗಲೀ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಕಾರ್ಮಿಕರಿಗೆ ಕಡಿಮೆ ವೇತನ ಕೊಡುತ್ತಾರೆ. ಅವರು ಕೊಳಚೆ ಪ್ರದೇಶದಲ್ಲಿ ಅತೀಕಡಿಮೆ ಸೌಕರ್ಯಗಳಿಂದ ಜೀವನ ನಡೆಸಬೇಕಾಗುತ್ತದೆ.

ನಮಗೆ ಇರುವ ವಿವಿಧ ಅವಶ್ಯಕತೆಗಳನ್ನು ಕಾರ್ಖಾನೆಗಳ ದುಷ್ಪ್ರಭಾವಗಳನ್ನು ಯಾವ ವಿಧವಾಗಿ ಸಮತೋಲ ಮಾಡಬೇಕೆಂಬುದು ಒಂದು ಸವಾಲಾಗಿದೆ. ಕಾರ್ಮಿಕರು ತಮ್ಮ ಜೀವನವನ್ನು ಸುಖವಾಗಿ ಉಲ್ಲಾಸದಿಂದ ಜೀವಿಸುವುದಕ್ಕೆ ಮಾರ್ಗಗಳನ್ನು ಹುಡುಕಬೇಕಾಗಿದೆ.

ಕಾಲುಷ್ಯ:

ನಮ್ಮ ಕಾರ್ಖಾನೆಯ ಹಿಂದಕ್ಕೆ ಹೋಗಿ ನೋಡಿದರೆ, ಒಂದು ವಿಧವಾದ ಕೆಟ್ಟ ವಾಸನೆ ಬರುತ್ತದೆ. ಇದಕ್ಕೆ ಕಾರಣ ಆ ಕಾರ್ಖಾನೆಗಳಲ್ಲಿ ಬಳಸುವ ವಿವಿಧ ರಸಾಯನಗಳು. ಕಾರ್ಖಾನೆಯಿಂದ ಹೊರಗೆಬಂದ ನಂತರ ಆ ಪ್ರದೇಶದಲ್ಲಿ ವಾಸಿಸುವವರ ಜೊತೆ ಮಾತನಾಡಿದೆವು. ಈ ವಾಸನೆ ಸರ್ವಸಾಧಾರಣವೆಂದು ಹೊಲಗಳಲ್ಲಿನ ಗಿಡಗಳು, ಎಲೆಗಳು ತೋಟಗಳಲ್ಲಿನ ಮರಗಳು ಧೂಳುನಿಂದ ತುಂಬುತ್ತಿವೆ ಎಂದು ಅವರು ಹೇಳಿದರು. ಈ ಕಾರ್ಖಾನೆಗೆ ಶುದ್ಧನೀರನ್ನು ಅಧಿಕಮೊತ್ತದಲ್ಲಿ ತೆಗೆದುಕೊಂಡು ರಸಾಯನಗಳಿಂದ ಕಲುಷಿತವಾದ ನೀರನ್ನು ಹೊರಗಡೆ ಬಿಡುತ್ತಾರೆ. ಈ ನೀರು ನದಿಗಳನ್ನುಸೇರುತ್ತದೆ.

ಹಿಂದಿನ ವರ್ಷವೆ ಈ ಕಾರ್ಖಾನೆಯಲ್ಲಿ ಹೊರಗಡೆ ಬಿಡುವ ನೀರನ್ನು ಶುದ್ಧಮಾಡುವ ಪ್ಲಾಂಟನ್ನು ನಿರ್ಮಿಸಿದ್ದಾರೆ. ಇದರೊಳಗೆ ರಸಾಯನ ಸೇರಿದ ನೀರನ್ನು ಕಳಿಸುತ್ತಾರೆ. ಈ ಪ್ಲಾಂಟಿನಲ್ಲಿ ಯಂತ್ರಗಳು ಕಾಲುಷ್ಯಕಾರಕಗಳನ್ನು (ಗಾಳಿ, ನೀರು, ಭೂಮಿ, ಆಹಾರಗಳಂತಹವುಗಳನ್ನು ಕಲುಷಿತಮಾಡುವ ಪದಾರ್ಥಗಳು) ತೊಲಗಿಸಿ ವಾತಾವರಣವನ್ನು ಕಲುಷಿತ ಮಾಡದ ವಿಧವಾಗಿ ನೀರನ್ನು ಹೊರಕಳಿಸುತ್ತಾರೆ. ಉಳಿದ ಇತರೆ ಘನರೂಪ ಪದಾರ್ಥವನ್ನು ಗೊಬ್ಬರವಾಗಿ ಬಳಸಬಹುದ. ಹೊರಗಡೆ ಬರುವ ನೀರನ್ನು ವ್ಯವಸಾಯಕ್ಕೆ ಬಳಸಬಹುದು.

ನಮ್ಮ ರಾಜ್ಯದಲ್ಲಿ ದೇಶದಲ್ಲಿ ವಿಭಿನ್ನ ವಸ್ತುಗಳನ್ನು ತಯಾರಿಸುವ ಅನೇಕ ಕಾರ್ಖಾನೆಗಳಿವೆ. ಅವು ಕಡಿಮೆ ಸಮಯದಲ್ಲಿ ಹೆಚ್ಚುಉತ್ಪತ್ತಿ ಮಾಡುತ್ತವೆ.



ಚಿತ್ರ – 9.9 ಕಾಗದದ ಸುರುಳಿ

SCERT TELANGANA

ಮುಖ್ಯಪದಗಳು

1) ಉತ್ಪತ್ತಿ ವಿಧಾನ 2) ಕನ್ವೇಯರ್ ಬೆಲ್ಟ್ 3) ಫೈಬರ್ ಲೈನ್ 4) ಲೇಬಲ್ 5) ಅಲವೆನ್ಸ್
6) ಬೋನಸ್ 7) ಮಾಲಿನ್ಯ 8) ಕೆಲಸದ ಅವಧಿ 9) ಕೆಲಸದ ಗಂಟೆಗಳು

ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1) ನೀವು ಒಂದು ಚರ್ಮದ ಕಾರ್ಖಾನೆಯನ್ನು ಅಥವಾ ವಸ್ತ್ರ ಕೈಗಾರಿಕೆಗಳನ್ನು ಪ್ರಾರಂಭಿಸಬೇಕೆಂದು ಅಂದಕೊಂಡಂತೆ ಊಹಿಸಿಕೊಂಡು ಅದಕ್ಕಾಗಿ ಯಾವ–ಯಾವ ಅಂಶಗಳನ್ನು ಪರಿಗಣನೆಯಲ್ಲಿ ತೆಗೆದುಕೊಳ್ಳಬೇಕೋ ತಿಳಿಸಿರಿ.

2) ಕಾಗದ ತಯಾರಿಕೆಯ ಪ್ರಕ್ರಿಯೆಯನ್ನು ನಿಮ್ಮ ಸ್ವಂತ ಮಾತಿನಲ್ಲಿ ವಿವರಿಸಿ.

3) ಯಾವುದೋ ಒಂದು ದಿವಸ ಈ ಕಾಗದ ಕೈಗಾರಿಕೆ ನಿಂತು ಹೋಗುತ್ತದೆ ಎಂದು ಅಂದು ಕೊಳ್ಳುತ್ತೀರಾ? ಹಾಗೆ ನಡೆದರೆ ಕಾರ್ಮಿಕರಿಗೆ ವೇತನದ ಮೇಲೆ ಅದರ ಪ್ರಭಾವ ಹೇಗಿರುತ್ತದೆ ?

4) ಕಾಗದವಿಲ್ಲದ ಪ್ರಪಂಚವನ್ನು ಊಹಿಸಿರಿ. ಕಾಗದಕ್ಕೆ ಬದಲಾಗಿ ಯಾವುವನ್ನು ಉಪಯೋಗಿಸಬೇಕೋ ಆಲೋಚಿಸಿ.

5) ಕಾರ್ಖಾನೆಗಳಿಂದಾಗುವ ಕಾಲುಷ್ಯವನ್ನು ನಿವಾರಿಸಿಸುವುದಕ್ಕೆ ಇರುವ ಮಾರ್ಗಗಳನ್ನು ತಿಳಿಸಿ.

6) ಕಾಗದದ ಕಾರ್ಖಾನೆಗಳಿಂದಾಗುವ ಅನುಕೂಲಗಳು, ಅನಾನುಕೂಲಗಳನ್ನು ತರಗತಿ ಕೋಣೆಯಲ್ಲಿ ಚರ್ಚಿಸಿ.

7) ಕಾಗದದ ಕಾರ್ಖಾನೆಯಲ್ಲಿ ಕೆಲಸಮಾಡುವ ಶಾಶ್ವತ ಉದ್ಯೋಗಕ್ಕೆ ಇರುವ ಆದಾಯ ಪ್ರಯೋಜನಗಳನ್ನು ಪಟ್ಟಿಕೆಯ ರೂಪದಲ್ಲಿ ಬರೆಯಿರಿ. ತಾತ್ಕಾಲಿಕ, ದಿನಗೂಲಿ ಕಾರ್ಮಿಕರ ವಿಷಯದಲ್ಲಿ ಅವು ಹೇಗೆ ಭಿನ್ನವಾಗಿವೆಯೋ ತಿಳಿಸಿರಿ.

8) ಕರಕುಶಲದವರು ತಯಾರಿಸಿದ ಬಟ್ಟೆಗಳ ಉತ್ಪತ್ತಿ ಕಾರ್ಖಾನೆಯಲ್ಲಿ ಉತ್ಪತ್ತಿಯಾದ ಕಾಗದ ಉತ್ಪತ್ತಿಯನ್ನು ಕೆಳಗಿನ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೋಲಿಸಿ.

1) ಕೆಲಸಮಾಡುವ ಸ್ಥಳ 2) ಪರಿಕರಗಳು/ಯಂತ್ರಗಳು 3) ಕಚ್ಚಾಪದಾರ್ಥಗಳು
4) ಕಾರ್ಮಿಕರು 5) ಮಾರುಕಟ್ಟೆ 6) ಯಜಮಾನರು

9) ಕೊಮರಂಭೀಂ ಜಿಲ್ಲೆಯಲ್ಲಿ ಸಿರ್‌ಪೂರ್, ಕಾಗಜ್ ನಗರದಲ್ಲಿ ಕಾಗದ ಕೈಗಾರಿಕೆ ಇದೆ. ಅದನ್ನು ಜಿಲ್ಲಾ ಕೇಂದ್ರದಲ್ಲಿ ಏಕೆ ಸ್ಥಾಪಿಸಲಿಲ್ಲವೋ ಚರ್ಚಿಸಿರಿ.

10) ಪ್ರಪಂಚ ನಕ್ಷೆಯಲ್ಲಿ ಈ ಕೆಳಗಿನ ದೇಶಗಳನ್ನು ಗುರ್ತಿಸಿರಿ.

ಅ) ಶ್ರೀಲಂಕಾ ಆ) ಸಿಂಗಾಪುರ್ ಇ) ನೈಜೀರಿಯಾ
ಈ) ದಕ್ಷಿಣಾಫ್ರಿಕಾ ಉ) ನೇಪಾಲ್

11) ಪುಟದಲ್ಲಿನ ಮೂರನೇಯ ಪ್ಯಾರವನ್ನು ಓದಿ, ಕಾರ್ಖಾನೆಗಳು ಕಾರ್ಮಿಕರ ಆರೋಗ್ಯದ ಬಗ್ಗೆ ಶ್ರದ್ಧವಹಿಸುತ್ತೀವೆಂದು ಅಂದುಕೊಳ್ಳುತ್ತೀದ್ದಿರಾ ? ಏತಕ್ಕೆ ?

ನಿಯೋಜಿತ ಕಾರ್ಯ:

ನಿಮ್ಮ ಪ್ರಾಂತದಲ್ಲಿ ಮಾಲಿನ್ಯಕ್ಕೆ ಕಾರಣವಾಗುವ ಕಾರ್ಖಾನೆಗಳನ್ನು ನೋಡಿರುವಿರಿ. ಒಂದು ವೇಳೆ ನೋಡಿರದಿದ್ದರೆ ಅಂತಹ ಕಾರ್ಖಾನೆಗಳನ್ನು ಊಹಿಸಿರಿ. ಅದರ ಬಗ್ಗೆ ಸ್ಥಳೀಯ ದಿನಪತ್ರಿಕೆ ಸಂಪಾದಕನಿಗೆ ಪತ್ರ ಬರೆಯಿರಿ. ಹಾಗೆಯೇ ತರಗತಿಯಲ್ಲಿ ಚರ್ಚಿಸಿರಿ.

SCERT TELANGANA

ಅಧ್ಯಾಯ 10

ಸಾರಿಗೆ ವ್ಯವಸ್ಥೆ–ಪ್ರಾಮುಖ್ಯತೆ

ನಮ್ಮ ದಿನನಿತ್ಯ ಜೀವನದಲ್ಲಿ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಪ್ರಯಾಣ ಮಾಡಲು ವಿವಿಧ ಪ್ರಕಾರದ ವಾಹನಗಳನ್ನು ಉಪಯೋಗಿಸುತ್ತೇವೆ.ಜನರು ಯಾವ ವಿಧವಾಗಿ ರಸ್ತೆಸಾರಿಗೆ, ವಾಯು ಮಾರ್ಗಗಳು,ಜಲ ಮಾರ್ಗಗಳು ಉಪಯೋಗಿಸಿಕೊಳ್ಳುತ್ತಿದ್ದಾರೋ ಎನ್ನುವ ಅಂಶದ ಬಗ್ಗೆ ನಾವು ಈ ಪಾಠದಲ್ಲಿ ಚರ್ಚಿಸುತ್ತೇವೆ.ಇವೇ ಅಲ್ಲದೆ ಜನರು ಯಾವ ವಿಧವಾಗಿ ಏಕೆ ಪ್ರಯಾಣ ಸಾಧನಗಳನ್ನು ಒಂದು ಉದ್ಯೋಗ ಮಾರ್ಗವಾಗಿ ಅಯ್ದುಕೊಳ್ಳುತ್ತಿದ್ದಾರೋ,ಮಾರ್ಕೆಟ್‌ನಲ್ಲಿ ಸಾರಿಗೆಯನ್ನು ಯಾವ ವಿಧವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೋ ಈ ಪಾಠದಲ್ಲಿ ಚರ್ಚಿಸುತ್ತೇವೆ.ಆಂಧ್ರಪ್ರದೇಶ್‌ದಲ್ಲಿ ರಸ್ತೆ ಸಾರಿಗೆ ಅವಗಾಹನೆಗಾಗಿ ರಸ್ತೆ ಸಾರಿಗೆ ದರ್ಶನಾಧ್ಯಯನ(ಕೇಸ್ ಸ್ಟಡಿ) ಕೊಡಲಾಗಿದೆ.

ಇತರ ಸಾರಿಗೆ ಸಾಧನಗಳಾದ ರೈಲ್ವೆಗಳು,ವಾಯುಮಾರ್ಗಗಳು,ಜಲಮಾರ್ಗಗಳ ಕುರಿತು ನೀವು ಮುಂದಿನ ತರಗತಿಗಳಲ್ಲಿ ಓದುತ್ತೀರಿ.

ವಿವಿಧ ರೀತಿಯ ಸಾರಿಗೆ ಪದ್ಧತಿಗಳನ್ನು ಕುರಿತು ನೀವು ಈ ಮೊದಲೇ ತಿಳಿದುಕೊಂಡಿರುವಿರಿ.

- ಇಲ್ಲಿ ಕೊಟ್ಟಿರುವ ಪದಗಳಿಂದ ಕೆಳಗೆ ಇರುವ ಪಟ್ಟಿಯನ್ನು ಪೂರ್ತಿಮಾಡಿ.ಕೆಲವು ಪದಗಳನ್ನು ಒಂದಕ್ಕಿಂತ ಹೆಚ್ಚುಸಲ ಬಳಸಬೇಕಾಗಿ ಬರುತ್ತದೆ.ಆಸಾಲಿನಲ್ಲಿ ಆಪದವು ಬಳಸಲು ಇರುವ ಕಾರಣಗಳನ್ನು ತಿಳಿಸಿ.

ಯಾತ್ರಿಕರು, ಕಾರು, ಮೀನು, ಪಶುಗಳು, ಧಾನ್ಯ, ಕುದುರೆಬಂಡಿ, ಪೆಟ್ರೋಲಿಯಂ, ಕಾರ್ಮಿಕರು, ಹಡಗು, ಹೆಲಿಕಾಪ್ಟರ್, ಟ್ಯಾಂಕರ್ ಲಾರಿ, ಸೈಕಲ್, ಯಾತ್ರಿಗಳು, ಕಬ್ಬಿಣದ ಅದಿರು, ವಸ್ತುಗಳು, ರೈಲು, ಮಾವಿನ ಕಾಯಿಗಳು, ದೋಣಿ, ಉಪ್ಪು.

ಸಾರಿಗೆ ವ್ಯವಸ್ಥೆ	ಉಪಯೋಗಿಸುವ ವಾಹನ	ಕೆಲವು ಉತ್ಪತ್ತಿಗಳು/ಜನ ಸಮೂಹಗಳು ಉಪಯೋಗಿಸುವವು
ರಸ್ತೆಗಳು		
ರೈಲ್ವೆಗಳು		
ಜಲ ಮಾರ್ಗಗಳು		
ವಾಯು ಮಾರ್ಗಗಳು		

ತೆಲಂಗಾಣದಲ್ಲಿ ಸಾರಿಗೆ ವ್ಯವಸ್ಥೆ:

ನಮ್ಮ ರಾಜ್ಯದಲ್ಲಿನ ಸಾರಿಗೆ ವ್ಯವಸ್ಥೆ ಮುಖ ಚಿತ್ರವನ್ನು ನೋಡಿದರೆ, ನಾವು ಈ ಕೆಳಗಿನ ವಿಷಯಗಳನ್ನು ಗಮನಿಸಿಬಹುದು.

ರಸ್ತೆಗಳು: ಭಾರತದೇಶದಲ್ಲಿ ಬಹಳ ರಸ್ತೆಗಳನ್ನು ನಿರ್ಮಿಸುವುದು, ನಿರ್ವಹಿಸುವುದು ಸರ್ಕಾರದ ಆಡಳಿತದಲ್ಲಿ ನಡೆಯುತ್ತದೆ. ನಮ್ಮ ದೇಶದಲ್ಲಿ ವಿವಿಧ ರೀತಿಯ ರಸ್ತೆಗಳು ಇವೆ. ಅವುಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳು ದೇಶದಲ್ಲಿನ ವಿವಿಧ ರಾಜ್ಯಗಳಲ್ಲಿನ ನಗರಗಳನ್ನು ಸೇರಿಸುತ್ತಾ ನಿರ್ಮಿಸಿದವುಗಳು. ಉದಾಹರಣೆಗೆ ರಾಷ್ಟ್ರೀಯ ಹೆದ್ದಾರಿ ನಂ.7 (ಇಲ್ಲವೇ 44) ಉತ್ತರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಕರ್ನಾಟಕ, ತಮಿಳುನಾಡು ರಾಜ್ಯಗಳ ಮೂಲಕ ಹಾದು ಹೋಗುತ್ತದೆ. ಆಂಧ್ರಪ್ರದೇಶ ಸರ್ಕಾರ ಜಿಲ್ಲೆಗಳನ್ನು, ಚಿಕ್ಕಪಟ್ಟಣಗಳನ್ನು ಸೇರಿಸುತ್ತಾ ನಿರ್ಮಿಸಿದ ರಸ್ತೆಗಳನ್ನು ನಿರ್ವಹಿಸುತ್ತದೆ. ಜಲ್ಲಿಕಲ್ಲಿನಿಂದ

SCERT TELANGANA

(ಬಿಂಚೆ) ನಿರ್ಮಿಸಿದ ಗ್ರಾಮೀಣ ರಸ್ತೆಗಳ ಜವಾಬ್ದಾರಿಯನ್ನು ಗ್ರಾಮಪಂಚಾಯಿತಿಗಳು, ಪಟ್ಟಣರಸ್ತೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಮುನಿಸಿಪಾಲಿಟಿಗಳು ತೆಗೆದುಕೊಳ್ಳುತ್ತವೆ. ಇವುಗಳೊಂದಿಗೆ ಅಂತರ್ಜಾತೀಯ ಸರಿಹದ್ದಿನ ಮೂಲಕ ನಿರ್ಮಿಸಿದ ರಸ್ತೆಗಳನ್ನು ಸರಿಹದ್ದು ರಸ್ತೆಗಳು ಎನ್ನುವರು. ಬಹುದೂರದ ಪ್ರಾಂತಗಳಲ್ಲಿ ವಾಸಿಸುವ ಜನರನ್ನು ಪ್ರಮುಖ ಪಟ್ಟಣಗಳೊಂದಿಗೆ ಸೇರಿಸುತ್ತಾ, ಸರಿಹದ್ದು ರಕ್ಷಣೆ ಕಲ್ಪಸುವುದರಲ್ಲಿ ಇವು ಮುಖ್ಯ ಪಾತ್ರವನ್ನು ಪೋಷಿಸುತ್ತಿವೆ.

ರೈಲುಮಾರ್ಗಗಳು:

ಭಾರತದೇಶದಲ್ಲಿನ ಪ್ರಯಾಣಿಕರಲ್ಲಿ 1/5 ಭಾಗ ಜನರು ರೈಲುಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ರೈಲುಮಾರ್ಗಗಳನ್ನು ಮುಖ್ಯವಾಗಿ ಕಲ್ಲಿದ್ದಲು, ಕಬ್ಬಿಣದ ಅದಿರು, ಔಷಧಗಳು, ಸಿಮೆಂಟ್, ಆಹಾರಧಾನ್ಯಗಳು ಮೊದಲಾದ ವಸ್ತುಗಳನ್ನು ಸಾಗಾಣಿಕೆಗೆ ಉಪಯೋಗಿಸುತ್ತಿದ್ದಾರೆ. ತೆಲಂಗಾಣದಲ್ಲಿ ಎಲ್ಲಾ ಜಿಲ್ಲೆಗಳನ್ನು ಸೇರಿಸುವಂತಹ ರೈಲ್ವೇ ಮಾರ್ಗಗಳಿವೆ.

ವಾಯು ಮಾರ್ಗಗಳು:

ತೆಲಂಗಾಣದ ಹೈದ್ರಾಬಾದನಲ್ಲಿ (ಶಂಷಾಬಾದ್) ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ಇದೆ. ಇದರಿಂದ ತೆಲಂಗಾಣ ಮತ್ತು ಪಕ್ಕದ ರಾಜ್ಯದವರು ವಿವಿಧ ದೇಶಗಳಲ್ಲಿರುವ ಮುಖ್ಯ ಪಟ್ಟಣಗಳಿಗೆ ಪ್ರಯಾಣ ಮಾಡಬಹುದು.

ಜಲಮಾರ್ಗಗಳು:

ಭಾರತೀಯ ವ್ಯಾಪಾರಸ್ಥರು ಎಲ್ಲಾ ವಿಧವಾದ ವಸ್ತುಗಳನ್ನು ವಿದೇಶಗಳಿಗೆ ಬಂದರುಗಳ ಮೂಲಕವೇ ಸಾಗಿಸುತ್ತಿದ್ದರು. ಬಂದರು ಪಟ್ಟಣಗಳು ಇಲ್ಲವೆ ನಗರಗಳು ಮುಖ್ಯ ವ್ಯಾಪಾರಕೇಂದ್ರಗಳು. ತೆಲಂಗಾಣ ರಾಜ್ಯಕ್ಕೆ ತೀರ ರೇಖೆಯಾಗಲಿ ಬಂದರುಗಳಾಗಲಿ ಇಲ್ಲ. ಆಂಧ್ರಪ್ರದೇಶದಲ್ಲಿ ಇರುವ 15 ಬಂದರುಗಳಲ್ಲಿ ವಿಶಾಖಪಟ್ಟಣ ದೊಡ್ಡ ಬಂದರು. ಗೋದಾವರಿ, ಕೃಷ್ಣಾ, ಪೆನ್ನಾ ನದಿಗಳನ್ನು ಅವುಗಳ ಕಾಲುವೆಗಳನ್ನು ಜಲಮಾರ್ಗಗಳಾಗಿ ಉಪಯೋಗಿಸುತ್ತಿದ್ದಾರೆ. ಅಂತರಾಷ್ಟ್ರೀಯ ವ್ಯಾಪಾರವು ಬಂದರುಗಳ ಮೂಲಕವೇ ನಡೆಯುತ್ತದೆ.

- ಭಾರತದ ನಕ್ಷೆಯಲ್ಲಿ ವಿಮಾನಾಶ್ರಯಗಳನ್ನು ಬಂದರುಪಟ್ಟಣಗಳನ್ನು ಗುರ್ತಿಸಿರಿ.

ರಸ್ತೆಗಳ ಉಪಯೋಗಗಳು–ಉತ್ಪತ್ತಿ, ಮಾರಾಟಗಳು:

ತೆಲಂಗಾಣದಲ್ಲಿ ಬಹಳ ಜನರು ಪ್ರಯಾಣಿಸಲು ರಸ್ತೆ ಸಾರಿಗೆ ವಾಹನಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಸಾರಿಗೆ ಸೌಕರ್ಯಗಳ ಲಭ್ಯತೆ ವಿಷಯದಲ್ಲಿ



ಚಿತ್ರ 10.1 1932ರಲ್ಲಿ ರಸ್ತೆ ಸಾರಿಗೆ ವ್ಯವಸ್ಥೆಯನ್ನು ನಿಜಾಂ ಪ್ರಾರಂಭಿಸಿದನು. ಅಂದಿನ ಲೋಗೋ ಚಿತ್ರದಲ್ಲಿ ನೋಡಬಹುದು.

ತೆಲಂಗಾಣದಲ್ಲಿನ ಗ್ರಾಮಗಳ ನಡುವೆ ಬದಲಾವಣೆ ಕಾಣಿಸುತ್ತದೆ. 2001ರಲಿ 3/4 ರಷ್ಟು ಗ್ರಾಮಗಳಿಗೆ ಸಾರಿಗೆ ಸೌಕರ್ಯಗಳಿವೆ.

ಹಿಂದಿನ ಅಧ್ಯಾಯಗಳಲ್ಲಿ, ತರಗತಿಯಲ್ಲಿ ರೈತರು, ಮೀನುಗಾರರು, ಕೈಗಾರಿಗಳು ವಿವಿಧ ಕಾರಣಗಳಿಂದ ಯಾವ ವಿಧವಾಗಿ ಸಾರಿಗೆಯ ಮೇಲೆ ಆಧಾರಪಟ್ಟಿರುವರೋ ವಿವರಿಸಲಾಗಿದೆ. ರೈತರು ತಾವು ಬೆಳೆಸಿದ ಧಾನ್ಯವನ್ನು ರೈತಬಜಾರಿಗೆ ತೆಗೆದುಕೊಂಡು ಹೋಗಲು, ಮೀನುಗಾರರು ತಾವು ಹಿಡಿದ ಮೀನುಗಳನ್ನು ಹಾಳಾಗದಂತೆ ವಿನಿಯೋಗದಾರನ ಹತ್ತಿರ ಸೇರಿಸಲು, ಕಾಗದದ ಕೈಗಾರಿಕೆಗೆ ಕಚ್ಚಾವಸ್ತುಗಳನ್ನು ತೆಗೆದುಕೊಂಡು ಬರಲು ಲಾರಿಗಳನ್ನು ಉಪಯೋಗಿಸುವುದು ಮೊದಲಾದ ಅವಸರಗಳಿಗಾಗಿ ಸಾರಿಗೆ ಸೌಕರ್ಯಗಳು ಅತಿ ಮುಖ್ಯವಾದವು. ಕೈಗಾರಿಕೆಗಳು ವಿನಿಯೋಗದಾರನಿಗೆ ಸೇರಲು ಇರುವ ಸಾರಿಗೆ ಸೌಕರ್ಯಗಳ ಆಧಾರದ ಮೇಲೆ ಕೈಗಾರಿಕೆಗಳು ವಸ್ತುಗಳನ್ನು ಉತ್ಪತ್ತಿಮಾಡುತ್ತವೆ. ಉದಾಹರಣೆಗೆ ಹತ್ತಿಯನ್ನು ತೆಗೆದುಕೊಳ್ಳೋಣ. ರೈತರು ಬೆಳೆಸಿದ ಹತ್ತಿಯನ್ನು ಕೈಗಾರಿಕೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಹತ್ತಿಯಿಂದ ಬಟ್ಟೆ ತಯಾರಿಸಲು ಅನೇಕ ಹಂತಗಳಲ್ಲಿ ಬದಲಾವಣೆಗಳು ವಿವಿಧ ಪ್ರಾಂತಗಳಲ್ಲಿ ನಡೆದು ಕೊನೆಗೆ ಬಟ್ಟೆ ತಯಾರಾಗುತ್ತದೆ. ಮಾರುಕಟ್ಟೆಗಳು ಬಹಳ ಮಟ್ಟಿಗೆ ಸಾರಿಗೆ ಸೌಕರ್ಯಗಳ ಮೇಲೆ ಆಧಾರಪಟ್ಟಿರುತ್ತವೆ.

- ಕೆಳಗಿನ ವಿಷಯವನ್ನು ಓದಿ, ಕೆಳಗೆ ಕೊಟ್ಟಿರುವ ಸಮಸ್ಯೆಗೆ ಪರಿಷ್ಕಾರ ತೋರಿಸಿ.

ಸತ್ಯಂಪಲ್ಲಿ ಗ್ರಾಮದಲ್ಲಿನ ರೈತರು ತಮ್ಮ ಭತ್ತವನ್ನು 7 ಕಿ.ಮೀ. ದೂರದಲಿರುವ ನಯ ಪೇಟ ಪಟ್ಟಣದಲ್ಲಿ ಮಾರುತ್ತಿರುತ್ತಾರೆ. ಎತ್ತಿನ ಬಂಡಿಯ ಮೂಲಕ 10 ಚೀಲಗಳ ಭತ್ತವನ್ನು ಸಾಗಿಸಲು ಚೀಲ 1ಕ್ಕೆ 50ರೂ.ಗಳಂತೆ ಸಾಗಿಸಬಹುದು. ಟ್ರಾಕ್ಟರ್ ಯಜಮಾನನು ಒಂದು

SCERT TELANGANA

ಚೀಲಕ್ಕೆ 20ರೂ.ಗಳಂತೆ ತೆಗೆದುಕೊಳ್ಳುತ್ತಾನೆ. ಟ್ರಾಕ್ಟರ್ 30ರಿಂದ 40 ಚೀಲಗಳನ್ನು ಸಾಗಿಸಬಲ್ಲದು. ಲಾರಿ ಒಂದೇ ಬಾರಿಗೆ 150 ರಿಂದ 170 ಚೀಲಗಳನ್ನು ಒಂದು ಚೀಲಕ್ಕೆ 10ರೂ.ಗಳಂತೆ ಸಾಗಿಸುತ್ತದೆ. ಉದಾಹರಣೆಗೆ ನಯ ಪೇಟೆಯಲ್ಲಿ ಇರುವ ಸಗಟು ವ್ಯಾಪಾರಿ ಭತ್ತವನ್ನು 100–120ಕಿ.ಮೀ. ದೂರ ಸಾಗಿಸಲು ಟ್ರಕ್ ಆಪರೇಟರ್ ಒಂದು ಚೀಲಕ್ಕೆ 50ರೂ.ಗಳಂತೆ ವಸೂಲು ಮಾಡುವನು. ಟ್ರಕ್ ಆಪರೇಟರ್‌ಗಳು 500ಕಿ.ಮೀ. ದೂರ ಸರಕುಗಳನ್ನು ಸಾಗಿಸಲು ಒಂದು ಟನ್ನಿಗೆ ರೂ.800–1000 ಗಳು ವಸೂಲಿ ಮಾಡುತ್ತಿದ್ದಾರೆ,

ಆ ಗ್ರಾಮದಲ್ಲಿ ಭತ್ತವನ್ನು ಬೆಳೆಸುವ ಮೂವರು ರೈತರು ಇರುವರು. ಅವರ ಇಳುವರಿ ಅನುಕ್ರಮವಾಗಿ 25,50,75 ಚೀಲಗಳೂ, ಇವರು ತಮ್ಮ ಉತ್ಪತ್ತಿಗಳನ್ನು 25ಕಿ.ಮೀ.ಗಳು ದೂರದಲಿರುವ ವ್ಯವಸಾಯ ಮಾರುಕಟ್ಟೆ ಕಮಿಟಿ ಹತ್ತಿರ ಮಾರಲು ಇಷ್ಟಪಡುತ್ತಿದ್ದಾರೆ. ಈಗ ಅವರ ಭತ್ತವನ್ನು ಪಟ್ಟಣಕ್ಕೆ ಸಾಗಿಸಲು ನೀನು ಕೊಡುವ ಸೂಚನೆಗಳು ಯಾವುವು? ಏತಕ್ಕೆ ?

ಸಾರಿಗೆ ಚಟುವಟಿಕೆಗಳು–ಉದ್ಯೋಗ:

ಪ್ರತಿ ಬಸ್ಸು ನಡೆಯಲು, ಡ್ರೈವರ್, ಕಂಡಕ್ಟರ್ ಅತ್ಯವಶ್ಯಕ. ವಾಹನಗಳ ನಿರ್ವಹಣೆಗೆ ನೂರಾರು, ಸಾವಿರಾರು ಜನರು ಅವಶ್ಯಕ. ಉದಾಹರಣೆಗೆ ಆಂಧ್ರಪ್ರದೇಶ್ ರಸ್ತೆ ಸಾರಿಗೆ ಸಂಸ್ಥೆ 1,20,000ಜನ ಉದ್ಯೋಗಿಗಳಿಂದ 20,000 ಬಸ್ಸುಗಳನ್ನು ನಡೆಸುತ್ತಾ ಪ್ರತಿದಿನ 1.25ಕೋಟಿ ಜನ ಪ್ರಯಾಣಿಕರನ್ನು ಅವರ ಸ್ಥಾನಗಳಿಗೆ ಸೇರಿಸುತ್ತಿದೆ. ಈ ಉದ್ಯೋಗಿಗಳು ಅಕೌಂಟುಗಳ ನಿರ್ವಹಣೆ, ಬಸ್ಸುಗಳ ರಿಪೇರಿ, ಬಸ್ ಡಿಪೋಗಳಲ್ಲಿ ಕೆಲಸ ಮೊದಲಾದ ಕೆಲಸಗಳಲ್ಲಿ ತೊಡಗಿರುತ್ತಾರೆ. ಇನ್ನು ಕೆಲವು ಜನರು ಬಸ್ ನಿಲ್ದಾಣಗಳಲ್ಲಿ ಬಸ್‌ಪಾಸ್‌ಗಳು, ಟಿಕೆಟ್‌ಗಳು ಮಾರುವವರಾಗಿ, ಟಿಕೆಟ್ ತನಿಖಾ ಅಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಾ ಇರುತ್ತಾರೆ.



ಚಿತ್ರ 10.2 ಪ್ರಾಣಿಗಳ ಸಾಗಾಣಿಕೆ

ತೆಲಂಗಾಣ ರಸ್ತೆಗಳ ಮೇಲೆ ಚಲಿಸುವ ಕೋಟಿ ವಾಹನಗಳಲ್ಲಿ ಸುಮಾರು 3/4 ರಷ್ಟುವಾಹನಗಳು ದ್ವಿಚಕ್ರ ವಾಹನಗಳೇ. ಪೆಟ್ರೋಲ್/ಡೀಜಲ್ ಬಂಕುಗಳು, ರಿಪೇರಿಂಗ್ ಷಾಪುಗಳು, ವಾಹನಗಳನ್ನು ಮಾರುವ ಷಾಪುಗಳು, ಬಿಡಿಭಾಗಗಳನ್ನು ಮಾರುವ ಷಾಪುಗಳು ಮೊದಲಾದವು ಸಾರಿಗೆ ವ್ಯವಸ್ಥೆ ಸಮರ್ಥವಾಗಿ ನಡೆಯಲು ಸಹಕರಿಸುತ್ತವೆ.

ಸಾರಿಗೆ ಸೇವೆಗಳು, ಆಯ್ಕೆ:

ಜನರು ಉಪಯೋಗಿಸುವ ಸಾರಿಗೆ ಪದ್ದತಿ, ಸಾರಿಗೆ ಸೌಕರ್ಯಗಳು ಲಭ್ಯತೆಯ ಮೇಲೆ ಸಾರಿಗೆ ಚಾರ್ಜುಗಳನ್ನು ಭರಿಸುವ ಶಕ್ತಿಯಮೇಲೆ ಆಧಾರಪಟ್ಟಿರುತ್ತದೆ. ಆಗಾಗ್ಗೆ ವಿವಿಧ ರೀತಿಯ ಸಾರಿಗೆ ಸೌಕರ್ಯಗಳನ್ನು



ಚಿತ್ರ 10.3 ಸಾರಿಗೆ ವ್ಯವಸ್ಥೆ ಅಂದು/ಇಂದು

ಉಪಯೋಗಿಸುವ ಅವಕಾಶ ಇರುತ್ತದೆ. ಉದಾಹರಣೆಗೆ ಪಾಕಿಸ್ತಾನ್‌ಗೆ ಹೋಗಲು ಬಸ್ಸು, ರೈಲು ಇಲ್ಲವೇ ವಿಮಾನ ಮಾರ್ಗಗಳು ಇವೆ. ಶತಮಾನಗಳ ಕಾಲದಿಂದ, ದೂರದ ದೇಶಗಳಿಗೆ ಹೋಗಲು ಇಲ್ಲವೇ ದೂರ ದೇಶಗಳಿಗೆ ಸರಕುಗಳನ್ನು ತೆಗೆದುಕೊಂಡು ಹೋಗಲು, ತೆಗೆದುಕೊಂಡು ಬರಲು ಹಡಗುಗಳು ಬಹಳ ಮುಖ್ಯವಾದ ಸಾರಿಗೆ ಸಾಧನ. ಸಾರಿಗೆಪರವಾಗಿ ಅಗ್ಗವಾದರೂ ಸಹ ಕೆಲವು ಜನ ಮಾತ್ರವೇ ಹಡಗುಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಹೆಚ್ಚಾಗಿ ಸರಕುಗಳನ್ನು ಹಡಗುಗಳ ಮೂಲಕವೇ ಸಾಗಿಸಲ್ಪಡುತ್ತಿವೆ.

ಪಟ್ಟಣಗಳಲ್ಲಿ ಸಾರಿಗೆ ಸೌಕರ್ಯಗಳ ವಿಭಿನ್ನವಾಗಿರುತ್ತದೆ. ನಿಮ್ಮಲ್ಲಿ ಕೆಲವರು ಪಾಠಶಾಲೆಗೆ ಬಸ್ಸಿನಲ್ಲಿ, ಇನ್ನೂ ಕೆಲವರು ನಡೆದುಕೊಂಡು ಬರುತ್ತಿದ್ದಾರೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಕಛೇರಿಗಳಲ್ಲಿ ಕೆಲಸಮಾಡುವವರು, ಮನೆಗಳಲ್ಲಿ, ಅಂಗಡಿಗಳಲ್ಲಿ ಕೆಲಸಮಾಡುವವರು ಸಾರಿಗೆಯ ಮೇಲೆ ಆಧಾರ ಪಟ್ಟಿದ್ದಾರೆ. ಪ್ರತಿ ನಗರದಲ್ಲಿ ಬಸ್ಸುಗಳಂತಹ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲದಿರ

© SCERT TELANGANA

◆ **ನಿಮಗೆ ಗೊತ್ತಿರುವ ಎರಡು ಪ್ರದೇಶಗಳ ನಡುವೆ ಕೆಳಗೆ ಹೆಸರಿಸಿದ ವಿವಿಧ ರೀತಿಯ ಬಸ್ಸುಗಳಲ್ಲಿ ಪ್ರಯಾಣಿಸಲು ಹಿಡಿಯುವ ಸಮಯ, ತೆಗೆದುಕೊಳ್ಳುವ ಚಾರ್ಜ್ ವಿವರಗಳನ್ನು ತಿಳಿದುಕೊಳ್ಳಿ.**

ಬಸ್ಸಿನ ವಿಧ	ಚಾರ್ಜು	ಪ್ರಯಾಣಿಸಲು ತೆಗೆದುಕೊಳ್ಳುವ ಸಮಯ
ಪಲ್ಲೆವೆಲುಗು/ಗ್ರಾಮಣಿ		
ಎಕ್ಸ್‌ಪ್ರೆಸ್		
ಡಿಲಕ್ಸ್		

- ಇಲ್ಲಿ ತಿಳಿಸಿದ ವಿವಿಧ ಬಸ್ಸುಗಳ ಚಾರ್ಜುಗಳು ವಿವಿಧ ರೀತಿಯಲ್ಲಿ ಇರುವುದು ನ್ಯಾಯವೆಂದು ನೀನು ಭಾವಿಸುತ್ತೀಯಾ? ಕಾರಣಗಳೇನು ?
- ಚಾರ್ಜುಗಳು ವಿಭಿನ್ನವಾಗಿ ಇರುವುದರೊಂದಿಗೆ, ಸೌಕರ್ಯಗಳು, ಪ್ರಯಾಣ ಸಮಯಗಳಂತಹ ವಿಷಯಗಳಲ್ಲೂ ಸಹ ಭಿನ್ನತೆ ಇದೆ. ಹೇಗಾದರೇನು, ನಿನ್ನ ಉದ್ದೇಶದಲ್ಲಿ ಬಹಳ ಜನರು ಯಾವ ವಿಧವಾಗಿ ಪ್ರಯಾಣಿಸಲು ಇಷ್ಟಪಡುತ್ತಾರೆ? ನೀನು ಸೌಕರ್ಯಗಳನ್ನು ಹೆಚ್ಚಿಸುವ ಅಧಿಕಾರಿಯಾದರೆ, ಯಾವ ವಿಧವಾದ ಬಸ್ಸಿಗೆ ನೀನು ಪ್ರಾಮುಖ್ಯತೆ ಕೊಡುತ್ತೀಯ?

ಬಹುದು. ಆದ್ದರಿಂದ ಜನರು ತಮ್ಮ ಸ್ವಂತ ವಾಹನಗಳ ಮೇಲೆ ಇಲ್ಲವೇ ಬಾಡಿಗೆ ವಾಹನಗಳಾದ ಆಟೋರಿಕ್ಷಾ, ಟ್ಯಾಕ್ಸಿಗಳಂತ ಸಾರಿಗೆ ಸೌಕರ್ಯಗಳ ಮೇಲೆ ಆಧಾರ ಪಡುತ್ತಾರೆ.

ಸಾರಿಗೆ ಖರ್ಚು ಹೆಚ್ಚಾದರೆ ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಲಾರರು. ಉದಾಹರಣೆಗೆ, ಒಂದು ಪ್ರದೇಶದಲ್ಲಿ ವೇತನಗಳು ಹೆಚ್ಚಾಗಿ ಲಭಿಸುತ್ತಿದ್ದರೆ ಇಷ್ಟಪಡುವರು. ಕಡಿಮೆ ವೇತನ ಇರುವ ಜನರು ಹೆಚ್ಚು ವೇತನ ದೊರೆಯುವ ಪ್ರಾಂತಗಳಿಗೆ ಹೋಗಲು ಸಾರಿಗೆ ವೆಚ್ಚ ಹೆಚ್ಚಾಗಿದ್ದರೆ, ಜನರು ಆ ಪ್ರಾಂತಗಳಿಗೆ ಹೋಗಲು ಇಷ್ಟಪಡುವುದಿಲ್ಲ.



ಚಿತ್ರ 10.4 ರೈಲ್ವೆ ಕಾರ್ಮಿಕರು

ಅಲ್ಪ ಆದಾಯ ವರ್ಗಗಳು ತಮ್ಮತಮ್ಮ ಆದಾಯಗಳಲ್ಲಿ ಅಧಿಕಭಾಗವನ್ನು ಸಾರಿಗೆ ನಿಮಿತ್ತ ಖರ್ಚುಮಾಡುವುದರಿಂದ ಅವರಿಗೆ ಪ್ರಯಾಣದ ವ್ಯಯ ಹೆಚ್ಚಾಗುತ್ತದೆ. ನಡೆಯುವುದು, ಸೈಕಲ್ ತುಳಿಯುವಂತಹವುಗಳು ಹೆಚ್ಚುದೂರ ಪ್ರಯಾಣಮಾಡಲು ಕಷ್ಟವಾಗುತ್ತದೆ. ದೊಡ್ಡ ನಗರಗಳಲ್ಲಿ ಜನರು ನಡೆಯಲು ಇಲ್ಲವೇ ಸೈಕಲ್ ತುಳಿಯಲು ಸಾಕಷ್ಟು ಶಕ್ತಿ ಇರಬೇಕಾದ ಅವಶ್ಯಕತೆ ಇದೆ. ಇಲ್ಲಿ ಕಾಲುದಾರಿಗಳು ಇದ್ದಾಗ್ಯೂ ವ್ಯಾಪಾರಿಗಳು ಅವುಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಕೆಲವೊಮ್ಮೆ ರಸ್ತೆಗಳು, ಕಾಲುದಾರಿಗಳ ಎತ್ತರ (Height) ವಿಭಿನ್ನವಾಗಿ ಇರುವುದರಿಂದ ಚಕ್ರಗಳ ಕುರ್ಚಿ (Wheel –Chair) ಉಪಯೋಗಿಸುವವರು ಇವುಗಳ ಮೇಲೆ ಮೋಟಾರು ವಾಹನಗಳೊಂದಿಗೆ ಸೇರಿ ಪ್ರಯಾಣಿಸಲು ಸಾಹಸ ಮಾಡುವುದಿಲ್ಲ.

◆ **ಕೃಷ್ಣ, ಇಬ್ರಾಹೀಂ ಒಂದೇ ಪಾಠಶಾಲೆಯಲ್ಲಿ ಒಂದೇ ತರಗತಿಯಲ್ಲಿ ಓದುತ್ತಿದ್ದಾರೆ ಅವರ ಮನೆಗೂ, ಪಾಠಶಾಲೆಗೂ ನಡುವೆ ದೂರ 3ಕಿ.ಮೀ.ಗಳು ಇಬ್ರಹೀಂ ಪಾಠಶಾಲೆಗೆ ಸಿಟಿ ಬಸ್‌ನಲ್ಲಿ, ಕೃಷ್ಣ ಪಾಠಶಾಲೆ ಬಸ್ಸಿನಲ್ಲಿ ಬರುತ್ತಾರೆ. ಇವರಿಬ್ಬರೂ ಬೇರೆ ಬೇರೆ ವಾಹನಗಳ ಮೇಲೆ ಬರಲು ಅವರ ಕುಟುಂಬಳಿಗೆ ಯಾವ ಯಾವ ಅಂಶಗಳು ಕಾರಣಗಳಾಗಿ ಇರಬಹುದು?**

CERT TELANGANA


ಜನಸಂದಣಿ, ಮಾಲಿನ್ಯ:

ಇಂದಿನ ದಿನಗಳಲ್ಲಿ ಬಹಳ ನಗರಗಳಲ್ಲಿ ಜನಸಂದಣಿ, ವಿಪರೀತವಾದ ಟ್ರಾಫಿಕ್ ಇರುತ್ತಿದೆ. ನಗರಗಳಲ್ಲಿ ಉತ್ತಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲದೇ ಹೋಗಿದ್ದರೆ ಜನರು ಸ್ವಂತವಾಗಿ ವಾಹನಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಇದರ ಫಲವಾಗಿಪಟ್ಟಣಗಳಲ್ಲಿ ಬೆಳೆದ ವಾಹನಗಳನ್ನು ಕ್ರಮಬದ್ದೀಕರಿಸಲು ಟ್ರಾಫಿಕ್ ಕಂಟ್ರೋಲ್ ರೂಂಗಳ ಏರ್ಪಾಟು, ರಸ್ತೆಗಳನ್ನು ಅಗಲ ಮಾಡುವುದಂತಹ ಕಾರ್ಯಗಳನ್ನು ಮಾಡಬೇಕು. ಇದನ್ನು ನಾವು ಒಂದು ಉದಾಹರಣೆಯ ಮೂಲಕ ಅರ್ಥಮಾಡಿ ಕೊಳ್ಳೋಣ. ಆರು ಮುಖ್ಯ ನಗರಗಳಲ್ಲಿ ವಾಸಿಸುವ ಜನಸಂಖ್ಯೆ 1981–2001 ವರ್ಷಗಳ ನಡುವೆ ಎರಡರಷ್ಟು ಹೆಚ್ಚಾಗಲು, ಮೋಟಾರು ವಾಹನಗಳ ಸಂಖ್ಯೆ ಅದೇ ಕಾಲದಲ್ಲಿ ಎಂಟರಷ್ಟು ಹೆಚ್ಚಾಗಿದೆ.

ಮೋಟಾರು ಸೈಕಲ್‌ಗಳು, ವಾಹನಗಳ ಬಳಕೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಇದರಿಂದ ಪೆಟ್ರೋಲ್, ಡೀಜಿಲ್ ಬಳಕೆ ಬಹಳಷ್ಟು ಹೆಚ್ಚಾಗಿ ವಾಯುಮಾಲಿನ್ಯ ಹೆಚ್ಚಾಗುತ್ತದೆ. ಮಾಲಿನ್ಯವನ್ನು ಕಡಿಮೆ ಮಾಡಲು ಪೆಟ್ರೋಲಿಯಂ ಉತ್ಪತ್ತಿಗಳ ಬಳಕೆಯನ್ನು ಕಡಿಮೆ ಮಾಡಬೇಕು. ಕಡಿಮೆ ಖರ್ಚಿನಿಂದ ಹೆಚ್ಚು ಜನರನ್ನು ಸಾರಿಗೆ ಮಾಡಬಲ್ಲ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮೂಲಕ ಮಾಲಿನ್ಯವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು.

ಸುರಕ್ಷಿತ ಪ್ರಯಾಣ:–

ಈಗಿನ ಕಾಲದಲ್ಲಿ ಪ್ರಯಾಣ ಬಹಳ ಅಪಾಯ ಕಾರಿಗಯಾಗಿದೆ. ರಸ್ತೆ, ಅಪಘಾತಗಳು, ಮರಣಗಳು, ಗಾಯಗಳು ಅಲ್ಪಾದಾಯ ಕುಟುಂಬಗಳ ಮೇಲೆ ತೀವ್ರ ಪ್ರಭಾವವನ್ನು ತೋರಿಸುತ್ತವೆ. ರಸ್ತೆ ಅಪಘಾತಗಳಲ್ಲಿ ಮರಣಿಸಿದರವರಲ್ಲಿ, ಗಾಯಪಡುವವರಲ್ಲಿ ಬಹಳ ಜನರು ಸೈಕಲ್ ಮೇಲೆ ಪ್ರಯಾಣಿಸುವವರು, ಪಾದಾಚಾರಿಗಳು ಇಲ್ಲವೆ ಕಾಲುದಾರಿಗಳಲ್ಲಿ ವಾಸಿಸುವವರು. ಅಪಘಾತಗಳು ರಸ್ತೆ ಮೇಲೆ ಮಾತ್ರವಲ್ಲದೆ, ಇತರ ಸಾರಿಗೆ ಮಾರ್ಗಗಳಲ್ಲಿ ಸಹ ನಡೆಯುತ್ತಿವೆ. ರಸ್ತೆ–ರೈಲು ಮಾರ್ಗಗಳು ಕೂಡುವ ಸ್ಥಳದಲ್ಲಿ ರೈಲುಕಾವಲು ಗೇಟ್ ಇರುತ್ತದೆ. ರೈಲು ಹೋಗುವಾಗ ವಾಹನಗಳು ರೈಲು ಹಳಿ ಮೇಲೆ ಬರದಂತೆ ಗೇಟ್ ಹಾಕುತ್ತಾರೆ. ರೈಲು ಹೋದನಂತರ ಗೇಟ್ ತೆರೆಯುತ್ತಾರೆ. ಆದರೆ ಕೆಲವು ಸ್ಥಳಗಲ್ಲಿ ರಸ್ತೆ–ರೈಲು ಮಾರ್ಗಗಳು ಕೂಡುವಲ್ಲಿ ಇಂತಹ ಗೇಟ್‌ಗಳು ಇಲ್ಲದಿದ್ದಾಗ, ರೈಲು ಹಳಿಗಳು ದಾಟುವಾಗ ರೈಲು



ಚಿತ್ರ 10.5 ಪರ್ವತ ಪ್ರಾಂತ್ಯಗಳಲ್ಲಿ ಪ್ರಯಾಣಿಸುವ ರೈಲು–ಊಟಿ

ಬರುವುದನ್ನು ಎರಡೂ ಕಡೆ ಗಮನಿಸಿ ದಾಟಬೇಕು. ಇಲ್ಲದಿದ್ದರೆ, ಅಪಘಾತಗಳು ನಡೆಯುತ್ತವೆ.

ರಸ್ತೆ ಭದ್ರತಾ ವಾರೋತ್ಸವಗಳು:–

ಪ್ರತಿವರ್ಷ ಮೊದಲನೇ ವಾರದಲ್ಲಿ ದೇಶದಲ್ಲಿನ ರಸ್ತೆ ಸಾರಿಗೆ ಇಲಾಖೆ ರಸ್ತೆ ಭದ್ರತಾ ವಾರೋತ್ಸವಗಳನ್ನು ನಿರ್ವಹಿಸುತ್ತದೆ .ಈ ಸಂದರ್ಭವಾಗಿ ಅದು ಟ್ರಾಫಿಕ್ ನಿಯಮಗಳನ್ನು ಯಾವ ವಿಧವಾಗಿ ಪಾಲಿಸಬೇಕು ಎಂದು ಪ್ರಜೆಗಳಿಗೆ ತಿಳಿಯಪಡಿಸುತ್ತದೆ. ಸರ್ಕಾರಗಳು ನಡೆಸುವ ಸಂಸ್ಥೆಗಳಾದ ಆಂಧ್ರಪ್ರದೇಶ್ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಂತಹವು (ಎ.ಪಿ.ಎಸ್.ಆರ್.ಟಿ.ಸಿ.) ಡ್ರೈವರ್‌ಗಳಿಗೆ ಭದ್ರತೆಯಿಂದ ಕೂಡಿದ ಡ್ರೈವಿಂಗ್‌ನಲ್ಲಿ ಶಿಕ್ಷಣ ಕಾರ್ಯ ಕ್ರಮಗಳನ್ನು, ಚರ್ಚಾಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ. ನಿಮ್ಮ ಪಾಠಶಾಲೆ ವಿದ್ಯಾರ್ಥಿಗಳಿಗೆ ಪ್ರಬಂಧ, ಭಾಷಣ ಸ್ಪರ್ಧೆಗಳಂತಹ ಕಾರ್ಯಕ್ರಮಗಳು ನಿರ್ವಹಿಸುವುದಲ್ಲದೆ ಟ್ರಾಫಿಕ್ ನಿಯಮಗಳನ್ನು ಪಾಲಿಸುವುದಲ್ಲದೆ ಟ್ರಾಫಿಕ್ ನಿಯಮಗಳನ್ನು ಪಾಲಿಸುವದರಲ್ಲೂ, ಕ್ಷೇಮವಾಗಿ ಪ್ರಯಾಣಿಸುವುದರಲ್ಲೂ ಮಾರ್ಗದರ್ಶಕತೆಯನ್ನು ಕೊಡುತ್ತಾರೆ. ನಾವು ಪ್ರಯಾಣಿಸುವ ರಸ್ತೆ, ರೈಲು, ಜಲ, ವಾಯುಸಾರಿಗೆ ಮಾರ್ಗಗಳಲ್ಲಿ ಯಾವುದಾದರೂ ಪ್ರತಿಯೊಬ್ಬರು ಖಂಡಿತವಾಗಿ ಭದ್ರತಾ ನಿಯಮಗಳನ್ನು ಪಾಲಿಸಬೇಕು. ಹೀಗೆ ಪಾಲಿಸಿದರೆ ಪ್ರಯಾಣದಲ್ಲಿ ಅಪಘಾತಗಳನ್ನು ನಿಯಂತ್ರಿಸಬಹುದು.

SCERT TELANGANA



ಚಿತ್ರ 10.6 ವಿಶಾಖ ಪಟ್ಟಣ ಬಂದರು

- ನಿಮಗೆ ಹತ್ತಿರದಲಿರುವ ಟ್ರಾಫಿಕ್ ಪೋಲೀಸ್ ಇಲ್ಲವೇ ಡ್ರೈವಿಂಗ್ ಸ್ಕೂಲ್ ಇಲ್ಲವೆ ಡ್ರೈವಿಂಗ್ ಲೈಸನ್ಸ್ ಇರುವ ವ್ಯಕ್ತಿಯನ್ನು ಭೇಟಿಮಾಡಿ. ಡ್ರೈವರ್‌ಗಳು ಯಾವ ವಿಧವಾಗಿ ಶಿಕ್ಷಣ ತೆಗೆದುಕೊಳ್ಳುತ್ತಾರೋ ಚರ್ಚಿಸಿರಿ. ಡ್ರೈವಿಂಗ್ ಸ್ಕೂಲ್‌ನಲ್ಲಿ ಪ್ರದರ್ಶಿಸುವ ವಿಷಯಗಳನ್ನು ಗುರ್ತಿಸಿರಿ.
- ರಸ್ತೆಗಳನ್ನು ಉಪಯೋಗಿಸುವಲ್ಲಿ ಪಾಲಿಸಬೇಕಾದ ಮೂಲಭೂತ ನಿಯಮಗಳನ್ನು ಚರ್ಚಿಸಿರಿ, ರಸ್ತೆಯ ಮೇಲೆ ಯಾವ ರೀತಿ ಸುರಕ್ಷಿತವಾಗಿ ಪ್ರಯಾಣಿಸ ಬೇಕೋ ಚರ್ಚಿಸಿರಿ. ನಿಮ್ಮ ತರಗತಿ ಕೋಣೆಯಲ್ಲಿ ಪಾಲಿಸಬೇಕಾದ ಟ್ರಾಫಿಕ್ ನಿಯಮಗಳನ್ನು ಚಾರ್ಟಿನ ಮೇಲೆ ಬರೆದು ಪ್ರದರ್ಶಿಸಿರಿ.

ಮುಖ್ಯ ಪದಗಳು:

1. ರಸ್ತೆ ಮಾರ್ಗ	2. ವಾಯುಮಾರ್ಗಗಳು	3. ಜಲಮಾರ್ಗಗಳು	4. ರೈಲುಮಾರ್ಗಗಳು
5. ರಾಷ್ಟ್ರೀಯ ಹೆದ್ದಾರಿಗಳು	6. ಗ್ರಾಮೀಣ ರಸ್ತೆಗಳು	7. ನಗರ ರಸ್ತೆಗಳು	8. ಸರಿಹದ್ದು ರಸ್ತೆಗಳು
9. ಸಂದಣಿ	10. ತೆಲಂಗಾಣ ರಾ.ರ.ಸಂ	11. ಸುರಕ್ಷಿತ ಪ್ರಯಾಣ	12. ಜನಸಂದಣಿ

ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ.

1) ವ್ಯವಸಾಯ ವಸ್ತುಗಳ ಉತ್ಪತ್ತಿಗೆ ಸಾರಿಗೆ ವ್ಯವಸ್ಥೆ ಯಾವ ರೀತಿ ಅತ್ಯವಸರವೋ ಉದಾಹರಣೆಗಳೊಂದಿಗೆ ವಿವರಿಸಿರ.
2) ರೈಲಿಗಿಂತ ಬಸ್ಸುಗಳು ಯಾವ ವಿಧವಾಗಿ ಭಿನ್ನವಾಗಿದೆಯೋ ವಿವರಿಸಿರಿ.
3) ಗ್ರಾಮಗಳಿಗೆ ಸಾರಿಗೆ ಸೌಕರ್ಯಗಳ ಕಲ್ಪನೆ ಏಕೆ ಮುಖ್ಯವಾದದ್ದು?
4) ಅಂತರ್ಜಾತೀಯ ವ್ಯಾಪಾರದಲ್ಲಿ ಜಲಮಾರ್ಗಗಳ ಪ್ರಾಧಾನ್ಯವನ್ನು ವಿವರಿಸಿರಿ.
5) ಸಾರಿಗೆ ಸೌಕರ್ಯಗಳನ್ನು ದೇಶದ ಜೀವನಾಡಿಗಳೆಂದು ಏಕೆ ಕರೆಯುತ್ತಾರೆ?
6) ಕೈಗಾರಿಕೆಗಳಲ್ಲಿ ಉತ್ಪತ್ತಿಯಾದ ವಸ್ತುಗಳ ಸಾರಿಗೆ ವ್ಯಯ ಹೆಚ್ಚಾದರೆ ಏನು ನಡೆಯುತ್ತದೆ? ಉದಾಹರಣೆಗಳೊಂದಿಗೆ ವಿವರಿಸಿರಿ.
7) ಅಪಘಾತಗಳಿಗೆ ಸಂಬಂಧಿಸಿದ ಕೆಲವು ಘೋಷಣೆಗಳು ಬರೆಯಿರಿ.
8) ವಾಹನಗಳ ಅಧಿಕ ಉಪಯೋಗದಿಂದ ಅಧಿಕ ರದ್ದಿ ಉಂಟಾಗುತ್ತದೆ. ಇದನ್ನು ನಿಯಂತ್ರಿಸಲು ನೀವು ಕೊಡುವ ಸೂಚನೆಗಳೇನು ?
9) ತೆಲಂಗಾಣ ರಾಜ್ಯದ ಸರಹದ್ದು ನಕ್ಷೆಯನ್ನು ರಚಿಸಿ ಹೈದರಾಬಾದನ್ನು ಗುರ್ತಿಸಿ.

ಚರ್ಚೆ: "ರಸ್ತೆ ಅಪಘಾತಗಳು ನಿವಾರಣಾ ಕ್ರಮಗಳು" ಎಂಬ ಅಂಶದ ಬಗ್ಗೆ ಪೋಲೀಸ್ ಇನಸ್ಪೆಕ್ಟರನಿಂದ ವಿದ್ಯಾರ್ಥಿಗಳಿಗೆ ಸಂದೇಶ ಕೊಡಿಸಿರಿ.

ಪ್ರಾಜೆಕ್ಟ್ ಕೆಲಸ:

ಸಾರಿಗೆ ವ್ಯವಸ್ಥೆಯಲ್ಲಿ ಕೆಲಸಮಾಡುವ ಒಬ್ಬ ಡ್ರೈವರನ್ನು ಸಂದರ್ಶಿಸಿ. ಇದರ ಮೂಲಕ ಅವರ ಕೆಲಸದ ಪ್ರಯೋಜನಗಳು, ಅಪಘಾತಗಳು ಮೊದಲಾದ ವಿಷಯಗಳು ತಿಳಿದುಕೊಂಡು ವರದಿ ಬರೆಯಿರಿ.


SCERT TELANGANA

ಅಧ್ಯಾಯ 11

ಹೊಸ ರಾಜ್ಯಗಳು–ರಾಜರು

ಮೊದಲನೆ ಭಾಗ

7ನೇ ಶತಮಾನದ ನಂತರ ಬಹಳ ಹೊಸ ರಾಜವಂಶಗಳು ಹುಟ್ಟಿಕೊಂಡವು. 7–12ಶತಮಾನಗಳ ನಡುವಿನ ಕಾಲದಲ್ಲಿ ಭಾರತ ಉಪಖಂಡ ವಿವಿಧ ಪ್ರಾಂತ್ಯಗಳಲ್ಲಿ ಆಳಿದ ಮುಖ್ಯ ರಾಜವಂಶಗಳನ್ನು ನಕ್ಷೆ–1ರಲ್ಲಿ ನೋಡಬಹುದು.



ಚಿತ್ರ 1 ಕ್ರಿ.ಶ. 7–12 ಅಂದಿನ ಶತಮಾನಗಳ ಮುಖ್ಯ ರಾಜ್ಯಗಳು

- ಗುರ್ಜರ ಪ್ರತಿಹಾರರ, ರಾಷ್ಟ್ರಕೂಟರು, ಪಾಲರು, ಚೋಳರ, ಮತ್ತು ಚಹಮನರ ರಾಜ್ಯಗಳನ್ನು ಗುರ್ತಿಸಿರಿ.
- ಅವರ ನಿಯಂತ್ರಣದಲ್ಲಿನ ಪ್ರಾಂತ್ಯಗಳನ್ನು ಇಂದು ಯಾವ ರಾಜ್ಯಗಳಲ್ಲಿ ಇವೆಯೋ ಗುರ್ತಿಸಬಲ್ಲಿರಾ?

ಹೊಸ ರಾಜವಂಶಗಳ ಉದಯ:

ಭಾರತ ಉಪಖಂಡದಲ್ಲಿ ಏಳನೇ ಶತಮಾನದ ಕಾಲಕ್ಕೆ ವಿವಿಧ ಪ್ರಾಂತ್ಯಗಳಲ್ಲಿ ಅನೇಕ ಜನರು ಭೂಮಾಲೀಕರು ಇಲ್ಲವೇ ಮುಖ್ಯವಾದ ಯೋಧರು ಇದ್ದರು. ಅಂದಿನ ರಾಜರು ಆಗಾಗ್ಗೆ ಇವರನ್ನು ತಮ್ಮ ಸಾಮಂತರಾಗಿ ಗುರ್ತಿಸಿದರು. ತಮ್ಮ ಸಾಮಂತರು ತಮಗೆ ಕಾಣಿಕೆಗಳನ್ನು

SCERT TELANGANA

ತರಬೇಕೆಂದು, ಅವರ ಆಸ್ಥಾನದಲ್ಲಿ ಇರಬೇಕೆಂದು, ಸೈನಿಕ ಸಹಾಯ ನೀಡಬೇಕೆಂದು ಆ ರಾಜರು ನಿರೀಕ್ಷಿಸುತ್ತಿದ್ದರು. ಸಾಮಂತರ ಅಧಿಕಾರ, ಸಂಪತ್ತು ಸಂಪಾದಿಸಿದ ನಂತರ ತಮಗೆ ತಾವೇ ಮಹಾ ಸಾಮಂತರಾಗಿ, ಮಹಾ ಮಾಂಡಲಿಕರಾಗಿ ಒಂದು ಪ್ರಾಂತಕ್ಕೆ ಇಲ್ಲವೇ ಒಂದು ವ್ಯಾಪ್ತಿಗೆ ಮಹಾನ್ ದೇವರೆಂದು ಪ್ರಕಟಿಸಿಕೊಂಡರು. ಕೆಲವು ಸಲ ಅವರು ತಮ್ಮ ರಾಜರಿಂದ ಸ್ವಾತಂತ್ರ್ಯವನ್ನು ಪ್ರಕಟಿಸಿಕೊಂಡರು.



ಚಿತ್ರ 11.1 ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರದಲ್ಲಿಯ 15ನಂ. ಗುಹೆಯಲ್ಲಿನ ವಿಷ್ಣುವನ್ನು ನರಸಿಂಹನಾಗಿ ತೋರಿಸುತ್ತಿರುವ ಚಿತ್ರ.

ದಕ್ಕನ್ ಪ್ರಾಂತದಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಇಂತಹ ಉದಾಹರಣೆ ಕಂಡುಬರುತ್ತದೆ. ರಾಷ್ಟ್ರಕೂಟರು ಮೊದಲು ಕರ್ನಾಟಕದಲ್ಲಿಯ ಚಾಲುಕ್ಯರಿಗೆ ಸಾಮಂತರಾಗಿ ಕೆಲಸ ಮಾಡಿದರು. ಎಂಟನೇ ಶತಮಾನದ ಮಧ್ಯದಲ್ಲಿ ರಾಷ್ಟ್ರಕೂಟರಲ್ಲಿ ಪ್ರಮುಖನಾದ ದಂತಿದುರ್ಗನು ಚಾಳುಕ್ಯದೊರೆಯನ್ನು ಸೋಲಿಸಿ "ಹಿರಣ್ಯಗರ್ಭ", "ಬಂಗಾರು ಗರ್ಭ" ಎನ್ನುವ ಸಂಸ್ಕಾರಯಾಗ ನಿರ್ವಹಿಸಿದನು. ಇದನ್ನು ನಿರ್ವಹಿಸಿ ತಾನು ಹುಟ್ಟಿನಿಂದ ಕ್ಷತ್ರಿಯನು ಆಗದಿದ್ದರು, ಸಂಪ್ರದಾಯ ದಿಂದ ಪುನರ್‌ಜನ್ಮ ಹೊಂದುತ್ತೇನೆಂದು ಭಾವಿಸಿದನು.

◆ ಇಂದಿನ ದಿನಗಳಲ್ಲಿ ಆಡಳಿತಗಾರರಾಗಲು ಯಾವುದಾದರೊಂದು ವರ್ಣದಲ್ಲಿ ಹುಟ್ಟುವುದು ಪ್ರಧಾನವೆಂದು ಭಾವಿಸುತ್ತಿರುವಿರಾ?

ಇನ್ನೂ ಕೆಲವು ಸಂದರ್ಭಗಳಲ್ಲಿ ಶ್ರೀಮಂತ ಕುಟುಂಬದವರು ಅವರ ಸೈನಿಕ ಶಕ್ತಿಯನ್ನು ರಾಜ್ಯಗಳು ಏರ್ಪಡಿಸುವುದಕ್ಕೆ ಉಪಯೋಗಿಸಿದರು. ಕದಂಬ, ಮಯೂರ ಶರ್ಮ, ಗೂರ್ಜರ, ಪ್ರತಿಹಾರ ಹರಿಚಂದ್ರನು ಬ್ರಾಹ್ಮಣರಾಗಿದ್ದರೂ, ಸಂಪ್ರದಾಯ ವೃತ್ತಿಗಳನ್ನು ಬಿಟ್ಟು ಆಯಧಗಳನ್ನು ಹಿಡಿದು, ಕರ್ನಾಟಕ, ರಾಜಸ್ಥಾನಗಳಲ್ಲಿ ರಾಜ್ಯಗಳನ್ನು ಸ್ಥಾಪಿಸಿದರು.

ಪ್ರಶಸ್ತಿಗಳು–ಭೂದಾನಗಳು :

ಶಾಸನಗಳಲ್ಲಿ ಪ್ರಾರಂಭದಲ್ಲಿ ಹೆಸರಿಸಿದ ಭಾಗವನ್ನು ಪ್ರಶಸ್ತಿ ಎನ್ನುವರು. ಪ್ರಶಸ್ತಿಗಳಲ್ಲಿ ಆಳುವವರ ಕುಟುಂಬಗಳು, ಅವರ ಪೂರ್ವಿಕರ ರಾಜರ ಬಗ್ಗೆ, ಅವರು ಯಾವ ಕಾಲಕ್ಕೆ ಸೇರಿದವರೋ, ಅವರ ಸಾಧನೆಗಳು, ದಿಗ್ವಿಜಯಗಳು, ಹೀಗೆ ಸಾರಿಕೊಳ್ಳುತ್ತಿದ್ದರೆಂದು ತಿಳಿಸುತ್ತದೆ. ಇವರ ಆಳ್ವಿಕೆಯಲ್ಲಿ ಸಹಕರಿಸುವ ಬ್ರಾಹ್ಮಣ ಪಂಡಿತರು ಇವುಗಳನ್ನು ಬರೆಯುತ್ತಿದ್ದರು. ರಾಜರು ತಮ್ಮ ವಿಜಯಗಳನ್ನು, ಪರಾಕ್ರಮಗಳನ್ನು, ಹೇಗೆ ವರ್ಣಿಸಿಕೊಳ್ಳುತ್ತಿದ್ದರೋ ಇವುಗಳ ಮೂಲಕ ತಿಳಿಯುತ್ತದೆ.

ನಾಗಭಟ್ಟನ ವಿಜಯಗಳು:

ಬಹಳ ಜನ ರಾಜರು ತಮ್ಮ ವಿಜಯಗಳನ್ನು ಪ್ರಶಸ್ತಿಗಳಲ್ಲಿ ವರ್ಣಿಸುತ್ತಿದ್ದರು. ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಸಂಸ್ಕೃತ ಲಿಪಿಯಲ್ಲಿ ಲಭಿಸಿದ ಒಂದು ಪ್ರಶಸ್ತಿ ಪ್ರತಿಹಾರ ರಾಜನಾದ ನಾಗಭಟ್ಟನ ವಿಜಯಗಳನ್ನು ಈ ಕೆಳಗಿನಂತೆ ವರ್ಣಿಸುತ್ತದೆ.

ಆಂಧ್ರ ರಾಜರು, ಸೈಂಧವರು (ಸಿಂಧೂ) ವಿದರ್ಭ (ಮಹಾರಾಷ್ಟ್ರದಲ್ಲಿ ಒಂದು ಭಾಗ), ಕಳಿಂಗ (ಒಡಿಷಾದಲ್ಲಿನ ಸ್ವಲ್ಪ ಭಾಗ) ರಾಜರು ತಾವು ಯುವರಾಜನಾಗಿ ಇರುವಾಗಲೇ ತನ್ನ ಮುಂದೆ ಶರಣಾದರು.

ಆತನು ಚಕ್ರಾಯುಧನ (ಕನೋಜ್ ಪರಿಪಾಲಕನು) ಮೇಲೆ ವಿಜಯ ಸಾಧಿಸಿದನು. ಅತನು ವಂಗ (ಬಂಗಾಳದ ಒಂದು ಭಾಗ) ಅನಾರ್ತ (ಗುಜರಾತಿನ ಒಂದು ಭಾಗ), ಮಾಳವ (ಮಧ್ಯಪ್ರದೇಶದಲ್ಲಿಯ ಭಾಗ)

SCERT KARNATAKA



ಚಿತ್ರ 11.2 ಕ್ರಿ.ಶ. 9ನೇ ಶತಮಾನದಕಾಲದಲ್ಲಿ ರಾಜರ ಭೂದಾನ ತಾಮ್ರ ಪತ್ರಗಳ ಗುಚ್ಚೆ. ಸ್ವಲ್ಪ ಸಂಸ್ಕೃತದಲ್ಲಿ ಸ್ವಲ್ಪ ತಮಿಳಿನಲ್ಲಿ ಬರೆಯಲ್ಪಟ್ಟ ಈ ತಾಮ್ರ ಪತ್ರಗಳ ಮೇಲೆ ರಾಜ ಮುದ್ರೆಗಳು ಹಾಕಿ ಅಧಿಕಾರಿಕವಾಗಿ ದೃವೀಕರಿಸಿದ್ದಾರೆ.

ಕಿರಾಟ (ವನವಾಸರು) ತುರುಷ್ಕ (ಟರ್ಕರು), ವತ್ಸ, ಮತ್ಸ (ಉತ್ತರಭಾರತ ರಾಜ್ಯಗಳು) ರಾಜರನ್ನು ಸೋಲಿಸಿದರು.

ನಕ್ಷೆ–1ರಲ್ಲಿ ಮೇಲಿನ ಶಾಸನದಲ್ಲಿ ಹೆಸರಿಸಿದ ಪ್ರಾಂತಗಳನ್ನು ಗುರ್ತಿಸಿರಿ.

ಬ್ರಾಹ್ಮಣರಿಗೆ ಮತ್ತು ಸೇವೆಗೈದ ಇತರರಿಗೂ ರಾಜರು ಆಗಾಗ್ಗೆ ಭೂದಾನ ಮಾಡುತ್ತಿದ್ದರು. ಈ ದಾನಗಳು ತಾಮ್ರ ಪತ್ರಗಳ ಮೇಲೆ ದಾಖಲು ಮಾಡಿ ದಾನಗ್ರಹಿತರಿಗೆ ಕೊಡುತ್ತಿದ್ದರು.

ಕಾಶ್ಮೀರವನ್ನು ಪಾಲಿಸಿದ ರಾಜರ ಚರಿತ್ರೆಯ ಮೇಲೆ 12ನೇ ಶತಮಾನದಲ್ಲೇ ಅಸಾಧಾರಣವಾದ ದೊಡ್ಡ ಸಂಸ್ಕೃತ ಪದ್ಯ ಇದೆ. ಇದನ್ನು ಕಲ್ಹಣನು ಬರೆದನು. ಆತನು ಶಿಲಾಶಾಸನಗಳು, ಲಿಖಿತ ದಾಖಲೆಗಳು, ಪೂರ್ವ ಚಾರಿತ್ರಿಕ ಘಟನೆಗಳಂತಹ ವಿವಿಧ ಆಧಾರಗಳನ್ನು ತನ್ನ ರಚನೆಗಳಿಗೆ ಉಪಯೋಗಿಸಿದ್ದಾನೆ. ಆದರೆ ಪ್ರಶಸ್ತಿಗಳ ರಚನೆ ಕಾರರಂತಲ್ಲದೆ ರಾಜರನ್ನು ಅವರ ಆಡಳಿತ ವಿಧಾನಗಳನ್ನು ಆಗಾಗ್ಗೆ ವಿಮರ್ಶಿಸುತ್ತಿದ್ದರು.

ಭೂಮಿಯ ಜೊತೆ ಏನು ಕೊಡುತ್ತಿದ್ದರು?

ಚೋಳರ ಭೂದಾನ ಪತ್ರದ ಬಗ್ಗೆ ತಮಿಳಿನಲ್ಲಿರುವ ಭಾಗ:

ನಾವು ಈ ಭೂಮಿ ಸರಿಹದ್ದುಗಳನ್ನು ಮಣ್ಣಿನ ಕಟ್ಟೆಗಳಿಂದ, ಮುಳ್ಳಿನ ಪೊದೆಗಳನ್ನು ನೆಟ್ಟು ಗುರ್ತಿಸಿದ್ದೇವೆ. ಈ ಭೂಮಿ ಹಣ್ಣಿನ ಗಿಡಗಳು, ನೀರು, ಭೂಮಿ, ಉದ್ಯಾನವನ, ಗಿಡಗಳು, ಬಾವಿಗಳು, ಖಾಲಿ ಸ್ಥಳಗಳು, ಹುಲ್ಲುಗಾವಲುಗಳು, ಒಂದು ಗ್ರಾಮ, ಹುತ್ತಗಳು, ವೇದಿಕೆಗಳು, ಕಾಲುವೆಗಳು, ಕಂದಕಗಳು, ನದಿಗಳು, ಮೆಕ್ಕಲುಭೂಮಿ, ಕೆರೆಗಳು, ಧಾನ್ಯಾಗಾರಗಳು, ಮೀನುಗಳ ಕಾಲುವೆಗಳು, ಜೇನುಗೂಡುಗಳು, ಆಳವಾದ ಸರೋವರುಗಳು ಹೊಂದಿದೆ.

ಈ ಭೂಮಿ ಸ್ವೀಕರಿಸುವವರು ಇದರ ಮೇಲೆ ತೆರಿಗೆ ವಸೂಲಿ ಮಾಡುತ್ತಾರೆ. ಇದನ್ನು ನ್ಯಾಯಮೂರ್ತಿಗಳು ವಿಧಿಸುವ ಜರಿಮಾನಗಳನ್ನು, ವಿಳ್ಯದೆಲೆಯ ಮೇಲೆ ತೆರಿಗೆ, ನೇಯ್ದಬಟ್ಟೆಗಳ ಮೇಲೆ, ವಾಹನಗಳ ಮೇಲೆ ತೆರಿಗೆಯನ್ನು ವಸೂಲಿ ಮಾಡುತ್ತಾನೆ. ಅತನು ಸುಟ್ಟ ಇಟ್ಟಿಗೆಗಳಿಂದ ದೊಡ್ಡ ಕೋಣೆಗಳನ್ನು ಮೇಲಿನ ಅಂತಸ್ತುಗಳಿಂದ ನಿರ್ಮಿಸಬಹುದು. ಚಿಕ್ಕ, ದೊಡ್ಡ ಬಾವಿಗಳನ್ನು ತೋಡಿಸಬಹುದು, ಗಿಡಗಳನ್ನು, ಮುಳ್ಳಿನ ಪೊದೆಗಳನ್ನು ನೆಡಿಸಬಹುದು. ನೀರಾವರಿಗೆ ಅವಸರವಾದರೆ ಕಾಲುವೆಗಳನ್ನು ನಿರ್ಮಿಸಬಹುದು. ಆತನು ನೀರು ವ್ಯರ್ಥವಾಗದಂತೆ ಕಟ್ಟೆಗಳನ್ನು ನಿರ್ಮಿಸಬೇಕು.

- ಈ ಶಾಸನದಲ್ಲಿ ಪ್ರಸ್ಥಾಪಿಸಿದ ನೀರಾವರಿಗೆ ಉಪಯೋಗವಾಗುವ ಸಂಪನ್ಮೂಲಗಳ ಪಟ್ಟಿ ಬರೆಯಿರಿ,ಅವುಗಳನ್ನು ಯಾವ ವಿಧವಾಗಿ ಉಪಯೋಗಿಸುತ್ತಾರೋ ಚರ್ಚಿಸಿರಿ.

ರಾಜ್ಯಗಳಲ್ಲಿ ಆಳ್ವಿಕೆ:

ಈ ಹೊಸ ರಾಜರಲ್ಲಿ ಹೆಚ್ಚಾಗಿ ಮಹಾರಾಜಾಧಿರಾಜ, ಮಹಾನ್‌ರಾಜ, ರಾರಾಜರು ತ್ರಿಭುವನ ಚಕ್ರವರ್ತಿ, ಮೂರು ಲೋಕಗಳ ರಾಜ ಮೊದಲಾದ ಗಂಭೀರವಾದ ಬಿರುದು ಗಳನ್ನು ಹೊಂದಿರುತ್ತಿದ್ದರು, ಆದರೆ ಕೆಲವು ಸಂದರ್ಭಗಳಲ್ಲಿ, ಸಾಮಂತರು, ರೈತ ಸಂಘಗಳು, ವ್ಯಾಪಾರಿಗಳು, ಬ್ರಾಹ್ಮಣ ಸಂಘಗಳೊಂದಿಗೆ ಅಧಿಕಾರವನ್ನು ಹಂಚಿಕೊಳ್ಳುತ್ತಿದ್ದರು.

ಪ್ರತಿ ರಾಜ್ಯದಲ್ಲಿ ರೈತರು, ಪಶುಪೋಷಕರು, ಕರಕುಶಲಗಳಿಂದ, ವ್ಯಾಪಾರಿಗಳಿಂದ ಉತ್ಪತ್ತಿಮಾಡಿದ ಮತ್ತು ಮಾರಾಟ ಮಾಡಿದರಲ್ಲಿನ ಭಾಗ ತೆಗೆದುಕೊಳ್ಳುತ್ತಿದ್ದರು. ಭೂಮಿ ಎಲ್ಲಾ ರಾಜನದಾದ್ದರಿಂದ ಅದಕ್ಕೆ ಸಲ್ಲಿಸಿದ ಬಾಡಿಗೆಯಾಗಿ ಇದನ್ನು ಭಾವಿಸುತ್ತಿದ್ದರು. ವ್ಯಾಪಾರಿಗಳಿಂದ ತೆರಿಗೆಯನ್ನು ಸಹ ವಸೂಲಿ ಮಾಡುತ್ತಿದ್ದರು.

SCERT TELANGANA

ತೆರಿಗೆಗಳ ರೂಪದಲ್ಲಿ ಬಂದ ಸಂಪನ್ಮೂಲಗಳನ್ನು ಆಡಳಿತಕ್ಕೆ, ದೇವಾಲಯಗಳ ನಿರ್ಮಾಣಕ್ಕೆ, ಕೋಟೆಗಳ ನಿರ್ಮಾಣಕ್ಕೆ ಬಳಸುತ್ತಿದ್ದರು. ಯುದ್ಧಗಳ ಮೂಲಕ ಲೂಟಿ ಮಾಡಿದ ಸಂಪತ್ತನ್ನು ವ್ಯಾಪಾರ ಮಾರ್ಗಗಳ ಅಭಿವೃದ್ಧಿಗೆ ಖರ್ಚುಮಾಡುತ್ತಿದ್ದರು.

ತೆರಿಗೆಗಳ ವಸೂಲಿಗಾಗಿ ಪಾಲಕರ ಕುಟುಂಬ ಳಿಂದ ಅಧಿಕಾರಿಗಳನ್ನು ನೇಮಕಮಾಡುತ್ತಿದ್ದರು. ಇವರ ನೇಮಕ ಕೆಲವೊಮ್ಮೆ ವಂಶಪಾರಂಪರ್ಯವಾಗಿ ನಡೆಯುತ್ತಿತ್ತು. ಸೈನ್ಯದ ವಿಷಯದಲ್ಲೂ ಸಹ ಇದೇ ಪದ್ಧತಿ ಮುಂದುವರೆಸುತ್ತಿದ್ದರು. ಬಹಳ ಸಂದರ್ಭಗಳಲ್ಲಿ ರಾಜರ ಹತ್ತಿರ ಸಂಬಂಧಿಗಳೇ ಮುಂದುವರೆಯುತ್ತಿದ್ದರು.

◆ ಈ ವಿಧವಾದ ಆಡಳಿತ ಪ್ರಸ್ತುತ ಆಡಳಿತ ವಿಧಾನಕ್ಕಿಂತ ಯಾವ ವಿಧವಾಗಿ ಭಿನ್ನವಾಗಿದೆ?

ಸಂಪತ್ತಿಗಾಗಿ ಸಂಗ್ರಾಮ:

ಈ ರಾಜ ವಂಶಗಳು ಒಂದೊಂದು ಒಂದು ಪ್ರತ್ಯೇಕ ಪ್ರಾಂತದಲ್ಲಿ ಸ್ಥಿರಪಟ್ಟಿದೆ. ಅದೇ ಸಮಯದಲ್ಲಿ ಇವರು ಇತರ ಪ್ರಾಂತಗಳನ್ನು ತಮ್ಮ ಅಧೀನದಲ್ಲಿ ತಂದುಕೊಳ್ಳುವ ಪ್ರಯತ್ನಮಾಡಿದರು. ಗಂಗಾನದಿ ಕಣಿವೆ ಪ್ರಾಂತದಲ್ಲಿನ ಕನೌಜ್ ಒಂದು ಪ್ರತ್ಯೇಕವಾದ ಪ್ರಾಂತ. ಈ ಪ್ರಾಂತದ ಮೇಲೆ ನಿಯಂತ್ರಣಕ್ಕಾಗಿ ಗೂರ್ಜರ ಪ್ರತಿಹಾರರು, ರಾಷ್ಟ್ರಕೂಟರು, ಪಾಲವಂಶದ ರಾಜರು ಅನೇಕ ಶತಮಾನಗಳು ಹೋರಾಡಿದರು. ಈ ಸುಧೀರ್ಘ ಹೋರಾಟದಲ್ಲಿ ಮೂರು ಪಕ್ಷಗಳು ಪಾಲ್ಗೊಂಡಿವೆ. ಆದ್ದರಿಂದ ಇದನ್ನು ಇತಿಹಾಸಕಾರರು "ತ್ರೈಪಾಕ್ಷಿಕ ಹೋರಾಟ" ಎಂದಿದ್ದಾರೆ.

◆ ನಕ್ಷೆ–1 ಪರಿಶೀಲಿಸಿ, ರಾಜರು ಕನೌಜ್ ಮತ್ತು ಗಂಗಾನದಿ ಕಣಿವೆ ಪ್ರಾಂತವನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳಬೇಕೆಂದು ಬಯಸಲು ಕಾರಣಗಳು ಯಾವುವು?

ಮಹಮ್ಮದ್ ಘಜಿನಿ:

ಸಾ.ಶ. 997–1030ರವರೆಗೆ ಆಫ್ಘನಿಸ್ತಾನ್‌ನನ್ನು ಆಳಿದ ಘಜಿನಿ ಮಧ್ಯ ಏಷಿಯಾ, ಇರಾನ್, ಭಾರತ ಉಪಖಂಡದ ವಾಯುವ್ಯ ಪ್ರಾಂತಗಳಿಗೆ ತನ್ನ ರಾಜ್ಯವನ್ನು ವಿಸ್ತರಿಸಿದನು. ಆತನು ಉತ್ತರ ಭಾರತ ದೇಶದ ಮೇಲೆ ಅನೇಕ ಸಾರಿ ದಾಳಿ ಮಾಡಿ ಗುಜರಾತನಲ್ಲಿನ ಸೋಮನಾಥ ದೇವಾಲಯ ದೊಂದಿಗೆ ಅನೇಕ ಸಂಪದ್ಭರಿತ ದೇವಾಲಯಗಳನ್ನು ಧ್ವಂಸಗೊಳಿಸಿ ಸಂಪತ್ತನ್ನು ದೋಚಿದನು. ಮಹಮ್ಮದ್ ದೋಚಿದ ಸಂಪತ್ತಿನಲ್ಲಿಯ ಬಹಳಷ್ಟನ್ನು ರಾಜಧಾನಿ ನಿರ್ಮಾಣಕ್ಕೆ ವೆಚ್ಚಸಿದನು. ಸುಮಾರು ಪ್ರತಿವರ್ಷವು ಉಪಖಂಡದ ಮೇಲೆದಾಳಿ ಮಾಡಿದನು. ಸಂಪತ್ ಭರಿತವಾದ ಗುಜರಾತದಲ್ಲಿನ ಸೋಮನಾಥದಂತಹ ದೇವಾಲಯಗಳು ಆತನ ಗುರಿಯಾಗಿದ್ದವು. ದೋಚಿ ಕೊಂಡುಹೋದ ಸಂಪತ್ತಿನಲ್ಲಿ ಬಹಳಷ್ಟು ತನ್ನ ರಾಜಧಾನಿಯನ್ನು ಭವ್ಯವಾಗಿ ನಿರ್ಮಿಸುವುದಕ್ಕೆ ಮಹಮ್ಮದ್ ಘಜ್ನಿ ಬಳಸಿದನು.

ಮಹಮ್ಮದ್ ಘಜಿನಿ ತಾನು ಆಕ್ರಮಿಸಿದ ಪ್ರಾಂತಗಳ ಪ್ರಜೆಗಳ ಬಗ್ಗೆ ಬಹಳ ವಿಷಯಗಳು ತಿಳಿದುಕೊಳ್ಳುವುದರಲ್ಲಿ ಆಸಕ್ತಿ ತೋರಿಸುತ್ತಿದ್ದನು. ಆಲ್‌ಬೆರೋನಿ ಎನ್ನುವ ವಿದ್ವಾಂಸನಿಗೆ ಭಾರತ ಉಪಖಂಡದ ಬಗ್ಗೆ ರಚಿಸುವ ಕೆಲಸ ಒಪ್ಪಿಸಿದನು. "ಕಿತಾಬ್ ಆಲ್ ಹಿಂದ್" ಎಂದು ಕರೆಯಲ್ಪಡುವ ಈ ಅರಬಿಕ್ ಗ್ರಂಥ ಇತಿಹಾಸಕಾರರಿಗೆ ಒಂದು ಆಧಾರವಾಯಿತು. ಇದನ್ನು ರಚಿಸಲು ಅಲ್‌ಬಿರುನಿ ಸಂಸ್ಕೃತ ವಿದ್ವಾಂಸರನ್ನು ಸಂಪರ್ಕಿಸಿದನು.

ಚೌಹಾನರು:

ನಂತರದ ಕಾಲದಲ್ಲಿ ಚೌವ್ಹಾಣರಾಗಿ ಕರೆಯಲ್ಪಟ್ಟ ಚಹಮಾನರು ದೆಹಲಿ, ಆಜ್‌ಮೀರ್ ಪ್ರಾಂತಗಳನ್ನು ಆಳಿದರು. ಅವರು ಪಶ್ಚಿಮದಿಂದ ಪೂರ್ವಕ್ಕೆ ಕಡೆ ರಾಜ್ಯ ವಿಸ್ತರಣೆಮಾಡಲು ಪ್ರಯತ್ನಮಾಡಿದರು. ಗುಜರಾತದಲ್ಲಿನ ಚಾಳುಕ್ಯರು, ಪಶ್ಚಿಮ–ಉತ್ತರ ಪ್ರಾದೇಶದಲ್ಲಿನ ಗಹದವಳರು ಚೌವ್ಹಾಣರನ್ನು ವಿರೋಧಿಸಿದರು. ಆಫ್ಘನ್ನಿಗೆ ಸೇರಿದ ಸುಲ್ತಾನ್ ಮಹಮ್ಮದ್ ಘೋರಿಯನ್ನು 1191ರಲ್ಲಿ ಚವ್ಹಾಣ್ ವಂಶಸ್ಥರಾದ ಮೂರನೇ ಪೃಥ್ವಿರಾಜ್ (1168–1192) ಸೋಲಿಸಿದನು. ಆದರೆ 1192ರಲ್ಲಿ ಪೃಥ್ವಿರಾಜ್ ಘೋರಿ ಕೈಯಲ್ಲಿ ಸೋತುಹೋದನು.

◆ ನಕ್ಷೆ–1ನೋಡಿರಿ ಚಹಮನರು ತಮ್ಮ ರಾಜ್ಯವನ್ನು ಏಕೆ ವಿಸ್ತರಿಸಬೇಕೆಂದರು ಚರ್ಚಿಸಿರಿ.

SCERT TELANGANA

ಎರಡನೆಯ ಭಾಗ


ಚೋಳರು:

ಈಗ ದಕ್ಷಿಣ ಭಾರತ ದೇಶವನ್ನು ಕುರಿತು ತಿಳಿದುಕೊಳ್ಳೋಣ. ದಕ್ಷಿಣ ಭಾರತದೇಶದಲ್ಲಿ ಸಂಪೂರ್ಣ ಬರೆಯಲ್ಪಟ್ಟ ಇತಿಹಾಸದಲ್ಲಿ ಚೋಳರ ಆಳ್ವಿಕೆ ಒಂದು. ಇವರು ಆಡಳಿತ ಪರವಾಗಿ ಹೇಗೆ ಜಯ ಸಾಧಿಸಿದರೋ ತಿಳಿದುಕೊಳ್ಳೋಣ.

ಉರಯೂರ್ ನಿಂದ ತಂಜಾವೂರಿನ ವರೆಗೆ:

ಚೋಳರು ಅಧಿಕಾರಕ್ಕೆ ಹೇಗೆ ಬಂದರು? ಮುತ್ತೂರಾಯರ್ ಎಂದು ಕರೆಯಲ್ಪಡುವ ಒಂದು ಚಿಕ್ಕ ಮುಖ್ಯ ಕುಟುಂಬ ಕಾವೇರಿ ಡೆಲ್ಟಾ ಪ್ರಾಂತದ ಮೇಲೆ ಅಧಿಕಾರ ಪಡೆಯಿತು. ಅವರು ಕಾಂಚೀಪುರವನ್ನು ಆಳುವ ಪಲ್ಲವರಿಗೆ ಸಾಮಂತರು. 9ನೇ ಶತಮಾನದ ಮಧ್ಯದಲ್ಲಿ ಉರಯೂರಿಗೆ ಸೇರಿದ ಪುರಾತನ ಚೋಳ ವಂಶಸ್ಥರಾದ ವಿಜಯಾಲಯನು ಮುತ್ತುರಾಯರಿಗೆ ಸೇರಿದ ಡೆಲ್ಟಾ ಪ್ರಾಂತವನ್ನು ಆಕ್ರಮಿಸಿಕೊಂಡನು. ಆತನು ತಂಜಾವೂರು ಪಟ್ಟಣವನ್ನು ಮತ್ತು ದೇವತೆಗೆ ನಿಶುಂಭಸೂದಿನಿ ಎಂಬ ದೇವಾಲಯವನ್ನು ನಿರ್ಮಿಸಿದನು.

ಭಾರತ ದೇಶ ಕ್ರಿ.ಶ. 1100 ಕುಲೋತ್ತುಂಗ ಚೋಳನ ಸಾಮ್ರಾಜ್ಯ.



ನಕ್ಷೆ–2: ಚೋಳ ಸಾಮ್ರಾಜ್ಯ, ಪಕ್ಕದ ರಾಜ್ಯಗಳು.



ಚಿತ್ರ 11.3 ಗಂಗೈಕೊಂಡ ಚೋಳಪುರಂ ದೇವಾಲಯದ ಮೇಲ್ಛಾವಣಿಯ ಇಳಿಜಾರನ್ನು ಗಮನಿಸಿರಿ. ದೇವಾಲಯದ ಹೊರ ಗೋಡೆಗಳನ್ನು ದೊಡ್ಡ ದೊಡ್ಡ ಕಲ್ಲಿನ ಶಿಲೆಗಳಿಂದ ಅಲಂಕರಿಸಿದ ರೀತಿಯನ್ನು ಕೂಡಾ ಗುರ್ತಿಸಿರಿ.

ವಿಜಯಾಲಯನ ನಂತರ ಬಂದ ರಾಜರು ಪಕ್ಕದ ರಾಜ್ಯಗಳನ್ನು ಆಕ್ರಮಿಸಿಕೊಳ್ಳುವುದರಿಂದ ಇವರ ರಾಜ್ಯ ಪರಿಮಾಣ, ಅಧಿಕಾರ ಹೆಚ್ಚಾದವು. ಪಾಂಡ್ಯ, ಪಲ್ಲವರ ಉತ್ತರ–ದಕ್ಷಿಣ ಪ್ರಾಂತಗಳು ಇವರ ರಾಜ್ಯದಲ್ಲಿ ಅಂತರ್ಭಾಗವಾದವು. ಚೋಳರಲ್ಲಿ ಅತಿ ಶಕ್ತಿವಂತನಾಗಿ 1ನೇ ರಾಜರಾಜನು ಕ್ರಿ.ಶ. 985ರಲ್ಲಿ ಅಧಿಕಾರಕ್ಕೆ ಬಂದು ಆ ಪ್ರಾಂತಗಳನ್ನು ತನ್ನ ಅಧೀನಕ್ಕೆ ತಂದುಕೊಂಡನು. ಸಾಮ್ರಾಜ್ಯದ ಆಡಳಿತವನ್ನು ಪುನರ್ ವ್ಯವಸ್ಥೀಕರಿಸಿದನು. ಒಂದನೇ ರಾಜರಾಜನ ಮಗನಾದ ಒಂದನೇ ರಾಜೇಂದ್ರನು ತನ್ನ ತಂದೆಯ ರಾಜನೀತಿಯನ್ನು ಅನುಸರಿಸಿ, ಗಂಗಾನದಿ ಕಣಿವೆಯನ್ನು, ಶ್ರೀಲಂಕ, ಆಗ್ನೇಯ ಏಷ್ಯಾ ಪ್ರಾಂತಗಳ ಮೇಲೆ ದಾಳಿಮಾಡಿದನು. ಇದಕ್ಕಾಗಿ ನೌಕಾದಳವನ್ನು ಅಭಿವೃದ್ಧಿ ಪಡಿಸಿದನು.

ಅದ್ಭುತ ದೇವಾಲಯಗಳು–ಕಂಚಿನ ಶಿಲ್ಪಕಲೆ

ಒಂದನೇ ರಾಜರಾಜ, ಒಂದನೇ ರಾಜೇಂದ್ರನು ತಂಜಾವೂರಿನ ಗಂಗೈಕೊಂಡ ಚೋಳಾಪುರಂನಲ್ಲಿ ನಿರ್ಮಿಸಿದ ದೊಡ್ಡ ದೇವಾಲಯಗಳು ಅದ್ಭುತ ನಿರ್ಮಾಣಕ್ಕೆ, ಶಿಲ್ಪಕಲೆಗೆ ನಿದರ್ಶನಗಳು. ಜನರು ಅವುಗಳ ಸುತ್ತಮುತ್ತಲೂ ಸ್ಥಿರಪಡಲು ಚೋಳರು ನಿರ್ಮಿಸಿದ ದೇವಾಲಯಗಳು ಕೇಂದ್ರಗಳಾದವು.

SCERT TELANGANA



ಚಿತ್ರ 11.9 ಚೋಳರ ಕಾಲದ ಕಂಚಿನ ಶಿಲ್ಪ ಈ ಶಿಲ್ಪವನ್ನು ಎಷ್ಟು ಎಚ್ಚರಿಕೆಯಿಂದ ಅಲಂಕರಿಸಿರುವರೋ ಗಮನಿಸಿರಿ.

ಇವು ಕರಕುಶಲ ಉತ್ಪತ್ತಿಗಳಿಗೆ ಕೇಂದ್ರಗಳಾದವು. ರಾಜರು, ಇತರರು ಸಮರ್ಪಿಸಿದ ಭೂಮಿಗಳಿಂದ ದೇವಾಲಯಗಳು ಶ್ರೀಮಂತವಾದವು. ದೇವಾಲಯಗಳಲ್ಲಿ ಕೆಲಸ ಮಾಡುವ ಪೂಜಾರಿಗಳು, ಹೂವಿನ ಹಾರಗಳು ತಯಾರಿಸುವವರು, ಅಡಿಗೆಯವರು, ದೇವಾಲಯವನ್ನು ಶುಭ್ರಮಾಡುವವರು, ಸಂಗೀತ ವಾದ್ಯಕಾರರು, ನಾಟ್ಯಕಾರಿಣಿಗಳು ಮೊದಲಾದವರ ಪೋಷಣೆಗಾಗಿ ಈ ಭೂಮಿಗಳಿಂದ ಬೆಳೆದ ಬೆಳೆಗಳು ಉಪಯೋಗವಾಗುತ್ತಿದ್ದವು. ದೇವಾಲಯಗಳು ಕೇವಲ ಪೂಜಾಕೇಂದ್ರಗಳಾಗಿ ಮಾತ್ರವಲ್ಲದೆ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಜೀವನ ಕೇಂದ್ರಗಳಾಗಿ ಬೆಳಗಿದವು.

ದೇವಾಲಯಗಳೊಂದಿಗೆ ಅನುಬಂಧವಾಗಿ ಕರಕುಶಲಕಾರರು ಬಹಳ ಮಟ್ಟಿಗೆ ಪ್ರತ್ಯೇಕವಾದ ಕಂಚಿನ ವಿಗ್ರಹಗಳು ತಯಾರುಮಾಡುತ್ತಿದ್ದರು. ಚೋಳರ ಕಂಚಿನ ವಿಗ್ರಹಗಳು ಪ್ರಪಂಚದಲ್ಲಿ ಸುಂದರವಾದವುಗಳೆಂದು ಪರಿಗಣಿಸಿದ್ದಾರೆ. ಅನೇಕ ವಿಗ್ರಹಗಳು ದೇವತೆಗಳವಾ ಗಿದ್ದರೂ, ಕೆಲವು ಭಕ್ತರವು ಕೂಡ ಇವೆ.

ವ್ಯವಸಾಯ ಮತ್ತು ನೀರಾವರಿ:

ವ್ಯವಸಾಯದಲ್ಲಿ ನೂತನ ಅಭಿವೃದ್ಧಿ ಕಾರ್ಯಗಳು ಕೈಗೊಳ್ಳುವ ಮೂಲಕವೇ ಚೋಳರು ಬಹಳ ಸಾಧನೆಗಳನ್ನು ಸಾಧಿಸಿದರು (ನಕ್ಷೆ–2 ನೋಡಿ) ಕಾವೇರಿ ನದಿ ಬಂಗಾಳಕೊಲ್ಲಿಯಲ್ಲಿ ಸೇರುವ ಮೊದಲು ಚಿಕ್ಕ ಚಿಕ್ಕ ಕವಲುಗಳಾಗಿ ಒಡೆಯುವುದನ್ನು



ಚಿತ್ರ 11.5 ತಮಿಳುನಾಡಿನಲ್ಲಿಯ ಸಾ.ಶ. 9ನೇ ಶತಮಾನ ಕಾಲದ ವ್ಯವಸಾಯ ಕಾಲುವೆಗಳಿಗೆ ಹರಿಸುವ ನೀರನ್ನು ನಿಯಂತ್ರಿಸುವ ತೂಬು

SCERT TELANGANA

ಗಮನಿಸುವಿರಿ. ಈ ಕವಲುಗಳೂ ಆಗಾಗ ಉಕ್ಕಿಹರಿದು ಅವುಗಳ ತೀರವನ್ನು ಫಲವಾತ್ತಾಗಿ ಮಾಡುತ್ತಿದ್ದವು. ಈ ಪ್ರಾಂತದಲ್ಲಿ ಬೆಳೆಯುವ ಬೆಳೆಗಳಿಗೆ ಮುಖ್ಯವಾಗಿ ಭತ್ತದ ಬೆಳೆಗೆ ಬೇಕಾದ ನೀರು, ತೇವ ಈ ಕವಲುಗಳಿಂದ ಹರಿಯುವ ನೀರು ಒದಗಿಸುತ್ತಿತ್ತು.

ತಮಿಳುನಾಡಿನಲ್ಲಿರುವ ಇತರ ಪ್ರಾಂತಗಳಲ್ಲಿ ವ್ಯವಸಾಯ ಅಭಿವೃದ್ಧಿ ಹೊಂದಿದ್ದರೂ, ದೊಡ್ಡ ಮಟ್ಟದಲ್ಲಿ ವ್ಯವಸಾಯ 5–6ನೇ ಶತಮಾನದ ಮಧ್ಯಕಾಲದಲ್ಲಿ ನಡೆಯಿತು. ಕೆಲವು ಪ್ರಾಂತಗಳಲ್ಲಿ ಕಾಡುಗಳನ್ನು ಕಡಿಯಬೇಕಾಗಿ ಬಂದಿತು. ಇನ್ನೂಕೆಲವು ಪ್ರಾಂತಗಳಲ್ಲಿ ನೆಲವನ್ನು ಸಮತಲವಾಗಿ ಮಾಡಬೇಕಾಗಿ ಬಂದಿತು. ಡೆಲ್ಟಾ ಪ್ರಾಂತಗಳಲ್ಲಿ ಪ್ರವಾಹಗಳನ್ನು ನಿವಾರಿಸಲು ಕಟ್ಟೆಗಳುಕಟ್ಟಿ, ಹೊಲಗಳಿಗೆ ನೀರು ಹಾಯಿಸಲು ಕಾಲುವೆಗಳ ನಿರ್ಮಾಣ ಮಾಡಿದರು. ಬಹಳ ಪ್ರಾಂತಗಳಲ್ಲಿ ವರ್ಷಕ್ಕೆ ಎರಡು ಬೆಳೆಗಳು ಸಹ ಬೆಳೆಸುತ್ತಿದ್ದರು.

ಬಹಳ ಸಂದರ್ಭಗಳಲ್ಲಿ ಬೆಳೆಗಳಿಗೆ ಕೃತ್ರಿಮವಾಗಿ ನೀರು ಹಾಯಿಸಬೇಕಾಗಿ ಬರುತ್ತಿತ್ತು. ನೀರಾವರಿಗಾಗಿ ವಿವಿಧ ಪದ್ಧತಿಗಳನ್ನು ಉಪಯೋಗಿಸುತ್ತಿದ್ದರು. ಕೆಲವು ಪ್ರಾಂತಗಳಲ್ಲಿ ಬಾವಿಗಳನ್ನು ತೋಡಿದರು. ಇನ್ನೂಕೆಲವು ಪ್ರಾಂತಗಳಲ್ಲಿ ಮಳೆನೀರನ್ನು ಸಂಗ್ರಹಿಸಲು ದೊಡ್ಡ ದೊಡ್ಡ ಕೆರೆಗಳನ್ನು ನಿರ್ಮಿಸಿದರು.

ನೀರಾವರಿ ಸೌಕರ್ಯಗಳ ವಿಸ್ತರಣೆಗೆ ಯೋಜನೆ, ಸಂಪನ್ಮೂಲಗಳ, ಕಾರ್ಮಿಕರ ನಿರ್ವಹಣೆ ಗಳಂತಹ ಅನೇಕ ಅಂಶಗಳು ಒಳಗೊಂಡಿರುತ್ತವೆ ಎನ್ನುವ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅನೇಕ ರಾಜರು, ಗ್ರಾಮಗಳಲ್ಲಿನ ಪ್ರಜೆಗಳು ಕೂಡ ಈ ಕಾರ್ಯಕ್ರಮಗಳಲ್ಲಿ ಬಹಳ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು.

ಸಾಮ್ರಾಜ್ಯದ ಆಡಳಿತ ವಿಧಾನ:

ಅಂದಿನ ಆಡಳಿತ ವ್ಯವಸ್ಥೆ ಹೇಗೆ ಇರುತ್ತಿತ್ತು? ರೈತರ ಸ್ಥಿರನಿವಾಸಗಳನ್ನು "ಊರು" ಎನ್ನುತ್ತಿದ್ದರು. ಇವು ನೀರಾವರಿ, ವ್ಯವಸಾಯ ವಿಸ್ತರಣೆಯಿಂದ ಸಮೃದ್ಧಿ ಯಾಗಿದ್ದವು. ಇಂತಹ ಊರ್‌ಗಳು ಕೆಲವುಗಳನ್ನು ಸೇರಿಸಿ ನಾಡುಗಳಾಗಿ ಏರ್ಪಡುತ್ತಿದ್ದವು. ಗ್ರಾಮಸಭೆ, ನಾಡುಗಳು, ಆಡಳಿತ ಸಂಬಂಧ ವ್ಯವಹಾರಗಳಲ್ಲದೆ, ನ್ಯಾಯಪರಿಪಾಲನೆ, ತೆರಿಗೆ ವಸೂಲಿ ಸಹ ಮಾಡುತ್ತಿದ್ದವು.

ವೆಲ್ಲಾಲ ಜಾತಿಗೆ ಸೇರಿದ ಶ್ರೀಮಂತ ರೈತರು ಚೋಳರ ಸರ್ಕಾರದಲ್ಲಿ ನಾಡುಗಳಿಗೆ ಸಂಬಂಧಿಸಿದ ಆಡಳಿತ ವ್ಯವಹಾರಗಳು ನೋಡಿಕೊಳ್ಳುತ್ತಿದ್ದರು. ಚೋಳರಾಜರು ಶ್ರೀಮಂತರಾದ ಭೂಮಾಲಿಕರಿಗೆ ಮೂವ್ವೆಂದವೇಲನ್, ಅರಯ್ಯರ್(ಪ್ರಮುಖರು) ಗಳಂತಹ ಗೌರವಸೂಚಕ ಬಿರುದುಗಳನ್ನು ಕೊಟ್ಟು, ರಾಜ್ಯ, ಕೇಂದ್ರಸ್ಥಾಯಿಯಲ್ಲಿ ಮುಖ್ಯವಾದ ಜವಾಬ್ದಾರಿಗಳನ್ನು ಒಪ್ಪಿಸುತ್ತಿದ್ದರು.

ಭೂಮಿಯ ವಿಧಗಳು:

ಚೋಳರ ಶಾಸನಗಳು ಭೂಮಿಗಳಲ್ಲಿ ಬಗೆಗಳನ್ನು ಈ ವಿಧವಾಗಿ ಹೆಸರಿಸಿವೆ.

ವೆಲ್ಲನ್ ವಾಗೈ: ಬ್ರಾಹ್ಮಣೇತರ ರೈತರಿಗೆ ಸೇರಿದ ಭೂಮಿ.ಬ್ರಹ್ಮದೇಯ: ಬ್ರಾಹ್ಮಣರಿಗೆ ಬಹುಕರಿಸಿದ ಭೂಮಿ.

ಶಾಲಭೋಗ: ಪಾಠಶಾಲೆ ನಿರ್ವಹಣೆಗೆ ಉಪಯೋಗಿಸುವ ಭೂಮಿ.

ದೇವದಾನ, ತಿರುನಾಮತ್ತುಕ್ಕನಿ:ದೇವಾಲಯಗಳಿಗೆ ಬಹುಕರಿಸಿದ (ನೀಡಿದ) ಭೂಮಿ.

ಪಳ್ಳಿಚ್ಚಂದಂ: ಜೈನ ಸಂಸ್ಥೆಗಳಿಗೆ ದಾನವಾಗಿ ಕೊಟ್ಟ ಭೂಮಿ.

ಬ್ರಾಹ್ಮಣರು ಆಗಾಗ್ಗೆ ಭೂದಾನಗಳನ್ನು ಇಲ್ಲವೇ ಬ್ರಹ್ಮದೇಯಗಳನ್ನು ಸ್ವೀಕರಿಸುವುದನ್ನು ನಾವು ನೋಡಿದ್ದೇವೆ. ಫಲಿತಾಂಶವಾಗಿ ದಕ್ಷಿಣ ಭಾರತ ದೇಶದಲ್ಲಿನ ಇತರ ಪ್ರಾಂತಗಳಂತೆ ಕಾವೇರಿನದಿ ಕಣಿವೆಯಲ್ಲಿ ಸಹ ಬ್ರಾಹ್ಮಣರು ಸ್ಥಿರಪಟ್ಟರು.

ಪ್ರತಿ ಬ್ರಹ್ಮದೇಯ ಹೆಸರಾಂತ ಬ್ರಾಹ್ಮಣ

SCERT TELANGANA

ಭೂಮಾಲಿಕರ ಮಂಡಳಿ ಅಥವಾ ಸಭೆಯ ಸಂರಕ್ಷಣೆಯಲ್ಲಿ ಇರುತ್ತಿತ್ತು. ಈ ಸಭೆಗಳು ಬಹಳ ಸಮರ್ಥವಾಗಿ ಕೆಲಸಮಾಡಿವೆ. ಇವರ ನಿರ್ಣಯಗಳನ್ನು ಶಾಸನಗಳ ಮೇಲೆ, ಆಗಾಗ್ಗೆ ದೇವಾಲಯಗಳ ಗೋಡೆಗಳ ಮೇಲೆ ದಾಖಲು ಮಾಡಿದ್ದಾರೆ. "ನಗರ" ಎನ್ನುವ ವಾಣಿಜ್ಯ ಸಂಘಗಳು ಸಹ ಆಡಳಿತ ವ್ಯವಹಾರದಲ್ಲಿ ಸಂದರ್ಭಾನುಸಾರವಾಗಿ ಪಾಲ್ಗೊಳ್ಳುತ್ತಿದ್ದವು.

"ಸಭೆ" ಯಾವ ವಿಧವಾಗಿ ನಿರ್ವಹಿಸುತ್ತಿದ್ದರೋ, ತಮಿಳುನಾಡುನಲ್ಲಿನ ಚೆಂಗಲ್‌ಪಟ್ಟು ಜಿಲ್ಲೆಯಲ್ಲಿನ ಉತ್ತರ ಮೇರೂರು ಶಾಸನ ತಿಳಿಸುತ್ತದೆ. ಸಭದಲ್ಲಿ ನೀರಾವರಿ ಸೌಕರ್ಯಗಳಿಗೆ, ತೋಟಗಳು, ದೇವಾಲಯಗಳು ಮೊದಲಾದವುಗಳನ್ನು ಸಂರಕ್ಷಿಸಲು ಪ್ರತ್ಯೇಕ ಕಮಿಟಿಗಳು ಇದ್ದವು. ಈ ಕಮಿಟಿಗಳಿಗೆ ಅರ್ಹರಾದ ಸದಸ್ಯರ ಹೆಸರುಗಳನ್ನು ಚಿಕ್ಕ ತಾಳೆಗೆರೆಯ ಚೀಟಿಗಳ ಮೇಲೆ ಬರೆಯುತ್ತಿದ್ದರು. ಈಚೀಟಿಗಳನ್ನೆಲ್ಲ ಒಂದು ಪಾತ್ರೆಯಲ್ಲಿ ಹಾಕಿ ಒಬ್ಬ ಚಿಕ್ಕ ಬಾಲಕನಿಂದ ಒಂದೊಂದಾಗಿ ಚೀಟಿಯನ್ನು ಕಮಿಟಿಗಾಗಿ ತೆಗೆಸುತ್ತಿದ್ದರು.

ಶಾಸನ ವಿಷಯಗಳು:

ಸಭೆಯಲ್ಲಿ ಯಾರು ಸದಸ್ಯರಾಗಿ ಇರುತ್ತಿದ್ದರು? ಉತ್ತರ ಮೇರೂರು ಶಾಸನ ಕೆಳಗಿನಂತೆ ತಿಳಿಯಪಡಿಸುತ್ತದೆ:

ಸದಸ್ಯನಾಗಿ ಮುಂದುವರೆಯುವರೆಲ್ಲರೂ ಖಂಡಿತವಾಗಿ ತೆರಿಗೆ ಸಲ್ಲಿಸುವ ಭೂಮಿಯನ್ನು ಹೊಂದಿರಬೇಕು.

ಅವರು ಸ್ವಂತ ಮನೆ ಹೊಂದಿರಬೇಕು. ಅವರ ವಯಸ್ಸು 35–70 ವರ್ಷಗಳ ನಡುವೆ ಇರಬೇಕು. ವೇದಗಳ ಬಗ್ಗೆ ತಿಳಿದಿರಬೇಕು. ಅವರು ಆಡಳಿತ ವಿಷಯಗಳ ಬಗ್ಗೆ ಚೆನ್ನಾಗಿ ಅರಿತವರಾಗಿದ್ದು, ಪ್ರಾಮಾಣಿಕರಾಗಿ ಇರಬೇಕು. ಯಾರಾದರೂ ಹಿಂದಿನ ಮೂರು ವರ್ಷಗಳಿಂದ ಕಮಿಟಿ ಸದಸ್ಯನಾಗಿ ಮುಂದುವರೆದರೆ ಆತನು ಇನ್ನೊಂದು ಕಮಿಟಿ ಸದಸ್ಯನಾಗಬಾರದು. ಹಿಂದೆ ಲೆಕ್ಕಪತ್ರ ತೋರಿಸದವರಾಗಲಿ, ಅವರ ಬಂಧುಗಳಾಗಲಿ ಚುನಾವಣೆಗೆ ಪೋಟಿ ಮಾಡಬಾರದು.

◆ ಈ ಸಭೆಯಲ್ಲಿ ಸ್ತ್ರೀಯರು ಪಾಲ್ಗೊಳ್ಳುತ್ತಿದ್ದರೇ? ಈ ಕಮಿಟಿ ಸದಸ್ಯರನ್ನು ಲಾಟರಿಮೂಲಕ ಆಯ್ಕೆ ಮಾಡುವುದು ಉಪಯೋಗಕರವೇ? ರಾಜರು, ಶಕ್ತಿವಂತರ ಬಗ್ಗೆ ಶಾಸನಗಳು ತಿಳಿಯಪಡಿಸುತ್ತಿದ್ದಾಗ 12ನೇ ಶತಮಾನಕ್ಕೆ ಸೇರಿದ ತಮಿಳು ಭಾಷೆಯಲ್ಲಿನ "ಪೆರಿಯಾ ಪುರಾಣ" ಸಾಮಾನ್ಯರ ಬಗ್ಗೆ ತಿಳಿಯಪಡಿಸುತ್ತದೆ.

ಅದನೂರು ಗ್ರಾಮದ ಮೇರೆಯಲ್ಲಿ ಪುಲಯರು ತಾಳೆಗೆರೆಯ ಗುಡಿಸಲುಗಳಲ್ಲಿ ವಾಸಿಸುತ್ತಾ ವ್ಯವಸಾಯ ಕೂಲಿಗಳಾಗಿ, ಗುಲಾಮರಾಗಿ ಜೀವನ ಸಾಗಿಸುತ್ತಿದ್ದರು. ಅವರ ಗುಡಿಸುಗಳ ಹೊಸಿಲು ಚರ್ಮದ ಪಟ್ಟಿಗಳಿಂದ ಮುಚ್ಚಿರುತ್ತಿದ್ದವು. ಮನೆಯ ಮುಂದೆ ಕೋಳಿಗಳು ಓಡಾಡುತ್ತಿದ್ದವು, ಕಪ್ಪು ಕಬ್ಬಿಣದ ಕಡಗಗಳನ್ನು ಹಾಕಿದ ಮಕ್ಕಳು ಆಡುತ್ತಾ, ಕುಣಿಯುತ್ತಾ, ಚಿಕ್ಕಮಕ್ಕಳೊಂದಿಗೆ ಆಡುತ್ತಾ ಇರುತ್ತಾರೆ. ಮಹಿಳಾ ಕಾರ್ಮಿಕರು ಮರಡು (ಅರ್ಜುನ) ಮರದ ಕೆಳಗೆ, ತಮ್ಮ ಮಗುವನ್ನು ಒಂದು ಚರ್ಮದ ಮೇಲೆ ಮಲಗಿಸುತ್ತಿದ್ದರು. ಮಾವಿನ ಮರದ ಕೊಂಬೆಗಳಿಗೆ ನಗಾರಿ (ಡ್ರಮ್)ಯನ್ನು ತೂಗು ಹಾಕುತ್ತಿದ್ದರು. ತೆಂಗಿನ ಮರದ ನೆರಳಿನಲ್ಲಿ ನಾಯಿ ಮರಿಗಳು ಇರುತ್ತಿದ್ದವು. ಹುಂಜಗಳು ಸೂರ್ಯೋದಯಕ್ಕೆ ಮೊದಲೇ ಕೂಗುವುದರಿಂದ ಪುಲಯ್ಯಾರರು ಅವರ ದಿನಚರಿ ಕೆಲಸಗಳು ಪ್ರಾರಂಭಿಸುತ್ತಿದ್ದರು. ಕಂಜೀಮರದ ಕೆಳಗೆ ಕವಲುಗಳಾಗಿ ಒಡೆದ ಕೂದಲುಗಳಿಂದ ಪುಲಯ್ಯಾ ಸ್ತ್ರೀಯರು ಹಾಡುಗಳು ಹಾಡುತ್ತಾ ಭತ್ತ ಕುಟ್ಟುತ್ತಿದ್ದರು.

◆ ಗ್ರಾಮದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳನ್ನು ವಿವರಿಸಿರಿ.

SCERT TELANGANA

ಮುಖ್ಯಪದಗಳು :

1) ಸಾಮಂತರು 2) ದೇವಾಲಯ 3) ನಾಡು

4) ಸಭೆ 5) ರಾಜ್ಯ 6) ಸುಲ್ತಾನ

ಪ್ರಾಜೆಕ್ಟ್ ಕೆಲಸ :

1) ನಕ್ಷೆ–1ನ್ನು ಪರಿಶೀಲಿಸಿ ತೆಲಂಗಾಣದಲ್ಲಿ ಯಾವುದಾದರೂ ರಾಜ್ಯಗಳು ಇವೆಯೇ ತಿಳಿದುಕೊಳ್ಳಿ?

2) ಈ ಪಾಠದಲ್ಲಿ ನೋಡಿದ ದೇವಾಲಯಗಳಿಗೆ ನಿಮ್ಮ ಪರಿಸರ ಪ್ರಾಂತಗಳಲ್ಲಿ ನೋಡಿದ ಇಂದಿನ ದೇವಾಲಯಗಳೊಂದಿಗೆ ಹೋಲಿಸಿ ಗಮನಸಿದ ಹೋಲಿಕೆಗಳನ್ನು, ವ್ಯತ್ಯಾಸಗಳನ್ನು ಪ್ರಾಮುಖ್ಯತೆಕೊಟ್ಟು ವಿವರಿಸಿರಿ.

3) ಇಂದು ವಸೂಲಿ ಮಾಡುತ್ತಿರುವ ತೆರಿಗೆಗಳ ಬಗ್ಗೆ ವಿವರವಾಗಿ ತಿಳಿದುಕೊಳ್ಳಿ. ಇವು ಹಣದ, ಶ್ರಮರೂಪದ ಇಲ್ಲವೇ ವಸ್ತುರೂಪಗಳಲ್ಲಿ ಇವೆಯಾ?

ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1) ತ್ರಿಪಕ್ಷ ಹೋರಾಟದಲ್ಲಿ ಪಾಲ್ಗೊಂಡವರು ಯಾರು?

2) ಚೋಳ ಸಾಮ್ರಾಜ್ಯದಲ್ಲಿ "ಸಭ" ಎನ್ನುವ ಕಮಿಟಿಗೆ ಸದಸ್ಯರಾಗಿ ಆಯ್ಕೆಯಾಗಲು ಇರುವ ಅರ್ಹತೆಗಳೇನು?

3) ಚಹಮನ್ ವಂಶಸ್ಥರ ಅಧೀನದಲ್ಲಿದ್ದ ಎರಡು ಮುಖ್ಯ ನಗರಗಳಾವುವು?

4) ರಾಷ್ಟ್ರಕೂಟರು ಹೇಗೆ ಶಕ್ತಿವಂತರಾದರು?

5) ಪ್ರಜೆಗಳ ಒಪ್ಪಿಗೆ ಪಡೆಯಲು ಹೊಸ ರಾಜ್ಯಗಳು ಏನು ಮಾಡಿದವು?

6) ತಮಿಳ ಪ್ರಾಂತದಲ್ಲಿ ಎಂತಹ ನೀರಾವರಿ ಕಾರ್ಯಗಳನ್ನು ಅಭಿವೃದ್ಧಿಮಾಡಿದರು?

7) ಚೋಳರ ದೇವಾಲಯಗಳೊಂದಿಗೆ ಅನುಬಂಧವಾದ ಕಾರ್ಯಕ್ರಮಗಳಾವುವು?

8) ಉತ್ತರ ಮೇರೂರಿನಲ್ಲಿಯ ಚುನಾವಣೆಗಳು ಹಿಂದಿನ ಪಂಚಾಯತ್ ರಾಜ್ ಚುನಾವಣೆಗಳೊಂದಿಗೆ ಹೇಗೆ ವ್ಯತ್ಯಾಸವಾಗುತ್ತಿವೆ?

9) ಪುರಾತನ ದೇವಾಲಯಗಳ ಚಿತ್ರಗಳನ್ನು ಶೇಖರಿಸಿ, ಆಲ್ಬಮ್ ತಯಾರು ಮಾಡಿರಿ.

10) "ವ್ಯವಸಾಯ–ನೀರಾವರಿ" ಅಂಶದ ಕೆಳಗಿನ ಮೊದಲ ಎರಡು ಪ್ಯಾರಗಳನ್ನು ಓದಿರಿ, ವ್ಯಾಖ್ಯಾನಿಸಿರಿ.

SCERT TELANGANA

ಅಧ್ಯಾಯ 12

ಪ್ರಾಂತೀಯ ರಾಜ್ಯಗಳ ಉದಯ–ಕಾಕತೀಯರು

ಪಲ್ನಾಟಿ ವೀರರಾದ ಬ್ರಹ್ಮನಾಯುಡು, ಬಾಲಚಂದ್ರುಡು, 66 ಯೋಧರ ಬಗ್ಗೆ, ಅವರ ಧೈರ್ಯಸಾಹಸಗಳು, ಅವರ ವಿರೋಚಿತವಾದ ಹೋರಾಟಗಳ ಬಗ್ಗೆ ಅನೇಕ ವೀರಕಥೆಗಳು, ಕಥೆಗಳು ನೀವು ಕೇಳಿರುತ್ತೀರಿ. ಸಮಕ್ಕ–ಸಾರಕ್ಕ ಜಾತ್ರೆಯಲ್ಲಿ ಸಹ ಪಾಲ್ಗೊಂಡಿರುತ್ತೀರಿ. ಅವರು ಗಿರಿಜನ ಜಾತಿಯವರ ಹಕ್ಕುಗಳ ರಕ್ಷಣೆಗಾಗಿ ಅಂದಿನ ರಾಜರ ಸೈನ್ಯಗಳೊಂದಿಗೆ ಯುದ್ಧಗಳು ಮಾಡಿದರು. ದನಗಳು ಕಾಯುವವರ ರಕ್ಷಣೆಗಾಗಿ, ಹಕ್ಕುಗಳಿಗಾಗಿ, ನೆಲ್ಲೂರು ರಾಜರೊಂದಿಗೆ ಹೋರಾಟಮಾಡಿದ ಕಾಟಮರಾಜ ಕಥೆಗಳನ್ನು ಕೇಳಿ ಸಂತೋಷ ಪಟ್ಟಿರುತ್ತೀರಿ.

- ನಿಮ್ಮ ತಂದೆತಾಯಿಗಳ ಮೂಲಕ, ದೊಡ್ಡವರ ಮೂಲಕ, ಪಲ್ನಾಟಿ ವೀರರ ಕಥೆಗಳ ಬಗ್ಗೆ, ಸಮಕ್ಕ–ಸಾರಕ್ಕರ ಬಗ್ಗೆ ಕುರಿತು, ಕಾಟಮರಾಜರ ಕಥೆಗಳ ಕುರಿತು ತಿಳಿದುಕೊಳ್ಳಿ, ತರಗತಿಯಲ್ಲಿ ಚರ್ಚಿಸಿರಿ.

ಈ ಕಥೆಗಳೆಲ್ಲಾ ಕ್ರಿ.ಶ.1000ರಿಂದ 1350ರ ಕಾಲಕ್ಕೆ ಸೇರಿದವುಗಳು. ಈ ಕಾಲ ನಮ್ಮ ಇತಿಹಾಸದಲ್ಲಿ ಬಹಳ ಮುಖ್ಯವಾದದ್ದು. ಹಿಂದಿನ ಅಧ್ಯಾಯಗಳಲ್ಲಿ ಭಾರತ ದೇಶದಲ್ಲಿ ನೂತನ ಆಡಳಿತ ವರ್ಗಗಳು ಹೇಗೆ ಆವಿರ್ಭವಿಸಿದವೋ ತಿಳಿದುಕೊಂಡಿದ್ದೇವೆ. ವಿವಿಧ ಜಾತಿಗಳು, ಬೇಟೆಗಾರರು, ದನಕಾಯುವವರ ಹಂತದಿಂದ ವ್ಯವಸಾಯ ಮಾಡುವ ಸ್ಥಾನಕ್ಕೆ ಹೇಗೆ ಅಭಿವೃದ್ಧಿಹೊಂದಿದರೋ ನೋಡಿದ್ದೇವೆ. ಇವರು ಯೋಧರಾಗಿ ಮಾನ್ಯತೆ ಹೊಂದಿ, ಪಶುಪೋಷಕರೊಂದಿಗೆ, ವ್ಯವಸಾಯದಾರರೊಂದಿಗೆ ಗ್ರಾಮಗಳಲ್ಲಿ ಸ್ಥಿರ ನಿವಾಸಗಳನ್ನು ಏರ್ಪಡಿಸುವುದರ ಮೂಲಕ ಚಿಕ್ಕ ರಾಜ್ಯಗಳು ಸ್ಥಾಪಿಸಿದರು. ರಾಜ್ಯ ಸ್ಥಾಪನೆ ವಿಸ್ತರಣೆ ಮಾಡಬೇಕೆಂಬ ಬಯಕೆ ಇರುವ ಯೋಧರು, ರಾಜರು ನಿರಂತರ ಯುದ್ಧಗಳಲ್ಲಿ ಮುಳುಗಿ ತೇಲುತ್ತಿದ್ದರು. ಇಂತಹ ಪರಿಸ್ಥಿತಿಗಳಲ್ಲಿ ವರಂಗಲ್ಲಿನಲ್ಲಿ ಕಾಕತೀಯರು ರಾಜ್ಯ ಸ್ಥಾಪನೆ ಮಾಡಿದರು.

ಇದೇ ಕಾಲದಲ್ಲಿ ಮೊದಲು ತೆಲುಗು ಗ್ರಂಥಗಳನ್ನು ಬರೆದರು. ಶಾಸ್ತ್ರಗಳ ಪ್ರಕಾರ ಶ್ರೀಮದಾಂಧ್ರ ಮಹಾಭಾರತವನ್ನು ಮೊದಲು ತೆಲುಗುಪದ್ಯ ಕಾವ್ಯವಾಗಿ ರಚಿಸಿದ ಕವಿತ್ರಯರು ನನ್ನಯ, ತಿಕ್ಕನ, ಎರ್ರಾಪ್ರಗಡ ಕ್ರಿ.ಶ. 1000–1400 ವರ್ಷಗಳ ಮಧ್ಯಕಾಲಕ್ಕೆ ಸೇರಿದವರು.

ಅಂದಿನ ರಾಜರು, ರಾಣಿಯರು, ಸಾಮಂತರು, ನಾಯಕರು, ರೈತರು, ಪಶುಪೋಷಕರು, ವ್ಯಾಪಾರಿಗಳ ಕಾರ್ಯಕಲಾಪಗಳ ಬಗ್ಗೆ ಶಾಸನಗಳು ದೊಡ್ಡ ಸಂಖ್ಯೆಯಲ್ಲಿ ಸಮಾಚಾರವನ್ನು ಕೊಡುತ್ತಿವೆ. ಇವಲ್ಲದೆ ತೆಲುಗು, ಸಂಸ್ಕೃತ ಭಾಷೆಗಳಲ್ಲಿನ ಗ್ರಂಥಗಳು ಕಾಕತೀಯರ ಆಡಳಿತ



ಚಿತ್ರ-12.1 ಕಾಕತೀಯ ರಾಜರು ನಿರ್ಮಿಸಿದ ಸ್ವಯಂಭೂ ಶಿವಾಲಯ ಕೀರ್ತಿತೋರಣ ಪ್ರವೇಶ ದ್ವಾರ

SCERT TELANGANA

ಕಾಲದಲ್ಲಿಯೂ ಇನ್ನೂ ಕೆಲವು ಗ್ರಂಥಗಳು ಬಹಳ ಕಾಲದ ನಂತರ ಬರೆಯಲ್ಪಟ್ಟಿವೆ. ಅಂತಹವುಗಳಲ್ಲಿ ವಿಲುಕೊಂಡ ವಲ್ಲಭರಾಯನ "ಕ್ರೀಡಾಭಿರಾಮಮು", ಏಕಾಮ್ರನಾಥನ "ಪ್ರತಾಪ ರುದ್ರಚರಿತ್ರೆ" ಮುಖ್ಯವಾದವು.

- ಮೇಲಿನ ವಿವರಗಳ ಆಧಾರವಾಗಿ ಕಾಕತೀಯ ರಾಜರ ಕುರಿತು ತಿಳಿಸುವ ಎರಡು ಆಧಾರಗಳನ್ನು ತಿಳಿಸಬಲ್ಲಿರಾ?

ಶಾಸನಗಳು, ಮತ್ತು ಸಾಹಿತ್ಯಾಧಾರಗಳ ಪ್ರಕಾರ ದುರ್ಜಯ ಕಾಕತೀಯ ವಂಶದ ಮೂಲಪುರುಷನಾಗಿ ಹೇಳಲ್ಪಟ್ಟನು. ಇವರು ತೆಲುಗು ಭಾಷೆಯನ್ನು ಗೌರವಿಸಿ ಆಸ್ಥಾನಭಾಷೆಯಾಗಿ ಗುರ್ತಿಸಿದರು. ಅಂದಿನ ಶಾಸನಗಳು ಹೆಚ್ಚಾಗಿ ತೆಲುಗು ಭಾಷೆಯಲ್ಲೆ ಬರೆಯಿಸಿದ್ದಾರೆ. ತೆಲುಗಿಗೆ ಕೊಟ್ಟ ಪ್ರಾಮುಖ್ಯತೆಯಿಂದ ಇವರನ್ನು ಆಂಧ್ರ ರಾಜರು ಎಂದು ಕರೆದುಕೊಂಡರು. ತೆಲುಗು ಭಾಷೆಮಾತನಾಡುವ ಕರಾವಳಿ ಪ್ರಾಂತ ಮತ್ತು ರಾಯಲಸೀಮ ಪ್ರಾಂತಗಳನ್ನು ಒಂದೇ ಕ್ಷೇತ್ರದ ಕೆಳಗೆ ತಂದರು. ಈವಿಧವಾಗಿ ಕಾಕತೀಯರು ತೆಲುಗು ಭಾಷೆಮಾತನಾಡುವ ಪ್ರಾಂತಗಳ ಸಮೈಕ್ಯತೆಗೆ ಕೃಷಿಮಾಡಿದರು. ಈ ಕೃಷಿಯಿಂದ ತೆಲುಗು ಪ್ರಜೆಗಳ ವಿಶ್ವಾಸವನ್ನು ಸೂರೆಗೊಂಡರು. ಅವರು ಮಾಡಿದ ಸೇವೆಗಳು ಚಿರಸ್ಮರಣೀಯವಾದವುಗಳಾಗಿ ಇಂದಿಗೂ ಮನ್ನಣೆ ಪಡೆಯುತ್ತಿವೆ.


ಕಾಕತೀಯ ರಾಜರಲ್ಲಿ ಪ್ರಮುಖರು:

ಎರಡನೇ ಪೋಲರಾಜ (ಕ್ರಿ.ಶ. 1116–1157)
ರುದ್ರದೇವ (ಕ್ರಿ.ಶ. 1158–1195)
ಗಣಪತಿದೇವ (ಕ್ರಿ.ಶ. 1199–1262)
ರುದ್ರಮದೇವಿ (ಕ್ರಿ.ಶ. 1262–1289)
ಎರಡನೆಯ ಪ್ರತಾಪರುದ್ರ (ಕ್ರಿ.ಶ. 1289–1323)

ಕಾಕತೀಯರು ಪ್ರಾರಂಭರಲ್ಲಿ ಸ್ಥಾನಿಕ ನಾಯಕರಾಗಿ, ಸಾಮಂತರಾಗಿ, ಇಂದಿನ ಕರ್ನಾಟಕವನ್ನು ಆಳಿದ ರಾಷ್ಟ್ರಕೂಟ, ಚಾಳುಕ್ಯರ ಆಳ್ವಿಕೆಯಲ್ಲಿ ರಾಜಕೀಯ ಪ್ರಸ್ಥಾನವನ್ನು ಆರಂಭಿಸಿದರು. ಇವರು ಮೊದಲಿಗೆ ಗ್ರಾಮೋಧ್ಯೋಗಿಗಳಾದ ಗ್ರಾಮದ ಹಿರಿಯರಾಗಿ ನೇಮಿಸಲ್ಪಟ್ಟರು. ತಮ್ಮ ಸೈನಿಕ ನೈಪುಣ್ಯದಿಂದ ಶಕ್ತಿ–ಯುಕ್ತಿಗಳಿಂದ ರಾಜರನ್ನು ಮೆಚ್ಚಿಸಿ ಸೈನ್ಯಾಧಿಪತಿಗಳಾಗಿ ಸಾಮಂತರ ಸ್ಥಾಯಿಗೆ ಬೆಳೆದರು. ಅನಂತರ ತೆಲಂಗಾಣ ಪ್ರಾಂತದಲ್ಲಿನ ಹನುಮಕೊಂಡವನ್ನು ಹೊಂದಿದರು. ಪಶ್ಚಿಮ ಚಾಳುಕ್ಯರ ಪತನ ನಂತರ ಕಾಕತೀಯರ ಸ್ವತಂತ್ರ ರಾಜರಾಗಿ ಉದಯಿಸಿದರು.

ರುದ್ರದೇವನ ಆಳ್ವಿಕೆ ಕಾಲದಲ್ಲಿ ರಾಜಧಾನಿಯನ್ನು ಹನುಮಕೊಂಡದಿಂದ ಓರುಗಲ್ಲು (ಇಂದಿನ ವರಂಗಲ್)ಗೆ ಬದಲಾಯಿಸಿನು. ಹೊಸರಾಜಧಾನಿ ನಗರವನ್ನು ಯೋಜನಾ ಬದ್ಧವಾಗಿ ನಿರ್ಮಿಸಿ ಹೆಚ್ಚುತ್ತಿರುವ ಜನಸಂಖ್ಯೆಗೆ ಬೇಕಾದ ವಸತಿಯೊಂದಿಗೆ ಸೌಕರ್ಯಗಳನ್ನು ಕಲ್ಪಿಸಿ, ಅಗತ್ಯಗಳನ್ನು ತೀರಿಸಲು ವಿಶಾಲವಾದ ಕೋಟೆಯನ್ನು ನಿರ್ಮಿಸಿದನು. ಕೆರೆಯನ್ನು ನಿರ್ಮಿಸಿದನು. ಹನುಮಕೊಂಡ ಪಟ್ಟಣದಲ್ಲಿ ಸಾವಿರ ಕಂಬಗಳ ದೇವಾಲಯವನ್ನು ಸಹ ನಿರ್ಮಿಸಿದನು.

ವರಂಗಲ್ಲು ಕೋಟೆ ನಕ್ಷೆಯನ್ನು ನೋಡಿರಿ. ಹೊರಗಿನ ಕೋಟೆಗೋಡೆ ನಾಲ್ಕು ದ್ವಾರಗಳನ್ನು ಹೊಂದಿ ವ್ಯವಸಾಯ



ಭೂಮಿಗಳಿಗೆ ಅನೇಕ ಕೆರೆಗಳಿಗೆ ರಕ್ಷಣೆಯಾಗಿ ಇದೆ. ಈ ಕೋಟೆಯಲ್ಲಿಯೇ ಕರಕುಶಲಗಾರರಾದ ಬುಟ್ಟಿ ಎಣಿಯುವವರ ಗುಡಿಸಲುಗಳಿವೆ. ಇವುಗಳನ್ನು ದಾಟಿದ ನಂತರ ಕಂದಕ, ಅದರ ಪಕ್ಕದಲ್ಲೇ ಮಣ್ಣಿನಿಂದ ನಿರ್ಮಿಸಿದ ಕೋಟೆಗೋಡೆಗೆ ನಾವು ಸೇರಬಹುದು.

ಕೋಟೆ ಮಧ್ಯಕ್ಕೆ ಸೇರಲು ಇನ್ನೂಮುಂದಕ್ಕೆ ಹೋದರೆ ಇನ್ನೊಂದು ಕಂದಕದ ಕಲ್ಲಿನಕೋಟೆ ನಿರ್ಮಿಸಲ್ಪಟ್ಟಿದೆ. ಈ ಕೋಟೆಯ ಮಧ್ಯದಲ್ಲಿಯೇ ರಾಜಧಾನಿ, ನಗರ ಭವನಗಳು ರಾಜಾಂತಃಪುರ ನಿವಾಸಗಳು ಇವೆ. ಇವನ್ನು ನಾಲ್ಕು ಕಡೆಗಳಲ್ಲೂ ದ್ವಾರಗಳು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಗಳಾಗಿ ಇವೆ. ಪ್ರತಿದ್ವಾರದ ಮೂಲಕ ಕೋಟೆಮಧ್ಯಕ್ಕೆ

SCERT TELANGANA

ಸೇರಿಕೊಳ್ಳಲು ರಸ್ತೆಯಿಂದ ಸೇರಿಸಲ್ಪಟ್ಟಿದೆ. ಇಲ್ಲಿಯೇ ಇವರು ನಿರ್ಮಿಸಿದ ಸ್ವಯಂಭೂ ಶಿವಾಲಯ ಕೂಡಇದೆ. ನಾಲ್ಕು ದಿಕ್ಕಿಗಳಿಗೂ ದ್ವಾರಗಳು ನಿರ್ಮಿಸಿದ್ದಾರೆ.ಕೋಟೆ ಮಧ್ಯಕ್ಕೆ ಸೇರಲು ಇನ್ನೂಮುಂದಕ್ಕೆ ಹೋದರೆ ಇನ್ನೊಂದು ಕಂದಕದ ಕಲ್ಲಿನಕೋಟೆ ನಿರ್ಮಿಸಲ್ಪಟ್ಟಿದೆ.

ಓರುಗಲ್ಲು ನಗರನವನ್ನು ವಿವಿಧ ಬೀದಿಗಳಾಗಿ ವಿಭಜಿಸಿದ್ದಾರೆ. ಒಂದೊಂದು ಬೀಯಯಲ್ಲಿ ಒಂದೊಂದು ವಿಧವಾದ ವೃತ್ತಿಯವರು ವಾಸಿಸುತ್ತಿದ್ದರು.

- ನೀನು ನಿಮ್ಮ ಗ್ರಾಮ ಇಲ್ಲವೆ ಪಟ್ಟಣದ ರೇಖಾಚಿತ್ರ ನಕ್ಷೆಯನ್ನು ಹಾಕಿ, ಓರುಗಲ್ಲು ನಕ್ಷೆಯೊಂದಿಗೆ ಹೋಲಿಸಿ. .
- ಆಧುನಿಕ ನಗರಗಳು/ಪಟ್ಟಣಗಳಿಗೂ ಮತ್ತು ಅಂದಿನ ಓರಗಲ್ಲು ನಗರಗಳ ನಡುವೆ ನೀನು ಗಮನಿಸಿದ ಮುಖ್ಯ ವ್ಯತ್ಯಾಸಗಳು ಯಾವುವು?
- ನಕ್ಷೆಯಲ್ಲಿ ಕೊಟ್ಟಿರುವ ಸ್ಕೇಲು ಆಧಾರವಾಗಿ, ಓರಗಲ್ಲು ಹೊರಗಿನ ಕೋಟೆಯ ಅಗಲ ಪೂರ್ವದಿಂದ ಪಶ್ಚಿಮಕ್ಕೆ ಎಷ್ಟುಇದೆ ತಿಳಿದುಕೊಳ್ಳಿ.
- ಕಲ್ಲಿನ ಕೋಟೆಯ ಒಳಗಡೆಯ ಅಗಲ ಉತ್ತರದಿಂದ ದಕ್ಷಿಣಕ್ಕೆ ಎಷ್ಟು ಇದೆ ತಿಳಿದುಕೊಳ್ಳಿ.
- ನೀನು ಎಂದಾದರರೂ ವರಂಗಲ್ಲು ನಗರಕ್ಕೆ ಹೋಗುವುದಾದರೆ ನೀನು ನೋಡಿದವುಗಳನ್ನು, ನಿಮ್ಮ ತರಗತಿಯಲ್ಲಿನ ಮಿತ್ರರಿಗೆ ಇಂದಿನ ವರಂಗಲ್ಲು ನಗರದ ಬಗ್ಗೆ ವಿವರಿಸಿರಿ.
- ಸ್ವಯಂಭೂಶಿವಾಲಯ ಕಾಕತೀಯರ ವಂಶದೈವ. ಕೋಟೆ ಮಧ್ಯದಲ್ಲಿ ರಾಜಭವನಗಳು ಇಲ್ಲವೆ ಅಂಗಡಿಗಳನ್ನು ನಿರ್ಮಿಸಿದ ದೇವಾಲಯವನ್ನೇ ಏಕೆ ನಿರ್ಮಿಸಿದ್ದಾರೆಂದು ನೀನು ಭಾವಿಸುತ್ತೀಯಾ?

ಕಾಕತೀಯರು ಶಕ್ತಿವಂತರಾದ ಆಡಳಿತಗಾರರಾದ ನಂತರ ಬಹಳ ಜನ ನಾಯಕರು ಕಾಕತೀಯರ ಆಧಿಪತ್ಯವನ್ನು ಅಂಗೀಕರಿಸಿದರು. ಕಾಕತೀಯರು ತಮ್ಮ ಸಾಮಂತ ಪಾಲಕರ ಮೇಲೆ ವಿದೇಶಿಯರ ದಾಳಿಯನ್ನು ನಿಯಂತ್ರಿಸುವುದರ ಜೊತೆಗೆ ಅವರು ಮಾಡುವ ದಂಡಯಾತ್ರೆಗಳಲ್ಲಿ ಸಾಮಂತರನ್ನು ಕೂಡ ಭಾಗಸ್ವಾಮಿಗಳನ್ನಾಗಿ ಮಾಡಿದರು. ಪರಿಸ್ಥಿತಿಗನುಗುಣವಾಗಿ ಸ್ವತಂತ್ರ ಆಕಾಂಕ್ಷೆಯಿಂದ ದಾಳಿ ಮಾಡಿದಾಗ, ಕಾಕತೀಯರು ಆ ದಾಳಿಯನ್ನು ಹತ್ತಿಕ್ಕುವುದಕ್ಕೆ ಸೈನ್ಯವನ್ನು ಕಳಿಸುತ್ತಿದ್ದರು. ರುದ್ರಮದೇವಿ, ಆಕೆಯ ಮೊಮ್ಮಗನಾದ ಪ್ರತಾಪರುದ್ರನು ವಿವಿಧ ಪದ್ಧತಿಗಳ ಮೂಲಕ ದಾಳಿಗಳನ್ನು ಹತ್ತಿಕ್ಕಿದ್ದರು.

- ಅಂದಿನ ಪರಿಸ್ಥಿತಿಯಲ್ಲಿ ನೀನು ಬಲವಾದ ನಾಯಕನೇ ಆದರ ಕಾಕತೀಯರನ್ನು ಸಾಮಂತನಾಗಿರುವುದಕ್ಕೆ ಅಂಗೀಕರಿಸುತ್ತೀಯಾ? ಆದರೆ ಕಾರಣಗಳನ್ನು ವಿವರಿಸು.



ಚಿತ್ರ 12.2 ಕುದುರೆ ಸವಾರಿ ಮಾಡುತ್ತಿರುವ ರಾಣಿ ರುದ್ರಮದೇವಿ
(ಹೈದರಾಬಾದ್‌ನಲ್ಲಿ ಟ್ಯಾಂಕ್‌ಬಂಡ್ ಮೇಲೆ ಪ್ರತಿಷ್ಠಿಸಿದ ಆಧುನಿಕ ಶಿಲ್ಪ)

ರುದ್ರಮದೇವಿ:


ನೀವು ಯಾವಾಗಾಲಾದರೂ ಅತ್ಯಂತ ಧೈರ್ಯಸಾಹಸಗಳು ಇರುವ ಮಹಿಳಾ ಆಡಳಿತ ಗಾರರಾದ ರುದ್ರಮದೇವಿಯ ಬಗ್ಗೆ ಕೇಳಿದ್ದೀರಾ? ಆಕೆಯು ತನ್ನ ಶಕ್ತಿಸಾಮರ್ಥ್ಯಗಳಿಂದ ದಿಗ್ವಿಜಯವಾಗಿ ಆಡಳಿತ ವ್ಯವಹಾರಗಳನ್ನು ಉತ್ತಮವಾಗಿ ನಿರ್ವಹಿಸಿದರು. ಪ್ರಖ್ಯಾತ ಕಾಕತೀಯ ವಂಶಕ್ಕೆ ಸೇರಿದ ರುದ್ರಮದೇವಿ ಓರಗಲ್ಲು (ಇಂದಿನ ವರಂಗಲ್ಲು) ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದಳು. ಕ್ರಿ.ಶ. 1262 ರಿಂದ 1289 ವರೆಗೆ ಸುಮಾರು 27 ವರ್ಷಗಳ ಕಾಲ ಉತ್ತಮವಾದ ಆಡಳಿತವನ್ನು ನಡೆಸಿದಳು. ನಮ್ಮ ದೇಶದಲ್ಲಿ ಮಹಿಳಾ ಆಡಳಿತಗಾರರು ಬಹಳ ಅಪರೂಪ. ರಾಣಿ ರುದ್ರಮದೇವಿಗೆ ಕೆಲವು ಕಾಲಗಳ ಮೊದಲೇ ಬಹಳ ದೂರದಲ್ಲಿರುವ ದೆಹಲಿಯನ್ನು ರಜಿಯಾ ಸುಲ್ತಾನ ಎನ್ನುವ ಮಹಿಳೆ ಆಡಳಿತ ನಡೆಸಿದಳು. ರಾಜವಂಶಕ್ಕೆ ಸೇರದವರು ಸ್ತ್ರೀಯರ ಆಳ್ವಿಕೆ ಇಷ್ಟವಿಲ್ಲದೆ ಆಕೆಯ ಪರಿಪಾಲನೆಯನ್ನು

SCERT TELANGANA

ಅಂಗೀಕರಿಸದೆ ದಾಳಿಮಾಡಿದರು. ಪ್ರಮುಖ ಇಟಾಲಿಯನ್ ಯಾತ್ರಿಕನಾದ ಮಾರ್ಕೊಪೋಲೋ ರುದ್ರಮದೇವಿ ರಾಜ್ಯವನ್ನು ಸಂದರ್ಶಿಸಿ ಆಕೆಯು ಆಡಳಿತ ಧೈರ್ಯಸಾಹಸಗಳನ್ನು ಕೊಂಡಾಡಿದನು. ಆಕೆಯು ಪುರುಷರ ವಸ್ತ್ರಗಳನ್ನು ಧರಿಸಿ ನಿರ್ಭಯವಾಗಿ, ಸುನಾಯಾಸವಾಗಿ ಕುದುರೆಗಳ ಸವಾರಿ ಮಾಡುತ್ತಿದ್ದಳೆಂದು ಹೆಸರಿಸಿದ ಅಂದಿನ ಶಾಸನಗಳಲ್ಲಿ ರುದ್ರಮದೇವಿ "ರುದ್ರದೇವ ಮಹಾರಾಜ"ನಾಗಿ ಕೀರ್ತಿಯನ್ನು ಪಡೆದಳು. ರಜಿಯಾ ಸುಲ್ತಾನಳಂತೆ ರುದ್ರಮದೇವಿಯೂ ಕೂಡ ತನ್ನ ತಂದೆಯ ಆಡಳಿತ ಕಾಲದಲ್ಲಿ ಮುಖ್ಯವಾದ ಸಹಾಯಕರ ವಿರೋಧವನ್ನು ವಿಜಯವಂತವಾಗಿ ಹತ್ತಿಕ್ಕಿದಳು. ರುದ್ರಮದೇವಿ ಮತ್ತು ಮೊಮ್ಮಗನಾದ ಪ್ರತಾಪರುದ್ರನ ಪಾಲನೆಯಲ್ಲಿ ಸಿಡಿದೆದ್ದ ಅನೇಕ ಸಾಮಂತರ ದಾಳಿಗಳನ್ನು ನಿಯಂತ್ರಿಸುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಂಡನು. ಆದರೆ ರುದ್ರಮದೇವಿ ಸಾಮಂತರಲ್ಲೊಬ್ಬನಾದ ಅಂಬದೇವನು ದಂಗೆ ಎದ್ದನು. ನಲ್ಗೊಂಡ ಜಿಲ್ಲೆ ಚಂದುಪಟ್ಲದಲ್ಲಿ ನಡೆದ ಯುದ್ಧದಲ್ಲಿ ರುದ್ರಮದೇವಿ ಪ್ರಾಣ ಬಿಟ್ಟಳು.



ಚಿತ್ರ 12.3 ವರಂಗಲ್ಲು ಒಳಗಿನ ಮಣ್ಣಿನ ಕೊಟೆಯ ಭಾಗ, ಬಲಗಡೆ ಕಂದಕ.



ಚಿತ್ರ 12.4 ಮೇಲಿನಿಂದ ನೋಡಿದರೆ ಕಾಣಿಸುವ ಒಳಗಡೆಯ ಕಲ್ಲಿನಕೋಟೆ ಪೂರ್ವಪ್ರವೇಶದ್ವಾರದ ಕಡೆ ದಾರಿ, ಹೊರಗಿನ ಆವರಣ ಬಲಗಡೆ ಕಡೆ ನಗರಕ್ಕೆ ಪ್ರವೇಶಿಸುವ ರಾಜಮಾರ್ಗ

© NCERT NOT TO BE REPUBLISHED TELANGANA

ನಾಯಂಕರ ವಿಧಾನ:

ರುದ್ರಮದೇವಿ, ಪ್ರತಾಪರುದ್ರರು ನೈಪುಣ್ಯತೆ ಇರುವ ಅನೇಕ ಯೋಧರನ್ನು, ಶಕ್ತಿವಂತರಾದ ಸಾಮಂತ ಕುಟುಂಬಗಳಿಂದಲ್ಲದೆ, ರಾಜಭಕ್ತಿ ಇರುವ ನಾಯಕರನ್ನು ಪ್ರೋತ್ಸಾಹಿಸಲು ಉನ್ನತ ಸ್ಥಾನ ಕಲ್ಪಿಸುತ್ತಾ "ನಾಯಕ" ಬಿರುದಿನಿಂದ ನೇಮಕಮಾಡಿಕೊಳ್ಳುತ್ತಿದ್ದರು. ಇವರ ಸೇವೆಗಳಿಗೆ ಪ್ರತಿಫಲವಾಗಿ ಅನೇಕ ಗ್ರಾಮಗಳಲ್ಲಿ ಶಿಸ್ತುವಸೂಲಿ ಮಾಡಿಕೊಳ್ಳುವ ಹಕ್ಕು ಕಲ್ಪಿಸಿದರು. ಈ ಗ್ರಾಮಗಳನ್ನೇ ಅವರ "ನಾಯಂಕರು"ಗಳಾಗಿ ವ್ಯವಹರಿಸುತ್ತಿದ್ದರು. ಇವುಗಳ ಮೇಲೆ ಬರುವ ಆದಾಯದಿಂದ ನಾಯಕನು ರಾಜ ನಿರ್ದೇಶಿಸಿದ ಸೈನ್ಯವನ್ನು ರಾಜನ ಸೇವೆಗಾಗಿ ಪೋಷಿಸುತ್ತಿದ್ದರು. ಇಂತಹ ಗ್ರಾಮಗಳ ಮೇಲೆ ನಾಯಕರಿಗೆ ತೆರಿಗೆ ವಸೂಲಿಮಾಡಿಕೊಳ್ಳುವ ಹಕ್ಕು ಶಾಶ್ವತವಾಗಿ ಉಳಿಸದೆ ಆಗಾಗ ಹೊಸ ಪ್ರದೇಶಗಳಿಗೆ ಬದಲಾಯಿಸುತ್ತಿದ್ದರು. ನಾಯಕರು, ರಾಜನಿಗೆ ವಿರುದ್ಧವಾಗಿ ನಡೆಯುವ ನಾಯಕರ ದಂಗೆಗಳನ್ನು ಹತ್ತಿಕ್ಕುವುದರಲ್ಲೂ ಇವರು ಪಾಲ್ಗೊಳ್ಳುತ್ತಿದ್ದನು. ಈ ನಿಯಮಗಳ ಆಧಾರವಾಗಿ ರೂಪಿಸಿರುವುದನ್ನು ನಾಯಂಕರ ವಿಧಾನವಾಗಿ ಕರೆಯುತ್ತಾರೆ.

ರುದ್ರಮದೇವಿ ಆಳ್ವಿಕೆಯ ಕಾಲದಲ್ಲಿನ ಒಬ್ಬ ನಾಯಕನು ಹಾಕಿಸಿದ ಕೆಳಗಿನ ಶಾಸನದಲ್ಲಿ ಸ್ವಲ್ಪ ಭಾಗವನ್ನು ಓದಿರಿ.

"ಕ್ರಿ.ಶ.1270 ವರ್ಷದ ಸಂಕ್ರಾಂತಿ ಪರ್ವದಿನ ಸಂದರ್ಭವಾಗಿ, ಕಾಕತೀಯ ರುದ್ರಮದೇವ ಮಹಾರಾಜು ಪ್ರವೇಶದ್ವಾರ ಸಂರಕ್ಷಕನಾದ ಬೊಲ್ಲಿನಾಯಕನು, 10 ಆಳತೆಗಳ ಭೂಮಿಯನ್ನು ಕಲ್ಯಾಣಕೇಶವ ದೇವಾಲಯ ಸೇವೆಗಳಿಗೆ ಕ್ರಂಜ ಗ್ರಾಮದಲ್ಲಿ ತನ್ನ ಸ್ವಯಂ ನಾಯಂಕರ ಪರಿಧಿಯಲ್ಲಿನ ಭೂಮಿಯನ್ನು ತನ್ನ ರಾಜನಾದ ರುದ್ರಮದೇವ ಮಹಾರಾಜರ ಗೌರವಾರ್ಥವಾಗಿ ದಾನಕೊಡಲ್ಪಟ್ಟಿದ".

- ಬೊಲ್ಲಿನಾಯಿಕನು ರುದ್ರಮದೇವಿಯನ್ನು "ರುದ್ರದೇವ ಮಹಾರಾಜ" ಎಂದು ಏಕೆ ಕರೆದರು?


ವ್ಯವಸಾಯಾಭಿವೃದ್ಧಿ–ದೇವಾಲಯಗಳ ನಿರ್ಮಾಣ:

ಕಾಕತೀಯರು ಕೆರೆಗಳು, ಬಾವಿಗಳು ನಿರ್ಮಿಸಿ ವುದರ ಮೂಲಕ ದೊಡ್ಡ ಮೊತ್ತದಲ್ಲಿ ಭೂಮಿಯನ್ನು ಸಾಗುವಳಿಗೆ ತಂದರು. ರಾಜಕುಟುಂಬಿಕರು, ಸಾಮಂತರು, ಸಮಾಜದಲ್ಲಿ ಶ್ರೀಮಂತ ವರ್ಗದವರಾದ ವ್ಯಾಪಾರಸ್ಥರು, ವೃತ್ತಿಕೆಲಸದವರು, ಕೆರೆಗಳು ನಿರ್ಮಿಸುವದರ ಮೂಲಕ ವ್ಯವಸಾಯಾಭಿವೃದ್ಧಿಗೆ ಸಹಾಯಪಟ್ಟರು. ಈ ವಿಧಾವಾಗಿ ಕಠಿಣವಾದ ಬೀಳುಭೂಮಿಗಳಿಂದ ತೆಲಂಗಾಣ ಮತ್ತು ರಾಯಲಸೀಮೆಗಳಲ್ಲಿ ಸ್ವಲ್ಪಮಟ್ಟಿಗೆ ಇದ್ದ ವ್ಯವಸಾಯ ಭೂಮಿಗಳನ್ನು ದೊಡ್ಡ ಮೊತ್ತದಲ್ಲಿ ಸಾಗುವಳಿಗೆ ತರಲು ಕೃಷಿಮಾಡಿದರು.

ಕಾಕತೀಯರು ದೊಡ್ಡ ಪ್ರಮಾಣದಲ್ಲಿ ಹೆಚ್ಚು ದಾನಗಳು ಕೊಡುವುದರ ಮೂಲಕ ದೇವಾಲಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಿಸಿದರು. ರಾಜಕುಟುಂಬ ಗಳಲ್ಲಿನ ಮೈಲಮ್ಮ ಮುಪ್ಪಮಾಂಬರಂತ ಸ್ತ್ರೀಯರು ದೇವಾಲಯ ನಿರ್ಮಾಣಕ್ಕೆ ಹೆಚ್ಚಿನ ಭೂಮಿಗಳನ್ನು ದಾನ ಮಾಡಿದರು. ಇತರ ಶ್ರೀಮಂತ ವರ್ಗಗಳು ಸ್ತ್ರೀಯರು ಕೂಡ ದೇವಾಲಯಗಳ ಅಭಿವೃದ್ಧಿಗೆ ಭೂಧಾನಗಳ ಜೊತೆಗೆ, ಕೆರೆಗಳು, ಗೋವುಗಳು, ಹಣ,. ಬಂಗಾರದ ಆಭರಣಗಳು ಮೊದಲಾದವು ದಾನಕೊಟ್ಟರು. ಇದರಿಂದ ಅಂದಿನ ಸಮಾಜದಲ್ಲಿ ಮಹಿಳೆಯರಿಗೆ ಆಸ್ತಿಗಳು, ಆರ್ಥಿಕ ಸ್ವಾತಂತ್ರ್ಯ ಇದ್ದಂತೆ ತಿಳಿದುಬರುತ್ತದೆ. ಕಾಕತೀಯರು ವ್ಯವಸಾಯ




ಚಿತ್ರ 12.5 ಶಿವನಿಗೆ ಅಂಕಿತಗೊಳಿಸಿದ ಮಹಾನ್ ದೇವಾಲಯಗಳ ಅವಶೇಷಗಳು



ಚಿತ್ರ 12.6 ರಾಮಪ್ಪ ದೇವಾಲಯ

© CERT TELANGANA




ಚಿತ್ರ 12.7 ಕಾಕತೀಯರ ಕಾಲದ ಅಂದಿನ ಬಂಗಾರದ ನಾಣ್ಯ

ರಂಗವನ್ನು ಪ್ರೋತ್ಸಾಹಿಸುವುದರಿಂದ ವ್ಯವಸಾಯ ಉತ್ಪತ್ತಿಗಳೊಂದಿಗೆ ತೆರಿಗೆಗಳ ರೂಪದಿಂದ ದೊಡ್ಡ ಪ್ರಮಾಣದಲ್ಲಿ ಆದಾಯ ಶೇಖರಣೆಯಾಯಿತು.

ವ್ಯಾಪಾರ :

ಅಂದಿನ ಪಾಲಕರು, ರಾಜರು, ಸಾಮಂತ ನಾಯಕರು ಹೆಚ್ಚಾಗಿ ತಮ್ಮ ಆದಾಯದ ಸಂಪನ್ಮೂಲಗಳನ್ನು ವ್ಯಾಪಾರದ ಮೇಲೆ ಹಾಕುವ ತೆರಿಗೆಗಳ ಮೂಲಕ ಸಂಗ್ರಹಿಸಿಕೊಳ್ಳುತ್ತಿದ್ದರು. ಪ್ರತ್ಯೇಕವಾಗಿ ವಿದೇಶಿ ವ್ಯಾಪಾರ ಮಾಡುವ ವ್ಯಾಪಾರಿಗಳು ಬಂದರುಗಳ ಹತ್ತಿರ ಸಲಿಸುವ ಸುಂಕಗಳು ರಾಜ್ಯದ ಆದಾಯದಲ್ಲಿ ಹೆಚ್ಚು ಭಾಗ ಇರುತ್ತಿದ್ದವು. ಕೆಳಗೆ ಕೊಟ್ಟಿರುವ ಕಾಕತೀಯ ಗಣಪತಿದೇವಾಲಯ ಕಾಲದ ಮೋಟುಪಲ್ಲಿ ಶಾಸನದ



ಚಿತ್ರ 12.8 ಮೋಟುಪಲ್ಲಿ ಅಭಯ ಶಾಸನ

ಮೂಲಕ ಇನ್ನಷ್ಟು ವಿಷಯ ತಿಳಿದುಕೊಳ್ಳೋಣ.

ಗಣಪತಿ ದೇವನಿಂದ ಹಾಕಿಸಲ್ಪಟ್ಟ ಅಭಯ ಶಾಸನ, ವಿದೇಶೀಯ ವ್ಯಾಪಾರ, ಖಂಡಾಂತರ ವ್ಯಾಪಾರ ಮಾಡುವ ವ್ಯಾಪಾರಿಗಳಿಗೆ ರಕ್ಷಣೆ ಕಲ್ಪಿಸಿತು. ಹಿಂದಿನ ಕಾಲದ ರಾಜರು ತುಘಾನುಗಳಿಂದ ಹಡಗುಗಳು ಕೊಚ್ಚಿಕೊಂಡು ಹೋಗಿದ್ದರೂ ಬಲವಂತವಾಗಿ ತೆರಿಗೆಗಳು ವಸೂಲಿ ಮಾಡುತ್ತಿದ್ದರು. ವ್ಯಾಪಾರಿಗಳು ಬಂಗಾರ, ಆನೆಗಳು, ಕುದುರೆಗಳು, ಆಭರಣಗಳು ಮೊದಲಾದವುಗಳನ್ನು ಸ್ವಾಧೀನ ಮಾಡಿಕೊಳ್ಳುತ್ತಿದ್ದರು. ಇಂತಹ ಪರಿಸ್ಥಿತಿಗಳಿಂದ ವ್ಯಾಪಾರಿಗಳಿಗೆ ರಕ್ಷಣೆ ಕಲ್ಪಿಸುತ್ತಾ ವಿದೇಶಿ ವ್ಯಾಪಾರವನ್ನು ಪ್ರೋತ್ಸಾಹಿಸುತ್ತಾ, "ನಾವು ನಮ್ಮ ಹೆಸರು ಪ್ರತಿಷ್ಠೆಗಳಿಗಾಗಿ, ಪುಣ್ಯಕ್ಕಾಗಿ ಕರಣೆಯಿಂದ ಕೇವಲ ನಾಮಮಾತ್ರದ ತೆರಿಗೆಗಳನ್ನು ವಿಧಿಸುತ್ತಿದ್ದೇವೆ." ಎಂದು ತಿಳಿಸಿದ್ದಾರೆ.

ಈ ಶಾಸನದಲ್ಲಿ ವಿದೇಶೀ ವ್ಯಾಪಾರ ಮಾಡುವ ವಿವಿಧ ವಸ್ತುಗಳ ಮೇಲೆ ವಿಧಿಸಿ, ವಸೂಲಿಮಾಡುವ ಸುಂಕಗಳು ವಿವರಿಸಲ್ಪಟ್ಟಿವೆ.

- ಹಿಂದಿನ ಪಾಲಕರು ವಿದೇಶೀ ವ್ಯಾಪಾರ ಮಾಡುವ ವ್ಯಾಪಾರಿಗಳೊಂದಿಗೆ ಹೇಗೆ ವ್ಯವಹರಿಸುತ್ತಿದ್ದರು?
- ಗಣಪತಿದೇವನು ವ್ಯಾಪಾರಿಗಳಿಗೆ ಎಂತಹ ಅಭಯಕೊಟ್ಟನು?
- ಗಣಪತಿದೇವನು ವಿದೇಶಿ ವ್ಯಾಪಾರಿಗಳಿಗೆ ಏಕೆ ಭದ್ರತೆಕಲ್ಪಿಸಿದನು?

ಇಟಲಿ ಯಾತ್ರಿಕನಾದ ಮಾರ್ಕೋಪೋಲೋ ಮೋಟುಪಲ್ಲಿ ಬಂದರನ್ನು ಸಂದರ್ಶಿಸಿ ಇಲ್ಲಿಂದ ವಜ್ರಗಳು, ಜೇಡರಬಲೆಯನ್ನು ಹೋಲುವ ಸೂಕ್ಷ್ಮವಾದ ಸಣ್ಣಗೆ ನೇಯ್ದ ಬಟ್ಟೆಗಳು ವಿದೇಶಿಗಳಿಗೆ ರಫ್ತು ಆಗುತ್ತಿದ್ದವೆಂದು, ಇವುಗಳನ್ನು ಧರಿಸಲು ಇಷ್ಟಪಡದ ವಿದೇಶಿ ರಾಜರಾಣಿಯರು ಇರಲಿಲ್ಲ ಎಂದು ತಿಳಿಸಿದನು.

ಕಾಕತೀಯರ ಆಡಳಿತ ಮುಕ್ತಾಯ:

ಸುಮಾರು ಕ್ರಿ.ಶ. 1190ರ ಸಮಯದಲ್ಲಿ ದೆಹಲಿ ಕೇಂದ್ರವಾಗಿ ಹೊಸರಾಜ್ಯ ಸ್ಥಾಪಿಸಲ್ಪಟ್ಟಿತು. ಇವರು ಸುಲ್ತಾನರಾಗಿ ಕರೆಯಲ್ಪಟ್ಟರು. ಇವರು ಟರ್ಕಿಸ್ತಾನ್‌ನಿಂದ ಬಂದು ರಾಜ್ಯ ಸ್ಥಾಪನೆ ಮಾಡಿದರು. ಇವರು ಶಕ್ತಿವಂತ ಸೈನ್ಯವನ್ನು ಏರ್ಪಡಿಸಿಕೊಂಡು ಉತ್ತರಭಾರತದೇಶದಲ್ಲಿ ಅನೇಕ ರಾಜ್ಯಗಳ ಮೇಲೆ ಆಧಿಪತ್ಯ ಸಾಧಿಸಿ ದಕ್ಷಿಣ್ ಕಡೆ ಕೂಡ ತಮ್ಮ ದೃಷ್ಟಿಯನ್ನು ಮರಳಿಸಿದರು. ಸುಲ್ತಾನ್ ಮಹಮ್ಮದ್ ಬಿನ್ ತುಘಲಕ್ ಕಾಕತೀಯರ ರಾಜ್ಯದ ಮೇಲೆ ದಂಡಯಾತ್ರೆ ಮಾಡಿ ಪ್ರತಾಪರುದ್ರನನ್ನು

© TELANGANA

ಯುದ್ಧದಲ್ಲಿ ಸೋಲಿಸಿದನು. ಇದರಿಂದ ಕ್ರಿ.ಶ.1323 ನೇ ವರ್ಷದಲ್ಲಿ ಕಾಕತೀಯರ ಆಳ್ವಿಕೆ ಕೊನೆಗೊಂಡಿತು. ಕೆಲವು ಸಮಯದ ನಂತರ ಕರ್ನಾಟಕ ರಾಜ್ಯದಲ್ಲಿ ಎರಡು ಹೊಸರಾಜ್ಯಗಳಾದ ಬಹುಮನಿ ರಾಜ್ಯ, ವಿಜಯನಗರ ರಾಜ್ಯಗಳು ಉದಯಿಸಿದವು. ಅವುಗಳನ್ನು ಕುರಿತು ಮುಂದಿನ ಪಾಠದಲ್ಲಿ ತಿಳಿಯೋಣ.

ಮತಾಂಧತೆಯೆಂಬ ಅಡ್ಡುಗೋಡೆಯನ್ನು ಭೇಧಿಸಿದ ಪಲ್ನಾಟಿ ವೀರರ ಕಥೆ:

ಪಲ್ನಾಟಿ ವೀರರ ಚರಿತೆಯನ್ನು ಸುಮಾರು ಕ್ರಿ.ಶ. 1350 ರಲ್ಲಿ ಶ್ರೀನಾಥನು ರಚಿಸಿದನು. ಅಂದಿನ ಕಾಲದಲ್ಲಿ ಯೋಧರು ಪರಸ್ಪರ ಅರ್ಥಮಾಡಿಕೊಂಡು ಒಗ್ಗಟ್ಟಾಗಿ ಜವಾಬ್ದಾರಿಗಳನ್ನು ಹೇಗೆ ನಿರ್ವಹಿಸುತ್ತಿದ್ದಾರೆಂದು ವಿವರಿಸುತ್ತದೆ. ಇದರಲ್ಲಿ ಮುಖ್ಯಪಾತ್ರವಾದ ವಿಶಿಷ್ಟ ಹಿನ್ನಲೆಯುಳ್ಳ ಬಾಲಚಂದ್ರನೊಂದಿಗೆ ತನಗೆ ನಂಬಿಕೆಯುಳ್ಳ ಅನುಚರರನ್ನು ಕುರಿತು ತಿಳಿಸುತ್ತದೆ. ಅವರಲ್ಲಿ ಒಬ್ಬನು ಬ್ರಾಹ್ಮಣನು ಉಳಿದವರು ಕಮ್ಮಾರ, ವಿಶ್ವಕರ್ಮ, ಅಗಸ, ಕುಂಬಾರ ಮತ್ತು ಹಜಾಮರಂತಹ ಬೇರೆಬೇರೆ ವೃತ್ತಿಗೆ ಸಂಬಂಧಿಸಿದವರು. ಇವರು ಬಹಳ ಜವಾಬ್ದಾರಿಯುತವಾಗಿ ಅಣ್ಣತಮ್ಮಂದಿರಂತೆ ಬೆರೆತು ಓಡಾಡುತ್ತಿದ್ದರು. ಇವರು ಯುದ್ದಕ್ಕೆ ಹೊರಡುವ ಮುನ್ನ ಬಾಲಚಂದ್ರನ ತಾಯಿ ಈ ಸಹೋದರರಿಗಾಗಿ ಸ್ವತಃ ಆಹಾರ ತಯಾರಿಸುತ್ತಿದ್ದಳು. ಆದರೆ ಬೇರೆಬೇರೆ ಪಾತ್ರೆಗಳಲ್ಲಿ ಬಡಿಸುತ್ತಿದ್ದಳು (ಮಣ್ಣಿನ, ಎಲೆ, ಕಂಚು ಮುಂತಾದ ಪಾತೆಗಳು) ಈ ಬೇಧಭಾವವು ಬಾಲಚಂದ್ರನಿಗೆ ಒಪ್ಪಲಿಲ್ಲ. ಯುದ್ಧವೀರರಿಗೆ ಜಾತಿಯೊಂದಿಗೆ ಸಂಬಂಧವಿಲ್ಲವೆಂದು ಬಾಲಚಂದ್ರನು ಹೇಳುತ್ತಾನೆ. ಅಂದಿನ ಆಚಾರ ವ್ಯವಹಾರಗಳನ್ನು ತಿರಸ್ಕರಿಸುತ್ತಾ ತಮ್ಮ ಸಂಘಟಿತ ಕರ್ತವ್ಯಕ್ಕೆ ಧ್ಯೋತಕವಾಗಿ ಸೋದರೆಲ್ಲರೂ ತಮ್ಮ ಭೋಜನಾ ಪಾತ್ರೆಯನ್ನು ಒಬ್ಬರು ಮತ್ತೊಬ್ಬರೊಂದಿಗೆ ಬದಲಿಸಿ ತಿನ್ನುತ್ತಿದ್ದರು.

ಮುಖ್ಯಪದಗಳು:

1) ಯೋಧರು 2) ನಾಯಂಕರ ವಿಧಾನ 3) ಸಾಮಂತ 4) ಕರಕುಶಲದವರು

ಪ್ರಾಜೆಕ್ಟ್ ಕೆಲಸ :

1) ಯಾವುದಾದರೂ ಮೂರು ಚರಿತ್ರೆ ವೃತ್ತಾಂತಗಳನ್ನು ಪ್ರದರ್ಶಿಸಲು ಸಂಕ್ಷಿಪ್ತ ನಾಟಕಗಳನ್ನು ತಯಾರಿಸಿ,
2) ನಿಮ್ಮ ಗ್ರಾಮ/ಪಟ್ಟಣದ ಉದಯ/ಹುಟ್ಟಿನ ಬಗ್ಗೆ ಕಥೆಗಳನ್ನು ಸಂಗ್ರಹಿಸಿ ಪ್ರದರ್ಶಿಸಿರಿ.
3) ನಿಮ್ಮ ಪ್ರಾಂತದಲ್ಲಿರುವ ಪ್ರಾಚೀನ ದೇವಾಲಯನ್ನು ಸಂದರ್ಶಿಸಿ ಅದನ್ನು ಯಾವಾಗ ಯಾರು ನಿರ್ಮಿಸಿದ್ದರೋ ತಿಳಿದುಕೊಳ್ಳಿ. ಅಲ್ಲೇನಾದರೂ ಶಾಸನಗಳು ಇವೆಯೋ ನೋಡಿರಿ.

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿರಿ.

1. ಅಂದಿನಕಾಲದಲ್ಲಿನ ಯೋಧರನ್ನು ಆಧುನಿಕ ಕಾಲದಲ್ಲಿನ ಸೇನೆಯೊಂದಿಗೆ ಹೋಲಿಸಿ ಅವರ ನಡುವೆ ನೀವು ಗಮನಿಸಿದ ವ್ಯತ್ಯಾಸಗಳನ್ನು ತಿಳಿಸಿರಿ.
2. ಕಾಕತೀಯ ರಾಜರು, ಸಾಮಂತರು, ವ್ಯವಸಾಯ ಅಭಿವೃದ್ಧಿಗಾಗಿ ಬಾವಿಗಳನ್ನು ತೋಡಿಸಿದ್ದಾರೆ. ಈಗ ಅವು ಹೇಗೆ ಉಪಯೋಗವಾಗುತ್ತವೆ.
3. ಕಾಕತೀಯ ಸಾಮಂತರನ್ನು ನಿಯಂತ್ರಿಸಲು ಇಲ್ಲವೇ ಹತೋಟಿಯಲ್ಲಿಡಲು ಎಂತಹ ಪದ್ದತಿಗಳನ್ನು ಅವಲಂಬಿಸಿದ್ದಾರೆಂದು ನೀವು ಭಾವಿಸುತ್ತೀರಿ.
4. ಕಾಕತೀಯರು ಶಕ್ತಿವಂತವಾದ ಸಾಮಂತ ಕುಟುಂಬದವರಿಂದ ನಾಯಕರನ್ನು ಏಕೆ ನೇಮಿಸಲಿಲ್ಲವೆಂದು ನೀವು ಭಾವಿಸುತ್ತಿದ್ದೀರಿ?
5. ಅಂದಿನ ಕಾಲದಲ್ಲಿ ಸ್ತ್ರೀಯರಿಗೆ ಆಡಳಿತಮಾಡಲು ಏಕೆ ಕಷ್ಟಕರವಾಗಿತ್ತು? ಇದು ಈಗ ಹೇಗೆ ಭಿನ್ನವಾಗಿದೆ.
6. ಅಂದಿನ ಕಾಲದಲ್ಲಿ ಶಕ್ತಿವಂತರಾದವರು ಜನರು ಸ್ವಂತ ಭೂಮಿಗಳನ್ನು ಹೊಂದಿದ್ದು, ಇತರ ರೈತರಿಂದ, ವರ್ತಕರಿಂದ, ಕುಶಲಕರ್ಮಿಗಳಿಂದ ಕಂದಾಯಗಳು ವಸೂಲಿ ಮಾಡುತ್ತಿದ್ದರು. ಈಗ ಶಕ್ತಿವಂತರಾದ ಜನರು ಹಾಗೇ ಮಾಡಬಲ್ಲರೇ, ಹಾಗಾದರೆ ಕಾರಣಗಳನ್ನು ತಿಳಿಸಿ.
7. 111ನೇ ಪುಟದಲ್ಲಿನ "ನಾಯಂಕರ ವಿಧಾನ" ಅಂಶವನ್ನು ಓದಿ, ವ್ಯಾಖ್ಯಾನಿಸಿರಿ.
8. "ಸ್ತ್ರೀಯರು ಸಹ ಪರಿಪಾಲನೆಗೆ ಸಂಬಂಧಿಸಿದ ವ್ಯವಹಾರಗಳನ್ನು ಸಮರ್ಥವಂತವಾಗಿ ನಿರ್ವಹಿಸುತ್ತಾರೆ" ಇದನ್ನು ನೀನು ಹೇಗೆ ಸಮರ್ಥಿಸುತ್ತೀಯಾ ?

SCERT TELANGANA

ಪಾಠ 13

ವಿಜಯನಗರದ ಅರಸರು

ಯೋಧರು, ಸಾಮಂತರಾಜರು ಗ್ರಾಮಗಳನ್ನು ಹೇಗೆ ತಮ್ಮ ಆಧೀನಕ್ಕೆ ತಂದುಕೊಂಡರು, ಅವನ್ನು ಕಾಕತೀಯರು ತಮ್ಮ ಆಧೀನಕ್ಕೆ ತೆಗೆದುಕೊಂಡು ವಿಶಾಲ ಸಾಮ್ರಾಜ್ಯವನ್ನು ಹೇಗೆ ಸ್ಥಾಪಿಸಿದರು ಎಂಬುದನ್ನು ಹಿಂದಿನ ಪಠ್ಯಾಂಶದಿಂದ ತಿಳಿದುಕೊಂಡೆವು. ದೆಹಲಿ ಸುಲ್ತಾನರು ವರಂಗಲ್ಲನು ಜಯಿಸುವುದರೊಂದಿಗೆ ಕಾಕತೀಯ ಸಾಮ್ರಾಜ್ಯವು ಉದಯಿಸಿತು. ಆನಂತರ ಔತ್ಸಾಹಿಕ ಯೋಧರಾದ ನಾಯಕರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಅದೇ ವಿಜಯನಗರ ಸಾಮ್ರಾಜ್ಯ ಅಥವಾ ಕರ್ನಾಟಕ ಸಾಮ್ರಾಜ್ಯವೆಂದು ಕರೆಯಲ್ಪಟ್ಟಿದೆ.

ವಿಜಯನಗರ ಅಂದರೆ ವಿಜಯಗಳ ನಗರ ಎಂದರ್ಥ. ಕರ್ನಾಟಕದಲ್ಲಿ ತುಂಗಭದ್ರ ನದಿಯ ದಡದಲ್ಲಿ ಈ ನಗರ ನಿರ್ಮಿಸಲ್ಪಟ್ಟಿದೆ. ಇದನ್ನು ವಿದ್ಯಾರಣ್ಯಸ್ವಾಮಿ ಆಶಯದೊಂದಿಗೆ ಕ್ರಿ.ಶ.1336 ರಲ್ಲಿ ಹರಿಹರ ಮತ್ತು ಬುಕ್ಕಾರಾಯರು ಸ್ಥಾಪಿಸಿದರು. ವಿಜಯನಗರ ರಾಜರು ವಿರೂಪಾಕ್ಷ ದೇವರನ್ನು ಪೂಜಿಸುತ್ತಿದ್ದರು. ಅವರೇ ಈ ದೇವಾಲಯವನ್ನು ನಿರ್ಮಿಸಿ ವಿಸ್ತರಿಸಿದರು. ವಿಜಯನಗರ ಸಾಮ್ರಾಜ್ಯವು ಸುಮಾರು 300 ವರ್ಷಗಳಿಗಿಂತ ಅಧಿಕ ಕಾಲ ಅಸ್ತಿತ್ವದಲ್ಲಿದ್ದಿತು. ಆದರೆ ಒಂದೇ ವಂಶ ಇದನ್ನು ಆಳಲಿಲ್ಲ. ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶಗಳು ಒಂದರ ನಂತರ ಒಂದು ಪರಿಪಾಲಿಸಿದವು. ಅದರಲ್ಲಿ ಕೆಲವು ಚರ್ಕವರ್ತಿಗಳು ಕನ್ನಡ ಭಾಷೆ ಮಾತನಾಡುತ್ತಿದ್ದರು. ಆದರೆ ಕೃಷ್ಣದೇವರಾಯರು ತೆಲುಗು ಭಾಷೆಗೆ ಸರಿಸಮಾನ ಪ್ರಾಧಾನ್ಯತೆ ನೀಡಿದ್ದರು.

ತುಂಗಭದ್ರ ನದಿಗೆ ಉತ್ತರಕ್ಕೆ ಕೆಲವು ಹೊಸರಾಜ್ಯಗಳು ಉದಯಿಸಿತು ಅವೇ ಬಹುಮನಿ ರಾಜ್ಯ. ಮೊದಲಿಗೆ ಇದು ದೊಡ್ಡ ಸಾಮ್ರಾಜ್ಯ. ಇದರ ಮುಖ್ಯ ಪಟ್ಟಣ ಗುಲ್ಬರ್ಗ ಆನಂತರ ಕ್ರಿ.ಶ.1489–1520 ಐದು ಚಿಕ್ಕ ರಾಜ್ಯಗಳಾಗಿ ವಿಭಾಗಿಸಲ್ಪಟ್ಟವು. ಇವುಗಳಲ್ಲಿ ಬಿಜಾಪುರ ಮತ್ತು ಗೋಲ್ಕಂಡ ದೊಡ್ಡ ರಾಜ್ಯಗಳಾಗಿ ಅವತರಿಸಿದವು. ಅದರಲ್ಲಿ ಹೆಚ್ಚು ಭಾಗ ಇಂದಿನ ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳನ್ನು ಇರಾನ್, ಅರೇಬಿಯಾದಿಂದ ಬಂದ ಸುಲ್ತಾನರು ಮತ್ತು ಯೋಧರು ಪರಿಪಾಲಿಸಿದರು. ಈ ರಾಜ್ಯಗಳಲ್ಲಿ ಪರಸ್ಪರ ನಿರಂತರವಾಗಿ ಯುದ್ಧಮಾಡುತ್ತಾ, ಅವರು ತಮ್ಮ ರಾಜ್ಯ ವಿಸ್ತರಣೆಗೆ ಪ್ರಯತ್ನಿಸಿದರು. ಇವರು ಸ್ಥಾನಿಕ ಯೋಧರನ್ನು ನಾಯಕರನ್ನು ನೇಮಿಸಿಕೊಂಡಿದ್ದರೆಂದು. ಕಳೆದ ಅಧ್ಯಾಯದಲ್ಲಿ ಓದಿ ತಿಳಿದಿದ್ದೇವೆ. ಅವರ ಮೂಲಕ ಗ್ರಾಮಗಳಲ್ಲಿ ರೈತರಿಂದ, ವ್ಯಾಪಾರಸ್ಥರಿಂದ ಕಂದಾಯ ವಸೂಲಿ ಮಾಡುವುದು ಮತ್ತು ಹಳ್ಳಿಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳುವುದು ನಡೆಯುತ್ತಿತ್ತು.

ವಿಜಯನಗರ ರಾಜರಲ್ಲಿ ಪ್ರಮುಖರು

ಹರಿಹರ ರಾಯ	**(ಕ್ರಿ.ಶ. 1336–1357)**
ಮೊದಲ ಬುಕ್ಕರಾಯ	(ಕ್ರಿ.ಶ. 1357–1377)
ಎರಡನೆ ಹರಿಹರ ರಾಯ	(ಕ್ರಿ.ಶ. 1377–1404)
ಎರಡನೆ ದೇವರಾಯ	(ಕ್ರಿ.ಶ. 1426–1446)
ಸಾಳುವ ನರಸಿಂಹರಾಯ	(ಕ್ರಿ.ಶ. 1486–1491)
ಶ್ರೀ ಕೃಷ್ಣದೇವ ರಾಯ	(ಕ್ರಿ.ಶ. 1509–1529)
ಅಚ್ಚುತರಾಯ	(ಕ್ರಿ.ಶ. 1529–1542)
ಅಳಿಯ ರಾಮರಾಯ	(ಕ್ರಿ.ಶ 1543–1565)
ವೆಂಕಟಪತಿರಾಯ	(ಕ್ರಿ.ಶ. 1585–1614)

SCERT TELANGANA

ನಮಗೆ ಹೇಗೆ ತಿಳಿಯಿತು?

ವಿಜಯನಗರ ಚರಿತ್ರೆ ಕುರಿತ ಸಮಕಾಲೀನ ಗ್ರಂಥಗಳು, ಶಾಸನಗಳು, ಅಂದು ನಿರ್ಮಿಸಿದ ಕಟ್ಟಡಗಳು ತಿಳಿಸುತ್ತವೆ. ಈ ವಿವರಗಳ ಆಧಾರದಿಂದ ನಿತ್ಯ ಜೀವನ, ಪರಿಪಾಲನೆಗಳ ಬಗ್ಗೆ ತಿಳಿಯಬಹುದು. ಹೊರ ದೇಶದಿಂದ ಬಂದ ಯಾತ್ರಿಕರಲ್ಲಿ ಇಟಲಿಯ ಯಾತ್ರಿಕ ನಿಕೋಲೋಕೊಂಟಿ ವಿಜಯನಗರನ್ನು ಕ್ರಿ.ಶ.1420ರಲ್ಲಿ ಮೊಟ್ಟಮೊದಲಿಗೆ ಸಂದರ್ಶಿಸಿದನು. ಅಬ್ದುಲ್ ರಜಾಕ್ ಎನ್ನುವ ಪರ್ಷಿಯನ್ ವರ್ತಕ ಕ್ರಿ.ಶ.1443, ಪೋರ್ಚುಗೀಸ್ ಯಾತ್ರಿಕನಾದ ಪಯಜ್ ಕ್ರಿ.ಶ.1520, ನ್ಯೂಜಿಜ್ ಕ್ರಿ.ಶ.1537ರಲ್ಲಿ ಸಂದರ್ಶಿಸಿ ಬರೆದ ರಚನೆಗಳ ಮೂಲಕ ವಿಜಯನಗರ ಚರಿತ್ರೆಗೆ ಸಂಬಂಧಿಸಿದ ಬೆಲೆಬಾಳುವ ಸಮಾಚಾರ ತಿಳಿಯುತ್ತದೆ.

ವಿಜಯನಗರ ಪಟ್ಟಣ:–

ವಿಜಯನಗರ ಪಟ್ಟಣವು ತುಂಗಭದ್ರ ನದಿದಂಡೆಯ ಮೇಲೆ ನಿರ್ಮಿಸಲ್ಪಟ್ಟಿದೆ. ಇಲ್ಲಿನ ಪ್ರಾಚೀನ ದೇವಾಲಯಗಳಾದ ವಿರೂಪಾಕ್ಷ, ಪಂಪಾದೇವಿ ಆಲಯಗಳು ಒಟ್ಟಿಗೆ ಇದೆ. ಅಬ್ದುಲ್ ರಜಾಕ್ ಹೇಳಿಕೆ ಪ್ರಕಾರ ನಗರ ಏಳುವಲಯಗಳಿಂದ ನಿರ್ಮಿಸಿದ ಕೋಟೆ ಗೋಡೆಗಳನ್ನು ಹೊಂದಿದೆ. ಅದರಲ್ಲಿ ಕೆಲವನ್ನು ಪುರಾವಸ್ತು ಶಾಸ್ತ್ರಜ್ಞರು ಕಂಡುಹಿಡಿದರು.

ಪೋರ್ಚುಗೀಸ್ ಸಂದರ್ಶಕನು ಪೇಯಿಸ್ ನಗರವನ್ನು ವರ್ಣಿಸುತ್ತಾ ಬರೆದಿದ್ದಾಳೆ ಓದಿರಿ, ರಾಜರು ಭೇದಿಸಲಾಗದ ಕೋಟೆಯಗೋಡೆ, ಗೋಪುರಗಳಿಂದ ನಗರವನ್ನು ನಿರ್ಮಿಸಿದ್ದಾರೆಂದು ತಿಳಿಸಿದ್ದಾರೆ. ಇಂತಹ ವೈಶಿಷ್ಟ್ಯದಿಂದಿರುವ ಗೋಡೆಗಳು ಬೇರೆಲ್ಲೂ ಇಲ್ಲ. ಸುಂದರವಾದ ಭವನಗಳನ್ನು ಕೋಟೆಯೊಳಗೆ ಸಾಲಾಗಿ ನಿರ್ಮಿಸಿದ್ದಾರೆ. ವಿಶಾಲವಾದ ರಸ್ತೆಯಲ್ಲಿ ಸುಂದರವಾದ ಭವನಗಳಲ್ಲಿ ಮುತ್ತು, ವಜ್ರ ವ್ಯಾಪಾರ ನಡೆಯುತ್ತಿದ್ದವು. ಪ್ರಪಂಚದಲ್ಲಿನ ಎಲ್ಲ ರೀತಿಯ ಬಟ್ಟೆಗಳನ್ನು ಮಾರುತ್ತಿದ್ದರು. ಸಂಜೆವೇಳೆ, ಕುದುರೆಗಳು, ತರಕಾರಿ, ಹಣ್ಣು ಕಟ್ಟಿಗೆ ವಸ್ತುಗಳ ಸಂತೆ ನಡೆಯುತ್ತಿತ್ತು.

- ತರಕಾರಿ, ಹಣ್ಣು, ಕುದುರೆಗಳನ್ನು ಸಂಜೆ ಏಕೆ ಮಾರುತ್ತಿದ್ದರು?




ಚಿತ್ರ 13.1 ತಿರುಮಲ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ಶ್ರೀಕೃಷ್ಣದೇವರಾಯ ಮತ್ತು ಇಬ್ಬರು ಪತ್ನಿಯರ ಕಂಚಿನ ವಿಗ್ರಹಗಳು

ಪ್ರಾಚ್ಯ ವಸ್ತುಶಾಸ್ತ್ರಜ್ಞಸರ ಪ್ರಕಾರ ನಗರವು ನಾಲ್ಕು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಮೊದಲ ಭಾಗದಲ್ಲಿ ದೇವಾಲಯಗಳನ್ನು ಗುಡ್ಡದ ಮೇಲೆ ನಿರ್ಮಿಸುತ್ತಿದ್ದರು. ಎರಡನೇ ಭಾಗದಲ್ಲಿ ವ್ಯವಸಾಯ ಭೂಮಿ, ಕಾಲುವೆಗಳು ಮೂರನೆ ಭಾಗದಲ್ಲಿ ಅಂತಃಪುರ ಭವನಗಳು, ರಾಜ ಭವನಗಳು ಮತ್ತು ಮುಖ್ಯ ನಾಯಕರ ನಿವಾಸಗಳು, ನಾಲ್ಕನೆಯ ಭಾಗದಲ್ಲಿ ಸಾಮಾನ್ಯ ಪ್ರಜೆಗಳು ವಾಸಿಸುತ್ತಿದ್ದರು. ಪ್ರತಿ ವಿಭಾಗವನ್ನು ಬೇರೆಬೇರೆಯಾಗಿ ತೋರಿಸುವ ಭೂಪಟ ಕೆಳಗೆ ಕೊಡಲಾಗಿದೆ.

- ವಿಜಯನಗರ, ವರಂಗಲ್ ಪಟ್ಟಣಗಳ ನಡುವಿನ ವ್ಯತ್ಯಾಸಗಳನ್ನು ಹಾಗೂ ಹೋಲಿಕೆಗಳನ್ನು ಗುರ್ತಿಸಿರಿ.

SCERT TELANGANA



ಪಟ–1 : ವಿಜಯ ನಗರ ಪಟ್ಟಣ

- ಆಧುನಿಕ ನಗರಗಳಲ್ಲಿ ಈ ರೀತಿಯ ಕೋಟೆಗೋಡೆಗಳನ್ನು ಏಕೆ ನಿರ್ಮಿಸುವುದಿಲ್ಲ?

ಸೈನ್ಯ–ಸೈನ್ಯಾಧಿಕಾರಿಗಳು:

ಯುದ್ಧಗಳಲ್ಲಿ ಶಕ್ತಿವಂತರಾದ ಸೈನಿಕರು ಹೇಗೆ ಹೋರಾಡುತ್ತಿದ್ದರೆಂಬುದನ್ನು ನೀವು ಕೇಳಿದ್ದೀರಿ. ಓದಿದ್ದೀರಿ.

- ದೇಶದಲ್ಲಿನ (ಸೈನಿಕರನ್ನು) ಸೈನ್ಯವನ್ನು ಯಾವುದು ಶಕ್ತಿವಂತವಾಗಿ ಮಾಡುತ್ತದೆಂದು ನೀವು ಭಾವಿಸುತ್ತೀರಿ?
- ಆಧುನಿಕ ಸೈನಿಕರು ಬಳಸುವ ಯುದ್ಧ ಸಾಮಾಗ್ರಿಗಳು, ಆಯುಧಗಳು ಯಾವುವು?

ನಾವೀಗ ವಿಜಯನಗರ ರಾಜರ ಕಾಲದಲ್ಲಿ ಯಾವ ರೀತಿಯ ಯುದ್ಧ ಸಾಮಾಗ್ರಿಗಳನ್ನು ಉಪಯೋಗಿಸುತ್ತಿದ್ದರೆಂಬುದನ್ನು ತಿಳಿಯೋಣ.

ವಿಜಯನಗರ ರಾಜರು ಸೈನಿಕ ಶಕ್ತಿಯನ್ನು ಸದೃಢಗೊಳಿಸಲು ಹೆಚ್ಚು ಹಣ ವೆಚ್ಚಮಾಡಿದ್ದರು. ಅರೇಬಿಯಾ, ಇರಾನ್ ದೇಶಗಳಿಂದ ಉತ್ತಮ ಜಾತಿಯ ಕುದುರೆಗಳನ್ನು ಪಶ್ಚಿಮ ತೀರದ ಹಡುಗುಗಳ ಮೂಲಕ ಆಮದು ಮಾಡಿಕೊಂಡರು. ಸೈನಿಕರನ್ನು ನೇಮಿಸಿದರು. ಕೋಟೆ ಗೋಡೆಗಳನ್ನು ಬಲಿಷ್ಠವಾಗಿ ನಿರ್ಮಿಸಿದರು. ಎರಡನೇ ದೇವರಾಯ ಮುಸ್ಲಿಂ ಹೋರಾಟ ಸೈನಿಕರನ್ನು ನಿಯಮಿಸಿ ಅವರಿಗೆ ಸೈನಿಕ ಶಿಬಿರಗಳಲ್ಲಿ ಮಸೀದಿಗಳನ್ನು ಸಹ ನಿರ್ಮಿಸಿದನು. ಆ ದಿನಗಳಲ್ಲೇ ತುಪಾಕಿ (ಗನ್), ಪಿರಂಗಿಗಳನ್ನು ಬಳಸಲಾಯಿತು. ಭಾರತದೇಶದಲ್ಲೇ ಆಧುನಿಕ ಅಶ್ವದಳ, ಸೈನಿಕದಳ ಎರಡನ್ನು ಸೇರಿಸಿ ಒಂದು ಶಕ್ತಿಯುತವಾದ ಸೈನ್ಯವನ್ನು ಮಾಡಿದರು.

- ಆ ಕಾಲದಲ್ಲಿ ವೇಗವಾಗಿಹೋಗಲು ಅಶ್ವದಳ ಉಪಯೋಗಿಸುತ್ತಿದ್ದರು. ಅದರ ಸ್ಥಾನದಲ್ಲಿ ಈಗ ಏನನ್ನು ಬಳಸುತ್ತಾರೆ?
- ಆನೆಗಳು ನಿಧಾನವಾಗಿ ನಡೆಯುತ್ತಾ ಶತ್ರು ಶಿಬಿರಗಳ ಮೇಲೆ ದಾಳಿ ಮಾಡುವುದರಲ್ಲಿ ಶಕ್ತಿವಂತವಾದವು. ಪ್ರಸ್ತುತ ಅದರ ಸ್ಥಾನದಲ್ಲಿ ಯಾವುದು ಸೂಕ್ತ?

™ಸೈನಿಕದಳದ ನಾಯಕ–ಅಮರನಾಯಕ:–

ಪೂರ್ಣ ರಾಜ್ಯವನ್ನು ಸೈನಿಕ ಅಧಿಕಾರಿಗಳೆ ನಿರ್ವಹಣೆ ಮಾಡುತ್ತಿದ್ದರು. ಅವರು ಯಾರು? ಅವರು ಏನು ಮಾಡುತ್ತಿದ್ದರು ಎಂಬುದನ್ನುನಾವು ಈಗ ತಿಳಿಯೋಣ. ಪೋರ್ಚುಗೀಸ್ ಯಾತ್ರಿಕನಾದ ಡೋಮಿಂಗ್ ಫಿಯಾಜ್ ಶ್ರೀಕೃಷ್ಣದೇವರಾಯರ ಕಾಲದಲ್ಲಿ ವಿಜಯನಗರವನ್ನು ಸಂದರ್ಶಿಸಿದಾಗ, "ರಾಜರ ಬಳಿ ಲಕ್ಷಾಂತರ ಬಲಿಷ್ಠವಾದ ಸೈನ್ಯದ ಜೊತೆಗೆ 35,000 ಅಶ್ವದಳ, ಯಾವುದೇ ಸಮಯದಲ್ಲಾದರೂ, ಎಲ್ಲಾದರೂ ಯುದ್ಧ ಮಾಡಲು ಸಿದ್ಧವಾಗಿರುತ್ತಿದ್ದರಂತೆ. ಆದ್ದರಿಂದ ಆತನೆಂದರೆ ಇತರ ರಾಜರಿಗೆ ಭಯ.

ಸೈನಿಕದಳದ ಅಧಿಕಾರಿಗಳನ್ನು ರಾಜನ ವರ್ಗದವರಿಂದ ನೇಮಿಸುತ್ತಿದ್ದರು. ಇವರಿಗೆ ರಾಜ್ಯದಲ್ಲಿನ ಪಟ್ಟಣಗಳು, ನಗರಗಳ ಮೇಲೆ, ಗ್ರಾಮಗಳ ಮೇಲೆ ಸಂಪೂರ್ಣ ಅಧಿಕಾರ ಇರುತ್ತಿತ್ತು. ಇವರಲ್ಲಿ ಕೆಲವರು ಲಕ್ಷಗಟ್ಟಲೆ ಬಂಗಾರದ ನಾಣ್ಯಗಳನ್ನು ಕಂದಾಯವಾಗಿ ವಸೂಲಿ ಮಾಡುತ್ತಿದ್ದರು. ಮತ್ತೆ ಕೆಲವರು ಎರಡುನೂರು, ಮೂರುನೂರು, ಐದುನೂರು ಸಾವಿರದ ವರೆಗೆ ನಾಣ್ಯಗಳನ್ನು ವಸೂಲಿ ಮಾಡುತ್ತಿದ್ದರು. ರಾಜ ಸೈನಿಕ ದಳಾಧಿಪತಿ ನಿರ್ವಹಿಸುವ ಸೈನ್ಯದ ಆಧಾರದ ಮೇಲೆ (ಪದಾತಿ, ಅಶ್ವದಳ, ಗಜ) ಬಂಗಾರದ ನಾಣ್ಯಗಳ ವಸೂಲಾತಿಯನ್ನು ನಿರ್ಣಯಿಸುತ್ತಿದ್ದನು. ಈ ಸಂಪತ್ತನ್ನು ನಾಯಕನು ಪದಾತಿ (ಪಾದಾಚಾರಿ) ದಳ, ಕುದುರೆ,

SCERT TELANGANA

ಆನೆ ಇವುಗಳ ಪೋಷಣೆಗಾಗಿ ಖರ್ಚುಮಾಡುತ್ತಿದ್ದನು. ಇವನ್ನು ಯಾವುದೇ ಸಮಯದಲ್ಲಾದರೂ ನಿರ್ವಹಣೆಗಾಗಿ ಸಿದ್ಧವಾಗಿರಿಸುತ್ತಿದ್ದರು. ಇದಲ್ಲದೆ ರಾಜರಿಗೆ ವಾರ್ಷಿಕ ಕಾಣಿಕೆ, ಬಹುಮಾನಗಳನ್ನು ಸಮರ್ಪಿಸುತ್ತಿದ್ದರು. ದಳಾಧಿಪತಿಗಳನ್ನು, ನಾಯಕರ ಸೈನ್ಯದ ಜೊತೆಗೆ ರಾಜನ ಬಳಿ ಸಿದ್ಧವಾದ ಸೈನ್ಯ ಜೊತೆಗಿರುತ್ತಿತ್ತು. ಇವರಿಗೆ ರಾಜನೇ ವೇತನ ಕೊಡುತ್ತಿದ್ದನು.

ಮೇಲಿನ ವಿಷಯದ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

- ಶ್ರೀ ಕೃಷ್ಣದೇವರಾಯನೆಂದರೆ ಬೇರೆಯವರಿಗೆ ಭಯ ಏಕೆ?
- ಗ್ರಾಮಗಳನ್ನು ಪಟ್ಟಣಗಳನ್ನು ಯಾರು ನಿಯಂತ್ರಿಸುತ್ತಿದ್ದರು?
- ಎಲ್ಲರು ಸಮಾನವಾಗಿ ಆದಾಯ ಹೊಂದುತ್ತಿದ್ದರಾ ?
- ದಳಾಧಿಪತಿಗಳು, ನಾಯಕರು ಗ್ರಾಮಗಳನ್ನು ಅಧೀನದಲ್ಲಿಟ್ಟುಕೊಳ್ಳಲು ಏನು ಮಾಡುತ್ತಿದ್ದರು?
- ರಾಜ ನಾಯಕರು ಸೈನ್ಯದ ಮೇಲೆ ಆಧಾರವಾಗಿದ್ದಾರೆಯೇ?

ಸೈನಿಕ ದಳಾದಿಪತಿಗಳನ್ನು ನಾಯಕರಾಗಿ ಸಹ ನೇಮಿಸುತ್ತಿದ್ದರು. ಇವರನ್ನು ಅಮರನಾಯಕರಾಗಿ ಕರೆದರು. ಇವರಿಗೆ ಅಮರದ ಮೇಲೆ ಆದಾಯ ವಸೂಲಿಮಾಡುವ ಕೆಲಸವನ್ನು ನೀಡುತ್ತಿದ್ದರು. ಅಮರಂ ಅಂದರೆ ನಿಶ್ಚಯಿಸಿದ ಪ್ರಾಂತದ ಮೇಲೆ ಆದಾಯ ತೆರಿಗೆ ವಸೂಲಿಮಾಡುವ ಅಧಿಕಾರ. ಅಂದರೆ ಇವರಿಗೆ ಇಷ್ಟವಾದ ಗ್ರಾಮ, ಪಟ್ಟಣ ದಿಂದ ಆದಾಯ ವಸೂಲಿಮಾಡಿ ಉಪಯೋಗಿಸಿ ಕೊಳ್ಳುವ ಅಧಿಕಾರವಿರುತ್ತದೆ. ಅಷ್ಟೇ ಅಲ್ಲದೆ ಆದಾಯದ ಜೊತೆಗೆ ಸೈನಿಕ ದಳಗಳನ್ನು ಪೋಷಿಸುವ ಜವಾಬ್ದಾರಿ ಸಹ ಇರುತ್ತದೆ. ಇವರ ಅಧೀನದಲ್ಲಿರುವ ಪ್ರಾಂತ್ಯಗಳ ಮೇಲೆ ಪರಿಪಾಲನೆ ನ್ಯಾಯುಪರವಾದ ಅಧಿಕಾರವನ್ನು ಪಡೆದಿರುತ್ತಿದ್ದರು. ತಪ್ಪಿತಸ್ಥರಿಗೆ ಕಾನೂನು ರೀತಿ ಕಠಿಣ ಶಿಕ್ಷೆ ನೀಡುವ ಅಧಿಕಾರ ಸಹ ಇವರಿಗೆ ನೀಡಿತ್ತು. ಇದು ಅಂದಿನ ದೆಹಲಿ ಸುಲ್ತಾನರ ಪರಿಪಾಲನೆಗೆ ಸಮವಾಗಿತ್ತು. ಅವರು ಸಹ "ಇಕ್ತಾ"ಲ ಅಧಿಕಾರಿಗಳಾದ "ಅಮಿರ್"ಗಳಿಗೆ ರೆವೆನ್ಯೂ ವಸೂಲಿ ಮಾಡುವ ಅಧಿಕಾರ ಕಲ್ಪಿಸಿದರು.

ಬಹಳ ಮಂದಿ ಅಮರ ನಾಯಕರು ತೆಲುಗು ವೀರರು. ಇವರು ಸ್ವಂತ ಗ್ರಾಮದಿಂದ ಇಲ್ಲವೇ ಅವರ ನೆಂಟರ ಮೂಲಕ ಸೈನಿಕರನ್ನು ನೇಮಿಸಿಕೊಂಡು ಶಿಕ್ಷಣ ನೀಡುತ್ತಿದ್ದರು. ರಾಜರಿಗಿಂತ ನಾಯಕರಿಗೆ ವಿಧೇಯರಾಗಿ ಇರುತ್ತಿದ್ದರು. ಶಕ್ತಿವಂತರಾದ ನಾಯಕರಲ್ಲಿ ಸಾಳುವ ನರಸಿಂಹ ಅಥವಾ ನರಸನಾಯಕನು ವಿಶಾಲ ಭೂಭಾಗದ ಮೇಲೆ ಅಧಿಕಾರನವನ್ನು ಹೊಂದಿ ಕೆಲವು ಸಂದರ್ಭಗಳಲ್ಲಿ ವಿಜಯನಗರ ರಾಜರಿಗೆ ಸವಾಲಾಗಿ ನಿಲ್ಲುತ್ತಿದ್ದರು. ಒಂದುವೇಳೆ ರಾಜ ಮರಣ ಹೊಂದಿದರೆ ಆ ರಾಜರ ರಾಜ್ಯವನ್ನು ಶಕ್ತಿವಂತರಾದ ನಾಯಕರು ತಮ್ಮ ವಶಕ್ಕೆ ತೆಗೆದುಕೊಂಡು ರಾಜ್ಯವನ್ನು ಹಸ್ತಾಂತರಿಸಿಕೊಂಡು ತಾವೆ ರಾಜರಾಗಿ ಘೋಷಿಸಿಕೊಳ್ಳುತ್ತಿದ್ದರು.

ನಾವೀಗ ಹೋಲಿಕೆ ಮಾಡೋಣ :

ನೀವು ಚೋಳ ರಾಜರ ಕುರಿತು ಓದಿದ್ದೀರ. ಅವರು ಭೂಕಂದಾಯವನ್ನು ಗ್ರಾಮಸ್ಥರ ಮೂಲಕ ಹೇಗೆ ವಸೂಲಿ ಮಾಡುತ್ತಿದ್ದರೆಂಬುದನ್ನು ತಿಳಿದುಕೊಂಡಿರಿ. ಆದರೆ ವಿಜಯನಗರ ಸಾಮ್ರಾಜ್ಯವು ಅಮರನಾಯಕ ಸೈನಿಕ ಶಕ್ತಿಯಿಂದ ಬಲವಾಗಿದೆ. ಗ್ರಾಮಗಳು, ಪಟ್ಟಣಗಳು ಪೂರ್ತಿಯಾಗಿ ಇವರ ಅಧೀನದಲ್ಲಿಯೇ ಇದ್ದವು.

- ಇಂದು ಗ್ರಾಮಗಳಲ್ಲಿ ಅಮರನಾಯಕರ ವ್ಯವಸ್ಥೆ ಇದ್ದರೆ ಅದರ ಪ್ರಭಾವ ಹೇಗೆ ಇರುತ್ತಿತ್ತು? ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.
- ಕಳೆದ ಪಾಠದಲ್ಲಿ ನೀವು ನಮ್ಮ ದೇಶದಲ್ಲಿ ಇಂದು ಗ್ರಾಮ/ಪಟ್ಟಣ ಪರಿಪಾಲನೆ ಹೇಗೆ ನಿರ್ವಹಿಸಲ್ಪಟ್ಟಿದೆ ಎಂದು ಓದಿದ್ದೀರಿ. ಇದನ್ನು ವಿಜಯನಗರ ನಿರ್ವಹಣೆಯೊಂದಿಗೆ ಹೋಲಿಸುವಿರಾ? ವ್ಯತ್ಯಾಸ ತಿಳಿಸಿರಿ.

ಶ್ರೀಕೃಷ್ಣದೇವರಾಯರು : ಶ್ರೇಷ್ಠ ಪರಿಪಾಲಕ:–

ಶ್ರೀ ಕೃಷ್ಣದೇವರಾಯರು ಕ್ರಿ.ಶ. 1509ರಿಂದ 1529ರವರೆಗೆ ಪರಿಪಾಲಿಸಿದನು. ಬಹುಮನಿ ಸುಲ್ತಾನರು, ಗಜಪತಿಗಳಿಗೆ (ಒರಿಸ್ಸಾ) ವಿರುದ್ಧವಾಗಿ ವಿಜಯನಗರ ಸೈನ್ಯವನ್ನು ವಿಜಯವಂತವಾಗಿ ನಡೆಸಿದ ಮಹಾನ್ ಯೋಧನು. ಈತನಿಗೆ ವಿರೋಧವಾಗಿ ಎದುರು ತಿರುಗಿದ ಕರ್ನಾಟಕ, ಆಂಧ್ರ, ತಮಿಳುನಾಡು ಪ್ರಾಂತ್ಯಗಳಲ್ಲಿನ

SCERT TELANGANA

ನಾಯಕರನ್ನು ತುಳಿದುಹಾಕಿದನು. ಈ ವಿಧವಾಗಿ ಸಾಮ್ರಾಜ್ಯದ ಮೇಲೆ ಅಧಿಪತ್ಯ ಸಂಪಾದಿಸಿದನು. ವಿಶಿಷ್ಟವಾಗಿ ದಕ್ಷಿಣ ಪ್ರಾಂತ್ಯ ಮತ್ತು ಕೃಷ್ಣಾನದಿ ಪೂರ್ವತೀರದ ಬಂದರುಗಳ ಮೇಲೆ ನಿಯಂತ್ರಣ ಸಾಧಿಸಿದ್ದನು.

ಇದೇ ಸಮಯದಲ್ಲಿ ಪಶ್ಚಿಮ ತೀರದ ಗೋವಾದಲ್ಲಿ ಪೋರ್ಚುಗೀಸಿನವರು ಬಂದರುಗಳ ಹತ್ತಿರ ಸ್ಥಾವರಗಳು (ವಸಾಹತು) ನಿರ್ಮಿಸಿಕೊಂಡು ತಮ್ಮ ಹಿಡಿತವನ್ನು ಸಾಧಿಸಿದರು. ಕೃಷ್ಣದೇವರಾಯರು ಇವರೊಂದಿಗೆ ಸ್ನೇಹಪೂರ್ವಕ ಸಂಬಂಧಗಳನ್ನು ನೆಲೆಗೊಳಿಸಿದರು. ಪ್ರತ್ಯೇಕವಾಗಿ, ಕುದುರೆಗಳು ಸ್ಫೋಟಕ ಪದಾರ್ಥವನ್ನು ಹೊಂದುವುದಕ್ಕಾಗಿ ಅವರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡರು. ಅವರೊಂದಿಗೆ ಸೈನಿಕ ದಳಗಳನ್ನು ಸಹ ಏರ್ಪಾಟುಮಾಡಿದರು.

ಪ್ರತಿವರ್ಷ ವಿಜಯದಶಮಿಯಂದು ದೊಡ್ಡಮಟ್ಟದಲ್ಲಿ ಹಬ್ಬ ಆಚರಿಸುತ್ತಿದ್ದರು. ಸೈನಿಕದಳ ಪ್ರದರ್ಶನವನ್ನು ನಿರ್ವಹಿಸುತ್ತಿದ್ದರು. ಇದು ದೊಡ್ಡ ಮಟ್ಟದಲ್ಲಿ ಸೈನಿಕರ ಕವಾಯಿತುನೊಂದಿಗೆ ಮುಗಿಯತ್ತಿತ್ತು. ಆ ದಿನದಂದು, ಅಮರನಾಯಕರು, ಪ್ರಮುಖರು ಚಕ್ರವರ್ತಿಗೆ ಕಾಣಿಕೆಗಳು, ಕಪ್ಪವನ್ನು ಸಲ್ಲಿಸುತ್ತಿದ್ದರು. ಕೃಷ್ಣದೇವರಾಯರು ತಮ್ಮ ಸಾಮ್ರಾಜ್ಯದಲ್ಲಿರುವ ದೇವಾಲಯಗಳ ಬಗ್ಗೆ ವಿಶೇಷ ರೀತಿಯ ಶ್ರದ್ಧೆಯನ್ನು ತೋರಿಸುತ್ತಿದ್ದರು. ಅವರು ತಾವೇ



ಚಿತ್ರ –13.2 ಹಜಾರ ರಾಮಾಲಯದಲ್ಲಿ ಕಲ್ಲಿನ ರಥ

ಸ್ವತಃ ತಿರುಪತಿ, ಶ್ರೀಶೈಲ ಅಹೋಬಲಂ ಸಂದರ್ಶಿಸುತ್ತಿದ್ದರು. ಅನೇಕ ದೇವಾಲಯಗಳಿಗೆ ದೊಡ್ಡಮೊತ್ತದಲ್ಲಿ ಕಾಣಿಕೆಗಳನ್ನು ಸಮರ್ಪಿಸುತ್ತಿದ್ದರು.

ಶ್ರೀಕೃಷ್ಣದೇವರಾಯರ ಶಾಸನಗಳಲ್ಲಿ ಹೇಳಲ್ಪಟ್ಟಂತೆ ಅನೇಕ ಯುದ್ಧಗಳಲ್ಲಿ ಜಯಗಳಿಸಿ ದೊರೆತ ಧನರಾಶಿಯನ್ನು ದಕ್ಷಿಣ ಭಾರತದೇಶದಲ್ಲಿನ ದೊಡ್ಡದೊಡ್ಡ ದೇವಾಲಯಗಳಿಗೆ ಹಂಚಿದ್ದಾನೆ. ಈ ದೇವಾಲಯಗಳಲ್ಲಿ ಈತನ ಗೌರವಾರ್ಥವಾಗಿ "ರಾಯಗೋಪುರ" ಎನ್ನುವ ಎತ್ತರವಾದ ಆಲಯ ಮುಖದ್ವಾರಗಳನ್ನು ನಿರ್ಮಿಸಿದರು. ಈ ರೀತಿಯ ದಾನ ಶೀಲತೆಯಿಂದ ದಕ್ಷಿಣಭಾರತ ದೇಶದಲ್ಲಿನ ಪ್ರಜೆಗಳು ತಮ್ಮ ಹೆಸರನ್ನು ಶಾಶ್ವತವಾಗಿ ಗುರ್ತಿಸಿಕೊಳ್ಳುವಂತೆ ಮಾಡಿದನು. ವಿಜಯನಗರ

ಚಿತ್ರ 13.3 ಹಜಾರ ರಾಮಾಲಯದ ಕುಡ್ಯಫಲಕ : ಇದರ ಬಗ್ಗೆ ಕಥೆ ಬರೆಯಿರಿ.



© SCERT TELANGANA



13.4 ಕಾಂಚಿಪುರದಲ್ಲಿನ ಏಕಾಂಬರೇಶ್ವರ ದೇವಾಲಯದ ಗೋಪುರ

ಪಟ್ಟಣದಲ್ಲಿಯೂ ಸಹ ಕೆಲವು ಸುಂದರ ದೇವಾಲಯ ಗಳನ್ನು ನಿರ್ಮಿಸಿದ್ದಾನೆ.

ಶ್ರೀಕೃಷ್ಣದೇವರಾಯರು ಸ್ವತಃ ತೆಲುಗು ಸಾಹಿತ್ಯದಲ್ಲಿ ಕವಿ, ಆತನು "ಅಂಡಾಳ್" ಎಂಬ ತಮಿಳು ಭಕ್ತಿ ಕವಿಯತ್ರಿ ಜೀವನವನ್ನು ಕುರಿತು "ಅಮುಕ್ತಮಾಲ್ಯದ" ಗ್ರಂಥವನ್ನು ಬರೆದಿದ್ದಾನೆ. ಇವರ ಕಾಲದಲ್ಲಿ ಅಲ್ಲಸಾನಿ ಪೆದ್ದನ್ನರಂತಹ ತೆಲುಗು ಕವಿಗಳೊಂದಿಗೆ ದುರ್ಜಟಿ, ತೆನಾಲಿ ರಾಮಕೃಷ್ಣ, ನಂದಿ ತಿಮ್ಮನ, ಪಿಂಗಳೆ ಸೂರನ್ನ, ರಾಮರಾಜಭೂಷಣ, ಮಾದಯಗಾರಿ ಮಲ್ಲನ್ನ, ಅಯ್ಯಲರಾಜ ರಾಮ ಭದ್ರುಡುನಂತಹ ಅಷ್ಟ ದಿಗ್ಗಜರು ರಾಯರ ಆಸ್ಥಾನವನ್ನು ಅಲಂಕರಿಸಿದ್ದರು.

ಶ್ರೀ ಕೃಷ್ಣದೇವರಾಯರ ಉತ್ತರಾಧಿಕಾರಿಯಾದ ಅಚ್ಯುತ ದೇವರಾಯ ಮತ್ತು ಅಳಿಯ ರಾಮರಾಯರ ಕಾಲದಲ್ಲಿ ವಿಜಯನಗರ ರಾಜರ ಪ್ರಾಭಲ್ಯವು ಮತ್ತಷ್ಟು ಬೆಳೆಯಿತು. ಇವರು ಬಹುಮನಿ ಸುಲ್ತಾನರ ರಾಜ ವ್ಯವಹಾರಗಳಲ್ಲಿ ಮಧಸ್ಥಿಕೆ ಮಾಡಿಕೊಂಡರು. ಇವರ ನಿರಂತರ ಮಧ್ಯಸ್ಥಿಕೆಯ ಫಲವಾಗಿ ಆಂದೋಳನಗೊಂಡ ಐದುಜನ ಬಹುಮನಿ ಸುಲ್ತಾನರು ಕ್ರಿ.ಶ.1565ರಲ್ಲಿ ಒಂದಾಗಿ ರಕ್ಕಸತಂಗಡಿ ಅಥವಾ ತಾಳೀಕೋಟೆ ಯುದ್ಧದಲ್ಲಿ ರಾಮರಾಯರನ್ನು ಸೋಲಿಸಿ, ವಿಜಯನಗರ ಪಟ್ಟಣವನ್ನು ದೋಚಿ ಸರ್ವನಾಶಮಾಡಿದರು. ಆ ನಂತರ ಬಂದ ಉತ್ತರಾಧಿಕಾರಿಗಳು ರಾಜಧಾನಿಯನ್ನು ತಿರುಪತಿಯ ಸಮೀಪದಲ್ಲಿರುವ ಚಂದ್ರಗಿರಿಗೆ ವರ್ಗಾಯಿಸಿದರು. ಆದರೆ ಪೂರ್ವವೈಭವವನ್ನು ಪಡೆಯಲಾರದೇ ಹೋದರು. ಸ್ವಲ್ಪ ಪ್ರಾಂತವನ್ನು ಸುಲ್ತಾನರು ಆಕ್ರಮಿಸಿಕೊಂಡರೆ ಉಳಿದ ಭೂಭಾಗಗಳ ಮೇಲೆ ನಾಯಕರು ಸ್ವತಂತ್ರ ರಾಜರಾಗಿ ಪ್ರಕಟಿಸಿಕೊಂಡರು.

ಗೋಲ್ಕೊಂಡ ಕುತುಬ್ ಷಾಹಿಗಳು (1512–1687)


ಕುತುಬ್ ಷಾಹಿ ಪಾಲಕರು	ಕಾಲ
ಕುಲಿಕುತುಬ್ ಷಾ	1512–1543
ಜಂಷೆಡ್ ಕುಲೀ	1543–1550
ಇಬ್ರಾಹಿಂ ಕುತುಬ್ ಷಾ	1550–1580
ಮಹ್ಮದ್ ಕುಲೀ ಕುತುಬ್ ಷಾ	1580–1612
ಮೊಹ್ಮದ್ ಕುತುಬ್ ಷಾ	1612–1626
ಅಬ್ದುಲ್ಲಾ ಕುತುಬ್ ಷಾ	1626–1672
ಅಬುಲ್ ಹಸನ್ ತಾನಾ ಷಾ	1672–1687

ತೆಲಂಗಾಣದಲ್ಲಿಯ ಕಾಕತೀಯ ರಾಜ್ಯದ ಬಗ್ಗೆ ನಾವು ತಿಳಿದುಕೊಂಡಿದ್ದೇವೆ. ಕಾಕತಿಯರ ನಂತರ ಕೆಲವು ಸಾಮಂತ ರಾಜರು ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿಕೊಂಡರು. ಅವುಗಳಲ್ಲಿ ರಾಚಕೊಂಡ, ದೇವರಕೊಂಡ. ವೆಲಮರಾಜ್ಯಗಳು ಬಹಳ ಬಲಾಡ್ಯ ರಾಜ್ಯಗಳಗಿದ್ದವು. ಇವು ವಿಜಯನಗರದ ಅರಸರ, ಬಹಮನಿ ಸುಲ್ತಾನರ ಅಧಿಕಾರಕ್ಕೆ ಸವಾಲೆಸೆದರು. ತೆಲಂಗಾಣ ಪ್ರಾಂತದಲ್ಲಿ ಬಹಮನಿ ಸುಲ್ತಾನರ ಗವರ್ನರ ಆಗಿದ್ದ ಕುಲೀ ಕುತುಬ್ ಷಾ 1512 ರಲ್ಲಿ ಸ್ವಾತಂತ್ರ್ಯವನ್ನು ಪ್ರಕಟಿಸಿಕೊಂಡು ಗೋಲ್ಕೊಂಡ ಕುತುಬ್ ಷಾಹಿ ರಾಜ್ಯವನ್ನು ಸ್ಥಾಪಿಸಿದನು. ಈತನು ವರಂಗಲ್, ಕೊಂಡಪಲ್ಲಿ, ಏಲೂರು, ರಾಜಮಂಡ್ರಿ ಕೋಟೆಗಳನ್ನು ವಶಪಡಿಸಿಕೊಂಡು ತನ್ನ ಆಡಳಿತವನ್ನು ವಿಸ್ತರಿಸಿದನು. ಗೋಲ್ಕೊಂಡ ರಾಜ್ಯದಲ್ಲಿ ತೆಲಂಗಾಣ ಪ್ರಧಾನ ಭಾಗವಾಗಿದ್ದಿತು. ಆತನ ನಂತರ ಬಂದ ರಾಜರು ಈ ರಾಜ್ಯವನ್ನು 1687ರ ವರೆಗೆ ಆಳಿದರು.

ಸುಲ್ತಾನ್ ಇಬ್ರಾಹಿಂ ಕುತುಬ್ ಷಾ (1550–1580) ತೆಲುಗು ಸಾಹಿತ್ಯವನ್ನು ಷೋಷಿಸಿ ಬ್ರಾಹ್ಮಣರನ್ನು

SCERT TELANGANA

ಕುತುಬ್ ಷಾಹಿ ಸಾಮ್ರಾಜ್ಯ (1518–1687)



ದೇವಾಲಯಗಳನ್ನು ಆಧರಿಸಿದನು. ಸಿಂಗರಾಚರ್ಯರು, ಅದ್ದಂಕಿ ಗಂಗಾಧರ, ಕಂದುಕೂರಿ ರುದ್ರಕವಿ ಮತ್ತು ಪೊನಗಂಟಿ ತೆಲಗನಾರ್ಯರಿಗೆ ಇಬ್ರಾಹಿಂ ಕುತುಬ್ ಷಾಹಿಗಳಿಂದ ಆಧರಣೆ ಲಭಿಸಿತು. ಈತನ ಕಾಲದಲ್ಲಿನ ಪ್ರಮುಖ ಕವಿಗಳು ಈತನನ್ನು ಮಲ್ಕಿಭರಾಮನೆಂದು ಪ್ರಶಂಸಿದ್ದಾರೆ. ಕಾಕತೀಯ ರಾಜರಂತೆ ಭಾರಿ ಪ್ರಮಾಣದ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿದನು. ಪ್ರತಾಪರುದ್ರನ ಹತ್ತಿರ ಸೇವೆ ಸಲ್ಲಿಸಿದ ಸೈನಿಕರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡನು. ವ್ಯವಸಾಯ ರಂಗದಲ್ಲಿ ಅವರಿಗೆ ಸ್ವಯಂ. ನಿರ್ಣಯಾಧಿಕಾರ ನೀಡಿದನು. ಕೋಟೆಗಳ ನಿರ್ಮಾಣದ ಹೊಣೆಗಾರಿಕೆಯನ್ನು ಅವರಿಗೆ ನೀಡಿದನು.

ಕಡಿಮೆ ಅವಧಿಯಲ್ಲಿಯೇ ಕುತುಬ್ ಷಾಹಿ ಪಾಲಕರು ಜೀವಾವರಣದ ಬಗ್ಗೆ ಅರ್ಥಮಾಡಿಕೊಂಡರು. ತೆಲಂಗಾಣದಲ್ಲಿ ವ್ಯವಸಾಯವನ್ನು ವಿಸ್ತರಿಸುವ ಉದ್ದೇಶದಿಂದ ಕಾಕತೀಯರು ಅನುಸರಿಸಿದ ನೀರಾವರಿ ವಿಧಾನವನ್ನು ಅನುಸರಿಸಲು ನಿರ್ಣಯಿಸಿದರು. ರಾಜಧಾನಿ ಗೋಲ್ಕೊಂಡದಲ್ಲಿ ನಿವಸಿಸುತ್ತಿರುವುದರಿಂದ, ಇಬ್ರಾಹಿಂ ಕುತುಬ್ ಷಾಹಿ ಪಾಲನಾ ಕಾಲದಲ್ಲಿ(1562) ಹುಸ್ಸೇನ್ ಸಾಗರ್ ಕೆರೆಯನ್ನು ನಿರ್ಮಿಸಲಾಯಿತು. ಅದರ ರೇಖಾಚಿತ್ರ (ಡಿಜೈನ್) ತಯಾರಿಸಿ ಸಹಕರಿಸಿದ ಸೂಫಿಸಂತ ಹಜರತ್ ಹುಸ್ಸೇನ್ ಷಾವಲಿಯವರ ಹೆಸರನ್ನೆ ಆ ಕೆರೆಗೆ ನಾಮಕರಣ ಮಾಡಲಾಯಿತು. ಅದು ಮೂಸಿ ನದಿ ನೀರಿನಿಂದ ವರ್ಷವಿಡೀ ತುಂಬಿರುವ ಕೃತಕ ಕೆರೆಯಾಗಿದೆ. ಅದು ಹೈದ್ರಾಬಾದ್ ಮಹಾನಗರಕ್ಕೆ ಕುಡಿಯುವ ನೀರಿನ ಮೂಲವಾಗಿ ಬದಲಾಯಿತು. ಇಬ್ರಾಹಿಂ ಪಟ್ಟಣದಲ್ಲಿಯೂ ಒಂದು ಕೆರೆಯನ್ನು ಕಟ್ಟಿಸಿದನು. ಮೂಸಿ ನದಿಯ ಮೇಲೆ ನಿರ್ಮಿಸಿದ "ಪೂರಾನಾ ಪೂಲ್" (ಹಳೆಯ ಸೇತುವೆ) ಕೂಡ ಬಹಳ ಪ್ರಸಿದ್ಧವಾಗಿದೆ.

ಇಬ್ರಾಹಿಂನ ಮಗನಾದ ಮೊಹ್ಮದ್ ಕುಲೀ ಪ್ರಸಿದ್ಧ ಕಟ್ಟಡ ನಿರ್ಮಾಪಕನು ಹೈದ್ರಾಬಾದ್ ನಗರವನ್ನು ಯೋಜನಾ ಬದ್ಧವಾಗಿ ನಿರ್ಮಿಸಿದನು. ಹೈದರಾಬಾದ್ ನಗರ ನಿರ್ಮಾಣದಲ್ಲಿ ಶ್ರೀ ಮೀರ್ ಮೊಮಿನ್ ಅಸ್ತರಾಬಾದಿ ಪ್ರಧಾನ ವಾಸ್ತುಶಾಸ್ತ್ರಜ್ಞನಾಗಿದ್ದರು. ಈತನು ಕುಲೀ ಕುತುಬ್ ಷಾನ ಮಂತ್ರಿಯಾಗಿ, ಚಾರಮಿನಾರ್ ಮತ್ತು ಹೊಸ ರಾಜಧಾನಿ ರೇಖಾ ಪಟ ತಯಾರಿಸುವಲ್ಲಿ

SCERT TELANGANA



13.5 ಚಾರ್ ಮಿನಾರ್

ಪ್ರಧಾನ ಪಾತ್ರವಹಿಸಿದನು. ಮೊಹ್ಮದ್ ಕುಲೀ ಕುತುಬ್ ಷಾ ಮಕ್ಕಾ ಮಸೀದು, ಜಾಮಾ ಮಸೀದುಗಳನ್ನು ನಿರ್ಮಿಸಿದನು. ಮಕ್ಕಾದಲ್ಲಿನ ಅತಿದೊಡ್ಡ ಮಸೀದಿಯ ನಮೂನೆಯಲ್ಲಿ ಇದನ್ನು ನಿರ್ಮಿಸಿದನು. ಮೆಕ್ಕದಿಂದ ತಂದ ಮಣ್ಣಿನಿಂದ ಇಟ್ಟಿಗೆಗಳನ್ನು ತಯಾರಿಸಿ, ಅವುಗಳಿಂದ ಮಸೀದಿಯಲ್ಲಿ ಮಧ್ಯೆ ಗೋಪುರ ನಿರ್ಮಿಸಿದನು. ಆದ್ದರಿಂದ ಅದಕ್ಕೆ ಆ ಹೆಸರು ಬಂದಿದೆ. ಮಸೀದಿಯಲ್ಲಿಯ ಒಂದು ಕೋಣೆಯಲ್ಲಿ ಪ್ರವಾದಿ ಮೊಹಮ್ಮದನ ಕೇಶಗಳು ಕೂಡಾ ಇವೆ. ಹೈದ್ರಾಬಾದ್ ನಗರಕ್ಕೆ ಪ್ರಖ್ಯಾತ ಗುರುತಾದ ಚಾರ್ ಮಿನಾರನ್ನು ಕುಲೀ ಕುತುಬ್ ಷಾ ಕಟ್ಟಿಸಿದನು. ಈತನು ಪರ್ಷಿಯಾ ಮತ್ತು ಉರ್ದು ಕವಿಯಾಗಿದ್ದನು. ಈತನಿಂದಲೇ ದಕ್ಕನ್ ಉರ್ದು, ಗ್ರಾಂಥಿಕ ಭಾಷೆಯಾಯಿತು.

ಹಯತ್ ಬಕ್ಷಿಬೇಗಂ ಮೊಹ್ಮದ್ ಕುಲೀ ಕುತುಬ್ ಷಾನ ಮಗಳು. ಹೈದ್ರಾಬಾದ್ ಸಮೀಪದಲ್ಲಿನ ಹಯತ ನಗರದಲ್ಲಿ ಆಕೆ ಹಯತ್ ಬಕ್ಷಿ ಮಸೀದು ಕಟ್ಟಿಸಿದಳು. ಆಕೆಯನ್ನು 'ಮಾಸಾಹೇಬಾ' ಎಂದು ಕರೆಯುತ್ತಿದ್ದರು. ಮಾ ಸಾಹೇಬಾ ಕೆರೆಯೇ ಕಾಲಕ್ರಮದಲ್ಲಿ 'ಮಾಸಾಬ್ ಕೆರೆ' (ಮಾಸಾಬ್ ಟ್ಯಾಂಕ್) ಆಗಿ ಪರಿವರ್ತನೆಗೊಂಡಿದೆ.

ಅಬ್ದುಲ್ ಕುತುಬ್ ಷಾ ಕವಿತ್ವ, ಸಂಗೀತದ ಬಗ್ಗೆ ಆಸಕ್ತಿ ಉಳ್ಳವನಾಗಿದ್ದನು. ಪದ್ಯ–ಕವಿತೆಗಳನ್ನು ಬರೆಯುವ ಕ್ಷೇತ್ರಯ್ಯನನ್ನು ಆಹ್ವಾನಿಸಿ ಸತ್ಕರಿಸಿದನು. ಅಬುಲ್ ಹಸನ್ ತಾನಿಷಾ ಕುತುಬ್ ಷಾಹಿ ವಂಶದಲ್ಲಿ ಕೊನೆಯವನು. ಈತನು ಕಂಚೆರ್ಲ ಗೋಪನ್ನನನ್ನು ಪಾಲ್ವಂಚ ತಹಾಶೀಲ್ದಾರನನ್ನಾಗಿ ನೇಮಿಸಿದನು. ಕಂಚೆರ್ಲ ಗೋಪನ್ನನನ್ನು ಭಕ್ತ ರಾಮದಾಸನೆಂದು ಕರೆಯುತ್ತಾರೆ. ರಾಮದಾಸನು ಭದ್ರಾಚಲದಲ್ಲಿ ರಾಮಾಲಯ ನಿರ್ಮಿಸಲು ಸರಕಾರಿ ಹಣವನ್ನು ಬಳಸಿಕೊಂಡನು. ಶ್ರೀರಾಮ, ಸೀತ, ಲಕ್ಷ್ಮಣರಿಗೆ ಆಭರಣಗಳನ್ನು ಮಾಡಿಸಿದನು. ಪ್ರಜಾ ಹಣವನ್ನು ಬದಲಾಯಿಸಿದ್ದಾನೆಂದು ರಾಮದಾಸನನ್ನು ತಾನೀಷಾ ಬಂಧಿಸಿ, ಜೈಲಿಗೆ ಹಾಕಿಸಿದನು. ನಂತರ ಸತ್ಯ ಸಂಗತಿಯನ್ನು ತಿಳಿದ ತಾನೀಷಾ ರಾಮದಾಸನನ್ನು ಬಂದವಿಮುಕ್ತ ಮಾಡಿದನು.

ಕುತುಬ್ ಷಾಹಿಗಳ ಕಾಲದಲ್ಲಿ ಗೋಲ್ಕೊಂಡ ಪ್ರಪಂಚ ವ್ಯಾಪ್ತವಾಗಿ ವಜ್ರಗಳಿಗೆ ಪ್ರಸಿದ್ಧಿಯಾಗಿತ್ತು. ಇವರ ಆಡಳಿತದಲ್ಲಿ ಮಚಲೀ ಪಟ್ಟಣ ಪ್ರಧಾನ 'ಬಂದರು' ಪಟ್ಟಣವಾಗಿತ್ತು. ಆಗ್ನೇಯೇಷಿಯಾ, ಚೈನಾ, ಪರ್ಷಿಯಾ, ಅರೇಬಿಯಾ, ಯೂರಪಗಳಲ್ಲಿ ವ್ಯಾಪಾರ ಚಟುವಟಿಕೆಗಳನ್ನು ನಡೆಯುತ್ತಿದ್ದವು. ತೀರ ಪ್ರಾಂತದಿಂದ, ವಿವಿಧ ದೇಶಗಳಿಂದ ಗೋಲ್ಕೊಂಡಕ್ಕೆ ಒಂಟೆಗಳು, ಚಿನ್ನ, ಬೆಳ್ಳಿ, ಆಮದಾಗುತ್ತಿದ್ದವು.

ಹೈದ್ರಾಬಾದಿನ ಗೋಲ್ಕೊಂಡ ಕೋಟೆಯ ಹತ್ತಿರ ಇಬ್ರಾಹಿಂಬಾಗನಲ್ಲಿ ಕುತುಬ್ ಷಾಹಿ ಪಾಲಕರ ಏಳು ಸಮಾಧಿಗಳಿವೆ. ಪರ್ಷಿಯಾ–ಹಿಂದೂ ಶೈಲಿಯಲ್ಲಿ ಈ ಸಮಾಧಿಗಳು ಒಂದು ಪ್ರತ್ಯೇಕ ಭವನ ನಿರ್ಮಾಣ ಶೈಲಿಯಲ್ಲಿ ನಿರ್ಮಿಸಲಾಗಿದೆ. ಮೋಘಲ್ ಚಕ್ರವರ್ತಿ ಷಾಜಹಾನ್ ಕುತುಬ್ ಷಾಹಿ ಸಮಾಧಿಗಳ ನಿರ್ಮಾಣ ಶೈಲಿಗೆ ಅಚ್ಚರಿಪಟ್ಟು ತಾಜಮಹಲ್ ನ್ನು ಅಮೃತ ಶಿಲೆಯಲ್ಲಿ ಕಟ್ಟಿಸಿದನು. ಕುತುಬ್ ಷಾಹಿ ಸಮಾಧಿಗಳು ಅದ್ಭುತ ಕಲೆಯಿಂದ ಕೆತ್ತಲಾದ ಕಲ್ಲಿನಿಂದ ಕಟ್ಟಿದ್ದಾರೆ. ಸುತ್ತಲೂ ವಿಶಾಲವಾದ ಅಂದವಾಗಿ ಬೆಳೆಸಿದ ತೋಟವಿದೆ. ಇಬ್ರಾಹಿಂ ಕುತುಬ್ ಷಾನ ಕಾಲದಿಂದಲೇ ಸಂಪದ್ಭರಿತ ವಾದ ಈ ರಾಜ್ಯವನ್ನು ವಶಪಡಿಸಿಕೊಳ್ಳಬೇಕೆಂದು ಮೋಘಲರು ಹವಣಿಸುತ್ತಿದ್ದರು. ಕೊನೆಗೆ 1687 ರಲ್ಲಿ ಔರಂಗಾಜೇಬನ ಅವಧಿಯಲ್ಲಿ ಗೋಲ್ಕೊಂಡ ಕೋಟೆಯನ್ನು ವಶಪಡಿಸಿಕೊಂಡರು.

ಮೋಘಲರು ಕುತುಬ್ ಷಾಹಿಗಳನ್ನು ಕೂಡಿಸಿ ಕೊಳ್ಳದೆಯೇ ಸ್ಥಳೀಯರನ್ನು ಅಧಿಕಾರದಿಂದ ತೊಲಗಿಸಿ ಹೊರಗಿನವರನ್ನು ನೇಮಿಸಿದರು. ಈ ಪ್ರಾಂತದಿಂದ ಅಧಿಕ ಕಂದಾಯ ವಸೂಲಿಗಾಗಿ ಒಪ್ಪಂದ ಕಂದಾಯ ವಸೂಲಿ ಪದ್ಧತಿಯನ್ನು ಜಾರಿಗೊಳಿಸಿದರು. ಇದರ ಪ್ರಕಾರ ಬಹಿರಂಗ ಹರಾಜಿನಲ್ಲಿ ಅಧಿಕ ಸವಾಲು ಮಾಡಿದ ವ್ಯಕ್ತಿಗೆ ಕಂದಾಯ ವಸೂಲಿ ಹಕ್ಕು ಲಭಿಸುತ್ತಿತ್ತು. ಇವರಲ್ಲಿ

SCERT TELANGANA

ಸಾಮಾನ್ಯವಾಗಿ ಬಡ್ಡಿ ವ್ಯಾಪಾರಿಗಳು, ಸ್ಥಳೀಯ ಶಕ್ತಿವಂತರು ಇರುತ್ತಿದ್ದರು. ಇವರು ರೈತರನ್ನು, ಕರ ಕುಶಲಿಗರನ್ನು ಹೆದರಿಸಿ ಅಧಿಕ ಆದಾಯ ಪಡೆಯುತ್ತಿದ್ದರು. ಇದರಿಂದ ಜನರು ನಿರಾಳರಾದರು. ಇದರೊಂದಿಗೆ ಬರಗಾಲದಿಂದ ಜನರು ಇತರ ಪ್ರಾಂತಕ್ಕೆ ವಲಸೆ ಹೋಗಿದ್ದರಿಂದ ಜನಸಂಖ್ಯೆಯ ಕಡಿಮೆಯಾಯಿತು.

- ಕುತುಬ್ ಷಾಹಿ ರಾಜ್ಯದ ನಕ್ಷೆ ನೋಡಿ ಗೋಲ್ಕೊಂಡ, ಮಚಲಿಪಟ್ಟಣ, ಭದ್ರಾಚಲಗಳನ್ನು ಗುರುತಿಸಿರಿ.
- ಗೋಲ್ಕೊಂಡ ರಾಜ್ಯವು ಮೋಘಲರ ಆರಂಭದ ಅವಧಿಯಲ್ಲಿ ಕ್ಷೀಣ ದೆಶೆಯಲ್ಲಿದ್ದು, ನಂತರ ಆರ್ಥಿಕವಾಗಿ ಏಕೆ ಸುಧಾರಿಸಿತೆಂದು ಭಾವಿಸುತ್ತೀರಿ ?
- ಗೋಲ್ಕೊಂಡ ರಾಜರ ಕಾಲದಲ್ಲಿನ ಪ್ರಸಿದ್ಧ ಪಡೆದ ವಜ್ರದ ಗಣಿ, ಅವುಗಳ ವ್ಯಾಪಾರ ವಿವರಗಳನ್ನು ಕುರಿತು ತಿಳಿದುಕೊಳ್ಳಿರಿ.



13.6 ಗೋಲ್ಕೊಂಡ ಕೋಟೆ

ಮುಖ್ಯ ಪದಗಳು :

1. ಅಮರನಾಯಕ 2. ಅಮೀರ್ 3. ಇಕ್ತ
4. ಪುರಾತತ್ವ ಶಾಸ್ತ್ರಜ್ಞರು 5. ರಾಯಗೋಪುರ

ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ.

1. ವಿಜಯನಗರ ರಾಜರು ಓರಗಲ್ಲಿನಂತಹ ಪಟ್ಟಣದ ಮಧ್ಯದಲ್ಲಿ ವಾಸಿಸದೇ ಪ್ರತ್ಯೇಕವಾಗಿ ಏಕೆ ವಾಸಿಸಿದ್ದರೆಂದು ನೀವು ಭಾವಿಸುತ್ತೀರಿ.
2. ಅಮರ ನಾಯಕರು ಏಕೆ ಶಕ್ತಿವಂತರಾಗಿದ್ದಾರೆ?
3. ಕಾಕತೀಯರ ಪಾಠದಲ್ಲಿ ನಾಯಂಕರರು ಈ ಪಾಠದಲ್ಲಿ ನಾಯಕರ ನಡುವೆ ವ್ಯತ್ಯಾಸಗಳಿವೆಯೆ? ಇಲ್ಲವೇ ಹೋಲಿಕೆಗಳಿವೆಯೆ? ಇದ್ದಲ್ಲಿ ವಿವರಿಸಿರಿ.
4. ವಿಜಯನಗರ ಸೈನ್ಯವು ಪಶ್ಚಿಮ ತೀರದ ಆಮದುಗಳ ಮೇಲೆ ಏಕೆ ಆಧಾರಪಟ್ಟಿದೆ?
5. ಶ್ರೀಕೃಷ್ಣದೇವರಾಯರು ತಮ್ಮ ರಾಜ್ಯವನ್ನು ಬಲಪಡಿಸಲು ಶತೃಗಳೊಂದಿಗೆ ಯುದ್ಧಗಳನ್ನು ಮಾಡಿದನು. ಅವುಗಳ ಪಟ್ಟಿ ತಯಾರಿಸಿರಿ.
6. ತೆಲುಗು ಸಾಹಿತ್ಯಕ್ಕೆ ವಿಜಯನಗರದ ರಾಜರು ಮಾಡಿದ ಸೇವೆಯಂತವುದು ?
7. ಭಾರತದೇಶದ ನಕ್ಷೆಯಲ್ಲಿ ಈ ಕೆಳಗಿನ ಪ್ರದೇಶಗಳನ್ನು ಗುರ್ತಿಸಿರಿ.

   ಅ) ಹಂಪಿ ಆ) ಬಿಜಾಪುರ ಇ) ತಿರುಪತಿ

   ಈ) ಗೋಲ್ಕೊಂಡ ಉ) ಕಂಚಿ ಊ) ತುಂಗಭದ್ರಾ ನದಿ
8. ತೆಲುಗು ಸಾಹಿತ್ಯ ಅಭಿವೃದ್ಧಿಗೆ ಪ್ರಯತ್ನಿಸಿದ ವಿವಿಧ ರಾಜ್ಯಗಳನ್ನು ಕುರಿತು ಚರ್ಚಿಸಿರಿ.
9. ಗೋಲ್ಕೊಂಡವನ್ನು ಆಳಿದ ಕುತುಬ್‌ಷಾಹಿಗಳ ವಾಸ್ತುಶಿಲ್ಪ, ಕಲಾಪೋಷಣೆಯನ್ನು ವಿವರಿಸಿರಿ.

SCERT TELANGANA

ಅಧ್ಯಾಯ 14

ಮೊಘಲ್ ಸಾಮ್ರಾಜ್ಯ


ಮಧ್ಯಯುಗದಲ್ಲಿ ಎಷ್ಟೋ ವೈವಿಧ್ಯತೆಯಿಂದ ಕೂಡಿದ ಪ್ರಜೆಗಳು ಸಾಂಪ್ರದಾಯಗಳು, ಸಂಸ್ಕೃತಿಗಳಿಂದ ಕೂಡಿದ ವಿಶಾಲ ಭಾರತ ಉಪಖಂಡವನ್ನು ಪರಿಪಾಲಿಸಿದ ಯಾವ ಪರಿಪಾಲಕನಿಗಾದರು ಕಷ್ಟಸಾಧ್ಯ. ಆದರೆ ಅತೀ ಕಡಿಮೆ ಸಮಯದಲ್ಲಿ ಮೊಘಲರು ಕ್ರಿ.ಶ.1550–1700ರ ಮಧ್ಯದಲ್ಲಿ ದೆಹಲಿಯಿಂದ ಮೊದಲುಗೊಂಡು ಸಂಪೂರ್ಣಭಾರತ ಉಪಖಂಡದಲ್ಲೆಲ್ಲಾ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ಇವರ ಆಡಳಿತ ಸಂಯೋಜನೆ, ಪರಿಪಾಲನಾ ವಿಧಾನ, ವಾಸ್ತುಶಿಲ್ಪಗಳು ಮೊದಲಾದವು ಸಹ ಇವರ ನಂತರ ಬಹಳ ಕಾಲದ ವರೆಗೆ ರಾಜರನ್ನು ಅವರ ಪರಿಪಾಲನ ವಿಧಾನಗಳ ಮೇಲೆ ಪ್ರಭಾವ ಬೀರಿದವು. ಪ್ರಸ್ತುತ ಸ್ವಾತಂತ್ರ್ಯ ದಿನೋತ್ಸವದ ದಿನ ಭಾರತದ ಪ್ರಧಾನಮಂತ್ರಿ ರಾಷ್ಟ್ರವನ್ನು ಉದ್ದೇಶಿಸಿ ಪ್ರಸಂಗಿಸುವ ಕೆಂಪುಕೋಟೆ ಮೊಗಲ್ ಚಕ್ರವರ್ತಿಗಳ ನಿವಾಸವಾಗಿದೆ



ಜಹಂಗೀರನ ಚಿತ್ರವಿರುವ ನಾಣ್ಯ

ಮೊಘಲರು ಯಾರು?

ಮೊಘಲರು ಮಧ್ಯ ಏಷ್ಯಾದೇಶಗಳಾದ ಉಜ್ಬೆಕೀಸ್ತಾನ್ ಮತ್ತು ಮಂಗೋಲಿಯಾ ದೇಶಕ್ಕೆ ಸೇರಿದವರು. ಮೊಟ್ಟಮೊದಲ ಮೊಘಲ್ ಚಕ್ರವರ್ತಿಯಾದ ಬಾಬರ (1526–1530), ಇತರ ರಾಜ್ಯಗಳ ದಂಡೆಯಾತ್ರೆಗಳಿಂದ ಪೂರ್ವಿಕರಿಂದ ಪಡೆದ ಸಿಂಹಾಸನವನ್ನು ಬಿಟ್ಟುಬರುವುದು ತಪ್ಪಲಿಲ್ಲ. ಬಹಳ ಕಾಲ ಸಂಚರಿಸಿ ಕೊನೆಗೆ ಕ್ರಿ.ಶ. 1504ರಲ್ಲಿ ಕಾಬೂಲನ್ನು ವಶಪಡಿಸಿಕೊಂಡನು. 1526ರಲ್ಲಿ ದೆಹಲಿ ಸುಲ್ತಾನನು ಇಬ್ರಾಹೀಂ ಲೋದಿಯನ್ನು ಸೋಲಿಸಿ ದೆಹಲಿ, ಆಗ್ರಾಗಳನ್ನು ಆಕ್ರಮಿಸಿದನು.



ಚಿತ್ರ 14.1 ಕೆಂಪುಕೋಟೆ

© TSCERT TELANGANA

ಮುಖ್ಯವಾದ ಮೊಘಲ್ ಚಕ್ರವರ್ತಿಗಳು–ದಂಡಯಾತ್ರೆಗಳು ಮತ್ತು ಸಂಘಟನೆಗಳು:

ಬಾಬರ್ (ಕ್ರಿ.ಶ. 1526–1530)



ಸಾ.ಶ. 1526 ರಲ್ಲಿ ಬಾಬರ್ ಭಾರತ ದೇಶದ ಮೇಲೆ ದಂಡೆಯಾತ್ರೆ ಮಾಡುವದರೊಂದಿಗೆ ಮೊಗಲರು ಎಂಬ ಹೆಸರಿನಿಂದ ಹೊಸ ವಂಶದ ಆಡಳಿತ ಆರಂಭಗೊಂಡಿತು. ಅವರು ಸಾ.ಶ.1550 ರಿಂದ ಸಾ.ಶ. 1707ರ ಮಧ್ಯ ಕಾಲದಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿ ದೆಹಲಿಯೊಂದಿಗೆ ಭಾರತ ಉಪಖಂಡದಾದ್ಯಂತ ಮೊಗಲರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ಇವರ ಆಡಳಿತ ಸಂಯೋಜನೆ ಆಡಳಿತದ ವಿಧಾನ, ವಾಸ್ತು ಕಲೆಗಳು ಮೊದಲಾದವುಗಳು ಇವರ ನಂತರ ಕೂಡಾ ಬಹಳ ಕಾಲದವರೆಗೆ ರಾಜರನ್ನು ಅವರ ಆಡಳಿತ ವಿಧಾನಗಳನ್ನು ಪ್ರಭಾವಿತಗೊಳಿಸಿದವು. ಪ್ರಸ್ತುತ ಸ್ವಾತಂತ್ರ್ಯ ದಿನೋತ್ಸವದಂದು ಭಾರತದ ಪ್ರಧಾನಮಂತ್ರಿಗಳು ದೇಶವನ್ನು ಉದ್ದೇಶಿಸಿ ಭಾಷಣ ಮಾಡುವ ಕೆಂಪುಕೋಟೆ ಮೊಗಲ್ ಚಕ್ರವರ್ತಿಗಳ ನಿವಾಸವಾಗಿದೆ.

ಹುಮಾಯೂನ್ (ಕ್ರಿ.ಶ. 1530–1566)



ಶೇರ್‌ಖಾನ್ ಹುಮಾಯೂನನ್ನು ಸೋಲಿಸಿ ಇರಾನ್‌ಗೆ ಓಡಿಸಿದನು. ಇರಾನ್‌ನಲ್ಲಿ ಹುಮಾಯೂನ್ ಸಫಾವಿದ್ ಷಾ ಸಹಾಯವನ್ನು ಪಡೆದನು. ನಂತರ ಹುಮಾಯೂನ್ ಕ್ರಿ.ಶ. 1555ರಲ್ಲಿ ದೆಹಲಿಯನ್ನು ಆಕ್ರಮಿಸಿಕೊಂಡನು. ಆದರೆ ತದನಂತರ ವರ್ಷಗಳಲ್ಲೆ ಒಂದು ಅಪಘಾತದಲ್ಲಿ ಮರಣಿಸಿದನು.



ಅಕ್ಬರ್ (ಕ್ರಿ.ಶ. 1556–1605)

ಅಕ್ಬರ್ ಚಕ್ರವರ್ತಿಯಾದಾಗ ಆತನ ವಯಸ್ಸು ಕೇವಲ 13 ವರ್ಷಗಳು. ಅಕ್ಬರ್ ಬೆಂಗಾಲ್, ಮಧ್ಯಭಾರತ ದೇಶವನ್ನು ರಾಜಸ್ಥಾನ್ ಮತ್ತು ಗುಜರಾತನ್ನು ಸ್ವಲ್ಪ ಕಾಲದಲ್ಲಿಯೇ ಆಕ್ರಮಿಸಿಕೊಂಡನು. ಆನಂತರ ಈತನು ಆಫ್ಘಾನಿಸ್ತಾನ್, ಕಾಶ್ಮೀರ್ ಮತ್ತು ಡಕ್ಕನ್ ಪ್ರಸ್ಥಭೂಮಿಗಳಲ್ಲಿನ ಕೆಲವು ಪ್ರಾಂತಗಳನ್ನು ಆಕ್ರಮಿಸಿದನು.

ನಕ್ಷೆ–1ರಲ್ಲಿ ಆತನ ಸಾಮ್ರಾಜ್ಯ ವಿಸ್ತರಣೆಯನ್ನು ನೋಡಿರಿ.



ಜಹಾಂಗೀರ್ (ಕ್ರಿ.ಶ. 1605–1627)

ಅಕ್ಬರನು ಪ್ರಾರಂಭಿಸಿದ ದಂಡಯಾತ್ರೆಗಳನ್ನು ಮುಂದುವರೆಸಿದನು. ಪ್ರಮುಖ ಆಕ್ರಮಣಗಳಾವು ನಡೆಯಲಿಲ್ಲ.

© TSCERT TELANGANA




ಷಾಜಹಾನ್ (ಕ್ರಿ.ಶ. 1627–1658)

ಮೊಘಲ್ ರಾಜ್ಯ ವಿಸ್ತರಣೆ ದಕ್ಕನ್ ಪ್ರಾಂತಗಳ ಮೇಲೆ ಮುಂದುವರೆಸಿದನು. ಈತನು ಸಾಮ್ರಜ್ಯದಲ್ಲಿನ ಸ್ಥಾನಿಕ ಪ್ರಭುಗಳ, ಪಾಲಕರ ವಿರೋಧವನ್ನು ಎದುರಿಸಿದನು. ಕ್ರಿ.ಶ. 1657–1658ರಲ್ಲಿ ಸಿಂಹಾಸನಕ್ಕಾಗಿ ಆತನ ಮಕ್ಕಳ ಮಧ್ಯೆ ತೀವ್ರ ಸಂಘರ್ಷಣೆಗಳು ನಡೆದವು. ಔರಂಗಜೇಬನು ತನ್ನ ಮೂವರು ಸೋದರರನ್ನು ಸೋಲಿಸಿ ಕೊಂದನು. ಷಾಜಹಾನನ್ನು ಬಂಧಿಸುವುದರೊಂದಿಗೆ ಉಳಿದ ಜೀವನ ಆಗ್ರಾದ ಜೈಲಿನಲ್ಲಿ ಕಳೆಯಬೇಕಾಯಿತು.



ಔರಂಗಜೇಬು (ಕ್ರಿ.ಶ. 1658–1707)

ಅಸ್ಸಾಂನ ಮೇಲೆ ಗೆಲುವು ಸಾಧಿಸಿದನು. ಆದರೆ ಆಫ್ಘಾನಿಸ್ತಾನ್ ಮೊದಲುಗೊಂಡು ಅಸ್ಸಾಂ, ರಾಜಸ್ತಾನ್, ಪಂಜಾಬ್, ದಕ್ಕನ್ ಮೊದಲಾದ ಸಾಮ್ರಾಜ್ಯದಲ್ಲಿ ಅನೇಕ ದಂಗೆಗಳನ್ನು ಎದುರಿಸುವಂತಾಯಿತು. ಗುರತೇಜ್ ಬಹದ್ದೂರ್, ಗೋವಿಂದ ಸಿಂಗ್, ಶಿವಾಜಿ ಮತ್ತು ತನ್ನ ಮಗನಾದ ಅಕ್ಬರ್‌ನು ಆತನಿಗೆ ವಿರುದ್ಧವಾಗಿ ದಂಗೆ ಎದ್ದನು. ಶಿವಾಜಿ ಸ್ವತಂತ್ರ್ಯ ಮರಾಠ ಸಾಮ್ರಾಜ್ಯ ಸ್ಥಾಪನೆಯಲ್ಲಿ ಯಶಸ್ವಿಯಾದನು. ಔರಂಗಜೇಬನು ಕ್ರಿ.ಶ.1685ರಲ್ಲಿ ಬಿಜಾಪುರನ್ನು, ಕ್ರಿ.ಶ. 1689ರಲ್ಲಿ ಗೊಲ್ಕೊಂಡವನ್ನು ಆಕ್ರಮಿಸಿಕೊಂಡನು. ಈತನ ಮರಣದ ನಂತರ ಸಿಂಹಾಸನಕ್ಕೋಸ್ಕರ ಮಕ್ಕಳ ಮಧ್ಯೆ ಸಂಘರ್ಷಣೆಗಳು ಪ್ರಾರಂಭವಾದವು.



ಭಾಷಾ `1 : 1605 ಲಕ್ಷ
ಆಳಿದ ಪ್ರಾಂತ್ಯಗಳು

SCERT TELANGANA

ಇತರ ರಾಜರೊಂದಿಗೆ ಮೊಘಲ್‌ರ ಸಂಬಂಧಗಳು:

ಅಂದು ಭಾರತದೇಶದಲ್ಲೆಲ್ಲಾ ಅನೇಕ ಸಣ್ಣ ರಾಜ್ಯಗಳನ್ನು ಸ್ಥಾನಿಕ ರಾಜರು, ಪರಿಪಾಲಕರು ಪರಿಪಾಲಿಸುತ್ತಿದ್ದರು. ಮೊಘಲ್ ಸಾಮ್ರಾಜ್ಯದ ಸ್ಥಾಪನೆಯ ನಂತರ ಇವರ ಮೇಲೆ ಆಡಳಿತ ಪರವಾದ ನಿಯಂತ್ರಣ ಸಾಧಿಸಿದರು. ಇವರು ಪೂರ್ವರಾಜ್ಯಗಳ ಪರಿಪಾಲನೆಯನ್ನು ಮುಂದುವರೆಸುವುದಕ್ಕೆ ರಾಜರಿಗೆ ಅನುಮತಿಸಿದರು. ಇವರ ಮೂಲಕವೇ ತೆರಿಗೆ ವಸೂಲುಮಡುತ್ತಿದ್ದರು. ಆದರೆ ಅವರ ನಡುವೆ ಯುದ್ಧಗಳು ನಡೆಸದಂತೆ ಚಕ್ರವರ್ತಿಗೆ ಯುದ್ಧದಲ್ಲಿ ಸಹಾಯ ಮಾಡಲು ಸೈನ್ಯ ಸದಾಸಿದ್ಧವಾಗಿರ ಬೇಕಿತು. ಯಾವ ರಾಜರಾದರೆ ಇವರ ಅಧಿಕಾರವನ್ನು ಅಂಗೀಕರಿಸುವುದಿಲ್ಲವೋ ಅವರ ಮೇಲೆ ನಿರಂತರ ಯುದ್ಧಗಳನ್ನು ಮಾಡುವ ಮೂಲಕ ಅವರನ್ನು ನಿಯಂತ್ರಿಸುತ್ತಿದ್ದರು. ಯಾವಾಗ ಮೊಘಲರು ಬಲಪಟ್ಟರೋ ಬಹಳ ರಾಜರು ತಮ್ಮ ಸಾರ್ವಭೌಮತ್ವವನ್ನು ಬಿಟ್ಟು ಅವರೊಂದಿಗೆ ಸತ್ಸಂಬಂಧಗಳನ್ನು ಬೆಳಸಿಕೊಂಡರು. ಕೆಲವು ರಾಜಪುತ್ರರು ಮೊಗಲರೊಂದಿಗೆ ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಂಡರು. ಆದರೆ ಕೆಲವರು ಇದನ್ನು ವಿರೋಧಿಸಿದರು. ಚಿತ್ತೋಡ್‌ಗೆ ಸೇರಿದ ಸಿಸೋಡಿಯಾ ರಾಜಪುತ್ರರು ಬಹಳ ಕಾಲದವರೆಗೆ ಇವರ ಅಧಿಕಾರವನ್ನು ಗುರುತಿಸಲಿಲ್ಲ. ಮೊಘಲರು ತಮ್ಮಿಂದ ಸೋತುಹೋದ ರಾಜರಿಗೆ ಕೂಡ ಗೌರವಿಸಿ ಅವರ ಭೂಭಾಗಗಳನ್ನು ಹಿಂತುರಿಗಿಸುತ್ತಿದ್ದರು. ಇವರ ಮುಖ್ಯ ಉದ್ದೇಶ ಸೋಲಿಸುವುದೇ ವಿನಃ ಶತ್ರುಗಳನ್ನು ಅವಮಾನಿಸುವುದಾಗಿರಲಿಲ್ಲ. ಈ ರೀತಿ ಸಮತೋಲನದ ಪ್ರಭಾವ ಅನೇಕ ರಾಜರ ಮೇಲಾಯಿತು. ರಾಜಕೀಯ ವ್ಯೂಹದಲ್ಲಿನ ಭಾಗವಾಗಿ ಮೊಗಲರು ಸ್ಥಳೀಯ ರಾಜಕುಮಾರಿಯರನ್ನು ವಿವಾಹವಾದರು.

ಜಹಂಗೀರನ ತಾಯಿ ರಾಜಪುತ್ರ ರಾಜನಾದ ಮಗನಾದ "ಅಂಬರ್" (ಈಗಿನ ಜೈಪೂರ್)ನ ರಾಜಕುಮಾರಿ. ಷಾಹಜಾನ್ ತಾಯಿ ರಾಜಪುತ್ರರಾದ "ಜೋಧಪುರ್" ಯುವರಾಣಿ.

ಮನ್ಸಬ್‌ದಾರರು ಮತ್ತು ಜಹಂಗೀರುದಾರರು:

ಮೊಘಲ್ ಸಾಮ್ರಾಜ್ಯ ವಿಸ್ತರಣೆಗೊಂಡಿದ್ದರಿಂದ ಬಹಳ ಪ್ರಾಂತಗಳ ಜನರನ್ನು ವಿವಿಧ ಉದ್ಯೋಗಗಳಲ್ಲಿ ನಿಯಮಿಸಲಾಯಿತು. ಇವರಲ್ಲಿ ಟರ್ಕರು, ಇರಾನಿಯವರು, ಭಾರತದ ಮುಸ್ಲಿಂಮರು, ಆಫ್ಘಾನೀಯರು, ರಾಜಪೂತರು, ಮರಾಠರು ಮತ್ತು ಇತರರು ಸಹ ಸೇರಿಕೊಂಡರು. ಇವರೆಲ್ಲರಿಗೆ ಉದ್ಯೋಗಗಳನ್ನು ಕಲ್ಪಿಸಿ ಮನ್ಸಬ್‌ದಾರಿಗಳಾಗಿ ನೇಮಕ ಮಾಡಿಕೊಂಡು ಸೈನಿಕ ಹುದ್ದೆಗಳನ್ನು ನೀಡಿದರು. ಇವರೆಲ್ಲರೂ ಚಕ್ರವರ್ತಿಯ ನೇರ ಅಧೀನದಲ್ಲಿರುತ್ತಿದ್ದರು. ಇವರು ತಮ್ಮ ಆಸ್ಥಾನವನ್ನು ಕಾಪಾಡುವ ಭಾಧ್ಯತೆಯನ್ನು, ಒಂದು ಪ್ರಾಂತವನ್ನು ಪರಿಪಾಲಿಸುವ ಜವಾಬ್ದಾರಿಯನ್ನು, ಹೊಸ ರಾಜ್ಯಗಳ ಮೇಲೆ ದಂಡೆಯಾತ್ರೆ ಮಾಡುವ ಬಾಧ್ಯತೆಗಳು ಅಥವಾ ದಂಗೆಗಳನ್ನು ಅಡಿಗಿಸುವ ಬಾಧ್ಯತೆಗಳನ್ನು ನಿರ್ವಹಿಸುತ್ತಿದ್ದರು.

ಈ ಮನ್ಸಾಬ್‌ದಾರರು ತಾವು ಯಾವುದೇ ರೀತಿಯ ಸ್ವತಃ ನಿರ್ಣಯಗಳನ್ನು ತೆಗೆದುಕೊಳ್ಳದೆ ಕೇವಲ ಚಕ್ರವರ್ತಿ ಅಭಿಪ್ರಾಯದ ಮೇಲೆ ನಡೆಯುವ ಒಂದು ಪರಿಪಾಲನ ಪದ್ದತಿಯನ್ನು ಅಭಿವೃದ್ಧಿ ಪಡಿಸಿದರು. ವಿಜಯನಗರ ರಾಜ್ಯದ ಸಾಮಂತರಾಗಿ ರುವ ರಾಜನಾಯಕರು ಸ್ವತಂತ್ರ್ಯವಾದ ನಿರ್ಣಯ ವನ್ನು ತೆಗೆದು ಕೊಂಡು ಚಕ್ರವರ್ತಿಯನ್ನು ಸಹ ದಿಕ್ಕರಿಸುವ ಸ್ಥಾನದಲ್ಲಿ ಹೇಗೆ ಬಲಿಷ್ಟರಾದರೋ ನಿಮಗೆ ನೆನಪು ಇದ್ದೇ ಇರುತ್ತದೆ. ಆದ್ದರಿಂದ ಮೊಘಲರು ಇದನ್ನು ನಿವಾರಿಸಲು ಪ್ರತಿ ಎರಡು ಅಥವಾ ಮೂರು ವರ್ಷಗಳಿಗೆ ಇವರನ್ನು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಮನ್ಸಾಬ್‌ದಾರರಾಗಿ ಬದಲಾವಣೆ ಮಾಡುತ್ತಿದ್ದರು. ಆದ್ದರಿಂದ ಯಾವ ಮನ್ಸಾಬ್‌ದಾರರು ಕೂಡ ಸ್ಥಿರವಾಗಿ ಒಂದೇ ಪ್ರಾಂತದಲ್ಲಿ ಇರುತ್ತಿರಲಿಲ್ಲ. ಅದಕ್ಕಾಗಿ ಬಲಿಷ್ಟರಾಗುವ ಅವಕಾಶ ಕೂಡ ಇರುತ್ತಿರಲಿಲ್ಲ.

ಮನ್ಸಾಬ್‌ದಾರರು ನಿಯಮಿತ ಸಂಖ್ಯೆಯಲ್ಲಿ ಕುದುರೆಸವಾರಿಯನ್ನು ಮತ್ತು ಅಶ್ವದಳವನ್ನು ಸಾಕಿ ಬೆಳೆಸುವ ಭಾಧ್ಯತೆಯನ್ನು ಹೊಂದಿದ್ದರು. ಪ್ರತಿ ಮನ್ಸಾಬ್‌ದಾರ ತನ್ನ ಅಶ್ವಗಳನ್ನು ಸಮೀಕ್ಷೆಗೆ ತೆಗೆದುಕೊಂಡು ಬಂದು ಅವುಗಳನ್ನು ವರದಿಮಾಡಿ ಕುದುರೆಗಳಿಗೆ ಮುದ್ರೆಯನ್ನು ಹಾಕಿಸಿ ವೇತನ ಪಡೆಯುತ್ತಿದ್ದರು.



ಚಿತ್ರ 14.2 ಮನ್ಸಬ್‌ದಾರರು ಸೈನಿಕ ಯಾತ್ರೆ ನಿರ್ವಹಿಸುತ್ತಿರುವ ದೃಶ್ಯ

© TSCERT TELANGANA

ಒಬ್ಬ ಮನ್ಸಾಬ್‌ದಾರನ ಮಗ ಮನ್ಸಾಬ್‌ದಾರನಾಗ ಲಾರ. ಏಕೆಂದರೆ, ಇದು ವಂಶಪಾರಂಪರ್ಯವಲ್ಲ ಚಕ್ರವರ್ತಿ ಮಾತ್ರ ಮನ್ಸಾಬ್‌ದಾರನ ಮಗ ಮನ್ಸಾಬ್‌ದಾರ ಆಗುತ್ತಾನೋ ಇಲ್ಲವೆಂದು ನಿರ್ಣಯಿಸುತ್ತಿದ್ದನು. ಅಷ್ಟೇ ಅಲ್ಲದೆ ಮನ್ಸಾಬ್‌ದಾರರು ಆತನ ಸಂಪೂರ್ಣ ಆಸ್ತಿಯನ್ನು ಜಪ್ತಿಮಾಡಿಕೊಳ್ಳಲಾಗುತ್ತಿತ್ತು.

ಮನ್ಸಬ್‌ದಾರರು ತಮ್ಮ ವೇತನವನ್ನು ಜಹಂಗೀರ ರಿಂದ ಬರುವ ಆದಾಯದ ಮೇಲೆ ತೆಗೆದುಕೊಳ್ಳುತ್ತಿದ್ದರು. ಇವು ವಿಜಯನಗರ ಕಾಲದ ನಾಯಂಕರ ವಿಧಾನವನ್ನು ಹೋಲುತ್ತಿದ್ದವು. ಆದರೆ ನಾಯಕ ರಾಜರ ಮಾದರಿ ಬಹಳ ಜನ ಮನ್ಸಬ್‌ದಾರರು ತಮ್ಮ ಜಹಂಗೀರರನ್ನು ಪರಿಪಾಲಿಸುತ್ತಿರಲಿಲ್ಲ. ಅಲ್ಲಿ ಕೂಡ ವಾಸಿಸುತ್ತಿರಲಿಲ್ಲ. ಕೇವಲ ತಮ್ಮ ಜಹಂಗೀರರ ಮೂಲಕ ಬರುವ ತೆರಿಗೆಯನ್ನು ಮಾತ್ರ ವಸೂಲಿಮಾಡಿ ಚಕ್ರವರ್ತಿಗೆ ಕಳುಹಿಸುತ್ತಿದ್ದರು. ಅವರ ಸೇವಕರು ವಸೂಲು ಮಾಡುತ್ತಿದ್ದರೆ, ಮನ್ಸಬ್‌ದಾರರು ಮಾತ್ರ ತಮ್ಮ ಕೆಲಸಗಳಲ್ಲಿ ಮಗ್ನರಾಗಿರುತ್ತಿದ್ದರು. ಜಹಂಗೀರ್ ಪರಿಪಾಲನೆಯಲ್ಲಿ ಚಕ್ರವರ್ತಿಯಿಂದ ನೇರವಾಗಿ ನಿಯಮಿಸ ಲಾದ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು, ಈ ಅಧಿಕಾರಿ ಗಳು ನಿಗದಿಸಿದ ಪರಿಮಿತಿಗಿಂತಲೂ ಹೆಚ್ಚಿನ ತೆರಿಗೆಕಟ್ಟುವ ಅವಸರವಿಲ್ಲವೆಂದು ರೈತರಿಗೆ ಭರವಸೆ ನೀಡುತ್ತಿದ್ದರು. ಈ ಜಹಂಗೀರರು ಕೂಡ ಪ್ರತಿ ಎರಡು ಮೂರು ವರ್ಷಗಳಿಗೆ ನಿರಂತರವಾಗಿ ಒಬ್ಬರಿಂದ ಮೊತ್ತೊಬ್ಬರಿಗೆ ಬದಲಾವಣೆ ಆಗುತ್ತಿದ್ದವು.

ಅಕ್ಬರನ ಕಾಲದಲ್ಲಿ ಈ ಜಹಂಗೀರರು ಕೂಡ ಮನ್ಸಬ್‌ದಾರರ ಸಂಬಳಕ್ಕೆ ಸರಿಹೋಗುವ ವಿಧವಾಗಿ ಜಾಗ್ರತೆಯಿಂದ ಲೆಕ್ಕಿಸುವ ಮೂಲಕ ನಿರ್ಣಯಿಸಲಾಗುತ್ತಿತ್ತು. ಔರಂಗಜೇಬನ ಪರಿಪಾಲನೆ ಕಾಲದಲ್ಲಿ ಮನ್ಸಬ್‌ದಾರನ ಸಂಖ್ಯೆಯನ್ನು ಹೆಚ್ಚಾಗಿ ಬೆಳೆಸಿದನು. ಆದರೂ ಜಾಂಗೀರ ಹುದ್ದೆಯನ್ನು ಪಡೆಯಲು ಬಹಳ ಕಾಲ ಕಾಯಬೇಕಿತ್ತು. ಇದರ ಪರಿಮಾಣವಾಗಿ ಜಹಂಗೀರರ ಕೊರತೆ ಉಂಟಾಯಿತು. ಇದರ ಫಲವಾಗಿ ಬಹಳ ಮಂದಿ ಜಾಂಗೀರರಾದರು. ಅವರಿಗೆ ಜಹಂಗೀರು ದೊರೆತಾಗ ಎಷ್ಟು ಸಾಧ್ಯವಾದರೆ ಅಷ್ಟುಸಾರಿ ವಸೂಲಿ ಮಾಡುತ್ತಿದ್ದರು. ಔರಂಗಜೇಬು ಕೊನೆಯ ಹಂತದಲ್ಲಿ ಈ ಅಕ್ರಮ ವಸೂಲಿಗಳನ್ನು ನಿಲ್ಲಿಸಲಾಗಲಿಲ್ಲ. ಇದರ ಫಲವಾಗಿ ರೈತರು ಬಹಳ ತೊಂದರೆಗೆ ಒಳಗಾಗಬೇಕಾಯಿತು.

ಜಬ್ತ್ ಮತ್ತು ಜಮೀನುದಾರರು:

ಮೊಗಲ್ ಪಾಲಕರಿಗೆ ಪ್ರಧಾನ ಆದಾಯದ ಮೂಲ ವ್ಯವಸಾಯ ಉತ್ಪತ್ತಿಗಳ ಮೇಲೆ ದೊರೆಯುತ್ತಿತ್ತು. ಅಕ್ಬರ್‌ನ ಆರ್ಥಿಕ ಮಂತ್ರಿಯಾದ "ತೋಡರಮಲ್ಲ" ಕ್ರಿ.ಶ.1570–80ರ ಮಧ್ಯಯಾವ ಪ್ರಾಂತ ಎಷ್ಟರವರೆಗೆ ಬೆಳೆ ಬೆಳೆಸಲು ಯೋಗ್ಯವಾಗಿದೆಯೋ, ಯಾವ ಪ್ರಾಂತದಲ್ಲಿ ಯಾವ ಬೆಳೆ ಬಳಸುತ್ತಾರೋ, ಅವುಗಳ ಬೆಲೆ ಅಂತಹವುಗಳ ಮೇಲೆ ಅತಿ ಜಾಗ್ರತೆಯಿಂದ ಸರ್ವೆ ನಡೆಸಿದ. ಅದರ ಆಧಾರದ ಮೇಲೆ ಪ್ರತಿ ಬೆಳೆಗೆ ನಗದು ರೂಪದಲ್ಲಿ ಎಷ್ಟು ಕಟ್ಟಬೇಕೆಂಬುದನ್ನು ನಿರ್ಧರಿಸಿದನು. ಪ್ರತಿ ಪ್ರಾಂತ್ಯವನ್ನು ರೆವಿನ್ಯೂ ಬ್ಲಾಕುಗಳಾಗಿ ನಿರ್ಧರಿಸಿ, ಪ್ರತಿ ಬ್ಲಾಕಿಗೆ ಪ್ರತ್ಯೇಕ ಶಿಸ್ತು ಪಟ್ಟಿಯನ್ನು ಏರ್ಪಡಿಸಿ ಕಟ್ಟಬೇಕಾದ ತೆರಿಗೆಯನ್ನು ನಿರ್ಧರಿಸಲಾಯಿತು. ಈ ರೆವೆನ್ಯೂ ವಿಧಾನವನ್ನು "ಜಬ್ತ್" ಎಂದು ವ್ಯವಹರಿಸುತ್ತಾರೆ. ಎಲ್ಲಿ ಮೊಘಲರ ಪರಿಪಾಲನೆಯ ಅಧಿಕಾರಿಗಳು ಸರ್ವೆಮಾಡಿದರೋ ಅಲ್ಲಿ ಈ ಪದ್ಧತಿ ಸಾಧ್ಯವಾಯಿತು. ಆದರೂ ಗುಜರಾತ್ ಮತ್ತು ಬೆಂಗಾಲ್ ನಂತಹ ಪ್ರಾಂತಗಳಲ್ಲಿ ಇದು ಸಾಧ್ಯವಾಗಲಿಲ್ಲ.

ಬಹಳ ಪ್ರಾಂತಗಳಲ್ಲಿ ಗ್ರಾಮ ಹಿರಿಯರ ಮೂಲಕ ರೈತರು ತೆರಿಗೆಯನ್ನು ಕಟ್ಟುತ್ತಿದ್ದರು. ಸ್ಥಾನಿಕ ಹಿರಿಯರಾಗಲಿ, ಖ್ಯಾತಿ ಹೊಂದಿದ ಪ್ರಮುಖರು ಯಾರಾದರೂ ತೆರಿಗೆ ವಸೂಲುಮಾಡಿ ಸಲ್ಲಿಸುವುದಕ್ಕೆ ಮಧ್ಯವರ್ತಿಗಳಾಗಿ, ಅನುಕೂಲವಾಗಿ ಇರುತ್ತಾರೋ ಅವರು ಮೊಘಲರ ಕಾಲ ದಲ್ಲಿ ಜಮೀನುದಾರರಾಗಿ ವ್ಯವಹರಿಸುತ್ತಿದ್ದರು. ಇವರು ಚಕ್ರವರ್ತಿಯಿಂದ ನೇಮಕಗೊಂಡವರಾಗಿರಲಿಲ್ಲ. ವಂಶ ಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಅಧಿಕಾರಗಳು, ಜವಾಬ್ದಾರಿಗಳು ಬರುತ್ತಿದ್ದವು. ಇವರು ಸ್ವತಃ ಬಳಗಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಭೂ ಕಂದಾಯ ವಸೂಲು ಮಾಡುತ್ತಿದ್ದರಿಂದ ಜಮೀನುದಾರರಿಗೆ ಚಕ್ರವರ್ತಿಯ ಕಂದಾಯದಲ್ಲಿ ಒಂದು ಭಾಗ ನೀಡಲಾಗುತ್ತಿತ್ತು. ಇವರು ಮೊಘಲ್ ಅಧಿಕಾರಿಗಳ ಹತ್ತಿರ ಗ್ರಾಮಸ್ಥರ ಪರವಾಗಿ ಸಂಪ್ರದಾಯಗಳು ನಡೆಸುವುದರಲ್ಲಿ ಪ್ರತಿನಿಧಿಗಳಾಗಿ ವ್ಯವಸಹರಿಸುತ್ತಿದ್ದರು.



ಚಿತ್ರ 14.31 ಲಂಚವಸೂಲು ಮಾಡುತ್ತಿರುವ ಮೊಘಲ ಅಧಿಕಾರಿ 3.2 ಬಡರೈತರನ್ನು ಶಿಕ್ಷಿಸುತ್ತಿರುವ ತೆರಿಗೆ ವಸೂಲುದಾರರು.

SCERT TELANGANA

ಇನ್ನೂ ಕೆಲವು ಪ್ರಾಂತಗಳಲ್ಲಿ ಇವರು ಅತ್ಯಂತ ಶಕ್ತಿವಂತರಾಗಿ ಇದ್ದರು. ಮೊಗಲರ ಪರಿಪಾಲನೆಯಲ್ಲಿ ದರೋಡೆ ವಿಧಾನಗಳು ಬಲಕ್ಕೆ ದಾರಿಮಾಡಿಕೊಟ್ಟವು. ಕೆಲವು ಸಲ ಕುಲಗಳ ಆಧಾರವಾಗಿ ಜಮೀನುದಾರರ, ರೈತರ ಮಧ್ಯೆ ಅನೋನ್ಯ ಸಂಬಂಧಗಳು ಮುಂದುವರೆದು ಒಂದೊಂದು ಸಲ ಮೊಘಲ್ ಅಧಿಕಾರ ಕ್ಕೆ ದಕ್ಕೆಯನ್ನು ಉಂಟು ಮಾಡುತ್ತಿದ್ದವು. ಇಂತಹ ಜಮೀನುದಾರರ ವಿರೋಧ 17ನೇ ಶತಮಾನದ ಕೊನೆಯಲ್ಲಿ ಮೊಘಲ್ ಸಾಮ್ರಾಜ್ಯದ ಸ್ಥಿರತೆಯನ್ನು ಕಾಪಾಡುವಲ್ಲಿ ಸವಾಲುಗಳಾಗಿದ್ದವು.

- ಮನ್ಸಬ್‌ದಾರರ್ ಮತ್ತು ಜಮೀನುದಾರರ ಮಧ್ಯ ಇರುವ ವ್ಯತ್ಯಾಸವೇನು?
- ಚಕ್ರವರ್ತಿಯ ಅಧೀನದಲ್ಲಿ ಇರುವವರು ಯಾರು?
- ನಾಯಕ (ಮುಖಂಡ) ಮತ್ತು ಮನ್ಸಬ್‌ದಾರ ಸ್ಥಾನಗಳನ್ನು ಹೋಲಿಸಿ?

ಅಕ್ಬರ್ ವಿಧಾನಗಳು:

ಅಕ್ಬರ್ ಪ್ರವೇಶಪಡಿಸಿದ ವಿಧಾನಗಳೆಲ್ಲಾ ಅಕ್ಬರ್‌ನ ಮಿತ್ರನಾದ, ಆಸ್ಥಾನ ಸದಸ್ಯನಾದ ಅಬುಲ್ ಫಜಲ್‌ನು ಬರೆದ "ಅಕ್ಬರ್ ನಾಮ" ಎಂಬ ಪುಸ್ತಕದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಕ್ರಿ.ಶ. 1570ರಲ್ಲಿ ಅಕ್ಬರ್ ಫತೇಘರ್‌ಸಿಕ್ರಿಯಲ್ಲಿ (ಆಗ್ರ ಸಮೀಪದ) ವಾಸಿಸುತ್ತಿರುವಾಗ ಧರ್ಮದ ಬಗ್ಗೆ ಚರ್ಚಿಸಲು ಮುಸ್ಲಿಂ ಪಂಡಿತರನ್ನು, ಹಿಂದೂ ಪಂಡಿತರನ್ನು, ರೋಮನ್ ಕ್ಯಾಥೋಲಿಕ್‌ರನ್ನು ಮತ್ತು ಜೋರಾಷ್ಟ್ರೀಯರನ್ನು ಆಹ್ವಾನಿಸುತಿದ್ದರು. ಪ್ರಜೆಗಳ ವಿಭಿನ್ನ ಸಾಂಪ್ರದಾಯ ಗಳೆಂದರೆ ಧಾರ್ಮಿಕ ವಿಶ್ವಾಸಗಳ ಬಗ್ಗೆ ಅಕ್ಬರನಿಗೆ ಬಹಳ ಆಸಕ್ತಿ ಇರುತ್ತಿತ್ತು.



ಚಿತ್ರ 14.4 ಇಬಾದತ್‌ಖಾನ್‌ದಲ್ಲಿ ವಿವಿಧ ಮತ ಹಿರಿಯರಲ್ಲಿ ಚರ್ಚೆ ನಡೆಸುತ್ತಿರುವ ಅಕ್ಬರ್

ವಿಭಿನ್ನ ಮನೋಭಾವನೆಯುಳ್ಳವರನ್ನು ಒಂದು ಗೂಡಿಸ ಬೇಕೆಂಬುದು ಅಕ್ಬರನ ಕನಸಾಗಿತ್ತು. "ಸುಲ್ಹ್-ಇ-ಕುಲ್" (ಪ್ರಪಂಚ ಶಾಂತಿ) ಎಂಬ ಭಾವನೆ ಆತನ ಮನಸ್ಸಿನಲ್ಲಿ ಮೂಡಿತು. ಇಂತಹ ಸಹನೆಯಿಂದ ಕೂಡಿದ ಭಾವನೆ ಈತನ ಪರಿಪಾಲನೆ ಕಾಲದಲ್ಲಿ ಭಿನ್ನಮತದವರ ಮಧ್ಯೆ ಬೇಧಭಾವ ತೋರಿಸುವ ಪದ್ಧತಿಯನ್ನು ಇಲ್ಲದಂತೆ ಮಾಡಿತು. ಯಾವುದೋ ಒಂದು ಪದ್ಧತಿ ಕಡೆ ಅಥವಾ ವಿಶ್ವಾಸದೆಡೆಗಲ್ಲದೆ ನೀತಿ, ನಿಜಾಯಿತಿ, ಸಮನ್ಯಾಯ, ಶಾಂತಿಯಂತಹ ಸಂಪೂರ್ಣ ಪ್ರಪಂಚಕ್ಕೆ ಅನ್ವಯಿಸುವ ಸಿದ್ಧಾಂತಗಳನ್ನು ಪ್ರವೇಶ ಪಡಿಸಬೇಕೆಂದು ಅಕ್ಬರನು ಸಂಕಲ್ಪಿಸಿದನು. "ಸುಲ್ಹ್-ಇ-ಕುಲ್" ಪದ್ಧತಿ ಆಧಾರವಾಗಿ ರಾಜ್ಯ ಪರಿಪಾಲನೆ ಅಳವಡಿಸಿಕೊಳ್ಳುವಲ್ಲಿ ಅಕ್ಬರನಿಗೆ ಅಬುಲ್‌ಫಜಲ್ ಸಹಾಯಕನಾದನು. ಚಕ್ರವರ್ತಿ ಯಾವುದೇ ಒಂದು ಧರ್ಮ, ವರ್ಗ, ಸಾಮಾಜಿಕ ಸ್ಥಿತಿ, ಕುಲ ಸಂಬಂಧಗಳಿಗೆ ಅತೀತವಾಗಿ ತನ್ನ ರಾಜ್ಯದ ಪ್ರಜೆಗಳೆಲ್ಲರ ಕ್ಷೇಮಕ್ಕಾಗಿ ಶ್ರಮಿಸಿದನು. ಜಹಂಗೀರ್ ಮತ್ತು ಷಜಹಾನ್‌ನು ಕೂಡ ಈ ಸಿದ್ಧಾಂತಗಳನ್ನು ಅವಲಂಬಿಸಿ ಪರಿಪಾಲಿಸಿದರು. ಆದರೆ ಔರಂಗಜೇಬು ಈ ಪದ್ಧತಿಯಿಂದ ಹೊರಬಂದು "ಸುನ್ನಿ" ಮುಸ್ಲಿಂ ವರ್ಗವನ್ನು ಅಭಿಮಾನಿಸ ತೊಡಗಿದರು. ಇತರೆ ಧರ್ಮದ ಪ್ರಜೆಗಳು ಈ ವಿಷಯದ ಬಗ್ಗೆ ಚಿಂತಿಸಲಾರಂಭಿಸಿದರು.

ಸುಲ್ಹ್-ಇ-ಕುಲ್:

ಅಕ್ಬರನ ಮಗನಾದ ಜಹಂಗೀರನು "ಸುಲ್ಹ್-ಇ-ಕುಲ್"ನ್ನು ಕುರಿತು ಹೀಗೆ ಹೇಳಿದ್ದಾನೆ.

"ಈ ವಿಶಾಲ ದೇವರ ಸನ್ನಿದಿಯಲ್ಲಿ ಎಲ್ಲರಿಗೂ ಸ್ಥಾನವಿದೆ. ಈ ರಾಜ್ಯದಲ್ಲಿ ಎಲ್ಲಾ ದಿಕ್ಕುಗಳಲ್ಲಿ ಪರಿಮಿತಿ ಇದೆ. ಸುತ್ತಲೂ ಸಮುದ್ರವಲ್ಲದೆ ಬೇರೇನು ಇಲ್ಲ. ಇತರರ ನಂಬಿಕೆಗಳು ಮತ್ತು ಧಾರ್ಮಿಕ ಹಿರಿಯರಿಗೂ ಮತಸ್ಥರಿಗೆ ನಿವಾಸವಿದೆ. ಧಾರ್ಮಿಕ ಭೇಧಕ್ಕೆ ದಾರಿಯಿಲ್ಲ "ಸುನ್ನಿ" ಷಿಯಾರ ಪ್ರಾರ್ಥನೆಗಾಗಿ ಒಂದು ಮಸೀದಿಯಲ್ಲಿ ಸೇರಿದರೆ, ಕ್ರೈಸ್ತರು, ಯಾದವರು ಚರ್ಚ್‌ಗಳಲ್ಲಿ ಸೇರುತ್ತಾರೆ. ಆತನು ಸ್ಥಿರವಾಗಿ ಪ್ರಪಂಚ ಶಾಂತಿಗಾಗಿ ಸುಲ್ಹ್-ಇ-ಕುಲ್ ವಿಧಾನಗಳನ್ನು ಅವಲಂಬಿಸಿದ್ದನು.

17ನೇ ಶತಮಾನದ ನಂತರ ಮೊಘಲ್ ಸಾಮ್ರಾಜ್ಯ:

ಪರಿಪಾಲನೆ ಮತ್ತು ಸೈನಿಕ ಸಾಮರ್ಥ್ಯದಿಂದ

© TELANGANA

ಮೊಘಲ್ ಸಾಮ್ರಾಜ್ಯ ಉತ್ತಮ ಆರ್ಥಿಕ ವ್ಯವಸ್ಥೆ ಮತ್ತು ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಸಾಧಿಸಿತ್ತೆಂದು ಹೇಳಬಹುದು. ವಿದೇಶೀ ಯಾತ್ರಿಕರು ಪ್ರಸಿದ್ಧಿ ಹೊಂದಿದ ಸಂಪತ್ಭರಿತ ದೇಶವೆಂದು ವರ್ಣಿಸಿದ್ದಾರೆ. ಆದರೆ ಇವರು ಸಂಪತ್ತಿನ ಜೊತೆಗೆ ದಾರಿದ್ರ್ಯವನ್ನು ಕಂಡು ಕುಪಿತಕ್ಕೊಳ ಗಾದರು. ಈ ಭೇಧಭಾವಗಳು ಆಶ್ಚರ್ಯವನ್ನುಂಟು ಮಾಡುವಂತಿವೆ. ಷಾಜಹಾನುನು 20ನೇ ಆಳ್ವಿಕೆಯ ವರ್ಷದಲ್ಲಿ ಬರೆದಿರುವ ಅಧಿಕಾರಿಕ ಪತ್ರ ಈ ಕೆಳಗಿನ ವಿಷಯಗಳನ್ನು ಒಳಗೊಂಡಿದೆ. ಸಾಮ್ರಜ್ಯದಲ್ಲಿ ಒಟ್ಟು ಮನ್ಸಬ್‌ದಾರರು 8000 ಜನರಿದ್ದರೂ ಅವರಲ್ಲಿ ಉನ್ನತ ಹುದ್ದೆಗೆ ಸೇರಿದವರು ಕೇವಲ 445 ಜನರಿದ್ದು, ಇವರು ಕೇವಲ 5.6 ಶೇಖಡ ಮಾತ್ರ. ಆದರೂ ಇವರಿಗೆ ಇವರ ಉದ್ಯೋಗಗಳಿಗೆ 61.5 ಶೇಕಡ ಜೀತಭತ್ಯವನ್ನು ನೀಡುತ್ತಿದ್ದರು. ಮೊಘಲ್ ಚಕ್ರವರ್ತಿಗಳು ಅವರ ಮನ್ಸಬ್‌ದಾರರ ಆದಾಯದಲ್ಲಿ ಹೆಚ್ಚಿನ ಭಾಗವನ್ನು ವೇತನಕ್ಕಾಗಿ ದಿನನಿತ್ಯದ ಅವಸರಗಳಿಗೆ ಮತ್ತು ವಸ್ತುಗಳನ್ನು ಸರಬರಾಜು ಮಾಡುವ ರೈತರು ಮತ್ತು ಕೈಕೆಲಸದಾರರು ಉದ್ಯೋಗಗಳನ್ನು ಪಡೆಯುತ್ತಿದ್ದರು. ಆದರೆ ನಿರಾಶ್ರಿತರಿಗೆ ಇದರಿಂದ ಯಾವುದೇ ಲಾಭ ದೊರೆಯುತ್ತಿರಲಿಲ್ಲ. ಏಕೆಂದರೆ ಇವರಿಗೆ ಹೆಚ್ಚುವರಿ ಸಲಕರಣೆಗಳ ಕೊರತೆ ಬಂಡವಾಳ ಹೂಡುವ ಸಾಮರ್ಥ್ಯ ಇಲ್ಲದಿದ್ದರಿಂದ ಕಷ್ಟಪಡದಿದ್ದರೆ ಹೊಟ್ಟೆ ತುಂಬದ ಪರಿಸ್ಥಿತಿ ಇರುತ್ತಿತ್ತು.

ಇದಕ್ಕೆ ವಿರುದ್ಧವಾಗಿ ಶ್ರೀಮಂತರಾದ ರೈತರು ಮತ್ತು ಕರಕುಶಲದಾರರು ಸಾಮ್ರಾಜ್ಯದಲ್ಲಿ ವಿಶೇಷವಾಗಿ ಲಾಭ ಹೊಂದುತ್ತಿದ್ದರು.

17ನೇ ಶತಮಾನದ ಕೊನೆಯಲ್ಲಿ ವಿಪರೀತವಾದ ಸಂಪತ್ತು ಮತ್ತು ಸಂಪನ್ಮೂಲಗಳ ಮೇಲೆ ಮೊಘಲ್ ಅಧಿಕಾರಿಗಳ ಆಧಿಪತ್ಯ ಇರುವುದರಿಂದ ಇವರು ಶಕ್ತಿವಂತ ವರ್ಗವಾಗಿ ಬದಲಾದರು. ಮೊಘಲ್ ಚಕ್ರವರ್ತಿಯ ಅಧಿಕಾರ ಕ್ರಮೇಣ ಕಡಿಮೆಯಾಗುತ್ತಿದ್ದಂತೆ ಪ್ರಾಂತೀಯ ರಾಜ್ಯಗಳು ಕೆಲವು ಪ್ರಾಂತಗಳಲ್ಲಿ ಬಲಿಷ್ಟವಾಗುವುದು ಪ್ರಾರಂಭವಾಯಿತು. ಅವರು ಸಣ್ಣ ಸಣ್ಣ ರಾಜ್ಯಗಳೊಂದಿಗೆ, ಹೈದರಾಬಾದ್, ಅವಧ್‌ರಂತಹ ರಾಜ್ಯಗಳನ್ನು ಸ್ಥಾಪಿಸಲು ಪ್ರಾರಂಭಿಸಿದರು. ಕೊನೆಗೆ ದೆಹಲಿ ಚಕ್ರವರ್ತಿಯನ್ನು ತಮ್ಮ ರಾಜನಾಗಿ ಅಂಗೀಕರಿಸಿ ಮುಂದುವರೆಸಲು 18ನೇ ಶತಮಾನದಲ್ಲಿ ಈ ರಾಜ್ಯಗಳು ಸ್ವತಂತ್ರ ರಾಜ್ಯಗಳಾಗಿ ಅವತರಿಸಿದವು.

ಸರ್ದಾರ್ ಸರ್ವಾಯಿ ಪಾಪಣ್ಣ

ವರಂಗಲ್ ಜಿಲ್ಲೆಗೆ ಸೇರಿದ ಸರ್ವಾಯಿ ಪಾಪಣ್ಣ ತೆಲಂಗಾಣದಲ್ಲಿ ಮೋಘಲ್ ಪಾಲನೆಗೆ ವಿರುದ್ಧವಾಗಿ



ಹೋರಾಡಿದನು. ಔರಂಗಜೇಬನ ಕಾಲಕ್ಕೆ ಸೇರಿದ ಈತನು ಹಿಂದುಳಿದ, ತುಳಿತಕ್ಕೊಳಗಾದ ವರ್ಗಗಳ, ಬಡವರ ಏಳಿಗೆಗಾಗಿ ಪ್ರಯತ್ನಿಸಿದನು. ಈತನು ಮೋಘಲರ ಆಡಳಿತದಿಂದ ತೆಲಂಗಾಣ ಪ್ರಾಂತವನ್ನು 1487–1724ರ ಮಧ್ಯ ವಶಪಡಿಸಿಕೊಂಡು ವರಂಗಲ್ ಜಿಲ್ಲೆಯಲ್ಲಿ ಕಿಲಾಶಾಪೂರ್ ಕೋಟೆಯನ್ನು ಕಟ್ಟಿಸಿ ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

ಮೋಘಲರ ಅರಾಜಕತೆಯನ್ನು, ದೌರ್ಜನ್ಯವನ್ನು ಗಮನಿಸಿ ಶ್ರೇಷ್ಠ ಸೈನ್ಯವನ್ನು ಗೆರಿಲ್ಲಾ ಪದ್ಧತಿಯಲ್ಲಿ ಶಿಕ್ಷಣ ಪಾಪನ್ನ ಕೊಟ್ಟನು. ನಲ್ಗೊಂಡ ಜಿಲ್ಲೆಯಲ್ಲಿನ ಭುವನಗಿರಿ, ಕೊಲನುಪಾಕ, ವರಂಗಲ್ ಜಿಲ್ಲೆಯಲ್ಲಿನ ತಾಟಿಕೊಂಡ, ಚೇರ್ಯಾಲ, ಕರೀಂನಗರ್ ಜಿಲ್ಲೆಯಲ್ಲಿನ ಹುಸ್ತಾಬಾದ್, ಹುಜರಾಬಾದ್‌ನಲ್ಲಿನ ಕೋಟೆಗಳನ್ನು ನಿಯಂತ್ರಿಸಿದನು. ತನ್ನ ಪಾಲನೆಯಲ್ಲಿ ರಾಜ್ಯ ವಿಸ್ತರಿಸಲು ಸರ್ವಾಯಿ ಪೇಟೆಯಲ್ಲಿ ಪ್ರಥಮ ಕೋಟೆ ಯನ್ನು ನಿಮಿಖಸಿದನು. ತಾಟಿಕೊಂಡ, ವೇಮಲಕೊಂಡ, ಶಾಪುರಗಳಲ್ಲಿ ಕೋಟೆಗಳನ್ನು ಕಟ್ಟಿಸಿದನು. ತಾಟಿ ಕೊಂಡದಲ್ಲಿ ಇರುವ ಚೆಕ್ ಡ್ಯಾಂಗಳು ಸರ್ವಾಯಿ ಪಾಪಣ್ಣನ ಕಾಲದಲ್ಲಿ ನಿರ್ಮಿಸಲ್ಪಟ್ಟಿತು. ಪಾಲಕನಾಗಿ ತನ್ನ ಅಧೀನ ದಲ್ಲಿರುವ ಪ್ರಾಂತಗಳ ಅಭಿವೃದ್ಧಿಯ ಬಗ್ಗೆ ಆತನಿಗೆ ಇರುವ ದೃಷ್ಟಿ ಕೋನಕ್ಕೆ ನಿದರ್ಶನವಾಗಿದೆ.



ಸುಬೇದಾರರು, ಜಾಗೀರು ದಾರರು, ಭೂ ಮಾಲೀಕರ ಮೇಲೆ ಗೆರಿಲ್ಲಾ ದಾಳಿಮಾಡಿ ಯುದ್ಧಕ್ಕೂ ಸೈನ್ಯ ತಯಾರಿಗೂ ಬೇಕಾದ ಹಣವನ್ನು ತಯಾರಿಸಿದನು. ಪಾಪಣ್ಣನ ಪ್ರಜಾಧರಣೆಗೆ ಸಂಬಂಧಿಸಿದ ವಿಷಯ ಔರಂಗಜೇಬನಿಗೆ

SCERT TELANGANA

ಮುಟ್ಟಿತು. ಔರಂಗಜೇಬನು ಪಾಪಣ್ಣನನ್ನು ಸದೆ ಬಡಿಯುವಂತೆ ರುಸ್ತುಂ ದಿಲ್ ಖಾನ್‌ನನಿಗೆ ಸಲಹೆ ಕೊಟ್ಟನು. ದಿಲ್ ಖಾನನು ಮೊದಲಿಗೆ ಖಾಸಿಂ ಖಾನನ್ನು ಕಳುಹಿಸಿ ಪಾಪಣ್ಣನನ್ನು ಸೋಲಿಸಿ ಶಾಪೂರ್ ಕೋಟೆಯನ್ನು ವಶಪಡಿಸಿಕೊಳ್ಳಲು ಸೂಚಿಸಿದರು. ಆದರೆ ಪಾಪಣ್ಣ ಖಾಸಿಂ ಖಾನನ್ನು ಸೋಲಿಸಿ ಕೊಂದು ಹಾಕಿದನು. ಇದರಿಂದ ಸಿಟ್ಟಿಗೆದ್ದ ರುಸ್ತುಂದಿಲ್ ಖಾನ್ ಸ್ವತಃ ತಾನೆ ಯುದ್ಧಕಿಳಿದನು. ಈ ಯುದ್ಧ ಮೂರು ತಿಂಗಳವರೆಗೆ ನಿರಂತರ ಸಾಗಿತು. ಕೊನೆಗೆ ದಿಲ್ ಖಾನ್ ಕದನರಂಗದಿಂದ ಪಲಾಯನ ಮಾಡಿದನು. ಆದರೆ ಪಾಪಣ್ಣನು ತನ್ನ ಸ್ನೇಹಿತ, ಅನುಚರನಾದ ಸರ್ವಾನ್ನನನ್ನು ಕಳೆದುಕೊಂಡನು.

ಸಾ.ಶ. 1707ರಲ್ಲಿ ಔರಂಗಜೇಬ ಮರಣಿಸಿದ ನಂತರ ದಕ್ಕನ್ ಸುಬೇದಾರಿ ಯಾದ ಕಂಬಕ್ಷಖಾನ್ ದಕ್ಕನ್ ಮೇಲೆ ನಿಯಂತ್ರಣ ಕಳೆದುಕೊಳ್ಳಲಾರಂಭಿಸಿದನು. ಈ ಬಲಹೀನ ಆಡಳಿತವನ್ನು ಗಮನಿಸಿದ ಪಾಪಣ್ಣ ವರಂಗಲ್ ಕೋಟೆಯ ಮೇಲೆ ಎಪ್ರೀಲ್ 1, 1708ರಲ್ಲಿ ದಾಳಿ ಮಾಡಿ ವಶಪಡಿಸಿಕೊಂಡನು. ತಾಟಿಕೊಂಡದ ಹತ್ತಿರ ನಂತರ ಖಿಲಾಷಪುರದ ಹತ್ತಿರ ಬಹಳ ಕಾಲ ಯುದ್ಧ ನಡೆಯಿತು. ಅಲ್ಲಿಂದ ಪಾಪಣ್ಣ ತಪ್ಪಿಸಿಕೊಂಡನು. ಸಾ.ಶ. 1712 ರಲ್ಲಿ ಆತನನ್ನು ಹಿಡಿದು ಶಿರಚ್ಛೇದನ ಮಾಡಿದರು.

ಹೈದರಾಬಾದಿನ ಆಸಫ್ ಜಾಹಿಗಳು (1724–1948)

ಆಸಫ್ ಜಾಹಿಗಳು – ಕಾಲಕ್ರಮಣಿಕೆ	
ನಿಜಾಂ ಉಲ್ ಮುಲ್ಕ್	1724–1748
ನಾಜರ್ ಜಂಗ್	1748–1751
ಮುಜಫರ್ ಜಂಗ್	1751–1751
ಸಲಬದ್ ಜಂಗ್	1751–1762
ನಿಜಾಂ ಅಲೀ ಖಾನ್	1762–1803
ಸಿಕಿಂದರ್ ಜಾ	1803–1829
ನಾಸಿರ್ ಉದ್ ದೌಲಾ	1829–1857
ಅಫ್ಜಲ್ ಉದ್ ದೌಲಾ	1857–1869
ಮಹಮೂದ್ ಅಲೀ ಖಾನ್	1869–1911
ಮೀರ್ ಉಸ್ಮಾನ್ ಅಲೀ ಖಾನ್	1911–1948

1720ರಲ್ಲಿ ಮೋಘಲ್ ಚಕ್ರವರ್ತಿಗಳ ಪ್ರಾಭಲ್ಯ ಕಡಿಮೆಯಾದ ಕೂಡಲೇ ಅವರ ಸಾಮಂತರು ಸ್ವಾತಂತ್ರ್ಯ ಘೋಷಿಸಿಕೊಂಡರು. ಅದರಲ್ಲಿ ಒಬ್ಬರಾದ ದಖ್ಖನ್ ಸಾಮಂತ ಚಿನ್ ಕುಲಿಚ್ ಖಾನ್. ಈತನನ್ನೇ ನಿಜಾಂ ಉಲ್ ಮುಲ್ಕ್ ಎನ್ನುತ್ತಾರೆ. 1724ರಲ್ಲಿ ಹೈದರಾಬಾದ್ ರಾಜ್ಯದಲ್ಲಿ ಅಸಫ್ ಜಾಹಿ ವಂಶ ಪಾಲನೆಯನ್ನು ಈತನು ಸ್ಥಾಪಿಸಿದನು. ನಿಜಾಂ ಉಲ್ ಮುಲ್ಕ್ 24 ವರ್ಷಗಳ ಕಾಲ ಪಾಲಿಸಿದನು. ಅಸಫಜಾಹಿ ಪಾಲಕರಲ್ಲಿ 7 ಜನ ರಾಜರು 1724 ರಿಂದ 1948ರ ವರೆಗೆ ಪರಿಪಾಲಿಸಿದರು. ಹೈದರಾಬಾದ್ ರಾಜ್ಯ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ನೈಜಾಂ ರಾಜರು ನಿರಂತರವಾಗಿ ಮರಾಠ ಮೈಸೂರ್ ಪಾಲಕರೊಂದಿಗೆ ಹೋರಾಡುತ್ತಲೇ ಇದ್ದರು. ಈ ಕಾರಣಗಳಿಂದ ಅವರು ಸ್ವಾತಂತ್ರವನ್ನು ಕಳೆದುಕೊಂಡು ಬ್ರಿಟಿಷರ ಮೇಲೆ ಆಧಾರಪಡಬೇಕಾಯಿತು.

ಬ್ರಿಟಿಷ್ ಅಧಿಕಾರಿಗಳ ಪ್ರಭಾವದಿಂದ ಅವರು ವಸಾಹತುಶಾಹಿ ಆಧುನೀಕರಣವನ್ನು ಕೈಗೊಂಡರು. ಹೈದರಾಬಾದ್ ಸಂಸ್ಕೃತಿಯನ್ನು ಬ್ರಿಟಿಷರು ಬಹು ಮೆಚ್ಚಿಕೊಂಡರು. 19ನೇ ಶತಮಾನದ ಕೊನೆ ಭಾಗದಲ್ಲಿ ಹೈದರಾಬಾದ್ ಅಭಿವೃದ್ಧಿಯ ಹಾದಿಯನ್ನು ಹಿಡಿಯಿತು. 1853 ರಿಂದ 1883ರ ಮಧ್ಯ ನಿಜಾಂ ರಾಜರಿಗೆ ಸಾಲಾರ್ ಜಂಗ್ ದಿವಾನನಾಗಿದ್ದನು. ಆತನು ವಸಾಹತುಶಾಹಿ ಅಭಿವೃದ್ಧಿಯ ಯೋಜನೆಗಳನ್ನು ಸ್ವಾಗತಿಸಿದನು. (ಈತನ ಬಗ್ಗೆ ಮುಂದಿನ ಪಾಠದಲ್ಲಿ ಕಲಿಯುವಿರಿ).


ಸಾಲಾರ್ ಜಂಗ್

ಆರನೇ ನಿಜಾಂ ಮೀರ್ ಮೆಹಬೂಬ್ ಅಲಿಪಾಷ ಎಷ್ಟೋ ಸುಧಾರಣೆಗಳನ್ನು ಜಾರಿಗೆ ತಂದನು. ಹಸ್ಸಿಷಿಯಾ ಗ್ರಂಥಾಲಯ ವಿಕ್ಟೋರಿಯಾ ಸ್ಮಾರಕ ಅನಾಥ ಶಾಲೆ ಮಹಬೂಬಿಯ ಬಾಲಕೀಯರ ಶಾಲೆಗಳನ್ನು ಕಟ್ಟಿಸಿದನು. 1908ರಲ್ಲಿ ಮೂಸಿನದಿ ಪ್ರವಾಹ ಸಂದರ್ಭದಲ್ಲಿ ಹೈದರಾಬಾದ್ ಜನರಿಗೆ ಬೆಂಬಲವಾಗಿ ನಿಂತನು. ಪ್ರವಾಹ ಸಹಾಯ ಚಟುವಟಿಕೆಗಳನ್ನು ಸ್ವತಃ ಅಜಯಾಷಿ ಮಾಡಿದನು. ಭಗವಂತನಿಗೆ ಪ್ರಾರ್ಥಿಸಿದನು. ಬಾಧಿತರಿಗೆ ಆಶ್ರಯ ಕಲ್ಪಿಸಿದನು. ಪಾಲನೆಯಲ್ಲಿ ಉದಾರವಾದ ಸುಧಾರಣೆಗಳಿಗಾಗಿ ಪ್ರಜಾ ಹೋರಾಟ ನಡೆಯುತ್ತಿದ್ದಾಗ್ಯೂ 7ನೇ ನಿಜಾಂ ಭೂ ಸಾಮ್ಯ ಅಧಿಕಾರ ಸ್ವರೂಪವನ್ನು ಕಾಪಾಡಿಕೊಳ್ಳಲು ಧೃಢ ನಿಶ್ಚಯದಿಂದ ಇದ್ದನು. ಈತನ ಬಗ್ಗೆ (8ನೇ ತರಗತಿಯಲ್ಲಿ ತಿಳಿದುಕೊಳ್ಳುವಿರಿ).

SCERT TELANGANA

ಮುಖ್ಯಪದಗಳು :

1. ಜಾಗೀರು 2. ಸುಲ್ಹ್–ಹಿ–ಕುಲ್ 3. ಮನ್ಸಬ್ದಾರರ 4. ಜಬ್ತ್ 5.ಜಾಗೀರುದಾರರು 6.ಉನ್ನತ ವರ್ಗ 7. ಜಮೀಂದಾರರು

ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1) ಮನ್ಸಬ್‌ದಾರ ಮತ್ತು ಆತನ ಜಾಗೀರ್‌ಗೆ ನಡುವಿನ ಸಂಬಂಧವೇನು?
2) ಮೊಘಲ್ ಪರಿಪಾಲನೆಯಲ್ಲಿ ಜಮೀನ್ದಾರರ ಪಾತ್ರವೇನು?
3) ಧರ್ಮಪ್ರಚಾರಕರೊಂದಿಗೆ ನಡೆಸಿದ ಚರ್ಚೆಗಳ ಪ್ರಭಾವ ಅಕ್ಬರನ ಆಡಳಿತ ನಿರ್ಣಯಗಳ ಮೇಲೆ ಎಂತಹ ಪ್ರಭಾವ ಬೀರಿತು?
4) ಮೊಘಲ್ ಸಾಮ್ರಾಜ್ಯದಲ್ಲಿ ಸೋತರಾಜರನ್ನು ರಾಜರುಗಳನ್ನು ಅವರವರ ರಾಜ್ಯಗಳಲ್ಲಿ ಏಕೆ ಮುಂದುವರೆಸಿದರು?
5) ಮೊಘಲರ ವಿಶಾಲ ಸಾಮ್ರಾಜ್ಯವನ್ನು ನಿಯಂತ್ರಿಸಲು **"ಸುಲ್ಹ್–ಇ–ಕುಲ್"** ವಿಧಾನ ಹೇಗೆ ಪ್ರಾಮುಖ್ಯತೆಯನ್ನು ಪಡೆಯಿತು?
6) ಬಬ್ತ್ ಮತ್ತು ಜಮೀನದಾರ್ ಪ್ಯಾರವನ್ನು ಓದಿ, ವ್ಯಾಖ್ಯಾನಿಸಿರಿ.
7) ಮೊಘಲ್ ಚಕ್ರವರ್ತಿಗಳ ಸಮಾಚಾರವನ್ನು ಶೇಖರಿಸಿ, ಕೋಷ್ಟಕದಲ್ಲಿ ಬರೆಯಿರಿ.

ಕ್ರ.ಸಂ.	ಚಕ್ರವರ್ತಿಯ ಹೆಸರು	ಆಡಳಿತದ ಕಾಲ	ಮುಖ್ಯಾಂಶಗಳು
1			
2			
3			
4			
5			
6			

SCERT TELANGANA

ಅಧ್ಯಾಯ 15

ಭಾರತ ದೇಶದಲ್ಲಿ ಬ್ರಿಟೀಷ್ ಸಾಮ್ರಾಜ್ಯ ಸ್ಥಾಪನೆ

ಸಮರ್ಥವಂತವಾದ ಮೊಘಲರ ಪಾಲನೆಯಲ್ಲಿ ಔರಂಗಜೇಬನು ಕೊನೆಯವನು. ಇಂದು ವಿಶಾಲವಾಗಿರುವ ಭಾರತದ ಭೂಭಾಗದ ಮೇಲೆ ತನ್ನ ಆದಿಪತ್ಯವನ್ನು ಸಾಧಿಸಿದ್ದನು. ಕ್ರಿ.ಶ. 1707 ಈತನ ಮರಣದ ನಂತರ ಮೊಘಲರು, ಸುಬೇದಾರರು, ದೊಡ್ಡ ಜಮೀನ್ದಾರರು ಪ್ರದೇಶಿಕ ರಾಜ್ಯಗಳನ್ನು ಏರ್ಪಾಟುಮಾಡಿಕೊಳ್ಳಲು ಪ್ರಾರಂಭಿಸಿದರು. ಫಲಿತವಾಗಿ ದೇಶದಲ್ಲಿ ಅನೇಕ ಬಲಾಢ್ಯವಾದ ಪ್ರಾಂತೀಯ ರಾಜ್ಯಗಳು ಏರ್ಪಡುವ ವೇಳೆಗೆ ಡಿಲ್ಲಿ ಕೇಂದ್ರವಾಗಿ ಪರಿಪಾಲನೆ ಮಾಡುವುದು ಕಷ್ಟಕರವಾಯಿತು.


ಕ್ರಿ.ಶ. 18ನೇ ಶತಮಾನಾದ ದ್ವಿತಿಯಾರ್ಧದ ವೇಳೆಗೆ, ಬ್ರಿಟೀಷ್‌ರ ರೂಪದಲ್ಲಿ ಹೊಸ ಅಧಿಕಾರದ ಕೇಂದ್ರ ತೆರೆಯಮೇಲೆ ಬಂದಿತು. ಬ್ರಿಟೀಷ್‌ರು ಸಣ್ಣ ವ್ಯಾಪಾರಸ್ಥರಾಗಿ ನಮ್ಮ ದೇಶಕ್ಕೆ ಬಂದ ಸಂಗತಿ ನಿಮಗೆ ಗೊತ್ತಾ? ಅಂತಹವರು ಇಷ್ಟು ವಿಶಾಲವಾದ ದೇಶಕ್ಕೆ ಹೇಗೆ ಯಜಮಾನರಾದರು?

ಈಸ್ಟ್ ಇಂಡಿಯಾ ಕಂಪನಿ:

ಇಂಗ್ಲಾಂಡ್ ಪಾಲಕರಾದ ಮೊದಲನೇ ಎಲಿಜಿಬತ್ ರಾಣಿಯಿಂದ ಪೂರ್ವದೇಶಗಳ ಜೊತೆ ವ್ಯಾಪಾರ ಮಾಡಿಕೊಳ್ಳಲು ಕ್ರಿ.ಶ. 1600ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಗುತ್ತಾಧಿಪತ್ಯವನ್ನು "ರಾಯಲ್ ಚಾರ್ಟರ್"ನಿಂದ ಪಡೆಯಿತು. ಇದರ ಪ್ರಕಾರ ಇಂಗ್ಲೆಂಡ್‌ನಲ್ಲಿರುವ ಯಾವ ಇತರ ವ್ಯಾಪಾರ ಕಂಪನಿಗಳು ಸಹ ಈಸ್ಟ್ ಇಂಡಿಯಾ ಕಂಪನಿಯ ಜೊತೆ ಕಣಕ್ಕೆ ಇಳಿಯಬಾರದೆಂದು ಷರತ್ತು ಮಾಡಲಾಯಿತು. ಈ ಷರತ್ತಿನ ಮೂಲಕ ಕಂಪನಿಯವರು ಸಮುದ್ರದ ಆಚೆಯ ಭೂಭಾಗದಲ್ಲಿ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ಕೊಂಡು ಯೂರೋಪ್‌ನಲ್ಲಿ ಅಧಿಕ ಬೆಲೆಗೆ ಮಾರಿಕೊಳ್ಳುವ ಅವಕಾಶ ಬಂದಿತು. ಈ ಕಂಪನಿಯವರಿಗೆ ಇತರೇ ಆಂಗ್ಲೇಯ ಕಂಪನಿಗಳ ವ್ಯಾಪಾರಕ್ಕೆ ಸ್ಪರ್ಧೆಯಾಗಲಿ, ಭಯವಾಗಲಿ ಇಲ್ಲಂದತಾಯಿತು.

ವ್ಯಾಪಾರ ಲೇವಾದೇವಿಗಳು:

ಈಸ್ಟ್ ಇಂಡಿಯಾ ಕಂಪನಿ ಪ್ರಮುಖವಾಗಿ ವ್ಯಾಪಾರದಿಂದ ಲಾಭಹೊಂದುವ ವ್ಯಾಪಾರ ಸಂಸ್ಥೆ. ಕಡಿಮೆ ಬೆಲೆಗೆ ವಸ್ತು ಗಳನ್ನು ಕೊಂಡು ಹೆಚ್ಚಿನ ಬೆಲೆಗೆ



ಚಿತ್ರ 15.1 ಲಂಡನ್‌ನ ಈಸ್ಟ್ ಇಂಡಿಯಾ ಕಂಪನಿ ಪ್ರಧಾನ ಕಛೇರಿ

SCERT TELANGANA


ಚಿತ್ರ 15.2

ಮಾರುತ್ತಿದ್ದರು. ಆ ದಿನಗಳಲ್ಲಿ ವ್ಯಾಪಾರ ಸಂಸ್ಥೆಗಳು ತಮ್ಮ ಮಧ್ಯೆ ಪೈಪೋಟಿ ಇಲ್ಲದಂತೆ ನೋಡಿಕೊಂಡು ಅಧಿಕ ಲಾಭವನ್ನುಗಳಿಸುತಿದ್ದವು.

ಇತರ ಯೂರೋಪ್ ದೇಶದವರನ್ನು ಪೂರ್ವ ದೇಶದವರ ವ್ಯಾಪಾರ ದೊಳಕ್ಕೆ ಬರದ ಹಾಗೆ ಚಾರ್ಟ್ರರ್ ನಿವಾರಿಸಲಾಗಲಿಲ್ಲ. ಬ್ರಿಟೀಷರ ಮೊದಲ ನೌಕೆ ಆಫ್ರಿಕಾ ಪಶ್ಚಿಮ ತೀರದಿಂದ ಪ್ರಯಾಣಿಸಿ "ಗುಡ್ ಹೋಪ್" ಅಗ್ರವನ್ನು ದಾಟಿ ಹಿಂದೂಮಹಾ ಸಾಗರವನ್ನು ದಾಟುವ ವೇಳೆಗೆ ಪೋರ್ಚುಗೀಸಿ ನವರು ಭಾರತ ದೇಶದ ಪಶ್ಚಿಮ ಭಾಗದ ಗೋವಾದಲ್ಲಿ ತಮ್ಮ ಸ್ಥಾವರವನ್ನು ಏರ್ಪಾಟು ಮಾಡಿಕೊಂಡರು. ಪೋರ್ಚುಗೀಸು ನಾವಿಕನಾದ ವಾಸ್ಕೋಡಿಗಾಮ ಕ್ರಿ.ಶ.1498ರಲ್ಲಿ ಭಾರತ ದೇಶಕ್ಕೆ ಸಮುದ್ರಮಾರ್ಗವನ್ನು ಕಂಡುಕೊಂಡನು. 17ನೇ ಶತಮಾನದ ಪ್ರಾರಂಭದಲ್ಲಿಯೇ ಡಚ್ ದೇಶದವರು ಸಹ ಹಿಂದೂಮಹಾಸಾಗರ ತೀರದಲ್ಲಿ ವ್ಯಾಪಾರಮಾಡಲು ಇರುವ ಅವಕಾಶವನ್ನು ಅನ್ವೇಷಿಸಲು ಪ್ರಾರಂಭಿಸಿದರು. ಇಷ್ಟರಲ್ಲಿ ಫ್ರೆಂಚ್ ವ್ಯಾಪಾರಿಗಳು ಸಹಬಂದು ಸೇರಿದರು. ತೊಂದರೆ ಏನೆಂದರೆ ಎಲ್ಲಾ ಕಂಪನಿಗಳು ಒಂದೇ ವಿಧವಾದ ವಸ್ತುಗಳನ್ನು ಕೊಳ್ಳಲು ಆಸಕ್ತಿ ತೋರಿಸಿದರು. ಭಾರತ ದೇಶದಲ್ಲಿ ತಯಾರಾದ ಉತ್ತಮವಾದ ಹತ್ತಿ, ರೇಷ್ಮೆಗಳಿಗೆ ಯೂರೋಪ್‌ನಲ್ಲಿ ಬಹಳ ಬೇಡಿಕೆ ಬಂದಿತು.


ಚಿತ್ರ–15.3 76 ಕಾಲದ ಮಚಲೀಪಟ್ನ ತೈಲ ವರ್ಣ ಚಿತ್ರ

ಕಾಗದ, ಲವಂಗ, ಮೆಣಸು, ಏಲಕ್ಕಿ, ಶುಂಠಿ, ದಾಲ್ಚಿನ್ನಿ, ಚಕ್ಕೆಯಂತಹವುಗಳಿಗೆ ಬಹಳ ಬೇಡಿಕೆ ಇತ್ತು. ಯೂರೋಪ್‌ನ ಕಂಪನಿಗಳಲ್ಲಿ ಪೈಪೋಟಿ ಅನಿವಾರ್ಯವಾಗಿ ವಸ್ತುಗಳ ಬೆಲೆ ಹೆಚ್ಚಾಯಿತು. ಪೋಟಿ ಬೆಳೆದ ಈ ವ್ಯಾಪಾರವನ್ನು ಕಾಪಾಡಿಕೊಳ್ಳಲು ಸೈನ್ಯ ಮತ್ತು ಕೋಟೆಗಳು ಅವಶ್ಯಕವಾದವು. ಕೋಟೆಗಳನ್ನು ಕಟ್ಟಿ ಸ್ಥಾವರಗಳನ್ನು ಏರ್ಪಾಟುಮಾಡಿಕೊಳ್ಳುವ ಪ್ರಯತ್ನಗಳು ಲಾಭದಾಯಕ ವ್ಯಾಪಾರವನ್ನು ಮಾಡಲು ಸ್ಥಾನಿಕ ರಾಜರ ಜೊತೆ ಕಾದಾಟಕ್ಕೆ ಎಡೆಮಾಡಿತು.

ಆಯುಧಗಳು ಧರಿಸಿದ ವ್ಯಾಪಾರಿಗಳು:

ಭಾರತ ದೇಶದ ಜೊತೆ ವ್ಯಾಪಾರಮಾಡಲು ಯೂರೋಪ್ ವ್ಯಾಪಾರಿಗಳು ತಮ್ಮ ಸ್ವಂತ ಕಂಪನಿಗಳನ್ನು ಏರ್ಪಾಟುಮಾಡಿಕೊಂಡವು. ಬ್ರಿಟೀಷ್ ವ್ಯಾಪಾರಿಗಳು ಇಂಗ್ಲೀಷ್ "ಈಸ್ಟ್ ಇಂಡಿಯಾ ಕಂಪನಿ"ಯನ್ನು, ಫ್ರೆಂಚ್ ವ್ಯಾಪಾರಿಗಳು "ಫ್ರೆಂಚ್ ಈಸ್ಟ್ ಇಂಡಿಯಾ" ಕಂಪನಿಯನ್ನು ಸ್ಥಾಪಿಸಿದರು. ಭಾರತ ದೇಶದ ವ್ಯಾಪಾರ ವ್ಯವಹಾರವನ್ನು ಹಸ್ತಗತಮಾಡಿಕೊಳ್ಳಲು ಅನೇಕ ವರ್ಷಗಳು ಒಬ್ಬರಿಗೊಬ್ಬರು ಹೋರಾಟಮಾಡಿಕೊಂಡರು. ಒಬ್ಬರಿಗೊಬ್ಬರು ದೇಶದಿಂದ ಹೊರಹೋಡಿಸಲು ಪ್ರಯ ತ್ನಿಸಿದರು. ಅವರ ಹೋರಾಟಕ್ಕೆ ಬೆಂಬಲವಾಗಿ ಇಂಗ್ಲೆಂಡ್, ಫ್ರಾನ್ಸ್‌ಗಳಿಂದ ಸೈನ್ಯವನ್ನು ಬರಮಾಡಿ ಕೊಂಡರು. ಆಯಾ ದೇಶದ ರಾಜರುಗಳು ಸಹ ತಮ್ಮ ತಮ್ಮ ಕಂಪನಿಗಳಿಗೆ ಬೆಂಬಲ ನೀಡಿ ನಾನಾ ವಿಧವಾಗಿ ಸಹಕರಿಸಿದರು. ಆ ಕಂಪನಿಗಳು ಭಾರತ ದೇಶದಲ್ಲಿ ಭೂಮಿ ಸಂಪಾದಿಸಿ ಸ್ವಂತ ಕೋಟೆಗಳನ್ನು ಕಟ್ಟಿಸಿ, ಒಬ್ಬರ ಮೇಲೆ ಒಬ್ಬರು ಯುದ್ಧಗಳು ಮಾಡಿಕೊಂಡರು.

ವ್ಯಾಪಾರಗಳಿಂದ ಗಳಿಸಿದ ಸಂಪತ್ತು ಬ್ರಿಟೀಷ್ ರವರ ಕೈಗಾರಿಕೆಗಳು ಅಭಿವೃದ್ಧಿ ಪಡಿಸಿಕೊಳ್ಳಲು, ಪ್ರಪಂಚಾದಿಪತ್ಯವನ್ನು ಸ್ಥಾಪಿಸಲು ಸಹಕಾರಿ ಯಾಯಿತು. ಇದೇ ಸಮಯದಲ್ಲಿ ಇಂಗ್ಲಾಂಡ್‌ನ ಜೊತೆಗೆ ಯೂರೋಪ್ ದೇಶಗಳಾದ ಸ್ಪೇನ್, ಪೋರ್ಚುಗಲ್, ಫ್ರಾನ್ಸ್, ಹಾಲೆಂಡ್, ಜರ್ಮನಿ, ಉತ್ತರ–ದಕ್ಷಿಣ ಅಮೇರಿಕಾ ಗಳಲ್ಲದೆ ಆಫ್ರಿಕಾ, ಏಷ್ಯಾ ಖಂಡಗಳಲ್ಲಿ ತಮ್ಮ ತಮ್ಮ ವಸಾಹತು ಸ್ಥಾವರಗಳನ್ನು ಸಂಪಾದಿಸಿದರು. ಈ ವಸಾಹತು ಸ್ಥಾವರಗಳು ಯೂರೋಪ್ ದೇಶಗಳಿಗೆ ಅಧಿಕಾರ ಸಂಪತ್ತನ್ನು ಒದಗಿಸಿತು.

ಈ ವ್ಯಾಪಾರಿಗಳು ಸೈನ್ಯ ನಿರ್ವಹಣೆಗೆ, ಕೋಟೆಗಳ ಕಟ್ಟಿಕೊಳ್ಳಲು, ಯುದ್ಧಗಳು, ಸೈನಿಕ ಶಕ್ತಿ ಮೂಲಕ ತಮ್ಮ

SCERT TELANGANA


ರಾಜ್ಯಗಳಲ್ಲಿ ಆರ್ಥಿಕ ಶಕ್ತಿಯಾಗಿ ಬೆಳೆಯಲು ಅವಕಾಶ ನೀಡುವುದು ಎಷ್ಟು ಅಪಾಯವೋ ಎಂಬುದನ್ನು ಮೋಘಲ್ ಚಕ್ರವರ್ತಿಗಳು ಸ್ಥಳೀಯ ರಾಜರು, ನವಾಬರು ಕ್ರಮೇಣ ತಿಳಿದುಕೊಂಡರು.

ಮೊಘಲ್ ಚಕ್ರವರ್ತಿಗಳು ಶಕ್ತಿವಂತವರಾಗಿ ಇರುವವರೆಗೂ ಯೂರೋಪ್ ಕಂಪನಿಗಳು, ಅವರ ಸೈನಿಕ ಶಕ್ತಿಯನ್ನು ಭಾರತದಲ್ಲಿ ಸ್ಥಾಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಷಾಜಾಹಾನ್, ಔರಂಗಜೇಬನ ಕಾಲದಲ್ಲಿ ಅನೇಕ ಬಾರಿ ಯೂರೋಪ್ ಕಂಪನಿಗಳು ಹೋರಾಡಿ ಸೋತವು. ಔರಂಗಜೇಬು ಮರಣದ ನಂತರ ವಿವಿಧ ಸಾಮಂತ ರಾಜರುಗಳು ಸ್ವತಂತ್ರ ರಾಜರುಗಳಾಗಿ ತಮ್ಮ ಸಂಸ್ಥಾನ ಗಳನ್ನು ಪಾಲಿಸಲು ಪ್ರಾರಂಭಿಸಿದರು. ಆ ವಿಧವಾಗಿ ಬೆಂಗಾಲ್, ಅವಧ್ (ಲಕ್ನೋ), ಹೈದರಾಬಾದ್ ಪ್ರಾಂತ ಗಳು ಮೊಘಲ್ ರಾಜರುಗಳನ್ನು ತಮ್ಮ ಚಕ್ರವರ್ತಿಗಳಾಗಿ ನಾಮಮಾತ್ರ ಗುರ್ತಿಸಿ, ತಾವೇ ಸ್ವತಂತ್ರ ರಾಜರುಗಳಾಗಿ ವ್ಯವಹರಿಸಿದರು.

ಮೊಘಲ್ ಸಾಮ್ರಾಜ್ಯ ಚಿಕ್ಕಚಿಕ್ಕ ರಾಜ್ಯಗಳಾಗಿ ವಿಭಜನೆಗೊಂಡ ತಕ್ಷಣ ಈ ಕಂಪನಿಯವರು ತಮ್ಮ ಅಧಿಕಾರಕ್ಕೆ ಬುನಾದಿಹಾಕಿದರು. ರಾಜರು, ನವಾಬರು ಅವರ ಜೊತೆ ಹೆಚ್ಚಿನ ವ್ಯಾಪಾರಮಾಡಲೆಂದು ಭಾವಿಸಿದರೂ ಆ ಕಂಪನಿಗಳು ಬೆಳಸಿಕೊಂಡ ಸೈನಿಕ ಶಕ್ತಿಯನ್ನು ಸ್ಥಾನಿಕ ರಾಜರುಗಳನ್ನು ನಿಯಂತ್ರಿಸಲು ಪ್ರಯತ್ನಿಸಿದರು.

ಉದಾಹರಣೆಗೆ ಕ್ರಿ.ಶ, 1764 ರಲ್ಲಿ ಆರ್ಕಾಟ್ (ಉತ್ತರ ತಮಿಳುನಾಡು) ನವಾಬನು ಅನ್ವರುದ್ದೀನ್ ಖಾನ್ ಫ್ರೆಂಚ್ ಸೈನ್ಯಕ್ಕೆ ವಿರುದ್ಧವಾಗಿ ತನ್ನ ಸೈನ್ಯವನ್ನು ಕಳುಹಿಸಿದನು. ಆದರೆ ಫ್ರೆಂಚ್‌ನ ಚಿಕ್ಕ ಸೈನ್ಯವು ನವಾಬನ ದೊಡ್ಡ ಸೈನ್ಯವನ್ನು ಸೋಲಿಸಿತು. ಈ ವಿಜಯವು ಯುರೋಪ್ ವರ್ತಕರಿಗೆ ಧೈರ್ಯ ತಂದು ತಮ್ಮ ಸೈನಿಕ ಶಕ್ತಿಯಿಂದ ಭಾರತ ದೇಶದಲ್ಲಿ ತಾವು ಕೈಗೊಂಡದ್ದನ್ನು ಸಾಧಿಸ ಬಲ್ಲೆವೆಂಬ ಧೈರ್ಯ ತಂದಿತು.

ಕ್ರಿ.ಶ. 1700 ಇಸವಿಯಲ್ಲಿ ಭಾರತದ ರಾಜರ ಸೈನ್ಯಕ್ಕಿಂತ ಯುರೋಪ್ ಸೈನ್ಯವು ಹೇಗೆ ಭಿನ್ನವಾಗಿದೆ ? ಯುರೋಪ್ ಸೈನಿಕರು ಒಳ್ಳೆಯ ಶಿಕ್ಷಣ ಪಡೆದು, ಹೆಚ್ಚು ವೇತನವನ್ನು ಕ್ರಮತಪ್ಪದಂತೆ ಪಡೆಯುತ್ತಿದ್ದರು. ಅವರಿಗೆ ಒಳ್ಳೆಯ ಫಿರಂಗಿಗಳು, ತುಪಾಕಿಗಳು ಇವೆ. ಅವರು ಪ್ರತಿ ದಿನ ಡ್ರಿಲ್, ಪೆರೆಡ್ಸ್‌ಗಳು ಮಾಡುತ್ತಿದ್ದರು. ಆ ವಿಧವಾದ ನಿರಂತರ ಶಿಕ್ಷಣದಿಂದ ಯೂರೋಪ್ ಸೈನ್ಯದಲ್ಲಿ ಸೇರಿದ



ಚಿತ್ರ 15.4 ಮೊಘಲ್ ಚಕ್ರವರ್ತಿ ಷಾಆಲಂ ಬೆಂಗಾಲ್ ಪಾಲಕನಾಗಿ ರಾಬರ್ಟ್ ಕ್ಲೈವ್‌ಗೆ ಅಧಿಕಾರ ಒದಗಿಸಿದಂತಹ ದೃಶ್ಯ

ಭಾರತ ಸೈನಿಕರು ಸಹಾ ಯುದ್ದದಲ್ಲಿ ಒಳ್ಳೆಯ ನೈಪುಣ್ಯವನ್ನು ಪ್ರದರ್ಶಿಸುತ್ತಿದ್ದರು.

ಭಾರತ ದೇಶದಲ್ಲಿ ಬೆಳೆಯುತ್ತಿರುವ ಯುರೋಪ್‌ನವರ ಮಧ್ಯಸ್ಥಿಕೆ:

ಕಂಪನಿಯವರು ವ್ಯಾಪಾರದಲ್ಲಿ ಲಾಭವನ್ನು ಬೆಳೆಸಿಕೊಳ್ಳಲು ಸೈನ್ಯವನ್ನು ಪ್ರಯೋಜನಕಾರಿಯಾಗಿ ಬಳಸಿಕೊಂಡರು. ಇಬ್ಬರು ಭಾರತ ರಾಜರುಗಳು ಹೊಡೆದಾಡುತ್ತಿದ್ದರೇ ಒಬ್ಬರ ಪಕ್ಷವಹಿಸಿ ಆ ಹೋರಾಟಕ್ಕೆ ಬೆಂಬಲ ಸೂಚಿಸುತ್ತಿದ್ದರು. ಅವರ ಸೈನ್ಯವನ್ನು ಒಬ್ಬರ ಪಕ್ಷಕ್ಕೆ ಕಳುಹಿಸಿ ಎದುರಾಳಿಯನ್ನು ಸೋಲಿಸುತ್ತಿದ್ದರು. ಇದಕ್ಕೆ ಪ್ರತಿ ಫಲವಾಗಿ ತಮ್ಮ ವ್ಯಾಪಾರಕ್ಕೆಬೇಕಾದ ಅನೇಕ ರಿಯಾಯಿತಿಗಳಾಗಿ ಗೆದ್ದರಾಜನಿಂದ ಅಧಿಕಾರ ಪಡೆಯು ತ್ತಿದ್ದರು. ಭಾರತ ದೇಶದ ರಾಜರು ಸೈನ್ಯದ ಸಹಕಾರ ಪಡೆದಿದ್ದಕ್ಕೆ "ಬಹುಮಾನ"ವಾಗಿ ಕಂಪನಿಯವರಿಗೆ ದೊಡ್ಡ ಮೊತ್ತದಲ್ಲಿ ನಗದುಹಣ ನೀಡುತ್ತಿದ್ದರು. ಈ ನಗದು ಹಣ ಕಂಪನಿಯವರಿಗೆ ತಮ್ಮ ವ್ಯಾಪಾರವನ್ನು ಮತ್ತುಷ್ಟು ವೃದ್ಧಿಗೊಳಿಸಿಕೊಳ್ಳಲು ಉಪಯೋಗವಾಗುತ್ತಿತ್ತು.

ಇದಕ್ಕೆ ಉದಾಹರಣೆ: ಮುಜಫರ್ ಜಂಗ್‌ನು ದಕ್ಕನ್ ನವಾಬನನ್ನಾಗಿ ಮಾಡಿದ್ದಕ್ಕೆ, ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಗವರ್ನರ್ ಆದ "ಡೂಪ್ಲೇ" ಅವರಿಗೆ ಪಾಂಡಿಚ್ಚೇರಿ

SCERT TELANGANA

ಹತ್ತಿರ ಸ್ವಲ್ಪ ಭೂಭಾಗವನ್ನು ಮತ್ತು "ಮಚಲೀಪಟ್ನ"ವನ್ನು ನೀಡಿದನು. ಅಷ್ಟೆ ಅಲ್ಲದೆ ಕಂಪನಿಗೆ 50ಸಾವಿರ, ಫ್ರೆಂಚ್ ಸೈನ್ಯಕ್ಕೆ 50ಸಾವಿರ, ಡೂಪ್ಲೆಯವರಿಗೆ ವರ್ಷಕ್ಕೆ ಲಕ್ಷರೂಪಾಯಿಗಳು, 20 ಲಕ್ಷ ಬೆಲೆಬಾಳುವ ಜಾಗೀರನ್ನು ನೀಡಿದನು.

ಇದರಿಂದ ಕಂಪನಿಯವರು ಸ್ಥಾನಿಕ ರಾಜರಿಂದ ಅವರ ರಾಜ್ಯದಲ್ಲಿನ ಚಿಕ್ಕ ಚಿಕ್ಕ ಭೂಭಾಗಗಳನ್ನು "ಬಹುಮಾನವಾಗಿ" ತೆಗೆದುಕೊಳ್ಳಲು ಪ್ರಾರಂಭಿಸಿದರು. ಅವರು ಆ ಭೂಭಾಗಗಳಲ್ಲಿರುವ ಗ್ರಾಮಗಳು, ಪಟ್ಟಣ ಗಳಿಂದ ಭೂಮಿ ಶಿಸ್ತನ್ನು ವಸೂಲಿ ಮಾಡಲಾರಂಭಿಸಿದರು. ಈ ಹಣವನ್ನು ತಮ್ಮ ವ್ಯಾಪಾರಕ್ಕೆ ಬಳಸಿಕೊಂಡರು. ಮತ್ತು ತಮ್ಮ ಸೈನ್ಯವನ್ನು ಬೆಳೆಸಲು ಮತ್ತು ಪೋಷಣೆ ಮಾಡಲು ಬಳಸಿಕೊಳ್ಳುತ್ತಿದ್ದರು. ಭಾರತ ದೇಶದಲ್ಲಿ ಆಧಿಪತ್ಯಕ್ಕೆ ನಡೆದ ಹೋರಾಟದಲ್ಲಿ ನಿಧಾನವಾಗಿ ಇಂಗ್ಲೀಷ್ ಕಂಪನಿ, ಫ್ರೆಂಚ್ ಕಂಪನಿಯ ಮೇಲೆ ವಿಜಯ ಸಾಧಿಸಿದರು.

ಕಂಪನಿಯ ಅಧಿಕಾರ ದುರ್ವಿನಿಯೋಗ:

ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯವರಿಗೆ "ಬಹುಮಾನಗಳು" ನೀಡುವುದು, ಅವರ ಸೈನ್ಯದ ಖರ್ಚುವೆಚ್ಚಗಳನ್ನು ಭರಿಸುವುದು ಬಹಳ ಕಷ್ಟವೆಂದು ಕಂಪನಿಯವರು ಮಾಡುವ ಇತರೆ ಕೆಲಸಗಳು ಸಹ ತುಂಬಾ ಬೇಸರಗೊಳ್ಳುತ್ತಿದ್ದವು. ಕೆಲವರು ಭಾರತದ ರಾಜರು ತಮ್ಮಿಂದ ಕೊಂಡ ಬಹಳ ವಸ್ತುಗಳ ಮೇಲೆ ಸುಂಕ (Tax) ವಿನಾಯಿತಿ ನೀಡಿದರು. ಇದನ್ನು ಅವಕಾಶವಾಗಿ ತೆಗೆದುಕೊಂಡು ಬ್ರಿಟೀಷರು ದುರ್ವಿನಿ ಯೋಗ ಮಾಡಿದರು. ಉದಾಹರಣೆಗೆ: ಕಂಪನಿ ಉದ್ಯೋಗಸ್ಥರು ತಮ್ಮ ಸ್ವಂತ ವ್ಯಾಪಾರ ಪ್ರಾರಂಭಿಸಿ ಸ್ವಂತ ವಸ್ತುಗಳನ್ನು ಕಂಪನಿ ವಸ್ತುಗಳಾಗಿ ತೋರಿಸಿ ತೆರಿಗೆಯಿಂದ ತಪ್ಪಿಸಿ ಕೊಳ್ಳುತ್ತಿದ್ದರು.



ಚಿತ್ರ. 15.5 ಸ್ಥಾನಿಕ ದೋಣಿಗಳು ಸರಕುಗಳನ್ನು ಹಡಗುಗಳಿಂದ ಮದ್ರಾಸು ತೀರಕ್ಕೆ ಸೇರಿಸುವ 1867ರ

ಈ ವಿಧವಾಗಿ ಕಂಪನಿ ಸಂಪತ್ತನ್ನು ಸಂಗ್ರಹಿಸುವು ದಲ್ಲದೇ ಅದರಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಸಹ ಹಣವನ್ನು ಕ್ರೂಢೀಕರಿಸಿ ಕೊಂಡು ತಮ್ಮ ದೇಶಕ್ಕೆ ಶ್ರೀಮಂತರಾಗಿ ಹಿಂತಿರು ಗಿದರು. ಕಂಪನಿಯ ವ್ಯಾಪಾರಕ್ಕೆ ಭಾರತೀಯ ವ್ಯಾಪಾರಿಗಳು, ಶೇಟ್‌ಗಳು ಸಹಕಾರ ನೀಡಿದರು. ಇವರು ಸಹಾ ತಮ್ಮ ವಸ್ತು ಗಳನ್ನು ಕಂಪನಿವಸ್ತುಗಳಿಗಾಗಿ ನೋಡಿಸಿ ತೆರಿಗೆ ವಿನಾಯಿತಿ ಪಡೆದರು.

ಈ ವಿಧವಾಗಿ ಕಂಪನಿಗಳು ಸ್ಥಾನಿಕ ರಾಜ್ಯಗಳ ಆದಾಯವನ್ನು ಮೋಸಪೂರಿತವಾಗಿ ಲೂಟೀ ಮಾಡುವುದಲ್ಲದೇ ದೋಚಿಕೊಂಡರು. ಕಂಪನಿಯವರು ತನ್ನ ಸೈನಿಕ ಶಕ್ತಿಯ ಬಗ್ಗೆ ಹೆಚ್ಚು ಹೆಮ್ಮೆ ಪಡುತ್ತಿದ್ದರು. ಕಂಪನಿಯವರ ಕೈಕಸಬುದಾರರಿಗೆ ತಮ್ಮ ಸರಕುಗಳನ್ನು ಹೆಚ್ಚಿನ ಬೆಲೆಗೆ ಮಾರುವಂತೆ ಒತ್ತಾಯ ಮಾಡಿದರು. ತಮ್ಮ ಆಧೀನದಲ್ಲಿದ್ದ ರೈತರಿಂದ ದಾರುಣವಾಗಿ ಸುಂಕವಸೂಲಿ ಮಾಡುತ್ತಿದ್ದರು. ಈ ಒತ್ತಡಕ್ಕೆ ಸ್ಥಾನಿಕರು ವ್ಯತಿರೇಕಿಸದರೇ ಬ್ರಿಟೀಷರು ಹೋರಾಟಕ್ಕೆ ಇಳಿಯುತ್ತಿದ್ದರು. ಅವಶ್ಯಕವಾದರೆ ಆ ರಾಜರುಗಳನ್ನು ತೊಲಗಿಸಿ ಆಸ್ಥಾನದಲ್ಲಿ ಇವರಿಗೆ ಸಹಕರಿಸುವ ರಾಜರುಗಳಿಗೆ ಪಟ್ಟ ಕಟ್ಟುತ್ತಿದ್ದರು.

- ವ್ಯಾಪಾರ ಮಾಡುವವರಿಗೆ ಸರಕುಗಳನ್ನು ಕೊಳ್ಳುವುದಕ್ಕೆ ಹಣ ಅವಶ್ಯಕ. ಭಾರತದಲ್ಲಿ ಬ್ರಿಟೀಷರ ವ್ಯಾಪಾರಕ್ಕೆ ಹಣ ಲಭಿಸಿದ ಬಗೆ ಹೇಗೆ ಮೂರು ಮಾರ್ಗಗಳನ್ನು ಬರೆಯಿರಿ.
- ಆಂಗ್ಲೇಯರಿಂದ ಭಾರತದ ರಾಜರು ಗಳು ಯಾವ ಪ್ರಯೋಜನ ಪಡೆದರು?

ಆಂಗ್ಲೇಯರ ಆಳ್ವಿಕೆ–ಜಾರಿ:

ಭಾರತ ದೇಶವನ್ನು ಪೂರ್ಣವಾಗಿ, ಸ್ವೇಚ್ಛಾಯುತವಾಗಿ ತಮ್ಮ ವ್ಯಾಪಾರಕ್ಕೆ ಬಳಸಿ ಕೊಳ್ಳಬೇಕಾದರೆ ತಾವೇ ಆಳ್ವಿಕೆದಾರ ರಾಗಬೇಕೆಂಬ ಭಾವನೆ ಆಂಗ್ಲೇಯರಲ್ಲಿ ಕ್ರಮವಾಗಿ ಪ್ರಾರಂಭವಾಯಿತು. ಆದ್ದರಿಂದಲೇ ಅವರು ರಾಜರುಗಳನ್ನು, ನವಾಬರನ್ನು ತೊಲಗಿಸಿ ತಾವೇ ಆಳ್ವಿಕೆ ನಡೆಸಲು ಪ್ರಾರಂಭಿಸಿದರು.

ಕ್ರಿ.ಶ. 1757 ಇಸವಿಯಲ್ಲಿ ಪ್ಲಾಸೀ ಯುದ್ಧದಲ್ಲಿ ಆಂಗ್ಲೇಯರು ಬೆಂಗಾಲ್ ನವಾಬನಾದ ಸಿರಾಜುದ್ದೌಲಾನು ಓಡಿಸಿ, ಬೆಂಗಾಲ್‌ನಲ್ಲಿ ತಮ್ಮ ಪರಿಪಾಲನೆಯನ್ನು

© CERT TELANGANA

ಪ್ರಾರಂಭಿಸಿದರು. ಭಾರತದೇಶ ಚರಿತ್ರೆಯಲ್ಲಿ ಪ್ಲಾಸೀ ಯುದ್ಧ ಒಂದು ಪ್ರಮುಖ ಘಟ್ಟ. ಆ ನಂತರವೇ ಆಂಗ್ಲೇಯರು ಅನೇಕ ಚಿಕ್ಕ, ದೊಡ್ಡ ರಾಜ್ಯಗಳನ್ನು ಆಕ್ರಮಿಸಲು ಪ್ರಾರಂಭಿಸಿದರು. ಕ್ರಿ.ಶ. 1765–68 ಇಸವಿಯ ಮಧ್ಯಕಾಲದಲ್ಲಿ ಆಂಧ್ರಪ್ರದೇಶದಲ್ಲಿನ ಕರಾವಳಿ ಜಿಲ್ಲೆಗಳಾದ (ಕೃಷ್ಣಾ, ಪೂರ್ವ, ಪಶ್ಚಿಮ ಗೋದಾವರಿ ಜಿಲ್ಲೆಗಳು, ವಿಶಾಖಪಟ್ಟಂ, ವಿಜಯನಗರಂ, ಶ್ರೀಕಾಕುಳ, ಪ್ರಶಾಶಂ, ಗುಂಟೂರು) ನಮಗೆ ಒಪ್ಪಿಸಬೇಕೆಂದು ಹೈದರಾಬಾದಿನ ನಿಜಾಮನನ್ನು "ಈಸ್ಟ್ ಇಂಡಿಯಾ ಕಂಪನಿ"ಯವರು ಒತ್ತಡ ಮಾಡಿ ಹಸ್ತಾಂಗತ ಮಾಡಿಕೊಂಡರು. ಈ ಪ್ರಾಂತಗಳನ್ನು ಕಂಪನಿಯವರು ಮದ್ರಾಸು ಪ್ರಾಂತದ "ಉತ್ತರ ಸರ್ಕಾರಗಳಾ"ಗಿ ಕರೆದರು. ಇದಕ್ಕೆ ಪ್ರತಿಫಲವಾಗಿ ನಿಜಮಾನಿಗೆ ಸಹಾಯಕವಾಗಿ ಆಂಗ್ಲೇಯರ ಸೈನ್ಯವನ್ನು ಇಡುತ್ತೇವೆಂದು ಒಪ್ಪಿಕೊಂಡರು. ಆದರೆ ವಾಸ್ತವವಾಗಿ ಈ ಸೈನ್ಯವು ನಿಜಾಮನಿಗೆ ಸಹಾಯ ಮಾಡುವುದಕ್ಕಿಂತ ಆತನನ್ನು ಹತೋಟಿಯಲ್ಲಿ ಇಡುವುದಕ್ಕೆ ಹೆಚ್ಚಾಗಿ ಉಪಯೋಗವಾಯಿತು.

ಬ್ರಿಟೀಷರ ಕುತಂತ್ರ, ಮೋಸಗಳನ್ನು ಗಮನಿಸಿದ ಬಹಳ ಜನ ರಾಜರುಗಳು, ನವಾಬರು ಅವರ ವಿರುದ್ಧವಾಗಿ ಹೋರಾಡಿದರು. ಹಾಗೆ ಹೋರಾಡಿದವರಲ್ಲಿ ಮೈಸೂರಿಗೆ ಸೇರಿದ ಹೈದರಾಲಿ, ಟಿಪ್ಪುಸುಲ್ತಾನ್, ಮರಾಠ ಸರದಾರನಾದ ಮಹದೀಜೀ ಸಿಂಧಿಯಾ, ನಾನಾ ಫಡ್ನವೀಸ್ ಮುಂತಾದವರಿದ್ದಾರೆ. ಆದರೆ ಅವು ಚಿಕ್ಕ ರಾಜ್ಯಗಳಾದುದರಿಂದ ಒಂದರ ನಂತರ ಒಂದರಂತೆ ಆಂಗ್ಲೇಯರ ವಶವಾದವು.

ಈ ಹೋರಾಟದಲ್ಲಿ ಬ್ರಿಟೀಷರ ವಿಜಯಕ್ಕೆ ಸಹಕರಿಸಿದ ಗವರ್ನರ್ ಜನರಲ್‌ಗಳಾದ ರಾಬರ್ಟ್‌ಕ್ಲೈವ್, ವಾರನ್ ಹೇಸ್ಟಿಂಗ್ಸ್, ವೆಲ್ಲೆಸ್ಲಿ ಮೊದಲಾದವರು ಪ್ರಮುಖರು. ಕ್ರಮೇಣ ಭಾರತ ದೇಶದ ಭೂಭಾಗದಲ್ಲಿ ಬಹಳ ಪ್ರಾಂತಗಳು ಆಂಗ್ಲೇಯರ ಪ್ರತ್ಯಕ್ಷ ಪರಿಪಾಲನೆ ಕೆಳಗೆ ಬರಲಾರಂಭಿಸಿದವು. ಬಹಳ ಪ್ರಾಂತದಲ್ಲಿ ರಾಜರು, ನವಾಬರು ಪಾಲಿಸಿದರೂ ಅವರು ಬ್ರಿಟೀಷರ ಕೈಕೆಳಗೆ ಕೆಲಸ ನಿರ್ವಹಿಸಬೇಕಾಯಿತು. "ರೆಸಿಡೆಂಟ್" ಎಂದು ಕರೆಯುವ ಆಂಗ್ಲೇಯ ಅಧಿಕಾರಿಯನ್ನು ರಾಜರ, ನವಾಬರ ರಾಜ್ಯದಲ್ಲಿ ನಿಯಮಿಸಿ ಬ್ರಿಟೀಷ್ ಸರ್ಕಾರವು ಅವರ ಮೇಲೆ ತಪಾಸಣೆಗೆ ಇಡಲಾಯಿತು.

- ಭಾರತದೇಶದ ಜೊತೆ ವ್ಯಾಪಾರ ಮಾಡುವ ಈಸ್ಟ್ ಇಂಡಿಯಾ ಕಂಪನಿಯವರು ನಮ್ಮ ದೇಶವನ್ನು ಏಕೆ ಪಾಲಿಸಬೇಕೆಂದು ಭಾವಿಸಿದರು?

ಆಂಗ್ಲೇಯರ ಪಾಲನೆಯ ಬಗ್ಗೆ ಅಸಂತೃಪ್ತಿ:


ಆಂಗ್ಲೇಯರು ತಮ್ಮ ಪಾಲನೆಯನ್ನು ಸ್ಥಿರವಾಗಿಡಲು ಅನೇಕ ರಾಜರುಗಳು, ನವಾಬರೊಡನೆ ಹೋರಾಡಿದರು. ಮುಂಬರುವ ಪಾಠಗಳಲ್ಲಿ ಅವರ ಪರಿಪಾಲನೆ ಬಗ್ಗೆ, ವಿಧಾನಗಳ ಬಗ್ಗೆ ಮತ್ತಷ್ಟು ತಿಳಿಯೋಣ. ಅವರು ಭಾರತ ಪ್ರಜೆಗಳಿಂದ ನಿರಂತರವಾಗಿ ವಿರುದ್ಧವಾದ ಪರಿಸ್ಥಿತಿಯನ್ನು ಎದುರಿಸಿದರು. ಬ್ರಿಟೀಷರಿಗೆ ಅನುಕೂಲಕರ ವಾಗಿರುವ ರಾಜ ಕುಟುಂಬಗಳನ್ನು ಅಧಿಕಾರದಲ್ಲಿಡುವುದು, ಇಲ್ಲವಾದರೇ ತೊಲಗಿಸುವಂತಹ ಕ್ರಮಗಳಿಂದ ರಾಜ ಕುಟುಂಬಗಳು ಆಂಗ್ಲೇಯರನ್ನು ವಿರೋಧಿಸುತ್ತಿದ್ದರು.


ಅಧಿಕ ತೆರಿಗೆ ಹಾಕುವುದು ಅಮಾನುಷವಾಗಿ ತೆರಿಗೆ ವಸೂಲಿಮಾಡುವಂತಹ ಕ್ರಮಗಳಿಂದ, ನಿರಂತರ ಭಯದ ವಾತಾವರಣ ಇದ್ದು, ಸುಂಕ ಕಟ್ಟದೇಹೋದರೆ ಭೂಮಿಯನ್ನು ಕಳೆದುಕೊಳ್ಳುವ ಭಯ ಭ್ರಾಂತರಾದ ರೈತರು ಭೂ ಯಜಮಾನರು ಸಹ ಇವರ ವಿರುದ್ಧ ದಂಗೆ ಮಾಡಿದರು. ಆಂಗ್ಲೇಯರು ಜಾರಿಗೊಳಿಸುತಿದ್ದ ಹೊಸನಿಯಮಗಳು, ಕಾಯಿದೆಗಳಿಂದ ಕಾಡಿನಮೇಲೆ ತಮ್ಮ ಹಕ್ಕನ್ನು ಕಳೆದುಕೊಂಡ ಗಿರಿಜನ ಜಾತಿಯವರು ದಂಗೆ ಎದ್ದರು. ಮುಂಬರುವ ಪಾಠದಲ್ಲಿ ನೀವು ಮತ್ತಷ್ಟು ತಿಳಿಯುವಿರಿ.


ಬಹಳ ಜನ ಹಿಂದುಗಳು, ಮುಸ್ಲಿಮರು ತಮ್ಮ ಕುಲ ಮತವನ್ನು ನಾಶಪಡಿಸಿ, ಆಂಗ್ಲೇಯರು ತಮ್ಮನ್ನು ಕ್ರೈಸ್ತವರನ್ನಾಗಿ ಬದಲಾವಣೆ ಮಾಡುವರೆಂದು ಭಯಪಟ್ಟರು. 1857 ರಲ್ಲಿ ಕೆಲವು ತಿಂಗಳುಗಳ ಕಾಲ ನಡೆದ ಹೋರಾಟದಲ್ಲಿ ಆಂಗ್ಲೇಯರು ಒಟ್ಟು ಉತ್ತರ ಭಾರತದಲ್ಲಿ ತಮ್ಮ ಆಧಿಪತ್ಯವನ್ನು ಕಳೆದುಕೊಂಡರು. ಈ ದಂಗೆಯನ್ನು ಭಾರತ ಸಿಪಾಯಿಗಳೇ ಪ್ರಾರಂಭಿಸಿದರು. ನಂತರ ರಾಜ ಕುಟುಂಬಗಳು ಸಹಾ ಇವರ ಜೊತೆ ಹೋರಾಟದಲ್ಲಿ ಸೇರಿದರು. ರೈತರು, ಗಿರಿಜನರು, ಭೂಯಜಮಾನರು, ಕರಕುಶಲ ವೃತ್ತಿಯವರು ಸಹಾ ಈ ದಂಗೆಯಲ್ಲಿ ಬೆರೆತು ಹೋರಾಟಕ್ಕೆ ಇಳಿದರು.

ಈ ದಂಗೆಯಲ್ಲಿ ಪಾಲ್ಗೊಂಡ ರಾಜಕುಟುಂಬೀಕರಲ್ಲಿ ಪೇಶ್ವಾದತ್ತ ಪುತ್ರನಾದ ನಾನಾಸಾಹೇಬ್, ಆತನ ಸೈನ್ಯಾಧಿಪತಿ ತಾಂತಿಯಾ ಟೋಪಿ ಅವಧೆಯ ರಾಣಿ ಮತ್ತು ಝಾನ್ಸಿಗೆ ಸೇರಿ ಝಾನ್ಸಿಲಕ್ಷ್ಮಿಬಾಯಿ ಇದ್ದಾರೆ. ಶತ್ರುಗಳನ್ನು ಹಿಂದೂ–ಮುಸ್ಲಿಮರು ಸೇರಿ ಎದುರಿಸಿದರು.

SCERT TELANGANA







ಭಾರತದೇಶದಲ್ಲಿ ಬ್ರಿಟೀಷರ ಆಡಳಿತದ ವ್ಯಾಪ್ತಿ.

- ಮೇಲಿನ ನಕ್ಷೆಗಳನ್ನು ಪರಿಶೀಲಿಸಿ ಭಾರತದ ರಾಜಕೀಯ ನಕ್ಷೆಗೆ ಹೋಲಿಸಿ. ಪ್ರತಿ ನಕ್ಷೆಯಲ್ಲಿ ಬ್ರಿಟೀಷ್ ಪಾಲನೆಯಲ್ಲಿ ಇಲ್ಲದ ಪ್ರಾಂತಗಳನ್ನು ಗುರುತಿಸಿ.
- 1857 ರ ವೇಳೆಗೆ ಆಂಗ್ಲೇಯರ ಪರಿಪಾಲನೆ ಎಲ್ಲಿಯವರೆಗೆ ವಿಸ್ತರಣೆಗೊಂಡಿತ್ತು? ಆ ಸಮಯಕ್ಕೆ ಇನ್ನೂ ಭಾರತೀಯ ರಾಜರುಗಳ ಆಧೀನದಲ್ಲಿದ್ದ ರಾಜ್ಯಗಳ ಪಟ್ಟಿಯನ್ನು ತಯಾರಿಸಿ ನಕ್ಷೆಯನ್ನು ಪರಿಶೀಲಿಸಿರಿ.

SCERT TELANGANA

1857 ಸಿಪಾಯಿ ದಂಗೆ:

ಸ್ಥಳ: ಮೀರತ್ ಮಿಲಿಟರಿ ಕಂಟೋನ್‌ಮೆಂಟ್, ಅದು ಬ್ರಿಟೀಷ್ ಸೈನಿಕ ಸ್ಥಾವರ.

ದಿನಾಂಕ: 10.05.1857 ಭಾನುವಾರ

ಭಾರತದ ಸಿಪಾಯಿಗಳು ಬ್ರಿಟೀಷ್ ಅಧಿಕಾರಿಗಳ ಮೇಲೆ ಗುಂಡಿನಮಳೆ ಸುರಿಸುತ್ತಿದ್ದಾಗ ಆಗತಾನೆ ಸೂರ್ಯಾಸ್ತಮಯವಾಗುತ್ತಿತ್ತು. ಆಂಗ್ಲೇಯರು ಭಾರತದೇಶದ ರಾಜರನ್ನು ಓಡಿಸಿ, ಅವರ ಸಾಮ್ರಾಜ್ಯಗಳನ್ನು ಜಯಿಸಲು ಯಾವ ಸೈನಿಕರಿಗಾದರೆ ಸಹಾಯ ಮಾಡಿದರೋ, ಅವರೇ ಈ ದಂಗೆ ಎಬ್ಬಿಸಿದರು. ಅವರು ಆಂಗ್ಲೇಯರ ವರ್ತನೆಯಿಂದ ಬೇಸರಗೊಂಡರು. ಅವರ ವೇತನ ಸಕಾಲದಲ್ಲಿ ಪಡೆಯುವಂತಿರಲಿಲ್ಲ. ಅವರಿಗೆ ಬ್ರಿಟೀಷ್ ಸೈನಿಕರಂತೆ ಸಮಾನ ಗೌರವ ಸಿಗುವಂತಿರಲಿಲ್ಲ. ಇದರ ಪರಾಕಾಷ್ಟತೆ ಕೊನೆಗೆ ಸಿಪಾಯಿಗಳಿಗೆ ನೀಡಿದ ಹೊಸ ಬಂದೂಕಿನಲ್ಲಿ ಬಳಸುವ ಮದ್ದುಗುಂಡಿನಲ್ಲಿ ಆಕಳು, ಹಂದಿಯ ಕೊಬ್ಬನ್ನು ಲೇಪನ ಮಾಡಿದ ಬಂದೂಕನ್ನು ತಮ್ಮ ಬಾಯಿಯಿಂದ ಕಚ್ಚಿ ಅದನ್ನು ಬಳಸುವು ದೆಂದರೇ ತಮ್ಮ ಧರ್ಮಕ್ಕೆ ದಕ್ಕೆ ಉಂಟಾಗುವು ದೆಂದು ದಂಗೆಯಲ್ಲಿ ಪಾಲ್ಗೊಂಡ ರಾಜ ಕುಟುಂಬಗಳಲ್ಲಿ ಪೇಶ್ವೆ ದತ್ತ ಪುತ್ರನಾದ ನಾನಾ ಸಾಹೇಬ್ ಅತನ ಸೈನ್ಯಾಧಿಪತಿ ತಾತ್ಯಾ ತೋಪೆ, ಅವದ್ ಮಹಾರಾಣಿ ಮತ್ತು ಝಾನ್ಸಿ ಲಕ್ಷ್ಮಿ ಬಾಯಿ ಇದ್ದರು. ಜಂಟಿ ಶತ್ರುವು ಬ್ರಿಟಿಷರನ್ನು ಹಿಂದೂ ಮುಸ್ಲಿಂರು ಎದುರಿಸಿದರು.

ದಂಗೆಯ ವ್ಯಾಪ್ತಿ (The Revolt Spreads):

ದಂಗೆಯ ವಿಷಯ ಕಿವಿಗೆ ಬಿದ್ದ ತಕ್ಷಣ ಆಂಗ್ಲೇಯರ ವಿರುದ್ಧವಾಗಿ ದೇಶದಲ್ಲಿನ ಅನೇಕ ಪ್ರಾಂತಗಳಲ್ಲಿ ದಂಗೆಕೋರರು ಲಗ್ಗೆ ಹಾಕಿದರು. ಆಲಿಘರ್, ಮೈಯಿನ್ ಪುರಿ, ಬುಲಂದರ್ ಷಹರ್, ಅಟ್ಟಕ್, ಮಧುರ ಕಂಟೋನ್‌ಮೆಂಟ್‌ನಲ್ಲಿರುವ ಸಿಪಾಯಿಗಳು ದಂಗೆ ಎದ್ದರು. ಆಂಗ್ಲೇಯರು ಭಯಂಕರ ನಡುಗಿದರು. ಅವರು ಇವಾಗ ತುಂಬಾ ಕಷ್ಟದ ಪರಿಸ್ಥಿತಿ ಎದುರುಸಿತ್ತಿದ್ದರು.


ಆಗ ಕೇವಲ 45 ಸಾವಿರ ಮಂದಿ ಬ್ರಿಟೀಷ್ ಅಧಿಕಾರಿಗಳು, ಸೈನ್ಯ ಮಾತ್ರ ಭಾರತದಲ್ಲಿದ್ದರು. ಇವರಿಗೆ ವಿರುದ್ಧವಾಗಿ 2 ಲಕ್ಷದ 32 ಸಾವಿರ ಜನ ಭಾರತೀಯ ಸೈನಿಕರು ಇಂಗ್ಲೀಷರ ಸೈನ್ಯದಲ್ಲಿ ಇದ್ದರು! ಈ ಸಿಪಾಯಿ ಗಳೆಲ್ಲರೂ ದಂಗೆ ಎದ್ದರು. ಆ ಪಟ್ಟಣದಲ್ಲಿನ ಆಂಗ್ಲೇಯರ ಆಸ್ತಿಗಳನ್ನು, ಪ್ರಾಣವನ್ನು ಯಾರು ಕಾಪಾಡುವರು? ಆಂಗ್ಲೇಯರ ಸೈನ್ಯದಲ್ಲಿನ ಭಾರತೀಯರು ಈಗ ನಂಬುತ್ತಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಬಹಳ ಜನ ಬ್ರಿಟೀಷ್ ಸೈನಿಕರು ತಮ್ಮ ಕುಟುಂಬಗಳನ್ನು ಕಾಪಾಡಿಕೊಳ್ಳಲು ಹಿಂದಕ್ಕೆ ಸರಿದರು. ಆದ್ದರಿಂದ ದಂಗೆಕೋರರನ್ನು ಬಗ್ಗುಬಡಿಯಲು ಸಾಧ್ಯವಾಗಲಿಲ್ಲ. ಇದು ಒಂದು ಕಡೆಯಿಂದ ಮತ್ತೊಂದು ಕಡೆಗೆ ವ್ಯಾಪಿಸಿತು.

ಬ್ರಿಟೀಷರ ಕೈಯಲ್ಲಿ ರಾಜ್ಯಗಳನ್ನು ಕಳೆದುಕೊಂಡ ರಾಜ ಕುಟುಂಬೀಕರು ಬಹಳ ಜನ ಸೈನ್ಯದಲ್ಲಿ (ದಂಗೆಯಲ್ಲಿ) ಸೇರಿದರು. ಅಂತಹವರಲ್ಲಿ ಅವಧ್ ಮಾಜಿ ನವಾಬು, ಮರಾಠೀ ಪೀಷ್ವಾನಾನಾ ಸಾಹೇಬ್ ಇದ್ದಾರೆ. ದಂಗೆ ಎದ್ದ ಸೈನಿಕರು, ದೇಶದ ವಿವಿಧ ಪ್ರಾಂತದಲ್ಲಿರುವ ರಾಜರು ಡಿಲ್ಲೀ ಕಡೆಗೆ ಸಾಗಿದರು. ಆಂಗ್ಲೇಯರನ್ನು ಹೊರ ಓಡಿಸಿ, ಮೊಘಲರ ಪಾಲನೆಯನ್ನು ಮತ್ತೇ ಸ್ಥಾಪಿಸಬಲ್ಲೆವೆಂಬ ಆಸೆ ಅವರಲ್ಲಿ ಚಿಗುರಿತು.

◆ ದಂಗೆ ಎದ್ದ ಭಾರತೀಯರೆಲ್ಲರನ್ನೂ ಮೊಘಲ ಸಾಮ್ರಾಜ್ಯ ಭಾವನೆ ಏಕೆ ಒಂದುಗೂಡಿಸಿತು ? ಚರ್ಚಿಸಿರಿ.

ಚಿತ್ರ 15.6

1) ಮದ್ದುಗುಂಡನ್ನು ಬಿಚ್ಚಲು ಪೇಪರ್‌ಸೀಲ್‌ನ್ನು ಬಾಯಿಯಿಂದ ಕಚ್ಚುತ್ತಿರುವ ಸಿಪಾಯಿ. 2) ರೈಫಿಲ್‌ಗಳಲ್ಲಿ ಮದ್ದನ್ನು ತುಂಬುತ್ತಿರುವ ಸಿಪಾಯಿ.



3) ಕಾಗದದಲ್ಲಿ ಸುತ್ತಿದ ಮದ್ದುಗುಂಡನ್ನು ತುಪಾಕಿಯಲ್ಲಿ ಜೋಡಿಸುತ್ತಿರುವ ಸಿಪಾಯಿ.

SCERT TELANGANA

ಸ್ಥಳ: ಮೀರತ್ ಪಟ್ಟಣ
ದಿನಾಂಕ:
ಭಾನುವಾರ ರಾತ್ರಿ
ಸೋಮವಾರ 10,
11 ಮೇ–1857.




ಸಿಪಾಯಿಗಳ ದಂಗೆಯ ವಾರ್ತೆ ಮೀರತ್ ಪಟ್ಟಣದಲ್ಲಿ ತಕ್ಷಣಹಬ್ಬಿತು. ಪಟ್ಟಣವೆಲ್ಲಾ ಆಗ್ರಹ ಆವೇಶಗಳಿಂದ ತೂಗಾಡುತ್ತಿತ್ತು. ಪ್ರಜಾವಾಹಿನಿ ರಸ್ತೆಗಳ ಮೇಲೆ ಪ್ರಯಾಣಿಸಿ ಆಂಗ್ಲೇಯರ ಬಂಗಲೆಗಳ ಮೇಲೆ ದಾಳಿಮಾಡಿದರು. ಆ ಜನ ಸಮೂಹದ ಜೊತೆಗೆ ಪೋಲಿಸ್‌ನವರು ಸಹಾ ಜತೆ ಸೇರಿದರು. ಅಷ್ಟೊತ್ತಿಗೆ ಆಗಲೇ ಆಂಗ್ಲೇಯರ ಬಂಗ್ಲಾಗಳಿಗೆ ಬೆಂಕಿ ಇಟ್ಟಿದ್ದರು. ಬಹಳ ಜನ ಆಂಗ್ಲೇಯರನ್ನು ಸಾಯಿಸಿದ್ದರು.

ಚಿತ್ರ 15.7 1857 ರ ಮೀರತ್‌ನ ಸಿಪಾಯಿ ದಂಗೆಯ ದೃಶ್ಯ.

ಸ್ಥಳ: ಢಿಲ್ಲೀ, ಕೆಂಪುಕೋಟೆ
ದಿನಾಂಕ: ಸೋಮವಾರ 11.05.1857

ಒಂದು ದಿನದಲ್ಲೇ ಮೀರತ್ ಸಿಪಾಯಿಗಳು ಯಮುನಾ ನದಿಯನ್ನು ದಾಟಿ ದೆಹಲಿ ಸೇರಿದರು. ಅವರು ಮೊಘಲ ಚಕ್ರವರ್ತಿ ಬಹದೂರ್ ಷಾ ಜಾಫರ್‌ನನ್ನು ನಿರ್ಭಂಧಿಸಿದ ಕೆಂಪುಕೋಟೆಗೆ ಪ್ರವೇಶಿಸಿದರು. ಬ್ರಿಟೀಷ್ ಸಾರ್ವಭೌಮಾಧಿ ಕಾರನ್ನು ದಿಕ್ಕರಿಸುವಂತೆ ತಮ್ಮ ಚಕ್ರವರ್ತಿ ಬಹದೂರ್ ಷಾ ಬೇಡಿ ತಮ್ಮ ಚಕ್ರವರ್ತಿಯಾಗಿ ಪ್ರಕಟಿಸಿದರು. "ಆಂಗ್ಲೇಯರನ್ನು ಹೊರ ಓಡಿಸಿರಿ. ಮೊಘಲ ಪರಿಪಾಲನೆಯನ್ನು ಮತ್ತೇ ಬರಲಿ" ಎಂದು ಅವರ ವಿರುದ್ಧ ಘೋಷಣೆ ಮಾಡಿದರು.



ಚಿತ್ರ 15.8 ಬಲ್ಲಿಕಟ್ಟುವಿನ ಮೇಲೆ ಯಮುನಾ ನದಿಯನ್ನು ದಾಟುತ್ತಿರುವ ಸಿಪಾಯಿಗಳು 1857ರ ಡಿಲ್ಲೀ ದೃಶ್ಯ.

ದಂಗೆಯ ವ್ಯಾಪ್ತಿ

ಈ ಕರೆಯನ್ನು ಓಗೊಟ್ಟು ಆಂಗ್ಲೇಯರಿಗೆ ವ್ಯತಿರೇಕವಾಗಿ ದೇಶದಲ್ಲಿ ಅನೇಕ ಪ್ರಾಂತ್ಯಗಳಲ್ಲಿ ದಂಗೆಗಳು ಪುಟಿದೆದ್ದಿವೆ. ಅಲೀಘರ್, ಮೀನಪುರಿ, ಬುಲನ್ ಶಹರ್, ಅಟ್ಟಕ್, ಮಧುರ ಕಂಟೋನಮೆಂಟನಲ್ಲಿ ಸಿಪಾಯಿಗಳು ದಂಗೆ ಎದ್ದರು. ಆಂಗ್ಲೇಯರು ಗಜಗಜ ನಡುಗಿದರು. ಅವರೀಗ ಕ್ಲಿಷ್ಟವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆಗ ಕೇವಲ 45000 ಬ್ರಿಟಿಷ್ ಅಧಿಕಾರಿಗಳ ಸೈನ್ಯ ಮಾತ್ರವೇ ಭಾರತ ದೇಶದಲ್ಲಿದ್ದರು. ಇವರಿಗೆ ವ್ಯತಿರೇಕವಾಗಿ ಎರಡು ಲಕ್ಷ ಮುವತ್ತೆರಡು ಸಾವಿರ ಜನ ಭಾರತೀಯ ಸೈನಿಕರು ಇಂಗ್ಲೀಷರ ಸೈನ್ಯದಲ್ಲಿದ್ದರು. ಈ ಸಿಪಾಯಿಗಳೆಲ್ಲರೂ ದಂಗೆ ಎದ್ದರು. ಇನ್ನು ಆ ಪಟ್ಟಣಗಳಲ್ಲಿನ ಆಂಗ್ಲೇಯರು ಆಸ್ತಿಗಳನ್ನು, ಪ್ರಾಣಗಳನ್ನು ಯಾರು ಕಾಪಡಬಲ್ಲರು ? ಆಂಗ್ಲೇಯರ ಸೈನ್ಯದಲ್ಲಿನ ಭಾರತೀಯರು ಈ ಗ ನಂಬ ಬಹುದಾದವರು ಅಲ್ಲ. ಈ ಪರಿಸ್ಥಿಗಳಲ್ಲಿ ಬಹಳ ಜನ ಬ್ರಟೀಷ್ ಸೈನಿಕರು ತಮ್ಮ ಕುಟುಂಬಗಳನ್ನು ಕಾಪಾಡಿಕೊಳ್ಳುವುದಕ್ಕೆ ಹಿಂಜರಿದರು. ಇದರಿಂದ ದಂಗೆಯನ್ನು ತಕ್ಷಣವೇ ದಮನಗೊಳಿಸಲಾಗಿಲ್ಲ. ಆದು ಒಂದು ಸ್ಥಳದಿಂದ ಮತ್ತೊಂದು ಸ್ಥಳದ ವರೆಗೆ ವ್ಯಾಪಿಸಲು ತೊಡಗಿತು. ಬ್ರಿಟೀಷರು ಕೈಯಲ್ಲಿ ರಾಜ್ಯಗಳು ಕಳೆದುಕೊಂಡ ರಾಜ ಕುಟುಂಬಗಳು ಬಹಳ ಮಟ್ಟಿಗೆ ದಂಗೆಯಲ್ಲಿ ಸೇರಿದವು. ಅವರಲ್ಲಿ ಆವದ್ ಮಾಜೀನವಾಬು, ಮರಾಠಿ ಪೇಶ್ವನವಾಬು ಮತ್ತು ನಾನಾಸಾಹೆಬ್ ಇದ್ದರು. ದಂಗೆ ಮಾಡಿದ ಸೈನ್ಯಗಳು, ದೇಶದ ವಿವಿಧ ಪ್ರಾಂತ್ಯಗಳಲ್ಲಿ ಇದ್ದ ಪರಿಪಾಲಕರು ಡಿಲ್ಲಿ ಕಡೆ ಸಾಗಿದರು. ಆಂಗ್ಲೇಯರನ್ನು ಬ್ರಿಟಿಷರನ್ನು ದೇಶದಿಂದ ತೊಲಗಿಸಲು, ಅವರವರ ಪ್ರಾಂತಗಳಲ್ಲಿ ಅವರ ಆಡಳಿತವನ್ನು ಪುನಃ ಸ್ಥಾಪಿಸಲು ಪ್ರಜೆಗಳು ಅವರಿಗೆ ಸಹಕರಿಸಿದರು.



ಚಿತ್ರ– 15.10 ನಾನಾಸಾಹೇಬ್

ವಲಸೆಪಾಲನೆ ಕೆಳಗೆ ಅನೇಕ ನೋವುಗಳು ಅನುಭವಿಸಿದ ಹೈದರಾಬಾದ ಪ್ರಜೆಗಳು ನಿಶಬ್ದವಾಗಿಲ್ಲ. 1857 ದಂಗೆಯ ಸಮಯದಲ್ಲಿ ಬ್ರಿಟೀಷರಿಗೆ ವ್ಯತಿರೇಕವಾಗಿ ಹೈದರಾಬಾದ್ ರಾಜ್ಯಗಳಲ್ಲಿ ಹೋರಾಡಿದ ವಿಪ್ಲಕಾರರಲ್ಲಿ ತುರ್ರೇಬಾಸ್ ಖಾನ್ ಒಬ್ಬರು. ಆತನು ಮೌಲ್ವಿ ಅಲ್ಲಾದ್ದೀನ್ ಬೆಂಬಲದಿಂದ ಆರು ಸಾವಿರ ಜನ ಪ್ರಜೆಗಳನ್ನು ಗುಂಪು ಕಟ್ಟಿಕೊಂಡು ಕೋಠಿಯಲ್ಲಿ ಪ್ರಸ್ತುತ ಮಹಿಳಾ ಕಾಲೇಜ್ ಆಗಿರುವ ಬ್ರಿಟೀಷ್ ರೆಸಿಡೆನ್ಸಿ ಮೇಲೆ ದಾಳಿ ಮಾಡಿದನು. ಬ್ರಿಟೀಷರಿಗೆ ನಿಜಾಂ ಬೆಂಬಲ ಕೊಟ್ಟ ಕಾಲದಲ್ಲಿ ಆತನು ದಂಗೆ ಮಾಡಿದನು. ಆದರೂ ಕೂಡಾ ಉದ್ಯಮ ದಮನಗೊಂಡಿತು. ಆತನನ್ನು ಗಲ್ಲಿಗೇರಿಸಲಾಯಿತು.



ಚಿತ್ರ 15.9 ಆಂಗ್ಲೇಯರ ಜೊತೆ ಹೋರಾಟ ಮಾಡುತ್ತಿರುವ ರಾಣಿ ಲಕ್ಷ್ಮೀಬಾಯಿ,

◆ ದಂಗೆಗೆ ಏಳುತ್ತಿದ್ದ ಭಾರತೀಯರೆಲ್ಲರನ್ನು ಮೊಘಲು ಸಾಮ್ರಾಜ್ಯ ಭಾವನೆ ಏತಕ್ಕೆ ಒಗ್ಗೂಡಿಸಿದೆ ? ಚರ್ಚಿಸಿರಿ.
◆ ನೀವು ಏನಾದರೂ ವಿರೋಧಿಸಿದರೇ, ಅದರ ಸ್ಥಾನದಲ್ಲಿ ಪರ್ಯಾಯ ವ್ಯವಸ್ಥೆ ಇರಬೆಕು. ನಿಮ್ಮ ಅನುಭವದಲ್ಲಿ ಬಂದ ಪರ್ಯಾಯ ವ್ಯವಸ್ಥೆ ಅವಸರ ಎಂಬ ಬಗ್ಗೆ ಆಲೋಚಿಸಿರಿ.

ದಂಗೆಯಲ್ಲಿ ಪ್ರತಿ ಗ್ರಾಮ:

ಉತ್ತರ ಪ್ರದೇಶ, ಬಿಹಾರ್ ಗಳಲ್ಲಿ ಪ್ರತಿ ಗ್ರಾಮದಲ್ಲೂ, ಪ್ರತೀ ಬೀದಿ ಬೀದಿಯಲ್ಲೂ ಎದುರು ದಾಳಿಯ ಜ್ವಾಲೆಗಳು ವ್ಯಾಪಿಸಿದವು. ರೈತರು, ಜಮೀಂದಾರರು, ಆಯುಧ ಗಳನ್ನು ಹಿಡಿದು ಇಂಗ್ಲೀಷರನ್ನು ಅವರ ಅಧಿಕಾರಿಗಳನ್ನು ಹೊಡೆ



ತುರ್ರೇಬಾಸ್ ಖಾನ್

ದೋಡಿಸಿ ದರು. ಬ್ರಿಟೀಷರಿಗೆ ತೆರಿಗೆ ಕಟ್ಟುವುದನ್ನು ನಿಲ್ಲಿಸಿದರು. ರೈಲು ಮಾರ್ಗಗಳನ್ನು ಧ್ವಂಸಮಾಡಿದರು. ಪೋಲೀಸ್ ಸ್ಟೇಷನ್‌ಗಳನ್ನು ಸುಟ್ಟರು. ಟೆಲಿಗ್ರಾಮ್ ವೈರುಗಳ್ನು ಕಿತ್ತುಹಾಕಿ ತಂತಿ ತಪಾಲಾ ಕಾರ್ಯಾಲಯಗಳನ್ನು ನೆಲಸಮ ಮಾಡಿದರು. ಆಂಗ್ಲೇಯರು ಇಂಡಿಯಾದಲ್ಲಿ ಹೊಸದಾಗಿ ಜಾರಿಗೊಳಿಸಿದವುಗಳೆಲ್ಲವನ್ನು ಧ್ವಂಸ ಮಾಡಿದರು. ಆಂಗ್ಲೇಯರ ಪರಾಜಯವೇ, ಭಾರತೀಯರಲ್ಲಿ ದಿನದಿನಕ್ಕೆ ಧೈರ್ಯ ತುಂಬಿ ಆಂಗ್ಲೇಯರ ವಿರುದ್ಧ ಹೋರಾಡುವ ಆತ್ಮವಿಶ್ವಾಸ ತುಂಬಿತ್ತು.

ದಂಗೆಕೋರರು ಬಡ್ಡಿ ವ್ಯಾಪಾರಿಗಳ ಮನೆಗಳನ್ನು ಲೂಟೀ ಮಾಡಿ ಅವರ ಹತ್ತಿರ ಇರುವ ದಸ್ತಾವೇಜುಗಳನ್ನು

SCERT TELANGANA

ಸುಟ್ಟುಹಾಕಿದರು. ಅಲ್ಲಿಯವರೆಗೂ ಈ ಬಡ್ಡೀ ವ್ಯಾಪಾರಿಗಳು ಬ್ರಿಟೀಷ್ ಕಾನೂನನ್ನು ಆಧಾರವಾಗಿಟ್ಟುಕೊಂಡು ಗ್ರಾಮಗಳಲ್ಲಿ ಅಧಿಕಾರವನ್ನು ಚಲಾಯಿಸುತ್ತಿದ್ದರು.

ದಂಗೆಯನ್ನು ದಮನಗೊಳಿಸಿದ್ದು :
(The Revolt is Suppresses)


ದಂಗೆಯು ಇಷ್ಟು ವಿಜಯ ಸಾಧಿಸಿದರೂ, ಬ್ರಿಟೀಷ್ ನವರು ಕ್ರಮವಾಗಿ ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಹೋರಾಟಗಾರರು ಧೈರ್ಯವಾಗಿ ಹೋರಾಟ ನಡೆಸಿದರು. ಆದರೆ ಇವರಲ್ಲಿ ಎರಡು ಮುಖ್ಯವಾದ ಬಲಹೀನತೆಗಳಿದ್ದವು. ಪ್ರತಿ ಪ್ರಾಂತದಲ್ಲಿ, ಪಟ್ಟಣಗಳಲ್ಲಿ ಎಲ್ಲರೂ ಬೇರೆಬೇರೆಯಾಗಿ ಹೋರಾಟ ನಡೆಸಿದರು. ಅವರು ಒಟ್ಟಾಗಿ ಹೋರಾಡಲಿಲ್ಲ. ಅವರಲ್ಲಿ ಯೋಜನಾತ್ಮಕ ಹೋರಾಟ ಇಲ್ಲದ ಕಾರಣ ಆಂಗ್ಲೇಯರು ಪ್ರತಿ ಪ್ರಾಂತದಲ್ಲಿಯು ದಂಗೆಕೋರರನ್ನು, ದಂಗೆಯನ್ನು ಒಂದಾದ ನಂತರ ಒಂದರಂತೆ ಪರಿಷ್ಕರಿಸಿಕೊಳ್ಳುತ್ತಾ ಬಂದರು.

ಹೋರಾಟಗಾರರಿಗೆ ಆಧುನಿಕ ಆಯುಧಗಳ ಕೊರತೆ ಇರುತ್ತಿತ್ತು. ಅವರಿಗೆ ಬೇಕಾದ ತುಪಾಕಿಗಳು, ಫಿರಂಗಿಗಳು, ಮದ್ದುಗುಂಡು ಮುಂತಾದವುಗಳನ್ನು ಹೊರಗಡೆಯಿಂದ ತರಿಸಿಕೊಳ್ಳಬೇಕಾಗಿತ್ತು. ಆದ್ದರಿಂದ ಹೋರಾಟಗಾರರು ಹಳೇ ತುಪಾಕಿಗಳು, ಬಾಣಗಳು, ಭರ್ಚಿಗಳು, ಕತ್ತಿಗಳಿಂದ ಹೋರಾಟಮಾಡಬೇಕುತ್ತು. ಆಧುನಿಕ ಆಯುಧಗಳಿಂದ ಈ ಕತ್ತಿಕಟಾರಿಗಳು ಎಷ್ಟು ಕಾಲ ಹೋರಾಡಬಲ್ಲವು?

ಆದರೂ ದಂಗೆಕಾರರು ವ್ಯಾಪಿಸಿದ ವೇಗವನ್ನು ನೋಡಿ ಬ್ರಿಟೀಷರು ಭಯಪಟ್ಟರು. ಅದಕ್ಕಾಗಿಯೇ ಹೋರಾಟ ಗಾರರನ್ನು ಅಡಗಿಸಿದ ಕಡೆಯಲ್ಲ ಅತಿ ಕ್ರೂರವಾಗಿ ವ್ಯವಹರಿಸಿದರು. ದಂಗಗೆಕೋರರನ್ನು ಅಮಾನುಷವಾಗಿ ಸಾಯಿಸಿ ಅವರ ಶವಗಳನ್ನು ಗ್ರಾಮದಲ್ಲಿಯ ಮರಗಳಿಗೆ ನೇತುಹಾಕಿ, ಗ್ರಾಮೀಣರು ದಂಗೆಯೆದ್ದರೆ ಎಂತಹ ಗಂಭಿರ ಪರಿಣಾಮ ಉಂಟಾಗುತ್ತವೆಯೋ ಅರ್ಥವಾಗುವಂತೆ ಮಾಡಿದರು.

ಕೆಲವು ಹೋರಾಟಗಾರರನ್ನು ಮರ ಫಿರಂಗಿಗಳ ಮುಂಭಾಗಕ್ಕೆ ಕಟ್ಟಿ ಅದನ್ನು ಹೊಡೆದಾಗ ಶರೀರ ತುಂಡು ತುಂಡಾಗುವಂತೆ ಮಾಡುತ್ತಿದ್ದರು. ಶರೀರವು ತುಂಡು ತುಂಡಾಗಿ ಗಾಳಿಯಲ್ಲಿ ವಾಸನೆ ಬರುತ್ತಿತ್ತು. ಬಹಳ ಜನ ದಂಗೆಕೋರರು ಆಂಗ್ಲೇಯರಿಗೆ ಸಿಕ್ಕದೆ ಒಂದು ಪ್ರಾಂತ ದಿಂದ ಮತ್ತೊಂದು ಪ್ರಾಂತಕ್ಕೆ ಹೋಗಿ ಅಡಗಿಕೊಳ್ಳುತ್ತಿದ್ದರು. ಕೆಲವರು ನೇಪಾಲ್ ಪ್ರದೇಶಗಳಿಗೆ ಹೋಗಿ ಅಡಗಿಕೊಂಡರು.



ಚಿತ್ರ – 15.11 ದಂಗೆಕೋರರನ್ನು ಗಲ್ಲಿಗೇರಿಸುತ್ತಿರುವ ದೃಶ್ಯ

ಬಹದೂರ್ ಷಾ ಜಫರ್ ಚಕ್ರವರ್ತಿಯನ್ನು ದೂರ ಪ್ರಾಂತವಾದ "ರಂಗೂನ್"ಗೆ ಕಳುಹಿಸುತ್ತಿದ್ದರು. ಈತನು ಅಲ್ಲಿ ಅಸುನೀಗಿಸಿದನು. ಇವನು ಮೊಘಲರ ಕೊನೆ ಚಕ್ರವರ್ತಿ. ಬ್ರಿಟೀಷರನ್ನು ಎದುರಿಸಿದ ದೊಡ್ಡ ದಂಗೆಯೆಂದರೇ 1857ರ ಸಿಪಾಯಿ ದಂಗೆಯೆ. ಆ ದಂಗೆಯವರನ್ನು ಅಡಗಿಸಿದ ನಂತರ ಬ್ರಿಟೀಷರ ಆಧಿಪತ್ಯ ಇನ್ನೂ ಹೆಚ್ಚಾಗಿ ಮತ್ತು 90 ವರ್ಷಗಳ ಕಾಲ ಪಾಲನೆ ಮುಂದುವರೆಯಿತು.

- **ಸರಿಯಾದ ಉತ್ತರಗಳನ್ನು ಗುರುತಿಸಿ.**
  - ಎ) 1857 ದಂಗೆಕಾರರು ಮೊಘಲರ ಪಾಲನೆಯನ್ನು .....(ತೊಲಗಿಸುವ ಪ್ರತಿಷ್ಟಾಪಿಸುವ) ಕೊಂಡರು.
  - ಬಿ) ಬ್ರಿಟೀಷ್ ಸೈನ್ಯದ ಬಲಹೀನತೆ ಏನೆಂದರೆ ಅವರ ಸೈನ್ಯದಲ್ಲಿ ಹೆಚ್ಚಾಗಿ .....(ಯುರೋಪ್/ಭಾರತೀಯರು) ಇದ್ದರು.
- ಹಿಂದಿರುಗಿದ ಭಾರತ ಸೈನಿಕ ಬಲಹೀನತೆ ಏನು?

ದಂಗೆಯ ನಂತರ:

1857ರ ದಂಗೆಯನ್ನು ಅಡಗಿಸಲು ಆಂಗ್ಲೇಯರಿಗೆ ಒಂದು ವರ್ಷಕ್ಕಿಂತ ಹೆಚ್ಚು ಹಿಡಿಯಿತು. ಈ ಸಮಯದಲ್ಲಿ ಅವರ ವಿಧಾನಗಳನ್ನು ಬದಲಾವಣೆ ಮಾಡಿಕೊಂಡರು. ಹೊಸ ವಿಧಾನಗಳನ್ನು ಅವಲಂಬಿಸಿದರು. 1858ರಲ್ಲಿ ವಿಕ್ಟೋರಿಯಾ ರಾಣಿ ಮುಖ್ಯವಾದ ಘೋಷಣೆ ನೀಡಿದಳು. ಆಕೆ ಭಾರತ ದೇಶವನ್ನು ಭಾರತೀಯ ರಾಜರೇ ಆಳ್ವಿಕೆ ನಡೆಸುವರೆಂದು ಪ್ರಕಟಣೆ ನೀಡಿದಳು. ಇದರಿಂದ ಆಂಗ್ಲೇಯರು ತಮ್ಮನ್ನು ಅಧಿಕಾರದಿಂದ ತೊಲಗಿಸುವರೆಂಬ ಭಯವಿಲ್ಲದೇ ಭಾರತೀಯರ ರಾಜರು ತಮ್ಮ ಪಾಲನೆಯನ್ನು ಮುಂದುವರೆಸಿದರು.

ಈ ವಿಧವಾಗಿ ಆಂಗ್ಲೇಯರು ರಾಜಕುಟುಂಬದವ ರೊಡನೆ ಒಳ್ಳೆಯ ಭಾಂಧವ್ಯ ಬೆಳಸಿಕೊಂಡರು. ಅದೇ ವಿಧವಾಗಿ ಜಮೀನ್ದಾರರಿಗೆ ನಿಮ್ಮ ಆಸ್ತಿಗಳನ್ನು ಕಾಪಾಡುವೆವು ಎಂದು ಅವರಿಗೆ ಅನೇಕ ರೀಯಾಯಿತಿ ಗಳನ್ನು ನೀಡಿದರು.

ಬ್ರಿಟೀಷ್ ಸರ್ಕಾರವು, ಭಾರತೀಯರ ಧಾರ್ಮಿಕ ವಿಶ್ವಾಸಗಳಲ್ಲಿ ಮಧ್ಯಸ್ಥಿಕೆ ವಹಿಸುವುದಿಲ್ಲ. ಹಳೆ ಸಂಪ್ರದಾಯಗಳನ್ನು ಮುಂದುವರೆಸುವೆವು ಎಂದು ಪಂಡಿತರಿಗೆ ಮೌಲ್ವಿಗಳಿಗೆ ಭರವಸೆ ನೀಡಿದರು. ಭಾರತೀಯರನ್ನು ಸರ್ಕಾರದ ಕೆಲಸಗಳಿಗೆ ತೆಗೆದುಕೊಳ್ಳುತ್ತೇನೆ ಎಂದು, ಭರವಸೆ ನೀಡಿದರು. 1857ರಲ್ಲಿ ತಮ್ಮ ಭಾರತ ಸಾಮ್ರಜ್ಯವನ್ನು ಕಿತ್ತುಕೊಳ್ಳುವುದನ್ನು ಆಂಗ್ಲೇಯರು ತಮ್ಮ ಕಣ್ಣಿನಿಂದ ನೋಡಿದರೆಂಬುದು ವಾಸ್ತವ. ಅದಕ್ಕೆ

SCERT-MYSORE

ಭಾರತದೇಶದ ಶ್ರೀಮಂತರ ಬೆಂಬಲ ಪಡೆಯಲು ಅವಶ್ಯಕವಾದ ಎಲ್ಲಾ ರಿಯಾಯಿತಿಗಳನ್ನು ನೀಡಿ ತಮ್ಮ ಆಳ್ವಿಕೆಯನ್ನು ಮುಂದುವರೆಸುವ ಪ್ರಯತ್ನಗಳೆಲ್ಲವನ್ನು ಆಂಗ್ಲೇಯರು ಮಾಡಿದರು.

ಹೈದರಾಬಾದ್ ರಾಜ್ಯ – ಬ್ರಿಟಿಷರು

ಎಲ್ಲಾ ರಾಜ್ಯಗಳಂತೆ ಹೈದರಾಬಾದ್ ರಾಜ್ಯ ಕೂಡ ಈಸ್ಟ್ ಇಂಡಿಯಾ ಕಂಪೆನಿಯ ಆಧಿನದಲ್ಲಿ ಬಂದಿತು. ಬ್ರಿಟಿಷರು ತಮ್ಮ ರೆಸಿಡೆಂಟನನ್ನು ಹೈದರಾಬಾದ್ನಲ್ಲಿರಿಸಿ ನಿಜಾಂ ಆಡಳಿತವನ್ನು ಸಂಪೂರ್ಣವಾಗಿ ಪರಿಶೀಲಿಸುತ್ತಿದ್ದರು. ನಿಜಾಂ ರಾಜನು ತನ್ನ ಪ್ರಧಾನ ಮಂತ್ರಿಯನ್ನು ನಿಯಮಿಸಿಕೊಳ್ಳಲು ರೆಸಿಡೆಂಟ್ನ ಸಲಹೆಯನ್ನು ಮತ್ತು ಗವರ್ನರ್ ಜನರಲನ ಅನುಮತಿಯನ್ನು ಪಡೆಯ ಬೇಕಾಯಿತು. ಎಲ್ಲಾ ವಿಭಾಗಗಳಿಗೂ ಬ್ರಿಟಿಷರು ಆಯ್ಕೆ ಮಾಡಿದ ಭಾರತ ಸಿವಿಲ್ ಸರ್ವಿಸ್ ಅಧಿಕಾರಿಗಳೇ ನಾಯಕತ್ವವಹಿಸಿದರು. ಈ ವಿಧವಾಗಿ ಬ್ರಿಟಿಷರು ನಿಜಾಂ ರಾಜ್ಯವನ್ನು ತಮ್ಮ ಆಧಿನದಲ್ಲಿ ತೆಗೆದುಕೊಂಡರು. ಬ್ರಿಟಿಷರು ಇತರ ಪ್ರಾಂತಗಳಲ್ಲಿ ಅನುಸರಿಸುವ ಪರಿಪಾಲನಾ ಪದ್ಧತಿಯನ್ನು ನಿಜಾಂ ರಾಜ್ಯದಲ್ಲಿ ಕ್ರಮವಾಗಿ ಜಾರಿಗೊಳಿಸುವಂತೆ ಒತ್ತಡ ಹಾಕಿದರು.

ಒಂದು ವೇಳೆ ನೀವು ಹೈದರಾಬಾದಗೆ ಹೋದರೆ ಅಲ್ಲಿ ಖ್ಯಾತ ಸಾಲಾರ್ ಜಂಗ್ ಮ್ಯೂಜಿಯಂ ನೋಡಬಹುದು. ಅದರಲ್ಲಿ ಹೈದರಾಬಾದನ ದಿವಾನನಾದ ಸಾಲಾರ್ ಜಂಗ್ ಸಂಗ್ರಹಿಸಿದ ವಿವಿಧ ರೀತಿಯ ವಸ್ತುಗಳಿವೆ. ಆತನು ಅನೇಕ ಸುಧಾರಣೆಗಳನ್ನು ಕೈಗೊಂಡನು. ಹೈದರಾಬಾದ್ ರಾಜ್ಯ ಆರ್ಥಿಕಾಭಿವೃದ್ಧಿಗೆ ಆತನು ಬಹಳ ಸಹಕರಿಸಿದನು. ರಾಜ್ಯವನ್ನು ಸುಬಾಹಗಳಾಗಿ, ಜಿಲ್ಲೆಗಳಾಗಿ ವಿಭಜಿಸಿ ಹಳೆಯ ದೊರೆಗಳನ್ನು ತೊಲಗಿಸಿದನು. ಕಂದಾಯ ಕೃಷಿ ಧನವನ್ನು ರದ್ದುಮಾಡಿ ಬದಲಿಗೆ ಜಿಲ್ಲಾಧಿಕಾರಿಗಳಿಂದ ರೈತರಿಂದ ಪ್ರತ್ಯಕ್ಷ ಕರ ವಸೂಲಿ ಮಾಡಿಸಿದನು. ನ್ಯಾಯ ಸುಧಾರಣೆಯಲ್ಲಿ ಭಾಗವಾಗಿ ಸುಪ್ರಿಂಕೋರ್ಟ್, ಹೈಕೋರ್ಟ್, ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಿದನು. ಸಿವಿಲ್, ಕ್ರಿಮಿನಲ್, ನ್ಯಾಯಾಲಯಗಳನ್ನು ಬಿಡಿಯಾಗಿ ಸ್ತಾಪಿಸಿದನು.

ಸಾರಿಗೆ ಸೌಕರ್ಯಗಳನ್ನು ಊರ್ಜಿತಗೊಳಿಸಲು ರೈಲು, ರಸ್ತೆ ಮಾರ್ಗಗಳನ್ನು ಸಾಲಾರ್ ಜಂಗ್ ಅಭಿವೃದ್ಧಿ ಪಡಿಸಿದನು. ಹೈದರಾಬಾದನಿಂದ ವಾಡಿ, ಮದ್ರಾಸನಿಂದ ಶೋಲಾಪುರ ಮದ್ರಾಸನಿಂದ ಬೊಂಬಾಯಿಗೆ ರೈಲು ಮಾರ್ಗಗಳನ್ನು ಹಾಕಿಸಿದನು. 1855 ರಲ್ಲಿ ಚಾದರ್ ಘಾಟನಲ್ಲಿ ದಾರ್ ಉಲ್ ಉಲ್ಮಾ ಎಂಬ ಆಂಗ್ಲ ಮಾಧ್ಯಮ ಶಾಲೆಯನ್ನು 1870ರಲ್ಲಿ ಸಿಟಿ ಕಾಲೇಜ್, ದಕ್ಕನ್ ಇಂಜಿನೀರಿಂಗ್ ಕಾಲೇಜ್ ಮತ್ತು ಮದರ್ಸಾ–ಇ–ಅಲಿಯಾ ಸ್ಥಾಪಿಸಿದನು. ಈ ಸುಧಾರಣೆಗಳು ಹೈದರಾಬಾದ್ ದೇಶದಲ್ಲಿಯೇ ಆಧುನಿಕ ರಾಜ್ಯವಾಗಿ ಅವತರಿಸಲು ಸಹಕರಿಸಿದವು.



ಚಿತ್ರ 15.12 ಬಹದೂರ್ ಷಾ ಜಫರ್ ಮತ್ತು ಆತನ ಪಕ್ಷಗಳನ್ನು ಅರೆಸ್ಟ್ ಮಾಡುತ್ತಿರುವ ಕೆಪ್ಟನ್ ಹಡ್ಸನ್

ಮೊಘಲ್ ವಂಶದಲ್ಲಿ ಔರಂಗಜೇಬನ ನಂತರ ಪಾಲಿಸಿದವರು ಹೆಸರಿಗೆ ಪಾಲಕರು ಶಕ್ತಿವಂತರಲ್ಲ, 1857ರ ಸಿಪಾಯಿ ದಂಗೆಯ ಸಮಯದಲ್ಲಿ ಬಹದೂರ್ಷಾ ಜಫರ್ ಪಾಲಕರು ಈಸ್ಟ್ ಇಂಡಿಯಾ ಕಂಪನಿ ಈ ದಂಗೆಯನ್ನು ತುಳಿದು ಹಾಕಿ ತಕ್ಷಣ ಬಹದ್ದೂರ್ ಷಾ ಜಫರ್ನನ್ನು ಬಲವಂತವಾಗಿ ಪದಚ್ಯುತಿಗೊಳಿಸಿ, ಆತನ ಕುಮಾರನನ್ನು ಸಹ ಕೊಲ್ಲಲಾಯಿತು.

SCERT TELANGANA

ಮುಖ್ಯ ಪದಗಳು:

1. ರಾಯರ್ ಚಾರ್ಟರ್ 2. ಸುಬೇದಾರು 3. ಜಾಗಿರು 4. ಗುತ್ತಾಧಿ ಪಾತ್ರ 5. ಕಂಟೋನ್ಮೆಂಟ್
6. ಡಿಮಾಂಡ್ 7. ಕೋಟೆಗಳು 8. ಮೌಲ್ವಿಗಳು

ನಿಮ್ಮ ಅಭ್ಯಸನವನ್ನು ಅಭಿವೃದ್ಧಿಪಡಿಸಿಕೊಳ್ಳೋಣ

1) ಯುರೋಪಿಯನ್ ವ್ಯಾಪಾರ ಕಂಪನಿಯವರು ಭಾರತದಲ್ಲಿ ಸೈನ್ಯವನ್ನು ಏಕೆ ಅಭಿವೃದ್ಧಿ ಪಡಿಸಿದರು? ಕಂಪನಿ ವ್ಯವಹಾರದಲ್ಲಿ ಈ ಸೈನ್ಯವು ಎಂತಹ ಪಾತ್ರವನ್ನು ಪೋಷಿಸಲಾಯಿತು?

2) 1700 ಮತ್ತು 1800 ಇಸವಿಯಲ್ಲಿ ಯುರೋಪ್ ಸೈನ್ಯಗಳು, ಭಾರತದ ಸೈನ್ಯವನ್ನು ಹೇಗೆ ಸೋಲಿಸಿದವು ಎಂದು ನೀನು ಅಂದುಕೊಂಡಿರುವೆ?

3) 1857 ರಲ್ಲಿ ತಮ್ಮ ಧಾರ್ಮಿಕ ವಿಶ್ವಾಸಕ್ಕೆ ದಕ್ಕೆ ಉಂಟಾಗಿದೆ ಎಂದು ಭಾವಿಸಿದ ಸೈನಿಕರು ಯಾರು? ಅವರು ಹಾಗೆ ಏಕೆ ಭಾವಿಸಿದರು?

4) 1857ರಲ್ಲಿ ಬ್ರಿಟೀಷರಿಗೆ ವಿರುದ್ಧವಾಗಿ ಪ್ರಜೆಗಳು ಹೇಗೆ ದಂಗೆ ಎದ್ದರು?

5) 1857ರಲ್ಲಿ ಎದುರಾಳಿಗಿಳಿದ ಜನರು ಏನನ್ನು ಸಾಧಿಸಲು ಕೋರಿದರು?

6) 1858 ರಾಣಿ ವಿಕ್ಟೋರಿಯಾ ಪ್ರಕಟಣೆಯಲ್ಲಿ ದಂಗೆಕೋರರ ಯಾವ ಡಿಮಾಂಡುಗಳನ್ನು ಪರಿಷ್ಕರಿಸುವೆವು ಎಂದು ಭರವಸೆ ನೀಡಿದರು?

7) ಮೊಘಲರು ಭಾರತ ದೇಶದಲ್ಲಿ ಅಧಿಕಾರಕ್ಕೆ ಬರುವುದಕ್ಕೆ, ಬ್ರಿಟೀಷರು ಅಧಿಕಾರಕ್ಕೆ ಬರುವುದಕ್ಕೂ ಇರುವ ಹೋಲಿಕೆಗಳು, ವ್ಯತ್ಯಾಸಗಳು ಏನು ?

8) ವಾಸ್ಕೋಡಿಗಾಮ ಪೋರ್ಚುಗಲ್‌ನಿಂದ ಭಾರತ ದೇಶಕ್ಕೆ ಮಾಡಿದ ಸಮುದ್ರ ಪ್ರಯಾಣ ಮಾರ್ಗವನ್ನು ನಕ್ಷೆಯಲ್ಲಿ ಗುರ್ತಿಸಿರಿ.

9) "ವಿದೇಶಿ ದುರಾಕ್ರಮಣವನ್ನು ನಿವಾರಿಸಲು ಐಕ್ಯತೆ ಅವಶ್ಯಕ " ಇದರ ಮೇಲೆ ಒಂದು ಲಘು ಟಿಪ್ಪಣಿಯನ್ನು ಬರೆಯಿರಿ.

10) ಆಂಗ್ಲೇಯರ ಆಳ್ವಿಕೆಯ ಬಗೆಗೆ ನಿನ್ನ ಅಸಂತೃಪ್ತಿಯನ್ನು ಸ್ವಂತ ಮಾತುಗಳಲ್ಲಿ ಬರೆಯಿರಿ.

11) 1857ರ ದಂಗೆಗೆ ಸಂಬಂಧಿಸಿದ ವಿವರಗಳನ್ನು ಶೇಖರಿಸಿ, ಕೆಳಗಿನ ಕೋಷ್ಟಕದಲ್ಲಿ ನಮೂದು ಮಾಡಿರಿ.

ಕ್ರ. ಸಂ.	ದಂಗೆಯಲ್ಲಿ ಪಾಲ್ಗೊಂಡವರು	ದಂಗೆಗೆ ದೂರವಾಗಿದ್ದವರು

SCERT TELANGANA

ಪಾಠ 16

ರಾಜ್ಯ ಶಾಸನಸಭೆ - ಕಾನೂನು ತಯಾರಿ (ರಚನೆ)

ಈ ವಿಭಾಗದಲ್ಲಿ ಇಲ್ಲಿಯವರಗೆ ನಮ್ಮ ಪ್ರಜೆಗಳು ಹೇಗೆ ಪ್ರಜಾಕಾರ್ಯಕ್ರಮಗಳನ್ನು ಸರ್ಕಾರದ ವ್ಯವಹಾರಗಳನ್ನು ನಿರ್ವಹಿಸಿಕೊಂಡರೋ, ಅವರು ಹೇಗೆ ಪರಿಪಾಲಿಸಿದ್ದಾರೆ, ಹೇಗೆ ಪರಿಪಾಲಿಸಬೇಕೆಂದು ಓದಿಕೊಳ್ಳೋಣ. ಕಳೆದ ವರ್ಷಗಳಲ್ಲಿ ನಾವು ಸಣ್ಣ ಪ್ರಮಾಣದ ಗಿರಿಜನ ಸಮಾಜಗಳು ಅವರ ಕಾರ್ಯಕಲಾಪಗಳನ್ನು ಕುರಿತು ಚರ್ಚೆಗಳು, ಸಮಾವೇಶಗಳ ಮೂಲಕ ಹೇಗೆ ನಿರ್ವಹಿಸಿದರೊ ಗ್ರಾಮ ಹಿರಿಯರು ನಿರ್ಣಯಗಳನ್ನು ಹೇಗೆ ನಿರ್ಧರಿಸುತ್ತಿದ್ದರೆಂಬುದನ್ನು ಓದಿದ್ದೀವೆ. ರಾಜ್ಯಗಳಲ್ಲಿ, ಸಮಾಜದಲ್ಲಿ ರಾಜರು ಅಧಿಕಾರಿಗಳು ಇವುಗಳನ್ನು ಹೇಗೆ ನಿರ್ವಹಿಸುತ್ತಿದ್ದರೋ ಹೆಚ್ಚಾಗಿ ಭೂಭಾಗದ ಮೇಲೆ ರಾಜ್ಯಗಳ ಮೇಲೆ ಅಧಿಪತ್ಯಕ್ಕಾಗಿ ಹೇಗೆ ಯುದ್ಧಗಳನ್ನು ಮಾಡುತ್ತಿದ್ದರೋ ತಿಳಿದುಕೊಳ್ಳೋಣ. ಆದರು ಅವರ ಅಧಿಕಾರಕ್ಕೊಳಪಟ್ಟ ಅಧಿಕಾರಿಗಳು ಪ್ರಜೆಗಳನ್ನು ಹೇಗೆ ನಿಯಂತ್ರಿಸುತ್ತಿದ್ದರೊ, ತಮಗೆ ಇಷ್ಟ ಬಂದಂತೆ ತೆರಿಗೆ ವಸೂಲು ಮಾಡುತ್ತಿದ್ದರು, ಭಾರೀ ಪ್ರಮಾಣದ ಭವನಗಳ ನಿರ್ಮಾಣಕ್ಕೆ ಆ ಆದಾಯವನ್ನು ಹೇಗೆ ವಿನಿಯೋಗಿಸುತ್ತಿದ್ದರೋ ಪ್ರಜೆಗಳ ಯೋಗಕ್ಷೇಮಕ್ಕಾಗಿ ಬಾವಿಗಳು ಕೆರೆಗಳು, ದೇವಾಲಯಗಳು,. ಮಸೀದಿಗಳನ್ನು ಹೇಗೆ ನಿರ್ಮಿಸುತ್ತಿದ್ದರೊ ತಿಳಿದುಕೊಂಡೆವು. ಬ್ರಿಟಿಷರು ನಮ್ಮ ದೇಶದಲ್ಲಿ ಅಧಿಕಾರವನ್ನು ಹೇಗೆ ಸ್ಥಾಪಿದರು ? ನಮ್ಮ ದೇಶದ ಸಂಪತ್ತನ್ನು ಹೇಗೆ ಕೊಳ್ಳಹೊಡೆದರು ನಮ್ಮ ಪ್ರಜೆಗಳು ಅವರನ್ನು ಹೇಗೆ ಎದುಸಿದರು ? ಎಂಬುದನ್ನು ಕುರಿತು ನಾವು ಓದಿದ್ದೀವಿ.

ಈಗ ನಮಗೆ ರಾಜರು, ಯೋಧರುಗಳಿಲ್ಲ. 70 ವರ್ಷಗಳ ಹಿಂದಿಯೇ ನಾವು ಬ್ರಿಟೀಷ್‌ರಿಂದ ಸ್ವಾತಂತ್ರ್ಯವನ್ನು ಪಡೆದೆವು. ನಮ್ಮನ್ನು ನಾವು ಹೇಗೆ ಪರಿಪಾಲಿಸಿ ಕೊಳ್ಳುತ್ತಿದ್ದೇವೆ?ಪಾರ್ಲಿಮೆಂಟ್ ಸದಸ್ಯರು, ಶಾಸನ ಸಭೆ ಸದಸ್ಯರು, ಮುಖ್ಯ ಮಂತ್ರಿಗಳು, ಮಂತ್ರಿಗಳು, ಉನ್ನತಾಧಿಕಾರಿಗಳ ಕುರಿತು ನಿಮಗೆ ತಿಳಿದೇ ಇದೆ. ಅವರು ಪ್ರಾಚೀನ ಕಾಲದ ರಾಜರಂತವರೇ ? ಅವರು ತಮಗೆ ಇಷ್ಟವಾದ ಹಾಗೆ ಮಾಡುತ್ತಾರೆಯೇ ? ಮಾಡುವುದಿಲ್ಲ. ಆಧುನಿಕ ಪ್ರಭುತ್ವಗಳು ಕಾನೂನಿನ ಪ್ರಕಾರ ನಡೆದುಕೊಳ್ಳುತ್ತವೆ. ಕಾನೂನಿನ ಮುಂದೆ ಯಾರು ಅತೀತರಲ್ಲ ಮಂತ್ರಿಗಳು, ಅಧಿಕಾರಿಗಳು, ಕಾನೂನಿಗೆ ಅನುಗುಣವಾಗಿ ವ್ಯವಹರಿಸಬೇಕು. ಆದರೆ ಆ ಕಾನೂನನ್ನು ಯಾರು ತಯಾರಿಸುತ್ತಾರೆ ? ಕಾನೂನನ್ನು ಹೇಗೆ ತಯಾರಿಸುತ್ತಾರೆ? ಇವು ಪರಿಪಾಲಕರ ಕೋರಿಕೆಗಳ ಪ್ರಕಾರ ತಯಾರಾಗುತ್ತವೆಯೇ ?ಇಲ್ಲ. ಇವುಗಳನ್ನು ಶಾಸನ ಸಭೆ ಸದಸ್ಯರು, ಪಾರ್ಲಿಮೆಂಟ್ ಸದಸ್ಯರು ತಯಾರಿಸುತ್ತಾರೆ. ಭಾರತ ಸಂವಿಧಾನ ಈ ಸಂಸ್ಥೆಗಳು ಕಾನೂನನ್ನು ಹೇಗೆ ಮಾಡುತ್ತವೆ ಎಂಬುದನ್ನು ಸೂಚಿಸುತ್ತದೆ. ಈ ಸಂವಿಧಾನದ ನಿಯಮದ ಪ್ರಕಾರ ಕಾನೂನುಗಳನ್ನು ಮಾಡುತ್ತಾರೆ. ಈ ಪಾಠದಲ್ಲಿ ರಾಜ್ಯ ಶಾಸನ ಸಭೆಯಲ್ಲಿ ಕಾನೂನು ಹೇಗೆ ತಯಾರಿಸುದ್ದಯೋ ವಿಸ್ತಾರವಾಗಿ ತಿಳಿದುಕೊಳ್ಳೋಣ.



ಚಿತ್ರ – 16.1 ತೆಲಂಗಾಣ ಅಸೆಂಬ್ಲಿ ಭವನ

SCERT TELANGANA

ಇಲ್ಲಿ ಒಂದು ವಾರ್ತಾವಿಶೇಷವಿದೆ. ಇದರಲ್ಲಿ ಏನನ್ನು ಹೇಳಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ

ಆಂಧ್ರ ಪ್ರದೇಶ ಧೂಮಪಾನ ನಿಷೇಧ ಆರೋಗ್ಯ ಪರಿರಕ್ಷಣಾ ಕಾನೂನು : 2002..

ಬಹಿರಂಗ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವ ಪಟ್ಟಿಯ ಅನುಮೋದನೆ

(ನಮ್ಮ ಪ್ರತ್ಯೇಕ ಪ್ರತಿನಿಧಿ)

ಹೈದರಾಬಾದು ಮಾರ್ಚ್ 27 :

ಬಹಿರಂಗ ಪ್ರದೇಶಗಳಲ್ಲಿ ಸರ್ಕಾರದ ಸಂಸ್ಥೆಗಳಲ್ಲಿ, ಸರ್ಕಾರದ ಕಾರ್ಯಾಲಯಗಳಲ್ಲಿ, ಸರಕಾರಿ ವಾಹನಗಳಲ್ಲಿ ಧೂಮಪಾನ ನಿಷೇಧಿಸಿ ಬುಧವಾರದದಿನ ಆಂಧ್ರ ಪ್ರದೇಶ್ ರಾಜ್ಯ ಶಾಸನ ಸಭೆ ಬಿಲ್ಲು ಪ್ರವೇಶ ಪಡಿಸಿದೆ. ಈ ಕಾನೂನನ್ನು ಉಲ್ಲಂಘಿಸಿದವರಿಗೆ 100 ರೂಪಾಯಿಯಿಂದ 1000 ರೂಪಾಯಿಗಳ ವರೆಗೆ ದಂಡ (ಜೂಲ್ಮನೇ) ವಿಧಿಸಲು ಅವಕಾಶ ಮಾಡಿಕೊಟ್ಟಿದೆ.

ಇದಕ್ಕೆ ಸಂಬಂಧಿಸಿದ ಪ್ರತಿ ಪಕ್ಷ ಸದಸ್ಯರು ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ. ಶೈಕ್ಷಣಿಕ ಸಂಸ್ಥೆಗಳಿಗೆ 100 ಮೀಟರ್ ದೂರದಲ್ಲಿ ಸಿಗರೇಟು, ಮಾರಾಟವನ್ನು ನಿಷೇಧಿಸುವುದು, 18 ವರ್ಷ ದೊಳಗಿನವರಿಗೆ ಸಿರಗೇಟು ಮಾರುವುದನ್ನು ನಿಷೇಧಿಸುವುದು ಸಿಗರೇಟು ಮಾರಾಟಗಾರರ ಪ್ರಕಟನೆಯ ಮೇಲೆ ನಿಷೇಧ ವಿಧಿಸುವಂತಹ ಸೂಚನೆಗಳನ್ನು ಪ್ರಕಟಿಸಿದರು. ಇನ್ನೂಕೆಲವರು ಇದು ತಂಬಾಕು ರೈತರ, ಪಾನ್ ಷಾಪ್ ಮರಾಟಗಾರರ ಜೀವನದ ಮೇಲೆ ಪ್ರಭಾವವನ್ನು ತೋರಿಸುತ್ತದೆ ಎಂದು ವಾದಿಸಿದರು. ಮಂತ್ರಿ ಅವರ ಅನುಮಾನಗಳನ್ನು ಅಲ್ಲಗಳೆದರು.

ಸಿಗರೇಟು ಪ್ರಜೆಗಳ ಆರೋಗ್ಯದ ಮೇಲೆ ತೋರಿಸುವ ದುಷ್ಪ್ರಭಾವದಿಂದ ನವಂಬರ್ 2,2001 ರಂದು ಸುಪ್ರಿಂಕೋರ್ಟ್ ನೀಡಿದ ಆದೇಶಗಳ ಆಧಾರದ ಮೇಲೆ ಈ ಕಾನೂನು ತಯಾರಿಸುವುದು ಅವಸರವೆಂದು ಮಂತ್ರಿಯವರು ಹೇಳಿದರು.

ಬಹಿರಂಗ ಪ್ರದೇಶಗಳಲ್ಲಿ, ಸರ್ಕರದ ಸಂಸ್ಥೆಗಳಲ್ಲಿ, ಸರ್ಕಾರದ ವಾಹನಗಳಲ್ಲಿ ದೂಮಪಾನ ಮಡುವುದನ್ನು ನಿಷೇಧಿಸೋಣ. ದೂಮಪಾನ ಮಾಡಬಾರದು ಎಂಬ ಬೋರ್ಡಗಳ ನೀಡುವುದಕ್ಕೆ ಸಂಬಂಧಿಸಿದ ಸಕ್ಷೆನ್ 5,6,10ಗಳನ್ನು ಉಲ್ಲಂಘಿಸಿದರೆ ಅಂಥವರಿಗೆ 100 ರೂ. ದಂಡ ಎರಡನೇ ತಪ್ಪಿಗೆ 200 ರೂ.ಯಿಂದ 500 ರೂಪಾಯಿಯವರೆಗೆ ದಂಡ ವಿಧಿಸಿ ಶಿಕ್ಷಿಸಬಹುದು. (ಮಾರ್ಚ್ 27, 2002" ಹಿಂದು ಆಂಗ್ಲದಿನ ಪತ್ರಿಕೆಯಿಂದ ತೆಗೆದುಕೊಂಡಿದೆ)

- ವಾರ್ತಾ ಪತ್ರಿಕೆಗಳನ್ನು ಯಾವಾಗಲೂ ಹಿರಿಯರು ಓದುತ್ತಾರೆಂಬು ಊಹೆಯಿಂದ ಬರೆಯುತ್ತಾರೆ. ಆದ್ದರಿಂದ ಈ ಕೆಳಗಿನ ಪದಗಳಿಗೆ ಅರ್ಥಗಳನ್ನು ನೋಡೊಣ. ನಿಷೇಧಿಸುವುದು ಕಡಿಮೆ ಮಾಡುವುದು. ಅನುಮಾನಗಳು / ಸಂದೇಹಗಳು, ಉಲ್ಲಂಘಿಸುವುದು
- ಈ ಮೇಲಿನ ವಾರ್ತೆಯನ್ನು ಅನುಸರಿಸಿ ಈ ಕೆಳಗಿನ ಖಾಲಿ ಸ್ಥಳನ್ನು ಪೂರ್ತಿ ಮಾಡಿರಿ.

1) ಬಹಿರಂಗ ಸ್ಥಳಗಳಲ್ಲಿ ದೂಮಪಾನವನ್ನು ನಿಷೇದಿಸಲು ---- ಪ್ರವೇಶಪಡಿಸಲಾಯಿತು. (ಬಿಲ್ಲು, ಸಂಪ್ರದಾಯ, ಕಾನೂನು, ನಿಬಂಧನೆ)

2) ಧೂಮಪಾನ ನಿಷೇಧದಲ್ಲಿ ಈ ಕೆಳಗಿನವುಗಳನ್ನು ಸೇರಿಸಿಲ್ಲ ---- (ಕೆಲಸಮಾಡುವ ಸ್ಥಳ, ಪ್ರಭುತ್ವ ವಾಹನಗಳು ಪ್ರೈವೇಟು ತೋಟಗಳು, ಬಸ್ ಸ್ಟಂಡು)

3 ಈ ಕಾನೂನು ಸುಪ್ರಿಂಕೋರ್ಟ್ ಆದೇಶಗಳನ್ನು ------ ಮಾಡಲು ರೂಪಿಸಿದೆ. (ನಿಶ್ಯಬ್ದ, ಶಿಕ್ಷಿಸಲು, ಅನುಸರಿಸಲು, ತಿರಸ್ಕರಿಸಲು)

4 ಈ ಬಿಲ್ಲನ್ನು ಪ್ರವೇಶ ಪಡಿಸಿದವರು ----- (ಸುಪ್ರಿಂಕೋರ್ಟ್ ಮಂತ್ರಿಗಳು, ಕಲೆಕ್ಟರಾಫೀಸ್, ಶಾಸನ ಸಭೆ)

- ಈ ವಾರ್ತಾ ವಿಷಯ ಪ್ರತಿಯೊಬ್ಬರಿಗೆ ಈ ಬಿಲ್ಲನ್ನು ಕುರಿತು ಒಂದೇ ಅಭಿಪ್ರಾಯ ಇರಬೇಕೆಂದು ಹೇಳುತ್ತದಾ?
- ಈ ವಾರ್ತೆ ಈ ಕಾನೂನನ್ನು ಉಲ್ಲಂಘಿಸಿದವರಿಗೆ ಎಂತಹ ಶಿಕ್ಷಗಳನ್ನು ವಿಧಿಸುವುದಾಗಿ ತೋರಿಸಿದೆ.

ಪ್ರತಿ ರಾಜ್ಯದಲ್ಲಿ ಕಾನೂನು ಸಭೆಗಳನ್ನು ಏರ್ಪಾಡುಮಾಡಿಕೊಳ್ಳಲು ಭಾರತ ಸಂವಿಧಾನ ಅವಕಾಶ ನೀಡಿದೆ. ಪ್ರತಿ ರಾಜ್ಯದ ಗವರ್ನರ್, ಒಂದು ಅಥವಾ ಎರಡು ಸಭೆಗಳಿಂದ ಕೂಡಿದ ಕಾನೂನು ಸಭೆಗಳನ್ನು ದೇಶದಲ್ಲಿನ ರಾಜ್ಯಗಳಲ್ಲಿ ಕಾನೂನು ಸಭೆಗಳು ಏಕಸಭೆ ಅಥವಾ ಉಭಯ ಸಭೆಗಳನ್ನು ಒಳಗೊಂಡಿವೆ. ಕೆಳಸಭೆಯನ್ನು ಶಾಸನ ಸಭೆ ಎಂದು, ಮೇಲಸಭೆಯನ್ನು ಶಾಸನ ಮಂಡಳಿ ಎಂದು ಕರೆಯುತ್ತಾರೆ.ಪ್ರಸ್ತುತ ಕೆಲವು ರಾಜ್ಯಗಳಲ್ಲಿ ಮಾತ್ರ ಎರಡು ಸಭೆಗಳಿವೆ.

ಶಾಸನ ಸಭೆ :

ರಾಜ್ಯಕ್ಕೆ ಕಾನೂನು ನಿರ್ಮಿಸುವಲ್ಲಿ ಈ ಸಭೆ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ರಾಜ್ಯ ಸಂಕ್ಷೇಮಕ್ಕಾಗಿ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ, ನಿಯಮಗಳನ್ನು ರೂಪಿಸುವಲ್ಲಿ, ಅವುಗಳನ್ನು ಜಾರಿ ತರುವಲ್ಲಿ ಭಾಧ್ಯತೆವಹಿಸುವ ಅಂದ್ರಪ್ರದೇಶ ಪ್ರಭುತ್ವ ಹೆಚ್ಚಾಗಿ ಶಾಸನ ಸದಸ್ಯರನ್ನೊಳಗೊಂಡಿದೆ. ನಮ್ಮ ರಾಜ್ಯ ಶಾಸನ ಸಭೆಯಲ್ಲಿ

SCERT TELANGANA

119 ಮಂದಿ ಸದಸ್ಯರಿದ್ದಾರೆ (ಎಮ್.ಎಲ್.ಎ.ಗಳು) ಪಂಚಾಯಿತಿ ಸಭೆ ಸದಸ್ಯರಂತೆ ಇವರನ್ನು ಕೂಡ ಪ್ರಜೆಗಳೇ ಆಯ್ಕೆಮಾಡುತ್ತಾರೆ.

ಪ್ರತಿ ರಾಜ್ಯ ಶಾಸನ ಸಭೆ ಸಾಧಾರನವಾಗಿ 5 ವರ್ಷಗಳ ಕಾಲ ಪರಿಮಿತಿಯನ್ನು ಹೊಂದಿರುತ್ತದೆ. ಕೆಲವು ಸಂದರ್ಭಗಳಲ್ಲಿ ಕಾಲಪರಿಮಿತಿಗಿಂತ ಮೊದಲೇ ಗವರ್ನರ್ ರದ್ದು ಮಾಡಬಹುದು. ಅದೇ ರೀತಿಯಾಗಿ ಪಾರ್ಲಿಮೆಂಟು ರಾಷ್ಟ್ರೀಯ ಅತ್ಯವಸರ ಪರಿಸ್ಥಿತಿಯಲ್ಲಿ ಒಂದು ವರ್ಷದ ಕಾಲಪರಿಮಿತಿಯನ್ನು ಹೆಚ್ಚಿಸಬಹುದು.


ರಾಜ್ಯ ಶಾಸನ ಸಭೆ ಪ್ರತಿವರ್ಷ ಕನಿಷ್ಟ ಎರಡುಬಾರಿ ಸಮಾವೇಷವಾಗಬೇಕು.ಎರಡು ಸಮಾವೇಷಗಳ ಮಧ್ಯ ಕಾಲ ಆರು ತಿಂಗಳು ಮೀರಬಾರದು.

ಶಾಸನ ಸಭೆ ಮತದಾರರ ಕ್ಷೇತ್ರ :

ಮೇಲೆ ತೋರಿಸಿದ 119 ಮಂದಿ ಸದಸ್ಯರು ಒಬ್ಬೊಬ್ಬರು ಒಂದೊಂದು ವಿಧಾನ ಸಭಾ ಕ್ಷೇತ್ರದಿಂ ಆಯ್ಕೆಯಾಗುತ್ತಾರೆ. ಈ ವಿಧವಾಗಿ ನಮ್ಮ ರಾಜ್ಯದಲ್ಲಿ 119 ವಿಧಾನ ಸಭೆಗಳಿವೆ ರಾಜ್ಯದಲ್ಲಿ ಈ ವಿಧಾನ ಸಭೆಗಳ ಸಂಖ್ಯೆ ಅಲ್ಲಿನ ಜನಸಂಖ್ಯೆಯ ಮೇಲೆ ಆಧಾರ ಪಟ್ಟಿರುತ್ತದೆ. ಆಂದ್ರ ಪ್ರದೇಶದಲ್ಲಿ ಒಂದೊಂದು ಕ್ಷೇತ್ರದಲ್ಲಿ ಸುಮಾರು 1,70,000 ಮಂದಿ ಮತದಾರರಿದ್ದಾರೆ. 18 ವರ್ಷಗಳು ತುಂಬಿದ ಸ್ತ್ರಿ, ಪುರುಷರಿಗೆಲ್ಲರಿಗೊ ಮತ ಹಾಕುವ ಹಕ್ಕು ಇದೆ. ಇವರು ತಮ್ಮ ಹೆಸರನ್ನು ತಾವು ವಾಸಿಸುವ ಪ್ರದೇಶಗಳಲ್ಲಿ ಮತದಾರರಾಗಿ ನಮೋದು ಮಾಡಿ ಕೊಳ್ಳುತ್ತಾರೆ. ಒಂದು ನಿಯೋಜಿತ ವರ್ಗದಲ್ಲಿ ಓಟ್ಟು ದಾರರೆಲ್ಲರೂ ಒಬ್ಬ ಸದಸ್ಯನಿಗೆ ಮಾತ್ರವೇ ಮತಚಲಾಯಿಸಿ ಶಾಸನ ಸಭೆಗೆ ಆಯ್ಕೆ ಮಾಡುತ್ತಾರೆ.

ಒಂದೊಂದು ನಿಯೋಜಿತ ವರ್ಗದಲ್ಲಿ ಅನೇಕ ಗ್ರಾಮಗಳು ಪಟ್ಟಣಗಳು ನಗರಗಳು ಇರುತ್ತವೆ ವಿಜಯವಾಡದಂತಹ ದೊಡ್ಡ ನಗರದಲ್ಲಿ ಮೂರು ನಿಯೋಜಿಕ ವರ್ಗಗಳಾಗಿ ವಿಭಜನೆ ಗೊಂಡಿರುತ್ತವೆ. ಆಂದ್ರ ಪ್ರದೇಶಚಿತ್ರವನ್ನು ವಿಜಯನಗರ ಜಿಲ್ಲೆ ಚಿತ್ರ ಪಟವನ್ನು ನೋಡಿರಿ. ಹೆಚ್ಚು ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ ಹೆಚ್ಚು ನಿಯೋಜಿಕ ವರ್ಗಗಳು, ಕಡಿಮೆ ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ ಕಡಿಮೆ ನಿಯೋಜಿಕ ವರ್ಗಗಳಿರುವುದು ನಾವು ಗಮನಿಸಬಹುದು.

ಪಟ–1 : ತೆಲಂಗಾಣದ ವಿಧಾನ ಸಭ ಕ್ಷೇತ್ರಗಳು



SCERT TELANGANA

ತೆಲಂಗಾಣದಲ್ಲಿನ ಉಭಯ ಸಭೆಗಳಿರುವ ರಾಜ್ಯ ಶಾಸನ ಸಭೆ ಕಾನೂನು ತಯಾರಿಸುತ್ತದೆ.		
ಸಭೆ	**ಹೆಸರು**	**ಸಂಕ್ಷಿಪ್ತಹೆಸರು**
ಶಾಸನ ಸಭೆ	ಶಾಸನ ಸದಸ್ಯ	ಎಮ್. ಎಲ್.ಎ
ಶಾಸನ ಮಂಡಲಿ	ಶಾಸನ ಮಂಡಲಿ ಸದಸ್ಯ	ಎಮ್.ಎಲ್.ಸಿ

ಎಮ್.ಎಲ್.ಎ. ಚುನಾವಣೆಗಳು :

ಸಾಧಾರಣವಾಗಿ ರಾಜ್ಯ ಶಾಸನ ಸಭೇ ಚುನಾವಣೆಗಳು ಪ್ರತಿ 5 ವರ್ಷಗಳಿಗೆ ಒಂದು ಸಾರಿ ನಡೆಯುತ್ತವೆ. ಶಾಸನ ಸಭೆಗೆ ಸ್ಪರ್ಧಿಸಬೇಕೆಂಬುವರು ಈ ಚುನಾವಣೆಗಳಲ್ಲಿ ಪಾಲ್ಗೋಳ್ಳುತ್ತಾರೆ. ಅನೇಕ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸುತ್ತವೆ. ಯಾವ ರಾಜಕೀಯ ಪಕ್ಷಕ್ಕೆ ಸೇರಿದವರಾಗಲಿ ಸ್ವತಂತ್ರ ಅಭ್ಯರ್ಥಿಗಳಾಗಿ ನಿಲ್ಲಬಹುದು. ಇವರನ್ನು "ಸ್ವತಂತ್ರ ಅಭ್ಯರ್ಥಿಗಳು ಎಂದು ಕರೆಯುತ್ತಾರೆ. ಈ ಚುನಾವಣೆಯಲ್ಲಿ ಭಾಗವಹಿಸುವ ಅರ್ಹರು : ಭಾರತದೇಶದ ಪೌರನಾಗಿರ ಬೇಕು 25 ವರ್ಷ ತುಂಬಿರಬೇಕು. ಯಾವುದೇ ಲಾಭದಾಯಕವಾದ ಸರ್ಕಾರಿ ಪದವಿಗಳಲ್ಲಿರಬಾರದು. ಕಾನೂನು ನಿರ್ದೇಶಿಸಿದ ಇತರ ಅರ್ಹತೆಗಳನ್ನು ಹೊಂದಿರಬೇಕು.

ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಪ್ರಧಾನ ಪಾತ್ರ ವಹಿಸುತ್ತವೆ. ಎಲ್ಲಾ ರಾಜಕೀಯ ಪಕ್ಷಗಳೂ, ಅಭ್ಯರ್ಥಿಗಳು ತಮ್ಮ ತಮ್ಮ ಚುನಾವಣೆ ಪ್ರಕಟಣೆ ಪತ್ರವನ್ನು (Electionmanifesto) ಪ್ರಕಟಿಸುತ್ತವೆ ಅಂದರೆ ತಾವು ಯಾವ ಯಾವ ಕಾರ್ಯಕ್ರಮಗಳನ್ನು ಭವಿಷ್ಯತ್ತಿನಲ್ಲಿ ಕೈಗೊಳ್ಳುವರೊ ? ಯಾವ ಯಾವ ಭರವಸೆಗಳನ್ನು ತಮ್ಮ ನಿಯೋಜಕ ವರ್ಗ ಪ್ರಜೆಗಳಿಗೆ ವಿವರಿಸುತ್ತಾರೆ. ಅಭ್ಯರ್ಥಿಗಳು, ಅವರನ್ನು ಪ್ರೋತ್ಸಾಹಿ ಸುವವರು ಸಭೆಗಳನ್ನು ನಿರ್ವಹಿಸಿ ಇಲ್ಲವೆ ಮನೆ ಮನೆಗಳಿಗೆ ಬೇಟಿ ನೀಡುತ್ತ ಚುನಾವಣೆ ಪ್ರಚಾರವನ್ನು ಮಾಡುತ್ತಾರೆ.

- ನಿಮ್ಮ ಪ್ರಾಂತಗಳಲ್ಲಿ, ನಿಮ್ಮ ರಾಜ್ಯಗಳಲ್ಲಿನ ರಾಜಕೀಯ ಪಕ್ಷಗಳ ಗುರುತು (ಚಿಹ್ನೆ) ಗಳ ಪಟ್ಟಿಯನ್ನು ತಯಾರುಮಾಡಿರಿ.
- ನೀನೆ ನಿಮ್ಮ ಜಿಲ್ಲೆಯಿಂದ ಚುನಾವಣೆಗಳಲ್ಲಿ ಸ್ಪರ್ಧಿಸುವಂತಿದ್ದರೆ ನಿಮ್ಮ ಜಿಲ್ಲೆಯ ಪ್ರಜೆಗಳಿಗಾಗಿ ನೀನು (Manifesto) ಎಂತಹ ಚುನಾವಣೆ ಕಾರ್ಯಚರಣೆ ಯೋಜನೆಯನ್ನು ತಯಾರುಮಾಡುವೆ?
- ಚುನಾವಣೆಗಳಲ್ಲಿ ಭಾಗವಹಿಸಬೇಕೆಂದರೆ ಹೆಚ್ಚಿನ ಮಟ್ಟದಲ್ಲಿ ಹಣ ಖರ್ಚು ಮಾಡಬೇಕಾಗಿ ಬರುತ್ತದೆ. ಇದು ಕೇವಲ ಶ್ರೀಮಂತರಿಗೆ ಮಾತ್ರ ಸಾಧ್ಯವೆಂದು ಕೆಲವರು ಅಭಿಪ್ರಾಯ ನೀನು ಇದನ್ನು ಸಮ್ಮತಿಸುವೆಯಾ?
- ಕೇವಲ ಶ್ರೀಮಂತ ವ್ಯಕ್ತಿಗಳು ಮಾತ್ರ ಚುನಾವಣೆ ಗಳಲ್ಲಿ ಭಾಗವಹಿಸಿದರೆ ಶಾಸನ ಸಭೆಗಳಲ್ಲಿ ತೆಗೆದುಕೊಳ್ಳುವ ನಿರ್ಣಯಗಳ ಮೇಲೆ ಅದು ಹೇಗೆ ಪ್ರಭಾವ ಬೀರುತ್ತದೆ ?

ಚುನಾವಣೆಯ ದಿನ ಪ್ರಜೆಗಳು ಒಬ್ಬರ ನಂತರ ಮತ್ತೊಬ್ಬರು ಮತ ಹಾಕುತ್ತಾರೆ. ಪೋಲಿಂಗ್ ಭೂತ್ ಅಧಿಕಾರಿ ಮತದಾರರ 'ಗುರುತಿನ ಚೀಟಿ [Identity Card] ಪರಿಶೀಲಿಸುತ್ತಾನೆ. ಸಾಧಾರಣವಾಗಿ ಚುನಾವಣೆ ಕಮಿಷನ್ ಮತದಾರರಿಗೆಲ್ಲ ಗುರುತಿನ ಚೀಟಿಯನ್ನು ಜಾರಿ ಮಡುತ್ತದೆ. ಈ ಕಾರ್ಡುಗಳನ್ನು ಅಧಿಕಾರಿಗೆ ತೋರಿಸಬೇಕು ಮತದಾರರು ತಾವು ಯಾರಿಗೆ ಓಟು ಹಾಕುವುದು ಹೇಳಬಾರದು ಏಕೆಂದರೆ ಮತ ಬಹಳ ರಹಸ್ಯವಾಗಿ ಹಾಕ ಬೇಕಾಗಿರುವಂತಹದು.

- ಮತವನ್ನು ಬಹಳ ರಹಸ್ಯವಾಗಿಡಬೇಕೆಂದು ಏಕೆ ಭಾವಿಸುತ್ತೀಯಿ ?

- ಚುನಾವಣೆ ಕಮಿಷನ್ ಪ್ರಚಾರ ಪಡಿಸಿದ ಕ್ಯಾಲೆಂಡರ್‌ನಲ್ಲಿ ಈ ಮೇಲಿನ ಚಿತ್ರಗಳು ಇವೆ. ಅವು ದೇಶದ ಬೇರೆ ಬೇರೆ ಸಮಯಗಳಲ್ಲಿ ಚುನಾವಣೆಗೆ ಸಂಬಂಧಿಸಿದ ವಿಭಿನ್ನ ಅಂಶಗಳ ಬಗ್ಗೆ ತಿಳಿಸುತ್ತವೆ. ಇದರ ಆಧಾರವಾಗಿ ಕಳೆದ ಕೆಲವು ವರ್ಷಗಳಿಂದ ಬರುತ್ತಿರುವ ಬದಲಾವಣೆಗಳನ್ನು ನಿಮ್ಮ ತಂದೆ ತಾಯಿರೊಂದಿಗೆ, ಉಪಾಧ್ಯಾಯರೊಂದಿಗೆ ಚರ್ಚಿಸಿರಿ.

SCERT TELANGANA

ಚಿತ್ರ 16.2



- ನಿಮ್ಮ ತಂದೆ ತಾಯಿಗಳಿಗೆ ಕೊಟ್ಟ ಪೋಟೊ ಗುರುತಿನ ಚೀಟಿಯನ್ನು ಪರಿಶೀಲಿಸಿ ನಿನ್ನ ಕಲ್ಪನಾ ಶಕ್ತಿಯಿಂದ ಗುರುತಿನ ಚೀಟಿಯನ್ನು ನಿನ್ನ ವಿವರಗಳಿಂದ ತಯಾರಿಸು.

ಚುನವಣೆಯ ದಿನ ಮತ ಹಾಕಿದ ನಂತರ ಎಣಿಕೆಯ ದಿನ ಈ ಮತಗಳನ್ನೆಲ್ಲಾ ಲೆಕ್ಕ ಹಾಕಿ ಹೆಚ್ಚು ಮತ ಪಡೆದ ವ್ಯಕ್ತಿಯನ್ನು ಜಯಗಳಿಸಿದ ವ್ಯಕ್ತಿ (ಗೆದ್ದಹಾಗೆ) ಎಂದು ಪ್ರಕಟನೆ ನೀಡುತ್ತಾರೆ.

- ಒಂದು ನಿಯೋಜಿಕ ವರ್ಗದಲ್ಲಿ ಸುಮಾರು 1,50,000 ಜನ ಮತದಾರರು ಇದ್ದಾರೆಂದು ಬಾವಿಸೋಣ ವಿವಿಧ ಅಭ್ಯಾರ್ಥಿಗಳಿಗೆ ಬಂದ ಮತಗಳನ್ನು ಈ ಕೆಳಗೆ ಕೊಟ್ಟಿದ್ದಾರೆ. ಇವರಲ್ಲಿ ಯಾರು ಜಯಗಳಿಸಿದರೆಂದು ನೀನು ಪ್ರಕಟಿಸುವೆ?





ಎಲ್ಲಮ್ಮ	–	45,00
ರಾಘವ	–	44,00
ನರಸಿಂಹ	–	16,00
ಗುಲಾಂ ಮಹಮ್ಮದ್	–	20,00
ಬಾದೆಯ್ಯ	–	15,00
ಪೂಜ	–	10,00

- ಗೆದ್ದ ಅಭ್ಯಾರ್ಥಿಗಳು ತಮ್ಮ ನಿಯೋಜಿಕ ವರ್ಗದ ಜನರ ಅಭಿಪ್ರಾಯಗಳಿಗೆ ಅವಸರಗಳಿಗೆ ಅನುಗುಣವಾಗಿ ಯಾವ ಆಧಾರದ ಮೇಲೆ ಪ್ರಾತಿನಿದ್ಯವಹಿಸುತ್ತಾರೆಂದು ನೀನು ಭಾವಿಸುತ್ತಿರುವೆ? ನಿಮ್ಮ ಶಿಕ್ಷಕರ ಸಹಾಯದಿಂದ ತಿಳಿದುಕೊಳ್ಳಿ.
- ನಿಮ್ಮ ನಿಯೋಜಿಕ ವರ್ಗ ಹೆಸರು .....
- ನಿಮ್ಮ ಜಿಲ್ಲೆಯಲ್ಲಿನ ಯಾವುದಾದರೂ ಇತರ ಮೂರು ನಿಯೋಜಿಕ ವರ್ಗಗಳನ್ನು ಗುರುತಿಸಿರಿ.
  ....., ..., ...
- ನಿಮ್ಮ ಶಾಸನ ಸದಸ್ಯನ ಹೆಸರು .....
- ನಿಮ್ಮ ಜಿಲ್ಲೆಯಲ್ಲಿ ರಿಜರ್ವ್ ಆದ ನಿಯೋಜಿಕ ವರ್ಗಗಳನ್ನು ಗುರುತಿಸಿರಿ.
- ನಿಮ್ಮ ಕುಟುಂಬದಲ್ಲಿ ಕೊನೆಯಲ್ಲಿ ನಡೆದ ಚುನಾವಣೆಯಲ್ಲಿ ಯಾರು ಯಾರು ಮತ ಚಲಾಯಿಸಿದರು ? .....
  ....., ...,

SCERT TELANGANA

ಸರ್ಕಾರ ನಿರ್ಮಾಣ :

ತೆಲಂಗಾಣದಲ್ಲಿ 119 ಶಾಸನ ಸಭೆ ನಿಯೋಜಕ ವರ್ಗಗಳಿದ್ದಾ ವೆಂದು ಓದಿದ್ದೇವಲ್ಲಾ. ಚುನಾವಣೆಯ ನಂತರ ಏನು ನಡೆಯುತ್ತದೆ ? ಪಟ್ಟಿ - 1ರಲ್ಲಿ ನೋಡಿ ಚುನಾವಣೆಗಳ ಫಲಿತಾಂಶ ಗಳನ್ನು ಪರಿಶೀಲಿಸಿರಿ.

ರಾಜಕೀಯ ಪಕ್ಷ–ಎ 75 ಸ್ಥಾನ ಗಳನ್ನು ಗೆದ್ದುಕೊಂಡು ಒಟ್ಟು ಸ್ಥಾನಗಳಲ್ಲಿ ಅರ್ಧಕ್ಕಿಂತಲು ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡ ಪಾರ್ಟಿಗೆ ಮೆಜಾರಿಟಿ/ ಅದಿಕ್ಯತೆ ಬಂದಂತೆ ಬಾವಿಸಬಹುದು. ಯಾವಾದರೂ ಕಾನೂನು ಮಾಡಬೇಕಾಗಿ ಬಂದಲ್ಲಿ ಅರ್ಧಕ್ಕಿಂತಲು ಹೆಚ್ಚು ಸದಸ್ಯರು ಅದನ್ನು ಸಮರ್ಥಿಸುವ ಅವಕಾಶ ಇರುತ್ತದೆ. ಮೆಜಾರಿಟಿಯಿಂದ ಬಂದ ಪಾರ್ಟಿ (ಈ ಮೇಲಿನ ಪಟ್ಟಿ ಪ್ರಕಾರ ಪಾರ್ಟಿ) ಸದಸ್ಯರು ತಮ್ಮಲ್ಲಿ ಒಬ್ಬರನ್ನು ನಾಯಕನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಗವರ್ನರ್ ಆ ನಾಯಕನನ್ನು ರಾಜ್ಯ ಮುಖ್ಯ ಮಂತ್ರಿಯಾಗಿ ನಿಯಮಿಸುತ್ತಾರೆ. ತಮ್ಮ ಪಾರ್ಟಿ ಶಾಸನ ಸದಸ್ಯರು/ ಶಾಸನ ಮಂಡಳಿ ಸದಸ್ಯರಿಂದ ಕೆಲವರನ್ನು ಮಂತ್ರಿಗಳಾಗಿ ಆಯ್ಕೆ ಮಾಡುತ್ತಾರೆ. ಈ ಮಂತ್ರಿಗಳು, ಮುಖ್ಯಮಂತ್ರಿ ಜೊತೆ ಸೇರಿ ಕ್ಯಾಬಿನೆಟ್ ಅಥವಾ ಮಂತ್ರಿಮಂಡಳಿ ಯಾಗಿ ಏರ್ಪಡುತ್ತದೆ. ಈ ಮಂತ್ರಿ ಮಂಡಲಿ / ಕ್ಯಾಬಿನೆಟ್‌ನ್ನು ಪ್ರಭುತ್ವ (ಸರ್ಕಾರ) ಎಂದು ಕೂಡ ಕರೆಯುತ್ತಾರೆ. ಈ ಮಂತ್ರಿ ಮಂಡಳಿ, ಕಾನೂನನ್ನು ಅಭಿವೃದ್ಧಿ ಪಥಕಗಳನ್ನು ಜಾರಿ ಗೊಳಿಸಲು, ಶಾಸನ ಸಭೆಯೊಂದಿಗೆ ಹೊಸ ಕಾನೂನು ನಿರ್ಮಿಸಿ ಜಾರಿ ಗೊಳಿಸಲು ಜವಬ್ದಾರಿ ವಹಿಸುತ್ತದೆ.

ಪಟ್ಟಿ1	ರಾಜಕೀಯ ಪಕ್ಷದ ಹೆಸರು	ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ
1	ರಾಜಕೀಯ ಪಾರ್ಟಿ - ಎ	75
2	ರಾಜಕೀಯ ಪಾರ್ಟಿ - ಬಿ	17
3	ರಾಜಕೀಯ ಪಾರ್ಟಿ - ಸಿ	10
4	ರಾಜಕೀಯ ಪಾರ್ಟಿ - ಡಿ	7
5	ರಾಜಕೀಯ ಪಾರ್ಟಿ - ಇ	6
6	ರಾಜಕೀಯ ಪಾರ್ಟಿ - ಎಫ್	4
	ಒಟ್ಟು	119

* ಚುನಾವಣೆ ಫಲಿತಾಂಶಗಳ ಪಟ್ಟಿ–1ನ್ನು ನೋಡಿರಿ.

* ಇದು ಬೇರೆ ರಾಜ್ಯಕ್ಕೆ ಸಂಬಂಧಿಸಿದ 119 ಶಾಸನ ಮಂಡಳಿಗಳ ಸಮಾಚಾರ. ಇವುಗಳಲ್ಲಿ ಯಾವ ರಾಜಕೀಯ ಪಕ್ಷ ಸರ್ಕಾರವನ್ನು ಏರ್ಪಡಿಸುತ್ತದೆಯೋ ತಿಳಿಸಿರಿ.



ತೆಲಂಗಾಣ ಚುನಾವಣಾ ಆಯೋಗದವರ ವೆಬ್‌ಸೈಟ್
http://ceotelangana.nic.in/

ಪಟ್ಟಿ3	ರಾಜಕೀಯ ಪಕ್ಷದ ಹೆಸರು	ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ
1	ರಾಜಕೀಯ ಪಕ್ಷ - Abcd	45
2	ರಾಜಕೀಯ ಪಕ್ಷ – Mnop	33
3	ರಾಜಕೀಯ ಪಕ್ಷ – Wxyz	26
4	ರಾಜಕೀಯ ಪಕ್ಷ – Stuv	15
	ಒಟ್ಟು	119

SCERT TELANGANA

◆ **ಉದಾಹಾರಣೆಗೆ ಚುನಾವಣೆ ನಂತರ ಪಟ್ಟಿ 3ರಲ್ಲಿ ತೋರಿಸಿ ದಂತೆ ಸ್ಥಾನಗಳನ್ನು ಗೆದ್ದು ಕೊಂಡಿದ್ದರೆ ಪ್ರಭುತ್ವ ವನ್ನು ಹೇಗೆ ಏರ್ಪಡಿಸಬಹುದು ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿರಿ.**

ಯಾವ ಕಾರಣದಿಂದಾಗಲೀ, ಯಾವ ಪಾರ್ಟಿ ಯಿಂದಾಗಲೀ ಅರ್ಧಕ್ಕಿಂತ ಹೆಚ್ಚು ಮೆಜಾರಿಟಿ ಬರದಿದ್ದಲ್ಲಿ ಎರಡು, ಅಥವಾ ಅದಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಸೇರಿ ಪ್ರಭುತ್ವ ವನ್ನು (ಸರ್ಕಾರ) ಏರ್ಪಡಿಸುತ್ತವೆ. ಇದನ್ನು ಸಂಕೀರ್ಣ ಸರ್ಕಾರಎನ್ನುತ್ತಾರೆ.

ಮಂತ್ರಿ ಮಂಡಳಿ :

ಮುಖ್ಯ ಮಂತ್ರಿ ಮಂಡಳದಲ್ಲಿನ ಸದಸ್ಯರಿಗೆ ವಿವಿಧ ಶಾಖೆಗಳನ್ನು ಸೀಮಿತ ಗೊಳಿಸುತ್ತಾನೆ. ಒಬ್ಬರನ್ನು ಆರ್ಥಿಕ ಮಂತ್ರಿಯಾಗಿ, ಮತ್ತೊಬ್ಬರನ್ನು ವಿದ್ಯಾಶಾಖೆಮಂತ್ರಿ ಅಥವಾ ಪ್ರಜಾಭಿವೃದ್ಧಿ ಶಾಖ ಮಂತ್ರಿಯನ್ನಾಗಿ (Public Work) ನಿಯಮಿಸುತ್ತಾನೆ. ಈ ಮಂತ್ರಿಗಳು ತಮ್ಮ ಅದೀನದಲ್ಲಿರುವ ಅಧಿಕಾರಿಗಳಿಗೆ ಪ್ರಭುತ್ವದ ವಿಧಿವಿಧಾನಗಳನ್ನು ತಿಳಿಸುವ ಮೂಲಕ ನಿರ್ದೇಶಿಸುತ್ತಾರೆ. ಈ ವಿಧಿ ವಿಧಾನಗಳನ್ನು ಯೋಜನೆ ತಯಾರಿಸಿ ಕಾನೂನು ಸಭೆಯಲ್ಲಿ ಪ್ರವೇಶ ಪಡಿಸಿ ಆಮೋದಿಸುವವರೆಗೂ ಮಂತ್ರಿವರ್ಗ ಬಾಧ್ಯತೆ ವಹಿಸುತ್ತದೆ. ಕಾನೂನು ಸಭೆ ಅಮೋದನೆ ಹೊಂದಿದ ನಂತರ ಆ ಶಾಖೆಯ ಅಧಿಕಾರಿಗಳು ಪ್ರಭುತ್ವ ವಿಧಾನಗಳನ್ನು, ಯೋಜನೆಗಳನ್ನು ಜಾರಿಗೆ ತರಲು ಅವಸರವಾದ ನಿಬಂಧನೆಗಳನ್ನು ವಿಧಿವಿಧಾನಗಳನ್ನು ತಯಾರಿಸಿ ಜಾರಿಗೊಳಿಸುತ್ತಾರೆ. .

ಸಾಧಾರಣವಾಗಿ ತಮ್ಮ ತಮ್ಮ ಶಾಖೆಗಳ ವಿಧಿ ವಿಧಾನಗಳನ್ನು ಆ ಮಂತ್ರಿಗಳು ಸ್ವತಂತ್ರವಾಗಿ ನಿರ್ಣಯಿಸಿದರೂ ಮುಖ್ಯವಾದ ನಿರ್ಣಯಗಳನ್ನು ಮಾತ್ರ ಮಂತ್ರಿಮಂಡಲದ ಸದಸ್ಯರೆಲ್ಲರೂ ಸೇರಿ ನಿರ್ಣಯಿಸುತ್ತಾರೆ. ಆದ್ದರಿಂದ ಯಾವುದೇ ತಪ್ಪು ನಡೆದರೂ ಅದಕ್ಕೆ ಆ ಮಂತ್ರಿವರ್ಗದವರೆಲ್ಲಾ ಮುಖ್ಯಮಂತ್ರಿ ಜೊತೆ ಸೇರಿ ಜವಾಬ್ದಾರಿ ವಹಿಸುತ್ತಾರೆ. ಅದೇ ವಿಧವಾಗಿ ಉತ್ತಮ ನಿರ್ಣಯಗಳನ್ನು ತೆಗೆದುಕೊಂಡಾಗ ಕೂಡ ಆ ಪ್ರತಿಷ್ಠೆಯನ್ನು ಎಲ್ಲರ ಕೃಷಿಯ ಪ್ರತಿಫಲವೆಂದು ಭಾವಿಸುತ್ತಾರೆ.

ರಾಜ್ಯ ಶಾಸನ ಸಭೆ :

ಶಾಸನ ಸಭೆ ಸದಸ್ಯರೆಲ್ಲ ಸೇರಿ ತಮ್ಮಲ್ಲಿ ಒಬ್ಬರನ್ನು ಸಭೆಗೆ ಅಧ್ಯಕ್ಷರಾಗಿ (ಸ್ಪೀಕರ್)ಆಯ್ಕೆ ಮಾಡುತ್ತಾರೆ. ಇವರು ಸಭೆಗಳನ್ನು ಏರ್ಪಡಿಸುತ್ತಾರೆ. ಈತನು / ಅವಳು ಯಾವ ಯಾವ ಸಮಸ್ಯೆಗಳನ್ನು ಯಾರು, ಯಾವಾಗ ಪ್ರವೇಶ ಪಡಿಸಬೇಕು ? ಯಾರ ನಂತರ ಯಾರು ಮಾತನಾಡ ಬೇಕು, ಎಂಬ ವಿಷಯಗಳನ್ನು ನಿರ್ಣಯಿಸುತ್ತಾರೆ. ಯಾರಾ ದರೂ ತನ್ನ ನಿರ್ಣಯಗಳನ್ನು ಉಲ್ಲಂಘಿಸಿ ವ್ಯವಹರಿಸಿದರೆ ಅಂಥವರನ್ನು ಶಿಕ್ಷಿಸುವ ಅಧಿಕಾರ ಅಧ್ಯಕ್ಷನಿಗಿದೆ.

ಮೇಲೆ ತಿಳಿಸಿದಂತೆ ಸರ್ಕಾರ ಮಾಡುವ ಎಲ್ಲಾ ಕಾನೂನುಗಳೂ, ವಿಧಾನಗಳು (**Policies**) ವಿಧಿಸುವ ತೆರಿಗೆಗಳು ಶಾಸನ ಸಭೆಯ ಆ ಮೊದನೆ ಹೊಂದಬೇಕು ಆಮೋದಿಸುವ ಮೊದಲೆ ಶಾಸನ ಸಭೇ ಸದಸ್ಯರು ಆಯಾ ಅಂಶಗಳನ್ನು ಆಳವಾಗಿ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಿ ಪಡಿಸುತ್ತಾರೆ. ಲಾಭ ನಷ್ಟಗಳನ್ನು ಆಳವಾಗಿ ಚರ್ಚಿಸುವುದು ನಡೆಯುತ್ತದೆ. ಈ ಚಟುವಟಿಕೆಗಳನ್ನು ಟಿ.ವಿ. ಮೂಲಕ, ಪ್ರತಿಕೆಗಳ ಮೂಲಕ ಪ್ರಜೆಗಳಿಗೆ ತಿಳುವಳಿಕೆ ನೀಡುತ್ತವೆ.

ಶಾಸನ ಸದಸ್ಯರು ತಮ್ಮ ನಿಯೋಜಿಕ ವರ್ಗ ಪ್ರಜೆಗಳು ಎದುರಿಸುವ ಸಮಸ್ಯೆಗಳನ್ನು ಆಗಿಂದಾಗ್ಗೆ ಸಭೆಯ ದೃಷ್ಟಿಗೆ ತರುತ್ತವೆ ಸಂಬಂಧಿಸಿದ ಮಂತ್ರಿಗಳು ಆಯಾ ಸದಸ್ಯರು ಕೇಳಿದ ಸಮಸ್ಯೆಗಳಿಗೆ ಅವಸರವಾದರೆ ವಿಚಾರಣೆ ಮಾಡಿ ಸಮಾಧಾನಗಳನ್ನು ನೀಡುತ್ತಾರೆ. ಮಂತ್ರಿಗಳು ವೈಯಕ್ತಿವಾಗಿಯೂ, ಮುಖ್ಯ ಮಂತ್ರಿಯು ಸಹ ಮಂತ್ರಿಮಂಡಲಿ ಸದಸ್ಯರು ಸಮಗ್ರವಾಗಿ ಶಾಸನ ಸದಸ್ಯರು ಸಭೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುವ ಜವಾಬ್ದಾರಿ ನೀಡುತ್ತಾರೆ. ಒಂದು ವೇಳೆ ಮಂತ್ರಿ ನೀಡುವ ಉತ್ತರ ತೃಪ್ತಿಕರವಾಗಿ ಇಲ್ಲದಿದ್ದರೆ ಪ್ರತಿ ಪಕ್ಷ ಸದಸ್ಯರು ಮಂತ್ರಿಗೆ ರಾಜಿನಾಮೆ ಮಾಡಬೇಕೆಂದು ಒತ್ತಾಯಿಸುತ್ತಾರೆ.

ಕಾನೂನು ನಿರ್ಮಾಣ (Making of Law) :

ಶಾಸನ ಸಭೆಗಳು ಕಾನೂನುಗಳನ್ನು ಯಾವ ವಿಧವಾಗಿ ತಯಾರಿಸುತ್ತವೆ ? ಸಾಧಾರಣವಾಗಿ ಶಾಸನ ಸಭೆಯಲ್ಲಿ ಸಂಖ್ಯಾಬಲ ಇರುವ ಅಧಿಕಾರ ಕಾನೂನು ನಿರ್ಮಾಣ ಮಾಡುತ್ತದೆ. ಕೆಲವುಸಲ ಯಾವ ಪಾರ್ಟಿ ಸದ್ಯಸನಾದರೂ ಒಂದು ಕಾನೂನು ತಯಾರಿಸು ಎಂದು ಸಭೆಯಲ್ಲಿ ಪ್ರತಿಪಾದಿಸಬಹುದು. ಅದರೆ ಪಾರ್ಟಿ ಸದಸ್ಯರ ಬೆಂಬಲ ಹೊಂದಿದರೆ ಅದು ಸಭೆಯ ಆಮೋದನೆ ಪಡೆಯುತ್ತದೆ.

ಸಭೆ ಆಮೋದನೆ ಹೊಂದುವ ಮೊದಲು ಕಾನೂನುನ್ನು ಬಿಲ್ಲು ಎನ್ನುತ್ತಾರೆ. ಉಭಯ ಸಭೆಗಳ ಆಮೋದನೆ ಹೊಂದಿದ ಬಿಲ್ಲು ಗವರ್ನರ್ ಆಮೋದನೆ ಕೂಡ ಹೊಂದಿದ ನಂತರ ಕಾನೂನಾಗಿ ಬದಲಾಗುತ್ತದೆ. ಇದನ್ನು ಶಾಸನ ಸಭೆ ಮಾಡಿದ ಶಾಸನ (ಎಸಿಟಿ) ಎನ್ನುವರು

SCERT TELANGANA

ಸಂಬಂದಿಸಿದ ಮಂತ್ರಿ ರೂಪಿಸಿದ ಕಾನೂನನ್ನು ಬಿಲ್ಲಿನ ರೂಪದಲ್ಲಿ ಸಭೆಯಲ್ಲಿ ಪ್ರವೇಶ ಪಡಿಸಿ ವಿಸ್ತಾರವಾಗಿ ವಿವರಿಸುತ್ತಾನೆ. ಇಲ್ಲಿ ಬಹಳ ಆಳವಾದ ಚರ್ಚೆ ನಡೆಯುತ್ತದೆ. ಪ್ರತಿಪಕ್ಷ ಶಾಸನ ಸದಸ್ಯರ ಕಡೆಯಿಂದ ತೀವ್ರ ತೊಂದರೆಗಳು ಎದುರಾಗುತ್ತವೆ.

ಒಂದೊಂದು ಸಾರಿ ಸಲಹೆಗಳು, ಸೂಚನೆಗಳನ್ನು ಕೊಡುತ್ತಾರೆ. ಅಧಿಕಾರ ಪ್ರತಿಪಕ್ಷ ಶಾಸನ ಸದಸ್ಯರೊಂದಿಗೆ ಒಂದು ಕಮಿಟಿ ತಯಾರಿಸಿ ಸಲಹೆಗಳನ್ನು ಬದಲಾವಣೆಗಳನ್ನು ಅಧ್ಯಯನ ಮಾಡುತ್ತಾರೆ. ಬದಲಾವಣೆ, ಸೇರ್ಪಡೆಗಳು ಜರುಗಿದ ನಂತರ ಆ ಬಿಲ್ಲು ಕ್ಯಾಬಿನೆಟ್ ಅನುಮೋದನೆ ಹೊಂದಿ, ಅಸೆಂಬಲಿ ವಿಧಾನ ಸಭೆಯ ಮುಂದೆ ಓಟಿಂಗ್‌ಗೆ ಬರುತ್ತದೆ. 50 ಶೇಕಡಕ್ಕಿಂತ ಹೆಚ್ಚುಜನ ಅನಮೋದನೆ ಹೊಂದಿದ ನಂತರ ಆ ಬಿಲ್ಲನ್ನು ಎರಡನೇ ಸಭೆ ಯಾದ ವಿಧಾನ ಪರಿಷತ್ತು ಕೂಡ ಅನುಮೋದಿಸಿದರೆ ಅದನ್ನು ಗವರ್ನರ್ ಅನುಮೋದನೆ ಮೇರೆಗೆ ಕಳಿಸುತ್ತಾರೆ. ಗವರ್ನರ್ ಅನುಮೋದನೆ ಹೊಂದಿದ ನಂತರ ಆ ಬಿಲ್ಲು ಕಾನೂನಾಗಿ ಅಥವಾ ಶಾಸನವಾಗಿ ಬದಲಾಗಿ ವಿಧಾಯಕ ಸಭೆ (ಗೆಜಿಟ್) ಮುದ್ರೆಯಾಗುತ್ತದೆ.

ತೆಲಂಗಾಣ ಶಾಸನ ಮಂಡಳಿ:

2014 ರವರೆಗೆ ತೆಲಂಗಾಣ ಮತ್ತು ಆಂಧ್ರ ಪ್ರದೇಶಗಳು ಒಂದೇ ರಾಜ್ಯವಾಗಿ ಇದ್ದವು ಆಂಧ್ರ ಪ್ರದೇಶ ಕಾನೂನು ಸಭೆಗಳಲ್ಲಿ ಎರಡು ಸಭೆಗಳಿದ್ದವು. ಎರಡನೆಯದನ್ನು ಶಾಸನ ಮಂಡಳಿ ಎನ್ನುವರು. ಇದು 1958 ರಲ್ಲಿ ಏರ್ಪಾಟು ಮಾಡಲಾಗಿದೆ. 1985ರ ವರೆಗೆ ಕೆಲಸ ಮಾಡಿ ಮತ್ತೇ 2007 ರಲ್ಲಿ ಏರ್ಪಾಟಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಶಾಶ್ವತ ಸಭೆ. ತೆಲಂಗಾಣ ಶಾಸನ ಮಂಡಳಿಗಳಲ್ಲಿ 40 ಜನ ಸದಸ್ಯರು ಇರುವರು. ಈ ಸದಸ್ಯರನ್ನು 6 ವರ್ಷಗಳ ಕಾಲಕ್ಕೆ ಆಯ್ಕೆ ಮಾಡುತ್ತಾರೆ. ಇವರಲ್ಲಿ 1/3 ಭಾಗ ಸದಸ್ಯರು ಪ್ರತಿ ಎರಡು ವರ್ಷಕ್ಕೊಮ್ಮೆ ಸದಸ್ಯತ್ವಕ್ಕೆ ರಾಜಿನಾಮೆಯನ್ನು ನೀಡುತ್ತಾರೆ. ಇವರನ್ನೇ ಶಾಸನಮಂಡಳಿ ಸದಸ್ಯರು **(M.L.C.)** ಎಂದು ಕರೆಯುತ್ತಾರೆ. ಈ ಸಭೆಗೆ ಪೋಟಿ ಮಾಡುವುದಕ್ಕೆ ಭಾರತದ ಪೌರರಾಗಿರಬೇಕು, 30 ವರ್ಷಗಳು ತುಂಬಿರಬೇಕು. ಯಾವುದೇ ಲಾಭದಾಯಕವಾದ ಕೇಂದ್ರ, ರಾಜ್ಯ ಸರ್ಕಾರ ಹುದ್ದೆಗಳಲ್ಲಿ ಇರಬಾರದು. ಇದಷ್ಟಲ್ಲದೇ ಪಾರ್ಲಮೆಂಟ್ ನಿರ್ಣಯಿಸಿದ ಇತರ ಅರ್ಹತೆಗಳು ಹೊಂದಿರಬೇಕು.

- 1/3ರ ಭಾಗ ಎಂದರೆ 14 ಜನರನ್ನು ಶಾಸನ ಸದಸ್ಯರು ಆಯ್ಕೆ ಮಾಡುತ್ತಾರೆ.
- 1/3 ರ ಭಾಗ ಎಂದರೆ 14 ಮಂದಿ ಸ್ಥಾನಿಕ ಸಂಸ್ಥೆಗಳಾದ ಪಂಚಾಯಿತಿಗಳು ಮುನಿಸಿಪಾಲಿಟಿ ಗಳಿಂದ ಆಯ್ಕೆಯಾದವರು ಆರಿಸುತ್ತಾರೆ.
- 1/12 ರ ಭಾಗ ಎಂದರೆ (3) ಪದವಿದರರನ್ನು ಆಯ್ಕೆ ಮಾಡುತ್ತಾರೆ.
- 1/12ರ ಭಾಗ ಎಂದರೆ (3)ರನ್ನು ಶಿಕ್ಷಕರು ಆಯ್ಕೆಮಾಡುತ್ತಾರೆ.
- 1/6 ರ ಬಾಗ ಎಂದರೆ (6) ರನ್ನು ಗವರ್ನರ್ ನಾಮಿನೇಟ್ ಮಾಡುತ್ತಾರೆ.

ರಾಜ್ಯದಲ್ಲಿ ಯಾವುದೇ ಕಾನೂನನ್ನು ಮಾಡಬೇಕಾದರೆ ಎರಡು ಸಭೆಗಳ ಅನುಮೋದನೆ ತಪ್ಪದೇ ಪಡೆಯಬೇಕು.

ಗವರ್ನರ್ :

ರಾಜ್ಯದ ಗವರ್ನರನ್ನು ಭಾರತ ದೇಶದ ರಾಷ್ಟ್ರಪತಿಯವರು ನಿಯಮಿಸುತ್ತಾರೆ. ಭಾರತ ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರ ಕೆಲಸಮಾಡುವಂತೆ ನೋಡಿಕೊಳ್ಳುವುದು ಗವರ್ನರನ ಜವಾಬ್ದಾರಿ ಗವರ್ನರ್ ಮುಖ್ಯ ಮಂತ್ರಿಯನ್ನು ಸಂವಿಧಾನದ ಪ್ರಕಾರ ನಿಯಮಿಸುತ್ತಾನೆ. ಮಂತ್ರಿ ಮಂಡಲದ ಸದಸ್ಯರನ್ನು ಮಾತ್ರ ಮುಖ್ಯ ಮಂತ್ರಿ ಸಲಹೆಯ ಮೇರೆಗೆ ನಿಯಮಿಸುತ್ತಾರೆ. ಭಾರತ ಸಂವಿಧಾ ಗವರ್ನರ್‌ಗೆ ರಾಜ್ಯ ಸರ್ಕಾರದ ವ್ಯವಹಾರಗಳಲ್ಲಿ ಕಾರ್ಯ ನಿರ್ವಹಣೆಧಿಕಾರಗಳನ್ನು ಕಲ್ಪಿಸಿದೆ.

ಪ್ರಸ್ತುತ ನಮ್ಮ ರಾಜ್ಯದ ಗವರ್ನರ್ ಯಾರು ?

ರಿಜರ್ವೇಷನ್ ಪದ್ದತಿ (Reservation)

ದಲಿತರು, ಅದಿವಾಸಿಗಳು ಇಂತಹ ಬಲಹೀನ ವರ್ಗದ ಜನರು ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲುವುದು

SCERT TELANGANA

ಬಹಳ ಕಷ್ಟವಾದ ಕೆಲಸ ಈ ವರ್ಗಗಳಿಂದ ಅತಿ ಕಡಿಮೆ ಮಂದಿ ಮಾತ್ರ ಸ್ಪರ್ಧಿಸಿ ಶಾಸನ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಪರಿಶಿಷ್ಟ ಕುಲದವರಿಗೆ ಅಲೆ ಮಾರಿಗಳಿಗೆ ಇರುವ ಪ್ರತಿನಿಧಿತ್ವದ ಪ್ರಾಮುಖ್ಯತೆಯನ್ನು ಗುರುತಿಸಿ ಭಾರತ ಸಂವಿಧಾನ ಇವರಿಗೆ ಕೆಲವು ಪ್ರತ್ಯೇಕ ನಿಯೋಜಕ ವರ್ಗಗಳನ್ನು ಕಲ್ಪಿಸಿದೆ ತೆಲಂಗಾಣ ಶಾಸನ ಸಭೆ ರಿಜರ್ವ್ ಮಾಡಿದ ವಿಧಾನ ಸಭಾ ಕ್ಷೇತ್ರಗಳ ಸಂಖ್ಯೆ

ಒಟ್ಟು : ವಿಧಾನ ಸಭೆಗಳ ಸಂಖ್ಯೆ : 119

ಪರಿಶಿಷ್ಟ ಜಾತಿಯವರಿಗೆ ಸೀಮಿತ

ಗೊಳಿಸಿದ ನಿಯೋಜಿಕವರ್ಗಗಳ ಸಂ: 19

ಷೆಡ್ಯೂಲ್ ಅಲೆಮಾರಿಗಳಿಗೆ ಸೀಮಿತ

ಗೊಳಿಸಿದ ನಿಯೋಜಿಕವರ್ಗಗಳ ಸಂಖ್ಯೆ :12

ಆಂಗ್ಲೋ ಇಂಡಿಯನ್ ಸದಸ್ಯರು : 01

- ಬಹಳ ಜನ ಸ್ತ್ರೀಯರಿಗೆ ಕೂಡ ಈ ವಿಧವಾಗಿ ರಿಜರ್ವೇಷನ್‌ನ್ನು ಕಲ್ಪಿಸಬೇಕೆಂದು ಬಹಳ ಜನ ಅನ್ನುತ್ತಿದ್ದಾರೆ. ಇದರ ಮೇಲೆ ನಿಮ್ಮ ಅಭಿಪ್ರಾಯವೇನು ?

ಬಿಲ್ಲು ರೂಪದಲ್ಲಿ ಪ್ರವೇಶಪಡಿಸಿದ ಕಾಯ್ದೆಯ ಬಗ್ಗೆ ಸಂಬಂಧಿಸಿದ ಸಚಿವರು ಅದರ ಬಗ್ಗೆ ಸವಿವರವಾಗಿ ವಿವರಿಸುತ್ತಾರೆ. ವಿರೋಧ ಪಕ್ಷದ ಶಾಸಕರಿಂದ ತೀವ್ರ ಆಕ್ಷೇಪಣೆಗಳು ಎದುರಾಗುತ್ತವೆ. ಒಂದೊಂದು ಸಲ ಅವರು ಸಲಹೆ ಸೂಚನೆಗಳನ್ನು ನೀಡುತ್ತಾರೆ. ಆಡಳಿತ, ಪ್ರತಿ ಪಕ್ಷದ ಸದಸ್ಯರಿಂದ ಒಂದು ಸಮಿತಿಯನ್ನು ರಚನೆ ಮಡಿ ಸಲಹೆ, ಸೂಚನೆಗಳನ್ನು ಅಧ್ಯಯನ ಮಾಡಲು ಸೂಚಿಸಲಾಗುತ್ತದೆ. ಬದಲಾವಣೆಗಳ ನಂತರ ಆ ಬಿಲ್ಲು ಕ್ಯಾಬಿನೆಟ್ ಸಮ್ಮತಿ ಪಡೆದು, ವಿಧಾನಸಭೆಯಲ್ಲಿ ಮತಕ್ಕೆ ಬರುತ್ತದೆ. ಅರ್ಧಕ್ಕಿಂತ ಹೆಚ್ಚು ಜನರ ಅನುಮೋದನೆ ಪಡೆದು ವಿಧಾನ ಪರಿಷತ್ತಗೆ ಬರುತ್ತದೆ. ವಿಧಾನ ಪರಿಷತ್ತಿನಲ್ಲಿಯೂ ಕೂಡ ಅನುಮೋದನೆ ಲಭಿಸಿದರೆ ಅದನ್ನು ರಾಜ್ಯ ಪಾಲರ ಅನುಮೋದನೆಗಾಗಿ ಕಳುಹಿಸುತ್ತಾರೆ. ರಾಜ್ಯಪಾಲರು ಅನುಮೋದಿಸಿದ ನಂತರ ಅದು ಕಯ್ದೆ ಅಥವಾ ಶಾಸನವಾಗಿ ಗೆಜೆಟನಲ್ಲಿ ಮುದ್ರಿಸುತ್ತಾರೆ.

ಶಾಸನ ಸಭೇಯಲ್ಲಿ ಚರ್ಚೆಗಳು:

ಉದಾ : ಕಾಲ್ಪನಿಕ ಶಾಸನ ಸಭೆಯಲ್ಲಿ ಚರ್ಚೆಗಳು ಹೇಗೆ ನಡೆಯುತ್ತವೆಂದು ನೋಡೋಣ

1. ಶಾಸನ ಸಭ್ಯೆ (ಎಮ್.ಎಲ್.ಎ) :

ಮಾನ್ಯ ಅಧ್ಯಕ್ಷರೆ ಕಳೆದ ಮೂರು ವರ್ಷಗಳಿಂದ ಮಳೆ ಅಭಾವ ಪರಿಸ್ಥಿತಿಯಿಂದ ನನ್ನ ನಿಯೋಜಿಕ ವರ್ಗದಲ್ಲಿನ ಭೂಗರ್ಭಜಲದ ಮಟ್ಟ ಬಹಳ ಕಡಿಮೆಯಾಗಿದೆ. ಸರ್ಕಾರ ದಿನ್ನು ಕುರಿತು ಯವುದೇ ರೀತಿಯ ಕ್ರಮಗಳು ತೆಗೆದುಕೊಂಡಿಲ್ಲ. ಇದರೊಂದಿಗೆ ಕೊಳವೆಬಾವಿಗಳ ಸಂಖ್ಯೆ ಕೂಡ ಹೆಚ್ಚಗಿದೆ. ಈ ವಿಷಯದಲ್ಲಿ ಎಂತಹ ಕ್ರಮ ತೆಗೆದು ಕೊಳ್ಳುತ್ತಿರೊ ಭೂಗರ್ಭಜಲ ಶಾಖೆ ಮಂತ್ರಿಯವರು ವಿವರಿಸಬೇಕೆಂದು ಕೊರುತ್ತಿದ್ದೇನೆ.



ಚಿತ್ರ 16.4

SCERT TELANGANA

2. ಶಾಸಕರು (ಎಮ್.ಎಲ್.ಎ) : ಹೌದು ನನ್ನ ನಿಯೋಜಕ ವರ್ಗದಲ್ಲಿ ಕುಡ ಇದೇ ಪರಿಸ್ಥಿತಿಯಿದೆ ಅಧಿಕಾರಿಗಳ ಕೆಲಸದರೀತಿ ಸಂತೃಪ್ತಿ ಕರವಾಗಿಲ್ಲ ನೀರಿಗಾಗಿ ಜನರು ಮೈಲುಗಟ್ಟಲೆ ದೂರ ನಡೆಯಬೇಕಾಗಿ ಬರುತ್ತಿದೆ.

3. ಶಾಸನ ಸಭ್ಯೆ (ಎಮ್.ಎಲ್.ಎ) : ಮಾನ್ಯ ಅಧ್ಯಕ್ಷರೇ ಕೆರೆಕಟ್ಟೆಗಳನ್ನು ಭದ್ರಗೊಳಿಸಲು ಬೇಕಾದ ನಿಧಿ ಗಳನ್ನು ಒದಗಿಸುವುದು ಹೂಳು ತೆಗೆಸುವುದು ಮಳೆಗಾಲ ದಲ್ಲಿ ಮಳೆ ನೀರನ್ನು ನಿಲ್ಲಿಸಲು ಸರಿಯಾದ ಏರ್ಪಾಟು ಮಾಡಬೇಕು ಕೆರೆಕಟ್ಟೆಗಳಿಗೆ ಹೊಡೆದು ಹೋಗದಂತೆ ಕೆರೆಗಳ ಬದುಗಳ ಮೇಲೆ ಗಿಡಗಳನ್ನು ಬೆಳೆಸಬೇಕು.

4. ಶಾಸಕರು (ಎಮ್.ಎಲ್.ಎ) : ಮಾನ್ಯ ಅಧ್ಯಕ್ಷರೆ ಸರ್ಕಾರಕ್ಕೆ ಪರಿಸ್ಥಿತಿಗಳ ಬಗ್ಗೆ ತಿಳಿದೆ ಇದೆ. ಇನ್ನು ನಷ್ಟ ನಡೆಯದಂತೆ ಸರ್ಕಾರ ಸರಿಯಾದ ಮುಂದು ಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು. ನೀರು ಶೇಖರಣೆ ಕಡಿಮೆ ಯಾದ್ದರಿಂದ ತೊಂದರೆಗೊಳಗಾದ ಮಂಡಲಗಳನ್ನು ಗುರುತಿಸಬೇಕು.

5. ಶಾಸನ ಸಭ್ಯೆ (ಎಮ್.ಎಲ್.ಎ) : ಮಾನ್ಯ ಅಧ್ಯಕ್ಷರೆ ವಿರೋಧ ಪಕ್ಷದ ಸದಸ್ಯರು. ಸರ್ಕಾರದ ಕ್ರಮಗಳನ್ನು ಅಭಿನಂದಿಸುತ್ತಾ ನಿರ್ಮಾಣಾತ್ಮಕ ಸಲಹೆ ಕೊಡಬೇಕೆಂದು ಕೋರುತ್ತಿದ್ದೇನೆ. ಅವರು ಅನವಸರವಾಗಿ ಪ್ರಭುತ್ವವನ್ನು ವಿಮರ್ಶಿಸಬಾರದು ನನ್ನ ನಿಯೋಜಿಕ ವರ್ಗದಲ್ಲಿ ಗುಡ್ಡದ ಇಳಿಜಾರುಗಳಲ್ಲಿ ಕಟ್ಟೆಗಳನ್ನು ನಿರ್ಮಿಸಿದ್ದರಿಂದ ಭೂ ಗರ್ಭಜಲ ಗಣನೀಯವಾಗಿ ಹೆಚ್ಚಾಗಿವೆ. ಪ್ರಭುತ್ವ ಅಧಿಕಾರಿಗಳು ಕೂಡ ಜನರಿಗೆ ನಿಲುಕುವಂತಿದ್ದಾರೆ.

6. ಶಾಸಕರು (ಎಮ್.ಎಲ್.ಎ) : ಗೌರ ಅಧ್ಯಕ್ಷರೆ ! ನನ್ನ ನಿಯೋಜಿಕ ವರ್ಗದಲ್ಲಿ ಕೈಗಾರಿಕಾ ಸಂಸ್ಥೆಗಳು ಕಲುಷಿತ ಗೊಂಡ ಜಲವನ್ನು ನದಿಗಳಿಗೆ ಬಿಡುತ್ತಿದ್ದರಿಂದ ಪ್ರಜೆಗಳ ಆರೋಗ್ಯಕ್ಕೆ ಹಾನಿ ಉಂಟಾಗುತ್ತಿದೆ. ಪ್ರಭುತ್ವ ಈ ವಿಷಯದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳೊತ್ತದೋ ತಿಳಿಸಬೇಕೆಂದು ಕೋರುತ್ತಿದ್ದೇನೆ. ಕುಡಿಯುವ ನೀರಿನ ಸಮಸ್ಯೆ ಕೂಡ ಹೆಚ್ಚಾಗಿದೆ.

ಮಂತ್ರಿ : ಮಾನ್ಯ ಅಧ್ಯಕ್ಷರೇ ! ಪ್ರಜೆಗಳ ಆರೋಗ್ಯದ ಮೇಲೆ ಸರ್ಕಾರಕ್ಕೆ ಬಹಳ ಶ್ರದ್ಧೆ ಇದೆ ಬರಪೀಡಿತ ಮಂಡಲಗಳಲ್ಲಿ ನಿವಾರಣೆ ಕ್ರಮಗಳು ಜಲಸಂರಕ್ಷಣೆ ಕ್ರಮಗಳನ್ನೆಲ್ಲಾ ತೆಗೆದುಕೊಳ್ಳುತ್ತಿದೆ. ಕೆರೆಗಳನ್ನು ಅಭಿವೃದ್ಧಿ ಪಡಿಸುವುದು ಗಿಡಗಳನ್ನು ಬೆಳೆಸುವುದು ಅಕ್ರಮ ಮರಳು ಸಾಗಣೆ ನಿಷೇದಿಸು ವಂತಹ ಕ್ರಮಗಳನ್ನು ತೆಗೆದುಕೊಳ್ಳುವುದು ನಡೆದಿದೆ. ಗೌರವ ಸದಸ್ಯರ ಸೂಚನೆಗಳನ್ನೆಲ್ಲಾ ಪರಿಗಣಿಸುತ್ತೇವೆ. ಹಾಗೆ ಯೋಜನೆಗಳನ್ನು ಸಕ್ರಮವಾಗಿ ಜಾರಿಗೊಳಿಸಲು ಗೌರವ ಸದಸ್ಯರ ಸಹಕಾರ ಕೂಡ ಕೊರುತ್ತಿದ್ದೇವೆ.

- ನೀವೇ ಶಾಸನ ಸಭ್ಯಾರಾಗಿದ್ದರೆ ಮೇಲಿನ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತಿರಿ ?
- ಅಧಿಕಾರ ಪಕ್ಷ, ಪ್ರತಿಪಕ್ಷ ಶಾಸನ ಸಭ್ಯರ ನಡುವಿನ ಭೇದವೇನು ?

ಮಕ್ಕಳ ಮೇಲೆ ಲೈಂಗಿಕ ಕಿರುಕುಳ ನಿರೋಧಕ ಕಾನೂನು

ಮಕ್ಕಳ ಲೈಂಗಿಕ ಕಿರುಕುಳ ನಿರೋಧಕ ಕಾಯ್ದೆ–2012 (POCSO-2012) ಮಕ್ಕಳ ಭದ್ರತೆಯನ್ನು ರಕ್ಷಿಸುವುದಕ್ಕೆ ಸರಕಾರವು ಒಂದು ಪ್ರತ್ಯೇಕ ಕಾಯ್ದೆ ಸಿದ್ಧಮಾಡಿದೆ. ಇದನ್ನು ಮಕ್ಕಳ ಮೇಲೆ ಲೈಂಗಿಕ ಕಿರುಕುಳ ನಿರೋಧಕ ಕಾಯ್ದೆ–2012 (POCSO-2012) ಎನ್ನುವರು. ಬಾಲಾಪರಾಧಿಗಳ ನ್ಯಾಯ ಕಾಯ್ದೆ 2015. ಈ ಕಾಯ್ದೆಯು ಬಾಲಾಪರಾಧಿಗಳ ಪರಿರಕ್ಷಣೆ ಮತ್ತು ನ್ಯಾಯ ರಕ್ಷಣೆ (ಅನಾಥ, ಇತರರು) ಯನ್ನು ಕಲ್ಪಿಸುತ್ತದೆ. ಅವರಿಗೆ ವಿದ್ಯೆ, ವೈದ್ಯ, ಪೌಷ್ಟಿಕ ಆಹಾರ ಮತ್ತು ಕೌನ್ಸಿಲಿಂಗ್ ನಿರ್ವಹಿಸಿ ಸಮಾಜದಲ್ಲಿ ಅವರಿಗೆ ನಿರ್ಮಾಣಾತ್ಮಕವಾದ ಪಾತ್ರ ಪೋಷಿಸಲು ಸಹಾಯವಾಗುತ್ತದೆ.

ಮುಖ್ಯ ಪದಗಳು :

1. ಮಾನಿಫೆಸ್ಟೊ
2. ಕ್ಯಾಬಿನೆಟ್
3. ಸ್ಪೀಕರ್

SCERT TELANGANA

ನಿಮ್ಮ ಕಲಿಕೆಯನ್ನು ಅಬೀವೃದ್ಧಿ ಪಡಿಸಿಕೊಳ್ಳಿ

1. ಪ್ರಜೆಗಳ ಜೀವನಕ್ಕೆ ಸಂಬಂದಿಸಿ ಯಾವ ಯಾವ ವಿಷಯಗಳಲ್ಲಿ ಕಾಯ್ದೆ ನಿರ್ಮಿಸಬಹುದು.

2. ನಿಮ್ಮ ಪಾಠಶಾಲೆ, ಪಾಠ ಶಾಲೆ ವಿದ್ಯಾಶಾಖೆಗೆ ಸಂಬಂದಿಸಿದೆ. ನಿಮ್ಮ ಪಾಠ ಶಾಲೆಗೆ ಸರಿಹೊಂದುವ ಕೆಲವು ಕಾನೂನನ್ನು ತಿಳಿಸಿರಿ.

3. 6–14 ವರ್ಷ ವಯಸ್ಸಿರುವ ಯಾವ ಮಕ್ಕಳೂ ಶಾಲೆಯಲ್ಲಿ ಓದದಂತೆ ಇರಬಾರದೆಂದು ಕಾನೂನು ಇದೆ ಎಂದು ತಿಳಿಯಿರಿ. ಈ ಕಾಯ್ದೆ ಜಾರಿಗೊಳಿಸಲು ಯಾವ ಕ್ರಮಗಳು ತೆಗೆದುಕೊಳ್ಳಬೇಕು ? ನಿಮ್ಮ ಶಿಕ್ಷಕರ ಸಹಾಯದಿಂದ ಚರ್ಚಿಸಿರಿ.

4. 165ನೇ ಪುಟದಲ್ಲಿನ "ಕಾನೂನು ನಿರ್ಮಾಣ" ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ಒಂದು ವೇಳೆ ನೀವು ಆಂದ್ರ ಪ್ರದೇಶ್ ಶಾಸನ ಸಭೆ ಸದಸ್ಯನಾದರೆ ಯಾವ ಸಮಸ್ಯೆಯನ್ನು ಕುರಿತು ಅಥವಾ ವಿಷಯವನ್ನು ಕುರಿತು ಕಾನೂನು ಮಾಡಬೇಕೆಂದು ಕೊಂಡಿರುವೆ ? ಏಕೆ ? ಉದಾಹರಣೆಯಿಂದ ವಿವರಿಸಿರಿ.

5. ಉದಾ : ಪುರಬ್ಗರ್ ಎನ್ನುವ ಹೆಸರಿನ ರಾಷ್ಟ್ರದಲ್ಲಿ ಶಾಸನ ಸಭೆಯಲ್ಲಿ 368 ಸದಸ್ಯರಿದ್ದಾರೆ. ಚುನಾವಣೆಯ ನಂತರ ವಿವಿಧ ಪಾರ್ಟಿಗಳ ಬಲಾಬಲಗಳು ಈ ಕೆಳಗಿನ ವಿಧವಾಗಿವೆ.

   ಪಾರ್ಟಿ –ಎ –89 ಪಾರ್ಟಿ – ಬಿ – 91

   ಪಾರ್ಟಿ –ಸಿ –70 ಪಾರ್ಟಿ – ಡಿ – 84

   ಇತರರು–34

   ಮೇಲಿನ ಪಟ್ಟಿಕೆಯನ್ನು ಜಾಗ್ರತೆಯಾಗಿ ಪರಿಶೀಲಿಸಿ ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ :

   ಎ) ಒಟ್ಟು 368 ಸೀಟುಗಳಿಗೆ ಸರ್ಕಾರವನ್ನು ಏರ್ಪಡಿಸಲು ಲೆಕ್ಕ ಮೆಜಾರಿಟಿ ಬರಬೇಕಾದರೆ ಎಷ್ಟು ಸೀಟುಗಳನ್ನು ಹೊಂದಿರಬೇಕು ?

   ಬಿ) ಈ ಚುನಾವಣೆಯ ಫಲಿತಾಂಶದ ಆಧಾರವಾಗಿ ಅತ್ಯಧಿಕ ಸ್ಥಾನಗಳನ್ನು ಗೆದ್ದ ಒಂದೇ ಒಂದು ಪಾರ್ಟಿ ಯಾವುದು?

   ಸಿ) ಈ ಆಯ್ಕೆಯಾದ ಅತೀ ದೊಡ್ಡ ಪಾರ್ಟಿ ಸರ್ಕಾರವನ್ನು ಏರ್ಪಾಟು ಮಾಡಬಲ್ಲದೇ? ಇಲ್ಲದೆ ಪಕ್ಷದಲ್ಲಿ ಸರ್ಕಾರವನ್ನು ಏರ್ಪಡಿಸಲು ಇತರ ಪರ್ಯಾಯ ಕಾರ್ಯಗಳು ಯಾವುವು?

   ಡಿ) ಒಂದೇ ಪಾರ್ಟಿಯಲ್ಲಿ ಏರ್ಪಡಿಸಿದ ಸರ್ಕಾರಕ್ಕೆ ಸಂಕೀರ್ಣ ಪ್ರಭುತ್ವಕ್ಕೆ ವ್ಯತ್ಯಸವೇನು?

6) ಪ್ರಸ್ತುತ ನಮ್ಮ ದೇಶದಲ್ಲಿ ಕೆಲವು ರಾಜ್ಯಗಳು ಮಾತ್ರವೇ ದ್ವಿಸಭಾ ವಿಧಾನವನ್ನು ಹೊಂದಿವೆ. ಅವು ಯಾವುವು?

7) ನಿಮ್ಮ ಜಲ್ಲೆಯ ನಕ್ಷೆಯನ್ನು ಬಳಸುತ್ತಾ, ನಕ್ಷೆ–1ರ ಆಧಾರವಾಗಿ ನಿಮ್ಮ ಜಲ್ಲೆಯಲ್ಲಿನ ಅಸೆಂಬ್ಲಿ ನಿಯೋಜಕ ವರ್ಗಗಳ ಹೆಸರುಗಳನ್ನು ಗುರುತಿಸಿ ಬರೆಯಿರಿ.

8) ಪ್ಯಾರಾಂಶದಲ್ಲಿನ ವಿಷಯವನ್ನು ಆಧಾರವಾಗಿಟ್ಟುಕೊಂಡು ಕೆಳಗಿನ ಚಿತ್ರಗಳಿಗೆ ಊಹಾತ್ಮಕ ಸಂಭಾಷಣೆಯನ್ನು ಬರೆಯಿರಿ.



SCERT TELANGANA

ಪಾಠ 17

ಜಿಲ್ಲೆಗಳಲ್ಲಿ ಕಾಯ್ದೆಗಳ ಜಾರಿ

ನಾವು ಹಿಂದಿನ ಪಾಠಗಳಲ್ಲಿ ಕಾಯ್ದೆಗಳು ಹೇಗೆ ಮಾಡುತ್ತಾರೋ, ಸಂಕ್ಷೇಮ ಕಾರ್ಯಕ್ರಮಗಳನ್ನು, ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ಹೇಗೆ ರೂಪಿಸುತ್ತಾರೆ. ತಿಳಿದುಕೊಂಡಿದ್ದೇವೆ ಮತ್ತು ಇವು ಹೇಗೆ ಜಾರಿಯಾಗುತ್ತಿವೆ? ಪ್ರಜೆಗಳು ಆಯ್ಕೆ ಮಾಡಿದ ಪ್ರಜಾಪ್ರತಿನಿಧಿಗಳೆ ಇವುಗಳನ್ನು ಜಾರಿಗೊಳಿಸುತ್ತಿದ್ದಾರೆಂದು ನೀವು ಭಾವಿಸುವಿರಾ ? ಈಗ ನೀವು ಈ ಕೆಲಸವನ್ನು ಹೇಗೆ ಜಾರಿಯಾಗುತ್ತಿವೆಯೊ ತಿಳಿದು ಕೊಳ್ಳುವಿರಿ. ಕೆಳಗಿನ ಅಂಶಗಳನ್ನು ನಿಮ್ಮ ಸಹ ವಿದ್ಯಾರ್ಥಿಗಳಿಂದ ಚರ್ಚಿಸಿರಿ.

1) ಆಣೆಕಟ್ಟುಗಳು, ಕಾಲುವೆಗಳ ನಿರ್ಮಾಣ.
2) ಮನೆಗಳಿಗೆ ವಿದ್ಯುತ್ತಿನ ಸರಬರಾಜು.
3) ನ್ಯಾಯಬೆಲೆ ಅಂಗಡಿಗಳ ನಿರ್ವಹಣೆ.
4) ರೈಲು ಸಾರಿಗೆ
5) ರೂಪಾಯಿ ನೋಟುಗಳ ಮುದ್ರಣ (ಕರೆನ್ಸಿ ಮುದ್ರಣ)
6) ಪ್ರಜೆಗಳಿಂದ ತೆರಿಗೆಗಳ ವಸೂಲಿ
7) ಬಾಲಕಾರ್ಮಿಕ ವ್ಯವಸ್ಥೆ ನಿರ್ಮೂಲನೆ ಬಾಲಕರೆಲ್ಲರಿಗೂ ವಿದ್ಯೆ.
8) ಭಾರತದೇಶ ಸರಿಹದ್ದುಗಳ ರಕ್ಷಣೆ
9) ದಾರಿದ್ರ್ಯರೇಖೆಗೆ ಕೆಳಗಿರುವವರನ್ನು ಗುರ್ತಿಸಿ. ಅವರ ಅಭಿವೃದ್ಧಿಗೆ ಯೋಜನೆಗಳನ್ನು ಕಾರ್ಯರೂಪಗೊಳಿಸುವುದು.
10) ಕಳ್ಳತನ ನಿವಾರಣೆ ಪ್ರಜೆಗಳ ಆಸ್ತಿಗಳ ರಕ್ಷಣೆ.

◆ **ಇನ್ನು ಇವಲ್ಲದೇ, ನೀವು ಹಲವು ವಿಧವಾದ ಸರ್ಕಾರವು ನಿರ್ವಹಿಸುವ ಕರ್ತವ್ಯಗಳನ್ನು ಕುರಿತು ಕೇಳಿರುತ್ತೀರಿ. ಅವುಗಳಲ್ಲಿ ಕೆಲವನ್ನು ಗುರುತಿಸಿ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ.**

ನಾವು ಹಿಂದಿನ ಪಾಠದಲ್ಲಿ ಸರ್ಕಾರದಲ್ಲಿನ ವಿವಿಧ ಶಾಖೆಗಳು ವಿವಿಧ ಕಾರ್ಯಕ್ರಮಗಳ ನಿರ್ವಹಿಸುವುದನ್ನು ನೋಡಿದ್ದೇವೆ. ಈ ಶಾಖೆಗಳು ಮಂತ್ರಿಗಳ ಅಧೀನದಲ್ಲಿ ಇರುತ್ತವೆ. ಈ ಸರ್ಕಾರಿ ಶಾಖೆಗಳಲ್ಲಿ ಎಷ್ಟೋ ಮಂದಿ ಅಧಿಕಾರಿಗಳು ಮಂತ್ರಿಗಳ ಅದೇಶಗಳನ್ನು ಕಾರ್ಯರೂಪ ಗೊಳಿಸುತ್ತಾರೆ ಈ ಅಧಿಕಾರಿಗಳಲ್ಲಿ ಕೆಲವರು ರಾಜ್ಯದ ರಾಜಧಾನಿ ಹೈದರಾಬಾದಿನಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಾ ಸರ್ಕಾರಿ ಆದೇಶಗಳನ್ನು ರಾಜ್ಯದ ತುಂಬೆಲ್ಲಾ ಕಾರ್ಯರೂಪಕ್ಕೆ ತರಲು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಹಾಗೆಯೆ ಒಟ್ಟು ರಾಜ್ಯವನ್ನು ಪರಿಪಾಲನೆ ಸುಲಭವಾಗಿ ನಡೆಯಲು ವಿವಿಧ ಜಿಲ್ಲೆಗಳಾಗಿ ವಿಭಜಿಸಿದ್ದಾರೆ. ಪ್ರತಿ ಸರ್ಕಾರಿ ಶಾಖೆ ಜಿಲ್ಲೆಗಳಲ್ಲಿ ತನ್ನ ಕಾರ್ಯಾಲಯಗಳನ್ನು ಏರ್ಪಡಿಸಿ ಕಾಯ್ದೆ ಗಳನ್ನು ಸರ್ಕಾರಿ ಯೋಜನೆಗಳನ್ನು ಕಾರ್ಯಗತ ಗೊಳಿಸುತ್ತಾ ಇರುತ್ತವೆ. ತೆಲಂಗಾಣದಲ್ಲಿ 10 ಜಿಲ್ಲೆಗಳು ಇವೆ.


◆ ನಿಮ್ಮ ಜಿಲ್ಲೆಯ ಹೆಸರೇನು ? ಅದರ ಪ್ರಧಾನ ಕಾರ್ಯಾಲಯ ಎಲ್ಲಿದೆ ?

ಪ್ರತಿ ಜಿಲ್ಲೆಗೂ ವಿವಿಧ ಶಾಖೆಗಳ, ಕೆಲಸಗಳ ಸಮನ್ವಯಕ್ಕೆ ಒಬ್ಬ ಜಿಲ್ಲಾಧಿಕಾರಿ–ಮೆಜೆಸ್ಟ್ರೇಟ್ ಇರುವರು. ನಾವು ಈಗ ಜಲ್ಲಾಧಿಕಾರಿ, ಮೆಜೆಸ್ಟ್ರೇಟ್ ನಿರ್ವಹಿಸುವ ವಿವಿಧ ಕರ್ತವ್ಯಗಳನ್ನು ತಿಳಿದುಕೊಳ್ಳೋಣ.

SCERT TELANGANA

ನಲ್ಲವರಂ ಜಿಲ್ಲಾ ಕಲೆಕ್ಟರ್ ಮತ್ತು ಮ್ಯಾಜಿಸ್ಟ್ರೇಟ್ :

ನಲ್ಲವರಂ ಜಿಲ್ಲೆ ಒಂದು ಊಹಾಜನಕವಾದ ಜಿಲ್ಲೆಯಾಗಿ ಇಲ್ಲಿ ತೆಗೆದುಕೊಂಡಿದ್ದಾರೆ, ಆ ಜಿಲ್ಲೆಯಲ್ಲಿ ಈ ಕೆಳಗೆ ತಿಳಿಸಿದ ಮಂಡಲಗಳು ಇವೆ. ಅವು ಗಾರಿಪಲ್ಲೆ, ಮಲ್ಲೇಪಲ್ಲಿ, ನರ್ಸಪೇಟ. ಗುರ್ರೂರು, ನಲ್ಲವರ. ಜಿಲ್ಲಾ ಕಲೆಕರ್ ಕಾರ್ಯಾಲಯ ನಲಿವರಂ ಪಟಣದಲಿದೆ.



ಚಿತ್ರ 17.1 ನಲ್ಲವರ ಜಿಲ್ಲೆ

ಮನೀಷಾ ನಾಗ್ಲೇ ನಲ್ಲವರಂ ಜಿಲ್ಲಾ ಕಲೆಕ್ಟರ್. ಇವರು ಪ್ರತಿ ದಿನ ಉದಯ 10.30 ಗಂಟೆಗಳಿಗೆ ತನ್ನ ಕಾರ್ಯಲಯಕ್ಕೆ ಬರುತ್ತಾರೆ. ಈ ದಿನ ಉದಯ 11.30 ಗಂಟೆಗೆ ವಿವಿಧ ವಿಭಾಗಾಧಿಪತಿಗಳ ಜೊತೆ ಸಮಾವೇಶ ಆಗುವುದರಿಂದ ಅಧಿಕಾರಿಗಳೆಲ್ಲರೂ ಬಂದರು. ಜಿಲ್ಲಾ ಕಲೆಕ್ಟರ್ ಮ್ಯಾಜಿಸ್ಟ್ರೇಟ್ ಸಮೀಕ್ಷೆ ನಿರ್ವಹಿಸುತ್ತಾ ಶಾಖಾದಿ ಕಾರಿಗಳಿಂದ ಹಿಂದಿನ ತಿಂಗಳಲ್ಲಿ ಅವರವರ ಶಾಖೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ತಿಳಿದು ಕೊಳ್ಳುತ್ತಿದ್ದಾರೆ. ಹಾಗೆಯೇ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಅವರು ಎದುರಿಸುವ ಸಮಸ್ಯೆಗಳನ್ನು ಅವರು ತಿಳಿದು ಕೊಳ್ಳುತ್ತಿದ್ದಾರೆ. ಈ ಸಮಾವೇಶವು ಮಧ್ಯಾಹ್ನ 2.00 ಗಂಟೆಗಳ ವರೆಗೆ ನಡೆಯಿತು.

ಸಮಾವೇಶದ ನಂತರ ಮನಿಷಾನಾಗ್ಲೇ ತನ್ನ ಕಾರ್ಯಾಲಯದಲ್ಲಿ ಇರುವ ಫೈಲುಗಳನ್ನು ಪರಿಶೀಲಿಸುತ್ತಾ ಅವಶ್ಯವಾದ ಕಡೆ ತನ್ನ ಅಭಿಪ್ರಾಯಗಳನ್ನು ಆದೇಶಗಳನ್ನು ಬರೆದರು. ಒಟ್ಟು ಎಲ್ಲಾ ಶಾಖೆಗಳ ಫೈಲುಗಳು ಪೂರ್ಣ ಗೊಳ್ಳುವವರೆಗೆ ಮಧ್ಯಾಹ್ನ 3.00 ಗಂಟೆಗಳಾಯಿತು. ಪ್ರತಿ ದಿನ ಮಧ್ಯಾಹ್ನ 3.00 ಗಂಟೆಗಳಿಂದ 4.30 ಗಂಟೆಗಳ ವರೆಗೆ ಜಿಲ್ಲೆಯಲ್ಲಿನ ವಿವಿಧ ಮಂಡಲಗಳಿಂದ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಬಂದ ಪ್ರಜೆಗಳೊಂದಿಗೆ ಸೇರುವರು.

ಮಲ್ಲೇಪಲ್ಲಿ ಮಂಡಲದಿಂದ ಕೆಲವು ಜನ ರೈತರು ಅವರ ಗ್ರಾಮದಲ್ಲಿನ ನೀರಾವರಿ ವಿಷಯದ ಮೇಲೆ ಚರ್ಚಿಸುವುದಕ್ಕಾಗಿ ಬಂದರು. ಅವರ ಗ್ರಾಮದಲ್ಲಿನ ಕೆರೆಗಳು ಒಂದೆರಡು ವರ್ಷಗಳಿಂದ ಬತ್ತಿಹೋಗುವುದರಿಂದ ಬೆಳೆಗಳು ಬೆಳೆಯಲಿಲ್ಲ. ಅದಕ್ಕಾಗಿ ಅವರು ತೆಗೆದುಕೊಂಡ ಸಾಲಗಳನ್ನು ಮನ್ನಮಾಡಿಕೊಳ್ಳು ವುದಕ್ಕಾಗಿ ಕೆರೆ ಕಟ್ಟೆಗಳನ್ನು ಸರಿಪಡಿಸುವುದಕ್ಕೆ ಜಿಲ್ಲಾಧಿಕಾರಿಗಳ ಹತ್ತಿರ ಬಂದಿದ್ದಾರೆ. ಅವರ ಸಮೀಪ ಗ್ರಾಮದಲ್ಲಿನ ಕೆರೆ ಕಟ್ಟೆಗಳನ್ನು ಸರಿಪಡಿಸುವುದಕ್ಕೆ ಅದೇ ವಿಧವಾಗಿ ಅವರ ಗ್ರಾಮದಲ್ಲಿನ ಕೆರೆ ಕಟ್ಟೆಗಳನ್ನು ದುರಸ್ಥಿಗೊಳಿಸಲು ನೀರಿನ ಸಮಸ್ಯೆ ತೀರಿಸಬೇಕೆಂದು ಕೋರಿದರು.

ಮನಿಷಾ ರೈತರ ಸಮಸ್ಯೆಗಳನ್ನು ಪೂರ್ಣವಾಗಿ ಕೇಳಿ ಅವರ ಗ್ರಾಮವು ರಾಜ್ಯ ಸರ್ಕಾರವು ಪ್ರಕಟಿಸಿದ ವರ್ಷಾಭಾವ ಪ್ರಾಂತಗಳ ಪಟ್ಟಿಯಲ್ಲಿ ಇಲ್ಲದಿರುವುದರಿಂದ ಸಾಲಗಳನ್ನು ಮನ್ನ ಮಾಡುವುದು ಆಗುವುದಿಲ್ಲವೆಂದು ವಿವರಿಸಿದರು. ಆದರೆ "ನೀವು ನಿಮ್ಮ ಸಂಬಂಧಿತ ಎಮ್.ಎಲ್.ಎ. ಅವರನ್ನು ಬೇಟಿಯಾಗಿ ನಿಮ್ಮ ಸಮಸ್ಯೆಗಳು ವಿವರಿಸಿರೆಂದು ಸೂಚನೆ ಕೊಟ್ಟರು. ನೀರಾವರಿ ಶಾಖೆ ಮೂಲಕ ಗ್ರಾಮದಲ್ಲಿನ ಕೆರೆ ಕಟ್ಟೆಗಳನ್ನು ಸರಿಪಡಿಸುತ್ತೇನೆಂದು ಅವರು ಅವರಿಗೆ ಭರವಸೆಕೊಟ್ಟರು.

ಮರುದಿನ ಬೆಳಿಗ್ಗೆ 5.00 ಗಂಟೆಗಳಿಗೆ ನರಸಾಪೇಟ ಮಂಡಲ ದಿಂದ ಒಂದು ಫೋನ್ ಕಾಲ್ ಬಂದಿತು. ನರಸಾಪೇಟ ಪಟ್ಟಣದಲ್ಲಿ ಜಿನ್ನಿಂಗ್ ಮಿಲ್ಲುಗಳಲ್ಲಿ ಸಂಗ್ರಹಿಸಿದ ಹತ್ತಿ ಸುಡುತ್ತಿದೆ. ಸ್ಥಾನಿಕ ಪ್ರಜೆಗಳು ಬೆಂಕಿಯನ್ನು ನಂದಿಸಲು ಪ್ರಯತ್ನಿಸುತ್ತಿದ್ದಾರೆ. ಅಗ್ನಿಮಾಪಕ ಶಾಖೆಯವರು ಅಲ್ಲಿಗೆ ಸೇರಿಕೊಂಡುಬೆಂಕಿಯನ್ನು ನಿಯಂತ್ರಣಕ್ಕೆ ತರುತ್ತಿದಾರೆ. ಬೆಂಕಿಯು ಪಕ್ಕದ ಪ್ರಾಂತಗಳಿಗೆ ವ್ಯಾಪಿಸದಂತೆ ಅವಶ್ಯಕವಾದ ಕ್ರಮುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮನಿಷಾ ತಕ್ಷಣವೇ ನರಸಾಪೇಟಗೆ ಹೋಗುತ್ತಾ ಜಿಲ್ಲಾಪೋಲಿಸು ಸೂಪರಿಂಟೆಂಡನ್ನು ವೈದ್ಯಾಧಿಕಾರಿಯನ್ನು ತನ್ನ ಜೊತೆಯಲ್ಲಿ ಬರಬೇಕೆಂದು ಅವರಿಗೆ ಫೋನ್ ಮಾಡಿದರು.

ಕಲೆಕ್ಟರ್ ನರಸಾಪೇಟೆಯಲ್ಲಿ ಉದಯ 7.00 ಗಂಟೆಗಳಿಗೆ ಜನ್ನಿಂಗ್ ಮಿಲ್ಲಿಗೆ ಸೇರಿಕೊಂಡು ಅಲ್ಲಿಯ ಪರಿಸ್ಥಿತಿಗಳನ್ನು ಪರಿಶೀಲಿಸಿದರು. ದೊಡ್ಡ ಮೊತ್ತದಲ್ಲಿ ಸಂಗ್ರಹಣೆ ಮಾಡಿದ ಹತ್ತಿ ಬೆಂಕಿಯಲ್ಲಿ ಸುಟ್ಟುಹೋಯಿತು ಬೆಂಕಿ ನಿಯಂತ್ರಣಕ್ಕೆ ಬಂದಿತು. ಮುನ್ಸಿಪಲ್ ಛೇರ್ಮನ್.

SCERT TELANGANA



ಚಿತ್ರ - 17.2 ಹತ್ತಿ ಜಿನ್ನಿಂಗ್ (ಬೀಜಗಳನ್ನು ಬೇರ್ಪಡಿಸುವ ಕೈಗಾರಿಕೆಗಳಲ್ಲಿ ಜಿಲ್ಲಾ ಕಲೆಕ್ಟರು)

ಪೋಲಿಸು ಅಧಿಕಾರಿಗಳು ಕೂಡ ಅಲ್ಲಿಗೆ ಬಂದರು. ಅಲ್ಲಿಗೆ ಬಂದ ಅಧಿಕಾರಿಗಳಿಗೆ ಎಷ್ಟು ನಷ್ಟವಾಗಿದೆಯೋ ಅಂದಾಜು ಮಾಡುವಂತೆ ಕಲೆಕ್ಟರ್ ಆದೇಶಿಸಿದರು. ಪಟ್ಟಣ ಮುನ್ಸಿಪಲ್ ಚೇರ್ ಪರ್ಸನ್ ಈ ಅಪಘಾತದಿಂದ ಇಬ್ಬರು ಕಾರ್ಮಿಕರಿಗೆ ತೀವ್ರಗಾಯಗಳು ಆಗಿವೆ ಎಂದು ಅವರನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಸೇರಿಸಿದ್ದೇವೆಂದು ಕಲೆಕ್ಟರವರಿಗೆ ಹೇಳಿದರು. ಅಪಘಾತದ ಸ್ಥಳದ ಹತ್ತಿರ ಇರುವ ಕೆಲವು ಮನೆಗಳು ಕೂಡ ಸುಟ್ಟುಹೋಗಿವೆ ಎಂದು ಹೇಳಿದರು.

ಮನಿಷಾ ಈ ಅಪಘಾತದಲ್ಲಿ ಸುಟ್ಟು ಹೋದ ಮನೆ ಯಜಮಾನರಿಗೆ 10 ಸಾವಿರ ರೂಪಾಯಿಗಳ ಪರಿಹಾರವನ್ನು ಪ್ರಕಟಿಸಿ ಈ ಅಪಘಾತಕ್ಕೆ ಕಾರಣಗಳೇನೆಂದು ತಹಸಿಲ್ದಾರರು(ಮಂಡಲ ರೆವೆನ್ಯು ಅಧಿಕಾರಿ) ವಿಚಾರಣೆ ನಡೆಸುವುದಾಗಿ ಬರವಸೆ ಕೊಟ್ಟರು. ಅಪಘಾತದಲ್ಲಿ ಗಾಯವಾದ ಇಬ್ಬರು ಕಾರ್ಮಿಕರನ್ನು ಆಸ್ಪತ್ರೆಯಲ್ಲಿ ಪರಾಮರ್ಶಿಸಿದರು. ತೀರ್ವವಾಗಿ ಗಾಯಗೊಳಗಾದ ಒಬೊಬ್ಬರಿಗೆ 20 ಸಾವಿರ ರೂಪಾಯಿ ಯಂತೆ ಅರ್ಥಿಕ ಸಹಾಯವನ್ನು ಕಲೆಕ್ಟರ್ ಪ್ರಕಟಿಸಿದರು.

ಅವರು ಮರಳಿಬರುತ್ತಾ ಪಟ್ಟಣ ಮುನ್ಸಿಪಲ್ ಕಾರ್ಯಲಯವನ್ನು ಸಂದರ್ಶಿಸಿದರು ಪಟ್ಟಣದಲ್ಲಿನ ಎಲ್ಲಾ ರಸ್ತೆಗಳು ಅಕ್ರಮಣಕ್ಕೆ ಗುರಿಯಾಗಿರುವದು, ಪಾದಚಾರಿಗಳಿಗೆ ಉದ್ದೇಶಿಸಿದ ಮಾರ್ಗದಲ್ಲಿ ಕೂಡಾ ವ್ಯಾಪಾರಸ್ಥರು ಆಕ್ರಮಿಸಿಕೊಂಡು ಷಾಪುಗಳು ನಿರ್ಮಿಸಿಕೊಂಡಿರುವದರಿಂದ ಅಗ್ನಿಮಾಪಕ ಯಂತ್ರ ಅಪಘಾತ ಸ್ಥಳಕ್ಕೆ ಬರಲು ಆಲಸ್ಯ ವಾಯಿತೆಂದು ಅವರು ಗಮನಿಸಿದರು. ಕಾನೂನಿನ ವಿರುದ್ಧ ಮನೆ ಯಜಮಾನರು, ಕಾರ್ಯಲಯಗಳು ಅವರವರ ಸರಿಹದ್ದು ಗೊಡೆಗಳನ್ನು ಬೆಳಸಿಕೊಂಡಿರುವುದರಿಂದ ಜನ ಸಂದಣಿ ಏರ್ಪಡುತ್ತಿರುವದು. ಇದರ ಮೇಲೆ ಕಠಿಣ ನಿಯಂತ್ರಣ ಕ್ರಮ ತೆಗೆದು ಕೊಳ್ಳಬೇಕೆಂದು ತದನಂತರ ನಡೆಯುವ ಸಮೀಕ್ಷಾ ಸಮಾವೇಶದಲ್ಲಿ ತನಗೆ ನಿವೇದಿಕೆ ಕೊಡಬೇಕೆಂದು ಮುನ್ಸಿಪಲ್ ಅಧಿಕಾರಿಗಳನ್ನು ಆದೇಶಿಸಿದರು. ತದನಂತರ ಪೂರ್ತಿ ಕತ್ತಲಾದ ನಂತರ ನಲ್ಲವರಂ ಪಟ್ಟಣಕ್ಕೆ ಸೇರಿಕೊಂಡರು.

ಈಗ ನಾವು ಚರ್ಚಿಸಿದ ನಲ್ಲವರಂ ಜಿಲ್ಲೆ ಒಂದು ಊಹಾಜನಿತ ಜಿಲ್ಲೆ. ಆದರೆ ಯಾವ ವಿಧವಾದ ಕರ್ತವ್ಯಗಳನ್ನು ನಲ್ಲವರಂ ಜಿಲ್ಲಾ ಕಲೆಕ್ಟರು ನಿರ್ವಹಿಸಿದರೊಅದೇ ವಿಧವಾಗಿ ಎಲ್ಲಾ ಜಿಲ್ಲೆಗಳ ಕಲೆಕ್ಟರುಗಳು ನಿರ್ವಹಿಸುತ್ತಾರೆ.

- ಸಾಲಮನ್ನಾದ ಕುರಿತು ರೈತರು ಜಿಲ್ಲಾ ಕಲ್ಕ್ಟರುಗೆ ಯಾವ ವಿಧಾವಾಗಿ ವಿವರಿಸಿದರು ?
- ಈ ಸಂಘಟನೆಯಲ್ಲಿ ಯಾವ ಯಾವ ಇತರ ಅಧಿಕಾರಿಗಳನ್ನು ಹೆಸರಿಸಿದ್ದಾರೆ.
- ಮೇಲಿನ ಸನ್ನಿವೇಶದಲ್ಲಿ ಹೇಳಿದ ಅನಧಿಕಾರಿಗಳು ಯಾರು.

ಗ್ರಾಮ ರೆವೆನ್ಯು ಅಧಿಕಾರಿ (ತಹಶೀಲ್ದಾರ) :

ನಲ್ಲವರಂ ಜಿಲ್ಲೆ ವಿವಿಧ ಮಂಡಲಗಳಾಗಿ ವಿಭಜಿಸಿರುವದನ್ನು ನೀವು ಗಮನಿಸ ಬಹುದು ಒಂದು ಮಂಡಲದಲ್ಲಿ ವಿವಿಧ ರೀತಿಯ ಗ್ರಾಮಗಳು ಇರುತ್ತವೆ ಎಷ್ಟೋ ಗ್ರಾಮಗಳು ಸೇರುವುದರಿಂದ ಮಂಡಲ ಏರ್ಪಡುತ್ತದೆ. ನಿಮ್ಮ ಜಿಲ್ಲೆಯ ನಕ್ಷೆಯಲ್ಲಿ ವಿವಿಧ ಮಂಡಲಗಳನ್ನು ಗ್ರಾಮಗಳನ್ನು ಪರಿಶೀಲಿಸಿರಿ. ಜಿಲ್ಲಾ ಕೇಂದ್ರದಲ್ಲಿಯಂತೆ ಮಂಡಲ ಕೇಂದ್ರದಲ್ಲಿ ಮಂಡಲ ವಿಧ್ಯಾಶಾಖಾಧಿಕಾರಿಯ ಕಾರ್ಯಲಯ ವ್ಯವಸಾಯ ಅಭಿವೃದ್ಧಿ ಅಧಿಕಾರಿ ಕಾರ್ಯಲಯದೊಂದಿಗೆ ವಿವಿಧ ಕಾರ್ಯಾಲಯಗಳು ಇರುತ್ತವೆ.

- ನಿಮ್ಮ ಮಂಡಲವನ್ನು ಜಿಲ್ಲಾ ನಕ್ಷೆಯಲ್ಲಿ ಗುರ್ತಿಸಿರಿ.
- ನಿಮ್ಮ ಜಿಲ್ಲೆಯಲ್ಲಿ ಇರುವ ಇತರ ಮಂಡಲಗಳು? ಗುರುತಿಸಿರಿ.

SCERT TELANGANA

ಇತರ ಕಾರ್ಯಕ್ರಮಗಳೊಂದಿಗೆ ಭೂಮಿಗೆ ಸಂಬಂಧಿಸಿದ ರಿಕಾರ್ಡುಗಳನ್ನು ನಿರ್ವಹಿಸುವದು ಕೂಡ ಸರ್ಕಾರದ ಕರ್ತವ್ಯ. ನೀವು ಯಾವುದಾದರು ಗ್ರಾಮದಲ್ಲಾ ಗಲಿ ಅಥವಾ ಸ್ವಂತ ಸ್ಥಳದಲ್ಲಾಗಲಿ ನಿವಾಸಿಸುತ್ತಿದ್ದರೆ ಅದು ನಿಮ್ಮ ಸ್ವಂತದೆಂದು ತಿಳಿಸುವ ಭೂಮಿ ರಿಕಾರ್ಡುಗಳನ್ನು ನಿಮ್ಮ ತಂದೆ ತಾಯಿಗಳ ಹತ್ತಿರ ನೋಡಬಹುದು. ದೇಶದಲ್ಲಿನ ಒಟ್ಟು ಭೂಭಾಗವನ್ನು ಲೆಕ್ಕಿಸಿ. ಆ ವಿವರಗಳ ರಿಕಾರ್ಡುಗಳನ್ನು ಸಂಬಂದಿತ ಸರ್ಕಾರದ ಕಾರ್ಯಲಯಗಳಲ್ಲಿ ಇಡುವರು. ಹಾಗೆಯೇ ಭೂಮಿಗೆ ಸಂಬಂಧಿಸಿದ ಹಕ್ಕು ಪತ್ರಗಳು ಯಾಜಮಾನ್ಯ ಹಕ್ಕುಳ್ಳ ವಿವಿರ, ಪ್ರಜೆಗಳ ವಿವರಗಳು ಅದರಲ್ಲಿ ಬೆಳೆಯುವ ಬೆಳೆಗಳು, ಕೆರೆಗಳು ನೀರಾವರಿ ವಿಧಾನ ಭಾವಿಗಳು, ಸರಿಹದ್ದುಗಳು ರಸ್ತೆಗಳು ಬೆಟ್ಟಗಳು ಹೀಗೆ ವಿವಿಧ ರೀತಿಯ ವಿವರಗಳು ನಕ್ಷೆಯಲ್ಲಿರುತ್ತವೆ. ಈ ವಿಧವಾದ ಧೃವೀಕರಣ ಪತ್ರಗಳು ಎಷ್ಟೋ ಉಪಯೋಗಕರವಾದುವು. ಯಾರಿಬ್ಬರ ನಡುವೆ ಭೂಮಿಗೆ ಸಂಬಂಧಿಸಿ ಸರಿಹದ್ದಿಗೆ ಸಂಬಂಧಿಸಿದ ವಿವಾದಗಳು ತಲೆಯೆತ್ತಿದ್ದರೆ ಈ ಹಕ್ಕು ಪತ್ರಗಳ ಮೂಲಕ ಬರವಣಿಗೆ ಧ್ರುವಿಕರಣ ಪತ್ರಗಳ ಮೂಲಕ ವಿವಾದಗಳನ್ನು ಪರಿಷ್ಕರಿಸಬಹುದು. ಅಷ್ಟೇ ಅಲ್ಲದೆ ಯಾರಾದರು ತಮ್ಮ ಭೂಮಿಯನ್ನು ಮಾರಿದಾಗ ಅಥವ ಇತರರಿಂದ ಕೊಂಡಾಗ ಅದರ ವಿವರಗಳನ್ನು ದಾಖಲೆ ಮಾಡಬೇಕಾಗುತ್ತದೆ. ಅರಣ್ಯಕ್ಕೆ ಸಂಬಂಧಿಸಿದ ಭೂಮಿಗಳು ಯಾವುದೇ ವಿಧವಾದ ವ್ಯವಸಾಯ ಮಾಡದೇ ಇದ್ದುಪಶುಗಳ ಮೇವಿಗೆ ಉಪಯೋಗಿಸುವ ಭೂಮಿಗಳ ಪಟ್ಟಗಳ ವಿವರಗಳು ಕೂಡ ಇರುತ್ತವೆ. ಆದುದರಿಂದ ಯಾರಾದರೂ ಇತರರ ಭೂಮಿಗಳನ್ನು ಅಥವಾ ಸರ್ಕಾರದ ಭೂಮಿಯನ್ನು ಆಕ್ರಮಿಸಿದರೆ ಅವರನ್ನು ಕೂಡಲೇ ಖಾಲಿ ಮಾಡಿಸಬಹುದು.



ಚಿತ್ರ `19.3 ಭೂಮಿ ರಿಕಾರ್ಡುಗಳೊಂದಿಗೆ ಗ್ರಾಮ ರೆವೆನ್ಯೂ ಅಧಿಕಾರಿ

ಗ್ರಾಮ ಮಟ್ಟದಲ್ಲಿ ಗ್ರಾಮ ರೆವನ್ಯೂ ಅಧಿಕಾರಿ ಮಂಡಲ ಮಟ್ಟದಲ್ಲಿ ಮಂಡಲ ರೆವನ್ಯೂ ಅಧಿಕಾರಿ ಭೂ ಸಂಬಂಧಿತ ರಿಕಾರ್ಡುಗಳ ವಿವರಗಳಿಗೆ ಜವಾಬ್ದಾರಿ ವಹಿಸುವರು. ಹಾಗೆಯೇ ಅವರು ಆಗಿಂದಾಗ ಹೊಸ ಸಮಾಚಾರವನ್ನು ದಾಖಲಿಸುವದು. ರೇಷನ್ ಕಾರ್ಡುಗಳ ಜಾರಿ ಜವಾಬ್ದಾರಿವಹಿಸುವರು.

ಕಾನೂನುಗಳನ್ನು ಯಾವ ವಿಧವಾಗಿ ಜಾರಿ ಮಾಡುವರು?

ಇದನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ ನಮಗೆ ಮೊದಲು ಕಾನೂನು ಅಂದರೆ ಏನೆಂಬುದು ತಿಳಿಯಬೇಕು. ಹಿಂದಿನ ಪಠ್ಯಾಂಶದಲ್ಲಿ ನಾವು ನೀರಿನ ಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ವ್ಯವಸಾಯ ಅಭಿವೃದ್ಧಿಗೆ ಅದರ ಅವಶ್ಯಕತೆಯನ್ನು ಕುರಿತು ತಿಳಿದು ಕೊಂಡಿದ್ದೇವೆ. ನಮಗೆ ಪರ್ಯಾಯ ದ್ವೀಪ ನದಿಗಳು ಅರಣ್ಯ ಪ್ರಾಂತಗಳು ಇವೆ. ಆಂದ್ರ ಪ್ರದೇಶದಲ್ಲಿ ಬಹಳ ಪ್ರಾಂತಗಳಲ್ಲಿ ನೀರಿನ ಕೊರತೆ 150 ಅಡಿಗಳವರೆಗೆ ಕೊಳವೆ ಭಾವಿಗಳನ್ನು ಅಗೆಯುತ್ತಿದ್ದೇವೆ. ಹಿಗೆಂಯೇ ಮುಂದುವರೆದರೆ ಮುಂಬರುವ ದಿನಗಳಲ್ಲಿಕೊಳವೆ ಭಾವಿಗಳ ಮೂಲಕ ಸಾಗುವಳಿ ನೀರು. ಶುದ್ಧನೀರು ಲಭಿಸುವದು ಕಷ್ಟತರವೆ.

ಆಂಧ್ರ ಪ್ರದೇಶ್ ನೀರು ಭೂಮಿ ಗಿಡಗಳ ರಕ್ಷಣೆ ಕಾಯ್ದೆ2002

ಮುಂಬರುವ ತಲೆಮಾರಿನವರಿಗೆ ಜೀವನದ ಅವಶ್ಯಕತೆಗಳಿಗೆ ಪರಿರಕ್ಷಣೆಗೆ ಅವರ ಅಭಿವೃದ್ಧಿಗೆ ಈ ಸಂಪನ್ಮೂಲಗಳನ್ನು ಕಾಪಾಡುವ ಅವಶ್ಯವಿದೆ. ಇದಕ್ಕಾಗಿ ಆಂಧ್ರಪ್ರದೇಶ್ ಸರ್ಕಾರ 2002ನೇ ವರ್ಷದಲ್ಲಿ ಆಂಧ್ರ ಪ್ರದೇಶ್ ನೀರು, ಭೂಮಿ, ಗಿಡಗಳ ರಕ್ಷಣೆ ಕಾನೂನನ್ನು ಜಾರಿಗೊಳಿಸಿದೆ. ಈ ಕಾನೂನು 19–04–2002 ರಿಂದ

SCERT TELANGANA

ಜಾರಿಯಲ್ಲಿದೆ. ಈ ಕಾನೂನಿನಲ್ಲಿನ ಕೆಲವು ಮುಖ್ಯಾಂಶಗಳು ಇವು :

ಎ) ಕೊಳವೆ ಬಾವಿಗಳನ್ನು ಬಾವಿಗಳನ್ನು ತೊಡುವುದಕ್ಕಾಗಿ ಮಂಡಲ ರೆವಿನ್ಯೂ ಅಧಿಕಾರಿ ಹತ್ತಿರ ಅನುಮತಿ ತೆಗೆದುಕೊಳ್ಳಬೇಕು.

ಬಿ) ಅವಶ್ಯವಿದ್ದಲ್ಲಿ ಪೈಪೋಟಿಯನ್ನು ನಿವಾರಿಸಲು ನಿರ್ಣಯಿಸಿದ ಆಳವನ್ನು ದೂರವನ್ನು ಬಾವಿಗಳನ್ನು ತೊಡುವಲ್ಲಿ ಅನುಸರಿಸಬೇಕು.

ಸಿ) ಮಳೆ ನೀರು ವ್ಯರ್ಥವಾಗದಂತೆ ಪರಿರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಡಿ) ಪಾರಿಶ್ರಾಮಿಕ ಸಂಸ್ಥೆಗಳು ತಪ್ಪದೆ ವ್ಯರ್ಥನೀರನ್ನು ಶುದ್ಧಗೊಳಿಸಿ ಮರು ಉಪಯೋಗಿಸಿಕೊಳ್ಳಬೇಕು.

ಇ) ಶುದ್ಧ ನೀರು ಪರಿರಕ್ಷಣೆಗೆ ಕ್ರಮಕ್ಕೆ ಕೊಳ್ಳುವದು.

ಎಫ್) ಭೂಗರ್ಭಜಲ ಕಡಿಮಯಾದ ಪ್ರಾಂತಗಳಲ್ಲಿ ನದಿಗಳಿಂದ ಮರುಳು ತೆಗೆಯುವುದು ನಿಷೇದ.

ಜಿ) ಸಾಮಾಜಿಕ ಅರಣ್ಯಗಳ ಬೆಳವಣಿಗೆಯನ್ನು ವಿಸ್ತರಿಸಬೇಕು.

ಹೆಚ್) ಗಿಡಗಳನ್ನು ಅನುಮತಿ ಇಲ್ಲದಂತೆ ಕಡಿಯಬಾರದು ಅನುಮತಿಯಿಂದ ಗಿಡಗಳನ್ನು ಕಡಿದರೆ ಅದಕ್ಕೆ ಎರಡು ಗಿಡಗಳನ್ನು ತಪ್ಪದೇ ಬೆಳೆಸಬೇಕು.

ಈ ಕಾಯ್ದೆಯ ಕಾರ್ಯರೂಪಕ್ಕೆ ರಾಜ್ಯ ಸರ್ಕಾರ ಒಬ್ಬ ಅಧಿಕಾರಿಯನ್ನು ಏರ್ಪಾಟು ಮಾಡಿದೆ. ಇದರ ಹೆಸರು ಆಂಧ್ರಪ್ರದೇಶ್ ವಾಟರ್, ಲ್ಯಾಂಡ್ ಅಂಡ್ ಟ್ರೀಸ್ ಪ್ರೋಟಿಕ್ಷನ್ ಅಧಾರಿಟಿ (WALTA) ನೀವು ಈ ಕಾಯ್ದೆ ಜಾರಿಗೊಳಿಸಲು ಜಾಗ್ರತೆಯಿಂದ ಪರಿಶೀಲಿಸಿದರೆ ಈ ಕೆಳಗಿನ ಅಂಶಗಳು ತಿಳಿಯುತ್ತವೆ. ಸರ್ಕಾರದಲ್ಲಿನ ವಿವಿಧ ಶಾಖೆಗಳು ಸಂಯುಕ್ತವಾಗಿ ಕೆಲಸಮಾಡುವ ಅವಸರವಿದೆ.

ಶಾಖೆ	ವಿಷಯ
ಭೂಗರ್ಭ ಸಂಪನ್ಮೂಲ ಇಲಾಖೆ	ಕೊಳವೆ ಬಾವಿ ದಾಖಲೆ, ಮರಳು ತೆಗೆಯುವುದು, ನೀರಿನ ಸಂಪನ್ಮೂಲಗಳ ಸಿಗುವ ಪ್ರಂತಗಳ ವರ್ಗೀಕರಣ ಮೊದಲಾದವು.
ಮುನ್ಸಿಪಲ್ ಪರಿಪಾಲನೆ, ಪಟ್ಟಣ ಅಭಿವೃದ್ಧಿ ಇಲಾಖೆ	ಮಳೆ ನೀರಿನ ಸಂರಕ್ಷಣೆ, ಸಸಿನಾಟುವುದು, ಹೊಸ ಭವನಗಳ ನಿರ್ಮಾಣಗಳಿಗೆ ಅನುಮತಿ.
ಗಣಿಗಳು, ಭೂಗರ್ಭ ಶಾಖೆ	ನೀರಿನ ಸ್ಥಳಗಳಲ್ಲಿ ಮರಳು ತೆಗೆಯುವುದರ ನಿಯಂತ್ರಣ.
ಅರಣ್ಯ ಇಲಾಖೆ	ಗಿಡ ಕಡಿಯುವುದಕ್ಕೆ ಮುಂಚಿನ ಅನುಮತಿ.

ನೀವು ಅರಣ್ಯ ಶಾಖೆಯನ್ನು ಗಮನಿಸಿದರೆ ಈ ಶಾಖೆ ಅರಣ್ಯ ರಕ್ಷಣೆಯ ಮುಖಾಂತರ ನೀರಿನ ಸಂಪನ್ಮೂಲದ ದೊರೆಯುವಿಕೆಯನ್ನು ಹೆಚ್ಚಿಸುವುದು. ಹಾಗೆಯೇ ಕೈಗಾರಿಕೆ ಇಲಾಖೆಯ ನೀರನ್ನು ಕಲುಷಿತ ಮಾಡದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಅದಕ್ಕಾಗಿ ನಾವು ಸರ್ಕಾರಿ ಇಲಾಖೆಗಳಲ್ಲಿನ ವಿವಿಧ ಅಧಿಕಾರಿಗಳು (WALTA) ಕಾಯ್ದೆ ಜಾರಿಗೆತರುವ ಜವಾಬ್ದಾರಿ ವಹಿಸುತ್ತಿದ್ದಾರೆ. ಅವುಗಳನ್ನು ಮೇಲಿನ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಈ ಕಾಯ್ದೆ ಪೂರ್ಣ ಮಟ್ಟದಲ್ಲಿ ಜಾರಿಗೊಂಡರೆ ಏನು ಸಂಭವಿಸುವುದು? ಕೆಳಗಿನ ಸಮಸ್ಯೆಗಳನ್ನು ಪರಿಶೀಲಿಸಿ ಯಾವ ಶಾಖೆ ಯಾವ ವಿಧವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಮೂಲ್ಯಾಂಕನ ಮಾಡುತ್ತಾ ಒಂದಕ್ಕಿಂತ ಹೆಚ್ಚಿನ ಶಾಖೆಗಳು ಕೂಡ ಪಾಲ್ಗೋಳ್ಳ ಬೇಕಾಗುತ್ತದೆಯೋ ಪರಿಶೀಲಿಸಿ.

- ವ್ಯವಸಾಯ ಮಾಡುವದಕ್ಕೆ ಸತ್ಯವತಿ ಹೊಸದಾಗಿ ಕೊಳವೆಬಾವಿ ತೋಡಸಲು ನಿರ್ಧರಿಸಿದಳು. ಆದರೆ ಆಕೆ ತೋಡಿಸಬೇಕೆಂದಿರುವ ಸ್ಥಳದ ಪಕ್ಕದಲ್ಲಿ ಬೇರೆಯವರ ಕೊಳವೆ ಬಾವಿ ಇದೆ. ಆಕೆಯು ಯಾವ ರೀತಿಯ ನಿಬಂಧನೆಗಳನ್ನು ಪಾಲಿಸಬೇಕು?

SCERT TELANGANA

- ಪದ್ಮನಾಭ ಹೊಸದಾಗಿ ಭವನವನ್ನು ಕಟ್ಟಿಸಬೇಕೆಂದು ಕೊಂಡಿದ್ದಾನೆ. ಅದಕ್ಕೆ ತನ್ನ ಮನೆಯ ಸಮೀಪದಲ್ಲಿನ ನದಿಯಿಂದ ಮರಳನ್ನು ತರಬೇಕೆಂದು ಭಾವಿಸಿದ್ದಾನೆ. ಇದಕ್ಕೆ ಯಾರ ಅನುಮತಿ ಪಡೆಯಬೇಕು.
- ಅಪ್ಪಾರಾವು ಒಬ್ಬ ಕಾಂಟ್ರಾಕ್ಟರು. ಆತನು ಅಡವಿ ಪ್ರಾಂತದಲ್ಲಿನ ಕಲ್ಲು ಗಣಿಯನ್ನು ತೆಗೆಯಲು ಪ್ರಾರಂಭಿಸಿಕೊಂಡಿದ್ದಾನೆ, ಇದಕ್ಕೆ ಯಾವ ಇಲಾಖೆಯಿಂದ ಅನುಮತಿಪಡೆಯಬೇಕು. ನಮ್ಮಂತಹ ಪ್ರಜಾಪ್ರಭುತ್ವ ದೇಶಗಳೆಲ್ಲೆಲ್ಲಾ ನಾವು ಆಯ್ಕೆಗೊಳಿಸಿದ ಪ್ರತಿನಿಧಿಗಳು, ಸರ್ಕಾರ ನಿಯಮಿಸಿದ ಅಧಿಕಾರಿಗಳು ವಿವಿಧ ರೀತಿಯ ಪಾತ್ರಗಳನ್ನು ಪೋಷಿಸುತ್ತಾರೆ.

ನಮ್ಮಂತಹ ಪ್ರಜಾಪ್ರಭುತ್ವ ದೇಶಗಳಲ್ಲಿ ಪ್ರಜೆಗಳು ಆಯ್ಕೆಮಾಡಿದ ಪ್ರತಿನಿಧಿಗಳು ಮತ್ತು ಸರ್ಕಾರ ನಿಯಮಿಸಿದ ಅಧಿಕಾರಿಗಳು ವಿವಿಧ ರೀತಿಯ ಪಾತ್ರಗಳನ್ನು ಪೋಷಿಸುತ್ತಿದ್ದಾರೆ. ಹಿಂದಿನ ಕಾಲದ ಪ್ರಜೆಗಳ ಜೀವನವನ್ನು ಆಳಿದ ರಾಜರು, ಪುಜಾರಿಗಳಿಗಿಂತ ಇದು ಭಿನ್ನವಾದುದ್ದು. ಆದರೆ ಸಮಾಜದಲ್ಲಿ ಅಸಮಾನತೆಗಳು, ಪಕ್ಷಪಾತಗಳಂತಹವು ಅಳಿದುಹೋಗಲಿಲ್ಲ. ಇವುಗಳ ನಿರ್ಮೂಲನೆಗಾಗಿ ಕೃಷಿ ಮಾಡಬೇಕು.

ಮುಖ್ಯ ಪದಗಳು :

1. ಮೆಜೆಸ್ಟ್ರೇಟ್
2. ತಹಶೀಲ್ದಾರ್
3. ಕಾನೂನಿನ ಜಾರಿ
4. ವಿ.ಆರ್.ಓ.
5. ಜಿನ್ನಿಂಗ್

ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ :

1) ಜಿಲ್ಲಾ ಕಲೆಕ್ಟರ್–ಮೆಜಿಸ್ಟ್ರೇಟ್ ನಿರ್ವಹಿಸುವ ವಿವಿಧ ಕಾರ್ಯಕ್ರಮಗಳನ್ನು ಬರೆಯಿರಿ.

2) ಕೆಳಗೆ ಕೊಟ್ಟ ವಾಕ್ಯವನ್ನು ಸರಿಪಡಿಸಿರಿ.

ಎ) ಕಾಯ್ದೆ, ಆಯ್ಕೆಯಾದ ಪ್ರಜಾಪ್ರತಿನಿಧಿಗಳ ಮುಖಾಂತರ ಜಾರಿಯಾಗುತ್ತದೆ.

ಬಿ) ಕಲೆಕ್ಟರ್ ಮಂಡಲಕ್ಕೆ ಇನ್ ಚಾರ್ಜ ಆಗಿ ವ್ಯವಹರಿಸುತ್ತಾರೆ.

ಸಿ) ಮಂಡಲ ಅಧಿಕಾರಿ ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ಸಮಾಸ್ಯೆಗಳನ್ನು ತೀರಿಸುವರು.

ಡಿ) ತಹಶಿಲ್ದಾರ್ (ಮಂಡಲ ರೆವೆನ್ಯು ಅಧಿಕಾರಿ) ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸುವರು.

3) 160ನೇ ರಲ್ಲಿನ ತಹಶೀಲ್ದಾರು/ಗ್ರಾಮ ರೆವೆನ್ಯೂ ಅಧಿಕಾರಿ, ಪಾಠ ಓದಿ, ಕೆಳಗಿನ ಪ್ರಶ್ನೆಗೆ ಉತ್ತರಿಸಿರಿ.

ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಗ್ರಾಮಸ್ಥಾಯಿಯಲ್ಲಿ ಮಂಡಲ ಸ್ಥಾಯಿಯಲ್ಲಿ ಏಕೆ ಭದ್ರಪಡಿಸುವರು ? ಈ ಅಧಿಕಾರಿಗಳ ಮುಖ್ಯವಾದ ಕರ್ತವ್ಯಗಳು ಯಾವುವು ?

4) ಕಳೆದೆರಡು ಆಧ್ಯಾಯಗಳಲ್ಲಿ ಕಾಯ್ದೆಗಳ ತಯಾರಿ ಅವುಗಳ ಜಾರಿ ಕುರಿತು ತಿಳಿದುಕೊಂಡಿದ್ದೇವೆ. ಅವರವರ ಪಾತ್ರಗಳನ್ನು ಕೆಳಗಿನ ಪಟ್ಟಿಯಲ್ಲಿ ದಾಖಲು ಮಾಡಿ.

ಎ) ಚುನಾವಣೆಗಳಲ್ಲಿ ಸ್ಪರ್ಧೆ ಮಾಡಬಹುದು

ಬಿ) ಸರ್ಕಾರದಲ್ಲಿನ ವಿವಿಧ ಶಾಖೆಗಳಲ್ಲಿ ಭಾಗಸ್ವಾಮಿಗಳು

ಸಿ) ಕಾಯ್ದೆಗಳ ರಚನಾ ಜವಾಬ್ದಾರಿ ವಹಿಸುತ್ತಾರೆ.

ಡಿ) ಕಾಯ್ದೆಗಳ ಜಾರಿಯ ಜವಾಬ್ದಾರಿ ವಹಿಸುತ್ತಾರೆ.

ಇ) ಸಾಧಾರಣವಾಗಿ 5 ವರ್ಷಕ್ಕೆ ಒಂದು ಸಲ ಆಯ್ಕೆಯಾಗುವರು.

ಎಫ್) ವಿವಿಧ ಕೆಲಸಗಳ ನಿಮಿತ್ತ ಉದ್ಯೋಗದಲ್ಲಿ ಸೇರಿಕೊಳ್ಳುತ್ತಾರೆ.

SCERT TELANGANA

ಶಾಸನಸಭಾ ಸದಸ್ಯರು	ಪಾಲನಾಧಿಕಾರಿಗಳು

5) ಮನಿಷಾನಾಗ್ಲೆ ಕುರಿತು ಮತ್ತೊಂದು ಸಂಕ್ಷಿಪ್ತ ವಿವರಣೆ ಕೊಟ್ಟಿದೆ. ಜಾಗೃತೆಯಾಗಿ ಓದಿ ಕೆಳಗಿನ ಪಾಠ್ಯಾಂಶಗಳ ಆಧಾರವಾಗಿ ಹೋಲಿಸಿರಿ. ಪಾಠ್ಯಾಂಶ – 14 "ಮನ್ಸಬ್ ದಾರರು ಮತ್ತು ಜಾಗೀರುದಾರರು" ಮತ್ತು ಪಾಠ್ಯಾಂಶ–13 "ಸೈನಿಕ ದಳದ ನಾಯಕರು – ಅಮರನಾಯಕರು " ಅಧಾರವಾಗಿ ಕೆಳಗಿನ ಪಟ್ಟಿಕೆ ಪೂರ್ತಿ ಮಾಡಿರಿ.

ಮನಿಷಾನಾಗ್ಲೆ ಕಳೆದ ಐದು ತಿಂಗಳಿಂದ ನಲ್ಲವರಂ ಜಿಲ್ಲೆ ಕಲೆಕ್ಟರರಾಗಿ ಕೆಲಸ ಮಾಡುತ್ತಿರುವರು. ಆಕೆ ಜಿಲ್ಲಾಕಲೆಕ್ಟರ್‌ರಾಗಿ ಬರುವ ಮೊದಲು ರಾಜ್ಯದ ರಾಜಧಾನಿಯಲ್ಲಿ ಸಾರ್ವಜನಿಕ ಮಂತ್ರಿತ್ವ ಇಲಾಖೆಯಲ್ಲಿ ಉಪಕಾರ್ಯದರ್ಶಿಯಾಗಿ ಕೆಲಸಮಾಡಿದ್ದಾರೆ. ಅವರಿಗೆ ಮತ್ತೆ ಜಿಲ್ಲಾ ಕಲೆಕ್ಟರ್ ಅಥವಾ ಮತ್ತೆ ರಾಜ್ಯದ ರಾಜಧಾನಿ ಸಚಿವಾಲಯಕ್ಕೆ ವರ್ಗವಣೆಯಾಗುವ ಅವಕಾಶ ಸಹ ಇದೆ. ಅವರು ಭಾರತ ಸರ್ಕಾರ ಉದ್ಯೋಗಿ ಇವರಲ್ಲಿ ಕೆಲವರು ಪದೇಪದೇ ದೇಹಲಿ ಕೇಂದ್ರ ಸರ್ಕಾರ ಪಾಲನಾ ವ್ಯವಹಾರಗಳನ್ನು ಸಹ ನೋಡುತ್ತಿರುತ್ತಾರೆ. ಇವರೆಲ್ಲರು ಸರ್ಕಾರ ನಿರ್ವಹಿಸುವ ಪರಿಕ್ಷೆಗಳ ಮೂಲಕ ನೇಮಕವಾಗುತ್ತಾರೆ.

ಅಂಶ	ಸರ್ಕಾರಿ ಉದ್ಯೋಗಗಳು	ನಾಯಕರು	ಮನ್ಸಬ್‌ದಾರರು.
ನೇಮಕಾತಿ ವಿಧಾನ			
ವೇತನಗಳು			

6) ನಿಮ್ಮ ಜಲ್ಲಾ ನಕ್ಷೆಯಲ್ಲಿ ನಿಮ್ಮ ಮಂಡಲಕ್ಕೆ ಇರುವ ಸರಿಹದ್ದು ಮಂಡಲಗಳಿಗೆ ಬಣ್ಣಗಳನ್ನು ಹಾಕಿರಿ.

ಚರ್ಚೆ :

ಕಾನೂನಿನ–ಜಾರಿ ಕುರಿತು ರೆವಿನ್ಯೂ ಅಧಿಕಾರಿಗಳ (ತಹಶೀಲ್ದಾರು/ಮಂಡಲ ರೆವಿನ್ಯೂ ಇನ್‌ಸ್ಪೆಕ್ಟರ್/ಗ್ರಾಮ ರೆವಿನ್ಯೂ ಅಧಿಕಾರಿ) ವಿದ್ಯಾರ್ಥಿಗಳ ಮುಖಾಮುಖಿ ನಿರ್ವಹಿಸಿರಿ.

ಪ್ರಾಜೆಕ್ಟ ಕೆಲಸ :

ನಿಮ್ಮ ಪಾಠಶಾಲೆ ಉಪಧ್ಯಾಯರನ್ನು ಇಲ್ಲವೆ ಬೇರೆ ಸರ್ಕಾರಿ ಪಾಠಶಾಲೆ ಉಪಾಧ್ಯಯರನ್ನು ಸಂದರ್ಶಿಸಿರಿ. ಮಾಡಿರಿ, ಅವರ ನೇಮಕ ಯಾವ ವಿಧವಾಗಿ ನಡೆಯಿತು? ಆತನು ಯಾವ ಸರ್ಕಾರಿ ಶಾಖಾಧಿಕಾರಿಗೆ ನೇಮಕಾತಿ ರಿಪೋರ್ಟ ಮಾಡುತ್ತಾರೆ? ಆತನಿಗೆ ವರ್ಗಾವಣೆ ಇರುತ್ತದೆಯೇ ? ಆತನು ಯಾವ ವಿಧವಾಗಿ ಬಡ್ತಿ ಪಡೆಯುತ್ತಾನೆ? ಇಲ್ಲವೆ ಶಿಕ್ಷಣ ಪಡೆಯುವವನು ? ಆತನ ಜೀತಭತ್ಯಗಳಿಗೆ ಯಾರು ಜವಾಬ್ದಾರಿ ವಹಿಸುವರು? ಅವರಿಗೆ ಕೆಲಸದಲ್ಲಿ ಏನಾದರು ಸಮಸ್ಯೆಗಳಿದ್ದರೆ ಯಾರಿಗೆ ದೂರು ಕೊಡಬೇಕು?

ಪಾಠಶಾಲೆಯಲ್ಲಿ ಧಾಖಲೆ ಸಂಖ್ಯೆಯನ್ನು ಹೆಚ್ಚಿಸಲು ಮಧ್ಯಾಹ್ನ ಊಟದ ಯೋಜನೆ ಜಾರಿಗೊಳಿಸಲು ಇಲ್ಲವೆ ಇತರೆ ಬೇರೆ ನೂತನ ಕಾರ್ಯಕ್ರಮಗಳ ಜಾರಿಯಲ್ಲಿ ಅವರ ಅನುಭವಗಳು ಏನು ? ಶೇಖರಿಸಿದ ಸಮಾಚಾರ ಆಧಾರವಾಗಿ ತರಗತಿ ಕೋಣೆಯಲ್ಲಿ ವಿವರಿಸಿರಿ.

SCERT TELANGANA

ಅಧ್ಯಾಯ 18

ಜಾತಿಭೇಧ–ಸಮಾನತೆಗಾಗಿ ಹೋರಾಟ

ಜಾತಿಭೇಧ ನಮ್ಮದೇಶದಲ್ಲಿನ ಅಸಮಾನತೆಗೆ ಒಂದು ಪ್ರಧಾನ ರೂಪವನ್ನು ಸೃಷ್ಟಿಸಿದೆ. ಅನೇಕ ಪ್ರಜೆಗಳು ಜಾತಿಭೇಧತೆಗೆ ವಿರುದ್ಧವಾಗಿ ಹೋರಾಡುತ್ತಿದ್ದಾರೆ. ನಮ್ಮ ಸಂವಿಧಾನವು ಕೂಡ ಇದರ ರೂಪ ಬದಲಾಯಿಸಲು ಕೃಷಿಮಾಡುತ್ತಿದೆ. ಜಾತಿಭೇದ ರೂಪು ಬದಲಿಸಲು ನಮ್ಮ ಸರ್ಕಾರಗಳ ಪ್ರಧಾನ ಆಶಯಗಳಲ್ಲಿ ಒಂದು ಕುಲ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೋ, ಕುಲಪರವಾದ ಅಸಮಾನತೆಗಳನ್ನು ಹೋಗಲಾಡಿಸಲು ತೆಗೆದುಕೊಂಡ ಕ್ರಮಗಳನ್ನು ತಿಳಿದುಕೊಳ್ಳೋಣ.

ನಮ್ಮ ದೇಶದಲ್ಲಿ ಬಹಳ ಮಂದಿ ತಾವು ಯಾವುದೋ ಒಂದು ಕುಲಕ್ಕೆ ಸೇರಿದವರು ಎಂದು ಹೇಳುತ್ತಿರುತ್ತಾರೆ. ಅವರು ತಮ್ಮ ಹೆಸರುಗಳ ಜೊತೆಗೆ ಜಾತಿಗಳ ಹೆಸರುಗಳನ್ನು ಕೂಡ ಕಲಿಸಿ ಇಟ್ಟುಕೊಂಡಿರುತ್ತಾರೆ. ಸಾಧಾರಣವಾಗಿ ಒಂದು ಕುಲಕ್ಕೆ ಸೇರಿದವರು ಕೆಲವು ಸಾಮಾನ್ಯ ಆಚಾರಗಳನ್ನು, ಒಂದು ಪ್ರತ್ಯೇಕ ದೇವರನ್ನು ಆರಾಧಿಸುತ್ತಾರೆ. ಕುಲ ನಿಯಮಗಳನ್ನು ಆಚರಿಸುವ ಹೆಚ್ಚು ಜನ ಅವರ ಕುಲದಲ್ಲಿರುವವರನ್ನೇ ವಿವಾಹ ಮಾಡಿಕೊಳ್ಳುತ್ತಾರೆ. ಪ್ರಾಚೀನ ಕಾಲದಲ್ಲಿ ಒಂದೇ ಕುಲಕ್ಕೆ ಸೇರಿದವರು. ಒಂದೇ ವೃತ್ತಿಯನ್ನು ಮಾಡುತ್ತಿದ್ದರು. ಈಗ ಈ ಪರಿಸ್ಥಿತಿ ವೇಗವಾಗಿ ಬದಲಾಗುತ್ತಿದೆ. ಆ ವಿಧವಾಗಿ ಕುಲವ್ಯವಸ್ಥೆ ಕೆಲವು ವರ್ಗಗಳ ಪ್ರಜೆಗಳ ಮಧ್ಯ ಸಂಬಂಧಗಳನ್ನು ಸೃಷ್ಟಿಸಿದರೆ ಕೆಲವು ವರ್ಗಗಳು ಅವರನ್ನು ಬೇರೆ ಮಾಡುತ್ತವೆ.

- ಈ ಅಂಶಗಳು ನಿಮ್ಮ ಪ್ರಾಂತದಲ್ಲಿ ಎಷ್ಟರಮಟಿಗೆ ನಿಜವಾಗಿವೆ. ಅವು ಎಷ್ಟರಮಟ್ಟಿಗೆ ಬದಲಾಗಿವೆಯೋ ನಿಮ್ಮ ತರಗತಿಯಲ್ಲಿ ಚರ್ಚಿಸುತ್ತೀರಾ?

ಕುಲವ್ಯವಸ್ಥೆ ನಮ್ಮ ಸಮಾಜದಲ್ಲಿ ಅನೇಕ ಅಸಮಾನತೆಗಳನ್ನು, ಬೇಧಭಾವವನ್ನು ಹೆಚ್ಚಿಸಿವೆ. ಇದು ಹೇಗೆ ನಡೆಯುತ್ತದೆಯೋ ನೋಡೋಣ.

ಪ್ರಜೆಗಳು ತಮ್ಮ ಜೀವನಾಧಾರಕ್ಕಾಗಿ ಭೋಧನೆ ಕಟ್ಟಡ ನಿರ್ಮಾಣ, ಗಡಿಗೆ ತಯಾರಿ, ನೇಕಾರಿಕೆ, ಮೀನು ಹಿಡಿಯುವುದು. ವ್ಯವಸಾಯ ಮಾಡುವಂತಹ ವಿವಿಧ ರೀತಿಯ ಕೆಲಸಗಳಲ್ಲಿ ನಿಮಗ್ನವಾಗುತ್ತಾರೆ. ಕೆಲವು ರೀತಿಯ ಕೆಲಸಗಳು ಇತರ ಕೆಸಗಳಿಗಿಂತ ಹೆಚ್ಚು ಗೌರವಯುತವಾದವುಗಳು ಎಂದು ಭಾವಿಸುತ್ತಾರೆ. ಶುಭ್ರಗೊಳಿಸುವುದು, ಬಟ್ಟೆ ತೊಳೆಯುವುದು, ಕೂದಲು ಕತ್ತರಿಸುವುದು, ಕಸ ತೆಗೆಯುವುದು ಈ ಕೆಲಸಗಳು ಕಡಿಮೆ ಗೌರವ ಇರುವ ಕೆಲಸಗಳೆಂದು ಭಾವಿಸುತ್ತಾರೆ. ಈ ಕೆಲಸ ಮಾಡುವವರನ್ನು ಅಪವಿತ್ರರರು ಎಂದು, ಅಶುಭ್ರರೆಂದು ನೋಡುತ್ತಾರೆ. ಕುಲವ್ಯವಸ್ಥೆಯೆಂಬ ಏಣಿಯ ಮೇಲ್ಭಾಗದಲ್ಲಿ ಕೆಲವರು ಅವರ ಕೆಳಗಿನ ಭಾಗದಲ್ಲಿ ಕೆಲವರನ್ನು ತೋರಿಸಿದ್ದಾರೆ. ಈ ಏಣಿ ಮೇಲ್ಭಾಗದಲ್ಲಿ ಇರುವವರು ಉನ್ನತ ಕುಲದವರೆಂದು, ದೊಡ್ಡವರೆಂದು ತೋರಿಸಿದ್ದಾರೆ. ಅದೇ ಏಣಿಯ ಕೆಳಭಾಗದಲ್ಲಿರುವವರನ್ನು ಅಪ್ರಧಾನರು, ಅಸ್ಪೃಶ್ಯರು ಎಂದು ಕರೆಯುವರು. ಅಸ್ಪೃಶ್ಯತೆ ನಿವಾರಣೆಗೆ ಅವರಿಗೆ ಕಾಯ್ದಿರಿಸಿದ ಕೆಲಸಗಳಿಗೆ ಮಾತ್ರ ಅನುಮತಿಸಿ ಉಳಿದ ಕೆಲಸಗಳಿಗೆ ತೆಗೆದುಕೊಳ್ಳದೆ ಕುಲ ನಿಯಮಗಳನ್ನು ವಿಧಿಸಲಾಯಿತು. ಉದಾಹರಣೆಗೆ: ಕೆಲವು ವರ್ಗಗಳವರಿಗೆ ಕಸ ಎತ್ತುವುದು, ಸತ್ತ


SCERT TELANGANA

ಪ್ರಾಣಿಗಳನ್ನು ಸಾಗಿಸಲು ಮಾತ್ರವೆ ಅನುಮತಿಸುತ್ತಿದ್ದರು. ಆದರೆ ಅವರನ್ನು ಉನ್ನತ ಕುಲದವರ ಮನೆಯೊಳಗೆ ಪ್ರವೇಶಿಸುವುದಕ್ಕಾಗಲೀ, ಊರಿನ ಬಾವಿಯಿಂದ ನೀರು ತೆಗೆದುಕೊಂಡು ಹೋಗುವುದಾಗಲೀ, ದೇವಾಲಯದಲ್ಲಿ ಪ್ರವೇಶಿಸುವುದಕ್ಕೆ ಅನುಮತಿಸುತ್ತಿರಲಿಲ್ಲ. ಅವರ ಮಕ್ಕಳನ್ನು ಪಾಠಶಾಲೆಗಳಲ್ಲಿ ಇತರ ಜಾತಿಗಳಿಗೆ ಸೇರಿದ ಮಕ್ಕಳ ಬದಿಯಲ್ಲಿ (ಪಕ್ಕದಲ್ಲಿ) ಕುಳಿಸುತ್ತಿರಲಿಲ್ಲ. ಉನ್ನತ ಕುಲದವರು, ಅನುಭವಿಸುವ ಹಕ್ಕುಗಳನ್ನು ಅಸ್ಪೃಶ್ಯರು ಅನುಭವಿಸುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ.

- ಪ್ರಜೆಗಳ ಮಧ್ಯ ಕುಲವ್ಯವಸ್ಥೆ ಯಾವ ವಿಧವಾದ ಅಸಮಾನತೆಗಳನ್ನು ಹೆಚ್ಚಿಸುತ್ತವೆಂದು ಭಾವಿಸುತ್ತೀರಾ?

ಓದಿಕೊಳ್ಳುವುದು, ತಾವು ಕೋರಿದ ಉದ್ಯೋಗಗಳನ್ನು ಮಾಡುವುದಕ್ಕೆ ಕೆಲ ಜನರು ಅನುಮತಿಸದಿದ್ದರೆ ಅವರು ವಿವಕ್ಷಕ್ಕೆ ಗುರಿ ಆಗುತ್ತಿದ್ದಾರೆ ಎಂದು ಹೇಳಬಹುದು. ಭಾರತದೇಶದ ದೊಡ್ಡ ನಾಯಕರುಗಳಲ್ಲಿ ಒಬ್ಬರಾದ ಡಾಕ್ಟರ್ ಭೀಮ್‌ರಾಮ್ ರಾಮ್‌ಜೀ ಅಂಬೇಡ್ಕರ್ 1901ನೇ ವರ್ಷದಲ್ಲಿ, 9 ವರ್ಷದ ವಯಸ್ಸಿನಲ್ಲಿ ಕುಲವಿವಕ್ಷತೆಯನ್ನು ಅನುಭವಿಸಿದ ಒಂದು ಸಂಘಟನೆಯನ್ನು ನೋಡೋಣ. ಆತನು ಒಂದು ಸಲ ಕೊರೇಗಾಂನಲ್ಲಿ ಇರುವ ತನ್ನ ತಂದೆಯನ್ನು ನೋಡಲು ತನ್ನ ಸಹೋದರರ ಜೊತೆ ಹೋದನು. ಅದು ಈಗ ಮಹಾರಾಷ್ಟ್ರದಲ್ಲಿ ಇದೆ.

ಬಹಳ ಕಾಲ ಕಾಯಲಾಯಿತು. ಆದರೆ ನಮ್ಮ ಹತ್ತಿರ ಯಾರು ಬರಲಿಲ್ಲ. ಒಂದು ಗಂಟೆಯ ನಂತರ ರೈಲ್ವೇ ನಿಲ್ದಾಣದ ಮಾಸ್ಟರ್ ನಮ್ಮ ಹತ್ತಿರ ಬಂದು ಟಿಕೆಟ್ಟು ಕೇಳಿದರು. ನೀವೇಕೆ ಕಾಯುತ್ತಿದ್ದೀರಿ ಎಂದು ಕೇಳಿದರು. ನಾವು ಕೋರೆಗಾಂ ಹೋಗಬೇಕು. ನನಗೋಸ್ಕರ ನನ್ನ ತಂದೆಯವರು ಇಲ್ಲವೆ ಆತನ ಸೇವಕನಾಗಲಿ ಬರಬೇಕು. ಆದರೆ ಯಾರು ಬರಲಿಲ್ಲ. ಅಲ್ಲಿಗೆ ಹೇಗೆ ಹೋಗಬೇಕು ನನಗೆ ತಿಳಿಯುವುದಿಲ್ಲ.



ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ
(1891–1956)
ಭಾರತ ಸಂವಿಧಾನ ಮುಸಾಯಿದಾ ಕಮಿಟೀ ಅಧ್ಯಕ್ಷರು ಮತ್ತು ಮೊಟ್ಟ ಮೊದಲ ಭಾರತ ದೇಶದ ನ್ಯಾಯಾಶಾಖಾ ಮಂತ್ರಿ.

ನಾವು ಒಳ್ಳೆಯ ವಸ್ತ್ರಗಳನ್ನು ಧರಿಸಿದ್ದೇವೆ. ನಮ್ಮ ವಸ್ತ್ರಗಳು ಇಲ್ಲವೆ ಮಾತನಾಡುವ ಭಾಷೆಯಿಂದ ನಮ್ಮನ್ನು ಅಸ್ಪೃಶ್ಯರ ಮಕ್ಕಳೆಂದು ಯಾರು ಗುರ್ತಿಸಲಿಲ್ಲ. ಸ್ಟೇಷನ್ ಮಾಸ್ಟರ್ ನಮ್ಮನ್ನು ಬ್ರಾಹಣರೆಂದು ಭಾವಿಸಿ ಮುಟ್ಟಿದರು. ಎಲ್ಲರಂತೆ ಸ್ಟೇಷನ್ ಮಾಸ್ಟರ್ ನೀವು ಯಾರೆಂದು ಪ್ರಶ್ನಿಸಿದರು. ಆಗಿಂದಾಗಲೇ ನಾವು ಮಹರ್‌ಗಳು ಎಂದು (ಬಾಂಬೆ ಪ್ರೆಸಿಡೆನ್ಸಿಯಲ್ಲಿ ಮಹರ್ ಎನ್ನುವುದು ಒಂದು ಅಸ್ಪೃಶ್ಯ ಕುಲವಾಗಿ ಭಾವಿಸುತ್ತಿದ್ದರು) ಹೇಳಿದ ಕೂಡಲೇ ಆತನು ದಿಗ್ಭ್ರಾಂತನಾದನು. ಆತನ ಮುಖವು ಒಂದೇ ಸಲ ಬದಲಾಯಿತು. ತನ್ನ ಮುಖದಲ್ಲಿ ಕಾಣುವ ವಿಕರ್ಷಣೆ ಭಾವನೆಗಳು ನಿವಾರಿಸಿಕೊಳ್ಳದೇ ಹೋದನು. ಆಗಿಂದಾಗಲೆ ನಾವು ಆತನ ಕೋಣೆಯ ದೂರದಲ್ಲಿ ಮೊದಲು ನಿಂತ ಸ್ಥಳಕ್ಕೆ ಹೋದೆವು. ಸೂರ್ಯಾಸ್ತಮಯ ಆಗುತ್ತಿದೆ ಆದರೆ ನಮ್ಮ ತಂದೆಯವರಾಗಲಿ, ಆತನ ಸೇವಕನಾಗಲಿ ಬರಲಿಲ್ಲ. ನಾವು ಬಿಟ್ಟ ಸಮಯದಲ್ಲಿನ ಸಂತೋಷ ಉತ್ಸಾಹವೆಲ್ಲಾ ದುಃಖವಾಗಿ ಬದಲಾಯಿತು.

ಅರ್ಧಗಂಟೆಯ ನಂತರ ಸ್ಟೇಷನ್ ಮಾಸ್ಟರ್ ಮರಳಿ ನಮ್ಮ ಹತ್ತಿರಬಂದು ನೀವೇನು

SCERT TELANGANA

ಮಾಡಬೇಕೆಂದು ಕೊಂಡಿದ್ದೀರಿ ಎಂದು ಕೇಳಿದರು. ಒಂದು ಎತ್ತಿನ ಬಂಡಿಯು ಬಾಡಿಗೆಗೆ ದೊರೆತರೆ ಅದರ ಮೇಲೆ, ಇಲ್ಲವೇ ದೂರವಿಲ್ಲದಿದರೆ ಕಾಲುನಡುಗೆ ಮೂಲಕ ಹೋಗುವೆವೆಂದು ಹೇಳಿದೆನು. ಅಲ್ಲಿ ಬಾಡಿಗೆಗೆ ಹೋಗುವ ಎತ್ತಿನ ಬಂಡಿಗಳು ಬಹಳ ಇವೆ. ಬಂಡಿಗಳವರ ಹತ್ತಿರ ಹೋಗಿ ಕೇಳಿದರೆ ನಾವು ಮೊಹರರು ಆಗಿರುವುದರಿಂದ ಯಾರು ಕಲುಷಿತವಾಗುದಕ್ಕಾಗಲಿ, ಅಸ್ಪೃಶ್ಯರನ್ನು ಹತ್ತಿಸಿಕೊಂಡಿದ್ದಾನೆಂದು ಅನ್ನಿಸಿಕೊಳ್ಳುವುದಕ್ಕಾಗಲೀ ನಾವು ಸಂಸಿದ್ದರು ಆಗಿಲ್ಲ ಎಂದು ಹೇಳಿದರು. ನಾವು ಎರಡು ಪಟ್ಟು ಹಣಕೊಡಲು ಸಿದ್ದರಿದ್ದರೂ ಅದು ಕೆಲಸ ಮಾಡುವುದಿಲ್ಲ ಎಂದು ತಿಳಿಯಿತು. ನಮ್ಮ ಪರವಾಗಿ ಮಾತನಾಡಬೇಕೆಂದರೂ ಸ್ಟೇಷನ್ ಮಾಸ್ಟರ್ ಏನು ಮಾಡಬೇಕೆಂದು ತಿಳಿಯದೆ ಮೌನವಾಗಿದ್ದರು.

ಮೂಲಾಧಾರ: ಡಾಕ್ಟರ್ ಬಿ.ಆರ್.ಅಂಬೇಡ್ಕರ್ ರಚನೆಗಳು ಮತ್ತು ಉಪನ್ಯಾಸಗಳು ಭಾಗ–12 ವಸಂತ ಮೂನ್, ಬೊಂಬಾಯಿ ಮಧ್ಯವಿಭಾಗ ಮಹಾರಾಷ್ಟ್ರ

- ಮಕ್ಕಳು ಹಣಕೊಡಲು ಸಿದ್ದವಿದ್ದರೂ ಬಂಡಿಯವನು ನಿರಾಕರಿಸಿದನು ಏಕೆ?
- ರೈಲ್ವೇ ಸ್ಟೇಷನ್‌ನಲ್ಲಿ ಪ್ರಜೆಗಳು ಡಾಕ್ಟರ್ ಅಂಬೇಡ್ಕರ್, ಆತನ ಸಹೋದರರ ಬಗ್ಗೆ ಏಕೆ ಬೇಧಭಾವ ತೋರಿಸಿದರು ಏಕೆ?
- ಚಿಕ್ಕ ವಯಸ್ಸಿನಲ್ಲಿರುವ ಡಾಕ್ಟರ್ ಅಂಬೇಡ್ಕರ್ ನಾವು ಮಹರ್ ಕುಲಸ್ತರೆಂದು ಹೇಳಿದಾಗ ಸ್ಟೇಷನ್ ಮಾಸ್ಟರ್ ಪ್ರತಿಕ್ರಿಯೆ ನೋಡಿ ಅವರು ಯಾವ ರೀತಿಯ ಅನುಭೂತಿ ಹೊಂದಿದನೆಂದು ನೀವು ಭಾವಿಸುವಿರಿ?
- ನೀವು ಯಾವಾಗಲಾದರೂ ಜಾತಿಭೇದ ಭಾವಕ್ಕೆ ಗುರಿಯಾಗಿರುವಿರಾ? ಇಲ್ಲವೇ ಅಂತಹ ಸಂದರ್ಭವನ್ನು ನೋಡಿದ್ದೀರಾ?
- ಇದು ನಿನ್ನನ್ನು ಹೇಗೆ ಆಲೋಚಿಸುವಂತೆ ಮಾಡಿತು?

ಪ್ರಜೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ಹೋಗದಿದ್ದರೆ ಎಷ್ಟು ಕಷ್ಟವಾಗಿ ಇರುತ್ತದೆ ಊಹಿಸಿರಿ. ಯಾರಾದರೂ ನಿನ್ನನ್ನು ಅಸ್ಪೃಶ್ಯನೆಂದು ನೋಡಿದರೆ, ಎಲ್ಲರೂ ಕುಡಿಯುವ ನೀರನ್ನು ಅವರು ಕುಡಿಯುವುದಕ್ಕೆ ಅನುಮತಿಸದಿದ್ದರೆ ನಿನಗೆಂತ ಅವಮಾನ, ನೋವು ಆಗುತ್ತದೆ ಆಲೋಚಿಸಿರಿ.

ಒಂದು ಕಡೆಯಿಂದ ಮತ್ತೊಂದು ಕಡೆಗೆ ಎತ್ತುಗಳ ಬಂಡಿಯಲ್ಲಿ ಹಣ ವೆಚ್ಚಿಸಿ ಹೋಗುತ್ತವೆಂದು ಮಕ್ಕಳು ಕೋರಿದರು ಅವಕಾಶ ಸಿಗಲಿಲ್ಲವೆಂದು ಈ ಸಣ್ಣ ಸಂಘಟನೆ ಮೂಲಕ ತಿಳಿಯುತ್ತದೆ. ರೈಲ್ವೇಸ್ಟೇಷನ್‌ನಲ್ಲಿ ಇರುವ ಎತ್ತಿನಬಂಡಿಯವರೆಲ್ಲರು ಈ ಮಕ್ಕಳನ್ನು ಕರೆದುಕೊಂಡು ಹೋಗಲು ತಿರಸ್ಕರಿಸಿದರು. ಅವರು ಪಕ್ಷಪಾತ ಪೂರ್ವಕವಾಗಿ ವ್ಯವಹರಿಸಿದರು. ಈ ಕಥೆಯಿಂದ ಕುಲವಿವಕ್ಷ ದಲಿತರನ್ನು ಆರ್ಥಿಕವಾಗಿ ಕಾರ್ಯಕಲಾಪಗಳಿಂದ ನಿರೋಧಿಸುವುದಲ್ಲದೆ ಅವರ ಗೌರವವನ್ನು ಘನತೆಯನ್ನು ಪಡೆಯುದಂತೆ ಮಾಡುತ್ತದೆಂದು ಇದರ ಮೂಲಕ ಸ್ಪಷ್ಟವಾಗಿ ತಿಳಿಯುತ್ತದೆ.

ಪಾಠಶಾಲೆಯಲ್ಲಿ ವಿವಕ್ಷಕ್ಕೆ ಒಂದು ಉದಾಹರಣೆ:

ಓಂ ಪ್ರಕಾಶ್ ವಾಲ್ಮೀಕಿ ಒಬ್ಬ ಪ್ರಮುಖ ದಲಿತ ರಚನಾಕಾರ. ಜೂತಾನ್ ಎನ್ನುವ ತನ್ನ ಸ್ವಚರಿತ್ರೆಯಲ್ಲಿ ಹೀಗೆ ಬರೆದಿದ್ದಾನೆ. "ಉಳಿದವರಿಂದ ನಾನು ಬಹಳ ದೂರದಲ್ಲಿ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದೆ. ನಾನು ಕುಳಿತ ಕಡೆಯವರೆಗೂ ಚಾಪೆ ಇರುತ್ತಿರಲಿಲ್ಲ. ಕೆಲವು ಸಮಯದಲ್ಲಿ ಬಾಗಿಲ ಹತ್ತಿರ ಎಲ್ಲರ ಹಿಂದೆ ಕುಳಿತುಕೊಳ್ಳುತ್ತಿದ್ದೆ. ಕೆಲವು ಸಲ ನನನ್ನು ವಿನಾಕಾರಣ ಬಡೆಯುತ್ತಿದ್ದರು" ಓಂಪ್ರಕಾಶ್ 4ನೇ ತರಗತಿಯಲ್ಲಿ ಇರುವಾಗ ಪ್ರಧಾನೋಪಾಧ್ಯಾಯರು ನನ್ನನ್ನು ಪಾಠಶಾಲೆ ಮತ್ತು ಆಟಸ್ಥಳವನ್ನು ಶುಭ್ರಮಾಡು ಎಂದು ಹೇಳುತ್ತಿದ್ದರು. ಆ ಸಂಘಟನೆ

SCERT TELANGANA

ಕುರಿತು ಆತನು ಹೀಗೆ ಬರೆದಿದ್ದಾನೆ. ಆಟಸ್ಥಳ ಬಹಳ ವಿಶಾಲವಾದದ್ದು. ಸಣ್ಣಗಿರುವ ನನಗೆ ಅದೆಲ್ಲಾ ಶುಭ್ರಮಾಡುವುದರಿಂದ ಬೆನ್ನುನೋವು ಬರುತ್ತಿತ್ತು. ಮುಖವೆಲ್ಲಾ ದೂಳಿನಿಂದ ತುಂಬುತ್ತಿತ್ತು. ದೂಳು ಬಾಯಿಯಲ್ಲಿ ಕೂಡ ಹೋಗುತ್ತಿತ್ತು. ನನ್ನ ತರಗತಿಯಲ್ಲಿನ ಉಳಿದ ವಿದ್ಯಾರ್ಥಿಗಳೆಲ್ಲರೂ ಓದಿಕೊಳ್ಳುತ್ತಿದ್ದರೆ ನಾನು ಕಸಗೂಡಿಸುತ್ತಿದ್ದ. ಪ್ರಧಾನೋಪಾಧ್ಯಾಯರು ತನ್ನ ಕೋಣೆಯಲ್ಲಿ ಕುಳಿತು ನನ್ನನ್ನು ಗಮನಿಸುತ್ತಿದ್ದ. ಕುಡಿಯುವ ನೀರು ಕುಡಿಯಲು ಕೂಡ ನನಗೆ ಅನುಮತಿ ನೀಡುತ್ತಿರ ಲಿಲ್ಲ. ದಿನವೆಲ್ಲಾ ಗುಡಿಸುವುದು, ಬಾಗಿಲು, ಕಿಟಕಿಗಳು ಪಾಠಶಾಲೆಯಲ್ಲಿನ ಎಲ್ಲಾಕೋಣೆಗಳನ್ನು ಶುಭ್ರಮಾಡಿದೆನು. ನಾನು ಕೆಲಸಗಳು ಮಾಡುತ್ತಿರುವಾಗ ಉಪಾಧ್ಯಾರು, ವಿದ್ಯಾರ್ಥಿಗಳು ನೋಡುತ್ತಿದ್ದರು. ಓಂ ಪ್ರಕಾಶರ ಜೊತೆ ಪಾಠಶಾಲೆಯನ್ನು, ಮೈದಾನವನ್ನು ಮರು ಎರಡು ದಿನಗಳು ಗೂಡಿಸಿದರು. ಓಂಪ್ರಕಾಶ್‌ರ ತಂದೆ ಒಂದು ದಿನ ಆ ಕಡೆ ಹೋಗುತ್ತಿರುವಾಗ ತನ್ನ ಮಗ ಗುಡಿಸುತ್ತಿರುವುದನ್ನು ಗಮನಿಸಿದ. ಆತನು ಓಂಪ್ರಕಾಶ್‌ರ ಕೈಹಿಡಿದುಕೊಂಡು ಹೋಗುತ್ತಿರುವಾಗ ಉಪಾಧ್ಯಾಯರೆಲ್ಲರಿಗೂ ಹೀಗೆ ಹೇಳಿದ. " ನೀವು ಉಪಾಧ್ಯಾಯರು.. ಕಾರಣ ನಾನು ಬಿಟ್ಟು ಬಿಡುತ್ತಿದ್ದೇನೆ..... ಆದರೆ ನೀವು ಇದನ್ನು ಗುರ್ತಿಟ್ಟುಕೊಳ್ಳಿ..... ಈತನು ಸರಿಯಾಗಿ ಇಲ್ಲಿಯೇ ..... ಈ ಪಾಠಶಾಲೆಯಲ್ಲಿಯೇ ಓದುವನು. ಈತನೊಬ್ಬನೇ ಅಲ್ಲ ಈತನ ಹಿಂದೆ ಬಹಳ ಮಂದಿ ಬಂದು ಓದುತ್ತಿದ್ದಾರೆ".

- ಓಂಪ್ರಕಾಶ್ ವಾಲ್ಮೀಕಿಯನ್ನು ಉಪಾಧ್ಯಾಯರು ಸಹ ವಿದ್ಯಾರ್ಥಿಗಳು ಏಕೆ ಅಸಮಾನತೆಯಿಂದ ನೋಡಿದರೆಂದು ಭಾವಿಸುವಿರಿ?
- ನೀವೇ ಓಂ ಪ್ರಕಾಶ್ ವಾಲ್ಮೀಕಿ ಎಂದು ಊಹಿಸಿಕೊಂಡು, ಆ ಪರಿಸ್ಥಿತಿಗಳಲ್ಲಿ ನೀವು ಇದ್ದರೆ ಏನುಮಾಡುವಿರಿ ನಾಲ್ಕು ವಾಕ್ಯಗಳನ್ನು ಬರೆಯಿರಿ.

ವ್ಯಕ್ತಿಗಳನ್ನು ಸಮಾನವಾಗಿ ನೋಡಿ ಕೊಳ್ಳದಿದ್ದರೆ ಅವರ ಗೌರವಕ್ಕೆ ಆತಂಕ ಉಂಟಾಗುತ್ತದೆ. ಓಂಪ್ರಕಾಶ್ ವಾಲ್ಮೀಕಿ ಜೊತೆ ಪ್ರಧಾನೋಪಾಧ್ಯಯರು ವ್ಯವಹರಿಸಿದ ಶೈಲಿಯಿಂದ ಆತನ ಘನತೆಯನ್ನು ಅತಿಕ್ರಮಣ ಮಾಡಿ ದಂತಾಗಿದೆ. ಪಾಠಶಾಲೆಯಲ್ಲಾ ಕಸಗುಡಿಸುವುದಕ್ಕಾಗಿ ಆತನನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಆತನ ಕುಲವೇ ಕಾರಣ. ಆತನ ಹತ್ತಿರದವರು, ಉಪಾಧ್ಯಾಯರು ಆತನ ಘನತೆಗೆ ದಕ್ಕೆಯುಂಟುಮಾಡಿ, ಆತನು ಇತರ ವಿದ್ಯಾರ್ಥಿಗಳಿಗಿಂತ ಕಡಿಮೆ ಎಂದು ಭಾವಿಸಿ ವ್ಯವಹರಿಸಿ ದ್ದಾರೆ. ಓಂ ಪ್ರಕಾಶ್ ವಾಲ್ಮೀಕಿ ಚಿಕ್ಕವನಿರುವಾಗ ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಅಷ್ಟಾಗಿ ಪ್ರಯತ್ನಿಸಲಿಲ್ಲ. ಆದರೆ ತನ್ನ ಮಗ ಕಸಗೂಡಿಸುವುದನ್ನು ನೋಡಿ ಆತನ ತಂದೆ ಉಪಾಧ್ಯಯರ ಹತ್ತಿರ ಹೋಗಿ ಈ ಅಸಮಾನತೆಯನ್ನು ಕುರಿತು ಎದುರಿಸಿದರು.

ಇಂದು ಅನೇಕ ಶಿಕ್ಷಕರು ಶಾಲಾ ವಿದ್ಯಾರ್ಥಿಗಳೆಲ್ಲರಲ್ಲಿ ಸಮಾನತೆ, ಗುಣಮಟ್ಟ ಹೆಚ್ಚಿಸಲು ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅವರು ದಲಿತ ವಿದ್ಯಾರ್ಥಿಗಳನ್ನು ಅಭ್ಯಾಸಿಸಿಕೊಳ್ಳಲು ಮಾತ್ರವಲ್ಲದೆ ಅತಿಥಿಗಳನ್ನು ಸ್ವಾಗತಿಸುವುದು, ಪ್ರಾರ್ಥನಾ ಕಾರ್ಯಕ್ರಮಗಳನ್ನು ನಿರ್ವಹಿಸುವುದು ಮತ್ತು ಮುಖ್ಯವಾದ ಸಮಾರಂಭಗಳಲ್ಲಿ ಉಪನ್ಯಾಸ ನೀಡುವಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುತ್ತಿದ್ದಾರೆ. ಅಂತಹ ಶಿಕ್ಷಕರು ಮಕ್ಕಳೆಲ್ಲಾ ಸೇರಿ ಸಾಮೂಹಿಕ ಭೋಜನ ಮಾಡುವಂತೆ ಮತ್ತು ಆಹಾರ, ನೀರು ಎಲ್ಲರಿಗೂ ಹಂಚಿಕೆ ಮಾಡುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ.

- ನಿಮ್ಮ ಶಾಲೆಯಲ್ಲಿಯೇ ಆಗಲಿ ಅಥವಾ ನಿಮ್ಮ ಹತ್ತಿರದ ಶಾಲೆಯಲ್ಲಿಯೇ ಆಗಲಿ ಅಂತಹ ಶಿಕ್ಷಕರ ಪ್ರಯತ್ನವನ್ನು ನೋಡಿದ್ದೀರಾ ? ಎಂತಹ ಅನುಭವ ಹೊಂದಿರುವಿರೋ ಅವುಗಳನ್ನು ತರಗತಿಯಲ್ಲಿ ಎಲ್ಲರೊಡನೆ ಹಂಚಿಕೊಳ್ಳಿರಿ.

ಯಾವಾಗಲೂ ಹೀಗೆಯೆ ಇರುತ್ತದಯೇ?

ಇಲ್ಲ. ಒಂದಾನೊಂದು ಕಾಲದಲ್ಲಿ ಕುಲವ್ಯವಸ್ಥೆ ಇರಲಿಲ್ಲ. ಬೇಟೆಗಾರರು (ಸಂಗ್ರಹಗಾರರು) ಬುಡಕಟ್ಟು ಜನಾಂಗದವರಲ್ಲಿ ಆಹಾರ ಸಂಗ್ರಹಣೆಗಾಗಿ ಬೇಟೆಯಾಡುವವರ ಜೀವನವನ್ನು ನೋಡಿದ್ದೇವೆ. ಆವರಿಗೆ ಆ ಕಾಲದಲ್ಲಿ ಯಾವ ಕುಲವ್ಯವಸ್ಥೆಯೂ ಇಲ್ಲ. ವೇದಕಾಲದ ತರುವಾಯ ವರ್ಣವ್ಯವಸ್ಥೆ ಏರ್ಪಟ್ಟು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎನ್ನುವ ನಾಲ್ಕು ವರ್ಣಗಳು ಏರ್ಪಟ್ಟವು. ಆ ನಂತರ ಕಾಲದಲ್ಲಿ ವಿವಾಹ, ಕಲಿತು ಊಟಮಾಡು ವುದು ಮೊದಲಾದವುಗಳ ಮೇಲೆ ಪರಿಮಿತಿಯನ್ನು ವಿಧಿಸುವುದು ಅಸ್ಪೃಶ್ಯದಂತಹ ಮೊದಲಾದ ಹೊಸ ಆಚಾರಗಳು ಏರ್ಪಟ್ಟವು. ಕೆಳ ಕುಲದವರು ಉನ್ನತ ಕುಲದವರಿಗೆ ಸೇವೆಮಾಡುತ್ತಾ, ಅವರ ಹತ್ತಿರ ವಿಧೇಯರಾಗಿ ಇರಬೇಕೆಂದು ಹೇಳಿದರು. ನೀವು 11,12 ಪಾಠಗಳಲ್ಲಿ ಓದಿದಂತೆ ತೆಲಂಗಾಣದೊಂದಿಗೆ ಭಾರತದೇಶವೆಲ್ಲಾ ಇಂತಹ ಭಾವನೆಗಳು ವ್ಯಾಪಿಸಿವೆ. ಹೀಗೆ ವ್ಯಾಪಿಸಿದ ಭಾವನೆಗಳು ಬಹಳ ಮಂದಿ ವಿಮರ್ಶಿಸಿದರು. ಹುಟ್ಟುವುದರ ಮೂಲಕ ಕೆಲವರು ದೊಡ್ಡವರಾಗಿ ಇರುವುದು

SCERT TELANGANA

ಎನ್ನುವ ವಿಷಯವನ್ನು ತಾತ್ವಿಕರಾದ ಬುದ್ದನು, ಮಹಾವೀರ, ರಾಮಾನುಜಾಚಾರ್ಯ, ಬಸವಣ್ಣ, ಕಬೀರ, ವೇಮನ ನಂತವರು ವಿಮರ್ಶಿಸಿದ್ದಾರೆ. ಹುಟ್ಟು ಇಲ್ಲವೆ ವೃತ್ತಿ ಸಂಬಂಧ ಇಲ್ಲದಂತೆ, ಎಲ್ಲರೂ ಒಳ್ಳೆಯ ಕೆಲಸ ಮಾಡಬಹುದು. ಮೋಕ್ಷವನ್ನು ಸಾಧಿಸಬಹುದೆಂದು ಭೋಧಿಸಿದರು. ಇವರ ಕುರಿತು ನೀವು ಮುಂದೆ ಬರುವ ಪಾಠಗಳಲ್ಲಿ ವಿವರವಾಗಿ ಓದುತ್ತೀರಿ.

ಸಮಾನತ್ವಕ್ಕಾಗಿ ಹೋರಾಟ:

ಬ್ರಿಟೀಷ್ ರಾಜ್ಯಸ್ಥಾಪನೆ, ಅದಕ್ಕೆ ವ್ಯತಿರೇಖವಾಗಿ ಪ್ರಾರಂಭವಾದ ಹೋರಾಟಗಳನ್ನು ಕುರಿತು ನೀವು ಓದಿದ್ದೀರಲ್ಲವೆ ಬ್ರಿಟೀಷ್ ಆಡಳಿತದಿಂದ ಸ್ವಾತಂತ್ರ್ಯ ಪಡೆಯುವುದಕ್ಕೆ ಹೇಗೆ ಹೋರಾಟ ಮಾಡಿರುವಿರೋ, ಹಾಗೆಯೇ ಅನೇಕ ಮಂದಿ ಸಮಾನತೆಗಾಗಿ ಕೂಡ ಹೋರಾಟ ಮಾಡಿದ್ದಾರೆ. ದಲಿತರು, ಸ್ತ್ರೀಯರು, ಗಿರಿಜನರು, ರೈತರು ಅವರ ಜೀವನದಲ್ಲಿ ಅನುಭವಿಸಿದ ಅಸಮಾನತೆಗಳಿಗೆ ವ್ಯತಿರೇಕವಾಗಿ ಹೋರಾಡಿದರು.

19–20ನೇ ಶತಮಾನದಲ್ಲಿ ಅನೇಕ ಮಂದಿ ಸಂಘಸಂಸ್ಕರ್ತರು ಸ್ವೇಚ್ಛೆ, ಸಮಾನತೆ, ಸೋದರ ಭಾವನೆ, ವ್ಯಕ್ತಿಗೌರವ, ಆರ್ಥಿಕ ನ್ಯಾಯ ಆಧಾರವಾಗಿ ಒಂದು ಹೊಸ ಸಮಾಜವನ್ನು ರೂಪಿಸುವುದಕ್ಕಾಗಿ ಪ್ರಯತ್ನ ಮಾಡಿದರು. ಅವರಲ್ಲಿ ಜ್ಯೋತಿರಾವ್ ಗೋವಿಂದರಾವು ಪೂಲೆ, ಸಾವಿತ್ರಿಬಾಯಿ ಪೂಲೆ, ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯಕರ್, ಶ್ರೀನಾರಾಯಣ ಗುರು, ಅಯ್ಯಂಕಾಲಿ ಮೊದಲಾದವರು ಮುಖ್ಯರು.

ವಸಾಹತು ಪಾಲನಾ ಕಾಲದಲ್ಲಿ ತೆಲಂಗಾಣ ಪ್ರಾಂತದಲ್ಲಿಯೂ ಕೂಡ ಸಾಮಾಜಿಕ ಸಮೀಕರಣ ಚಳುವಳಿಗಳು ಆರಂಭವಾದವು. ಪಿ.ವೆಂಕಟಸ್ವಾಮಿ, ಈಶ್ವರೀಬಾಯಿ, ಟಿ.ಎಸ್.ಸದಾಲಕ್ಷ್ಮಿ, ಸಿ.ಎಸ್. ಯತಿರಾಜನ್ ಅರಿಗೆ ರಾಮಸ್ವಾಮಿ, ಎಂ. ವೆಂಕಟಸ್ವಾಮಿ, ಬಿ.ಎಸ್.ವೆಂಕಟರಾವು ಮೊದಲಾದ ಪ್ರಮುಖರು ಈ ಚಳುವಳಿಯಲ್ಲಿ ಭಾಗವಹಿಸಿದರು. ಅವರಲ್ಲಿ ಕೆಲವರ ಬಗ್ಗೆ ಈಗ ತಿಳಿದುಕೊಳ್ಳೋಣ.

ಬಿ.ಎಸ್.ವೆಂಕಟ್ರಾವು(1896–1953):

ರಾವ್‌ಸಾಹೇಬ್ ಖ್ಯಾತಿ ಪಡೆದ ಬಾತುಲ ವೆಂಕಟರಾವು ಹೈದ್ರಾಬಾದನಲ್ಲಿಯ ಘಾಸ್ ಮಂಡಿ ಪ್ರಾಂತದಲ್ಲಿ ಜನ್ಮಿಸಿದನು. ಆತನ ತಂದೆ ಬಾತುಲ ಸಾಯನ್ನ ಯ್ಯುರೋಪಿಯನ್ನರಲ್ಲಿ ಮನೆ ಕೆಲಸ ಮಾಡುತ್ತಿದ್ದನು. 9ನೇ ತರಗತಿಯವರೆಗೆ ಅಭ್ಯಾಸ ಮಾಡಿದ ವೆಂಕಟ್ರಾವು ತೆಲುಗು, ಇಂಗ್ಲೀಷ್, ಉರ್ದು, ಪರ್ಷಿಯನ್ ಮತ್ತು ಮರಾಠಿ ಭಾಷೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದನು.

ನಿಜಾಂ ಸರಕಾರದಲ್ಲಿ ಜನರ ಕಲ್ಯಾಣ ಶಾಖೆಯಲ್ಲಿ ಸೇರುವುದಕ್ಕಿಂತ ಮೊದಲು ಆತನು ಪೂನಾದಲ್ಲಿ ಶಿಲ್ಪಿಯಾಗಿ ಕೆಲಸ ಮಾಡಿದನು. ಸ್ವಾತಂತ್ರ್ಯ ಪೂರ್ವದಲ್ಲಿ ನಿಜಾಂ ಸರಕಾರದಲ್ಲಿ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿದರು.

ತುಳಿತಕ್ಕೊಳಗಾದ ವರ್ಗಗಳ ಮೇಲೆ ಅಸ್ಪೃಶ್ಯತೆಯ ಪ್ರಭಾವ ವಿರುವುದರಿಂದ, ಅಸ್ಪೃಶ್ಯತೆಯನ್ನು ನಿರ್ನಾಮ ಮಾಡಬೇಕೆಂದು ನಿರ್ಣಯಿಸಿಕೊಂಡನು. ಈ ಉದ್ದೇಶ ಸಾಧನೆಗಾಗಿ ಆತನು ಎಂ.ಗೋವಿಂದ ರಾಜುಲು ಮತ್ತು ಎಂ.ವೆಂಕಟಸ್ವಾಮಿ ಸಹಕಾರದಿಂದ 1922 ರಲ್ಲಿ ಆದಿ ದ್ರಾವಿಡ ಸಂಘವನ್ನು ಸ್ಥಾಪಿಸಿದನು. ದೇವದಾಸಿ ವಿಧನವನ್ನು ರದ್ದುಪಡಿಸುವುದು, ದಲಿತರಲ್ಲಿ ಐಕ್ಯತೆಯನ್ನು ಸಾಧಿಸುವುದು ಈ ಸಂಸ್ಥೆಯ ಪ್ರಧಾನ ಉದ್ದೇಶವಾಗಿದ್ದಿತು. ನಂತರ ಏಪ್ರಿಲ್ 1927 ಆದಿ ಹಿಂದೂ ಮಹಾಸಭೆಯನ್ನು ಸ್ಥಾಪಿಸಿದನು. ಒಂದು ದಶಕದ ನಂತರ ಪೂನಾದಲ್ಲಿ ನಡೆದ ಪರಿಣಾಮಕಾರಿ ಚರ್ಚೆಯ ನಂತರ ಕುಲ ತಾರತಮ್ಯತೆಯ ಬಗ್ಗೆ ದಲಿತರನ್ನು ಚೈತನ್ಯಗೊಳಿಸುವ ಉದ್ದೇಶದಿಂದ ಅಂಬೇಡ್ಕರ್ ಯುವಜನ ಸಂಘವನ್ನು (Youth league of Ambedkarites) ಸ್ಥಾಪಿಸಿದನು. ನಂತರ ಅದು ಹೈದರಾಬಾದ್ ರಾಜ್ಯ ತುಳಿತಕ್ಕೊಳಗಾದವರ ಸಂಘವಾಗಿ (Hyderabad State depressed classes association) ಮಾರ್ಪಟ್ಟಿತು.

ಈ ಸಂಘದ ನಾಯಕರು ರಾಜ್ಯಾದ್ಯಂತ ಪರ್ಯಟಿಸುತ್ತಾ ಸಣ್ಣ ಸಣ್ಣ ಸಮಾವೇಶಗಳನ್ನು ಏರ್ಪಡಿಸಿ ಕುಲಪರ ದಾಳಿಗಳನ್ನು, ಕುಲ ತಾರತಮ್ಯ ವಿಮುಕ್ತಿ ಚಳುವಳಿ, ದಲಿತರ ರಕ್ಷಣೆಗಾಗಿ ಐಕ್ಯತೆ ಮೊದಲಾದ ವಿಷಯಗಳ ಬಗ್ಗೆ ದಲಿತರನ್ನು ಚೈತನ್ಯ ಪಡಿಸಲು ಪ್ರಯತ್ನಿಸಿದರು. ಇವರಲ್ಲಿ ಕೆಲವರು ದಲಿತರಲ್ಲಿಯ ಮೂಢನಂಬಿಕೆಗಳನ್ನು ಹೊಡೆದೋಡಿಸಿ ಕುಲಪರವಾದ ಸುಧಾರಣೆಗಳನ್ನು ಪ್ರಚಾರ ಮಾಡಿದರು.

ಅವರು ಘಾಸನಗರ್ ಪ್ರಾಂತದಲ್ಲಿ ಮನೆಗಳು, ಗ್ರಂಥಾಲಯಗಳನ್ನು ನಿರ್ಮಿಸಿ, ಆ ಪ್ರಾಂತಕ್ಕೆ "ಆದಿನಗರ" ಎಂದು ನಾಮಕರಣ ಮಾಡಿದರು. ಹೈದರಾಬಾದ್ ನಗರದಲ್ಲಿ ದಲಿತರಿಗಾಗಿ 18 ದೇವಾಲಯಗಳನ್ನು ಕಟ್ಟಿಸಿದನು. ಬಿ.ಎಸ್.ವೆಂಕಟ್ರಾವು ದಲಿತರಿಗೆ ಮಾಡುತ್ತಿರುವ ಸೇವೆಯನ್ನು ಗುರುತಿಸಿದ ಡಾ.ಬಾಬಾಸಾಹೇಬ್ ಅಂಬೇಡ್ಕರ್ 1936ರಲ್ಲಿ ಬೊಂಬಾಯಿ ಪ್ರೆಸಿಡೆನ್ಸಿ ಮೆಹರ್ ಸಮಾವೇಶಕ್ಕೆ ಆಹ್ವಾನಿಸಿದನು. ಈ ಸಮಾವೇಶದಲ್ಲಿ ಡಾ. ಬಿ.ಆರ್. ಅಂಬೇಡ್ಕರನ ಪ್ರತಿಪಾದನೆಗಳನ್ನು ಸಮಾವೇಶಕ್ಕೆ ಹಾಜರಾದ 10,000 ಜನರು ಸರ್ವಾನುಮತದಿಂದ ಅನುಮೋದಿಸಿದರು.

SCERT TELANGANA

ಏಪ್ರಿಲ್ 1, 1947 ರಲ್ಲಿ ಹೈದರಾಬಾದ್ ವಿಧಾನ ಸಭೆಯಲ್ಲಿ ಪಾಲಯ ಪಿಳ್ಳೈ ಪ್ರವೇಶಪಡಿಸಿದ ತೀರ್ಮಾನದ ಮೇಲೆ ನಡೆದ ಚರ್ಚೆಯ ನಂತರ, ತುಳಿತಕ್ಕೊಳಗಾದವರ ಅಭಿವೃದ್ಧಿಗಾಗಿ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಪರಿಷತ್ ಅಧ್ಯಕ್ಷರಿಗೆ ಮನವಿ ಮಾಡುತ್ತಾ ನಿರ್ಣಯ ತೆಗೆದುಕೊಳ್ಳಲಾಯಿತು. ಆದರೆ ವೆಂಕಟ್ರಾವು ಪ್ರತಿಪಾದಿಸಿದ ತಿದ್ದುಪಡಿಯಿಂದಾಗಿ 1 ಕೋಟಿಯನ್ನು ಮಂಜೂರು ಮಾಡಬೇಕೆಂದು ಪ್ರಧಾನಮಂತ್ರಿಯನ್ನು ಕೋರಿದನು.

ಅದಕ್ಕನುಗುಣವಾಗಿ ನಿಜಾಂ ರಾಜನು ತುಳಿತಕ್ಕೊಳ ಗಾದವರ ಕಲ್ಯಾಣಕ್ಕಾಗಿ 1 ಕೋಟಿ ರೂಪಾಯಿಗಳನ್ನು ನೀಡಿದನು. ನಿಜಾಂ ಈತನನ್ನು "ಖಿರ್ಸ–ಇ–ದಕ್ಕನ್" ಎಂಬ ಬಿರುದು ನೀಡಿ ಗೌರವಿಸಿದನು. 1952 ರಲ್ಲಿ ಬಿ.ಎಸ್.ವೆಂಕಟ್ರಾವ್ ರಾಜ್ಯ ವಿಧಾನಸಭೆಯಿಂದ ರಾಜ್ಯಸಭಾ ಸದಸ್ಯನಾಗಿ ಚುನಾಯಿತನಾದನು.

ಸ್ವಾತಂತ್ರ್ಯದ ನಂತರ ಸಮಾನತ್ವ

1947ರಲ್ಲಿ ಭಾರತ ದೇಶವು ಸ್ವಾತಂತ್ರ್ಯ ಪಡೆದಾಗ ನಮ್ಮ ದೇಶದಲ್ಲಿ ಇರುವ ಅನೇಕ ವಿಧದ ಅಸಮಾನತೆಗಳನ್ನು ಕುರಿತು ನಾಯಕರು ಆಲೋಚಿಸಿದರು. ದೇಶವನ್ನು ಪರಿಪಾಲಿಸುವುದಕ್ಕಾಗಿ ಇರುವ ನಿಯಮಗಳನ್ನು ತಿಳಿಸುವ ಭಾರತ ಸಂವಿಧಾನವನ್ನು ಬರೆದ ಎಲ್ಲರೂ ಹಿಂದಿನ ಸಮಾಜದಲ್ಲಿ ಆಚರಣೆಯಲ್ಲಿರುವ ಭೇದಗಳು, ಅದಕ್ಕೆ ವ್ಯತಿರೇಕವಾಗಿ ನಡೆದ ಹೋರಾಟಗಳನ್ನು ಕುರಿತು ತಿಳಿದಿರುವಿರಿ. ಡಾಕ್ಟರ್ ಅಂಬೇಡ್ಕರ್ ನಂತಹ ನಾಯಕರು ದಲಿತರ ಹಕ್ಕುಗಳಿಗಾಗಿ ಹೋರಾಟ ಮಾಡಿದರು.

ಇವರೆಲ್ಲಾ ಭಾರತೀಯರೆಲ್ಲರನ್ನು ಸಮಾನವಾಗಿ ನೋಡಲು ಸಂವಿಧಾನದಲ್ಲಿ ಗುರಿಗಳನ್ನು ದಾಖಲಿಸಿದ್ದಾರೆ. ಈ ಸಮಾನತ್ವ ಭಾವನೆ ಭಾರತೀಯರೆಲ್ಲರಿಗೂ ಕಲಿಸಿ ಇಡಲಾಗಿದೆ. ಪ್ರತಿಯೊಬ್ಬರು ಸಮಾನ ಹಕ್ಕುಗಳ ಅವಕಾಶವನ್ನು ಪಡದುಕೊಂಡಿರಬೇಕು. ಅಸ್ಪೃಶ್ಯತೆಯು ಒಂದು ಅಪರಾಧ. ಅದಕ್ಕಾಗಿ ಇದನ್ನು ನ್ಯಾಯಬದ್ಧವಾಗಿ ರದ್ದುಮಾಡಲಾಗಿದೆ. ಪ್ರಜೆಗಳು ತಮಗೆ ಇಷ್ಟವಾದ ಕೆಲಸ ಮಾಡಲು ಸ್ವೇಚ್ಛೆ ಕಲ್ಪಿಸಲಾಗಿದೆ. ಸರ್ಕಾರಿ ಉದ್ಯೋಗಗಳು ವಿವಕ್ಷತೆ ಇಲ್ಲದೆ ಎಲ್ಲರೂ ಪಡೆಯುತ್ತಿದ್ದಾರೆ. ಇದರೊಂದಿಗೆ ಭಾರತ ಸಂವಿಧಾನ ಬಡ, ಬಲಹೀನ ವರ್ಗದ ಪ್ರಜೆಗಳೆಲ್ಲರಿಗೂ ಸಮಾನತೆಯ ಹಕ್ಕು ಸಾಧಿಸುವುದಕ್ಕಾಗಿ ಪ್ರತ್ಯೇಕ ಕ್ರಮಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಸರ್ಕಾರಗಳ ಮೇಲೆ ಇಡಲಾಗಿದೆ.

ಸಮಾನತೆ ಸಾಧಿಸುವುದಕ್ಕಾಗಿ ಸರ್ಕಾರಗಳು ಎರಡು ವಿಧದಲ್ಲಿ ಪ್ರಯತ್ನಿಸುತ್ತಿದೆ. ಒಂದು ಕಾಯ್ದೆಗಳನ್ನು ಮಾಡಿ ಜಾರಿಗೊಳಿಸುವುದು, ಎರಡನೇಯದು ಸರ್ಕಾರಿ ಯೋಜನೆಗಳ ಮುಖಾಂತರ ತುಳಿತಕ್ಕೆ ಒಳಗಾದ ವರ್ಗದವರ ಅಭ್ಯುನ್ನತಿಗೆ ಕೃಷಿ ಮಾಡುವುದು. ಸಮಾನತೆಗೋಸ್ಕರ ಸರ್ಕಾರಗಳು ಅನೇಕ ಕಾಯ್ದೆಗಳನ್ನು ಮಾಡಿ, ಪ್ರತಿ ಒಬ್ಬರ ಹಕ್ಕುಗಳನ್ನು ಕಾಪಾಡುವ ಪ್ರಯತ್ನ ಮಾಡುತ್ತಿದೆ. ಕಾಯ್ದೆಗಳ ಮೂಲಕ ಸರ್ಕಾರ ಅನೇಕ ಯೋಜನೆಗಳ ಮುಖಾಂತರ ಅನೇಕ ಶತಮಾನಗಳಿಂದ ಅಸಮಾನತೆಗೆ ಗುರಿಯಾಗುತ್ತೀರುವ ಅನೇಕ ಜನರ ಅಭಿವೃದ್ಧಿಗೋಸ್ಕರ ಪ್ರಯತ್ನಿಸುತ್ತಿದೆ. ಈ ಯೋಜನೆಗಳು ಬಹಳ ಜನರಿಗೆ ಹಿಂದೆಂದಿಗಿಂತಲೂ ಒಳ್ಳೆಯ ಅವಕಾಶಗಳನ್ನು ಕಲ್ಪಿಸುತ್ತಿವೆ.

ಸರ್ಕಾರವು ತೆಗೆದುಕೊಂಡ ಕ್ರಮಗಳಲ್ಲಿ ಮಧ್ಯಾಹ್ನ ಊಟ ಯೋಜನೆಯೂ ಒಂದು. ಈ ಯೋಜನೆ ಕೆಳಗೆ ಎಲ್ಲಾ ಸರ್ಕಾರಿ ಪಾಠಶಾಲೆಯಲ್ಲಿಯ ವಿದ್ಯಾರ್ಥಿಗಳೀಗೆ ಮಧ್ಯಾಹ್ನದ ಊಟ ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆ ಭಾರತದೇಶದಲ್ಲಿಯೇ ಮೊದಲಿಗೆ ತಮಿಳುನಾಡು ರಾಷ್ಟ್ರದಲ್ಲಿ ಪ್ರಾರಂಭಿಸಲಾಯಿತು. 2001 ವರ್ಷದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯ ಎಲ್ಲಾ ರಾಷ್ಟ್ರ ಸರ್ಕಾರಗಳು ಈ ಯೋಜನೆ ಯನ್ನು ಆರು ತಿಂಗಳುಗಳೊಳಗೆ ಪ್ರಾರಂಭಿಸಬೇಕೆಂದು ಆದೇಶಿಸಿತು. ಈ ಯೋಜನೆಯಿಂದ ಅನೇಕ ಅನುಕೂಲ ಫಲಿತ ಕೊಟ್ಟಿದೆ. ಹೆಚ್ಚು ಮಂದಿ ಬಡ ಮಕ್ಕಳು ಪಾಠಶಾಲೆಯಲ್ಲಿ ಸೇರುವುದು, ಪ್ರತಿದಿನ ಪಾಠಶಾಲೆಗೆ ಹೋಗುವುದು ಪ್ರಾರಂಭವಾಯಿತು. ಹಿಂದೆ ಆಹಾರಕ್ಕಾಗಿ ವಿದ್ಯಾರ್ಥಿಗಳು ಮನೆಗೆ ಹೋಗಿ ಮಧ್ಯಾಹ್ನ ಪಾಠಶಾಲೆಗೆ ಬರುತ್ತಿರಲಿಲ್ಲವೆಂದು, ಪ್ರಸ್ತುತ ಈ ಯೋಜನೆಯಿಂದ ವಿದ್ಯಾರ್ಥಿಗಳ ಹಾಜರು ಹೆಚ್ಚಾಗಿದೆಯೆಂದು ಉಪಾಧ್ಯಾಯರು ಹೇಳುತ್ತಿದ್ದಾರೆ. ವಿದ್ಯಾರ್ಥಿಗಳು ಊಟಕ್ಕಾಗಿ ಮನೆಗೆ ಹೋದಾಗ ಅವರ ತಾಯಂದಿರು, ಅವರವರ ಕೆಲಸಗಳನ್ನು ನಿಲ್ಲಿಸ ಮಕ್ಕಳಿಗೆ ಊಟ ಇಡಬೇಕಾಗುತ್ತಿತ್ತು. ಆದರೆ ಪ್ರಸ್ತುತವಾಗಿ ಅದು ಅವಸರವಿಲ್ಲ. ಮೇಲು, ಕೀಳು ಜಾತಿಯ ಮಕ್ಕಳು ಪಾಠಶಾಲೆಯಲ್ಲಿ ಸೇರಿ ಊಟ ಮಾಡುವುದರಿಂದ ಕುಲ ದುರಾಭಿಮಾನ ಕಡಿಮೆಯಾಗಿದೆ. ಆಂಧ್ರಪ್ರದೇಶದಲ್ಲಿ ಸುಮಾರು ಎಲ್ಲಾ ಗ್ರಾಮೀಣ ಪಾಠಶಾಲೆಗಳಲ್ಲಿ ಮಧ್ಯಾಹ್ನ ಊಟಕ್ಕಾಗಿ ಮಹಿಳಾ ಸ್ವಯಂ ಸಹಾಯಕ ಸಂಘಗಳು ತಯಾರು

SCERT TELANGANA

ಮಾಡುತ್ತಾರೆ. ಅವರಲ್ಲಿ ಬಹಳಷ್ಟು ಜನ ತುಳಿತಕ್ಕೊಳಗಾದ ವರ್ಗದವರು, ಕೆಲವು ಸ್ಥಳಗಳಲ್ಲಿ ದಲಿತ ಮಹಿಳೆಯರು ಅಡುಗೆ ಮಾಡುತ್ತಿದ್ದಾರೆ. ಈ ಯೋಜನೆಯು ಖಾಲಿ ಇರುವ ಹೊಟ್ಟೆಯಿಂದ ಶಾಲೆಗೆ ಬಂದು, ಓದಿನ ಕಡೆಗೆ ಏಕಾಗ್ರತೆ ವಹಿಸಿದ ಬಡಮಕ್ಕಳಿಗೆ ಹಸಿವು ತೀರಿಸುತ್ತಿದೆ.

- ಈ ಯೋಜನೆಯಿಂದ ಉಂಟಾಗುವ ಉಪಯೋಗಗಳೇನು?
- ಈ ಯೋಜನೆಯಿಂದ ಸಮಾನತೆಯನ್ನು ಹೇಗೆ ಸಾಧಿಸುತ್ತದೆಂದು ಭಾವಿಸುವೆ?

ಸರ್ಕಾರಿ ಯೋಜನೆಗಳು ಸಮಾನತೆಯ ಅವಕಾಶಗಳನ್ನು ಹೆಚ್ಚಿಸಲು ಮುಖ್ಯಪಾತ್ರ ವಹಿಸುತ್ತವೆ. ಇನ್ನೂ ಮಾಡುವುದು ಬಹಳಷ್ಟಿದೆ. ಮಧ್ಯಾಹ್ನ ಊಟದ ಯೋಜನೆಯಿಂದ ಬಡ ವಿದ್ಯಾರ್ಥಿಗಳ ದಾಖಲು, ಹಾಜರು ಹೆಚ್ಚುತ್ತಿದ್ದರು, ಶ್ರೀಮಂತರ ಮಕ್ಕಳು ಓದಿಕೊಳ್ಳಲು ಪಾಠಶಾಲೆಗಳಿಗೆ ಬಡ ಮಕ್ಕಳು ಓದಿಕೊಳ್ಳುವ ಪಾಠಶಾಲೆಗಳಿಗೆ ಮಧ್ಯ ಬಹಳ ವ್ಯತ್ಯಾಸ ಕಾಣಿಸುತ್ತಿದೆ. ಓಂಪ್ರಕಾಶ್ ವಾಲ್ಮೀಕಿ ಅವರಂತಹ ಮಕ್ಕಳು ಇನ್ನೂ ಇಂದಿನ ಅನೇಕ ಪಾಠಶಾಲೆಗಳಲ್ಲಿ ವಿವಕ್ಷಕ್ಕೆ ಗುರಿಯಗುತ್ತಲೇ ಇದ್ದಾರೆ. ಪ್ರಜೆಗಳು ವಿವಕ್ಷಕವನ್ನು ಕುರಿತು ಇನ್ನೂ ಆಲೋಚಿಸಬೇಕಾಗಿದೆ.

ಇದಕ್ಕೆ ಪ್ರಧಾನ ಕಾರಣ ನಮ್ಮ ನಡವಳಿಕೆ, ಆದರೆ ವೈಖರಿಯಲ್ಲಿ ಬದಲಾವಣೆ ನಿಧಾನವಾಗಿ ಬರುತ್ತಿದೆ. ವಿವಕ್ಷ ಕಾಯ್ದೆ ವ್ಯತಿರೇಕವೆಂದು ತಿಳಿದರು, ಪ್ರಜೆಗಳ ಕುಲ, ಮತ ವೈಕಲ್ಯ, ಆರ್ಥಿಕಸ್ಥಿತಿ, ಲಿಂಗವಿವಕ್ಷ ಆಧಾರವಾಗಿ ಅಸಮಾನತೆಗಳನ್ನು ಮುಂದುವರೆಸು ತ್ತಿದ್ದಾರೆ. ಪ್ರಜೆಗಳು ಆತ್ಮನ್ಯೂನ್ಯತೆಯ ಭಾವನೆಯನ್ನು ಇಲ್ಲದಂತೆ ಪ್ರತಿ ಒಬ್ಬರನ್ನು ಗೌರವ ಮರ್ಯಾದಿಗಳಿಂದ ನೋಡುವುದಾದರೆ ವೈಖರಿ ಬದಲಾಗುತ್ತದೆ. ಪ್ರಜಾಸ್ವಾಮ್ಯ ಸಮಾಜದಲ್ಲಿ ಸಮಾನತ್ವವನ್ನು ಸಾಧಿಸುವುದು ಒಂದು ನಿರಂತರ ಹೋರಾಟ. ವಯಕ್ತಿಕವಾಗಿ ಸಾಮಾಜಿಕವಾಗಿ ಪ್ರತಿ ಒಬ್ಬರು ತಮ್ಮ ಪಾಲಿನ ಕೃಷಿಮಾಡಿದರೆ ಸಮಾನತೆಯನ್ನು ಸಾಧಿಸುವುದು ಸಾಧ್ಯವಾಗುತ್ತದೆ.

ಮುಖ್ಯ ಪದಗಳು:

1. ಅಸ್ಪೃಶ್ಯತೆ 2. ಯೋಜನೆಗಳು 3. ಸಂವಿಧಾನ 4. ಜೀವನ ಚರಿತ್ರೆ

ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1 ಒಂದು ತಪ್ಪಿನಿಂದ ಶಿಕ್ಷಿಸುವುದಕ್ಕೆ ಬೇದಭಾವದಿಂದ ನೋಡುವುದಕ್ಕೆ ಮಧ್ಯ ಇರುವ ವ್ಯತ್ಯಾಸವೇನು? ಅಂಬೇಡ್ಕರ್ ಬಾಲ್ಯದಲ್ಲಿ ಶಿಕ್ಷಿಸಲ್ಪಟ್ಟರೇ ಇಲ್ಲವೆ ವಿವಕ್ಷತೆಗೆ ಗುರಿಯಾಗಿದ್ದಾರೆಯೇ?

2. ನಮ್ಮ ಸಮಾಜದಲ್ಲಿ ಎಷ್ಟೋ ಕುಲಗಳಿದ್ದಾಗ್ಯೂ ಅವರಲ್ಲಿ ಸಮಾನತೆ ಯಾವಾಗ ಕಾಣಿಸುತ್ತದೆ ?

3. ನಮ್ಮ ಸಂವಿಧಾನ ಅಸ್ಪೃಶ್ಯತೆಯನ್ನು ನಿರ್ಮೂಲಿಸಿ, ಇದನ್ನು ಒಂದು ಅಪರಾಧವಾಗಿ ಪ್ರಕಟಿಸಿದೆ. ಇದು ಆಚರಣೆಯಲ್ಲಿ ಪೂರ್ಣನಿರ್ಮೂಲನೆ ಆಗಿದೆಯೆಂದು ನೀವು ಭಾವಿಸುವಿರಾ?

4. ಕುಲಪರವಾದ ಅಸಮಾನತೆಯನ್ನು ತೊಲಗಿಸಲು ಪಾಠಶಾಲೆಯಲ್ಲಿ ಹೇಗೆ ಸಹಾಯ ಪಡುತ್ತದೆ?

5. ಸಮಾನತ್ವ ಸಾಧಿಸುವುದಕ್ಕೆ ------- ಕಲ್ಪಿಸಲಾಗುತ್ತಿದೆ. (ಪುಟ ಸಂಖ್ಯೆ 170 ರಲ್ಲಿನ ಪ್ಯಾರಾವನ್ನು ಓದಿ ವ್ಯಾಖ್ಯಾನಿಸಿರಿ.

ಪ್ರಾಜೆಕ್ಟ್ ಕೆಲಸ

1 ನಿಮ್ಮ ಪ್ರಾಂತದಲ್ಲಿ ಒಂದು ಸರ್ಕಾರಿ ಯೋಜನೆಯನ್ನು ಕುರಿತು ಹೇಳಿರಿ. ಆ ಯೋಜನೆ ಏತಕ್ಕಾಗಿ ? ಅದರ ಯಾರ ಪ್ರಯೋಜನಕ್ಕಾಗಿ ಉದ್ದೇಶಿಸಿಲಾಗಿದೆ?

2 ನಿಮ್ಮ ತಂದೆತಾಯಿಗಳೊಂದಿಗೆ ಮಾತನಾಡಿ ಅವರ ಬಾಲ್ಯದಲ್ಲಿ ಕುಲ ವ್ಯವಸ್ಥೆ ಹೇಗೆ ಇರುವುದೋ, ಕ್ರಮವಾಗಿ ಯಾವ ಯಾವ ಬದಲಾವಣೆಗಳು ಆಗಿವೆಯೋ ಯಾವುವು ಹಾಗೆಯೇ ಮುಂದುವರೆಯುತ್ತಿವೆಯೋ ತಿಳಿದುಕೊಂಡು ತರಗತಿಯ ಕೋಣೆಯಲ್ಲಿ ಚರ್ಚಿಸಿರಿ. ಒಂದು ವರದಿಯನ್ನು ತಯಾರಿಸಿ ಪ್ರದರ್ಶಿಸಿರಿ.

SCERT TELANGANA

ಅಧ್ಯಾಯ 19

ಜೀವನಾಧಾರ–ಪಟ್ಟಣ ಕಾರ್ಮಿಕರ ಹೋರಾಟಗಳು

9ನೇ ಪಾಠದಲ್ಲಿ ನಾವು ಕಾಗದ ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಕುರಿತು ಓದಿದ್ದೇವೆ. ಆನಂದ ನಂತಹ ಅನೇಕ ಜನರು ಹೆಚ್ಚಿನ ವೇತನ ಬೋನಸ್ (ಕಂಪನಿ ಲಾಭಗಳಲ್ಲಿನ ಭಾಗಶ), ಭವಿಷ್ಯ ನಿಧಿ, ಇತರ ಭತ್ಯೆಗಳನ್ನು ಹೊಂದುತ್ತಿದ್ದಾರೆ. ಆರೋಗ್ಯ ಸಂರಕ್ಷಣೆ, ಗೃಹ ವಸತಿಯಂತಹ ಸೌಲಭ್ಯಗಳು ಸಹ ಅವರಿಗಿದೆ ಭಾರತ ದೇಶದಲ್ಲಿನ ಕಾರ್ಮಿಕರೆಲ್ಲರಲ್ಲಿ ಇವರು ಒಂದು ಸಣ್ಣ ಭಾಗಮಾತ್ರವೇ. ಅದೇ ಕಾಗದದ ಕಾರ್ಖಾನೆಯಲ್ಲಿ ಉಮರ್, ಪುಷ್ಪರಂತಹ ಮತ್ತೊಂದು ರೀತಿಯ ಕಾರ್ಮಿಕರಿದ್ದಾರೆ. ಇವರಿಗೆ ಸಂಬಳ ಕಡಿಮೆ. ಇತರೆ ಅಲವೆನ್ಸ್ ಗಳು, ವಸತಿಗಳು ಇರುವುದಿಲ್ಲ. ನಮ್ಮ ದೇಶದಲ್ಲಿ ಬಹಳಷ್ಟು ಕಾರ್ಮಿಕರು ಉಮರ್, ಪುಷ್ಪರಂತಹವರೇ. ಕಾರ್ಮಿಕರು ತಮ್ಮ ಮಾಲಿಕರೊಂದಿಗೆ ಚರ್ಚೆಗಳನ್ನು ನಡೆಸುವುದರ ಮೂಲಕ, ಸಂಘಗಳನ್ನು, ನ್ಯಾಯಾಸ್ಥಾನಗಳ ಮೂಲಕ ತಮ್ಮ ಸಮಸ್ಯೆಗಳನ್ನು ಹೇಗೆ ಪರಿಷ್ಕರಿಸಿಕೊಳ್ಳುತ್ತಾರೋ ಪಾಠದಲ್ಲಿ ತಿಳಿದುಕೊಳ್ಳೋಣ ಇದರಲ್ಲಿ ಒಂದು ಸಂಘವನ್ನು ಕುರಿತು ಸಹ ತಿಳಿದು ಕೊಳ್ಳೋಣ.

ಪ್ರಜೆಗಳ ಆಸಕ್ತಿಗಳನ್ನು ಅನುಗುಣವಾಗಿ ಸರ್ಕಾರಗಳು ಕಾನೂನುಗಳು ರೂಪಿಸುತ್ತವೆಂದು ನಾವು ಇಲ್ಲಿಯವರೆಗೆ ತಿಳಿದುಕೊಂಡಿದ್ದೇವೆ. ಹೂಲಗಳಲ್ಲಿ ಫ್ಯಾಕ್ಟೆರಿಗಳಲ್ಲಿ, ಖಾಸಗಿ, ಸರ್ಕಾರಿ ಕಾರ್ಯಾಲಯಗಳಲ್ಲಿ ಕೆಲಸಮಾಡುವ ಕಾರ್ಮಿಕರ ಸಂಕ್ಷೇಮಕ್ಕಾಗಿ ಕಾನೂನುಗಳನ್ನು ರೂಪಿಸುತ್ತಾರೆ. ಸರ್ಕಾರದಿಂದ ಗುರ್ತಿಸಲ್ಪಟ್ಟ ಉದ್ದಿಮೆಗಳು ಕಾನೂನುಗಳು ಜಾರಿಗೊಳಿಸಿ, ಕಾರ್ಮಿಕರಿಗೆ ಉತ್ತಮವಾದ ವೇತನಗಳನ್ನು ಕೊಡಬೇಕು ಈ ಕಾನೂನುಗಳನ್ನು ಜಾರಿ ಗೊಳಿಸುವ ಜವಾಬ್ದಾರಿ ಕಾರ್ಮಿಕ ಶಾಖೆಯ ಮೇಲಿದೆ. ಕಾನೂನುಗಳನ್ನು ಸರಿಯಾಗಿ ಜಾರಿ ಗೊಳಿಸದೇ ಹೋದರೆ ಕಾರ್ಮಿಕರು ನ್ಯಾಯಾಲಯಗಳಲ್ಲಿ ದೂರು ದಾಖಲಿಸುತ್ತಾರೆ. ಉದ್ದಿಮೆಗಳು ಖಾಯಂ ಉದ್ಯೋಗಸ್ಥರು ಸಂಕ್ಷೇಮವನ್ನು ಮಾತ್ರವೇ ಸಂರಕ್ಷಿಸುತ್ತ ದಿನಗೂಲಿ, ಒಪ್ಪಂದ (ಕಾಂಟ್ರ್ಯಾಕ್ಟ್) ಕಾರ್ಮಿಕರ ಸಂಕ್ಷೇಮವನ್ನು ಹಿಡಿಸಿ ಕೊಳ್ಳುವುದಿಲ್ಲ ಸರ್ಕಾರದ ಅನುಮತಿ ಪಡೆಯದ ಉದ್ದಿಮೆಗಳೂ ಸಹ ಅನೇಕ ಇವೆ. ಅಂತಹ ಕೆಲವು ಪರಿಶ್ರಮಗಳಲ್ಲಿ ಕಾರ್ಮಿಕರ ಸ್ಥಿತಿಗತಿಗಳು ಹೇಗಿವೆಯೋ ನೋಡೋಣ.

ಶಾಶ್ವತ ಕಾರ್ಮಿಕರು :

ಹೈದರಾಬಾದಿಗೆ 30 ಕಿ.ಮೀ.ಗಳ ದೂರದಲ್ಲಿ ಮೆಹಬೂಬ್ ನಗರ ಜಿಲ್ಲೆಯಲ್ಲಿ ಕೊತ್ತೂರು ಪಟ್ಟಣದಲ್ಲಿ (ನೂತನ ಕೈಗಾರಿಕಾ ಪಟ್ಟಣ) ಪ್ರಾರಂಭವಾದ ಒಂದು ಫ್ಯಾಕ್ಟರಿಯನ್ನು ಕುರಿತು ಈ ಕೆಳಗೆ ಕೊಟ್ಟಿರುವ ಸಮಾಚಾರವನ್ನು ಓದಿರಿ.

ಫೈಬ್ರೋಟೆಕ್ಸ್ 1976ನೇ ವರ್ಷದಲ್ಲಿ ಪ್ರಾರಂಭವಾದ ಒಂದು ಬೃಹತ್ ಉದ್ದಿಮೆ.(ಹೆಸರು ವಾಸ್ತವವಾದುದ್ದಲ್ಲ) ಇಲ್ಲಿ ಫೈಬರ್ ಗ್ಲಾಸ ತಯಾರಿಸುತ್ತಾರೆ. (Fibrotex ಹೆಸರು ವಾಸ್ತವವಾದುದಲ್ಲ) ಇಲ್ಲಿ ಫೈಬರ್ ಗ್ಲಾಸ್ ತಯಾರು ಮಾಡುತ್ತಾರೆ. 2002ರಲ್ಲಿ ಈ ಫ್ಯಾಕ್ಟರಿಯಲ್ಲಿ ಒಟ್ಟು 570 ಜನ ಕಾರ್ಮಿಕರಲ್ಲಿ 140ಜನ ಖಾಯಂ ಕಾರ್ಮಿಕರು 60ಜನ ದಿನಗೂಲಿ ಕಾರ್ಮಿಕರಿದ್ದಾರೆ. ಇವರನ್ನು ಬದಲೀ ಕಾರ್ಮಿಕರು ಎನ್ನುತ್ತಾರೆ. ಎಂದರೆ ಖಾಯಂ ಕಾರ್ಮಿಕರು ಕೆಲಸಕ್ಕೆ ಹಾಜರಾಗದ ಸಮಯದಲ್ಲಿ ಅವರಿಗೆ ಬದಲಿಗೆ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಮತ್ತಷ್ಟು 300 ಮಂದಿ ವರೆಗೆ ದಿನಗೂಲಿ ಒಪ್ಪಂದದ ಮೇಲೆ ಕೆಲಸ ಮಾಡುತ್ತಾರೆ. ಶಾಶ್ವತ ಕಾರ್ಮಿಕರನ್ನು ಸರಿಯಾದ ಕಾರಣವಿಲ್ಲದೇ, ಪರಿಹಾರ ನೀಡದೇ, ತೊಲಗಿಸುವಂತಿಲ್ಲ, ಆದರೆ

SCERT TELANGANA

ಇತರ ಕಾರ್ಮಿಕರನ್ನು ಸುಲಭವಾಗಿ ತೊಲಗಿಸಬಹುದು.

ಈ ಕಾರ್ಖಾನೆಯಲ್ಲಿ ಬಲವಾದ ಕಾರ್ಮಿಕ ಸಂಘವಿದೆ. ಕಂಪನಿ ವಿಧಾನಗಳಿಗೆ ಅನುಗುಣವಾಗಿಯೇ ಕೆಲಸ ಮಾಡಲು ಇದು ಕಂಪನಿ ಪ್ರೋತ್ಸಾಹದಿಂದಲೇ ಏರ್ಪಟ್ಟಿದೆ. ಕಾರ್ಮಿಕರು ಸಂಘದಲ್ಲಿ ಕ್ರೀಯಾಶೀಲರಾಗಿ ಭಾಗವಹಿಸುವುದರಿಂದ ಇದು ಬಲವಾದ ಕಾರ್ಮಿಕ ಸಂಘವಾಗಿ ಅಭಿವೃದ್ಧಿ ಹೊಂದಿತು. ಇದು ಕಾರ್ಮಿಕರಿಗೆ ವೇತನಗಳು, ಇತರ ಸೌಕರ್ಯಗಳು ಕಲ್ಪಿಸಲು ಮಾಲಿಕರೊಂದಿಗೆ ಚರ್ಚೆಗಳು ನಡೆಸುತ್ತವೆ.

ಒಪ್ಪಂದ ಪ್ರಕಾರ ಕಾರ್ಮಿಕರೆಲ್ಲರಿಗೂ ವೇತನಗಳು, ವೈದ್ಯ ಸೌಕರ್ಯ(ಇ.ಎಸ್.ಐ ಮೂಲಕ)

ಕಾರ್ಮಿಕ ಸಂಘ :

ಕಾರ್ಮಿಕರ ಸಂಕ್ಷೇಮವನ್ನು ಕಾಪಾಡಲು ಅವರೊಂದಿಗೆ ಏರ್ಪಟ್ಟ ಒಂದು ವ್ಯವಸ್ಥೆಯನ್ನೇ ಕಾರ್ಮಿಕ ಸಂಘ ಎನ್ನುತ್ತಾರೆ. ಈ ಸಂಘವು ಸರ್ಕಾರ, ಯಾಜಮಾನ್ಯದೊಂದಿಗೆ ಮಾತುಕತೆ ನಡೆಸುತ್ತದೆ. ಸಂಘಗಳು ಸೂಕ್ತವೇತನಗಳನ್ನು ಕೂಡಿಸಲು, ಇತರೆ ಸೌಲಭ್ಯಗಳನ್ನು ಸಮಗೂಡಿಸಿ ಕೊಡಲು, ಕಾರ್ಯನಿರ್ವಹಿಸುವ ಸ್ಥಳದಲ್ಲೇ ಅನುಕೂಲ ಸೌಕರ್ಯಗಳನ್ನು ಕಲ್ಪಿಸಲು ಪ್ರಯತ್ನಿಸುತ್ತವೆ. ಸಾಮಾಜಿಕ ಭದ್ರತೆ, ವೈದ್ಯ ಸೌಕರ್ಯ, ಭವಿಷ್ಯ ನಿಧಿ, ಗೃಹ ವಸತಿ, ನಿವೃತ್ತಿ ವೇತನದಂತಹ ಸೌಕರ್ಯಗಳನ್ನು ಕಲ್ಪಿಸಲು ಸದಸ್ಯರೊಂದಿಗೆ ಸೇರಿ ಕೆಲಸ ಮಾಡುತ್ತವೆ ಮಾಲೀಕರು ಕಾರ್ಮಿಕರನ್ನು ಇಕ್ಕಟ್ಟಿಗೆ ಗುರಿಮಾಡಿದರೆ, ಯಾರಾದರೂ ಕಾರ್ಮಿಕರು ಏನಾದರೂ ಸೌಲಭ್ಯ ಬೇಡಿದರೆ ಅವುಗಳನ್ನು ನೆರವೇರಿಸುವುದು ಈ ಸಂಘಗಳ ಕೆಲಸ ಮಾತು ಕತೆ ನಡೆಸುವುದು, ನ್ಯಾಯಾಲಯದಲ್ಲಿ ದೂರು ದಾಖಲಿಸುವುದ, ಮುಷ್ಕರನಡೆಸುವುದು, ಕೆಲಸವನ್ನು ಸ್ಥಗಿತ ಗೊಳಿಸುವಂತಹ ಪ್ರಜಾಪ್ರಭುತ್ವ ಪದ್ದತಿಗಳನ್ನು ಅನುಸರಿಸುತ್ತಾ ಮಾಲಿಕತ್ವದೊಂದಿಗೆ ಒತ್ತಡ ತರುತ್ತಾರೆ.

ಫೈಬ್ರೋಟಿಕ್ಸ್ ಉದ್ದಿಮೆಯಲ್ಲಿನ ಕಾಮಿಕರ ವೇತನಗಳು (2002)

ಶಾಶ್ವತ ಕಾರ್ಮಿಕರು	ತಿಂಗಳಿಗೆ ರೂ.4,500–10,000
ತಾತ್ಕಾಲಿಕ ಕಾರ್ಮಿಕರು	ತಿಂಗಳಿಗೆ ರೂ.3,000–4,000
ಒಪ್ಪಂದ ಕಾರ್ಮಿಕರು	ದಿನಕ್ಕೆ 58–00 (8 ಗಂಟೆ)

ಪ್ರಾವಿಡೆಂಟ್ ಫಂಡ್ ಗಳಂತಹ ಸೌಕರ್ಯಗಳನ್ನು ಕಲ್ಪಿಸುತ್ತಾರೆ. ದೊಡ್ಡ ಆಸ್ಪತ್ರೆಗಳಲ್ಲಿ ವೈದ್ಯ ಪರೀಕ್ಷೆ ಚಿಕಿತ್ಸಾ ರಜೆಗಳು ಕೆಲಸ ಮಾಡುವ ಸ್ಥಳದಲ್ಲೇ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವುದು, ಸುರಕ್ಷಿತ ಕುಡಿಯುವ ನೀರಿನ ಸೌಕರ್ಯ, ಕಾರ್ಮಿಕರ ಮಕ್ಕಳಿಗಾಗಿ ವಿದ್ಯಾಭ್ಯಾಸಕ್ಕೆ ಭತ್ಯೆಗಳು ಸಾರಿಗೆ ಸೌಕರ್ಯ ರಜೆಯಲ್ಲಿ ವಿಹಾರ ಯಾತ್ರೆಯ ಭತ್ಯೆ ಗಳಂತಹ ಸೌಕರ್ಯಗಳನ್ನು ಕಾರ್ಮಿಕ ಸಂಘಗಳು ಸಾಧಿಸಿವೆ. ಅವಶ್ಯವಿದ್ದಾಗ ಕಾರ್ಖಾನೆ ಸಾಲ ನೀಡುತ್ತದೆ. ಕಾರ್ಮಿಕರು ನಿವಸಿಸಲು ವಸತಿ ಗೃಹಗಳನ್ನು (ಕ್ವಾರ್ಟರ್ಸ್) ನೀಡುತ್ತವೆ ಫ್ಯಾಕ್ಟರಿಯಲ್ಲಿ ದೀರ್ಘ ಕಾಲದಿಂದ ಕೆಲಸ ಮಾಡುವ ಕಾರ್ಮಿಕರಿಗೆ ಶಿಕ್ಷಣ ಕೊಡಿಸುತ್ತದೆ. ವಸ್ತುಗಳ ನಾಣ್ಯತೆಯನ್ನು ಹೆಚ್ಚಿಸಲು ಅವರನ್ನು ವಿದೇಶಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸುತ್ತದೆ. ಒಂದು ನಿರ್ಧಿಷ್ಟ ಕಾಲ ಮುಗಿದ ನಂತರ ಒಪ್ಪಂದ ಕಾರ್ಮಿಕರ ಸೇವೆಯನ್ನು ಕ್ರಮಬದ್ದೀ ಕರಿಸಿ, ಅವರನ್ನು ಶಾಶ್ವತ ಕಾರ್ಮಿಕರಾಗಿ ಗುರ್ತಿಸಲು ಕಾರ್ಮಿಕ ಸಂಘಗಳು ಮಾಲಿಕರೊಂದಿಗೆ ಒಪ್ಪಂದ ಮಾಡಿಕೊಂಡಿವೆ.

ಫೈಬ್ರೋಟಕ್ಸ್ ಪರಿಶ್ರಮದಲ್ಲಿ ಕಾರ್ಮಿಕ ಸಂಘ ತುಂಬಾ ಕ್ರಿಯಾಶೀಲ ವಾದದ್ದು ಈ ಸಂಘವು ಎಷ್ಟೊ ಇತರ ಪರಿಶ್ರಮಗಳಲ್ಲಿನ ಸಂಘಗಳನ್ನು ಉತ್ತಮ ಗೊಳಿಸಲು ಸಹಾಯಮಾಡಿದೆ.

ಹೆಚ್ಚಿನ ಪ್ರಯೋಜನಗಳು ಖಾಯಂ ಕಾರ್ಮಿಕರಾದ 140 ಜನರು ಮಾತ್ರವೇ ಪಡೆಯುತ್ತಾರೆ. ಬದಲೀ ಕಾರ್ಮಿಕರು, ಒಪ್ಪಂದ ಕಾಮಿಕರು 360 ಜನ ಕಡಿಮೆ ವೇತನ ಭವಿಷ್ಯನಿದಿ

SCERT TELANGANA

ಇ.ಎ.ಐ ದಂತಹ ಕೆಲವು ಸೌಲಭ್ಯಗಳನ್ನು ಮಾತ್ರವೇ ಹೊಂದುತ್ತಾರೆ.

- ಶಾಶ್ವತ ಕಾರ್ಮಿಕನಿಗೆ, ತಾತ್ಕಾಲಿಕ ಕಾರ್ಮಿಕನಿಗೆ ನಡುವಿರುವ ವೆತ್ಯಾಸವೇನು?
- ಫೈಬ್ರೊಟೆಕ್ಸ್ ಫ್ಯಾಕ್ಟರೀಯಲ್ಲಿ ಕೆಲಸಮಾಡುವ ಒಬ್ಬ ದಿನಗೂಲಿ ಕಾರ್ಮಿಕನು ತಿಂಗಳಿನಲ್ಲಿ 20 ದಿನಗಳು ಕೆಲಸಮಾಡಿದರೆ, ಆತನಿಗೆ ಬರುವ ವೇತನವನ್ನು ಲೆಕ್ಕಿಸಿ. ಶಾಶ್ವತ (ಖಾಯಂ)ಕಾರ್ಮಿಕನು ಹೊಂದುವ ಮಾಸಿಕ ವೇತನ ದೊಂದಿಗೆ ಹೋಲಿಸಿರಿ.
- ಇ.ಎಸ್. ಐ ಭವಿಷ್ಯ ನಿಧಿಯಂತಹ ಸೌಲಭ್ಯಗಳು ಹೊಂದುತ್ತಿರುವ ಬಂದಿಬ್ಬರು ಕಾರ್ಮಿಕರನ್ನು ತರಗತಿಗೆ ಆಹ್ವಾನಿಸಿ ಅವರಿಗೆ ಇರುವ ಸೌಲಭ್ಯಗಳುಹೇಗೆ ಲಭಿಸಿವೆಯೇ ಅವುಗಳ ವಿವರಗಳನ್ನು ವಿವರಗಳನ್ನು, ಸಾಧಿಸಲು ಅವರು ಅನುಸರಿಸಿದ ವಿಧಾನಗಳನ್ನು ಕುರಿತು ಸಮಾಚಾರವನ್ನು ಶೇಖರಿಸಿರಿ ಈ ವಿಷಯಗಳಿಗೆ ಸಂಬಂಧಸಿದಂತೆ ನಿಮ್ಮ ತಂದೆ ತಾಯಿಯವರನ್ನು ಸಹ ಆಹ್ವಾನಿಸಬಹುದು.

ಕೆ.ಆರ್.ಎಸ್. ಔಷಧಿ ಕಾರ್ಖಾನೆ :

ಈ ಕಾರ್ಖಾನೆ ಒಂದು ಬಹು ರಾಷ್ಟ್ರೀಯ ಔಷಧಿಗಳ ಕಂಪನಿಗೆ ಔಷಧಿಗಳನ್ನು ಪ್ಯಾಕ್ ಮಾಡಿ ಕೊಡುತ್ತದೆ. ಇದರಲ್ಲಿ ಕೆಲಸ ಮಾಡುತ್ತಿರುವ 118 ಜನ ಕಾರ್ಮಿಕರಲ್ಲಿ 104ಜನ ದಿನಗೂಲೀ ಕಾರ್ಮಿಕರೇ ಇದ್ದಾರೆ. ಕೇವಲ14 ಜನ ಮಾತ್ರವೇ ಖಾಯಂ ಕಾರ್ಮಿಕರು ಇವರನ್ನು ರಾಸಾಯನಿಕಗಳನ್ನುಮಿಶ್ರ ಮಾಡಲು, ಔಷದಿ ಪುಡಿಯನ್ನು ತಯಾರಿಸುವಂತಹ ನೈಪುಣ್ಯತೆ ಇರುವ ಕೆಲಸಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಇವರಿಗೆ ತಿಂಗಳಿಗೆ 1500 ರಿಂದ 2500 ರೂಪಾಯಿಗಳವರೆಗೆ ಸಲ್ಲಿಸುತ್ತಾರೆ. ಇವರಿಗೆ ಉದ್ಯೋಗ ಭದ್ರತೆ ಇರುತ್ತದೆ. ಇ.ಎಸ್.ಐ. ಆರೋಗ್ಯ ವಿಮೆ ಭವಿಷ್ಯ ನಿಧಿಯಂತಹವು ಅನ್ವಯಿಸುತ್ತದೆ. ಉಳಿದ 104 ಜನರಲ್ಲಿ ದಿನಗೂಲಿ ಕಾರ್ಮಿಕರು ಪ್ಯಾಕೇಜಿಂಗ್ ಮತ್ತು ಲೇಬಲಿಂಗ್ ಹಾಕುವ ಕೆಲಸದಲ್ಲಿ ಇರುತ್ತಾರೆ. ಪ್ರತಿ ದಿನ ಎಷ್ಟು ಕಾರ್ಮಿಕರು ಅವಶ್ಯಕವೋ ಅಷ್ಟೊ ಜನರನ್ನು ಒಪ್ಪಂದದ ಮೇರೆಗೆ ಒಪ್ಪಂದ ಕೊಲಿಯನ್ನು ಕರೆದುಕೊಂಡು ಬರುತ್ತಾರೆ. 104 ಜನರಲ್ಲಿ 56 ಜನ ಸ್ತ್ರೀಯರು ಅಂತಹವರೇ. ಇವರೆಲ್ಲಾ ಸುತ್ತುಮುತ್ತಲ ಗ್ರಾಮಗಳಿಂದ ಬರುತ್ತಾರೆ. ಇವರು ಅನಕ್ಷರಸ್ಥರು. ಮಹಿಳಾ ಕಾರ್ಮಿಕರು 12 ಗಂಟೆಗಳು ಕೆಲಸ ಮಾಡುತ್ತಾರೆ. ದಿನಕ್ಕೆ ರೂ 30ನ್ನು ಪಡೆಯುತ್ತಾರೆ. ಪುರುಷರು ಅಷ್ಟೇ ಕಾಲ ಕೆಲಸ ಮಾಡಿದರೂ ಅವರಿಗೆ ರೂ 42 ಕೊಡುತ್ತಾರೆ. ಇಂತಹ ಫ್ಯಕ್ಟರಿಗಳಿಗೆ ಸರ್ಕಾರ ನಿರ್ಣಯಿಸಿದ ವೇತನದ ಪ್ರಕಾರ ಇದು ತುಂಬಾ ಕಡಿಮೆ. ಯಾಜಮಾನ್ಯವು ಕಾರ್ಮಿಕರನ್ನು ಸಂಘಗಳು ಏರ್ಪಡಿಸಿಕೊಳ್ಳಲು ಬಿಡುವುದಿಲ್ಲ. ಯಾವುದಾದರೂ ಸಂಘವನ್ನು ಏರ್ಪಡಿಸಿದರೆ ಫ್ಯಾಕ್ಟರಿಯನ್ನು ಮುಚ್ಚಿ ಹಾಕುತ್ತೇವೆಂದು ಹೆದರಿಸುತ್ತಾರೆ.

ಈ ದಿನಗಳಲ್ಲಿ ಅನೇಕ ಕಂಪನಿಗಳು ಇಂತಹ ವಿಧಾನಗಳನ್ನೇ ಅವಲಂಬಿಸುತ್ತಾ ಖಾಯಂ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಗೊಳಿಸುತ್ತಾ ಕಾಂಟ್ರಾಕ್ಟ್ ಕಾರ್ಮಿಕರು, ದಿನಗೂಲಿ ಕಾರ್ಮಿಕರ



ಚಿತ್ರ 19.1 ನಿರ್ಮಾಣರಂಗ ಕಾರ್ಮಿಕರು

SCERT TELANGANA

ಸಂಖ್ಯೆಯನ್ನು ಹೆಚ್ಚುಸುತ್ತಾ ಇವೆ.

- ಕೆ.ಆರ್.ಎಸ್. ಔಷಧಿ ಪ್ಯಾಕ್ಟರಿಯಲ್ಲಿ ಕಾರ್ಮಿಕ ಸಂಘವನ್ನು ಏರ್ಪಡಿಸಲು ಏಕೆ ಅನುಮತಿಸಲಿಲ್ಲ?
- ಖಾಯಂ ಉದ್ಯೋಗಿಗಳಿಗಿಂತ ಒಪ್ಪಂದ (ಗುತ್ತಿಗೆ) ಕಾರ್ಮಿಕರಲ್ಲೇ ಹೆಚ್ಚುಮಂದಿ ಸ್ತ್ರೀಯರು ಏಕೆ ಇದ್ದಾರೆಂದು ನೀವು ಭಾವಿಸುತ್ತಿದ್ದೀರಿ?
- ಪುರುಷರಿಗೆ ಸಮಾನವಾಗಿ ಕೆಲಸ ಮಾಡಿದ ಮಹಿಳೆಗೆ ಕಡಿಮೆ ವೇತನ ನೀಡುವುದು ಸರಿಯೆಂದು ನೀವು ಭಾವಿಸುತ್ತೀರಾ ?
- ಕಾರ್ಮಿಕರು ವಿದ್ಯಾವಂತರಾದರೆ ಪರಿಸ್ಥಿತಿಗಳು ಭಿನ್ನವಾಗಿರುತ್ತವೆಂದು ನೀವು ತಿಳಿಯುತ್ತಿದ್ದೀರಾ?

ನಿರ್ಮಾಣರಂಗ ಇಟ್ಟಿಗೆ ಬಟ್ಟಿ :

ಬಿಂದಾನಿ, ಆಕೆಯ ಪತಿ, ಹತ್ತು ವರ್ಷದ ಮಗಳು ರಂಗಾರೆಡ್ಡಿ ಜಿಲ್ಲೆಯಲ್ಲಿನ ಒಂದು ಗ್ರಾಮದಲ್ಲಿ ಇಟ್ಟಿಗೆ ಒಟ್ಟೆಯ ಹತ್ತಿರ ಕೆಲಸ ಮಾಡುತ್ತಾರೆ. ಆಕೆಯು ಕುಟುಂಬದೊಂದಿಗೆ ಒರಿಸ್ಸಾದಿಂದ ಬಂದು ಅಲ್ಲಿ ಕೆಲಸ ಮಾಡುತ್ತಾಳೆ ಒರಿಸ್ಸಾದಲ್ಲಿ ಆಕೆಗೆ ಸ್ವಲ್ಪ ಭೂಮಿ ಇದೆ. ಅಲ್ಲಿ ಆಕೆ ರೂ.20,000 ಸಾಲ ತೆಗೆದು ಕೊಂಡಿದ್ದಾಳೆ ಆ ಸಾಲವನ್ನು ತೀರಿಸಲು ಭೂಮಿಯನ್ನು ಮಾರಬೇಕೆಂದು ನಿರ್ಧರಿಸಿದ್ದಾಳೆ. ಆ ಸಮಯದಲ್ಲಿ ಆಂಧ್ರಪ್ರದೇಶಕ್ಕೆ ಸೇರಿದ ಇಟ್ಟಿಗೆ ಬಟ್ಟಿಯಲ್ಲಿ ಕಾರ್ಮಿಕರಿಗೆ ಕೆಲಸ ಒದಗಿಸುವ ಒಬ್ಬಸರ್ದಾರ ಆಕೆ ಯನ್ನು ಭೇಟಿಮಾಡಿದನು. ರೂ10,000/–ಮುಂಗಡವಾಗಿ ಕೊಡುತ್ತೇನೆಂದನು. ಆದ್ದರಿಂದ ಸ್ವಲ್ಪ ಸಾಲ ತೀರಿಸಬಹುದು,ಆದರೆ ಅವರು ಇಟ್ಟಿಗೆ ಬಟ್ಟಿಯ ಹತ್ತಿರ 6 ತಿಂಗಳು ಕೆಲಸ ಮಾಡಬೇಕು. ಅದಕ್ಕಾಗಿ ಸ್ವಲ್ಪ ಹೆಚ್ಚಿಗೆ ಹಣ ಸಲ್ಲಿಸುತ್ತಾರೆ.ಒಂದು ಗುಡಿಸಲು ನೀಡುತ್ತಾರೆ.ಅದರಲ್ಲಿ ನಿವಸಿಸಬಹುದು.ಡಿಸೆಂಬರ್‌ನಿಂದ ಜೂನ್‌ವರೆಗ ಕೆಲಸವಿರುತ್ತದೆ.ನಂತರ ಅವರ ಪ್ರದೇಶಕ್ಕೆ ಹೋಗಬಹುದು. ಈವಿಧವಾಗಿ ಬಿಂದಾನಿ ಕುಟುಂಬ ತೆಲಂಗಾಣಕ್ಕೆ ಬಂದಿದೆ. ತೆಲಂಗಾಣದಲ್ಲಿನ ಇಟ್ಟಿಗೆ ಬಟ್ಟಿಯಲ್ಲಿ ಒರಿಸ್ಸಾದಿಂದ ಇಂತಹವರು ಎರಡು ಲಕ್ಷ ಜನರು ಬಂದು ಕೆಲಸ ಮಾಡುತ್ತಿದ್ದಾರೆ.ಅದೇರೀತಿ ಸಾವಿರಾರು ಕುಟುಂಬಗಳು ತೆಲಂಗಾಣದಿಂದ ತಮಿಳುನಾಡು,ಮಹಾರಾಷ್ಟದಂತಹ ರಾಷ್ಟ್ರಗಳಿಗೆ ಇಟ್ಟಿಗೆ ಬಟ್ಟಿಯಲ್ಲಿ ಕೆಲಸ ಮಾಡಲು ಹೋಗುತ್ತಿದ್ದಾರೆ.



ಚಿತ್ರ 19.2 ಹತ್ತಿ ಆರಿಸುತ್ತಿರುವ ಮಹಿಳಾ ಕಾರ್ಮಿಕರು

ಬಿಂದಾನಿ ಬೆಳಿಗ್ಗೆ ನಾಲ್ಕು ಗಂಟೆಗೇ ನಿದ್ರೆ ಯಿಂದ ಎದ್ದು ಅಡುಗೆ ಮಾಡುತ್ತಾಳೆ.2 ಗಂಟೆಯವರೆಗೆ ಕೆಲಸ ಮಾಡಿದ ಆಕೆಯ ಪತಿ ಇನ್ನೂ ನಿದ್ರೆಯಲ್ಲೇ ಇರುತ್ತಾನೆ. ಬಿಂದಾನಿ ಮಗಳನ್ನು ನಿದ್ದೆಯಿಂದ ಎಬ್ಬಿಸಿ ಇಬ್ಬರೂ ಕೆಲಸಕ್ಕೆ ಸಿದ್ದವಾಗುತ್ತಾರೆ.ಅವರು ನೀರು ತಂದು, ಉಸುಕು,ಮಣ್ಣನ್ನು ಕಲಿಸಬೇಕಾಗುತ್ತದೆ.ಇದರಿಂದಲೇ ಇಟ್ಟಿಗೆ ತಯಾರಿಸುತ್ತಾರೆ.ಅವರು ಬೆಳಿಗ್ಗೆ 5ಗಂಟೆಯಿಂದ 9ಗಂಟೆಯವರೆಗೆ ಕೆಲಸಮಾಡುತ್ತಾರೆ. ನಂತರ ಚಹ ವಿರಾಮವಿರುತ್ತದೆ.ಆಕೆಯ ಪತಿ ಆಗ ಬಂದು ಆಕೆಯೊಂದಿಗೆ ಕೆಲಸ ಮಾಡುತ್ತಾನೆ. ಮೃದುವಾಗಿ ಕಲೆಸಿದ ಮಣ್ಣನ್ನು ಅಚ್ಚುಗಳಲ್ಲಿ ಹಾಕಿ ಇಟ್ಟಿಗೆ ತಯಾರಿಸುತ್ತಾರೆ.ಈ ಇಟ್ಟಿಗೆಗಳನ್ನು ಅವರ ಮಗಳು ಶುಭ್ರಗೊಳಿಸಿ ಅವುಗಳ ಮೇಲೆ ಆ

© SCERT TELANGANA



ಚಿತ್ರ 19.3 ಕತ್ತಿಗಳನ್ನು ಸಾಣೆ ಹಿಡಿಯುವವರು

ಕಂಪನಿಯ ಮುದ್ರೆ ಹಾಕುತ್ತಾರೆ. ತದನಂತರ ಒಣಗಿಸಿ ಎತ್ತಿನ ಬಂಡಿಯ ಮೂಲಕ ಬಟ್ಟಿಗೆ ಕಳುಹಿಸಿ ಸುಡುತ್ತಾರೆ.ಈ ಕೆಲಸ ರಾತ್ರಿ 2ಗಂಟೆಗಳ ವರೆಗೆ ಸಾಗುತ್ತದೆ. ಬಿಂದಾನಿ ಮತ್ತು ಆಕೆಯ ಪತಿ 14 ರಿಂದ 16 ಗಂಟೆಗಳು ಕೆಲಸ ಮಾಡುತ್ತಾರೆ. ತಯಾರಿಸಿದ ಇಟ್ಟಿಗೆಗಳ ಸಂಖ್ಯೆಯನ್ನು ಅನುಸರಿಸಿ ಅವರಿಗೆ ವೇತನ ಕೊಡುವುದರಿಂದ ಕೆಲಸ ನಿಲ್ಲಿಸದಂತೆ ಮಾಡುತ್ತಾರೆ.

ಪ್ರತಿ 1000 ಇಟ್ಟಿಗೆಗಳಿಗೆ ಅವರಿಗೆ ರು.108 ನೀಡುತ್ತಾರೆ. ಅನಾರೋಗ್ಯಕ್ಕೆ ಗುರಿಯಾಗಿ ಕೆಲಸಕ್ಕೆ ಬಾರದಿದ್ದರೆ ಅವರಿಗೆ ವೇತನ ಇರುವುದಿಲ್ಲ. 6ತಿಂಗಳವರೆಗೆ ರಾತ್ರಿ,ಹಗಲು ಕೆಲಸ ಮಾಡುತ್ತಾರೆ. ತುಂಬಾ ಬಳಲಿದಾಗ, ಆರೋಗ್ಯವಾಗಿಲ್ಲದ ಸ್ಥಿತಿಯಲ್ಲಿ ಕೆಲಸ ಮಾಡುವುದಿಲ್ಲ. ಅವರು ಸರಿಸುಮಾರು ನುಚ್ಚು, ಬೇಳೆಯಲ್ಲದೆ ಆಗಾಗ ತರಕಾರಿಗಳಿಂದ ಮಾಡಿದ ಆಹಾರವನ್ನು ಸೇವಿಸುತ್ತಾರೆ. 6ತಿಂಗಳು ಪೂರ್ತಿ ಆದನಂತರ ತೆಗೆದುಕೊಂಡ ಮುಂಗಡ ಹಣಕ್ಕಾಗಿ ಲೆಕ್ಕನೋಡಿಕೊಂಡು ಕೆಲವು

◆ ಈ ಪಾಠದಲ್ಲಿನ ಖಾಯಂ ಕಾರ್ಮಿಕರು, ಔಷಧಿ ಕಾರ್ಖಾನೆ, ಇಟ್ಟಿಗೆ ಬಟ್ಟಿಗಳನ್ನು ಕುರಿತು ಇರುವ ಪ್ಯಾರಾ ಗಳನ್ನು ಮತ್ತೊಮ್ಮೆ ಓದಿರಿ. ಕಾರ್ಮಿಕರು ಹೊಂದುತ್ತಿರುವ ಹಕ್ಕುಗಳು ಸೌಲಭ್ಯಗಳನ್ನು ಸೂಚಿಸುವ ಅಂಕಣದಲ್ಲಿ ಬಣ್ಣದಲ್ಲಿ ಹಾಕಿರಿ. ಒಂದು ವಿಧವಾದ ಕಾರ್ಮಿಕರು ಮಾತ್ರವೇ ಆ ಪರಿಶ್ರಮದಲ್ಲಿ ಆ ಹಕ್ಕು ಆಥವಾ ಸೌಲಭ್ಯ ಪಡೆದರೆ ಅಂಕಣದ ಸ್ವಲ್ಪ ಭಾಗವನ್ನು ಮಾತ್ರವೇ ಬಣ್ಣ ಹಾಕಿರಿ. ಯಾವುದೇ ಹಕ್ಕಾಗಲೀ, ಸೌಲಭ್ಯವಾಗಿಯೇ ಇಲ್ಲದಿದ್ದಲ್ಲಿ ಆ ಅಂಕಣವನ್ನು ಹೊಡೆದುಹಾಕಿರಿ.

ಕ್ರ ಸಂ	ಹಕ್ಕುಗಳು	ಫೈಬ್ರೋ ಟೇಕ್ಸ್ ಕಂಪನಿ	ಕೆ.ಆರ್.ಎಸ್. ಔಷಧಿ ಕಂಪನಿ	ಇಟ್ಟಿಗೆ ಬಿಟ್ಟ
1	ಉತ್ಪಾದಕ ಮತ್ತು ಸುರಕ್ಷಿತ ಉದ್ಯೋಗ ಹಕ್ಕು			
2	ವಿಶ್ರಾಂತಿ ಪಡೆಯುವ ಹಕ್ಕು			
3	ಉದ್ಯೋಗ ಭದ್ರತೆ ಹಕು			
4	ಆದಾಯ ಭದ್ರತೆ ಹಕ್ಕು			
5	ಕೆಲಸದ ಭದ್ರತೆ ಹಕು			
6	ನೈಪುಣ್ಯ ಉತ್ತಮ ಪಡಿಸಿ ಕೊಳ್ಳುವ ಹಕ್ಕು			
7	ಸಾಮೂಹಿಕ ವ್ಯಕ್ತೀಕರಣ			

ಸಂಧರ್ಭಗಳಲ್ಲಿ ಬರಿಗೈಯಲ್ಲಿ ಹೊರಟು ಹೋಗುವರು. ಕೆಲವೊಮ್ಮೆ ನಾಲ್ಕೈದು ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಹೋಗುವರು.

◆ ಬಿಂದಾನಿ ಕುಟುಂಬದಲ್ಲಿ ಒಬ್ಬೊಬ್ಬರಿಗೆ ಸರಾಸರಿ ಒಂದು ದಿನದಲ್ಲಿ ಎಷ್ಟು ಲಭಿಸುತ್ತದೆ?

◆ ಸರ್ದಾರ್‌ಹತ್ತಿರ ತೆಗೆದುಕೊಂಡ ರೂ.10000 ತೀರಿಸಲು ಅವರಿಗೆ ಎಷ್ಟು ದಿನಗಳ ಸಮಯ ಹಿಡಿಯುತ್ತದೆ ಲೆಕ್ಕಿಸಿ ಹೇಳಿರಿ?

◆ ಇಟ್ಟಿಗೆ ಬಟ್ಟಿಯಲ್ಲಿ ಕಾರ್ಮಿಕ ಸಂಘಗಳು ಏಕಿಲ್ಲ.

SCERT TELANGANA



ಚಿತ್ರ 19.4 ತಂತಿಯನ್ನು ಹಾಕುತ್ತಿರುವ ಕಾರ್ಮಿಕರು

- ಇಟ್ಟಿಗೆ ಬಟ್ಟಿಯಲ್ಲಿ ಕೆಲಸ ಮಾಡುವ ಕಾರ್ಮಿಕರು ಸಂಘಗಳು ಏರ್ಪಾಟು ಮಾಡಿಕೊಳ್ಳಲು ಸರ್ಕಾರ ಸಹಕರಿಸಬೇಕೆಂದು ನೀನು ತಿಳಿಯುತ್ತೀಯಾ?



ಚಿತ್ರ : 19.5 ರಸ್ತೆ ರಿಪೇರಿ, ನಿರ್ಮಾಣ (ದುರಸ್ತಿ)

- ಇಟ್ಟಿಗೆ ಬಟ್ಟಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಸ್ಥಿತಿಗತಿಗಳು ಉತ್ತಮ ಗೊಳಿಸಲು ಸರ್ಕಾರ ಎಂತಹ ಸಹಾಯಕ ಕ್ರಿಯೆಗಳು ಕೈಗೊಳ್ಳಬೇಕು.

ದೇಶ ವ್ಯಾಪ್ತಿಯಾಗಿ ಲಕ್ಷಾಂತರ ಜನ ಇಟ್ಟಿಗೆ ತಯಾರಿ ಮತ್ತು ಇತರ ವೃತ್ತಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸ್ಥಿತಿ ಹೀಗೆಯೇ ಇದೆ. ಕಾಂಟ್ರಾಕ್ಟರ್ ಗಳು ಮುಂಗಡ ನೀಡುವುದು, ಕಾರ್ಮಿಕರನ್ನು ದೂರ ಪ್ರದೇಶಗಳಿಗೆ ಕರೆದೊಯ್ದು, ಭಾಷೆ ತಿಳಿಯದ ಸ್ಥಳಕ್ಕೆ ಹೋಗುವುದು, ಹಗಲು ರಾತ್ರಿ ಕಷ್ಟ ಪಡುವುದು, ಕಾರ್ಯ ನಿರ್ವಹಿಸಲು ಹೆಂಡತಿ ಮಕ್ಕಳೊಂದಿಗೆ ತಿಂಗಳುಗಟ್ಟಲೇ ಕೆಲಸ ಮಾಡುವುದು ನಡೆಯುತ್ತಲೆ ಇದೆ. ಹೆಚ್ಚಿನವರೆಗೂ ಮಕ್ಕಳು ಓದಿಕೊಳ್ಳುತ್ತಿಲ್ಲ. ಕೆಲವರು ನಿರ್ಭಂದಿತ ಗುಲಾಮ ರಂತೆ ಜೀವಿಸುತ್ತಿದ್ದಾರೆ.ಕೆಲವು ಸಮಯಗಳಲ್ಲಿ ಸರ್ಕಾರ ಮಧ್ಯಸ್ಥಿಕೆವಹಿಸಿ ಅವರನ್ನು ಬಿಡುಗಡೆಗೊಳಿಸುತ್ತದೆ. ಈ ಜೀತದಾಳುಗಳನ್ನು ಮನೆಗೆ ಸೇರಿಸುತ್ತದೆ. ಮನೆಯ ಹತ್ತಿರ ಬೇರೊಂದು ಅವಕಾಶ ಇಲ್ಲದಿರುವುದರಿಂದ ಬೇರೊಂದು ಬಟ್ಟಿಗೆ ಹೋಗದೆತಪ್ಪದು. ಅವರಿಗಾಗಿ ಹೋರಾಟ ಮಾಡುವ ಕಾರ್ಮಿಕ ಸಂಘಗಳು ಇಲ್ಲ. ಅವರು ವಲಸೆ ಹೊಂದಿ ಅನೇಕ ಪ್ರಾಂತ್ಯಗಳಲ್ಲಿ ವಿಸ್ತರಿಸುವುದರಿಂದ ಸಂಘಗಳು ದೃಷ್ಟಿಇಡುತ್ತಿಲ್ಲ.

- ಇಟ್ಟಗೆ ತಯಾರಿಕೆಯಲ್ಲಿ ಎಂತಹ ಯಂತ್ರಗಳು, ಸಾಧನಗಳು, ಸಂಪನ್ಮೂಲಗಳು ಉಪಯೋಗಿಸುತ್ತಾರೆ?
- ಈ ಕೆಲಸಕ್ಕೆ ಎಂತಹ ನೈಪುಣ್ಯ ಅವಶ್ಯಕ?ಆ ನೈಪುಣ್ಯಗಳು ಹೇಗೆ ಪಡೆಯುತ್ತಾರೆ?
- ಅವರು ಏತಕ್ಕಾಗಿ ದೂರ ಪ್ರದೇಶಗಳಲ್ಲಿ,ಇತರ ರಾಷ್ಟ್ರಗಳಲ್ಲಿ ಕಾರ್ಯ ನಿರ್ವಹಿಸಬೇಕಾಗಿತ್ತು?

© TEXTBOOK TELANGANA

ಪ್ರಪಂಚ ವ್ಯಾಪ್ತಿಯಾಗಿ ಕಾರ್ಮಿಕರ ಹಕ್ಕುಗಳು :

ಕೈಗಾರಿಕಾ ಕ್ರಾಂತಿಯ ಕಾಲದಿಂದ ಕಾರ್ಮಿಕರು ಆಡಂಬರವಾಗಿ ಜೀವಿಸಲು ಕೈಗಾರಿಕಾ ಉತ್ಪತ್ತಿಯಲ್ಲಿ ಅವರ ಭಾಗಾಂಶ ಹೊಂದಲು ಹೋರಾಡುತ್ತಿದ್ದಾರೆ.ಅವರು ಅನೇಕ ವಿಧಗಳ ರಕ್ಷಣೆ ಮತ್ತು ಹಕ್ಕುಗಳಿಗಾಗಿ ಹೋರಾಡುತ್ತಲೇ ಇದ್ದಾರೆ.

ಅವುಗಳಲ್ಲಿ ಕೆಲವು . . . .

1. ಉತ್ಪಾದಕ ಮತ್ತು ಸುರಕ್ಷಿತ ಉದ್ಯೋಗ ಹಕ್ಕು:– ಈ ಹಕ್ಕಿನಿಂದ ಕಾರ್ಮಿಕರು ಅವರ ನೈಪುಣ್ಯತೆ, ಸಾಮರ್ಥ್ಯವನ್ನು ಅನುಸರಿಸಿ ಆರೋಗ್ಯಕ್ಕೆ ಎಂತಹ ಪ್ರಮಾದವಿಲ್ಲದ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಾರೆ.

2. ವಿಶ್ರಾಂತಿ ತೆಗೆದು ಕೊಳ್ಳವಹಕ್ಕುವ:– ಇದರಿಂದ ಕಾರ್ಮಿಕರು ಕೆಲಸದಿಂದ ಹೆಚ್ಚಾಗಿ ಬಳಲಿದರೆ, ವಿಶ್ರಾಂತಿ ತೆಗೆದು ಕೊಳ್ಳಲು ಸಾಂಸ್ಕೃತಿ, ಸಾಮಾಜಿಕ, ಆಸಕ್ತಿಯಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೋಳ್ಳಲು ಸಮಯ ನೀಡುತ್ತಾರೆ.

3. ಉದ್ಯೋಗ ಭದ್ರತೆ ಹಕ್ಕು:– ಈ ಹಕ್ಕಿನ ಮೂಲಕ ಕಾರ್ಮಿಕರು ಅವರಿಗೆ ಉದ್ಯೋಗ ವಿದೆಯೆಂದು, ಅದರಿಂದಲೇ ತಮ್ಮ ಜೀವನ ಸಾಗುತ್ತದೆಂದು ವಿನಾಕಾರಣ ತಮ್ಮನ್ನು ಉದ್ಯೋಗದಿಂದ ಯಜಮಾನರು ತೆಗೆದು ಹಾಕುವುದಿಲ್ಲವೆಂದೂ ತಿಳಿದು ಕೊಳ್ಳುತ್ತಾರೆ. ಒಂದು ಕಂಪನಿ ಒಬ್ಬ ಕಾರ್ಮಿಕನನ್ನು ತೊಲಗಿಸಲೇ ಬೇಕೆಂದು ಭಾವಿಸಿದರೆ ಆತನಿಗೆ / ಆಕೆಗೆ ಸೂಕ್ತ ನಷ್ಟ ಪರಿಹಾರವನ್ನು ಸಲ್ಲಿಸುತ್ತದೆ.

4. ಆದಾಯ ಭದ್ರತೆ : ಕಾರ್ಮಿಕರು ತಮ್ಮ ಕುಟುಂಬದ ಅವಶ್ಯಕತೆಗಳು ತೀರಿಸಿಕೊಳ್ಳಲು, ವೃದ್ಧಾಪ್ಯ ದಲ್ಲಿ ನೆಮ್ಮದಿ ಯಿಂದ ಜೀವಿಸಲು, ಉಳಿತಾಯ ಮಾಡಿ ಕೊಳ್ಳಲು ಕ್ರಮಬದ್ಧವಾದ ವೇತನವನ್ನು ಹೊಂದುತ್ತಾರೆ.

5. ಉದ್ಯೋಗ ಭದ್ರತೆ : ಆರೋಗ್ಯ ಸರಿ ಇಲ್ಲದಾಗ, ಪ್ರಮಾದಕ್ಕೆ ಗುರಿಯಾದಾಗ ಸೂಕ್ತ ವೈದ್ಯ ಸಹಾಯ ಹೊಂದುವುದರ ಜೊತೆಗೆ ಆ ಅನಾರೋಗ್ಯ ಕಾಲಾವಧಿಗೂ ಸಹ ವೇತನ ಸಲ್ಲಿಸುತ್ತಾರೆ.

6. ನೈಪುಣ್ಯವನ್ನು ಉತ್ತಮ ಪಡಿಸುವುದು:(ಅಭಿವೃದ್ಧಿ ಪಡಿಸುವುದು) ಕಾರ್ಮಿಕರು ಕೆಲಸ ಮಾಡುತ್ತಾ ತಾವು ಮಾಡುವ ಕೆಲಸದಲ್ಲಿ ನೈಪುಣ್ಯತೆಯನ್ನು ಪಡೆಯುತ್ತಾರೆ. ಸಾಮರ್ಥ್ಯವನ್ನು ಹೆಚ್ಚಿಸಿ ಕೊಳ್ಳುತ್ತಾರೆ.

7. ಸಾಮೂಹಿಕ ವ್ಯಕ್ತೀಕರಣ ಕಾರ್ಮಿಕರು ಸಂಘಗಳನ್ನು ಏರ್ಪಡಿಸಿಕೊಂಡು ತಮ್ಮ ಸಮಸ್ಯೆಗಳನ್ನು, ಬೇಡಿಕೆಗಳನ್ನು ತಿಳಿಯಪಡಿಸುತ್ತಾರೆ. ಒಬ್ಬೋಬ್ಬರು ವ್ಯಕ್ತಿಗತವಾಗಿ ತಿಳಿಯಪಡಿಸುವುದಕ್ಕಿಂತ ಸಾಮೂಹಿಕವಾಗಿ ತಿಳಿಸುವುದರಿಂದ ನಿರ್ಭಯವಾಗಿ ಚರ್ಚಿಸುತ್ತಾರೆ.

ಕಳೆದ ಎರಡು ನೂರು ವರ್ಷಗಳಿಂದ ಪ್ರಪಂಚದಲ್ಲಿ ಕಾರ್ಮಿಕರೆಲ್ಲರೂ ಹೋರಾಡಿ ಈ ಹಕ್ಕುಗಳನ್ನು ಗುರ್ತಿಸುವಂತೆ ಮಾಡಿದರೂ ಅನೇಕ ಪ್ರಾಂತ್ಯಗಳಲ್ಲಿ ಇವು ಜಾರಿಗೊಳ್ಳುತ್ತಿಲ್ಲ. ಅನೇಕ ದೇಶಗಳಲ್ಲಿ ಸರ್ಕಾರಗಳು ಇವುಗಳನ್ನು ಸಾಮಾನ್ಯ ಕನಿಷ್ಠ ಬೇಡಿಕೆಗಳೆಂದು ಗುರ್ತಿಸಿ ಈ ಹಕ್ಕುಗಳು ಅವರು ಅನುಭವಿಸುವಂತೆ ಕಾನೂನುಗಳನ್ನು ಮಾಡುತ್ತವೆ.

ಅಸಂಘಟಿತ ಕೆಲಸ ಪಟ್ಟಣಗಳಲ್ಲಿ ಕಾರ್ಮಿಕರು :

ತೆಲಂಗಾಣದಲ್ಲಿ ಭಾರತದೇಶದಲ್ಲಿನ ಇತರ ರಾಷ್ಟ್ರಗಳಲ್ಲಿ ಪಟ್ಟಣಗಳು ನಗರಗಳು ದೊಡ್ಡದಾಗಿ ಬದಲಾಗುತ್ತಿವೆ. ಪ್ರಜೆಗಳು ವೇಗವಾಗಿ ಗ್ರಾಮಗಳಿಂದ ಪಟ್ಟಣಗಳಿಗೆ ಬರುತ್ತಾರೆ. ಪಟ್ಟಣಗಳಲ್ಲಿ ಶಾಶ್ವತವಾದ ಉದ್ಯೋಗ ಸಿಗದಿರುವುದರಿಂದ ಆರ್ಥಿಕ ವ್ಯವಸ್ಥೆಯ ಅಸಂಘಟಿತ ರಂಗದಲ್ಲಿ ದಿನಗೂಲಿ ಕಾರ್ಮಿಕರಾಗಿ ಪ್ರಜೆಗಳು ಬದಲಾಗುತ್ತಿದ್ದಾರೆ. ಇವರು ತರಕಾರಿಗಳು ಮಾರುವುದು, ಬಿಸ್ಕತ್ತು, ಕಿರು ತಿಂಡಿಗಳನ್ನು ಮಾರುವುದು, ಟೀ ಹೋಟಲು ಗಳಲ್ಲಿ ಕೆಲಸ ಮಾಡುವುದು ಚಿಕ್ಕ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವುದು ಬಟ್ಟೆ ಹೊಲಿಯುವುದು, ವಾಹನಗಳಲ್ಲಿ ಪದಾರ್ಥಗಳನ್ನು ತುಂಬುವುದು, ಇಳಿಸುವುದು

SCERT TELANGANA

ಶ್ರೀಮಂತರ ಮನೆಗಳಲ್ಲಿ ಕೆಲಸಮಾಡುವುದು ಮುಂತಾದ ಅನೇಕ ಕೆಲಸಗಳಲ್ಲಿ ಸೇರುತ್ತಾರೆ, ಬೀಡಿ ಕಟ್ಟುವುದು, ಹಪ್ಪಳ ತಯಾರಿಕೆ ಎಂಬ್ರಾಡಯರಿ, ಕೈ ಕಸುಬು (ಗುಡಿಕೈಗಾರಿಕೆ) ಉತ್ಪತ್ತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾಲಿಕರಾಗಿ ಸರ್ಕಾರದಿಂದ ಗುರ್ತಿಸಲ್ಪಡದಿರುವುದರಿಂದ ಇದನ್ನು ಅಸಂಘಟಿತ ರಂಗ ಎನ್ನುತ್ತಾರೆ. ಇಂತಹ ಕೆಲಸವನ್ನು ಅಸಂಘಟಿತ ಕೆಲಸ ಎನ್ನುತ್ತಾರೆ.

ಇವೆಲ್ಲಕ್ಕೂ ಕಡಿಮೆ ಬಂಡವಾಳ, ಕಡಿಮೆ ನೈಪುಣ್ಯತೆ ಅವಶ್ಯಕ. ಕಡಿಮೆ ಸಂಬಳ ಸಲ್ಲಿಸುತ್ತಾರೆ. ಈ ಕಾರ್ಮಿಕರೆಲ್ಲರೂ ದುರ್ಭರವಾದ ಪರಿಸ್ಥಿತಿಗಳನ್ನು ಎದುರಿಸುತ್ತಾರೆ, ಕೆಲವರು ಒಂದೇ ಸಮಯದಲ್ಲಿ ಅನೇಕ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಬೆಳಿಗ್ಗೆ ವಾರ್ತ ಪತ್ರಿಕೆಗಳನ್ನು ಹಾಕುವುದು, ನಂತರ ಹೋಟಲ್‌ಗಳಲ್ಲಿ ಕೆಲಸ ಮಾಡುವುದು ರಾತ್ರಿವೇಳೆ ಮನೆಗಳಲ್ಲಿ ಅಡಿಗೆ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಇವರಿಗೆ ವಿಶ್ರಾಂತಿ ಇರುವುದಿಲ್ಲ. ಮಕ್ಕಳು ಸಹ ಕೆಲಸ ಮಡುವುದರಿಂದ ಓದಿ ಕೊಳ್ಳುವುದಿಲ್ಲ .ಆರ್ಥಿಕ ಸಮಸ್ಯೆಗಳು ಎದುರಾದಾಗ ಮಕ್ಕಳನ್ನು ಓದಿಸುವುದು, ಆಹಾರ ಔಷಧಿಗಳಂತಹ ಮೇಲೆ ಮಾಡುವ ಖರ್ಚುಗಳನ್ನು ಕಡಿಮೆ ಗೊಳಿಸುತ್ತಿದ್ದಾರೆ. ಇಷ್ಟು ಮಾಡಿದರೂ ಇವರ ಬೇಡಿಕೆಗಳು ತೀರಿಸುವಂತಿಲ್ಲ. ಅವರು ಬಲವಂತವಾಗಿ ಸ್ನೇಹಿತರ ಹತ್ತಿರ, ಬಂಧುಗಳ ಬಳಿ ಸಾಲ ಪಡೆಯಬೇಕಾಗುತ್ತದೆ. ಕೆಲವೊಮ್ಮೆ ಬಡ್ಡಿ ವ್ಯಾಪಾರಿಗಳು ಬಳಿ ಸಾಲ ಪಡೆಯುತ್ತಿದ್ದಾರೆ. ಸಾಲದ ಹೊರೆ ಹೆಚ್ಚಾಗಿ ಅದರ ಬಳಿ ನಿರ್ಭಂದವಾಗಿ ಕೆಲಸ ಮಾಡಬೇಕಾಗುತ್ತದೆ.

ಇಂತಹವರ ಹಕ್ಕುಗಳಿಗಾಗಿ ಕೆಲಸ ಮಾಡುವ ಕಾರ್ಮಿಕ ಸಂಘಗಳು ಇಲ್ಲವೇ ಇಲ್ಲ. ಅವರನ್ನು ಸಂರಕ್ಷಿಸಲು ಸಾರ್ಕಾರವು ಅನೇಕ ಕಾನೂನುಗಳನ್ನು ಮಾಡಿದೆ. ಆದರೆ ಜಾರಿಗೆ ತರಲು ಹಣಕಾಸು, ಅಧಿಕಾರಿಗಳ ಕೊರತೆ ಇರುವುದರಿಂದ ಅಶಿಸಿದ ಫಲಗಳು ದಕ್ಕುತ್ತಿಲ್ಲ. ದೇಶದಲ್ಲಿ ಇಂತಹ ಕಾರ್ಮಿಕರ ಸಂಖ್ಯೆ ಕ್ರಮವಾಗಿ ಬೆಳೆಯುತ್ತಿದೆ. ಗ್ರಾಮಗಳಿಂದ ವಲಸೆ ಬರುವುದೇ ಅಲ್ಲದೇ ಬಹಳಷ್ಟು ಹಳೆಯ ಕಾರ್ಖಾನೆಗಳು ಮುಚ್ಚುವುದು ಸಹ ಒಂದು ಕಾರಣ. ಇಂತಹ ಕಾರ್ಖಾನೆಗಳಲ್ಲಿನ ಕಾರ್ಮಿಕರು ದಿನಗೂಲಿ ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ.

ಈ ಸಮಸ್ಯೆಗಳೆಲ್ಲವನ್ನು ಪರಿಶೀಲಿಸಿ ಗುಜರಾತಿ ನಲ್ಲಿ ಕಾರ್ಮಿಕ ಸಂಘಗಳು ಪ್ರಪಂಚದಲ್ಲಿಯೇ ಅಸಂಘಟಿತ ರಂಗದಲ್ಲಿ ಅತಿ ದೊಡ್ಡ ಯೂನಿಯನ್ನನ್ನು ಪ್ರಾರಂಭಿಸಿದೆ. ಅದನ್ನು ಕುರಿತು ತಿಳಿದು ಕೊಳ್ಳೋಣ.

ಸ್ವಯಂ ಉದ್ಯೋಗ ಮಹಿಳಾ ಸಂಘ (SEWA)

1971ರಲ್ಲಿ ಅಹ್ಮದಾಬಾದ್ ಬಟ್ಟೆಯ ಮಾರ್ಕೆಟಿಗೆ ಬಂಡಿಗಳನ್ನು ಎಳೆಯುವ ಮಹಿಳಾ ವಲಸೆ ಕಾರ್ಮಿಕರನ್ನು (Textile Labour Association) ಸಂದರ್ಶಿಸಿ ಅವರ ಗೃಹ ವಸತಿ ಸೌಕರ್ಯ ಉತ್ತಮ ಪಡಿಸಲು ಸಹಾಯ ಮಾಡಿರೆಂದು ಕೋರಿದ್ದಾರೆ. ಇದು ಭಾರತ ದೇಶದಲ್ಲಿ ಪ್ರಾಚೀನ ಮತ್ತು ದೊಡ್ಡ ಸಂಘ ಮಹಾತ್ಮಾ ಗಾಂಧೀ ಇದರೊಂದಿಗೆ ಸೇರಿ ಕಾರ್ಯ ನಿರ್ವಹಿಸಿದ್ದಾರೆ. 1971ರಲ್ಲಿ ಸ್ವಯಂ ಉದ್ಯೋಗ ಮಹಿಳಾ ಸಂಘ ಏರ್ಪಟ್ಟು 1972ರಲ್ಲಿ ಅದು ಪೂರ್ಣ ಮಟ್ಟದ ಕಾರ್ಮಿಕ ಸಂಘವಾಗಿ ಏರ್ಪಟ್ಟಿತು.

ಅಂದಿನಿಂದ SEWA ಬೇರೆ ಬೇರೆ ವೃತ್ತಿಗಳಲ್ಲಿ ಕೆಲಸ ಮಾಡುವ ಮಹಿಳೆಯು ರೊಂದಿಗೆ ನಿರಂತರವಾಗಿ ಕೆಲಸ ಮಾಡುತ್ತದೆ. ಈ ಸಂಘಕ್ಕೆ ನಿರ್ದಿಷ್ಟವಾದ ಕಾರ್ಮಿಕ ಮಾಲಿಕ ಸಂಭಂಧಗಳು ಎಂಬುದು ಇಲ್ಲ. ಇದು ಕೇವಲ ಕಾರ್ಮಿಕರ ಏಳಿಗೆಗಾಗಿ ಕೆಲಸ ಮಾಡುತ್ತದೆ. ಅವರಿಗೆ ಬಂಡಾವಾಳ ಇರುವುದಿಲ್ಲ. 5ರೂ ಗಳನ್ನು ಸಲ್ಲಿಸುವ ಯಾವ ಮಹಿಳಾ ಕಾರ್ಮಿಕರಾದರೂ ಸದಸ್ಯತ್ವವನ್ನು ತೆಗೆದು ಕೊಳ್ಳಬಹುದು. ಉದ್ಯೋಗಸ್ಥರಾದ ಮಹಿಳೆಯರು ತಮ್ಮ ಸಂಕಷ್ಟಗಳನ್ನು ಪರಿಷ್ಕರಿಸಿಕೊಳ್ಳಲು, ಕೆಲಸದ

SCERT TELANGANA

ಸಂಸ್ಕೃತಿಯನ್ನು ಉತ್ತಮ ಪಡಿಸಿಕೊಳ್ಳಲು, ಆರ್ಥಿಕವಾಗಿ ಸ್ವಾವಲಂಭಿಗಳಾಗಲು, ಅವರವರ ಕೆಲಸಗಳು ಮುಂದುವರಿಸಿಕೊಳ್ಳಲು ಸಹಾಯವಾಗುತ್ತದೆ. ಬೀದಿಗಳಲ್ಲಿ ಅಲೆದು ಮಾರುವವರು, ಕಾಯಿ ಪಲ್ಯೆಗಳು, ಹಣ್ಣು. ಮೊಟ್ಟೆ, ಗುಡಿ ಕೈಗಾರಿಕೆ ಉತ್ಪತ್ತಿಗಳನ್ನು ಮಾರುವವರು, ಹೊಸ ಹಳೆಯ ಬಟ್ಟೆಗಳನ್ನು ಮಾರುವವರು, ಮನೆಗಳಲ್ಲಿ ಕೆಲಸ ಮಾಡುವವರು, ಕುಂಬಾರರು, ಬೀಡಿ, ಸಾಂಬ್ರಾಣಿ ಕಡ್ಡಿಗಳನ್ನು ಮಾರುವವರು, ಹಪ್ಪಳವನ್ನು ತಯಾರಿಸಿ ಮಾರುವವರು, ವಸ್ತ್ರಗಳನ್ನು ಮಾರುವವರು, ವ್ಯವಸಾಯ ಕೂಲಿಗಳು, ನಿರ್ಮಾಣ ರಂಗದ ಕೂಲಿಗಳು, ಗುತ್ತಿಗೆ ಕಾರ್ಮಿಕರು, ಇಸ್ತ್ರಿ ಕಾರ್ಮಿಕರು, ದನ ಕಾಯುವವರು, ಉಪ್ಪು ಕಾರ್ಮಿಕರು, ಅಂಟನ್ನು ಶೇಖರಿಸುವವರು SEWA ಸದಸ್ಯರಾಗಿದ್ದಾರೆ.

SEWA ಈಗ 13 ಲಕ್ಷ ಸದಸ್ಯರು ಭಾರತದ 9 ರಾಜ್ಯಗಳಲ್ಲಿ ಇದ್ದಾರೆ. ಸದಸ್ಯರಿಗೆ ಬ್ಯಾಂಕಿನ ಸೇವೆಗಳನ್ನು ಒದಗಿಸುತ್ತಿದ್ದಾರೆ. ಸಹಕಾರ ಸಂಸ್ಥೆಗಳನ್ನು ನಡೆಸುತ್ತಾ ಆರೋಗ್ಯ ವಿಮೆ ಸೌಲಭ್ಯವನ್ನು ಒದಗಿಸುತ್ತಿದ್ದಾರೆ. ಅವರ ಉತ್ಪನ್ನಗಳನ್ನು ವ್ಯಾಪಾರ ಮಾಡುವುದರಲ್ಲಿ ಉತ್ತಮ ವೇತನ ಹೊಂದುವುದರಲ್ಲಿ SEWA ಸಹಾಯ ಮಾಡುತ್ತಿದೆ. ಆಂಧ್ರಪ್ರದೇಶದಲ್ಲಿ ರಸ್ತೆಯ ಬೀದಿಯಲ್ಲಿ, ಸಂತೆಗಳಲ್ಲಿ ತರಕಾರಿಗಳನ್ನು ಮಾರುವ ನೂರಾರು ಜನ ಸ್ತ್ರೀಯರ ಪರಿಸ್ಥಿತಿಗಳು ಉತ್ತಮಗೊಳಿಸಲು ಇಂತಹ ಸಂಘಗಳು ಬಹಳಷ್ಟು ಉಪಯೋಗವಾಗುತ್ತಿವೆ ಎಂದು ಭಾವಿಸುತ್ತೀರಾ.

ಮುಖ್ಯ ಪದಗಳು :

1. ಪರಿಹಾರ 5. ESI

2. ಭವಿಷ್ಯ ನಿಧಿ **6. ಸಂಬಳ**

3. ದಿನಗೂಲಿಗಳು **7. ಬದಲಿ ಕೆಲಸದವರು.**

4. ಶಾಶ್ವತ ಉದ್ಯೋಗಿಗಳು

ನಿಮ್ಮ ಕಲಿಕೆಯನ್ನು ಉತ್ತಮ ಪಡಿಸಿ ಕೊಳ್ಳಿ •

1) ಇಟ್ಟಿಗೆ ಬಟ್ಟಿಯಲ್ಲಿ ಕೆಲಸ ಮಾಡುವ ಕಾರ್ಮಿಕನ ಸ್ಥಿತಿಯನ್ನು, ಉದ್ದಿಮೆಗಳಲ್ಲಿ ಕೆಲಸ ಮಡುವ ಶಾಶ್ವತ ಕಾರ್ಮಿಕನ ಗುತ್ತಿಗೆ ಕಾರ್ಮಿಕನ ಸ್ಥಿತಿಯನ್ನು ಹೋಲಿಸಿರಿ.

2) ನಿಮ್ಮ ಪ್ರಾಂತ್ಯದಲ್ಲಿ ದಿನಗೂಲಿ ಕಾರ್ಮಿಕರು, ಸ್ವಯಂ ಉದ್ಯೋಗ ಕಾರ್ಮಿಕರು ಮಾಡುವ ಕೆಲಸಗಳ ಪಟ್ಟಿಯಲ್ಲಿ ಬರೆಯಿರಿ.

3) ಬೇರೆ ಬೇರೆ ಕಾರ್ಮಿಕ ಸಂಘಗಳ ಪಟ್ಟಿಯನ್ನು ಬರೆದು ಕೆಳಗಿನ ಅಂಕಣವನ್ನು ಪೂರೈಸಿರಿ.

ಕ್ರ.ಸಂ	ಕಾರ್ಮಿಕ ಸಂಘ ಕೆಲಸ ಮಾಡುವ ಕಂಪನಿ	ಕೆಲಸದ ವಿಧ	ಪ್ರಧಾನ ಸಮಸ್ಯೆಗಳು	ಪರಿಹಾರಗಳು
1				
2				
3				

4) ಕಾರ್ಮಿಕ ಸಂಘ ಸದಸ್ಯನೊಂದಿಗೆ ಮಾತನಾಡಿ ಆತನನ್ನು ತರಗತಿ ಕೋಣೆಗೆ ಆಹ್ವಾನಿಸಿ ಆತನ ಜೀವನ ಚರಿತ್ರೆಯನ್ನು ಕೇಳಿ ತಿಳಿದು ಕೊಳ್ಳಿರಿ ಪ್ರತ್ಯೇಕವಾಗಿ ಆತ / ಆಕೆ ಏಕೆ ಸಂಘದಲ್ಲಿ ಸೇರಿದ್ದಾರೋ ತಿಳಿಸಿರಿ. ಸದಸ್ಯರಾಗಿ ಹಕ್ಕು ಮತ್ತು ಕರ್ತವ್ಯಗಳು ಯಾವುವೋ ತಿಳಿದುಕೊಳ್ಳಿರಿ.

5) ಚಿತ್ರಗಳು 19.1, 19.3 ರನ್ನು ಪರಿಶೀಲಿಸಿ, ಇವುಗಳ ಮೇಲೆ ವ್ಯಾಖ್ಯಾನಿಸಿರಿ.

SCERT TELANGANA

ಪಾಠ 20

ಜಾನಪದಗಳು – ಧರ್ಮ

ಕೆಳಗಿನ ಪ್ರಶ್ನೆಗಳನ್ನು ತರಗತಿಯ ಕೊಠಡಿಯಲ್ಲಿ ಚರ್ಚಿಸಿ.

1) ನಿಮ್ಮ ಪ್ರಾಂತ್ಯದಲ್ಲಿ ಯಾವ ಯಾವ ದೇವತೆಗಳನ್ನು ಆರಾಧಿಸುತ್ತಾರೆ?
2) ಸನ್ಯಾಸಿಗಳನ್ನು, ಬಾಬಾಗಳನ್ನು, ಫಕೀರರನ್ನು ನಿಮ್ಮ ಕುಟುಂಬ ಗೌರವಿಸುವುದನ್ನು ನೀವು ನೋಡಿರುವಿರಾ? ವಿವರಿಸಿ.
3) ಪ್ರಜೆಗಳು ಯಾವ ಯಾವ ಪ್ರಾಣಿಗಳನ್ನು, ಗಿಡಗಳನ್ನು ಪೂಜಿಸುವರೋ ಪೂಜಿಸುತ್ತಾರೆ ?
4) ಪ್ರಜೆಗಳು ಯಾವ ರೀತಿಯಲ್ಲಿ ಪೂಜಿಸುವರೋ ನಿಮಗೆ ತಿಳಿದಿದೆಯಾ?
5) ದೇವತೆಗಳನ್ನು ಹೇಗೆ ಪೂಜಿಸುತ್ತಾರೆ ? ಪೂಜೆಗಳನ್ನು ಯಾರು ನಿರ್ವಹಿಸುವರು ?
6) ದೇವರುಗಳನ್ನು ಭಕ್ತರು ಯಾವ ಯಾವ ಭಾಷೆಗಳಲ್ಲಿ ಆರಾಧಿಸುತ್ತಾರೆ?

ನೀವು ಸಾಧಾರಣವಾಗಿ ಇಂತಹ ಸಂಭಾಷಣೆಯನ್ನು ಕೇಳುತ್ತಿರುತ್ತೀರಿ ಹೌದೇ!

ಲಕ್ಷ್ಮಿ : ಇತ್ತೀಚೆಗೆ ನಮ್ಮ ಮಕ್ಕಳು ಅನೇಕ ಬಾರಿ ಜ್ವರ, ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ.

ಸಮ್ಮಕ್ಕ : ನನ್ನ ಗಂಡನ ಆರೋಗ್ಯ ಸಹ ಕಳೆದ ತಿಂಗಳಿನಿಂದ ಚೆನ್ನಾಗಿಲ್ಲ.

ಎಲ್ಲಮ್ಮ : ಮುತ್ಯಾಲಮ್ಮ ದೇವತೆಗೆ ಕೋಪ ಬಂದಂತಿದೆ. ನಾವು ಆಕೆಯನ್ನು ಪ್ರಸನ್ನಗೊಳಿಸಬೇಕು. ಅದಕ್ಕಾಗಿ ಹರಕೆ ಹೊರಬೇಕು. ದೇವತೆಗೆ ಕೋಳಿ ಹುಂಜವನ್ನು ಬಲಿ ಕೊಡಬೇಕು.

***

ರಾಮರಾಜು : ನಮ್ಮ ಹುಡುಗಿ ಬಹಳ ನೀರಸವಾಗಿದ್ದಾಳೆ. ಏನು ತಿನ್ನುತ್ತಿಲ್ಲ.

ಸುರೇಶ್ : ನೀವು ಪೀರ್ ಬಾಬಾ ದರ್ಗಕ್ಕೆ ಹೋಗಬಹುದಲ್ಲಾ! ಅಲ್ಲಿಗೆ ಹೋಗಿ ಮೌಲ್ವಿಯ ಬಳಿ ತಾಯಿತ (ಯಂತ್ರ) ಕಟ್ಟುವಂತೆ ಕೇಳಿರಿ. ನಿಮ್ಮ ಮಗಳ ಆರೋಗ್ಯ ಸುಧಾರಿಸುತ್ತದೆ.

ನಮ್ಮ ದೇಶದಲ್ಲಿ ಅನೇಕ ಮಂದಿ ಪ್ರಜೆಗಳು ದೇವಾಲಯಗಳಲ್ಲಿ ಅನೇಕ ದೇವತೆಗಳನ್ನು ಆರಾಧಿಸುತ್ತಾರೆ. ಚರ್ಚ್,ಮಸೀದಿಗಳಲ್ಲಿ ಪ್ರಾರ್ಥನೆ ಮಾಡುತ್ತಾರೆ. ಅಷ್ಟೇ ಅಲ್ಲದೆ ಅನೇಕ ಗ್ರಾಮ ದೇವತೆಗಳನ್ನು ಕೂಡ ಪೂಜಿಸುತ್ತಾರೆ. ಇವರಲ್ಲಿ ಪ್ರಸಿದ್ಧಿ ಹೊಂದಿದ ದೇವತೆಗಳು ಯಾರು? ಇವರು ಹೇಗೆ, ಯಾವಾಗ, ಯಾರಿಂದ ಪೂಜಿಸಲ್ಪಡುತ್ತಾರೆ?

ನಮಗೆ ಅನೇಕ ಗ್ರಾಮದೇವತೆಗಳಿವೆ. ಅವರಲ್ಲಿ ಕೆಲವರು, ಕೆಲ ಪ್ರತ್ಯೇಕ ಕುಲಕ್ಕೆ, ಗ್ರಾಮಗಳಿಗೆ, ಕುಟುಂಬಗಳಿಗೆ ಸೇರಿರುತ್ತಾರೆ. ಸಾಧಾರಣವಾಗಿ ಪೂಜಿಸಲ್ಪಡುವ ಕೆಲವು ದೇವತೆಗಳ ಬಗ್ಗೆ ತಿಳಿದುಕೊಳ್ಳೋಣ.

ಪೋಚಮ್ಮ:

ತೆಲಂಗಾಣದಲ್ಲಿ ಅತ್ಯಂತ ಪ್ರಸಿದ್ಧಿ ಹೊಂದಿದ ಗ್ರಾಮದೇವತೆ ಪೋಚಮ್ಮ. ಸರಿಸುಮಾರಾಗಿ ಪ್ರತಿ ಊರಿನಲ್ಲೂ ಈಕೆಗೆ ಗುಡಿ ಇದೆ. ಈ ಗುಡಿ ರಾಮ, ಶಿವನ ಗುಡಿಗಳಿಗಿಂತ ಭಿನ್ನವಾಗಿರುತ್ತದೆ. ಗುಡಿಯ ನಿರ್ಮಾಣ ಆಕರ್ಷಣೀಯವಾಗಿರದೆ ಸಾಧಾರಣವಾಗಿ ಬೇವಿನಮರಕ್ಕೆ ಹೊಂದಿಕೊಂಡಿರುತ್ತದೆ. ದೇವತಾಮೂರ್ತಿ ಕಲ್ಲಿನ ರೂಪದಲ್ಲಿರುತ್ತದೆ. ಕೆಲ ಆಧುನಿಕ ಪಟ್ಟಣಗಳಲ್ಲಿ ದೇವಾಲಯ ವಾಸ್ತು ಶಿಲ್ಪದಲ್ಲಿ ನಿರ್ಮಿಸಿ ವಿಗ್ರಹದ ರೂಪದಲ್ಲಿ ದೇವತೆಯನ್ನು ಪ್ರತಿಷ್ಠೆ ಮಾಡಿರುತ್ತಾರೆ.

SCERT TELANGANA





ಚಿತ್ರ 20.1,2 ಎರೆಡೂ ಪೋಚಮ್ಮ ವಿಗ್ರಹಗಳು ಒಂದೇರೀತಿ ಇವೆಯೇ

ವರ್ಷದ ಪ್ರತ್ಯೇಕ ಸಂದರ್ಭಗಳಲ್ಲಿ ಪ್ರಜೆಗಳೆಲ್ಲಾ ಬೋನಾಲು (ಕಳಸ) ಹೊತ್ತುಕೊಂಡು ಆ ಗುಡಿಗೆ ಹೋಗುತ್ತಾರೆ. ಗುಡಿಯ ಆವರಣವನ್ನು, ಗುಡಿಯಲ್ಲಿನ ದೇವತೆಗಳನ್ನು ತೊಳೆದು ಶುಭ್ರಮಾಡುತ್ತಾರೆ. ಅಲ್ಲಿ ಪ್ರತ್ಯೇಕವಾಗಿ ಪೂಜಾರಿ ಇರುವುದಿಲ್ಲ. ಪ್ರಜೆಗಳು ಸ್ಥಾನಿಕ ಸಂಪ್ರದಾಯದಿಂದ ಪೂಜಿಸುತ್ತಾರೆ. "ತಾಯಿ ನಮ್ಮ ಹೊಲಗಳನ್ನು ಕಾಪಾಡಿ, ಒಳ್ಳೆಯ ಫಸಲನ್ನು ನೀಡು", "ನನ್ನ ಮಗು ಅನಾರೋಗ್ಯದಿಂದ ಇದೆ, ಆಕೆಯನ್ನು ವಾಸಿಯಾಗುವಂತೆ ಮಾಡು", "ತಾಯಿ ಅಂಟು ರೋಗಗಳಿಂದ, ದುಷ್ಟ ಶಕ್ತಿಗಳಿಂದ ನಮ್ಮ ಕುಟುಂಬವನ್ನು ಕಾಪಾಡು" ಎಂದು ಬೇಡಿಕೊಳ್ಳುತ್ತಾರೆ. ಕೆಲವರು ಕಳಸ ಸಮರ್ಪಿಸಿ, ಕೆಲವು ಸಂದರ್ಭಗಳಲ್ಲಿ ಕೋಳಿ, ಕುರಿಗಳಿಂದ ಹರಿಕೆ ತೀರಿಸುತ್ತಾರೆ.



ಚಿತ್ರ 20.3 ಮೈಸಮ್ಮ

ಮೈಸಮ್ಮ:

ಪಶು ಸಂಪತ್ತನ್ನು ಕಾಪಾಡುವ ದೇವತೆಯೆಂದು ಈಕೆಗೆ ಹೆಸರಿದೆ. ಗೋಮಾಳದಲ್ಲಿ ಒಂದು ಗೂಡಿಗೆ ಸುಣ್ಣಹಚ್ಚಿ, ಕುಂಕುಮದಿಂದ ಅಲಂಕರಿಸಿ ಅದನ್ನು "ಮೈಸಮ್ಮ ಗೂಡು" ಎಂದು ಕರೆಯುತ್ತಾರೆ. ಅನೇಕ ಕಡೆ ಕಟ್ಟೆ ಮೈಸಮ್ಮನನ್ನು ಸಹ ಪೂಜಿಸುತ್ತಾರೆ. ಕೆರೆಕಟ್ಟೆಯ ಮೇಲೆ ಬಂಡೆಕಲ್ಲಿನ ರೂಪದಲ್ಲಿರುವ ಈಕೆಯನ್ನು ನೀರಿನ ದೇವತೆಯಾಗಿ ಆರಾಧಿಸುತ್ತಾರೆ. ಆಕೆಯನ್ನು ಆರಾಧಿಸಿದರೆ ಕೆರೆಯತುಂಬ ನೀರು ಇರುತ್ತದೆಯೆಂದು, ಆಕೆಯ ದಯೆಯಿಂದ ಬೆಳೆಗಳು ಪುಷ್ಕಳವಾಗಿ ಬೆಳೆಯುತ್ತವೆಂದು ಪ್ರಜೆಗಳು ನಂಬುತ್ತಾರೆ.

ಗಂಗಮ್ಮ:

ಈಕೆಯನ್ನು ನೀರಿನ ದೇವತೆಯಾಗಿ ಆರಾಧಿಸುತ್ತಾರೆ. ಸಮುದ್ರದಲ್ಲಿ ಮೀನು ಹಿಡಿಯುವ ಮೀನುಗಾರರನ್ನು ಕಾಪಾಡುವ ದೇವತೆಯೆಂದು ಈಕೆ ಪ್ರಸಿದ್ಧಿ ಹೊಂದಿದ್ದಾಳೆ. ಬಡವರನ್ನು, ಅನಾಥರನ್ನು ಕಾಪಾಡುವ ದೇವತೆಯೆಂದು ಈಕೆಯನ್ನು ನಂಬುತ್ತಾರೆ.

ಎಲ್ಲಮ್ಮ:

"ಪೋಲೇರಮ್ಮ", "ಮರಿದಮ್ಮ", "ರೇಣುಕ", "ಮಹಂಕಾಳಿ", "ಜೋಗಮ್ಮ", "ಸೋಮಲಮ್ಮ" ಮುಂತಾದ ಹೆಸರುಗಳಿಂದ ಈಕೆಯನ್ನು ಕರೆಯುತ್ತಾರೆ. ಈಕೆ ಊರ ಹೊರಭಾಗದಲ್ಲಿದ್ದು ಊರನ್ನು ಕಾಪಾಡುತ್ತಾಳೆಂದು ನಂಬುತ್ತಾರೆ. ಅಂಟುಕಾಯಿಲೆಗಳಿಂದ ದುಷ್ಟ ಶಕ್ತಿಗಳಿಂದ ಕಾಲರಾಗಳಂತಹ ರೋಗಗಳ ಕಾಪಾಡುವಂತೆ ಜನರು ಈಕೆಯನ್ನು ಪ್ರಾರ್ಥಿಸುತ್ತಾರೆ.

© TELANGANA



ಚಿತ್ರ 20.4 ಎಲ್ಲಮ್ಮ

ಪೋತರಾಜು:

ತಮ್ಮ ವ್ಯವಸಾಯ ಭೂಮಿಯನ್ನು ಬೆಳೆಗಳನ್ನು, ಭಯಂಕರವಾದ ಬೆಳೆಗೆ ಬರುವ ರೋಗಗಳಿಂದ, ಕಳ್ಳರಿಂದ, ಪ್ರಾಣಿಗಳಿಂದ ಪೋತರಾಜು ಕಾಪಾಡುತ್ತಾನೆಂದು ಜನರ ವಿಶ್ವಾಸ ವ್ಯವಸಾಯಗಾರರೆಲ್ಲರು ಸುಣ್ಣಹಚ್ಚಿದ ಬಂಡೆಕಲ್ಲನ್ನು ತಮ್ಮ ಬೆಳೆ ಬೆಳೆಯುವ ಹೊಲಗಳ ಒಂದು ಮೂಲೆಯಲ್ಲಿ ಇಡುತ್ತಾರೆ. ಪೋರತಾಜುವಿನ ಪೂಜಾವಿಧಾನ ಸಾಧಾರಣವಾಗಿ ಇರುತ್ತದೆ. ಸಾಮಾನ್ಯವಾಗಿ ಫಸಲು ಕಟಾವಿನ ಸಮಯದಲ್ಲಿ ಈ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ದೊಡ್ಡಮ್ಮ ನಂತಹ ಹೆಸರಿರುವ ದೇವತೆಗಳು ಈತನಿಗೆ ಸಹೋದರಿಯರು.

ಬೀರಪ್ಪ, ಕಾಟಮರಾಜು:

ಬೀರಪ್ಪ, ಕಾಟಮರಾಜು ಇವರನ್ನು ಕುರಿ, ದನಗಳನ್ನು ಸಾಕುವವರು ಪೂಜಿಸುತ್ತಾರೆ. ಇವರು ಪಶುಗಳನ್ನು, ಕುರಿಗಳನ್ನು ಕಾಪಾಡುವ ದೇವರುಗಳು. ನೀವು ಬೀರಪ್ಪ, ಅಕ್ಕಮಹಂಕಾಳಿ, ಕಥೆಯನ್ನು ಕೇಳುರುವಿರಾ? ಬೀರಪ್ಪ ಎನ್ನುವ ಒಬ್ಬ ಬಡಕುರಿ ಕಾಯುವವ ಕಾಮರತಿಯನ್ನು ಮದುವೆ ಮಾಡಿಕೊಳ್ಳಲು ಯಾವ ರೀತಿಯಲ್ಲಿ ಹೋರಾಡಿದ? ಆ ಸಮಯದಲ್ಲಿ ಆತನ ಅಕ್ಕ ಹೇಗೆ ಸಹಾಯ ಮಾಡಿದಳು ನಿಮಗೆ ತಿಳಿದಿದೆಯಾ? ಪಶುಪಾಲಕರು ಹುಲ್ಲುಗಾವಲಿನಲ್ಲಿ ಹಸುಗಳನ್ನು ಮೇಯಿಸುವ ಹಕ್ಕುಗಳ ಕುರಿತು ನೆಲ್ಲೂರಿನ ರಾಜನ ಜೊತೆ ಕಾಟಮರಾಜು ಯಾವ ರೀತಿಯಲ್ಲಿ ಯುದ್ಧಮಾಡಿದ ನಿಮಗೆ ತಿಳಿದಿದೆಯೇ?



ಚಿತ್ರ 20.5 ಪೋತರಾಜು

- ಜಾನಪದ ಹಬ್ಬಗಳಲ್ಲಿ ಗ್ರಾಮದೇವತೆಗಳ ಪೂಜೆಯಲ್ಲಿ ನೀವು ಪಾಲ್ಗೊಂಡಿರುತ್ತೀರಿ, ಹಾಗೆ ಶಿವ, ವಿಷ್ಣುವಿನಂತ ದೇವಾಲಯಗಳಿಗೆ ಸಹ ಹೋಗಿರುತ್ತೀರಿ. ಈ ಪೂಜಾ ವಿಧಾನವನ್ನು ಹೋಲಿಸಬಲ್ಲಿರಾ? ಅವುಗಳ ಮಧ್ಯೆ ಹೋಲಿಕೆಗಳು, ವ್ಯತ್ಯಾಸಗಳನ್ನು ತರಗತಿಯಲ್ಲಿ ಚರ್ಚಿಸಿರಿ.

ಜಾನಪದ ಹಬ್ಬಗಳಲ್ಲಿ ಪ್ರಾಣಿ ಬಲಿ ಒಂದು ಸಾಧಾರಣವಾದ ಆಚರಣೆ. ಇದರಿಂದ ಸಾವಿರಾರು ಪಶುಗಳು ಸಾವನ್ನಪ್ಪುತ್ತಿವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ರಾಜ್ಯ ಸರ್ಕಾರವು ಮಂತಪರವಾದ ಕಾರ್ಯಕ್ರಮಗಳಲ್ಲಿ ಪ್ರಾಣಿ ಪಕ್ಷಿಗಳನ್ನು ಬಲಿ ಕೊಡುವುದು ನಿಷೇಧಿಸಿದೆ.

ಸಮಾಜದಲ್ಲಿ ಜಾನಪದ ದೇವತೆಗಳ ಪೂಜೆ:

ಅನೇಕ ಮಂದಿ ಜಾನಪದ ದೇವರುಗಳು, ದೇವತೆಗಳು ಸ್ಥಾನಿಕ ವೀರರು. ಅವರು ಜನರಿಗಾಗಿ ಹೋರಾಡಿ ಮರಣಹೊಂದಿದರು. ಜನರನ್ನು ಕಾಪಾಡಲು ಪ್ರತ್ಯೇಕವಾದ ಶಕ್ತಿಗಳು ಅವರಿಗೆ ಇವೆ. ಒಂದುವೇಳೆ ಅವರನ್ನು ಪೂಜಿಸದಿದ್ದರೆ ಕಷ್ಟಗಳನ್ನು ನೀಡುತ್ತಾರೆಂದು ಸಾಮಾನ್ಯ ಜನರ ನಂಬಿಕೆ. ಗಿರಿಜನ ಸಮಸ್ಯೆ ಪರಿಷ್ಕಾರಕ್ಕಾಗಿ ಹೋರಾಡಿದ ಜಾನಪದ ನಾಯಕ, ನಾಯಕಿಯರಲ್ಲಿ ಸಮ್ಮಕ್ಕ, ಸಾರಕ್ಕರು ಇದ್ದಾರೆ. ಅವರ ಗೌರವಾರ್ಥವಾಗಿ ಜಾತ್ರೆ ಸಹ ನಡೆಯುತ್ತದೆ.

SCERT TELANGANA

ಸಮ್ಮಕ್ಕ–ಸಾರಕ್ಕ (ಮೇಡಾರಂ) ಜಾತರ:

ವಾರಂಗಲ್ ಜಿಲ್ಲೆಯ ತಾಡ್ವಾಯಿ ಮಂಡಲದ ಮೇಡಾರಂ ಗ್ರಾಮದ ಗಿರಿಜನರು ಈ ಜಾತ್ರೆಯನ್ನು ನಡೆಸುತ್ತಾರೆ. ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ, ಚತ್ತಿಸ್‌ಘಡ್, ಜಾರ್ಖಂಡ್ ರಾಜ್ಯಗಳಿಂದ ಗಿರಿಜನ, ಗಿರಿಜನೇತರ ಜನರು ಈ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಸುಮಾರು ಒಂದು ಕೋಟಿ ಜನ ಜಾತ್ರೆಗೆ ಹಾಜರಾಗುತ್ತಾರೆ.

ಕಥೆ:

ಕಾಕತೀಯ ರಾಜರ ಪಾಲನೆಯಲ್ಲಿ "ಮೇಡರಾಜು" ಎಂಬ ಗಿರಿಜನ ಸಾಮಂತ ರಾಜ ಇದ್ದನು. ಆತನ ಹೆಂಡತಿ ಸಮ್ಮಕ್ಕ ಅವರ ಮಗಳು ಸಾರಕ್ಕ, ಮಗ ಜಂಪನ್ನ. ಅಳಿಯನ ಹೆಸರು ಪಗಿಡಿಗಿದ್ದರಾಜು. ಒಂದುಸಲ ಆ ಪ್ರಾಂತ್ಯದಲ್ಲಿ ಕ್ಷಾಮ ಬಂದಿದ್ದರಿಂದ ಆತ ಕಾಕತೀಯ ರಾಜರಿಗೆ ತೆರಿಗೆ ಕಟ್ಟಲಾಗಲಿಲ್ಲ. ಇದರಿಂದ ಅವರು ತಮ್ಮ ಸೈನ್ಯವನ್ನು ಮೇದರಾಜುವಿನ ಮೇಲೆ ಕಳುಹಿಸಿದರು. ಮೇಢರಾಜು ಕುಟುಂಬ, ಅವರಿಗೆ ಸಂಬಂಧಿಸಿದ ಸ್ತ್ರೀ, ಪುರುಷರೆಲ್ಲರು ಯುದ್ಧದಲ್ಲಿ ಪಾಲ್ಗೊಂಡರು. ಮತ್ತು ಅವರೆಲ್ಲ ಯುದ್ಧದಲ್ಲಿ ಮರಣ ಹೊಂದಿದರು. ಕಾಕತೀಯ ಸೈನ್ಯವನ್ನು "ಸಂಪೆಂಗ ಹಳ್ಳ" ದಾಟದಂತೆ ತನ್ನ ಕೊನೆಯ ಉಸಿರು ಇರುವವರೆಗೂ ಹೋರಾಡಿದ ಜಂಪನ್ನ ವೀರಮರಣವನ್ನು ಹೊಂದಿದನು. ಆದ್ದರಿಂದ ಅದಕ್ಕೆ 'ಜಂಪನ್ನ ಹಳ್ಳ'ಎಂದು ಹೆಸರು ಬಂದಿದೆ. ಅದೇ ರೀತಿ ಸಮ್ಮಕ್ಕ, ಸಾರಕ್ಕ ಕಾಕತೀಯ ಸೈನ್ಯದ ಜೊತೆ ಹೋರಾಡಿ ತಮ್ಮ ಮತ ಕಾಪಾಡಿಕೊಳ್ಳಲು ಪ್ರಾಣತ್ಯಾಗ ಮಾಡಿದರು.



ಚಿತ್ರ 20.6 ಸಮ್ಮಕ್ಕ ದೇವತೆಯನ್ನು ಪ್ರತಿಷ್ಟಾಪಿಸಿದ ಗದ್ದುಗೆ



ಚಿತ್ರ 20.7ಮೇಡಾರಂ ಜಾತ್ರೆಯಲ್ಲಿನ ಒಂದು ದೃಶ್ಯ

ಅವರ ಸಾಹಸವನ್ನು, ತ್ಯಾಗವನ್ನು ಇಂದಿಗೂ ಕೊಂಡಾಡುತ್ತಾ ಅವರ ಗೌರವಾರ್ಥ ಮೇಡಾರಂ ಜಾತ್ರೆಯನ್ನು ಗಿರಿಜನ ಪ್ರಜೆಗಳೆಲ್ಲ ಆಚರಿಸುತ್ತಾರೆ. ಮೇಡಾರಂ ಜಾತ್ರೆ ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ಇದು ಮೂರು ದಿನ ಆಚರಿಸಲ್ಪಡುತ್ತದೆ. ಸಮ್ಮಕ್ಕ, ಸಾರಕ್ಕ ರೂಪವಿಲ್ಲದ ದೇವತೆಗಳು ಅವರನ್ನು ಕಾಡಿನಿಂದ ದೊಡ್ಡ ಮೆರವಣಿಗೆಯಲ್ಲಿ ಪಟ್ಟಿಗೆಯಲ್ಲಿ ತಂದು, ಸುಂದರವಾಗಿ ಅಲಂಕರಿಸಿದ ಗದ್ದುಗೆಯ ಮೇಲೆ, ಮರದ ಕೆಳಗೆ ಪ್ರತಿಷ್ಠಾಪಿಸುತ್ತಾರೆ. ಆ ಸಮಯದಲ್ಲಿ ದೇವತೆಗಳು ತಮ್ಮನ್ನು ಆವರಿಸಿದಂತೆ ಭಕ್ತರು ಅನುಭೂತಿ ಹೊಂದುತ್ತಾರೆ. ಜನರು ಬೆಲ್ಲವನ್ನು "ಬಂಗಾರ"ವಾಗಿ ದೇವತೆಗಳಿಗೆ ಸಮರ್ಪಿಸುತ್ತಾರೆ.

ಮೊಹರಂ (ಪೀರಲು) ಉರ್ಸು:

ಕೆಟ್ಟದ್ದಕ್ಕೆ ವ್ಯತಿರೇಕವಾಗಿ ಹೋರಾಡಿ ಅಮರರಾದ ಗೌವವಾರ್ಥ ಮುಸ್ಲಿಂ ಜನರು ಪ್ರಾರ್ಥನೆ ಮಾಡುತ್ತಾರೆ. ಇರಾಕಿನಲ್ಲಿ ಜರಿಗಿದ ಕರ್ಬಲಾ ಯುದ್ಧದಲ್ಲಿ ಮೊಹಮ್ಮದ್ ಪ್ರವಕ್ತ ಮೊಮ್ಮಗನು ಸತ್ತುಹೋದನು. ಆತನ ಜ್ಞಾಪಕಾರ್ಥವಾಗಿ ಮುಸ್ಲಿಂರು ಮೊಹರಂ ಆಚರಿಸುತ್ತಾರೆ. ಬಿದಿರು ದೆಬ್ಬೆಯಿಂದ ಗುಮ್ಮಟ ಆಕಾರ ತಯಾರಿಸಿ, ಥಳ ಥಳಿಸುವ ಬಟ್ಟೆ, ಹೂ, ಒಣಕೊಬ್ಬರಿ ಗಿಟಿಕಿನಿಂದ ಅಲಂಕರಿಸಿ, ಅದರ ಮೇಲ್ಭಾಗದಲ್ಲಿ ಅರ್ದ ಚಂದ್ರಾಕೃತಿ ಅಥವಾ ಹಸ್ತ ಆಕಾರದಲ್ಲಿ ಪೀರಲ ಚಿನ್ಹೆ ತಯಾರಿಸುತ್ತಾರೆ. ಉತ್ಸವದಲ್ಲಿ ಭಾಗವಾಗಿ ಮೆರವಣಿಗೆ ಮಾಡುತ್ತಾರೆ. ಇದರಲ್ಲಿ ಎಲ್ಲಾ ವರ್ಗದ ಜನರು ಭಾಗವಹಿಸುತ್ತಾರೆ.

ಅದೇ ವಿಧದಲ್ಲಿ ಮುಸ್ಲಿಂ ಪೀರ್ ಅಥವಾ ಸನ್ಯಾಸಿಗಳ ಸಮಾದಿಗಳು ಇರುವಲ್ಲಿ ಅವರ ವರ್ದಂತಿಗಳನ್ನು ಉರ್ಸು ಉತ್ಸವಗಳಾಗಿ ಆಚರಿಸುತ್ತಾರೆ. ಅಧಿಕ ಸಂಖ್ಯೆಯಲ್ಲಿ ಜನರು ದರ್ಗಾಗಳನ್ನು ದರ್ಶಿಸುತ್ತಾರೆ. ಹೂಗಳನ್ನು, ಚಾದರ ಅಥವಾ ಹೊದಿಕೆಗಳನ್ನು ಸಮಾದಿಗಳ ಮೇಲೆಹಾಕಿ ಅಲ್ಲಿ

© CERT TELANGANA



ಚಿತ್ರ 20.8 ಆಜ್ಮೀರ್ ದರ್ಗಾ



ಚಿತ್ರ 20.9ಜಹಂಗೀರ್ ಪೀರ್ ದರ್ಗಾ

ಹಾಡುವ ಖವಾಲಿಯನ್ನು ಕೇಳುತ್ತಾರೆ. ಹಾಗೆ ಮಾಡಿದರೆ ಮುಸ್ಲಿಂ ಸನ್ಯಾಸಿ ಅಥವಾ ಸಾಧುಗಳ ಬರ್ಕಾತ್ ಇಲ್ಲವೇ ಆಶೀರ್ವಾದ ಲಭಿಸುತ್ತದೆ ಎಂಬ ನಂಬಿಕೆಯಿದೆ. ಸಂತಾನ, ಉದ್ಯೋಗವನ್ನು ಬೇಡಿಕೊಳ್ಳುವವರು ದರ್ಗಾಗಳಿಗೆ ಬಂದು ಪ್ರಾರ್ಥನೆ ಮಾಡುತ್ತಾರೆ. ಮೊಹರಂ, ಉರ್ಸು, ಉತ್ಸವಗಳು ಮತ ಸಹಿಷ್ಣುತೆಗೆ ಪ್ರತೀಕವಾಗಿ ನಿಲ್ಲುತ್ತಿವೆ.

ಸೂಫಿ ತತ್ವವನ್ನು ಪ್ರಚಾರ ಮಾಡಿದ ಗುರುಗಳ ಸಮಾಧಿಗಳ ಮೇಲೆ ದರ್ಗಾಗಳನ್ನು ನಿರ್ಮಿಸುತ್ತಾರೆ. ಸೂಫಿ ಗುರುಗಳ ಸಮಾಧಿಗಳು ಅಥವಾ ದರ್ಗಾ ತೀರ್ಥಸ್ಥಳಗಳಾಗಿ ಮಾರ್ಪಡುತ್ತವೆ. ಎಲ್ಲಾ ಮತಗಳ ಜನರು ಸಾವಿರಾರು ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಸೂಫಿ ಗುರುಗಳಿಗೆ ಅತೀಂದ್ರಿಯ ಶಕ್ತಿ (ಕರಾಮತ್ತು) ಇರುತ್ತದೆಯೆಂದು ಜನರು ನಂಬುತ್ತಾರೆ. ಅವರು ಎಲ್ಲರ ತೊಂದರೆಗಳನ್ನು ತೊಲಗಿಸುತ್ತಾರೆ. ಆರೋಗ್ಯ ಸುಧಾರಿಸುವಂತೆ ಮಾಡುತ್ತಾರೆ ಎಂಬುದು ಅವರ ನಂಬಿಕೆ.

ಅಮಿನ್‌ಪೀರ್ ದರ್ಗಾ–ಮತ ಸಾಮರಸ್ಯಕ್ಕೆ ಕುರುಹು:

ಮಹಬೂಬ್ ನಗರ್ ಜಿಲ್ಲೆ ಕೊತ್ತೂರು ಮಂಡಲದಲ್ಲಿ ಜಹಂಗೀರ್ ಪೀರ್ ದರ್ಗಾ ಇದೆ. 15 ಶತಮಾನದ ಅಂತಿಮ ಕಾಲದಲ್ಲಿ ಇರಾಕ್ ದೇಶದ್ಧರಾದ ಸೈಯ್ಯದ್ ಗೌಸುದ್ಧೀನ್, ಸೈಯ್ಯದ್ ಬುರಾನೋದ್ಧೀನ್ ಎಂಬ ಸಹೋದರರು ದೈವಚಿಮತಕರಾಗಿದ್ದು ಕೆಲದಿನಗಳ ನಂತರ ದೈವಾದೀನರಾದರೆಂಬ ಕಥೆ ಚಾಲ್ತಿಯಲ್ಲಿದೆ. ಅವರ ಸಮಾಧಿಯ ಮೇಲೆ ಭಕ್ತರು ದರ್ಗಾ ಕಟ್ಟಿದರು. 16ನೇ ಶತಮಾನದಲ್ಲಿ ಮೋಘಲ್ ಚಕ್ರವರ್ತಿ ಈ ದರ್ಗಾ ಸಂದರ್ಶಿಸಿ, ದರ್ಗಾ ಮಹತ್ವವನ್ನು ತಿಳಿದುಕೊಂಡು, ಇಬ್ರಾಹಿಂ ಅಲಿ ಎಂಬ ಪಂಡಿತನನ್ನು ಖಾಜಿಯನ್ನಾಗಿ ನೇಮಿಸಿದನು. ಆ ಖಾಜಿಯೇ ಈ ದರ್ಗಾವನ್ನು ವಿಹಾರಯಾತ್ರಾಸ್ಥಳವನ್ನಾಗಿ ಮಾಡಿದನೆಂದು ಹೇಳುತ್ತಾರೆ.

ಹೈದ್ರಾಬಾದ್ ಪರಿಸರ ಪ್ರಾಂತದಿಂದ ಅನೇಕರು ಈ ದರ್ಗಾಕ್ಕೆ ಸಂದರ್ಶನಕ್ಕೆ ಬರುತ್ತಾರೆ. ಗುರು, ಆದಿವಾರಗಳಿಂದ ನಡೆಯುವ ಪೂಜಾ ಕಾರ್ಯಕ್ರಮಗಳಿಗೆ ವಿವಿಧ ರಾಜ್ಯಗಳಿಂದ ಸಂದರ್ಶಕರು ಬರುತ್ತಾರೆ. ಪ್ರತಿ ವರ್ಷ ಸಂಕ್ರಾಂತಿಯ ನಂತರ ಬರುವ ಮೊದಲ ಗುರುವಾರದಿಂದ ಮೂರು ದಿನಗಳವರೆಗೆ ಉರ್ಸು ನಡೆಯುತ್ತದೆ. ಮೊದಲನೇ ದಿನ ಗಂಧ ಸಪಮರ್ಪಣಾ ಪೂಜೆ, ಎರಡನೇ ದಿನ ದೀಪೋತ್ಸವ, ಮೂರನೇ ದಿನ ಖವ್ವಾಲಿ ನಿರ್ವಹಿಸುತ್ತಾರೆ. ಈ ಉತ್ಸವಗಳಲ್ಲಿ ದೇಶ–ವಿದೇಶಗಳಿಂದ ಸವಿರಾರು ಹಿಂದೂ–ಮುಸ್ಲಿಂ ಭಕ್ತರು ಭಾಗವಹಿಸಿ, ಹೂ, ಹಣ್ಣು, ಮಿಠಾಯಿ, ಚದ್ದರ್ ಸಮರ್ಪಿಸಿ ಹರಕೆ ತೀರಿಸುತ್ತಾರೆ. ಕುಲ ಮತ ಭೇದವಿಲ್ಲದೆ ಭಕ್ತರು ಬರುವುದರಿಂದ ಇದು ಮತ ಸಾಮರಸ್ಯಕ್ಕೆ ಕುರು ಹಾಗಿದೆ.

ಬೊನಾಲು(ಕಳಸ ಅಥವ ಘಟ):

ತೆಲಂಗಾಣದ ಪ್ರಾಂತ್ಯದಲ್ಲಿ ಬೊನಾಲು ಪ್ರಸಿದ್ಧಿ ಹೊಂದಿದ ಜಾನಪದ ಹಬ್ಬ ಇಲ್ಲಿ ದೇವತೆಗಳಿಗೆ ಆಹಾರವನ್ನು ಸಮರ್ಪಿಸಿ, ಪೂಜಿಸಿದ ನಂತರ ಕುಟುಂಬ ಸದಸ್ಯರು ಆಹಾರ ತಿನ್ನುತ್ತಾರೆ. ಸುಂದರವಾಗಿ ಅಲಂಕರಿಸಿದ ಹೂಗಳಿಂದ ತುಂಬಿದ ಕುಡಿಕೆಯನ್ನು ಸ್ತ್ರೀಯರ ತಲೆಯ ಮೇಲೆ ಇಟ್ಟುಕೊಂಡು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಇದನ್ನು ಘಟಂ ಅನ್ನುತ್ತಾರೆ. ಹಿತ್ತಾಳೆ ಬಿಂದಿಗೆ ಅಥವಾ ಮಣ್ಣಿನ ಮಡಿಕೆಯನ್ನು ಅನ್ನದಿಂದ ತುಂಬಿ, ಬೇವಿನ ಎಲೆಗಳಿಂದ ಅಲಂಕರಿಸಿ ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಪೊತರಾಜರುಗಳಾಗಿ ಕರೆಯಲ್ಪಡುವ ಗಂಡಸರು ನಾಟ್ಯವಾಡುತ್ತಾ ಜೊತೆಗೆ ಹೋಗುತ್ತಾರೆ. ಇವರು ಬೇವಿನಸೊಪ್ಪನ್ನು ಹಿಡಿದುಕೊಂಡು

SCERT TELANGANA



ಚಿತ್ರ 20.10 ಬೋನಾಲ್

ಚಾಟಿ ಏಟನ್ನು ಬೀಸುತ್ತ ಮೆರವಣಿಗೆಯ ಮುಂಭಾಗದಲ್ಲಿ ನಡೆಯುತ್ತಾರೆ.

- ನೀವು ಎಂದಾದರೂ ಜಾತ್ರೆಗಳಲ್ಲಿ, ಉರ್ಸಗಳಲ್ಲಿ, ಬೊನಾಲ ಹಬ್ಬಗಳಲ್ಲಿ ಪಾಲ್ಗೊಂಡಿದ್ದರೆ ಅದರ ಬಗ್ಗೆ ತರಗತಿಯ ಕೊಠಡಿಯಲ್ಲಿ ಚರ್ಚಿಸಿರಿ.
- ಗ್ರಾಮದೇವತೆಗಳ ಪೂಜಾ ವಿಧಾನಗಳು ದೇವಾಲಯಗಳಲ್ಲಿ, ಮಸೀದಿಗಳಲ್ಲಿ ನಡೆಯುವ ಕಾರ್ಯಕ್ರಮಗಳು ಹೇಗೆ ಭಿನ್ನವಾಗಿವೆ.

ಜಾನಪದ ಸಂಪ್ರದಾಯ–ಪ್ರಾಚೀನತೆ :

ಇಂತಹ ಗ್ರಾಮ ದೇವತೆಗಳನ್ನು ಪ್ರಾಚೀನ ಕಾಲದಲ್ಲಿ ಸಹ ಪೂಜಿಸುತ್ತಿದ್ದರು ಎಂಬುದನ್ನು ಅನೇಕ ಚಾರಿತ್ರಿಕ ಗ್ರಂಥಗಳ ಮೂಲಕ ತಿಳಿಯಬಹುದು. ಇಂದಿಗೆ 2500 ವರ್ಷಗಳ ಹಿಂದೆ ನಾಗರಗಳನ್ನು, ಗಿಡಗಳನ್ನು, ಯಕ್ಷಿಣಿ, ಯಕ್ಷರನ್ನು ಪೂಜಿಸುತ್ತಿದ್ದರೆಂದು ತಿಳಿಯುತ್ತದೆ. ಕ್ರಿ.ಶ. 1450 ಸಂವತ್ಸರದ ಕಾಲದಲ್ಲಿ ಶ್ರೀನಾಥನು ರಚಿಸಿದ "ಪಲ್ನಾಟಿ ವೀರುಲ ಕಥ", ಪೋತರಾಜು ಪೂಜೆಯನ್ನು ಕುರಿತು ತಿಳಿಸುತ್ತದೆ. ವಲ್ಲಭ ರಾಯುಡು ರಚಿಸಿದ ಕ್ರೀಡಾಭಿರಾಮಂನಲ್ಲಿ ಪಲ್ನಾಟಿ ವೀರರು, ವರಂಗಲ್ ಮೈಲಾರದೇವತ, ಇತರ ಮಾತೃದೇವತೆಗಳ ಆರಾಧನೆ ಕುರಿತು ವರ್ಣನೆಗಳಿವೆ.

ಗುಡಿ, ಚರ್ಚ್ ಮಸೀದಿಗಳಲ್ಲಿ ನಡೆಯುವ ಪೂಜಾ ವಿಧಾನಗಳಿಗಿಂತ ಜಾನಪದ ದೇವತೆಗಳ ಆರಾಧನೆ ಭಿನ್ನವಾಗಿರುತ್ತದೆಂದು ನೀವು ಈಗಾಗಲೇ ಗಮನಿಸಿರುತ್ತೀರಿ.

ಕುಲ, ಮತ, ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಈ ದೇವತೆಗಳನ್ನು ಜನರು ಪೂಜಿಸುತ್ತಾರೆ.ಉದಾಹರಣೆಗೆ ಮುಸ್ಲಿಂ ರೈತರು ಸಹ ಜಾನಪದ ದೇವತೆಗಳ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಅದೇ ರೀತಿ ಎಲ್ಲಾ ಮತಗಳ ಜನರು ದರ್ಗಾಗಳಿಗೆ ಹೋಗಿ ಸಾಧುಸಂತರ ಆಶೀರ್ವಾದ ಪಡೆಯುತ್ತಾರೆ. ಅವರು ದರ್ಗಾಗಳಿಗೆ ಹೋಗಿ ಭಕ್ತಿಯಿಂದ ಗಿಡಗಳಿಗೆ, ಗೋಡೆಗಳಿಗೆ ದಾರಕಟ್ಟಿ ತಮ್ಮ ಸಮಸ್ಯೆಗಳು ಪರಿಹಾರವಾದರೆ ಹರಿಕೆ ತೀರಿಸುತ್ತಾರೆ. ದರ್ಗಾಗಳಿಗೆ ಹೋಗಿ ದುಷ್ಟಶಕ್ತಿಗಳನ್ನು ಹೋಗಲಾಡಿಸಲು ತಾಯತ ಕಟ್ಟುವಂತೆ ದೇವರುಗಳನ್ನು ಪ್ರಾರ್ಥಿಸುತ್ತಾರೆ. ಜಾನಪದ ದೇವತೆಗಳು ಉನ್ನತ ಮತ ಸಂಪ್ರದಾಯದ ಮಿಶ್ರಣ.

ಭಾರತ ದೇಶದಲ್ಲಿ ವಿವಿಧ ರೀತಿಯ ಜನರು, ಅವರ ಮತಗಳ ಮಧ್ಯೆ ನಿರಂತರ ಸಂಬಂಧಗಳು ಇರುತ್ತಿದ್ದವು. ಇದರಿಂದಾಗಿ ವಿವಿಧ ಸಂಪ್ರದಾಯದ ಬೆರೆಯುವಿಕೆಯಾಗಿದೆ. ಆ ವಿಧವಾಗಿ ಜಾನಪದ ಪೂಜಾವಿಧಾನಗಳನ್ನು ಅವರ ಪರಿಜ್ಞಾನವು ಉನ್ನತ ಮತಗಳು ಆಚರಿಸುತ್ತವೆ. ಹಾಗೆ ಅತ್ಯುನ್ನತ ಮತಗಳಿಗೆ ಸೇರಿದ ನಂಬಿಕೆಗಳನ್ನು ಜಾನಪದಗಳು ಆಚರಿಸುತ್ತಿದ್ದಾರೆ.

ಈ ರೀತಿಯಾಗಿ ಉನ್ನತ ಮತ ಸಂಪ್ರದಾಯಸ್ಥರು ಕೂಡ ಅರಳಿ ಮರವನ್ನು, ನಾಗರಗಳನ್ನು ಮಾತೃ ದೇವತೆಗಳನ್ನು ಪೂಜಿಸುತ್ತಾರೆ. ನಾಗರಗಳು, ಪ್ರಾಣಿಗಳು, ಗಿಡ ಮರಗಳು, ಪಕ್ಷಿಗಳು, ಉನ್ನತ ಪೌರಾಣಿಕ ಮತಗಳಲ್ಲಿ ಸೇರಿವೆ. ನಿಧಾನವಾಗಿ, ಬುದ್ಧ, ಶಿವ, ವಿಷ್ಣುವಂತಹ ದೇವರುಗಳ ಪೂಜೆಯಲ್ಲಿ ಭಾಗವಾಗಿ ಗ್ರಾಮದೇವತೆಗಳನ್ನು ಕೂಡ ಪೂಜಿಸತೊಡಗಿದರು. ನಾಗರಗಳನ್ನು ಸಿಂಹಗಳನ್ನು, ನಂದಿಯನ್ನು, ಗಿಡಗಳನ್ನು ಸಹ ಪೂಜಿಸಲು ಪ್ರಾರಂಭಿಸಿದರು.

ಇಸ್ಲಾಂನಲ್ಲಿ ಇದು ಮತ್ತೊಂದು ರೂಪ ಧರಿಸಿದೆ. ಇಸ್ಲಾಂ ಉನ್ನತ ಮತ ಸಂಪ್ರದಾಯ ದೇವರೊಬ್ಬನೆ ಎನ್ನವುದು ಆತನೇ "ಅಲ್ಲಾ" ಎಂಬ ನಂಬಿಕೆ ಇದೆ. ಗ್ರಾಮೀಣ ಪ್ರಾಂತ್ಯದಲ್ಲಿನ ಕೆಲವು ಮುಸ್ಲಿಂ ಜನರು ದರ್ಗಾಗಳಲ್ಲಿ, ಸೂಫಿ ಸನ್ಯಾಸಿಗಳನ್ನು ವಿಶ್ವಾಸದಿಂದ ನೋಡುವುದು, ಆರಾಧಿಸುವುದನ್ನು ಪ್ರಾರಂಭಿಸದರು. ಹಾಗೆ ಮಾಡಿದರೆ ಅವರ ಸಮಸ್ಯೆಗಳು ಪರಿಹಾರ ವಾಗುತ್ತವೆನ್ನುವುದು ನಂಬಿಕೆ. ಇದರೊಂದಿಗೆ ಎಲ್ಲ ಮತಗಳ ಪ್ರಜೆಗಳು ಪಾಲ್ಗೊಳ್ಳುವ ದರ್ಗಾಗಳನ್ನು, ಉರ್ಸುಗಳಿಗೆ, ತೀರ್ಥಯಾತ್ರೆ ಎನ್ನುವ ಬಲವಾದ ಸಂಪ್ರದಾಯ ಏರ್ಪಾಡಾಯಿತು.

ಜಾನಪದ ಪರಿಜ್ಞಾನ, ಉನ್ನತ ಮತ :

ಸಾಮಾನ್ಯ ಪ್ರಜಾಗುಂಪಿನಿಂದ ಬಂದ ಕಬೀರ್, ಯೋಗಿವೇಮನ, ಅನೇಕಮಂದಿ ಸೂಫಿ ಸನ್ಯಾಸಿಗಳು ಆಳವಾದ ತಾತ್ವಿಕ ಮತ ಸಂಬಂಧ ಆಲೋಚನೆಗಳನ್ನು ಪ್ರತಿಪಾದಿಸಿದರು. ಇವರು ಸಹ ಉನ್ನತ ಮತಗಳು ಹೇಳಿದ ತಾತ್ವಿಕ ಆಲೋಚನೆಗಳನ್ನು, ಸಾಮಾನ್ಯ, ಜನರ

SCERT TELANGANA

ಆಲೋಚನಾ ವಿಧಾನಗಳೊಂದಿಗೆ ಸೇರಿಸಿದರು. ಇಂದಿಗೆ 300 ವರ್ಷಗಳ ಹಿಂದೆ ಇದ್ದ ತೆಲುಗಿನಲ್ಲಿ ಅತ್ಯಂತ ಬುದ್ಧಿವಂತಿಕೆಯಿಂದ ಕೂಡಿದ ಯೋಗಿವೇಮನ ಪದ್ಯಗಳು ಇವೆ. ಇವನ್ನು ಓದಿರಿ.

ಸ್ವಂತ ಅನುಭವವಿಲ್ಲದ, ಪವಿತ್ರ ವಾಕ್ಯಗಳನ್ನು ಕಂಠಸ್ಥ ಮಾಡುವುದರಿಂದ ಭಯ ದೂರವಾಗುದಿಲ್ಲ. ಹಾಗೆಯೇ ಚಿತ್ರಿಸಿದ ಜ್ವಾಲೆಯಿಂದ ಕತ್ತಲು ದೂರವಾಗುವುದಿಲ್ಲ.

"ಆರು ರುಚಿಗಳು ಬೇರೆ ಬೇರೆ ಆದರೆ ರುಚಿ ಒಂದೇ, ಸತ್ಯವನ್ನು ತಿಳಿಸುವ ಸಂಪ್ರದಾಯಗಳು ಅನೇಕ ಆದರೆ ಸತ್ಯ ಒಂದೇ, ಸನ್ಯಾಸಿಗಳು ಅವರಷ್ಟಕ್ಕೆ ಅವರು ವಿಭೇದಿಸುತ್ತಾರೆ. ಆದರೆ ಅವರು ಯಾರಿಗಾಗಿ ಧ್ಯಾನ ಮಾಡುತ್ತಾರೋ ಆತನು ಒಬ್ಬನೇ".

"ಬೋಳುತಲೆ, ಜುಟ್ಟುಕಟ್ಟಿದ ಕೂದಲು, ಬೂದಿ ಹಚ್ಚಿಕೊಳ್ಳುವುದು, ಮನನ ಮಾಡಿಕೊಳ್ಳುವುದು ಮತಪರವಾದ ವಸ್ತ್ರಗಳನ್ನು ಧರಿಸಿದರೆ ಮಾತ್ರ ಸರಿಹೋಗುವುದು. ಪವಿತ್ರವಾದ ಹೃದಯ ಇಲ್ಲದವರು ಸನ್ಯಾಸಿಗಳಾಗಲಾರರು" ಇಂತಹ ಭಾವನೆಗಳು, ಭೋಧನೆಗಳು ಸಾಧಾರಣಾ ಪ್ರಜೆಗಳ ಆಲೋಚನೆಗಳಲ್ಲಿ ಭಾಗವಾಗಿವೆ.

ಮುಖ್ಯ ಪದಗಳು:

1. ಜಾನಪದ ದೇವತೆಗಳು 2. ಜಾತ್ರೆ
3. ಉರ್ಸು 4. ಪೀರಿ 5. ಬೋನಂ

ನಿಮ್ಮ ಕಲಿಕೆಯ ಮಟ್ಟವನ್ನು ವೃದ್ಧಿಸಿಕೊಳ್ಳಿ

1) ಗ್ರಾಮದೇವತೆಗಳನ್ನು ಪೂಜಿಸುವುದರಲ್ಲಿ ಸರ್ವಸಾಧಾರಣವಾಗಿ ಕಾಣಿಸುವ ಅಂಶಗಳು ಯಾವುವು?

2) ಜನರು ಗ್ರಾಮಗಳಿಂದ ಪಟ್ಟಣಗಳಿಗೆ ಹೋಗಿ ನೆಲೆಸುವುದರಿಂದ ಗ್ರಾಮದೇವತೆಗಳನ್ನು ಪೂಜಿಸುವುದನ್ನು ಮುಂದುವರೆಸುತ್ತಿದ್ದೀರಾ ? ಹೇಗೆ ಮುಂದುವರಿಸುತ್ತೀರಿ ?

3) ಗ್ರಾಮ ದೇವತೆಗಳನ್ನು ಪೂಜಿಸುವ ವಿಧಾನದಲ್ಲಿ ಬದಲಾವಣೆಗಳಾಗುತ್ತಿವೆ ಎಂದು ನೀವು ಭಾವಿಸುತ್ತೀರಾ? ನೀವು ಎಂತಹ ಬದಲಾವಣೆಗಳನ್ನು ನೋಡುತ್ತಿದ್ದೀರಿ?

4) ಆಂಧ್ರಪ್ರದೇಶ್ ನಕ್ಷೆಯಲ್ಲಿ ಪ್ರಧಾನ ಜಾತ್ರೆಗಳು, ಉರುಸುಗಳು, ಉತ್ಸವಗಳು ನಡೆಯುವ ಪ್ರದೇಶಗಳನ್ನು ಗುರ್ತಿಸಿರಿ.

5) 194ನೇ ಪುಟದಲ್ಲಿನ ಮೂರನೇ ಪ್ಯಾರವನ್ನು ಓದಿ, ವ್ಯಾಖ್ಯಾನಿಸಿರಿ.

6) ನಿಮ್ಮ ಪ್ರಾಂತದಲ್ಲಿನ ವಾಸಿಸುವ ವಿವಿಧ ಮತಗಳಿಗೆ ಸೇರಿದವರನ್ನು ಬೇಟಿ ಮಾಡಿ, ಕೆಳಗಿನ ವಿವರಗಳನ್ನು ಸಂಗ್ರಹಿಸಿರಿ.

ಪ್ರಾಜೆಕ್ಟ್ ಕೆಲಸ:

ಕ್ರ.ಸಂ	ಹೆಸರು	ಆಚರಿಸುವ ಮತ	ಪೂಜಿಸುವ ದೇವರು	ಆಚರಿಸುವ ಹಬ್ಬಗಳು

1) ನಿಮ್ಮ ಪ್ರಾಂತದಲ್ಲಿನ ಯಾವುದಾದರೂ ಒಂದು ಜಾತ್ರೆ ಕುರಿತು ನಿಮ್ಮ ತಾತ, ಅಜ್ಜಿಯಿಂದ ಸಮಾಚಾರ ಶೇಖರಿಸಿರಿ. ಒಂದು ವರದಿ ತಯಾರಿಸಿ.

2) ನಿಮ್ಮ ಪ್ರಾಂತಕ್ಕೆ ಸೇರಿದ ಜಾನಪದ ದೇವತೆಗಳ ಕುರಿತು ಕಥೆಗಳನ್ನು ಸಂಗ್ರಹಿಸಿರಿ. ಅವುಗಳ ಕುರಿತು ಚಿಕ್ಕ ಪುಸ್ತಕ ತಯಾರಿಸಿರಿ.

SCERT TELANGANA

ಪಾಠ 21

ದೈವಸಂಬಂಧ – ಭಕ್ತಿ ಮಾರ್ಗಗಳು

ದೇವತಾರಾಧನೆಯ ಅಂಗವಾಗಿ ಪೂಜಾ ಕೈಂಕರ್ಯಗಳನ್ನುಮಾಡುವುದು, ಭಜನೆ ಕೀರ್ತನೆಗಳನ್ನು ಖವ್ವಾಲಿಗಳನ್ನು ಹಾಡುವುದು ನೀವು ನೋಡಿಯೇ ಇರುತ್ತೀರಿ. ಕೆಲವರು ಭಕ್ತರು ಮೌನವಾಗಿ ದೇವರ ನಾಮವನ್ನು ಜಪಿಸುತ್ತಾ ಇರುವುದು, ಕೆಲವರು ಭಕ್ತಿ ಭಾವಾವೇಶದಲ್ಲಿ ಮುಳುಗಿ ಕಣ್ಣೀರು ಸುರಿಸುವುದು ಸಹ ನೋಡಿಯೇ ಇರುತ್ತೀರಿ. ಇಷ್ಟು ಗಾಢವಾದ ಭಕ್ತಿ ಭಾವನೆ ಅಥವಾ ದೇವರ ಮೇಲಿನ ಪ್ರೀತಿ, ಎಂಟನೇ ಶತಮಾನದಿಂದಲೂ ರೂಪಿಸಲ್ಪಟ್ಟ ವಿವಿಧ ರೀತಿಯ ಭಕ್ತಿ ಮತ್ತು ಸೂಫಿ ಚಳುವಳಿಗಳ ವಾರಸತ್ವವೇ. ಆರನೇ ತರಗತಿಯಲ್ಲಿ ವಿಷ್ಣು ಭಕ್ತಿಪರವಾದ, ಶಿವಭಕ್ತಿ ಪರವಾದ ಕೀರ್ತನೆಗಳನ್ನು ಕುರಿತು ನೀವು ಓದಿದ್ದೀರಿ. ರಾಜರು, ಸಾಮಂತರು ದೇವಾಲಯಗಳನ್ನು ನಿರ್ಮಿಸಿಲಾರಂಭಿಸಿದರು. ಅವುಗಳ ಏಳಿಗೆಗಾಗಿ ಭೂಮಿಗಳೂ, ಇತರೆ ಬಹುಮಾನಗಳನ್ನು ದಾನಕೊಟ್ಟರು. ದೇವಾಲಯಗಳಲ್ಲಿ ಪೂಜಾದಿಗಳು ಖರ್ಚಿನಿಂದ ಕೂಡಿದ್ದು ಸಂಕ್ಲಿಷ್ಟವಾಗಿ ಬದಲಾಗಿದೆ. ಶಿಕ್ಷಣ ಪಡೆದ ಪೂಜಾರಿಗಳು ಮಾತ್ರವೇ ವಿಗ್ರಹಗಳಿಗೆ ಪೂಜೆಗಳು ಮಾಡುವರು. ಕೆಲವು ಜಾತಿಯವರನ್ನು ದೇವಾಲಯಗಳಿಗೆ ಒಳ ಪ್ರವೇಶಿಸಲು ಅನುಮತಿಸುತ್ತಿರಲಿಲ್ಲ. ಈ ಸಂಪ್ರದಾಯಗಳ ಬಗ್ಗೆ ಅಸಮಾನತೆಗಳ ಬಗ್ಗೆ ವ್ಯತಿರೇಕತೆ (ವಿರೋಧ) ಆರಂಭವಾಯಿತು. ಭಗವಂತನ ಮೇಲೆ ಭಕ್ತಿ ಭಾವನೆಯಲ್ಲಿ ಹೊಸ ಹೊಸ ಆಲೋಚನೆಗಳು ಬಂದವು. ಇದನ್ನು ತಿಳಿದುಕೊಳ್ಳಲು ಈ ಪಾಠವನ್ನು ಓದಿರಿ.

ತಾತ್ವಿಕತೆ–ಭಕ್ತಿ:

ಅತ್ಯಂತ ಪ್ರಭಾವಿತವಾದ ಭಾರತೀಯ ತತ್ವಜ್ಞವೇತ್ತರಲ್ಲಿ ಒಬ್ಬರಾದ ಶಂಕರಾಚಾರ್ಯರು ಕ್ರಿ.ಶ. ಎಂಟನೇ ಶತಮಾನದಲ್ಲಿ ಕೇರಳದಲ್ಲಿ ಜನ್ಮಸಿದರು. ಈತನು ಅದ್ವೈತ ಸಿದ್ಧಾಂತವನ್ನು ಭೋಧಿಸಿದನು. ಜೀವಾತ್ಮ, ಪರಮಾತ್ಮ ಒಂದೇ ಎಂದು, ಅದೇ ಪರಮ ಸತ್ಯವೆಂದು ಪ್ರವಚಿಸಿದರು. (ಭೋಧಿಸಿದರು) ಬ್ರಹ್ಮ ಮಾತ್ರವೇ ಈ ಲೋಕದಲ್ಲಿ ಪರಮ ಸತ್ಯವೆಂದು ಭೋಧಿಸಿದನು. ಈ ಪರಮ ಸತ್ಯಕ್ಕೆ ರೂಪವಿಲ್ಲವೆಂದೂ, ಇದಕ್ಕೆ ಮತ್ಯಾವುದನ್ನು ಆಪಾದಿಸಲಾಗದೆಂದು ಆತನು ಬೋಧಿಸಿದ್ದಾರೆ. ಪ್ರಾಪಂಚಿಕ ಸುಖಗಳನ್ನು ತ್ಯಜಿಸಬೇಕೆಂದು, ಬ್ರಹ್ಮನ ನಿಜಸ್ವರೂಪವನ್ನು ತಿಳಿದುಕೊಳ್ಳಲು, ಮುಕ್ತಿಯನ್ನು ಪಡೆಯಲು ಜ್ಞಾನಮಾರ್ಗವನ್ನು ಅನುಸರಿಸುವುದೇ ಸೂಕ್ತ ಮಾರ್ಗವೆಂದು ಬೋಧಿಸಿದರು.

ಹನ್ನೊಂದನೇ ಶತಮಾನದಲ್ಲಿ ದಕ್ಷಿಣ ದೇಶದಲ್ಲಿ ಹುಟ್ಟಿದ ರಾಮನುಜರ ಮೇಲೆ ಆಳ್ವಾರರು ಪ್ರಭಾವ ಬಲವಾಗಿಬಿದ್ದಿತು. ಮುಕ್ತಿಗಾಗಿ ವಿಷ್ಣುವಿನ ಮೇಲೆ ಬಲವಾದ ಭಕ್ತಿ ಉತ್ತಮ ಸಾಧನವೆಂದು ಆತನು ನಂಬಿದ್ದನು. ವಿಷ್ಣುದಯೆ ತೋರಿ, ತನ್ನೊಡನೆ ಸಾಯುಜ್ಯಾನಂದವನ್ನು ಹೊಂದಲು ಭಕ್ತನಿಗೆ ಸಹಾಯ ಮಾಡುತ್ತಾನೆ. ರಾಮನುಜರು ಸಹ ಹೆಚ್ಚಿನವರೆಗೆ, ಕೀಳು ಜಾತಿಯವರಿಗೆ ದೇವಾಲಯಗಳಲ್ಲಿ ಪೂಜಿಸಲು ಅವಕಾಶ ಕಲ್ಪಿಸಿದ್ದಾರೆ. ಈತನು ಪ್ರವಚಿಸಿದ ತತ್ವ ವಿಶಿಷ್ಠಾದ್ವೈತ ಸಿದ್ಧಾಂತ. ಜೀವಾತ್ಮ ಪರಮಾತ್ಮನಲ್ಲಿ ಕಲೆತರೂ ಅದಕ್ಕೊಂದು ಪ್ರತ್ಯೇಕತೆ ಇರುತ್ತದೆಂದು ಈ ಸಿದ್ಧಾಂತವು ಹೇಳುತ್ತದೆ. ಮುಖ್ಯವಾಗಿ ಉತ್ತರ ಭಾರತ ದೇಶದಲ್ಲಿ ಹೊಸ ಭಕ್ತಿ ಚಳುವಳಿಯ ಸೃಷ್ಟಿಗೆ, ರಾಮಾನುಜರ ಸಿದ್ಧಾಂತ ಹೆಚ್ಚು ಪ್ರೇರಣೆ ನೀಡಿದೆ.

ಬಸವಣ್ಣ–ವೀರಶೈವ:

ಭಕ್ತಿ ಚಳುವಳಿಗೂ ದೇವಾಲಯಗಳಲ್ಲಿ ಅರ್ಚನೆಗೂ ಈ ನಡುವಿರುವ ಸಂಬಂಧವನ್ನು ಕುರಿತು ಈ ಮೊದಲೇ ತಿಳಿದುಕೊಂಡಿದ್ದೇವೆ. ಈಗ ನಾವು ವೀರಶೈವ ಎನ್ನುವ ಮತ್ತೊಂದು ಭಕ್ತಿ ಚಳುವಳಿಯನ್ನು ನೋಡೋಣ. ಇದನ್ನು ಪ್ರಾರಂಭಿಸಿದವರು ಬಸವಣ್ಣ, ಆತನ ಅನುಯಾಯಿಗಳು ಅಲ್ಲಮ ಪ್ರಭು, ಅಕ್ಕಮಹಾದೇವಿ. ಈ ಚಳುವಳಿ 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಪ್ರಾರಂಭಿವಾಯಿತು. ಅವರು ಕುಲ, ಸ್ತ್ರೀಯರ ಬಗ್ಗೆ ನಮ್ಮ ವರ್ತನೆಯ ರೀತಿಯನ್ನು ಕುರಿತು ಮಾನವರೆಲ್ಲರ ಬಗ್ಗೆ ಸಮಾನತೆಯ ಭಾವನೆಯನ್ನು ಕುರಿತು ಬಲವಾಗಿ ಪ್ರತಿಪಾದಿಸಿದರು.

© SCERT TELANGANA

ಬಸವಣ್ಣನವರು ಹೇಳಿದ ಕೆಲವು ವಚನಗಳು ಹೀಗಿವೆ.

ಉಳ್ಳವರು
ಶಿವಾಲಯವ ಮಾಡುವರು
ಬಡವನಯ್ಯಾ
ನಾನೇನು ಮಾಡಲಿ
ಎನ್ನ ಕಾಲೇ ಕಂಭ
ದೇಹವೇ ದೇಗುಲ ಶಿರವೇ
ಹೊನ್ನಿನ ಕಳಸವಯ್ಯ
ಕೂಡಲ ಸಂಗಮದೇವಾ.
ಆಲಯಗಳು ಅಳಿದರೂ ಜಂಗಮತ್ವ
ಎಂದೆಂದಿಗೂ ಸ್ಥಿರವಾಗಿರುತ್ತದೆ.

- ಬಸವಣ್ಣನವರು ವ್ಯಕ್ತಪಡಿಸಿದ ಭಾವನೆಗಳು ಯಾವುವು?
- ಬಸವಣ್ಣನವರ ಆರಾಧ್ಯ ದೈವ ಯಾವುದು?

ಮಹಾರಾಷ್ಟ್ರ ಭಕ್ತಸಾಧುಗಳು:

13ನೇ ಶತಮಾನದಿಂದ 17ನೇ ಶತಮಾನದ ವರೆಗೂ ಮಹಾರಾಷ್ಟ್ರದಲ್ಲಿ ಅನೇಕ ಮಂದಿ ಭಕ್ತಕವಿಗಳು ಆವಿರ್ಭವಿಸಿದ್ದಾರೆ. ಸರಳವಾದ ಮರಾಠಿ ಭಾಷೆಯಲ್ಲಿ ಅವರು ಬರೆದ ಹಾಡುಗಳು ಪ್ರಜೆಗಳನ್ನು ಪ್ರಭಾವಿತ ಗೊಳಿಸಿವೆ. ಮಹಾರಾಷ್ಟ್ರ ಭಕ್ತಕವಿಗಳಲ್ಲಿ ಮುಖ್ಯರು ಜ್ಞಾನೇಶ್ವರ್, ನಾಮದೇವ್, ಏಕನಾಥ್, ತುಕಾರಾಂ ಮಾತ್ರವಲ್ಲದೆ ಸಕ್ಕೂಬಾಯಿಯಂತಹ ಭಕ್ತಳು, "ಅಸ್ಪೃಶ್ಯ" ಮಹರ್‌ನಾದ ಚೋಖಾಮೇಳನ ಕುಟುಂಬದವರು ಸಹ ಪ್ರಸಿದ್ಧರು. ಈ ಭಕ್ತಿ ಸಂಪ್ರದಾಯ ಪಂಡರೀಪುರ ಆಲಯದಲ್ಲಿನ ವಿಠಲನ (ಮತ್ತೊಂದು ರೂಪದಲ್ಲಿರುವ ವಿಷ್ಣು) ಮೇಲೆ ಮಾತ್ರವೇ ಅಲ್ಲದೇ ಸಮಸ್ತ ಜನರ ಹೃದಯಲ್ಲಿ ನಿವಾಸಿಸುವ ಇಷ್ಟದೇವರ ಮೇಲೆಯೂ ಸಹ ದೃಷ್ಟಿಯನ್ನು ಕೇಂದ್ರೀಕರಿಸುವಂತೆ ಮಾಡಿದೆ.

ಎಲ್ಲಾರೀತಿಯ ಕರ್ಮಗಳನ್ನು ಧರ್ಮನಿಷ್ಠ ಕರ್ತವ್ಯಗಳನ್ನು, ಬಾಹ್ಯ ಪ್ರದರ್ಶನವನ್ನು, ಹುಟ್ಟಿನಿಂದಲೇ ಆಧಾರಪಟ್ಟ ಸಾಮಾಜಿಕ ಭಿನ್ನತೆಗಳನ್ನು ಈ ಭಕ್ತರು ತಿರಸ್ಕರಿಸಿದರು. ನಿಜಕ್ಕೆ ಅವರು ಸನ್ಯಾಸತ್ವವನ್ನು ಸಹ ತಿರಸ್ಕರಿಸಿ ಕುಟುಂಬಜೀವನ ಸಾಗಿಸುತ್ತ ಇತರ ವ್ಯಕ್ತಿಗಳ ಮಾದರಿಯಂತೆ, ಬದುಕಲು ಬೇಕಾದವುಗಳನ್ನು ಸಂಪಾದಿಸಿಕೊಳ್ಳುತ್ತಾ, ಅವಶ್ಯಕತೆ ಇರುವ ಸಹಚರರಿಗೆ ವಿನಂಬ್ರದಿಂದ ಸೇವೆ ಮಾಡುತ್ತಾ ಇರುವುದೇ ಉತ್ತಮವೆಂದು ತಿಳಿದಿದ್ದರು. ಇತರರ ಕಷ್ಟಗಳನ್ನು ಹಂಚಿಕೊಳ್ಳುವುದರಲ್ಲಿ ಭಕ್ತಿ ಇರುವುದೆಂದೂ ಅವರು ಒತ್ತಿಹೇಳುವುದರಿಂದ ಒಂದು ಹೊಸ ಮಾನವತ್ವ ಭಾವನೆ ಹೊರಬಂದಿದೆ. ಪ್ರಖ್ಯಾತ ಗುಜರಾತ್ ಭಕ್ತ ನರ್ಸೀಮೆಹ್ತಾ "ಇತರರ ಕಷ್ಟವನ್ನು ಅರ್ಥಮಾಡಿಕೊಳ್ಳುವವರೇ ವೈಷ್ಣವರು" ಎಂದಿದ್ದಾರೆ.

ಸಂತ ತುಕಾರಾಂ ರಚಿಸಿದ ಒಂದು "ಅಭಂಗ"ನಲ್ಲಿನ (ಒಂದು ರೀತಿಯ ಮರಾಠಿ ಭಕ್ತಿಗೀತೆ) ಭಾವವು ಈ ಕೆಳಗಿನಂತಿರುತ್ತದೆ.

ಹೆಚ್ಚಾಗಿ ಅಸಹಿಸಲ್ಪಟ್ಟವನು
ಏಟುಗಳು ತಿಂದವನನ್ನು ನೋಡಿ,
ಕಟುವಾಗಿ ಟೀಕಿಸಲ್ಪಟ್ಟವನನ್ನು ನೋಡಿ,
ತಾನೇ ಆತನೆಂದು ಊಹಿಸಿಕೊಂಡು ಆ ತೊಂದರೆಯನ್ನು
ಅನುಭವಿಸಿದಂತೆ ತಿಳಿಯುವವನನ್ನು,
ಗುರ್ತಿಸಿಕೋ. ಆತನು ಸಾಧುವೆಂದೂ ತಿಳಿ.
ಆತನಿಗೆ ದೇವರು ಜೊತೆಯಾಗಿರುತ್ತಾನೆ.
ಜನರು ತಿರಸ್ಕರಿಸಿದ ಪ್ರತಿವ್ಯಕ್ತಿಯನ್ನು ತನ್ನೆಡೆಗೆ ಆತನು ಸೇರಿಸಿಕೊಳ್ಳುತ್ತಾನೆ. ಸೇವಕರೆನ್ನುವ ಪ್ರತಿಯೊಬ್ಬರನ್ನು ತನ್ನ ಮಗನಂತೆ ನೋಡಿಕೊಳ್ಳುತ್ತೇನೆ.
ಸಂತತುಕಾರಾಂ ಇನ್ನು ಏನೆನ್ನುತಾನೆಂದರೆ,
ಇಂತಹ ವ್ಯಕ್ತಿಯನ್ನು ಮಾನವ ರೂಪದರಿಸಿದ ದೇವರೆಂದು ಎಷ್ಟುಬಾರಿಯಾದರು ಹೇಳಲು ನಾನು ಆಯಾಸ ಬೀಳಲಾರೆ.

ಬಡಜನರು, ಸಂತಪ್ತರು, ಸ್ನೇಹಿತರನ್ನೇ ನಿಜವಾದ ಭಕ್ತರಾಗಿ ತುಕಾರಾಂ ಏಕೆ ಭಾವಿಸುತ್ತಾರೆ?

ಚೋಖಾಮೇಳನ ಮಗನು ರಚಿಸಿದ ಅಭಂಗದಲ್ಲಿನ ಭಾವವು ಈ ಕೆಳಗಿನ ರೀತಿಯಲ್ಲಿದೆ.

ನಮ್ಮನ್ನು ನೀಚಜಾತಿಯವನನ್ನಾಗಿ ಮಾಡಿದ್ದು ನೀನು,
ಈ ಸತ್ಯಾಂಶದ ಎದುರಿಗೆ ಏಕೆ ನಿಲ್ಲುವುದಿಲ್ಲ.

SCERT TELANGANA



ಚಿತ್ರ – 21.1 ಎ

ಮಹಾಪ್ರಭು!

ಭುಕ್ತಶೇಷಾನ್ನವನು ತಿನ್ನುವುದಲ್ಲವೇ ನಮ್ಮ ಜೀವನವೆಲ್ಲಾ !

ನೀನು ಇದಕ್ಕೆ ನಾಚಬೇಕು.

ನಮ್ಮ ಮನೆಯಲ್ಲಿ ತಿಂದಯಲ್ಲಾ,

ಅದನ್ನು ಹೇಗೆ ಇಲ್ಲವೆಂದೆನೆವೆ ನೀನು ?

ನನಗೆಕೆ ನೀಡಿರುವೆ ಈ ಜನ್ಮವನ್ನು ?

ಕೇಳುತ್ತಿದ್ದಾನೆ, ಚೋಖಾ (ಮಗ) ಕರ್ಮವೇಲನು.

◆ ಈ ಅಭಂಗದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ವ್ಯಕ್ತಪಡಿಸಿದ ಭಾವನೆಗಳನ್ನು ಚರ್ಚಿಸಿರಿ.

ನಾಥಪಂಥಿಗಳು, ಸಿದ್ಧರೂ, ಯೋಗಿಗಳು:

ಆಚಾರಕ್ಕೆ ಅನುಗುಣವಾಗಿ ಬರುತ್ತಿರುವ ಕೆಲವು ಮತಪದ್ಧತಿಗಳನ್ನು ಸಾಮಾಜಿಕ ವ್ಯವಸ್ಥೆಯನ್ನು ಈ ಕಾಲದಲ್ಲಿ ಏರ್ಪಟ್ಟ ಗುಂಪುಗಳು ಕೆಲವರು ಸರಳವಾದ ತಾರ್ಕಿಕ ವಾದಗಳೊಂದಿಗೆ ವಿಮರ್ಶಿಸಲು ಪ್ರಾರಂಭಿಸಿದರು. ಅವರಲ್ಲಿ ನಾಥಪಂಥಿಯರು, ಸಿದ್ಧಾಚಾರರು, ಯೋಗಿಗಳು ಇದ್ದರು. ಅವರು ಪ್ರಪಂಚವನ್ನು ಬಿಡುವುದಿಲ್ಲವೆಂದು ಹೇಳುತ್ತಾರೆ.

ನಿರಾಕಾರ ಪರಮ ಸತ್ಯವನ್ನು, ಧ್ಯಾನಿಸುವುದರಲ್ಲೂ, ಅದರೊಂದಿಗೆ ಐಕ್ಯವಾಗುವುದರಲ್ಲೂ ಮುಕ್ತಿಗೆ ಮಾರ್ಗವಿದೆಯೆಂದು ಹೇಳುತ್ತಾರೆ. ಇದನ್ನು ಸಾಧಿಸಲು ಯೋಗಾಸನಗಳು, ಪ್ರಾಣಾಯಾಮ, ಧ್ಯಾನ ಮುಂತಾದ ಸಾಧನೆಗಳನ್ನು ಮಾಡುತ್ತಾ ಬೌದ್ಧಿಕ ಅಂಶಗಳ ಮೇಲೆ ಅಗಾಧವಾದ ಶಿಕ್ಷಣ ಹೊಂದಬೇಕೆಂದು ಭೋಧಿಸಿದ್ದಾರೆ. ಈ ಬೃಂದಗಳವರ ಭೋಧನೆಗಳು ಮುಖ್ಯವಾಗಿ "ನಿಮ್ನ" ಜಾತಿಯವರಲ್ಲಿ ವ್ಯಾಪಿಸಿತು. ಆಚಾರಾನುಗತವಾದ ಮತವನ್ನು ಕುರಿತು ಇವರು ಮಾಡಿದ ವಿಮರ್ಶೆ, ಉತ್ತರ ಭಾರತ ದೇಶದಲ್ಲಿ ಭಕ್ತಿಪರವಾದ ಮತವು ಪ್ರಭಲಿಸಲು ದಾರಿಯಾಯಿತು.

ಇಸ್ಲಾಂ–ಸೂಫಿ ತತ್ವ:

ಭಕ್ತ ಸಾಧುಗಳಿಗೂ ಸೂಫಿಗಳಿಗೂ ನಡುವೆ ಸಾರೂಪ್ಯತೆ ತುಂಬಾ ವಿಷಯಗಳು ಒಂದೇ ತರಹದಲ್ಲಿ ಇದ್ದವು. ಆದ್ದರಿಂದ ಒಬ್ಬರ ಭಾವನೆಯನ್ನು ಒಬ್ಬರು ಭಾವನೆಕೊಟ್ಟು ಪಡೆದಿದ್ದಾರೆ. ಸೂಫಿಗಳು ಮುಸ್ಲಿಂ ಮಾರ್ಮಿಕ ಸಾಧುಗಳು. ಅವರು ಬಾಹ್ಯವಾದ ಮತನಿಷ್ಠೆಯನ್ನು ವಿರೋಧಿಸಿದ್ದಾರೆ. ದೇವರ ಮೇಲೆ ಪ್ರೀತಿ, ಭಕ್ತಿ ಮತ್ತು ಸಮಸ್ತ ಮಾನವರ ಮೇಲೆ ದಯೆ, ಕರುಣೆ ಇರಬೇಕೆಂದು ಒತ್ತಿ ಹೇಳುತ್ತಾರೆ.

ಏಕೇಶ್ವರೋಪಾಸಾನೆಯನ್ನು ಖಂಡಿತವಾಗಿ ತಪ್ಪದೇ ಪಾಲಿಸಬೇಕೆಂದೂ, ಅಂದರೆ ಒಬ್ಬನೇ ದೇವರಿಗೆ ವಿಧೇಯರಾಗಿರಬೇಕೆಂದು ಇಸ್ಲಾಂ ಭೋಧಿಸಿದೆ. ವಿಗ್ರಹಾರಾಧನೆಯನ್ನು ತಿರಸ್ಕರಿಸಿದೆ. ಆರಾಧನಾಪರವಾದ ಕರ್ಮಗಳನ್ನು ತುಂಬಾ ಸರಳೀಕರಿಸಿ ಸಾಮೂಹಿಕ ಪ್ರಾರ್ಥನೆಗಳನ್ನು ವಿಧಿಸಿದೆ. ಅದೇ ಸಮಯದಲ್ಲಿ ಮುಸ್ಲಿಂ ಪಂಡಿತರು "ಷರಿಯತ್" ಎನ್ನುವ ಪವಿತ್ರ ನ್ಯಾಯವನ್ನು ರೂಪಿಸಿದ್ದರೆ. ಮುಸ್ಲಿಂ ಮತ ಪಂಡಿತರು ವಿಧಿಸಿದ ವಿಸ್ತೃತ ಕರ್ಮಗಳನ್ನು ಪ್ರವರ್ತನಾ ನಿಯಮಾವಳಿಗಳನ್ನು ಸೂಫಿಗಳು ಆಗಾಗ್ಗೆ ತಿರಸ್ಕರಿಸುತ್ತಾ ಬಂದಿದ್ದಾರೆ. ಪ್ರಪಂಚವನ್ನು ಮರೆತುಹೋಗಿ, ಪ್ರಿಯಕರ ತನ್ನ ಪ್ರಿಯತಮೆಗಾಗಿ ಪರಿತಪಿಸುವಂತೆ ಅವರು ದೇವರಲ್ಲಿ ಐಕ್ಯವನ್ನು ಕೋರಿದ್ದಾರೆ. ಭಕ್ತ ಕವಿಗಳಂತೆಯೇ ಸೂಫಿಗಳು ಸಹ ತಮ್ಮ ಅನುಭೂತಿಳನ್ನು ವ್ಯಕ್ತಪಡಿಸುತ್ತಾ ಕವಿತೆಗಳನ್ನು ಬರೆದಿದ್ದಾರೆ. ವಿವಿಧ ಸಂಘಟನೆಗಳೊಂದಿಗೆ, ನೀತಿ ಕಥೆಗಳಿಂದ ಸಂಪತ್ ಭರಿತವಾದ ವಚನ ಸಾಹಿತ್ಯ ಅಭಿವೃದ್ಧಿ ಹೊಂದಿದೆ. ಘಜಿಲಿ, ರೂಮೀ, ಸಾಧಿ ಮಧ್ಯ ಏಷಿಯಾ ಪ್ರಾಂತದ ಪ್ರಸಿದ್ಧ ಸೂಫಿಗಳು, ನಾಥಪಂಥೀಯರು, ಸಿದ್ದರು, ಯೋಗಿಗಳ ರೀತಿಯಲ್ಲೇ

SCERT TELANGANA



ಚಿತ್ರ – 21.2 ಪರಮಾನಂದದಲ್ಲಿ ಮಾರ್ಮಿಕ ಸಾಧುಗಳು

ಸೂಫಿಗಳು ಸಹ, ಪ್ರಪಂಚವನ್ನು ಬೇರೆ ರೀತಿಯಲ್ಲಿ ನೋಡಲು ಹೃದಯಕ್ಕೆ ಶಿಕ್ಷಣ ನೀಡಬಹುದೆಂದು ವಿಶ್ವಾಸಿದ್ದಾರೆ. ಈ ಶಿಕ್ಷಣಕ್ಕೆ ಅವರು ಜಿಕ್ರ (ಒಂದು ನಾಮವನ್ನಾಗಲೀ ಸೂತ್ರವನ್ನಾಗಲೀ ಜಪಿಸುವುದು) ಸಾಮ (ಹಾಡುವುದು) ರಕ್ಸ್ (ನೃತ್ಯ ಮಾಡುವುದು), ನೀತಿ ಕಥೆಗಳನ್ನು ಚರ್ಚಿಸುವುದು, ಪ್ರಾಣಾಯಾಮ ಮುಂತಾದವು ಗಳನ್ನು ಒಬ್ಬ ಗುರುವು ಇಲ್ಲವೇ ಪೀರ್ ಮಾರ್ಗದರ್ಶನದಲ್ಲಿ ಸಾಧನೆ ಮಾಡುವ ಸವಿವರವಾದ ವಿಧಾನಗಳನ್ನು ರೂಪಿಸಿದ್ದಾರೆ. ಈ ವಿಧವಾಗಿ ಸೂಫಿ ಗುರುಗಳ ಪರಂಪರೆ (ಸಿಲ್ ಸಿಲಾ) ಏರ್ಪಟ್ಟಿದೆ. ಅವರಲ್ಲಿ ಒಬ್ಬೊಬ್ಬರು ಭೋಧನೆಗಳನ್ನು ಸಾಧನಪರವಾದ ಕರ್ಮಗಳನ್ನು ಸ್ವಲ್ಪ ಸ್ವಲ್ಪ ವಿಭಿನ್ನವಾದ ಪದ್ದತಿಯನ್ನು (ತರೀಕವನ್ನು) ಪಾಲಿಸುತ್ತಾ ಬಂದಿದ್ದಾರೆ.

ಹನ್ನೊಂದನೆ ಶತಮಾನ ಮೊದಲ್ಗೊಂಡು ಮಧ್ಯ ಏಷಿಯಾದಿಂದ ಬಂದ ಸೂಫಿಗಳು ಅನೇಕರು ಹಿಂದೂಸ್ಥಾನದಲ್ಲಿ ಸ್ಥಿರಪಟ್ಟಿದ್ದಾರೆ. ಡಿಲ್ಲಿ ಸುಲ್ತಾನರ ಪಾಲನೆ ಪ್ರಾರಂಭಿಸಿದ ನಂತರ, ಭಾರತ ಉಪಖಂಡವೆಲ್ಲಾ ಅನೇಕ ಸೂಫಿ ಪ್ರಧಾನ ಕೇಂದ್ರಗಳು ಏರ್ಪಟ್ಟು ಈ ಪ್ರಕ್ರಿಯೆಯು ಬಲಪಟ್ಟಿದೆ. ಅತ್ಯಂತ ಪ್ರಭಾವವಂತನಾದ ವ್ಯವಸ್ಥೆಯಲ್ಲಿ ಚಿಷ್ಟೀ ಪರಂಪರೆಯೊಂದು. ಇದರಲ್ಲಿ ಭೋಧಕರು ಅನೇಕರು ಬಂದಿದ್ದಾರೆ. ಅವರಲ್ಲಿ ಅಜ್ಮೀರಿನಲ್ಲಿನ ಖ್ವಾಜಾ ಮೊಹಿನುದ್ದೀನ್ ಚಿಷ್ಟೀ, ಡಿಲ್ಲಿಯಲ್ಲಿ ಕುತ್ಬುದ್ದೀನ್ ಬಕ್ತಿಯಾರ್ ಕಾಕೀ, ಪಂಜಾಬಿನ ಬಾಬಾ ಫರೀದ್, ಡಿಲ್ಲಿಯಲ್ಲಿ ಖ್ವಾಜಾ ನಿಜಾಮುದ್ದೀನ್ ಔಲಿಯಾ, ಗುಲ್ಬರ್ಗಾ ದಲ್ಲಿನ ಬಂದನವಾಜ್ ಗಿಸುದರಾಜ್ ಮುಖ್ಯರು.

ಸೂಫಿ ಗುರುಗಳು ತಮ್ಮ ಧರ್ಮ ಶಾಲೆಗಳಲ್ಲಿ (ಖಾನ್‌ಕಾಹಾಲ್) ಸಮಾವೇಶ ಗಳು ನಡೆಸುವವರು ರಾಜವಂಶೀಯರು. ಜಮೀನ್ದಾರುಗಳು, ಸಾಧಾರಣ ಪ್ರಜೆಗಳಂತಹವರೊಂದಿಗೂ ಸಹ ಎಲ್ಲಾ ರೀತಿಯ ಭಕ್ತರು ಈ ಧರ್ಮಶಾಲೆಗಳಿಗೆ ಬರುವವರಾಗಿದ್ದರು. ಆಧ್ಯಾತ್ಮಿಕ ವಿಷಯಗಳನ್ನು ಅವರು ಚರ್ಚಿಸುತ್ತಿದ್ದರು. ತಮ್ಮ ತಮ್ಮ ಲೌಕಿಕ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳಲು ಸಾಧುಗಳು ಆಶೀರ್ವಾದಗಳನ್ನು ಕೋರುವವರು ಇಲ್ಲವೇ ಕೇವಲ ಸಂಗೀತ, ನೃತ್ಯಕಾರ್ಯ ಕ್ರಮಗಳಿಗೆ ಹಾಜರಾಗು ವವರಾಗಿದ್ದರು.

ಸೂಫಿ ಗುರುಗಳಿಗೆ ಅಲೌಕಿಕ ಶಕ್ತಿಗಳು ಇರುತ್ತವೆಂದು ಅವರು ತಮ್ಮ ಕಾಯೆಲೆಗಳನ್ನು ಕಷ್ಟಗಳನ್ನು ನಿವಾರಿಸುತ್ತಾರೆಂದು ಪ್ರಜೆಗಳು ಪೂಜಿಸುತ್ತಿದ್ದರು. ಸೂಫಿ ಸಾಧುಗಳ ಸಮಾಧಿಗಳು (ದರ್ಗಾ) ಯಾತ್ರಾ ಸ್ಥಳಗಳಾಗಿ ಬದಲಾಗಿ ಎಲ್ಲಾ ಮತಗಳವರು ಸಾವಿರಾರು ಜನ ಅಲ್ಲಿಗೆ ಬರುತ್ತಿದ್ದರು.

- ನೀವು ಯಾವಾಗಲಾದರೂಂದು ದರ್ಗಾಕ್ಕೆ ಭೇಟಿನೀಡಿ ಅದನ್ನು ಕುರಿತು ನಿಮ್ಮ ಸ್ನೇಹಿತರಿಗೆ ವಿವರಿಸಿರಿ. ಅಲ್ಲಿ ಅವರು "ಪೀರ್"ನನ್ನು ಹೇಗೆ ಗೌರವಿಸುತ್ತಾರೋ, ಹೇಗೆ ಪ್ರಾರ್ಥಿಸುತ್ತಾರೋ ಹೇಳಿರಿ.

ಭಾರತ ದೇಶದಲ್ಲಿ ಹೊಸ ಮತಗಳ ಬೆಳವಣಿಗೆ:

13ನೇ ಶತಮಾನದ ನಂತರ ಉತ್ತರ ಭಾರತ ದೇಶದಲ್ಲಿ ಭಕ್ತಿ ಉದ್ಯಮದ ಹೊಸ ಅಲೆಯು ಮೇಲೆದ್ದಿದೆ. ಇಸ್ಲಾಂ, ಹಿಂಧೂಮತ, ಸೂಫಿ ತತ್ವ, ಇತರೆ ಭಕ್ತಿ ಪಂಗಡಗಳವರು ನಾಥಪಂಥಿಗಳು, ಸಿದ್ಧರು, ಯೋಗಿಗಳು,

SCERT TELANGANA

ಒಬ್ಬರಿಂದೊಬ್ಬರು ಪ್ರಭಾವಿತರಾದ ಕಾಲವದು. ಹೊಸ ಪಟ್ಟಣಗಳು, ರಾಜ್ಯಗಳು ಈ ಕಾಲದಲ್ಲಿ ಹುಟ್ಟಿ ಬರುತ್ತಿರುವುದನ್ನು ಗಮನಿಸುತ್ತಿದ್ದೇವೆ. ಪ್ರಜೆಗಳು ಹೊಸ ವೃತ್ತಿಗಳನ್ನು ಕೈಗೊಳ್ಳುತ್ತಿದ್ದಾರೆ. ತಾವು ನಿರ್ವಹಿಸಬಲ್ಲ ಹೊಸ ಪಾತ್ರಗಳನ್ನು ಅನ್ವೇಷಿಸುತ್ತಿದ್ದಾರೆ. ಅಂತಹವರು ಮುಖ್ಯವಾಗಿ ಕುಶಲಕರ್ಮಿಗಳು, ರೈತರು, ವರ್ತಕರು, ಕಾರ್ಮಿಕರು ಈ ಹೊಸ ಸಾಧುಗಳ ಭೋಧನೆಗಳನ್ನು ಕೇಳಲು ಒಂದೆಡೆ ಸೇರಿ ತಾವು ಕೇಳಿದ ವಿಷಯಗಳನ್ನು ಪ್ರಚಾರ ಮಾಡುತ್ತಿದ್ದರು. ಕಬೀರ, ಬಾಬಾ, ಗುರುನಾನಕ್, ರಂತಹವರು ಕೆಲವರು ಮೌಢ್ಯ ಆಚಾರಗಳನ್ನು ನಂಬಿಕೆಗಳನ್ನು ತಿರಸ್ಕರಿಸಿದರು.

ಬಮ್ಮೆರ ಪೋತನ, ಅನ್ನಮಾಚಾರ್ಯ, ಚೈತನ್ಯ ಮಹಾಪ್ರಭು, ತುಳಸೀದಾಸ್, ಸೂರದಾಸ್‌ರಂತಹವರ ಆಚರಣೆಗಳು ಅಂದಿನ ವಿಶ್ವಾಸಗಳನ್ನು ಸಾಧನೆಗಳನ್ನು ಸ್ವೀಕರಿಸುತ್ತಾ ಅವನ್ನು ಎಲ್ಲರಿಗೂ ಕೈಗೆಟುಕುವಂತೆ ತರಬೇಕೆಂದು ಅಭಿಲಾಷಿಸಿದರು.

ವರಂಗಲ್ ಬಳಿ ಇರುವ ಬಮ್ಮೆರ ಗ್ರಾಮದಲ್ಲಿ ವಾಸಿಸಿದ್ದ ಪೋತನ ಪ್ರಸಿದ್ಧವಾದ ಮಹಾ ಭಾಗವತವನ್ನು ತೆಲುಗಿಗೆ ಅನುವಾದಿಸಿದ್ದಾರೆ. ಪೋತನನು "ಸಹಜ ಕವಿ"ಎಂದು ಕರೆಯುತ್ತಾರೆ. ಆತನು ತನ್ನ ಸಹಜ ಭಕ್ತಿಪರವಾದ ಭಾವನೆಗಳನ್ನು ವ್ಯಕ್ತಪಡಿಸಲು ಅಥವಾ ತನ್ನ ಪಾಂಡಿತ್ಯ ಪ್ರದರ್ಶನಕ್ಕಾಗಲೀ, ಚಾತುರ್ಯ ನೋಡಿಸಲು, ಕವಿತ್ವ ಬರೆಯಲಿಲ್ಲ.

ತಾಳ್ಳಪಾಕ ಅನ್ನಮಾಚಾರ್ಯ(ಸಾ.ಶ.1408 – 1503) ಆಂಧ್ರಪ್ರದೇಶಕ್ಕೆ ಸೇರಿದ ವಾಗ್ಗೇಯಕಾರನು ಈತನು ಪದ, ಕವಿತೆ ಪಿತಾಮಹನೆಂದು ಪ್ರಸಿದ್ಧಿ ಹೊಂದಿದ್ದಾನೆ. ಅನ್ನಮಯ್ಯ ತಿರುಪತಿ ವೆಂಕಟೇಶ್ವರಸ್ವಾಮಿ ವೈಭವವನ್ನು ಕೀರ್ತನೆಗಳ ರೂಪದಲ್ಲಿ ಬರೆಯಲು, ಹಾಡಲು ತನ್ನ ಜೀವಿತವನ್ನು ಅಂಕಿತಗೊಳಿಸಿದ್ದಾನೆ. ಆತನ ಕೀರ್ತನೆಗಳು ಹೆಚ್ಚಿನವರೆಗೆ ಆಳವಾಗಿ ಗ್ರಾಂಥಿಕ ಭಾಷೆಯಲ್ಲಿ ಅಲ್ಲದೇ ಆಡುಭಾಷೆಯಲ್ಲಿ, ತೆಲುಗು ನುಡಿಗಟ್ಟುಗಳಿಂದ ಕೂಡಿರುತ್ತದೆ. ಅನ್ನಮಯ್ಯ ಶ್ರೀ ವೆಂಕಟೇಶ್ವರ ಸ್ವಾಮಿಯ ಮೇಲೆ 32000 ಕೀರ್ತನೆಗಳನ್ನು ಬರೆದಿದ್ದಾನೆಂದು "ಅನ್ನಮಯ್ಯಾಚಾರ್ಯ ಚರಿತ್ರೆ" ಮೂಲಕ ತಿಳಿಯುತ್ತದೆ. ಆತನ ಕೀರ್ತನೆಗಳಲ್ಲಿ ನೈತಿಕತೆ, ಧರ್ಮ, ಸತ್ಯಶೀಲತೆಗಳಂತಹ ಅಂಶಗಳು ಪ್ರಧಾನ ಅಂಶವಾಗಿ ಇರುತ್ತವೆ. ಆ ಕಾಲದಲ್ಲಿ ಅಸ್ಪೃಶ್ಯತೆಯಂತಹ ಸಾಮಾಜಿಕ ಅನಾಚಾರಗಳನ್ನು ವಿರೋಧಿಸಿದವರಲ್ಲಿ ಅನ್ನಮಯ್ಯ ಮೊದಲಿಗನು.

"ಬ್ರಹ್ಮಮೊಕ್ಕಟೇ, ಪರಬ್ರಹ್ಮಮೊಕ್ಕಟೇ" 'ಏ ಕುಲಮು ದೈನನೇಮಿ ಎವ್ವರೈನಾನೇಮಿ' ಎಂಬ ಸಂಕೀರ್ತನೆಗಳಲ್ಲಿ ಭಗವಂತನಿಗೂ, ಮಾನವನಿಗೂ ನಡುವಿರುವ ಸಂಬಂಧ ವಿಷಯದಲ್ಲಿ ಬಣ್ಣ, ಜಾತಿ, ಆರ್ಥಿಕ ಸಾಮರ್ಥ್ಯದಂತಹ ವ್ಯತ್ಯಾಸಗಳೇನೂ ಇಲ್ಲವೆಂದು ಎಷ್ಟೋ ಸುಂದರವಾದ ಶಕ್ತಿವಂತನಾದ ಪದಸರಣಿಯನ್ನು ಉಪಯೋಗಿಸಿದ್ದಾನೆ.

ಬ್ರಹ್ಮಮೊಕ್ಕಟೆ ಪರಬ್ರಹ್ಮಮೊಕ್ಕಟೆ ಪರ
ಬ್ರಹ್ಮಮೊಕ್ಕಟೆ ಪರಪಬ್ರಹ್ಮಮೊಕ್ಕಟೆ...
ನಿಂಡಾರ ರಾಜು ನಿದ್ರಿಂಚು ನಿದ್ರಯು ನೌಕಟೆ
ಅಂಡನೆ ಬಂಟು ನಿದ್ರ ಅದಿಯು ನೌಕಟೆ...
ಮೊಂಡೈನ ಬ್ರಾಹ್ಮಣುಡು–ಮೆಟ್ಟಭೂಮಿ ಯೊಕಟೆ
ಚಂಡಾಲು ದುಂಡೆಟಿ ಸರಿಭೂಮಿ ಯೊಕಟೆ....

–ಅನ್ನಮಾಚಾರ್ಯ ಕೀರ್ತನ

ಚೈತನ್ಯ ಮಹಾಪ್ರಭು (1486–1534):

ಚೈತನ್ಯ ಮಹಾಪ್ರಭುವು ಪೂರ್ವ ಭಾರತದೇಶಕ್ಕೆ ಸೇರಿದ (ಪ್ರಸ್ತುತ ಬಾಂಗ್ಲಾದೇಶ, ಪಶ್ಚಿಮಬಂಗಾಳ) ವೈಷ್ಣವ ಸಾಧುವು, ಸಂಘ ಸಂಸ್ಕರಣೆ ಮಾಡಿದವರು. ಈತನು ಭಗವದ್ಗೀತೆ, ಭಾಗವತ, ಪುರಾಣಗಳ ಆಧಾರವಾಗಿ ಭಕ್ತಿಯೋಗವನ್ನು ಪ್ರವಚಿಸಿದನು. ಸಾಮೂಹಿಕವಾಗಿ ಭಜನೆಗಳು ಮಾಡುವುದು ಭಕ್ತಿಯಿಂದ ನಾಟ್ಯಮಾಡುವು ದನ್ನು ಪ್ರಚಾರ ಪಡಿಸಿದನು. ಈತನು ಕೃಷ್ಣನನ್ನು ಪೂಜಿಸಿ ಹರೇ ಕೃಷ್ಣ ಮಂತ್ರವನ್ನು ಬಹಳಷ್ಟು ಪ್ರಚಾರಕ್ಕೆ ತಂದನು.

ಕಂಚರ್ಲ ಗೋಪನ್ನ (1620–1680) :

17ನೇ ಶತಮಾನಕ್ಕೆ ಸೇರಿದ ಭಕ್ತ ರಾಮದಾಸನೆಂದು ಪ್ರಸಿದ್ಧಿಯಾದ ಕಂಚರ್ಲ ಗೋಪನ್ನ ಶ್ರೀರಾಮನ ಭಕ್ತ. ಈತನು ಕರ್ನಾಟಕ ಸಂಗೀತದಲ್ಲಿ ಅನೇಕ ಕೀರ್ತನೆಗಳನ್ನು ಸ್ವರ ರಚನೆಗಳನ್ನು ಮಾಡಿದ್ದಾನೆ. ತೆಲುಗು ಭಾಷೆಯಲ್ಲಿ ಪ್ರಮುಖ ವಾಗ್ಗೇಯಕಾರನು. (ಸ್ವತಃ ರಚಿಸಿದ ಕವಿತೆಯನ್ನು ತಾನೇ ಹಾಡುವ ವ್ಯಕ್ತಿಗಳು) ಭದ್ರಾಚಲದಲ್ಲಿರುವ ಪ್ರಸಿದ್ಧಿ ಹೊಂದಿದ ಶಿಥಿಲವಾದ ಶ್ರೀರಾಮನ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿದನು. ಈತನು ರಾಮದಾಸ ಕೀರ್ತನೆಗಳ ಹೆಸರಿನಲ್ಲಿ ಅನೇಕ ಭಕ್ತಿ ಗೀತೆಗಳನ್ನು ರಚಿಸಿದ್ದಾನೆ. ದಾಶರಥಿ ಶತಕವನ್ನು ರಚಿಸಿ 108 ಪದ್ಯಗಳನ್ನು ಶ್ರೀರಾಮನಿಗೆ ಅಂಕಿತಗೊಳಿಸಿದ್ದಾನೆ.

SCERT TELANGANA

ಏ ತೀರುಗ ನನು ದಯ ಚೂಚೆದವೋ, ಇನ ವಂಶೋತ್ತಮ ರಾಮಾ
ನಾ ತರಮಾ ಭವ ಸಾಗರಮೀದನು, ನಳಿನ ದಳೇಕ್ಷಣ ರಾಮಾ
ಶ್ರೀರಘು ನಂದನ ಸೀತಾ ರಮಣಾ, ಶ್ರಿತಜನ ಪೋಷಕ ರಾಮಾ
ಕಾರುಣ್ಯಾಲಯ ಭಕ್ತ ವರದ ನಿನು, ಕನ್ನದಿ ಕಾನುಪು ರಾಮಾ...

– ರಾಮದಾಸು ಕೀರ್ತನ

- ವಾಗ್ಗೇಯಕಾರರನ್ನು ಅವರ ಕೀರ್ತನೆಗಳನ್ನು ತಿಳಿಸಿರಿ.

ತುಳಸೀದಾಸರು, ಭಗವಂತನನ್ನು ರಾಮನ ಆಕೃತಿಯಲ್ಲಿ ಭಾವನೆ ಮಾಡಿದ್ದಾನೆ. ಆತನು ತನ್ನ ರಾಮಚರಿತ ಮಾನಸ ಕಾವ್ಯವನ್ನು (ಪೂರ್ವ ಉತ್ತರ ಪ್ರದೇಶದಲ್ಲಿ ಬಳಕೆಯಲ್ಲಿರುವ) ಅವಧಿ ಭಾಷೆಯಲ್ಲಿ ಬರೆದಿದ್ದಾನೆ. ಈ ಗ್ರಂಥವು ಭಕ್ತಿ, ಭಾವನೆಯನ್ನು ಪ್ರಕಟಿಸುವ ಪರವಾಗಿಯೂ ಸಾಹಿತ್ಯ ಪರವಾಗಿಯೂ ಸಹ ಪ್ರಸಿದ್ಧಿ ಪಡೆದಿದೆ.

ಆತನಿಗೆ ಸಮಕಾಲೀನ (17ನೇ ಶತಮಾನದ ಅಂತ್ಯಕಾಲದವನು) ಅಸ್ಸಾಂ ನಿವಾಸಿಯಾದ ಶಂಕರ ದೇವನು ವಿಷ್ಣುಭಕ್ತಿಯನ್ನು ಪ್ರಚರಿಸುತ್ತಾ, ಅಸ್ಸಾಮಿ ಭಾಷೆಯಲ್ಲಿ ಕಾವ್ಯಗಳನ್ನು ನಾಟಕಗಳು ಬರೆದರು. "ನಾಮ್‌ಘರ್", ಎನ್ನುವ ಹೆಸರಿನೊಂದಿಗೆ, ಆತನು ಭಗವನ್‌ನಾಮ ಜಪ ಧ್ಯಾನಗಳಿಗಾಗಿ ಮಂದಿರಗಳನ್ನು ನಿರ್ಮಿಸಿ ಸಂಪ್ರದಾಯವನ್ನು ನೆಲೆಗೊಳಿಸಿದನು. ಈವರೆಗೂ ಆ ಸಂಪ್ರದಾಯ ಮುಂದುವರೆಯುತ್ತಲೇ ಇದೆ.

ದಾದು ದಯಾಳು, ರವಿದಾಸು, ಮೀರಾಭಾಯಿ ಯಂತಹ ಭಕ್ತರು ಆ ಸಾಂಪ್ರದಾಯದಲ್ಲಿನವರೇ. ಮೀರಾ ಭಾಯಿ ರಾಜಪುತ್ರ ಸ್ತ್ರೀ, ಮೇವಾರ ರಾಜಕುಟುಂಬದ ಸೊಸೆ. 16ನೇ ಶತಮಾನದಲ್ಲಿ ಜೀವಿಸಿದ್ದಳು. "ಅಸ್ಪೃಶ್ಯರೆಂದು" ಹೇಳುವ ಜಾತಿಯಲ್ಲಿ ಹುಟ್ಟಿ ಮಹಾನ್ ಸಾಧುವೆಂದು ಪ್ರಸಿದ್ಧಿಯಾದ ರವಿದಾಸನಿಗೆ ಮೀರಾ ಶಿಷ್ಯಳಾಗಿದ್ದಳು. ಈಕೆಯು ಕೃಷ್ಣ ಭಕ್ತೆಯು. ತನ್ನ ಪ್ರಗಾಢ ಭಕ್ತಿಯನ್ನು ವ್ಯಕ್ತಪಡಿಸುತ್ತಾ, ಈಕೆಯು ಲೆಕ್ಕವಿಲ್ಲದಷ್ಟು ಭಜನೆ ಗೀತೆಗಳನ್ನು ಬರೆದಿದ್ದಾಳೆ. ಅವು ರಾಜಸ್ಥಾನ ದಲ್ಲಿಯು, ಗುಜರಾತಿನಲ್ಲಿಯೂ ಜನಮನದಲ್ಲಿ ವ್ಯಾಪಿಸಿತು.



ಚಿತ್ರ 21.3 ಮೀರಾಬಾಯಿ

ಅನೇಕ ಜನ ಭಕ್ತ ಸಾಧುಗಳು ರಚನೆಯಲ್ಲಿನ ವಿಶಿಷ್ಟಮಯವಾದ ಲಕ್ಷಣವೇನೆಂದರೆ, ಅವರು ಪ್ರಾಂತೀಯ ಭಾಷೆಯಲ್ಲಿ ಬರೆಯುವುದು ಅವು ಹಾಡಲು ಅನುಕೂಲವಾಗಿರುವುದು, ಆದ್ದರಿಂದ ಅವು ತುಂಬ ಜನರಂಜಕಗಳಾಗಿದ್ದವು. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಮೌಖಿಕವಾಗಿ ಸೇರುತ್ತಾ ಬಂದಿವೆ. ಸಾಧಾರಣವಾಗಿ, ಕಡುಬಡವರು, ಅನಾಥರು ಆದ ಸಮುದಾಯದವರು, ಸ್ತ್ರೀಯರು ಈ ಹಾಡುಗಳನ್ನು ಕೇಳಿಸುತ್ತಾ ಬಂದಿದ್ದಾರೆ. ಅವುಗಳಲ್ಲಿ ಆಗಿಂದ್ದಾಗ್ಗೆ, ತಮ್ಮತಮ್ಮ ಅನುಭವಗಳನ್ನು ಸಹ ಜೋಡಿಸುತ್ತಾ ಇದ್ದರು. ಆ ವಿಧವಾಗಿ ಈಗ ನಮಗೆ ದೊರೆಯುತ್ತಿರುವ ಹಾಡುಗಳ ರಚನೆಯಲ್ಲಿ ಆ ಸಾಧು ಸಜ್ಜನರ ಪಾತ್ರ ಎಷ್ಟಿವೆಯೋ ತಲತಲಾಂತರದಿಂದ ಅವುಗಳನ್ನು ಹಾಡುತ್ತಾ ಬರುತ್ತಿರುವ ಜನರ ಪಾತ್ರವೂ ಸಹ ಅಷ್ಟೆ ಇದೆ. ಸಜೀವವಾದ ನಮ್ಮ ಪ್ರಜಾ ಸಂಸ್ಕೃತಿಯಲ್ಲಿ ಅವು ಅಂತರ್ಭಾಗವಾಗಿವೆ.

* ನೀವು ಎಂದಾದರೂ ನಿಮ್ಮ ಮಾತೃಭಾಷೆಯಲ್ಲಿ ಭಜನೆ ಗೀತೆಗಳನ್ನು ಕೇಳಿದ್ದೀರಾ? ಅವುಗಳನ್ನು

SCERT TELANGANA

ಯಾರು ಸಂಕಲನ ಮಾಡಿರುವರು? ಅವುಗಳಲ್ಲಿ ಕೆಲವನ್ನುಬರೆದು ಅವುಗಳ ಭಾವವನ್ನು ತರಗತಿ ಕೋಣೆಯಲ್ಲಿ ಚರ್ಚಿಸಿರಿ.

ಕಬೀರ್ : ಹತ್ತಿರದ (ಸನ್ನಿಹಿತ) ಪರಿಶೀಲನ:

15ನೇ ಶತಮಾನಕ್ಕೂ, 16ನೇ ಶತಮಾನಕ್ಕೂ ಮಧ್ಯಕಾಲದಲ್ಲಿ ಜೀವಿಸಿದ ಭಕ್ತ ಸಾಧು ಕಬೀರ್ ಪ್ರಮುಖ ಪ್ರತಿಭಾಶಾಲಿ ಮುಸ್ಲಿಂ "ಜುಲಾಹ"ರು ಅಥವಾ ನೇಕಾರರ ಕುಟುಂಬದಲ್ಲಿ ಆತನು ಬೆಳೆದಿದ್ದಾನೆ. ಕಾಶೀ (ವಾರಣಾಸಿ) ನಗರದಲ್ಲೋ ಅದಕ್ಕೆ ಸಮೀಪದಲ್ಲೋ ವಾಸಿಸುತ್ತಿದ್ದನು. ಈತನ ಜೀವನವನ್ನು ಕುರಿತು ನಮಗೆ ಲಭಿಸಿದ ವಿಶ್ವಸನೀಯ ಸಮಾಚಾರ ಕಡಿಮೆಯೇ. ಈತನು ರಚಿಸಿದಂತೆ ಕೇಳಿಬರುವ, ಸಂಚಾರಿ ಭಜನೆ ಬೃಂಧ ಗಾಯಕರು ಹಾಡುತ್ತಾ ಬರುವ, ಸಾಧುಗಳು ಪದಗಳ ಮೂಲಕ ಆತನ ಭಾವನೆಗಳನ್ನು ನಾವು ತಿಳಿದುಕೊಳ್ಳಬಲ್ಲೆವು. ಇವುಗಳಲ್ಲಿ ಕೆಲವು ನಂತರದ ಕಾಲದ "ಗುರುಗ್ರಂಥ ಸಾಹೇಬ್" ನಲ್ಲಿಯೋ ಪಂಥವಾಣಿಯಲ್ಲಿಯೋ, "ಬೀಜಕ್"ನಲಿಯೋ ಸೇರಿವೆ ನಮಗೆ ಇವುಗಳ ಲಭ್ಯವಿದೆ.

ಕಬೀರ ಭೋಧನೆಗಳು, ಪ್ರಧಾನಮತ ಸಂಪ್ರದಾಯಗಳ ಸಂಪೂರ್ಣ, ತೀವ್ರ ತಿರಸ್ಕರಣೆಯ ಮೇಲೆ ಆಧಾರ ಪಟ್ಟಿದ್ದು, ಆತನ ಭೋಧನೆಗಳು ಹಿಂದೂ, ಇಸ್ಲಾಂಮತ ಪರವಾದ ಎಲ್ಲಾ ರೀತಿಯ ಬಾಹ್ಯ ಆರಾಧನೆಗಳನ್ನು, ಪೂಜಾರಿ ವರ್ಗಗಳ ಪ್ರಾಧಾನ್ಯತೆಯನ್ನು, ವರ್ಣ ವ್ಯವಸ್ಥೆಯನ್ನು ಬಹಿರಂಗವಾಗಿ ಹೀಯಾಳಿಸಿದೆ. ಆತನು ತನ್ನ ಕವಿತಾಭಾಷೆ, ಸಾಧಾರಣ ಜನರು ಗ್ರಹಿಸುವ ಹಿಂದಿ ಆಡುಭಾಷೆಯಲ್ಲಿ ಹೇಳುತ್ತಿದ್ದವನು. ರೂಪವಿಲ್ಲದ ಭಗವಂತನನ್ನು ಕಬೀರ ನಂಬಿದ್ದನು. ಭಕ್ತಿಯೋಂದೇ ಮುಕ್ತಿಯ ಮಾರ್ಗವೆಂದು ಪ್ರಚಾರಮಾಡಿದನು. ಕಬೀರರ ಅನುಯಾಯಿಗಳಲ್ಲಿ ಹಿಂದುಗಳು, ಮುಸಲ್ಮಾನರು ಸಹ ಇದ್ದಾರೆ.




21.4 ವರ್ಣಚಿತ್ರ–ಮಗ್ಗದ ಮೇಲೆ ನೇಯ್ಗೆ ಮಾಡುತ್ತಿರುವ ಕಬೀರ್

ಅವುಗಳಲ್ಲಿನ ಒಂದು ಗೀತೆಯಲ್ಲಿನ ಭಾವವು ಈ ಕೆಳಗಿನಂತಿದೆ

ದೈವಾನ್ವೇಷಣೆ:

ಸರ್ವ ಜೀವಿಗಳಲ್ಲಿರುವ ಓ ಅಲ್ಲಾ–ರಾಮ್
ದಯತೋರು ನಿನ್ನ ದಾಸರ ಮೇಲೆ ಶ್ರೀ ಪ್ರಭು!
ನೆಲದ ಮೇಲೆ ತಲೆಹೊಡೆದು ಕೊಳ್ಳುವೆ ಏಕೆ?
ಈ ಶರೀರಕ್ಕೆ ನೀರಿನಲ್ಲೇಕೆ ಸ್ನಾನ ಮಾಡುಸುತ್ತೀ?
ನೀನು ಸಂಹರಿಸುತ್ತೀಯೆ, ಆದರೂ ಹೇಳಿ
ಕೊಳ್ಳುತ್ತೀಯೆ, "ಏನಮ್ರ"ನೆಂದು
ಆದರೂ ಬಚ್ಚಿಡುವೆ ನಿನ್ನ ದುರ್ಗುಣವನ್ನು
ಇಪ್ಪತ್ತಾನಾಲ್ಕು ಬಾರಿ ಬ್ರಾಹ್ಮಣರು, ಏಕಾದಶಿ
ಗಳಿಗೆ ಉಪವಾಸವಿರುತ್ತಾನೆ.
ಕಾಜೀ ರಂಜಾನ್ ತಿಂಗಳನ್ನು ಪಾಲಿಸುತ್ತಾನೆ.
ನನಗೆ ತಿಳಿಯದೆ ಕೇಳುತ್ತಿದ್ದೇನೆ,
ಉಳಿದ ಹನ್ನೊಂದು ತಿಂಗಳುಗಳನ್ನು
ಬದಿಗೊತ್ತುವನು ಏಕೆಂದು?
ಆಧ್ಯಾತ್ಮಿಕ ಫಲವನ್ನು ಅನ್ವೇಷಿಸಲು12ನೇ ತಿಂಗಳ
ಹರಿಯು ಪೂರ್ವಕ್ಕಿರುವನೆಂದುನ್ನುತ್ತಾರೆ.
ಅಲ್ಲಾ ಪಶ್ಚಿಮದಲ್ಲಿರುವವನೆನ್ನುವರು
ನಿನ್ನ ಹೃದಯದಲ್ಲಿ ಅನ್ವೇಶಿಸು ಆತನಿಗಾಗಿ,
ನಿನ್ನ ಹೃದಯಾಂತರ ಹೃದಯದಲ್ಲಿ
ರುತ್ತಾನೆ ರಹೀಮ್–ರಾಮನು.

© KSTBT TELANGANA



21.5 ಯುಕ್ತ ವಯಸ್ಸಿರುವ ಬಾಬಾ ಗುರುನಾನಕ್ ,ಕೆಲವರು ಪುಣ್ಯಾತ್ಮರೊಂದಿಗೆ

ಬಾಬಾ ಗುರುನಾನಕ್ ಸನ್ನಿಹಿತ ಪರಿಶೀಲನೆ:

ನಮಗೆ ಕಬೀರನಿಗಿಂತಲೂ ಗುರುನಾನಕನನ್ನು ಕುರಿತು (ಕ್ರಿ.ಶ.1469–1539) ಹೆಚ್ಚು ತಿಳಿದಿದೆ. ಈತನು ತಲ್ವಾಂಡಿ (ಪಾಕಿಸ್ತಾನದಲ್ಲಿ ನಾನ್‌ಕನಾ ಸಾಹಿಬ್) ನಲ್ಲಿ ಹುಟ್ಟಿ ವಿಸ್ತಾರವಾಗಿ ಪರ್ಯಟಿಸಿ ಕರ್ತಾರ್‌ಪುರದಲ್ಲಿ ಒಂದು ಕೇಂದ್ರವನ್ನು (ಡೇರ್ ಬಾಬಾನಾನಕ್, ರಾವೀನದಿ ದಡದಲ್ಲಿ) ಸ್ಥಾಪಿಸಿದರು. ಹಿಂದಿನ ಮತವಿಶ್ವಾಸದಿಂದಲೂ, ಜಾತಿಯಿಂದಲೂ, ಸ್ತ್ರೀ–ಪುರುಷ ಭೇದವು ಎಳ್ಳಷ್ಟು ಇಲ್ಲದೇ ಆತನ ಅನುಚರರು, ಒಂದೇ ಅಡುಗೆಮನೆ (ಲಂಗರ್) ಯಲ್ಲಿ ಬೆರೆತು ಊಟ ಮಾಡುತ್ತಿದ್ದರು. ಈ ವಿಧವಾಗಿ ಗುರುನಾನಕ್ ಏರ್ಪಡಿಸಿದ ಪವಿತ್ರ ಸ್ಥಳಕ್ಕೆ ಧರ್ಮಶಾಲೆ ಎನ್ನುವ ಹೆಸರು ಬಂದಿದೆ.

ಗುರುನಾನಕ್‌ರ ಅನುಯಾಯಿಗಳ ಸಂಖ್ಯೆ 16ನೇ ಶತಮಾನದಲ್ಲಿ ಆತನ ವಾರಸತ್ವದವರ ಕಾಲದಲ್ಲಿ ಬೆಳೆಯುತ್ತಾ ಬಂದಿದೆ. ಅವರಲ್ಲಿ ಎಲ್ಲಾ ಜಾತಿಯವರು ಇದ್ದಾರೆ, ಆದರೆ ವರ್ತಕರು, ಕೃಷಿಕರು, ಕುಶಲಕರ್ಮಿಗಳು ಹೆಚ್ಚಾಗಿದ್ದಾರೆ. ಇದಕ್ಕೆ ಕಾರಣ, ಗುರುನಾನಕ್, ತನ್ನ ಅನುಯಾಯಿಗಳು ಗೃಹಸ್ಥರಾಗಿರಬೇಕೆಂದು ವಸ್ತು ಉತ್ಪಾದಕವಾದ ಉಪಯೋಗಕರವಾದ ಉದ್ಯೋಗಗಳನ್ನು ಅವಲಂಭಿಸಬೇಕೆಂದು ಹೇಳುವುದೇ ಅಲ್ಲದೇ, ಸಾಮಾನ್ಯ ನಿಧಿಗೆ ಅನುಯಾಯಿಗಳು ದೇಣಿಗೆಗಳನ್ನು ನೀಡಬೇಕೆಂದು ಹೇಳಿದ್ದಾನೆ.

ಈ ಚಳುವಳಿಯ ಮೇಲೆ ಮೊದಲಿನಿಂದಲೂ ಗುರುನಾನಕ್‌ರ ಅಭಿಪ್ರಾಯಗಳ ಪ್ರಭಾವವು ವಿಸ್ತೃತವಾಗಿದೆ. ಏಕೇಶ್ವರೋಪಾಸನೆ ಪ್ರಾಮುಖ್ಯತೆಯನ್ನು ಆತನು ಒತ್ತಿ ಹೇಳಿದ್ದಾನೆ. ಮೋಕ್ಷ ಪಡೆಯಲು ಬಣ್ಣ, ಜಾತಿ, ಸ್ತ್ರೀ, ಪುರುಷರ ಭೇದಭಾವಗಳ ಸಂಬಂಧವಿಲ್ಲವೆಂದು ಆತ ಪುನರುಚ್ಚರಿಸಿದ್ದಾನೆ. ಆತನ ಅಭಿಪ್ರಾಯದಲ್ಲಿ ಮೋಕ್ಷವೆಂಬುದು, ಸಮಾಜದೆಡೆಗೆ ದೃಢವಾದ ಕಟ್ಟುಪಾಡುಗಳಿಂದ ಕ್ರಿಯಾಶೀಲವಾದ ಜೀವನವನ್ನು ಕಳೆಯುವುದೇ ಆಗಲಿ ನಿಶ್ಚಲಾನಂದ ಸ್ಥಿತಿಯಲ್ಲ. ಆತನ ಭೋಧನೆಗಳಿಗೆ ಸಾರವಂತವಾದ ಮೂರು ಮಾತುಗಳು. ನಾಮ್, ದಾನ್, ಇಸ್ನಾನ್–ಎಂಬುವನ್ನು ಆತನೆ ಹೇಳಿದ್ದಾನೆ. ಅಂದರೆ ಸರಿಯಾದ ಆರಾಧನೆ ಇತರರ ಸಂಕ್ಷೇಮ, ಒಳ್ಳೇಯ ನಡುವಳಿಕೆ ಎಂದು ಅರ್ಥ. ಆತನ ಭೋಧನೆಗಳು ಈಗ ನಾಮ್–ಜಪ್ನಾ, ಕೀರ್ತ್–ಕರ್ನಾ, ಪಂದ್–ಛಕ್ನಾ ಎನ್ನುವ ಮಾತುಗಳಿಂದ ಗುರ್ತಿಸಿ ಕೊಳ್ಳುತ್ತಾರೆ. ಸರಿಯಾದ ವಿಶ್ವಾಸ, ಆರಾಧನೆ, ನಿಜಾಯಿತಿಯಿಂದ ಕೂಡಿದ ಜೀವನ, ಇತರರಿಗೆ ಸಹಾಯ ಮಾಡುವುದು ಮುಖ್ಯವೆಂದು ಇವು ಒತ್ತಿ ಹೇಳಿವೆ. ಸಮಾನತೆಯ ಮೇಲೆ ಗುರುನಾನಕ್ ವ್ಯಕ್ತಪಡಿಸಿದ ಭಾವನೆಗಳು ಸಾಮಾಜಿಕ, ರಾಜಕೀಯ ಪ್ರಾಮುಖ್ಯತೆ ಯನ್ನು ಪಡೆದುಕೊಂಡಿದೆ. ಗುರನಾನಕ್‌ರ ಅನುಯಾಯಿಗಳ ಚರಿತ್ರೆಗೂ ಗುರುನಾನಕ್‌ರಂತಹ ಇತರ ಮತಗುರುಗಳಾದ ಕಬೀರ್, ರವಿದಾಸ ದಾದುವಂತಹ ಮತಗುರುಗಳ ಅನುಯಾಯಿಗಳ ಚರಿತ್ರೆಗೂ ನಡುವೆ, ಸ್ವಲ್ಪಮಟ್ಟಿಗೆ ಇದು ವಿವರಿಸುತ್ತದೆ.

SCERT TELANGANA

ಮುಖ್ಯ ಪದಗಳು :

1. ಅದ್ವೈತ	2. ಮೋಕ್ಷ
3. ಆಳ್ವಾರರು	4. ನಯನಾರ್‌ಗಳು
5. ಭಕ್ತಿ	6. ಯೋಗಾಸನ
7. ಬಜಾಕ್	8. ಅಭಂಗ್

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿರಿ

1) ನಾಥಪಂಥೀಯರು, ಸಿದ್ಧರು, ಯೋಗಿಗಳ ನಂಬಿಕೆ, ಆಚಾರಗಳನ್ನು ವಿವರಿಸಿರಿ.

2) ಕಬೀರ್ ಹೇಳಿದ ಪ್ರಧಾನ ಅಂಶಗಳು (ಭೋಧನೆ) ಯಾವುವು? ಇವುಗಳನ್ನು ಆತನು ಯಾವ ರೀತಿ ಹೇಳಿದ್ದಾನೆ?

3) "ಸೂಫಿ"ಗಳ ಪ್ರಧಾನ ನಂಬಿಕೆ, ಆಚಾರಗಳೇನು?

4) ಅನೇಕ ಮಂದಿ ಭೋಧಕರು, ಆಗ ಪ್ರಚಾರದಲ್ಲಿದ್ದ ಮತ ವಿಶ್ವಾಸಗಳನ್ನು, ಸಾಧನೆಗಳನ್ನು ಏಕೆ ತಿರಸ್ಕರಿಸಿದ್ದಾರೆ?

5) ಬಾಬಾ ಗುರುನಾನಕ್ ಮುಖ್ಯ ಭೋಧನೆಗಳೇನು?

6) ಮತವನ್ನು ಕುರಿತು ವೀರಶೈವರಲ್ಲಾಗಲೀ, ಮಹಾರಾಷ್ಟ್ರ ಸಾಧುಗಳಲ್ಲಾಗಲೀ ಇರುವ ಭಾವನೆಗಳನ್ನು ಚರ್ಚಿಸಿರಿ.

7) ಸಾಮನ್ಯಾ ಪ್ರಜೆಗಳು ಮೀರಾಬಾಯಿಯನ್ನು ಏಕೆ ನೆನಪಿನಲ್ಲಿಟ್ಟುಕೊಂಡಿದ್ದಾರೆ ಎಂದು ಭಾವಿಸುತ್ತೀರಿ?

8) 194ನೇ ಪುಟದಲ್ಲಿನ "ಕಬೀರ್" ಅಂಶವನ್ನು ಓದಿ, ವ್ಯಾಖ್ಯಾನಿಸಿರಿ.

9) ನಿಮ್ಮ ಪ್ರಾಂತದಲ್ಲಿ ನಡೆಯುವ ಒಂದು ಸಾಮೂಹಿಕ ಉತ್ಸವಗಳ ಬಗೆಗ ಬರೆಯಿರಿ.

ಪ್ರಾಜೆಕ್ಟ್ ಕೆಲಸ (ಯೋಜನಾ ಕಾರ್ಯ)

1) ನಿಮ್ಮ ಪರಿಸರದಲ್ಲಿ ಯಾವುದಾದರೂ ದರ್ಗಾಗಳಗಲೀ, ಗುರುದ್ವಾರಗಳಗಲೀ, ಭಕ್ತಿಸಂಪ್ರದಾಯ ಸಾಧುಗಳೊಂದಿಗೆ ಸಂಬಂಧವಿರುವ ದೇವಾಲಯಗಳೇನಾದರೂ ಇವೆಯೋ ತಿಳಿದುಕೊಳ್ಳಿರಿ. ಇವುಗಳಲ್ಲಿ ಯಾವುದನ್ನಾದರೂ ಸಂದರ್ಶಿಸಿ ನೀವು ಅಲ್ಲಿ ಏನು ಕೇಳಿದ್ದೀರೋ, ನೋಡಿದ್ದೀರೋ ವಿವರಿಸಿ.

2) ಈ ಪಾಠದಲ್ಲಿ ಉದಾಹರಿಸಿದ ರಚನೆಗಳನ್ನು ರಚಿಸಿದ ಭಕ್ತಿ ಕವಿಗಳಲ್ಲಿ ಯಾರೊಬ್ಬರು ಬರೆದುದ್ದನ್ನು ಕುರಿತು ಇನ್ನು ಹೆಚ್ಚಿಗೆ ತಿಳಿದುಕೊಳ್ಳಿರಿ. ಇತರ ರಚನೆಗಳನ್ನು ಬರೆದುಕೊಳ್ಳಿ, ಅವುಗಳನ್ನು ಹಾಡುವವರೋ, ಇಲ್ಲವೋ ಹಾಡಿದರೆ ಹೇಗೆ ಹಾಡುವವರೋ, ಕವಿಗಳು ಯಾವುದನ್ನು ಕುರಿತು ಬರೆದಿದ್ದಾರೋ ತಿಳಿದುಕೊಳ್ಳಿರಿ.

SCERT TELANGANA


ಅಧ್ಯಾಯ 22

ರಾಜರು – ಕಟ್ಟಡಗಳು

ಚಿತ್ರ 22.1 ರಲ್ಲಿ ಕುತುಬ್‌ಮಿನಾರ್‌ದಲ್ಲಿನ ಮೊದಲನೆಯ ಅಂತಸ್ತಿನ ಕೈಸಾಲೆ ನೋಡಿರಿ ಕುತುಬುದ್ದೀನ್ ಐಬಕ್ ಇದನ್ನು ಸುಮಾರು, ಸಾ.ಶ 1199ನೇ ವರ್ಷದಲ್ಲಿ ಕಟ್ಟಿಸಿದ್ದಾನೆ. ಈ ಕೈಸಾಲೆ ಕೆಳಗೆ ಜಾಮಿತಿ ಆಕಾರದ ನಕ್ಷೆಗಳು ಮತ್ತು ಚಿಕ್ಕ ಕಮಾನುಗಲನ್ನು ಗಮನಿಸಿರಿ, ಈ ಕೈಸಾಲೆ ಕೆಳಗೆ ಇರುವ ಎರೆಡು ಸಾಲುಗಳಲ್ಲಿನ ಶಾಸನಗಳನ್ನು ನೋಡಿದ್ದೀರಾ ? ಇವು ಅರಬ್ಬೀ ಭಾಷೆ ಯಲ್ಲಿ ಇವೆ, ಮೇಲಿನ ಭಾಗ ಕೋನಾಕಾರದಲ್ಲಿ ಬಾಗಿದೆ. ಶಾಸನವನ್ನು ಇಂತಹ ಕಡೆ ಇರಿಸಬೇಕಾದರೆ ಖಚ್ಚಿತವಾದ ಕೌಶಲ್ಯ ಅವಸರ ಎಷ್ಟೋ ನೈಪುಣ್ಯವುಳ್ಳ ಶಿಲ್ಪಿಗಳು ಮಾತ್ರವೇ ಈ ನಿರ್ಮಾಣವನ್ನು ಮಾಡಬಲ್ಲರು. 800 ವರ್ಷಗಲ ಹಿಂದೆ ಕೆಲವು ಕಟ್ಟಡಗಳು ಮಾತ್ರವೇ ಕಲ್ಲುಗಳಿಂದ, ಇಟ್ಟಿಗೆ ಗಳಿಂದ ನಿರ್ಮಾಣ ಮಾಡಿದ್ದಾರೆಂದು ಗುರ್ತಿಸಿ ಕೊಳ್ಳಿ. 13ನೇ ಶತಾಬ್ದಕ್ಕೆ ಸೇರಿದ ಸಂದರ್ಶಕರ ಮೇಲೆ ಕುತುಬ್ ಮಿನಾರ್‌ನಂತಹ ಕಟ್ಟಡಗಳು ಎಂತಹ ಪ್ರಭಾವವನ್ನು ತೋರಿಸುತ್ತಿವೆ ?

ಸಾ.ಶ. 8 ರಿಂದ 18ನೇ ಶತಾಬ್ದಗಳ ಮಧ್ಯದಲ್ಲಿ ರಾಜರು, ಅವರ ಅಧಿಕಾರಿಗಳು ಎರಡು ಪ್ರಕಾರದ ಕಟ್ಟಡಗಳನ್ನು ನಿರ್ಮಿಸಿದ್ದಾರೆ.

1) ಕೋಟೆಗಳು, ರಾಜರ ಅರಮನೆಗಳು ಸಮಾಧಿಗಳು: ಇವು ರಕ್ಷಣೆ ಕೊಡುವುದಕ್ಕಾಗಿ, ಸುರಕ್ಷಿತವಾಗಿರುವುದಕ್ಕಾಗಿ, ವಿಶ್ರಾಂತಿ ತೆಗೆದು ಕೊಳ್ಳುವುದಕ್ಕಾಗಿ ವೈಭವವುಳ್ಳ ಪ್ರದೇಶಗಳಾಗಿ ನಿರ್ಮಾಣ ಮಾಡಿದ್ದಾರೆ. ಈ ಪ್ರಪಂಚದಲ್ಲಿ ಇವುಗಳ ನಂತರವೇ ಉಳಿದವೆಲ್ಲ. 2) ಪ್ರಜೆಗಳಿಗೆ ಉಪಯೋಗವಾಗುವ ಕಟ್ಟಡಗಳು : ಅವು ದೇವಾಲಯಗಳು, ಮಸೀದಿಗಳು, ಕೆರೆಗಳು, ಭಾವಿಗಳು, ಪ್ರವಾಸಿ ಗೃಹಗಳು ಸಂತೆಗಳು ಪ್ರಜೆಗಳ ಸೌಕರ್ಯಕ್ಕಾಗಿ ಇಂತಹ ಕಟ್ಟಡಗಳನ್ನು ಕಟ್ಟುವುದರಿಂದ, ಅವುಗಳನ್ನು ಉಪಯೋಗಿಸುವುದರಿಂದ ರಾಜನಿಗೆ ಒಳ್ಳೆಯ ಹೆಸರು ಕೀರ್ತಿ ಪ್ರತಿಷ್ಠೆಗಳು ಬರುತ್ತವೆಯೆಂದು ನಂಬುತ್ತಿದ್ದರು. ರಾಜರ ಜೊತೆ ವ್ಯಾಪಾರಸ್ಥರು, ಇತರರು ಕೂಡ ಇಂತಹ ನಿರ್ಮಾಣದ ಕೆಲಸಗಳನ್ನು ಮಾಡುತ್ತಿದ್ದರು. ಇವುಗಳಲ್ಲಿ ದೇವಾಲಯಗಳು, ಮಸೀದಿಗಳು, ಕೆರೆಗಳು, ಬಾವಿಗಳು, ಬಿಡಾರಗಳು, ಸಂತೆಗಳು ಮುಖ್ಯವಾದವು. ಈ ನಿರ್ಮಾಣಗಳಿಂದ ರಾಜರು ಪ್ರಜೆಗಳ ಪ್ರಶಂಸೆಗಳನ್ನು ಹೊಂದುತ್ತಿದ್ದರು. ಉತ್ತಮ ಶಿಲ್ಪ ನೈಪುಣ್ಯ ಹೊಂದಿದ ಭವನಗಳು, ವರ್ತಕರ ಭವನಗಳು ಸಾ.ಶ. 18ನೇ ಶತಾಬ್ದಕ್ಕೆ ಸೇರಿದವು ಇವು ಮಾತ್ರ ಇಂದಿಗೂ ಬದುಕಿ




ಚಿತ್ರ – 22.1 ಕುತುಬ್ ಮಿನಾರ್ ಐದು ಅಂತಸ್ತಿನ ಕಟ್ಟಡ. ನೀವು ನೋಡುತ್ತಿರುವ ಎರಡು ಸಾಲುಗಳು ಶಾಸನಗಳು ಮೊದಲ ಕೈಸಾಲೆ ಕೆಳಗೆ ಇವೆ. ಇದರ ಮೊದಲ ಅಂತಸ್ತನ್ನು ಕುತ್ಬುದ್ದೀನ್ ಐಬಕ್, ಇನ್ನುಳಿದ ಅಂತಸ್ತುಗಳನ್ನು ಇಲ್ ಟುಮಿಷ್ ಸಾ.ಶ 1229 ನಲ್ಲಿ ನಿರ್ಮಿಸಿದ್ದಾರೆ. ಕಾಲಗಮನದಲ್ಲಿ ಇವು ಸಿಡಿಲುಗಳು, ಭೂಕಂಪಗಳ ಪ್ರತಾಪಕ್ಕೆ ಗುರಿಯಾಗಿದ್ದ ರಿಂದ ನಂತರದ ರಾಜರು ರಿಪೇರಿ ಮಾಡಿಸಿದರು.

© SCERT TELANGANA



ಚಿತ್ರ –22 (ಎ) ಢಿಲ್ಲೀಯಲ್ಲಿನ ಖುವ್ವತ್ – ಆಲ್ ಇಸ್ಲಾಮ್ ಮಸೀದು



ಚಿತ್ರ –22.2 (ಬಿ) ಕಮಾನು ನಿರ್ಮಾಣದಲ್ಲಿ ಉಪಯೋಗಿಸಿದ ಕಾರ್ಬೆಲ್ ಸಾಂಕೇತಿಕ ಪರಿಜ್ಞಾನ

ಉಳಿದಿವೆ.

ನಿರ್ಮಾಣಗಳು – ನಿರ್ಮಾಣ ನೈಪುಣ್ಯಗಳು :

ಪುರಾತನ ಕಟ್ಟಡಗಳು ಅಂದಿನ ನಿರ್ಮಾಣಗಳಲ್ಲಿ ಉಪಯೋಗಿಸಿದ ತಾಂತ್ರಿಕ ಪರಿಜ್ಞಾನವನ್ನು ತಿಳಿಸುತ್ತವೆ. ಉದಾ : ಮಾಳಿಗೆಯನ್ನು ಪರಿಶೀಲಿಸಿರಿ. ಕಲ್ಲಿನಿಂದಾಗಲಿ ಕಟ್ಟಿಗೆಯಿಂದಾಗಲಿ ಮಾಡಿದ ತೊಲೆಗಳನ್ನು ನಾಲ್ಕು ಗೋಡೆಗಳ ಮೇಲೆ ಇಟ್ಟು ಮಾಳಿಗೆಯನ್ನು ಹಾಕಬಹುದು ಆದರೆ ವಿಶಾಲವಾದ ಬೃಹತ್ ಪ್ರಮಾಣಗಳ ನಿರ್ಮಾಣ ಮಾಡಲು ಮಾತ್ರ ಕಷ್ಟವಾಗುತ್ತದೆ. ಇದಕ್ಕೆ ಆಧುನಿಕವಾದ ನೈಪುಣ್ಯ ಅವಶ್ಯಕ.

ಸಾ.ಶ7–10ನೇ ಶತಮಾನಗಳ ಮಧ್ಯ ಕಾಲದಲ್ಲಿ ಭವನಗಳಲ್ಲಿ ಅನೇಕ ಕೋಣೆಗಳು ಬಾಗಿಲುಗಳು, ಕಿಟಕಿಗಳು ಹೆಚ್ಚುವರಿಯಾಗಿಡುವುದನ್ನು ಪ್ರಾರಂಭಿಸಿದರು ಎರಡು ಉದ್ದ ಕಂಬಗಳ ಮೇಲೆ ಅಡ್ಡವಾಗಿ ತೊಲೆಗಳನ್ನು ಇಟ್ಟು ಮಾಳಿಗೆ, ಬಾಗಿಲು, ಕಿಟಕಿಗಳನ್ನು ಹೊಂದಿಸುತ್ತಿದ್ದರು. ಇಂತಹ ಕಟ್ಟಡವನ್ನು "ಟ್ರಾಬೀಟ್" ಅಥವಾ "ಕಾರ್ ಬೆಲ್ಡ್" ಎಂದು ಕರೆಯುತ್ತಿದ್ದರು ಸಾ.ಶ 8–13 ಶತಾಬ್ದಗಳ ಮಧ್ಯ ಕಾಲದಲ್ಲಿ ಟ್ರಾಬೀಟ್ ವಿಧಾನವನ್ನು ದೇವಾಲಯಗಳು, ಮಸೀದಿಗಳು, ಸಮಾಧಿಗಳು, ಭವನಗಳು ಮತ್ತು ಅವುಗಳಿಗೆ ಅನುಗುಣವಾಗಿ ಇರುವ ಪುಷ್ಕರಣಿ ಬಾವಿಗಳ ನಿರ್ಮಾಣಕ್ಕೆ ಕೂಡ ಉಪಯೋಗಿಸಿದರು.

- ನಿಮ್ಮ ಹತ್ತಿರದಲ್ಲಿರುವ ಪುರಾತನ ದೇವಾಲಯಗಳನ್ನು ಮಸೀದಿಗಳನು ಸಂದರ್ಶನ ಟ್ರಾಬೀಟ್ ಕಟ್ಟಡದ ವಿಧಾನ ಇದೆಯೇನೋ ಪರಿಶೀಲಿಸಿರಿ.

- ಇಂತಹ ಪದ್ಧತಿಯಲ್ಲಿ ಮಾಳಿಗೆಯನ್ನು ನಿರ್ಮಾಣಮಾಡುವಾಗ ಕಂಬಗಳು ಒಂದಕ್ಕೊಂದು ಹತ್ತಿರವಾಗಿಯೇ ಇರುತ್ತವೆ. ಇನ್ನೂ ವಿಶಾಲವಾದ ಉದ್ದ ಕೊಠಡಿಗಳನ್ನು ನಿರ್ಮಿಸುವುದು ಸಾಧ್ಯವಾಗುವುದಿಲ್ಲ. ಏತಕ್ಕಾಗಿ ಎಂದು ನೀವು ಹೇಳಬಲ್ಲಿರಾ ?


11ನೇ ಶತಾಬ್ದಿ ಆರಂಭ -ದೇವಾಲಯಗಳ ನಿರ್ಮಾಣ :

ಕಂದರಿಯ ಮಹಾದೇವ ಶಿವಾಲಯವನ್ನು ಸಾ.ಶ.999ನಲ್ಲಿ ಛಂದೇಲ ರಾಜನಾದ ಧಂಗದೇವನು ನಿರ್ಮಿಸಿದ್ದಾನೆ. ಚಿತ್ರ 22.3 (ಬಿ) ದೇವಾಲಯ ನಿರ್ಮಾಣ ಪ್ರಣಾಳಿಕೆಯನ್ನು ತಿಳಿಸುತ್ತದೆ. ಅಂದವಾಗಿ ಅಲಂಕರಿಸಿದ ತೋರಣ ಪ್ರವೇಶ ದ್ವಾರದ ನಂತರ ವಿಶಾಲವಾದ ಮಹಾಮಂಟಪ ಇದೆ. ಇದನ್ನೇ ನಾಟ್ಯ ಮಂಟಪ ಎನ್ನುವರು. ಇದರ ಹಿಂದೆ ಇರುವ ಗರ್ಭಗುಡಿಯಲ್ಲಿ ದೇವರ ವಿಗ್ರಹ ಪ್ರತಿಷ್ಠಾಪನೆಯನ್ನು



ಚಿತ್ರ 22.3 (ಬಿ) ಕಂದರೀಯ ಮಹಾದೇವ ಶಿವಾಲಯದ

SCERT TELANGANA



ವಾಗಿರುತ್ತದೆ. ಈ ಗರ್ಭಗೃಹದಲ್ಲಿ ರಾಜರು ಅವರ ಕುಟುಂಬ ಸದಸ್ಯರು, ಬಂಧುಗಳು, ಪುರೋ ಹಿತರು ಮಾತ್ರವೇ ಪ್ರವೇಶಿಸಿ ಪೂಜೆಗಳು ಮಡುತ್ತಿದ್ದರು. ಖಜುರ ಹೋ ರಾಜಪ್ರಸಾದ ಸಮುದಾಯದಲ್ಲಿ ಕೇವಲ ರಾಜರಿಗೆ ಮಾತ್ರವೇ ಪ್ರತ್ಯೇಕವಾದ ದೇವಾಲ ಯಗಳು ಇರುತ್ತಿದ್ದವು. ಸಾಮಾನ್ಯರಿಗೆ ಇದರೊಳಗೆ ಪ್ರವೇಶ ಇಲ್ಲ.


ಚಿತ್ರ 22.3 (ಬಿ) ಕಂದರೀಯ ಮಹಾದೇವ ಶಿವಾಲಯದ ಗ್ರೌಂಡ್ ಪ್ಲ್ಯಾನ್

ಈ ದೇವಾಲಯಗಳು ವಿಶಾಲವಾಗಿ, ಅಂದವಾದ ಶಿಲ್ಪಗಳಿಂದ ಅಲಂಕರಿಸಲಾಗಿವೆ.

ತಂಜಾವೂರುನಲ್ಲಿನ ರಾಜರಾಜೇಶ್ವರ ದೇವಾಲಯ ಆ ಕಾಲದಲ್ಲಿದ್ದ ದೇವಾಲಯಗಳೆ ಲ್ಲವುಗಳಿಗಿಂತ ಎತ್ತರದ ಶಿಖರವನ್ನು ಹೊಂದಿದೆ. ಅಂದು ಇಂತಹ ನಿರ್ಮಾಣಗಳು ಕೈಹಿಡಿಯುವುದು ಅಷ್ಟು ಸುಲಭವಲ್ಲ. ಏಕೆಂದರೆ ಆ ದಿನಗಳಲ್ಲಿ ಅಂತಹ ದೊಡ್ಡ ಭಾರಗಳನ್ನು ಹೊರಲು ಯಂತ್ರಗಳು ಇಲ್ಲ, 90ಟನ್ನು ಕಲ್ಲನ್ನು ಶಿಖರದ ಮೇಲೇರಿಸಲು ಮನುಷ್ಯರಿಂದ ಆಗುವುದಿಲ್ಲ ಆದ್ದರಿಂದ ಶಿಲ್ಪಗಳನ್ನು ಶಿಖರದ ಮೇಲೆ ಓರೆಯಾಗಿ ಇರುವ ಮಾರ್ಗವನ್ನು ನಿರ್ಮಿಸಿ, ಎರೆಡು ಚಕ್ರಗಳ ಬಂಡಿಯನ್ನು ಮಾಡಿ ಅದಕ್ಕೆ ಈ ಕಲ್ಲನ್ನು ಇಟ್ಟು ಉರುಳಿಸುತ್ತಾ ಶಿಖರದ ಮೇಲ್ಭಾಗಕ್ಕೆ ಸೇರಿಸುತ್ತಿದ್ದರು ಈ ಮಾರ್ಗವು ದೇವಾಲಯದ ಶಿಖರಕ್ಕೆ 4 ಕಿ.ಮೀ. ದೂರದಿಂದ ಮೊದಲಾಗುತ್ತದೆ. ಏಕೆಂದರೆ ನೆಟ್ಟಗೆ ಇದ್ದರೆ ಉರುಳಿಸುವುದು ಕಷ್ಟ ಆದ್ದರಿಂದ ತುಂಬ ಓರೆಯಾಗಿ ಇರುವುದಕ್ಕೆ ಹೀಗೆ ಮಾಡುತ್ತಿದ್ದರು. ದೇವಾಲಯದ ನಿರ್ಮಾಣ ಪೂರ್ತಿಯಾದ ನಂತರ ಈ ಮಾರ್ಗವನ್ನು ತೊಲಗಿಸುತ್ತಿದ್ದರು.



ಚಿತ್ರ – 22.4 ತಂಜಾಊರಿನಲ್ಲಿರುವ ಬೃಹಧೀಶ್ವರ ದೇವಾಲಯ



ಚಿತ್ರ : 22.5 (ಎ) ಟ್ರೂ ಆರ್ಚ್ ಮಧ್ಯಭಾಗದಲ್ಲಿನ ಕೀಲಕವಾದ ಕಲ್ಲು ಆ ಕಟ್ಟಡದ ಒಟ್ಟು ಬಾರವನ್ನು ಆರ್ಚ್ ಅಧಾರದ ಪೀಠಕ್ಕೆ ಬದಲಿಸುವಂತೆ ಅಳವಡಿಸಲಾಗಿದೆ.



ಚಿತ್ರ . 22.5 (ಬಿ) "ಟ್ರೋ ಆರ್ಚ್" (14ನೇ ಶತಾಬ್ದ) ಅಲಾಯ್ - ದರ್ವಾಜ ಖುವ್ವತ್ - ಅಲ್- ಇಸ್ಲಾಮ್ ಮಸೀದು, ಡಿಲ್ಲಿ

ನೂತನ ನಿರ್ಮಾಣ ವಿಧಾನ :

ಎರೆಡು ಸಾಂಕೇತಿಕವಾದ ಅಂದವಾದ ಶೈಲಿಗಳನ್ನು ನಾವು 12ನೇ ಶತಾಬ್ದದಲ್ಲಿ ಗಮನಿಸಬಹುದು.

1) ಬಾಗಿಲುಗಳ ಮೇಲೆ, ಕಿಟಕಿಗಳ ಮೇಲೆ ಹೊರಿಸಲಾದ ಒಟ್ಟು ನಿರ್ಮಾಣದ ಭಾರವನ್ನು ಒಮ್ಮೊಮ್ಮೆ ಕಮಾನುಗಳ ಮೇಲೆ ಹೋರಿಸಿದರು. ಇದೇ ನಿರ್ಮಾಣ ವಿಧಾನ ಸೂರಂಗಗಳ ಮಾಳಿಗೆಗಳಿಗೆ ಗುಮ್ಮಟದ ಮಾಳಿಗೆ ಗಳಿಗೆ ಕೂಡ ಉಪಯೋಗಿಸುತ್ತಿದ್ದರು. ಇಂತಹ ಕಟ್ಟಡವನ್ನು "ಆರ್ಕುಯೇಟ್" ಎಂದು ಕರೆಯುವರು.

SCERT TELANGANA

- ಚಿತ್ರ 22.2 ಎ, 22.2 ಬಿ ಯನ್ನು ಚಿತ್ರ 22.5 ಎ 22.5 ಬಿಯಿಂದ ಹೋಲಿಸಿ ನೋಡಿ.

2) ಅಂದಿನ ನಿರ್ಮಾಣಗಳಲ್ಲಿ ಸುಣ್ಣವನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಇದು ತುಂಬಾ ನಾಣ್ಯವಾದುದು. ಇದರಲ್ಲಿ ಜಲ್ಲಿಕಲ್ಲು ಚೂರುಗಳನ್ನು ಕಲಿಸುವುದರಿಂದ ಇದು ಬಲವಾದ ಕಾಂಕ್ರೀಟಾಗಿ ತಯಾರಾಗುತ್ತದೆ. ಎಂತಹ ದೊಡ್ಡ ಕಟ್ಟಡವಾದರೂ ಇದರಿಂದ ಸುಲಭವಾಗಿ ಬೇಗ ಕಟ್ಟಬಹುದು. ಸುಣ್ಣದ ಕಲ್ಲು ಮಿಶ್ರಣವನ್ನು, ಕಮಾನುಗಳಿಗೆ, ಗೋಳಾಕಾರದ ಮಾಳಿಗೆಗಳಿಗೆ ಸಾ.ಶ 1190ರ ನಂತರ ಭವನಗಳಲ್ಲಿ ಹೆಚ್ಚಾಗಿ ಉಪಯೋಗಿಸಿದ್ದಾರೆ. ಚಿತ್ರ 22.6 ನಲ್ಲಿ ಇರುವ ನಿರ್ಮಾಣವನ್ನು ಪರಿಶೀಲಿಸಿರಿ.

- ಕಾರ್ಮಿಕರು ಏನು ಮಾಡುತ್ತಿದ್ದಾರೆ ? ಇಲ್ಲಿ ತೋರಿಸಿದ ಉಪಕರಣಗಳು, ಕಲ್ಲು ಹೊರುವುದಕ್ಕೆ ಉಪಯೋಗಿಸಿದ ವಿಧಾನಗಳ ಬಗ್ಗೆ ವಿವರಿಸಿರಿ.



ಚಿತ್ರ–22.6ಎ ಆಗ್ರಾ ಕೋಟೆಯಲ್ಲಿನ ವಾಟರ್ -ಗೇಟ್ ನಿರ್ಮಾಣ ಸಮಯದಲ್ಲಿನ ಚಿತ್ರ : ಅಕ್ಬರ್ ನಾಮಾ (ಕ್ರೀ.ಶ 1590–95)

- ಇಂತಹ ಹೊಸ ಸಾಂಕೇತಕ ವಿಧಾನಗಳು ವಿಶಾಲವಾದ ದೊಡ್ಡ ಕೊಠಡಿಗಳೂ, ಎತ್ತರವಾದ ಭವನಗಳು ಕಟ್ಟುವುದಕ್ಕೆ ಉಪಯೋಗಿಸ ಬಹುದೆಂದು ಭಾವಿಸುವೇಯಾ ?


ದೇವಾಲಯಗಳು, ಮಸೀದಿಗಳು ಮತ್ತು ಕೆರೆಗಳ ನಿರ್ಮಾಣ:

ದೇವಾಲಯಗಳನ್ನು ಮಸೀದಿಗಳನ್ನು ತುಂಬಾ ಅಂದವಾಗಿ ನಿರ್ಮಿಸುತ್ತಿದ್ದರು. ಏಕೆಂದರೆ ಅವು ಪವಿತ್ರ ಪೂಜಾ ಪ್ರದೇಶಗಳು ಆದುದರಿಂದ ಇವುಗಳನ್ನು ಪೋಷಣೆ ಮಾಡುವವರ ಶಕ್ತಿಯನ್ನು, ಸಂಪತ್ತನ್ನು, ಭಕ್ತಿಯನ್ನು ಪ್ರದರ್ಶಿಸುವುದಕ್ಕೆ ಕೂಡ ಇವು ಉಪಯೋಗಪಡುತ್ತಿದ್ದವು ರಾಜರಾಜೇಶ್ವರಿ ದೇವಾಲಯವನ್ನು ಉದಾಹರಣೆ ಯಾಗಿ ತೆಗೆದು ಕೊಳ್ಳೋಣ. ಈ ದೇವಾಲಯವನ್ನು ರಾಜರಾಜದೇವ ಎನ್ನುವ ರಾಜನು ತಮ್ಮ ಕುಲದೇವರಾದ ರಾಜ ರಾಜೇಶ್ವರರನ್ನು ಪೂಜಿಸುವುದಕ್ಕೆ ಕಟ್ಟಿಸಿದ್ದಾನೆಂದು ಇಲ್ಲಿನ ಶಾಸನಗಳು ತಿಳಿಸುತ್ತಿವೆ. ಇಲ್ಲಿ ರಾಜನ ಹೆಸರು, ದೇವರ ಹೆಸರು ಒಂದೇ ಯಾಗಿರುವುದನ್ನು ಗಮನಿಸಿರಿ. ದೇವರ ಹೆಸರು ಶುಭಪ್ರದವಾದ್ದರಿಂದ ರಾಜನಿಗೆ ಆ ಹೆಸರು ಇಟ್ಟರು (ತಂದೆ ತಾಯಿಯರು). ದೇವರ ಪ್ರತಿ ರೂಪವಾಗಿ ಕಾಣಬೇಕೆಂದು ರಾಜನು ಬಯಸುತ್ತಿದ್ದನು. ದೇವಾಲಯದಲ್ಲಿ ನಡೆಯುವ ಪೂಜಾ ಕಾರ್ಯ ಕ್ರಮಗಳಿಂದ ರಾಜರಾಜದೇವನು ಮತ್ತೊಬ್ಬ ದೇವರೆಂದು ರಾಜೇಶ್ವರನನ್ನು ಗೌರವಿಸುತ್ತಿದ್ದರು.

ಹಾಗೆಯೇ ಕಾಕತೀಯ ರಾಜಧಾನಿ ಒರುಗಲ್ಲನ್ನು ನೆನಪಿಸಿಕೊಳ್ಳಿ. ಓರುಗಲ್ಲಿನ ಸ್ವಯಂಭೂ ಶಿವಾಲಯ ಓರುಗಲ್ಲಿನ ಕೋಟೆ ಮಧ್ಯದಲ್ಲಿ ಇರುವಂತೆ ನಿರ್ಮಿಸಲಾಗಿದೆ. ತಾವು ಸ್ವತಂತ್ರ ರಾಜರೆಂದು, ತಮ್ಮ ಅಧಿಕಾರವನ್ನು. ಹಿರಿಮೆಯನ್ನು ಸಾರುವುದಕ್ಕಾಗಿ ಕಾಕತೀಯರು ಇದನ್ನು ಕಟ್ಟಿಸಿದ್ದಾರೆ.

ದೊಡ್ಡ ದೊಡ್ಡ ದೇವಾಲಯಗಳೆಲ್ಲವು ರಾಜರು ಕಟ್ಟಿಸಿದವೆ. ದೇವಾಲಯಗಳ ಒಳಗಿನ ಇತರ ಚಿಕ್ಕ ವಿಗ್ರಹಗಳನ್ನು ದೇವ ಮತ್ತು ದೇವತೆಯರವೇ ಇವುಗಳನ್ನು ರಾಜಪರಿವಾರ ಮತ್ತು ಸಾಮಂತರು, ನಿರ್ಮಿಸಿದ್ದಾರೆ. ಈ ದೇವಾಲಯ ಗಳೆಲ್ಲ ಕೂಡ ಒಂದು ಚಿಕ್ಕ ಪ್ರಪಂಚವನ್ನು ನೆನಪಿಸುತ್ತವೆ. ರಾಜರು, ಸಾಮಂತರು ಪ್ರಜೆಗಳು ಅವರ ದೇವರನ್ನು ಪೂಜಿಸಿದರೆ ಈ ಭೂಮಿಯ ಮೇಲೆ ಭಗವಂತನು ಆಶಿಸುವ ಧರ್ಮ ಪರಿಪಾಲನೆ ತಂದಂತೆ ಇರುತ್ತಿತ್ತು.

ರಾಜರು ಇತರ ಪರಿವಾರದವರು ದೇವರಿಗೆ ವೈಭವವಾಗಿ ಪೂಜೆಗಳು ಜರಗುವುದಕ್ಕೆ, ಕಾಣಿಕೆ, ದೇವರ ಮಾನ್ಯ, ಬಂಗಾರ, ಆಭರಣಗಳನ್ನು ದಾನವಾಗಿ ಕೊಡುತ್ತಿದ್ದರು. ಕ್ರೀ.ಶ 12ನೇ ಶತಾಬ್ದಕ್ಕೆ ದೇವಾಲಯಗಳು



ಚಿತ್ರ 22.7 ಷಾಜಹಾನ್ ನೂತನ ರಾಜಧಾನಿಯಾದ
..ಷಾಹಜನಾಬಾದಿನಲ್ಲಿ 1650–56ರಲ್ಲಿ ನಿರ್ಮಿಸಿದ ಜಾಮೀಮಸೀದಿ

ದೊಡ್ಡ ವ್ಯವಸ್ಥೆಗಳಾಗಿ ಅವಿರ್ಭವಿಸಿ ನೂರಾರು ವೃತ್ತಿ ಕಳಾಕಾರರಾದ ನರ್ತನೆ ಮಾಡುವವರು, ಸಂಗೀತ ವಿದ್ವಾಂಸರು, ಅರ್ಚಕರು, ನಿರ್ವಾಹಕರು, ಸೇವಕರು ಮೊದಲಾದವರಿಗೆ ಉಪಾಧಿಯನ್ನು ಕಲ್ಪಿಸಿದ್ದಾರೆ. ಈ ದೇವಾಲಯಗಳು ಗ್ರಾಮಗಳಲ್ಲಿ ಕೆಲ ಸಂದರ್ಭಗಳಲ್ಲಿ ತೆರಿಗೆ ವಸೂಲು ಮಾಡಿ, ವ್ಯಾಪಾರಸ್ಥರಿಗೆ ಧನವನ್ನು ಸಾಲವಾಗಿ ಕೊಡುತ್ತಿದ್ದರು. ಅನೇಕ ಜಾತ್ರೆಗಳು. ಸಂತೆಗಳು, ಉತ್ಸವಗಳನ್ನು ನಡೆಸುತ್ತಿದ್ದರು. ಇಲ್ಲಿ ವಸ್ತುಗಳ ಕೊಳ್ಳುವುದು ಮತ್ತು ಮಾರುವುದು ನೆಡೆಯುತ್ತಿದ್ದವು. ಈ ದೇವಾಲಯಗಳ ಸುತ್ತಲೂ ಅನೇಕ ಶೈವ, ವೈಷ್ಣವ ಮಠಗಳು ಹುಟ್ಟಿಕೊಂಡಿವೆ. ಈ ವಿಧವಾಗಿ ದೇವಾಲಯಗಳಿಗೆ ಒಂದು ಮುಖ್ಯ ರಾಜಕೀಯ ಮತ್ತು ಆರ್ಥಿಕ ಕೇಂದ್ರಗಳಾಗಿ ಅವಿರ್ಭವಿಸಿದವು. ರಾಜರು, ಪಾಲಕರು ತಮ್ಮ ತಮ್ಮ ಹೆಸರುಗಳು ದೇವಾಲಯಗಳೊಂದಿಗೆ ಚೀರಕಾಲ ಇರುವುದಕ್ಕಾಗಿ ಪಟ್ಟಾಭಿಷೇಕಗಳಂತಹ ಕಾರ್ಯಕ್ರಮಗಳನ್ನು ದೇವಾಲಯಗಳಲ್ಲಿ ನೆಡೆಸಿಕೊಂಡು ಅವುಗಳಿಗೆ ಶ್ರೇಷ್ಟದಾನಗಳು ಮಾಡಿ, ಕಾಣಿಕೆಗಳನ್ನು ಸಮರ್ಪಿಸಿ ದೇವಾಲಯಗಳ ನಿರ್ಮಾಣಕ್ಕಾಗಿ, ಅಭಿವೃದ್ಧಿಗೆ ಸಹಕರಿಸುತ್ತಿದ್ದರು.

ಮುಸ್ಲಿಂ ಸುಲ್ತಾನರು ಮತ್ತು ಬಾದಷಹರು ತಾವು ಭಗವಂತನ ಅವತಾರವೆಂದು ಹೇಳಿಕೊಳ್ಳಲಿಲ್ಲ. ಅದರೆ ಪರ್ಷಿಯನ್ ಚರಿತ್ರೆ, ಸುಲ್ತಾನನ್ನು ಭಗವಂತನ ನೆರಳಿನಂತೆ ವರ್ಣಿಸಿದ್ದಾರೆ. ಡಿಲ್ಲಿ ಮಸೀದಿಯಲ್ಲಿನ ಶಾಸನವು ಭಗವಂತನೇ ಅಲ್ಲಾ ಉದ್ದೀನ್ ನನ್ನು ರಾಜನಾಗಿ ನಿಯಮಿಸಿದ್ದಾನೆಂದು, ಹಿಂದಿನ ಕಾಲದಲ್ಲಿ ಶ್ರೇಷ್ಟ ನ್ಯಾಯರೂಪಕರ್ತರಾಗಿ ಹೆಸರು ವಾಸಿಯಾದ ಮೋಸೆಸ್ ಮತ್ತು ಸಾಲ್ಮನ್‌ರ ಇರುವ ಗುಣಗಳೆಲ್ಲಾ ಇವನಿಗೆ ಇವೆಯೆಂದು, ಎಷ್ಟೋ ಕಷ್ಟಗಳಲ್ಲಿ ಇರುವ ಪ್ರಪಂಚವನ್ನು ಶಾಂತಿಯುತವಾಗಿ ಮಾರ್ಪಾಟು ಮಾಡಿದನೆಂದು ಹೇಳುತ್ತಿದೆ, ದೇವರು ಸ್ವತಃ ಅರಾಚಕತ್ವದಿಂದ ರಾಜ್ಯವನ್ನು ರಕ್ಷಿಸಿ ಕ್ರಮಕ್ರಮವಾಗಿ ನ್ಯಾಯ ಪಾಲನಾ ವಿಧಾನವನ್ನು ಪ್ರವೇಶಪಡಿಸಿದನು.

ಹೊಸ ರಾಜವಂಶ ಅಧಿಕಾರಕ್ಕೆ ಬಂದ ಕೂಡಲೆ ಅರಾಜರು ರಾಜ್ಯಧಿಕಾರವನ್ನು ತಮ್ಮ ನೈತಿಕ ಹಕ್ಕಾಗಿ ಭಾವಿಸಿದರು. ಹೊಸ ಆರಾಧನಾ ಸ್ಥಳಗಳನ್ನು ನಿರ್ಮಾಣಮಾಡಿ ತಾವು ದೇವರಿಗೆ ತುಂಬ ಸನ್ನಿಹಿತರೆಂದು ಹೇಳಿ ಕೊಳ್ಳುತ್ತಿದ್ದರು. ಮುಖ್ಯವಾಗಿ ಆಕಸ್ಮಿಕ ರಾಜಕೀಯ ಬದಲಾವಣೆಗಳು ನಡೆಯುವ ಸಮಯದಲ್ಲಿ ಹೀಗೆ ಹೇಳಿಕೊಳ್ಳುತ್ತಿದ್ದರು. ಪಾಲಕರು ಆಕಸ್ಮಿಕ ರಾಜಕೀಯ ಬದಲಾವಣೆ ನಡೆಯುವ ಸಮಯದಲ್ಲಿ ಮುಖ್ಯವಾಗಿ ಹೀಗೆ ಹೇಳಿಕೊಳ್ಳುತ್ತಿದ್ದರು, ಪಂಡಿತರಿಗೆ, ಸಾಧುಗಳಿಗೆ, ಆಶ್ರಯ, ದಾನಗಳು ಕೊಟ್ಟು ಅವರ ರಾಜಧಾನಿಗಳು, ನಗರಗಳನ್ನು ಸಾಂಸ್ಕೃತಿಕ ಕೇಂದ್ರಗಳಾಗಿ ಮಾರ್ಪಾಟು ಮಾಡಲಾಗಿತ್ತು ಇದರಿಂದ ಅವರ ಪಾಲನೆಗೆ ಖ್ಯಾತಿಬರುತ್ತಿತ್ತು.

ರಾಜರ ಧರ್ಮ ಪಾಲನಾ ವಿಧಾನಗಳನ್ನಿಡಿದು ದೇಶದಲ್ಲಿ ಎಲ್ಲಾ ಸಂಪನ್ಮೂಲ ಸಮೃದ್ಧಿಯಾಗಿ ಇರುತ್ತಿದ್ದವೆಂದು, ಅದರಿಂದ ಸ್ವರ್ಗದಿಂದ ಸಕಾಲದಲ್ಲಿ ಮಳೆಗಳು ಬೀಳುತ್ತವೆಯೆಂದು ಪ್ರಜೆಗಳು ನಂಬುತ್ತಿದ್ದರು. ಆ ಕಾಲದಲ್ಲಿ ಕೆರೆಗಳು, ಜಲಾಶಯುಗಳಿಂದ ಅಮೂಲ್ಯವಾದ ನೀರನ್ನು ಸರಬರಾಜು ಮಾಡುವುದನ್ನು ಬಹಳ ಹೊಗಳುತ್ತಿದ್ದುರು. ದೆಲ್ಲಿ–ಇ–ಕುಹನಾ ಹೊರಗಡೆ ದೊಡ್ಡ ಜಲಾಶಯವನ್ನು ಕಟ್ಟಿಸಿರುವುದರಿಂದ ಇಲ್ತುಟಮಿಷ್ ಎನ್ನುವ ಸುಲ್ತಾನನ್ನನ್ನು ಪ್ರಜೆಗಳೆಲ್ಲಾ ಗೌರವಿಸಿದರು. ಇದನ್ನೇ "ಹೌಜ್–ಇ–ಸುಲ್ತಾನಿ" ಅಥವಾ "ರಾಜರ ಜಲಾಶಯ" ಎಂದು ಕರೆಯುತಿದ್ದರು. ಸಾಮಾನ್ಯ ಪ್ರಜೆಗಳ ಬಳಕೆಗಾಗಿ ಪಾಲಕರು ಚಿಕ್ಕ, ದೊಡ್ಡ ಕೆರೆಗಳನ್ನು, ಜಲಾಶಯಗಳನ್ನು ನಿರ್ಮಿಸುತ್ತಿದ್ದರು.



ಚಿತ್ರ – 22.8 ಅಮೃತಸರ್ ನಲ್ಲಿನ ಹರ್ಬಿಂದರ್ ಸಾಹೇಬ್(ಸ್ವರ್ಣ ದೇವಾಲಯ)ಸುತ್ತಲಿರುವ ಪವಿತ್ರಕೊಳ

SCERT TELANGANA

- ನೀವು ಗ್ರಾಮದೇವತೆಗಳ ಗುಡಿಗಳ ಬಗ್ಗೆ ದೊಡ್ಡ ದೊಡ್ಡ ದೇವಾಲಯಗಳ ಬಗ್ಗೆ, ಮಸೀದಿಗಳ ಬಗ್ಗೆ ಓದಿದ್ದೀರಲ್ಲವೇ ಆ ಗ್ರಾಮ ದೇವತೆಗಳ ಗುಡಿಗಳು, ಮಸೀದಿಗಳು, ದೇವಾಲಯಗಳು ತುಂಬಾ ಭಿನ್ನವಾಗಿ ಇವೆಯೆಂದು ನಿನಗೆ ಏಕೆನಿಸುತ್ತದೆ?

ದೇವಾಲಯಗಳು ಏಕೆ ಧ್ವಂಸಮಾಡಲ್ಪಟ್ಟಿವೆ ?

ರಾಜರು ತಮ್ಮ ಭಕ್ತಿಯನ್ನು ಸಂಪತ್ತನ್ನು ಅಧಿಕಾರವನ್ನು ತೋರಿಸಿಕೊಳ್ಳಲು ದೇವಾಲಯಗಳನ್ನು ಕಟ್ಟಿಸುತ್ತಿದ್ದರು. ಇದರಿಂದ ಒಬ್ಬ ರಾಜ ಮತ್ತೊಂದು ರಾಜ್ಯದ ಮೇಲೆ ದಾಳಿಮಾಡಿದಾಗ ಈ ದೇವಾಲಯಗಳ ಮೇಲೆ ಗುರಿ ಇಟ್ಟರು. ಕ್ರೀ.ಶ 9ನೇ ಶತಾಬ್ದ ಪ್ರಾರಂಭದಲ್ಲಿ ಪಾಂಡ್ಯ ರಾಜನಾದ ಶ್ರೀಮಾರ ಶ್ರೀವಲ್ಲಭನು ಶ್ರೀಲಂಕ ಮೇಲೆ ದಾಳಿ ಮಾಡಿ ಸೇನ – 1 (ಕ್ರೀ.ಶ 831 – 581) ಎನ್ನುವ ರಾಜನ್ನನ್ನು ಓಡಿಸಿದನು. ಭೌದ್ಧಸನ್ಯಾಸಿ – ಚರಿತ್ರ ಕಾರನಾದ ಧಮ್ಮ ಕಿತ್ತಿ ಈ ವಿಧವಾಗಿ ಬರೆದಿದ್ದಾನೆ: "ಆತನು ಬೆಲೆ ಬಾಳುವವುಗಳನ್ನೆಲ್ಲಾ ತೊಲಗಿಸಿದನು. ರತ್ನ ಭವನದಲ್ಲಿ ಪೂರ್ತಿಯಾಗಿ ಬಂಗಾರದಿಂದ ಮಾಡಿದ ಬುದ್ದ ವಿಗ್ರಹವನ್ನು ಭೌದ್ಧರಾಮಾಲಯದಲ್ಲಿ ಇರುವ ಬಂಗಾರದ ಪ್ರತಿಮೆಗಳನ್ನು ದೋಚಿಕೊಂಡು ಹೋದರು. ಈ ವಿಧವಾಗಿ ಸಿಂಹಳ ರಾಜನಿಗೆ ಆದ ಅಪಮಾನಕ್ಕೆ ಪ್ರತಿಕಾರವಾಗಿ, ನಂತರದ ಸಿಂಹಳ ರಾಜನಾದ ಸೇನ – 2 ತನ್ನ ಸೈನ್ಯವನ್ನು ಪಾಂಡ್ಯರಾಜ ಧಾನಿಯಾದ ಮಧುರೆಯ ಮೇಲೆ ದಂಡೆಯಾತ್ರೆಗೆ ಅದೇಶಿಸಿದನು ಈ ದಂಡೆಯಾತ್ರೆಯನ್ನು ಕೇವಲ ಬುದ್ಧನ ಬಂಗಾರದ ವಿಗ್ರಹವನ್ನು ಮತ್ತೆ ಹಿಂದಕ್ಕೆ ತರಲು ಮಾಡಿದನೆಂದು ಬೌದ್ದಬಿಕ್ಷುವು ಬರೆದಿದ್ದಾನೆ.

ಇದೇ ವಿಧವಾಗಿ 11ನೇ ಶತಾಬ್ದಿ ಪ್ರಾರಂಭದಲ್ಲಿ ಚೋಳರಾಜನಾದ ರಾಜೇಂದ್ರ–1 ತನ್ನ ರಾಜಧಾನಿಯಲ್ಲಿ ಒಂದು ಶಿವಾಲಯವನ್ನು ನಿರ್ಮಿಸಿ ಅದರಲ್ಲಿ ಸೋತ ರಾಜರಿಂದ ತಾನು ತೆಗೆದುಕೊಂಡ ಅಥವಾ ಬಹುಮಾನವಾಗಿ ಹೊಂದಿದ ವಿಗ್ರಹಗಳಿಂದ ತುಂಬಿದನು ಅವುಗಳಲ್ಲಿ ಕೆಲವು : 1) ನಿಂತ ಸೂರ್ಯನ ಶಿಲ್ಪ ಚಾಳುಕ್ಯರ ಹತ್ತಿರದಿಂದ 2) ಗಣೇಶ ದುರ್ಗಾದೇವಿ ವಿಗ್ರಹಗಳು, ನಂದಿ ವಿಗ್ರಹ ಪೂರ್ವ ಚಾಳುಕ್ಯರ ಹತ್ತಿರದಿಂದ 3) ಭೈರವನ ಪ್ರತಿರೂಪ (ಶಿವನ ರೂಪದಲ್ಲಿ ಒಂದು) ಭೈರವಿ ವಿಗ್ರಹವನ್ನು ಒರಿಸ್ಸಾದಲ್ಲಿನ ಕಳಿಂಗ ರಾಜನ ಹತ್ತಿರದಿಂದ 4) ಕಾಳೀ ಮಾತೆ ವಿಗ್ರಹವನ್ನು ಬೆಂಗಾಲ್‌ನಲ್ಲಿನ ಪಾಲ ವಂಶೀಯರ ಹತ್ತಿರದಿಂದ ತಂದರು.

ಗಜಿನೀ ಮಹಮದ್ – ಚೋಳ ರಾಜೇಂದ್ರ–1 ರಾಜನಿಗೆ ಸಮಕಾಲಿನವನು ಭಾರತ ಉಪಖಂಡದ ಮೇಲೆ ದಂಡೆತ್ತಿದಾಗ ಸೋತು ಹೋದ ರಾಜರ ದೇವಾಲಯಗಳನ್ನು ಕೊಳ್ಳೆ ಹೊಡೆದು ಸಂಪತ್ತನ್ನು ವಿಗ್ರಹಗಳನ್ನು ದೋಚಿಕೊಳ್ಳುತ್ತಿದ್ದರು. ಗಜನಿ ಮಹಮ್ಮದ್‌ಅಂದು ಹೆಸರುವಾಸಿಯಾದ ರಾಜನಲ್ಲ ಆದರೆ ಸೋಮನಾಥ ದೇವಾಲಯದಂತಹ ದೊಡ್ಡ ದೇವಾಲಯವನ್ನು ಧ್ವಂಸ ಮಾಡಿ ಇಸ್ಲಾಂ ನಾಯಕನಾಗಿ ಪ್ರಸಿದ್ಧಿ ಹೊಂದಿದನು. ಸುಮಾರು ಮಧ್ಯಯುಗದಲ್ಲಿನ ರಾಜರೆಲ್ಲರೂ ತಮ್ಮ ರಾಜಕೀಯ ಶಕ್ತಿಯನ್ನು, ಸೈನ್ಯವನ್ನು ಪ್ರದರ್ಶಿಸಿ ಸೋತರಾಜರ ಪವಿತ್ರ ಸ್ಥಳಗಳಮೇಲೆ ದಾಳಿ ಮಾಡಿ ದೋಚಿಕೊಂಡರು.

- ರಾಜೇಂದ್ರ -1 ಮತ್ತು ಗಜನಿ ಮಹಮ್ಮದ್ ಕಾಲದ ಅವರ ವಿಧಾನಗಳ ಬಗ್ಗೆ ನೀನೇನು ಅಂದು ಕೊಳ್ಳುವೆ? ಈ ಇಬ್ಬರು ರಾಜಕಾರ್ಯಗಳಲ್ಲಿನ ವ್ಯತ್ಯಾಸಗಳೇನು?

ವಿಜಯನಗರ ರಾಜರ ಶೈಲಿ : –

ಇಡೀ ದಕ್ಷಿಣ ಭಾರತದೇಶಕ್ಕೆ ಪ್ರಧಾನ ರಾಜಧಾನಿಯಾಗಿ ವಿಜಯನಗರ ಪಟ್ಟಣವನ್ನು ವಿಜಯನಗರ ರಾಜರು ಅಭಿವೃದ್ಧಿ ಮಾಡಿದರು. ಇವರು ಪ್ರಾಚೀನ ಭವನ ನಿರ್ಮಾಣ ಸಂಪ್ರದಾಯಗಳನ್ನು ಇವರ ನಿರ್ಮಾಣದಲ್ಲಿ



ಚಿತ್ರ – 22.9 ಹಂಪಿಯಲ್ಲಿನ ವಿರುಪಾಕ್ಷ ದೇವಾಲಯ

SCERT TELANGANA



ಚಿತ್ರ – 22.10 (ಎ) ಪದ್ಮಮಹಲ್



ಚಿತ್ರ – 22.10 (ಬಿ) ರಾಣಿಯರ ಸ್ನಾನ ವಾಡಿಕೆ .

ಪ್ರತಿ ಬಿಂಬಿಸಿದ್ದಾರೆ. ಇವರು ಶ್ರೀ ವಿರುಪಾಕ್ಷ, ರಾಮಚಂದ್ರ, ಕೃಷ್ಣ ವಿಠಲಾಲಯಗಳನ್ನು ತಮಿಳನಾಡಿನಲ್ಲಿನ ಚೋಳ, ಪಾಂಡ್ಯ, ಚಕ್ರವರ್ತಿಗಳ ವಿಧಾನಗಳನ್ನು ಅನುಸರಿಸಿ ಅಭಿವೃದ್ಧಿಮಾಡಿದ್ದಾರೆ. ಗೋಪುರಗಳು, ಗಾಳಿ ಗೋಪುರಗಳು ಇವರ ಶಿಲ್ಪಕಲೆಯಲ್ಲಿನ ಭಾಗಗಳೇ, ರಾಯರು ಗೋಪುರಗಳ ವಿಷಯದಲ್ಲಿ ಪ್ರತ್ಯೇಕ ಶ್ರದ್ಧೆಯನ್ನು ವಹಿಸುತ್ತಿದ್ದರು. ಇದುವರೆಗೆ ಯಾರು ಕಟ್ಟದಂತಹ ಎತ್ತರದಲ್ಲಿ ಗೋಪುರಗಳನ್ನು ನಿರ್ಮಿಸಿದ್ದಾರೆ.

ಮೊದಲನೆಯ ಅಂತಸ್ತನ್ನು ಗಟ್ಟಿಯಾದ ಕಲ್ಲು (ಗ್ರಾನೈಟ್) ಕಲ್ಲಿನಿಂದ ಉಳಿದ ಅಂತಸ್ತುಗಳನ್ನು ಗಟ್ಟಿಯಾದ ಇಟ್ಟಿಗೆಯಿಂದ, ಸುಣ್ಣದಿಂದ ನಿರ್ಮಿಸಿದರು, ತನ್ನ ದರ್ಪಕ್ಕೆ ತಕ್ಕಂತೆ ರಾಜ ಗೋಪುರಗಳನ್ನು ತುಂಬಾ ಎತ್ತರವಾಗಿ ಗರ್ಭಾಲಯಗಳ ಮೇಲೆ ಇದ್ದ ಗೋಪುರಗಳನ್ನು ಚಿಕ್ಕವಾಗಿ ನಿರ್ಮಿಸಿದ್ದಾರೆ. ತುಂಬ ದೂರದಿಂದ ಕೂಡ ಈ ಎತ್ತರವಾದ ಗೋಪುರವನ್ನು ನೋಡಿದ ಕೂಡಲೆ ಇಲ್ಲಿ ದೇವಾಲಯ ಇದೆ ಎಂದು ತಿಳಿದುಕೊಳ್ಳಲು ಇವು ಸಾಮ್ರಾಜ್ಯಧಿಕಾರಿಗೆ ಪ್ರತೀಕಗಳಾಗಿ ಇರುವುದಲ್ಲದೆ ಈ ನಿರ್ಮಾಣಕ್ಕೆ ಸಹಕರಿಸುವ ಸಂಪನ್ಮೂಲಗಳು, ತಾಂತ್ರಿಕ ನೈಪುಣ್ಯಗಳಿಗೆ ನಿದರ್ಶನಗಳಾಗಿ ಕೂಡ ಇವೆ. ವಿಶೇಷವಾದ ಇತರ ನಿರ್ಮಾಣಗಳಲ್ಲಿ ಮುಖ್ಯವಾದ ಮಂಟಪಗಳನ್ನು ಕೈಸಾಲೆ ಬಹಳ ಉದ್ದವಾಗಿ ಕಂಬಗಳಿಂದ ಕೂಡಿ ಇರುವುದನ್ನು ಗರ್ಭಗುಡಿಯ ಸುತ್ತಲೂ ನಿರ್ಮಾಣ ಮಾಡಲಾಯಿತು. ವಿರುಪಾಕ್ಷ ದೇವಾಲಯವನ್ನು ಪರಿಶೀಲನೆ ಮಾಡೋಣ.

ವಿರುಪಾಕ್ಷ ದೇವಾಲಯ ಅನೇಕ ಶತಮಾನಗಳ ಹಿಂದೆ ನಿರ್ಮಿಸಲಾಗಿದೆ. ಅದರೆ ಮೊದಲ ವಿಗ್ರಹ ಸ್ಥಾಪನೆ ಕ್ರೀ.ಶ 9–10 ಶತಾಬ್ದಗಳ ಮಧ್ಯ ನಡೆದಿದೆಯೆಂದು ಶಾಸನಗಳು ತಿಳಿಸುತ್ತಿವೆ. ವಿಜಯನಗರ ರಾಜ್ಯ ಸ್ಥಾಪನೆಯ ನಂತರ ಈ ದೇವಾಲಯವನ್ನು ವಿಶಾಲವಾಗಿ ಬೆಳೆಸಲಾಗಿದೆ. ಮೂಲವಿರಾಟ್‌ಗೆ ಎದುರಾಗಿರುವ ವಿಶಾಲವಾದ ಕೋಣೆಯನ್ನು ಕೃಷ್ಣ ದೇವರಾಯರು ಸಿಂಹಾಸನಾರೂಢನಾದ ಸಂದರ್ಭದಲ್ಲಿ ಕಟ್ಟಿಸಿದ್ದಾನೆ. ಈ ಕೋಣೆಯು ಅಂದವಾಗಿ ಕೆತ್ತಿರುವ ಕಂಬಗಳಿಂದ ಕೂಡಿದೆ. ಪೂರ್ವ ಗೋಪುರದ ನಿರ್ಮಾಣ ಅವರ ಕಳಾ ಪೋಷಣೆಯನ್ನು ತಿಳಿಯಪಡಿಸುತ್ತದೆ. ಇದರ ಸುತ್ತಮುತ್ತ ವಿಸ್ತಾರಗೊಳಿಸಿ ಹೆಚ್ಚಿನ ಕಟ್ಟಡಗಳಿಂದ, ಗರ್ಭಾಲಯ, ಮಧ್ಯದಲ್ಲಿ ಸ್ವಲ್ಪ ಸ್ಥಳವನ್ನು ಆಕ್ರಮಿಸಿದೆಂದು ಹೇಳಬಹುದು.

ಈ ದೇವಾಲಯದಲ್ಲಿನ ವಿಶಾಲವಾದ ಕೋಣೆಗಳನ್ನು ವಿಭಿನ್ನ ಕಾರ್ಯಕ್ರಮಗಳಿಗೆ ಉಪಯೋಗಿಸುತ್ತಿದ್ದರು. ಕೆಲವು ಸ್ಥಳಗಳಲ್ಲಿ ಉತ್ಸವ ವಿಗ್ರಹಗಳನ್ನು ಇಟ್ಟು ಸಂಗೀತ, ನೃತ್ಯ, ನಾಟಕದಂತಹ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಕೆಲವು ಸ್ಥಳಗಳಲ್ಲಿ ಇತರ ಮಂಟಪಗಳನ್ನು ದೇವರ ಕಲ್ಯಾಣೋತ್ಸವಗಳಿಗೆ ಉಪಯೋಗಿಸುತ್ತಿದ್ದರು. ಇನ್ನೂ ಕೆಲವು ಮಂಟಪಗಳಲ್ಲಿ ಮೂಲ ವಿಗ್ರಹಗಳ ಪ್ರತಿರೂಪಗಳನ್ನು ಪ್ರತಿಷ್ಠಿಸುತ್ತಿದ್ದಾರೆ.

ವಿಜಯನಗರ ರಾಜರು ತಮ್ಮ ದೇವಾಲಯ ಗಳನ್ನು ಇತರ ದೇವಾಲಯಗಳ ಪದ್ಧತಿಯಲ್ಲೇ ನಿರ್ಮಿಸಿ ಲೌಕಿಕ ಕಾರ್ಯಕ್ರಮಗಳಿಗೋಸ್ಕರ ರಾಜ ಮಂದಿರಗಳನ್ನು ನಿರ್ಮಿಸಿದರು. ಇವುಗಳ ನಿರ್ಮಾಣದಲ್ಲಿ ಸುಲ್ತಾನರು ಸಾಂಕೇತಿಕ ಪರಿಜ್ಞಾನವನ್ನು ಅವರ ಪದ್ಧತಿಗಳನ್ನು ಅವಲಂಬಿಸಿದ್ದಾರೆ. ಪ್ರಸಿದ್ಧಿ ಹೊಂದಿದ ಪದ್ಮಮಹಲ್ (ಬ್ರಿಟೀಷ್ ಅವರು, ಸಂದರ್ಶಕರು ಇದನ್ನು ಹೀಗೆ ಕರೆಯುತ್ತಿದ್ದರು) ರಾಣಿಯರು ಸ್ನಾನವಾಟಿಕೆ, ಗಜಶಾಲೆ ಇದಕ್ಕೆ ಉದಾಹರಣೆಯಾಗಿ ಹೇಳಿಕೊಳ್ಳಬಹುದು ಭವನಗಳ ನಿರ್ಮಾಣದಲ್ಲಿ ಕಮಾನುಗಳು, ವೃತ್ತಾಕಾರದ ಮಾಳಿಗೆಗಳನ್ನು ನಾವು ನೋಡಬಹುದು. ಇವೆಲ್ಲ

SCERT TELANGANA

ಸುಣ್ಣದಿಂದ ತಯಾರಿಸಿದ ಲೇಪನವನ್ನು ಹಾಕಿ ಹೂಗಳ ಪಕ್ಷಿಗಳ ಆಕಾರಗಳಿಂದ ಅಲಂಕರಿಸಲಾಗಿವೆ. ಈ ರಾಜು ಪ್ರಸಾದಗಳಲ್ಲಿ ರಾಜರು ನಿವಾಸಿಸುವುದ ರಿಂದ ಅವು ಅವರ ಸಂಪತ್ತಿಗೆ ಚಿನ್ಹೆಯಾಗಿ ಇರುತ್ತ ಸುಖವಾದ ನಗರ ಜೀವನಕ್ಕೆ ನಿದರ್ಶನಗಳು ಎನ್ನುವ ಭಾವನೆಯನ್ನು ಉಂಟುಮಾಡುತ್ತಿದ್ದವು. ಆದರೆ ಇವೆಲ್ಲವು ಕೂಡ ಸುಲ್ತಾನರ ಭವನಗಳ ಹಾಗೇ ಇವೆಯಂದು ಭಾವಿಸಬಾರದು. ಇದರಲ್ಲಿ ದಕ್ಷಿಣ ಭಾರತದೇಶದ ಶಿಲ್ಪ ಸಂಪ್ರದಾಯಗಳು ಮತ್ತು ಸುಲ್ತಾನರ ಕಾಲದಲ್ಲಿದ್ದಂತಹ ಕಮಾನುಗಳು, ಗೋಳಾಕಾರದ ಮಾಳಿಗೆಗಳು ಮಿಳಿತವಾಗಿವೆ. ಈವಿಧವಾಗಿ ಸಮ್ಮೇಳನಕ್ಕೆ ರಾಜ ತನ್ನ ಸಭೆಯನ್ನು ನಿರ್ವಹಿಸುತ್ತಿದ್ದ ಪದ್ಮಮಹಲನ್ನು ಉದಾರಣೆಯಾಗಿ ಹೇಳಬಹುದು.

ವಿಜಯನಗರ ರಾಜರ ಪ್ರಸಿದ್ದ ಕಟ್ಟಡಗಳಲ್ಲಿ ಹೇಳಿಕೊಳ್ಳಬಹುದಾದುದು ಮಹಾನವಮಿದಿಬ್ಬ. 11 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ 55 ಅಡಿ ಎತ್ತರದಲ್ಲಿ ನಿರ್ಮಿಸಿದ ವೇದಿಕೆ. ಇದು 5 ಅಂತಸ್ತಿನ ಭವನಕ್ಕಿಂತ ಎತ್ತರವಾಗಿದೆ. 200ವರ್ಷಗಳಲ್ಲಿ ಕನಿಷ್ಠ ಮೂರು ಸಲವಾದರೂ ಇದರ ಎತ್ತರವನ್ನು ಹೆಚ್ಚಿಸಿರುತ್ತಾರೆ. ಈ ವೇದಿಕೆಯ ಅಂಚುಗಳಲ್ಲಿ ವಿಭಿನ್ನ ಶಿಲ್ಪಗಳನ್ನು ಕೆತ್ತಿದ್ದಾರೆ. ಈ ವೇದಿಕೆಯ ಮೇಲೆ ಯಾವುದೇ ಭವನವನ್ನು ನಿರ್ಮಿಸಲಾಗಿಲ್ಲ. ಈ ವೇದಿಕೆಯ ಮೇಲೆ ಕಟ್ಟಿಗೆ ಕಂಬಗಳಿಂದ ಹಾಕಿದ ಹಂದರವಿದೆ. ಈ ವೇದಿಕೆಯ ಮೇಲೆ ವಿಜಯನಗರ ರಾಜರು ನವರಾತ್ರಿ ಪೂಜೆ, ದಸರಾ ಉತ್ಸವಗಳನ್ನು ನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಸಾಮಂತರಾಜರು, ನಾಯಕರು, ಇತರ ಅಧಿಕಾರಿಗಳು ಚಕ್ರವರ್ತಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು ಯೂರೋಪ್ ನಿಂದ ಬಂದ ವಿದೇಶಿ ರಾಯಬಾರಿಗಳು, ಇತರ ಸುಲ್ತಾನರು ಈ ಉತ್ಸವಗಳಿಗೆ ಹಾಜರಾಗುತ್ತಿದ್ದರು.



ಚಿತ್ರ – 22.10 (ಸಿ) ಗಜಶಾಲೆ.

- ವಿಶಾಲ ಸಾಮ್ರಾಜ್ಯ ಹೊಂದಿದ ಚಕ್ರವರ್ತಿಗಳು ವಿವಿಧ ಶೈಲಿಗಳಲ್ಲಿ ನಿರ್ಮಿಸಿದ ಭವನಗಳನ್ನು ಏತಕ್ಕಾಗಿ ಉಪಯೋಗಿಸುತ್ತಿದ್ದರೆಂದು ಅಂದುಕೊಂಡಿರುವೆ ?

ಉದ್ಯಾನವನಗಳು, ಸಮಾಧಿಗಳು, ಕೋಟೆಗಳು :

ಮೊಗಲರ ಕಾಲದಲ್ಲಿ ಶಿಲ್ಪಕಲೆ ತುಂಬಾ ಪ್ರಸಿದ್ಧಿ ಹೊಂದಿತ್ತು. ಮೊಗಲ ಚಕ್ರವರ್ತಿಗಳು ಸಾಹಿತ್ಯ, ಸಂಗೀತ ನೃತ್ಯ, ಶಿಲ್ಪ ಕಲೆಗಳಲ್ಲಿ ಸ್ವತಃ ಶ್ರದ್ದೆವಹಿಸುತ್ತಿದ್ದರು ಬಾಬರನು ತನ್ನ ಸ್ವೀಯ ರಚನೆಯಲ್ಲಿ ತೋಟಗಳ ಮೇಲೆ ತನಗಿರುವ ಆಸಕ್ತಿಯನ್ನು ವಿವರಿಸಿದ್ದಾನೆ. ಉದ್ಯಾನವನಗಳನ್ನು ಆಯತಾಕಾರದಲ್ಲಿ ಕೃತ್ರಿಮವಾಗಿ ನಿರ್ಮಿಸಿದ ಕಾಲುವೆಗಳಿಂದ ನಾಲ್ಕು ಭಾಗಗಳಾಗಿ ವಿಭಜಿಸಿದ್ದು ಸುತ್ತಲು ಪ್ರಹರಿಗೋಡೆ ಇರಬೇಕೆಂದು ಬಾಬರನು ವರ್ಣಿಸಿದ್ದಾನೆ.

ಆದುದರಿಂದ ನಾಲ್ಕು ಸಮಾನ ಭಾಗಗಳಾಗಿ ಏರ್ಪಟ್ಟಿರುತ್ತದೆ. ಈ ಉದ್ಯಾನವನಗಳನ್ನು ಚಾರ್ ಬಾಗ್ ಎನ್ನುವರು. ಈ ಉದ್ಯಾನವನದ ನಿರ್ಮಾಣವು ಅಕ್ಬರ್ ನಿಂದ ಪ್ರಾರಂಭವಾದರೂ ಷಾಜಹಾನ್, ಜಹಂಗೀರ್ ನಂತಹ ಚಕ್ರವರ್ತಿಗಳು ಕಾಶ್ಮೀರ್, ಡಿಲ್ಲಿ, ಆಗ್ರಾಗಳಲ್ಲಿ ಅಂದವಾದ ಉದ್ಯಾನವನಗಳನ್ನು ನಿರ್ಮಿಸಿದರು.



ಚಿತ್ರ – 22.10(ಡಿ)
ಮಹಾನವಮಿ ದಿಬ್ಬ

SCERT TELANGANA




ಚಿತ್ರ.22.11 ಬಾಬರ್ ಕಾಬೂಲ್ ನಲ್ಲಿನ ಚಾರ್ ಬಾಗ್‌ನಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕರನ್ನು ಪರ್ಯವೀಕ್ಷಿಸುತ್ತಿದ್ದಾನೆ. ದಾರಿಗಳ ಮಧ್ಯ ಖಂಡಿಸಿಕೊಳ್ಳುವ ಕಾಲುವೆಗಳಿಗೆ ದಾರಿತೋರಿಸುತ್ತಿರುವ ದೃಶ್ಯ.



ಚಿತ್ರ. 22.12 ಹುಮಾಯೂನ್ ಸಮಾಧಿ ಅಂದಿನ ನೀರು ಕಾಲುವೆಗಳನ್ನು ಗಮನಿಸಿರಿ.

ಅಕ್ಬರನ ಕಾಲದಲ್ಲಿ ಅನೇಕ ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಅಕ್ಬರ್ ನಿರ್ಮಿಸಿದ ಸಮಾಧಿಗಳು ಮಧ್ಯ ಆಸಿಯಾದವನಾದ ತೈಮೂರು ನಿರ್ಮಿಸಿದ ಕಟ್ಟಡಗಳನ್ನು ಹೋಲಿವೆ. ಮೊಗಲರು ನಿರ್ಮಾಣದಲ್ಲಿ ಮಧ್ಯ ಗೋಪುರಗಳ ಮೇಲೆ ನಿರ್ಮಿಸಿದ ಗೋಳಾಕಾರದ ಮಾಳಿಗೆಯನ್ನು ಎತ್ತರವಾದ, ಅಗಲವಾದ ಮುಖದ್ವಾರಗಳನ್ನು ಮುಖ್ಯ ಲಕ್ಷಣಗಳಾಗಿ ಹೇಳಿಕೊಳ್ಳ ಬಹುದು. ಹುಮಾಯೂನ್ ಸಮಾಧಿಯ ಮೇಲೆ ಇವನ್ನು ನೋಡಬಹುದು. ಇದುವಿಶಾಲ ಚಾರ್ ಬಾಗ್ ಉದ್ಯಾನವನದ ಮಧ್ಯದಲ್ಲಿ ಸಂಪ್ರದಾಯಬದ್ಧವಾಗಿ ನಿರ್ಮಿತವಾಗಿದೆ. ಇದನ್ನು "ಅಷ್ಟ ಬಿಹಿಷ್ಟ್" (8 ಸ್ವರ್ಗಗಳು) ಎಂದು ಕರೆಯುತ್ತಾರೆ. ಏಕೆಂದರೆ ಮಧ್ಯದಲ್ಲಿ ದೊಡ್ಡ ಕೊಠಡಿ ಇದ್ದು ಸುತ್ತಲು 8 ಕೊಠಡಿಗಳು ಇರುತ್ತವೆ. ಈ ಕಟ್ಟಡವನ್ನು ಕೆಂಪುಕಲ್ಲಿನಿಂದ ನಿರ್ಮಿಸಿ ಅಂಜುಗಳು ಅಮೃತ ಶಿಲೆಯಿಂದ ಕಟ್ಟಲಾಗಿದೆ.

ಷಾಜಹಾನ್‌ನ ಕಾಲದಲ್ಲಿ ಅನೇಕ ಶಿಲ್ಪ, ವಾಸ್ತು ರೀತಿಗಳಿಂದ ಮಿಳಿತ ಮಾಡಿದ ಹೊಸವಾಸ್ತು ಭವನಗಳನ್ನು ನಿರ್ಮಿಸಲಾಗಿದೆ (ದಿವಾನ್–ಇ–ಖಾಸ್ ಅಥವಾ ಅಮ್) ಈ ರಾಜಪ್ರಸಾದವನ್ನು ಚಿಹಿಲ್ ಸುತುನ್ ಅಥವಾ ನಲವತ್ತು ಕಂಬಗಳ ವಿಶಾಲವಾದ ಕೊಠಡಿ ಎನ್ನುವರು. ಈತನ ಪಾಲನೆಯಲ್ಲಿ ಡಿಲ್ಲಿ, ಆಗ್ರಾದಲ್ಲಿ ಬೃಹತ್ ನಿರ್ಮಾಣಗಳು ಮಾಡಲಾಯಿತು. ಪ್ರಭುತ್ವಾಧಿಕಾರಿಗಳಿಗೆ, ಸಂದರ್ಶಕರಿಗಾಗಿ ರಾಜಪ್ರಸಾದವನ್ನು ಯೋಜನಾ ಬದ್ಧವಾಗಿ ನಿರ್ಮಿಸಿದನು. ಷಾಜಹಾನ್ ಸಂದರ್ಶಕರಿ ಗೋಸ್ಕರ ನಿರ್ಮಿಸಿದ ವಿಶಾಲವಾದ ಕೊಠಡಿ ಮಸೀದಿ ಯನ್ನು ಹೋಲಿರುತ್ತದೆ. ರಾಜನ ಸಿಂಹಾಸನದ ಕೆಳಗೆ ಇರುವ ಕಂಬವನ್ನು ಪವಿತ್ರವಾದ "ಕಿಬ್ಲಾ" ಆಗಿ ಭಾವಿಸು ತ್ತಿದ್ದರು ಏಕೆಂದರೆ ಮುಸ್ಲಿಂರು ಪ್ರಾರ್ಥನ ಸಮಯದಲ್ಲಿ ನೋಡುವ ದಿಕ್ಕು ಮಕ್ಕಾದ ಕಡೆಗೆ ಇರುತ್ತದೆ.



ಚಿತ್ರ .22.13 ಆಗ್ರದಲ್ಲಿನ ನದಿಯ ಮುಂದಿರುವ ನದೀ ಮುಖ ಉದ್ಯಾನವನ ಪುನರ್ ನಿರ್ಮಾಣದಲ್ಲಿರುವ ಭಾಗದ ಚಿತ್ರ ಪಟ. ಪ್ರಮುಖರ ಉದ್ಯಾನವನಗಳು ಭವನಗಳು ಯಮುನಾ ನದಿಯ ತೀರಕ್ಕೆ ಎರಡೂ ಕಡೆ ನಿರ್ಮಿತವಾಗಿವೆ. ಇದರ ಎಡಗಡಿಗೆ ತಾಜ್ ಮಹಲ್ ಇರುತ್ತದೆ.

SCERT TELANGANA



ಚಿತ್ರ - 22.14 ಆಗ್ರಾದಲ್ಲಿನ ತಾಜ್ ಮಹಲ್


ಅದ್ದರಿಂದ ಎಲ್ಲರು ರಾಜನಸಭೆ ನಡೆಯುವಾಗ ಅದೇ ದಿಕ್ಕಿಗೆ ತಿರುಗಿರುತ್ತಾರೆ. ಇದರಿಂದ ರಾಜನು ಭೂಮಿಯ ಮೇಲೆ ಭಗವಂತನ ಪ್ರತಿ ನಿಧಿ ಎಂದು ತಿಳಿಸುವುದಕ್ಕೆ ಹೀಗೆ ಕಟ್ಟಿರುತ್ತಾರೆಂದು ತಿಳಿಯಬಹುದು. ಇದನ್ನು ಅವರ ವಾಸ್ತುಶಿಲ್ಪ ಕಲೆಗಳಲ್ಲಿನ ವಿಶೇಷವಾದ ಲಕ್ಷಣವಾಗಿ ಹೇಳಬಹುದು.

ಡಿಲ್ಲಿಯ ಕೆಂಪು ಕೋಟೆಯಲ್ಲಿ ಷಾಜಹಾನ್ ನೂತನವಾಗಿ ನಿರ್ಮಿಸಿದ ನ್ಯಾಯಸ್ಥಾನ ರಾಜನು ನ್ಯಾಯಕ್ಕೆ, ಸಾಮ್ರಾಜ್ಯದ ಆಸ್ಥಾನಕ್ಕೆ ಮಧ್ಯ ಇರುವ ಸಂಬಂಧವನ್ನು ಎತ್ತಿತೋರಿಸುತ್ತದೆ. ಸಭಾಂಗಣದಲ್ಲಿ ರಾಜನ ಸಿಂಹಾಸನದ ಹಿಂದೆ ದೈವಸಂಬಂದಿತ ಪಿಟ್ರಾಡೂರಾ ಚಿತ್ರಗಳ ಗ್ರೀಕ್ ದೇವನಾದ ಆರ್ಫಿಯಸ್ ಗಿಟಾರ್ ವಾದ್ಯ ನುಡಿಸುವ ಚಿತ್ರ ಇದೆ. ಆರ್ಫಿಯಸ್‌ನ ಸಂಗೀತದಿಂದ ಕ್ರೂರ ಪ್ರಾಣಿಗಳು ಭೇದಗಳು ಮರೆತು ಹೊಂದಿ ಶಾಂತಿಯುತವಾಗಿ ಕಲೆತಿರುವಂತೆ ಮಡಿದೆಯೆಂದು ನಂಬಿಕೆ. ಷಾಜಹಾನ್ ಸಭಾಂಗಣವು ರಾಜನು ಮಾಡುವ ನ್ಯಾಯ ಬಡವರಿಗೆ, ಧನಿಕರಿಗೆ ಸಮಾನವಾಗಿ ಪರಿಗಣಿಸುತ್ತದೆಂದು, ಅವರು ಶಾಂತಿಯುತವಾಗಿ ಜೀವಿಸಬೇಕೆಂದು ತಿಳಿಸುವಂತೆ ನಿರ್ಮಾಣ ಮಾಡಲಾಗಿದೆ.

ಷಾಜಹಾನ್ ಪರಿಪಾಲನೆಯ ಕಾಲದಲ್ಲಿ ರಾಜಧಾನಿ ನಗರವಾದ ಆಗ್ರದಲ್ಲಿ ಪ್ರಮುಖರು ಅವರ ಮನೆಗಳನ್ನು ಯಮುನ ನದಿ ತೀರದಲ್ಲಿ ನಿರ್ಮಿಸಿಕೊಂಡಿದ್ದಾರೆ. ಈ ಗೃಹಗಳು ಚಾರ್ ಬಾಗ್ ಮಧ್ಯದಲ್ಲಿ ಇರುವಂತೆ ನಿರ್ಮಿಸಲಾಗಿದೆ. ಚರಿತ್ರ ಕಾರರು ಈ ಚಾರ್‌ಬಾಗನ್ನು ನದೀಮುಖ ಉದ್ಯಾನವನ್ನಾಗಿ ವರ್ಣಿಸಿದ್ದಾರೆ. ಇದರೊಳಗಿನ ನಿವಾಸ ಸ್ಥಳಗಳು ಚಾರ್ ಬಾಗ್ ಮಧ್ಯದಲ್ಲಲ್ಲದೆ ನದಿಯ ತೀರಕ್ಕೆ ಹತ್ತಿರ ಉದ್ಯಾನವನದ ಕೊನೆಗೆ ನಿರ್ಮಿಸಲಾಗಿವೆ.

ಪ್ರಪಂಚ ಖ್ಯಾತಿ ಹೊಂದಿದ ತಾಜ್ ಮಹಲ್ ಅನ್ನು ಷಾಜಹಾನ್ ಯಮುನಾನದಿಯ ಎದುರಿಗೆ ಇರುವ ಉದ್ಯಾನವನದಲ್ಲಿ ನಿರ್ಮಿಸಿದ್ದಾರೆ. ಇಲ್ಲಿ ನದಿಯ ತೀರದಲ್ಲಿ ಎತ್ತರದ ವೇದಿಕೆಯ ಮೇಲೆ ಅಮೃತ ಶಿಲೆಯಿಂದ ನಿರ್ಮಿಸಿದ ಸಮಾಧಿ ಇದೆ. ಇದೇ ಇಂದಿಗೂ ಪ್ರಪಂಚ ಪ್ರಸಿದ್ದಿ ಹೊಂದಿದ ತಾಜ್ ಮಹಲ್. ಚಾರ್ ಬಾಗ್ ಮಾದರಿ ಉದ್ಯಾನವನ ಇದರ ದಕ್ಷಿಣಕ್ಕೆ ಇದೆ. ಉನ್ನತ ವಂಶಸ್ಥರು ನದಿಗೆ ಹೋಗುವ ದಾರಿಯ ಮೇಲೆ ನಿಯಂತ್ರಣ ಸಾಧಿಸುವುದಕ್ಕೆ ಇಂತಹ ನಿರ್ಮಾಣ ವಿಧಾನವನ್ನು ಅವಲಂಭಿಸಿರುತ್ತಾರೆ. ಡಿಲ್ಲಿಯಲ್ಲಿ ಹೊಸದಾಗಿ ಕಟ್ಟಿದ ಷಾಜಹಾನಾಬಾದ್ ನಗರದಲ್ಲಿ ಕೂಡ ನಿರ್ಮಿಸಿದ ರಾಜ ಭವನ ನದಿಗೆ ಅಭಿಮುಕವಾಗಿ ಇದೆ. ಷಾಜಹಾನ್ ದೊಡ್ಡ ಮಗನಾದ ದಾರಾಷುಕೋ ನಂತಹ ಪ್ರಮುಖರಿಗೆ ಮಾತ್ರವೇ ನದಿಯನ್ನು ಉಪಯೋಗಿಸುವ ಹಕ್ಕಿತ್ತು. ಉಳಿದವರು ತಮ್ಮ ಮನೆಗಳನ್ನು ಯಮುನಾ ನದಿಗೆ ದೂರವಾಗಿ ಇರುವ ನಗರದಲ್ಲಿ ಕಟ್ಟಿಕೊಂಡಿದ್ದರು.

- ನೀನು ನಿರ್ಮಾಣವೃತ್ತಿ ಕಲಾಕಾರನೆಂದುಕೋ ! ಬಿದಿರು ಕಟ್ಟಿಗೆಗಳನ್ನು ಹಗ್ಗಗಳಿಂದ ಕಟ್ಟಿ ಇರುವ ತಡಿಕೆಯನ್ನು ತಯಾರಿಸಿ. ಭೂಮಿಯಿಂದ 50 ಮೀ ಎತ್ತರದಲ್ಲಿದ್ದು ಕೆಲಸಮಾಡುತ್ತಿದ್ದೀಯ ಕುತುಬ್ ಮಿನಾರ್‌ನಲ್ಲಿಯ ಮೊದಲ ಅಂತಸ್ತಿನ ಕೆಳಗೆ ಒಂದು ಶಾಸನವನ್ನು ಇರಿಸಬೇಕು. ನೀನು ಅದನ್ನು ಹೇಗೆ ಇಡಬಲ್ಲಿಯೋ ವಿವರಿಸು.



ಚಿತ್ರ – 22.15 ಜೋದಾಬಾಯಿ ರಾಜಮಂದಿರದ ಫತೇಘರ್‌ಸಿಕ್ರೀ ಮಾಳಿಗೆಯನ್ನು ಅಲಂಕರಿಸಿದ ಕಂಬಗಳಿಂದ ಇದೆ ಇದು ಗುಜರಾತ್ ನಿರ್ಮಾಣ ಸಂಸ್ಕೃತಿಯನ್ನು ತಿಳಿಯ ಪಡಿಸುತ್ತದೆ.

SCERT TELANGANA

ಸುಮಾರು ಇದೇ ಸಮಯದಲ್ಲಿ ಗೋಲ್ಕೊಂಡ ಪಾಲಕರಾದ ಕುತುಬ್ ಷಾಹಿಗಳು ಕೂಡ ಮೋಘಲರ ಮಾದರಿಯಲ್ಲಿ ಹೈದರಾಬಾದಿನಲ್ಲಿ ಹುಸೇನ್ ಸಾಗರ್, ಗೋಲ್ಕೊಂಡ ಕೋಟೆ, ಫೌಂಟೇನ್‌ಗಳು, ಜಲ ಮಾರ್ಗಗಳಿರುವ ಬಹಳಷ್ಟು ಉದ್ಯಾನವನಗಳು, ಸುಂದರವಾದ ಸಮಾಧಿಗಳು ಮೊದಲಾದ ವಿಶಾಲ ಭವನ ನಿರ್ಮಾಣ ಕಾರ್ಯ ಕಲಾಪಗಳನ್ನು ಕೈಗೊಂಡರು ಈ ಕಟ್ಟಡಗಳಲ್ಲಿ ಪರ್ಷಿಯನ್ನರ, ಮೋಘಲರ ದಖ್ಖನ್ನರ ನಿರ್ಮಾಣ ಶೈಲಿಗಳು ಮಿಳಿತಗೊಂಡಿವೆ. ಪ್ರಸಿದ್ಧ ಕಟ್ಟಡಗಳಾದ ಚಾರ್ಮಿನಾರ್, ಮಕ್ಕಾ ಮಸೀದುಗಳನ್ನು ಇವರೇ ಕಟ್ಟಿಸಿದ್ದಾರೆ.



ಚಿತ್ರ – 22.16(ಎ) ಹಯತ್ ಭಕ್ಷಿ ಬೇಗಂ ಸಮಾಧಿ



ಚಿತ್ರ – 22.16 ಕುತುಬ್ ಷಾಹಿ ಸಮಾಧಿಗಳ ದೃಶ್ಯ



ಚಿತ್ರ – 22.16 (ಬಿ) ಕುತುಬ್ ಷಾಹಿ ಸಮಾಧಿಗಳ ನಿರ್ಮಾಣ ಶೈಲಿ

ಮುಖ್ಯ ಪದಗಳು :

1) ಶಾಸನಗಳು 2) ಸ್ಮಾರಕ ಕಟ್ಟಡಗಳು 3) ರಾಜವಂಶ 4) ನಿರ್ಮಾಣ ಶಿಲ್ಪ ಕಲೆ 5) ಪಟ್ಟಾಭಿಷೇಕ ಮಹೋತ್ಸವ

ನಿಮ್ಮ ಅಭ್ಯಸವನ್ನು ಅಭಿವೃದ್ಧಿ ಪಡಿಸಿಕೊಳ್ಳಿ :

1) ನಿರ್ಮಾಣ ಕ್ರಮದಲ್ಲಿ ಟ್ರಾಬೀಟ್ ಸೂತ್ರಕ್ಕೆ, ಆರ್ಕುಯೇಟ್ ಸೂತ್ರಕ್ಕೆ ಇರುವ ವ್ಯತ್ಯಾಸಗಳೇನು ?

2) ಶಿಖರ ಎಂದರೇನು ?

3) ಮೊಗಲರು ಉದ್ಯಾನವನಗಳಲ್ಲಿನ ಚಾರ್‌ಬಾಗ್‌ನ ಮುಖ್ಯ ಲಕ್ಷಣಗಳೇನು?

4) ರಾಜರ ಪ್ರಾಮುಖ್ಯತೆಯನ್ನು ದೇವಾಲಯ ಹೇಗೆ ತಿಳಿಯ ಪಡಿಸುತ್ತದೆ ?

5) ಪುಟ 198ರಲ್ಲಿನ ಎರಡನೆ ಪ್ಯಾರ ಓದಿ ವ್ಯಾಖ್ಯಾನಿಸಿರಿ.

6) ನಿಮ್ಮ ಗ್ರಾಮದಲ್ಲಿನ ಅಥವಾ ಪಟ್ಟಣದಲ್ಲಿ ಯಾರದಾದರೂ ವಿಗ್ರಹವಾಗಲಿ ಅಥವಾ ಅವರ ಜ್ಞಾಪಕಾರ್ಥವಾಗಿ ಕಟ್ಟಿರುವ ಕಟ್ಟಡವಾಗಲಿ ಇದೆಯಾ ? ಅದನ್ನು ಏಕೆ ನಿರ್ಮಿಸಿದ್ದಾರೆ ? ಅದರಿಂದ ಲಾಭಗಳೇನು ?

7) ನಿಮ್ಮ ಪ್ರಾಂತದಲ್ಲಿ ಯಾವುದಾದರೂ ಒಂದು ಪಾರ್ಕ ಆಗಲಿ, ಉದ್ಯಾನವನವನ್ನಾಗಲಿ, ಸಂದರ್ಶಿಸಿ ಮೊಗಲರ ಕಾಲದಲ್ಲಿನ ಉದ್ಯಾನವನಗಳಿಗೂ ಇವುಗಳಿಗಿರುವ ಹೋಲಿಕೆಗಳು ವ್ಯತ್ಯಾಸಗಳನ್ನು ಗುರ್ತಿಸಿರಿ.

8) ಭಾರತ ದೇಶದ ನಕ್ಷೆಯಲ್ಲಿ ಈ ಕೆಳಗಿನ ಪ್ರದೇಶಗಳನ್ನು ಗುರ್ತಿಸಿರಿ.

ಅ) ಡಿಲ್ಲಿ ಆ) ಆಗ್ರಾ ಇ) ಅಮೃತ್‌ಸರ್ ಈ) ತಂಜಾವೂರು ಉ) ಹಂಪಿ ಊ) ಯಮುನಾ ನದಿ

SCERT TELANGANA

ಶೈಕ್ಷಣಿಕ ಪ್ರಮಾಣಗಳು

ಪಠ್ಯಪುಸ್ತಕದಲ್ಲಿ ನೀಡಿದ ಸಮಾಚಾರವನ್ನು ವಿದ್ಯಾರ್ಥಿಗಳು ನಿಶ್ಚಿತವಾಗಿ ಗ್ರಹಿಸುವುದಕ್ಕೆ ಸಾಕಷ್ಟು ಸಮಯವನ್ನು ಉಪಯೋಗಿಸಬೇಕು. ಪಾಠದ ಮಧ್ಯದಲ್ಲಿ ಬರುವ ಪ್ರಶ್ನೆಗಳು ಉಪಯೋಗವಾಗುತ್ತವೆ. ಈ ಪ್ರಶ್ನೆಗಳು ವಿವಿಧ ರೀತಿಯಲ್ಲಿದ್ದು, ಅವು ಕಾರಣ ಕೊಡುವ ಅಂಶಗಳು ಮತ್ತು ಪರಿಣಾಮ ಕೊಡುವ ಅಂಶಗಳು. ನ್ಯಾಯ ನಿರ್ಧರಿಸುವವುಗಳು ಮೈಂಡ್‌ಮ್ಯಾಪಿಂಗ್, ಭಾವನೆಗಳ ನಕ್ಷೆ, ಪರಿಶೀಲನೆ, ವಿಭಜನೆ, ಆಲೋಚನೆ ಮತ್ತು ಊಹೆ ಪ್ರತಿಫಲ ಭಾಷಾಂತರ ಮಾಡುವಂತಹ ಇತ್ಯಾದಿ ಪ್ರಶ್ನೆಗಳನ್ನು ಒಳಗೊಂಡಿವೆ. ಪ್ರತಿ ಪಾಠದಲ್ಲಿರುವ ಮುಖ್ಯ ಭಾವನೆಗಳು ಉಪಭಾವನೆಗಳನ್ನು ಉದಾಹರಣೆ ಮೂಲಕ ಚರ್ಚಿಸಿ ಮತ್ತು ಮುಖ್ಯ ಪದಗಳ ಮಾದರಿಗಳನ್ನು ಕೊಡಲಾಗಿದೆ.

1) ವಿಷಯಾವಗಾಹನೆ :

ಪ್ರಶ್ನಿಸುವುದು, ಚರ್ಚಿಸುವುದು, ಸಮಾಲೋಚನೆ, ವ್ಯಕ್ತಿ ಅಧ್ಯಯನದ ಮೂಲಕ ಉದಾಹರಣೆಗಳು, ವ್ಯಾಖ್ಯಾನಿಸುವುದು, ಪರಿಶೀಲಿಸುವಂತಹವುಗಳು, ಇದರ ಮೂಲಕ ಮುಖ್ಯವಾದ ಭಾವನೆಗಳನ್ನು ಕಲಿಕೆಯನ್ನು ಪ್ರೋತ್ಸಾಹಿಸಬಹುದು.

2) ಪಠ್ಯಕ್ರಮವನ್ನು ಓದಿದ್ದನ್ನು ಅರ್ಥೈಸಿಕೊಳ್ಳುವುದು ಮತ್ತು ವ್ಯಕ್ತಪಡಿಸುವುದು:

ವಿಶೇಷವಾಗಿ ರೈತರು ಕಾರ್ಮಿಕರ ಬಗ್ಗೆ ವ್ಯಕ್ತಿಗಳ ಅಧ್ಯಯನ, ಪಠ್ಯಪುಸ್ತಕದಲ್ಲಿ ಉಪಯೋಗಿಸಿದ ಕೆಲವು ಚಿತ್ರಗಳಂತಹ ನೇರವಾಗಿ ಭಾವನೆಗಳನ್ನು ತಿಳಿಯಪಡಿಸವು, ಮುಖ್ಯ ಭಾವನೆಗಳನ್ನು ವಿದ್ಯಾರ್ಥಿಗಳು ಗ್ರಹಿಸಿವುದಕ್ಕೆ , ಚಿತ್ರಗಳನ್ನು ವ್ಯಾಖ್ಯಾನಿಸುವುದಕ್ಕೆ ಸಾಕಷ್ಟು ಸಮಯವನ್ನು ನಿಗದಿಪಡಿಬೇಕು.

3) ಸಮಾಚಾರ ಕೌಶಲ್ಯಗಳು :

ಸಮಾಜಶಾಸ್ತ್ರ ಪಠ್ಯಪುಸ್ತಕ ಸಮಾಜದ ಎಲ್ಲಾ ಅಂಶಗಳನ್ನು ಸಂಗ್ರಹಿಸಲಾಗುವುದಿಲ್ಲ. ಉದಾಹರಣೆಗೆ ನಗರದಲ್ಲಿ ವಾಸಿಸುವ ವಿದ್ಯಾರ್ಥಿಗಳು ಸಾರ್ವಜನಿಕ ಆಸ್ತಿ ಬಗ್ಗೆ ಹಾಗೂ ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾರ್ಥಿಗಳು ತಮ್ಮ ಪ್ರಾಂತದಲ್ಲಿ ಕುಡಿಯುವ ನೀರಿನ ಸೌಕರ್ಯ, ಕೆರೆಗಳ ಬಗ್ಗೆ ಸಮಾಚಾರವನ್ನು ಸಂಗ್ರಹಿಸಬಹುದು. ವಿದ್ಯಾರ್ಥಿಗಳು ಶೇಖರಿಸಿದ ಸಮಾಚಾರವನ್ನು ಪಠ್ಯಪುಸ್ತಕದಲ್ಲಿರುವುದರೊಂದಿಗೆ ಪೂರ್ತಿಯಾಗಿ ಸರಿಹೊಂದದೆ ಇರಬಹುದು, ಇದನ್ನು ವಿವರಿಸಬೇಕು. ಪ್ರಾಜೆಕ್ಟ್‌ಗಳ ಮೂಲಕ ವಿದ್ಯಾರ್ಥಿಗಳು ಶೇಖರಿಸಿದ ಸಮಾಚರವನ್ನು ತಿಳಿಯಪಡಿಸುವುದು ಸಹ ಒಂದು ಮುಖ್ಯವಾದ ಕೌಶಲ್ಯ. ಉದಾಹರಣೆಗೆ ಒಂದು ಕೆರೆಯ ಬಗ್ಗೆ ಸಮಾಚಾರವನ್ನು ಶೇಖರಿಸಿದ್ದರೆ ಅದನ್ನು ಲಿಖಿತ ರೂಪದೊಂದಿಗೆ ಒಂದು ಚಿತ್ರವೋ, ನಕ್ಷೆಯೋ ಜೋಡಿಸಬೇಕು ಅಂದುಕೊಳ್ಳಬಹುದು ಇಲ್ಲವೇ ಸಮಾಚಾರವನ್ನು ಪೊಸ್ಟರ್‌ಗಳು, ಚಿತ್ರಗಳ ರೂಪದಲ್ಲಿ ಪ್ರದರ್ಶಿಸಬಹುದು. ಸಮಾಚಾರ ಶೇಖರಣೆ, ದಾಖಲೆಗಳು/ಪಟ್ಟಿಕೆಗಳಲ್ಲಿ ಕೂಡ್ರೀಕರಿಸುವುದು, ವಿಶ್ಲೇಷಣೆ, ನಿರ್ಧರಣೆಯಂತಹ ಸಮಾಚಾರ ಕೌಶಲ್ಯಗಳ ಕೆಳಗೆ ಬರುತ್ತವೆ, ಪ್ರಾಜೆಕ್ಟ್ ಕೆಲಸಗಳನ್ನು ನಿರ್ವಹಿಸಬೇಕು.

4) ಸಮಕಾಲಿನ ಅಂಶಗಳ ಮೇಲೆ (ಸಾಮಾಜಿಕ, ಸಾಂಘಿಕ) ಪ್ರತಿಸ್ಪಂದನೆ – ಪ್ರಶ್ನಿಸುವುದು :

ವಿಧ್ಯಾರ್ಥಿಗಳಿಂದ ತಮ್ಮ ಜೀವನ ವಿಧಾನಗಳನ್ನು ವಿವಿಧ ಕಾಲದಲ್ಲಿನ, ವಿವಿಧ ಪ್ರಾಂತದಲ್ಲಿರುವ ಪ್ರಜೆಗಳ ಜೀವನ ವಿಧಾನಗಳೊಂದಿಗೆ ಹೊಂದಿಸಿ, ವ್ಯತ್ಯಾಸಗಳಿಗೆ ಕೆಲವು ಕಾರಣಗಳನ್ನು ಸೂಚಿಸಬೇಕು, ನಿರ್ಧಾರಿಸಬೇಕು ಮತ್ತು ಅವನ ಮೇಲೆ ವ್ಯಾಖ್ಯಾನಿಸುವಂತೆ ಪ್ರೋತ್ಸಾಹಿಸಬೇಕು.

5) ನಕ್ಷೆ ಕೌಶಲ್ಯಗಳು :

ಈ ಪಠ್ಯ ಪುಸ್ತಕದಲ್ಲಿನ ವಿವಿಧ ರೀತಿಯ ನಕ್ಷೆಗಳು ಮತ್ತು ಚಿತ್ರಗಳಿವೆ. ಒಂದು ಪ್ರದೇಶಕ್ಕೆ ಸಂಭಂಧಿಸಿದ ಅಮೂರ್ತ ನಕ್ಷೆಯ ಅಧ್ಯಯನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಮುಖ್ಯ. ಈ ಕೌಶಲ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವುದರಲ್ಲಿ ಅನೇಕ ಹಂತಗಳಿವೆ. ತರಗತಿಕೋಣೆ ನಕ್ಷೆ ತಯಾರಿಸುವುದು, ನಕ್ಷೆಯಲ್ಲಿ ದೂರ ಮತ್ತು ಎತ್ತರಗಳನ್ನು ಸೂಚಿಸುವ ವಿಧಾನವನ್ನು ಅರ್ಥಮಾಡಿಕೊಳ್ಳುವುದು, ಈ ಪಠ್ಯಪುಸ್ತಕದಲ್ಲಿ ಚಿತ್ರಗಳು, ಪೊಸ್ಟರ್‌ಗಳು, ಫೋಟೋಗಳನ್ನು ಉಪಯೋಗಿಸಿದ್ದೇವೆ. ಪುಸ್ತಕವನ್ನು ಅಂದವಾಗಿ ರಚಿಸುವುದಕ್ಕಾಗಿ ಅಲ್ಲದೇ ಇವುಗಳನ್ನು, ಪಾಠ್ಯಾಂಶಕ್ಕೆ ಸಂಬಂಧವಿದೆ. ಕೆಲವು ಬಾರಿ ಇವುಗಳಿಗೆ ಸಂಬಂಧಿಸಿದ ಕೆಲವು ಚಟುವಟಿಕೆಗಳು ಸಹ ಇವೆ. ಉದಾಹರಣೆಗೆ ಚಿತ್ರಕ್ಕೆ ಶೀರ್ಷಿಕೆ ಬರೆಯುವುದು, ಕಟ್ಟಡ ನಿರ್ಮಾಣ ಚಿತ್ರಗಳನ್ನು ಓದುವುದು ಮುಂತಾದವು.

6) ಪ್ರಶಂಸೆ, ಸೂಕ್ಷ್ಮತೆ :

ವಿವಿಧ ಭಾಷಾ ಸಂಸ್ಕೃತಿ, ಕುಲ, ಮತ, ಲಿಂಗಬೇಧವಂತಹ ವಿಷಯಗಳಲ್ಲಿ ನಮ್ಮ ದೇಶದಲ್ಲಿ ಎಷ್ಟೋ ವೈವಿಧ್ಯತೆ ಇದೆ. ಸಮಾಜ ಶಾಸ್ತ್ರವು ಈ ಭಿನ್ನತೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿ, ಈ ವ್ಯತ್ಯಾಗಳ ಬಗ್ಗೆ ಸೂಕ್ಷ್ಮವಾಗಿ ಇರಬೇಕಾಗಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

SCERT TELANGANA

ಅನುಬಂಧ

ಈ ಹೆಚ್ಚಿನ ಮಾಹಿತಿ ಮತ್ತು ಪಟಗಳನ್ನು ಅಗತ್ಯವಾದ ಸಂದರ್ಭಗಳಲ್ಲಿ ಉಪಯೋಗಿಸಿರಿ.

ಪ್ರಪಂಚ ರಾಜಕೀಯ ನಕ್ಷೆ




SCERT TELANGANA

ಭಾರತ ದೇಶದ ನೈಸರ್ಗಿಕ ಸ್ವರೂಪ ನಕ್ಷೆ




SCERT KARNATAKA




SOFTTELANGANA

ಖಾಲಿ ನಕಾಶೆ ಸಂ



SCERT TELANGANA

ತೆಲಂಗಾಣ ರಾಜಕೀಯ ನಕ್ಷೆ



SCERT TELANGANA

ತೆಲಂಗಾಣ ರಾಜ್ಯ ಚಿಹ್ನೆಗಳು

ಕ್ರ.ಸಂ.	ರಾಜ್ಯ ಚಿಹ್ನೆ	ಸಾಮಾನ್ಯ ಹೆಸರು	ತೆಲಗು ಹೆಸರು
1.	ರಾಜ್ಯ ಪ್ರಾಣಿ	ಜಿಂಕೆ	ಜಿಂಕ
2.	ರಾಜ್ಯ ಪಕ್ಷಿ	ಹಾಲ ಹಕ್ಕಿ	ಪಾಲ ಪಿಟ್ಟ
3.	ರಾಜ್ಯ ಮರ	ಬನ್ನಿ ಮರ	ಜಮ್ಮಿ ಚೆಟ್ಟು
4.	ರಾಜ್ಯ ಹೂ	ಅವರೆ ಹೂ	ತಂಗೇಡು ಪುಷ್ಪ


ರಾಜ್ಯ ಪ್ರಾಣಿ


ರಾಜ್ಯ ಪಕ್ಷಿ


ರಾಜ್ಯ ಮರ


ರಾಜ್ಯ ಪುಷ್ಪ


ರಾಜ್ಯ ಮುದ್ರೆ

ರಾಷ್ಟ್ರ ಧ್ವಜ:
ರೂಪಕರ್ತ:
ಪಿಂಗಳಿ ವೆಂಕಯ್ಯ



ರಾಷ್ಟ್ರೀಯ ರಾಜ್ಯ ಮುದ್ರೆ: ಸಾರನಾಥದಲ್ಲಿನ ಅಶೋಕನ ಧರ್ಮ ಸ್ಥೂಪದಲ್ಲಿಯ ಮೂರು ಸಿಂಹಗಳನ್ನು ತೆಗೆದುಕೊಳ್ಳಲಾಗಿದೆ





ರಾಷ್ಟ್ರೀಯ ವೃಕ್ಷ: ಆಲದ ಮರ

ರಾಷ್ಟ್ರೀಯ ಹೂ: ತಾವರೆ ಹೂ





ರಾಷ್ಟ್ರೀಯ ಭಾಷೆ: ಹಿಂದಿ



ರಾಷ್ಟ್ರೀಯ ಹಣ್ಣು: ಮಾವಿನ ಹಣ್ಣು



ರಾಷ್ಟ್ರೀಯ ನದಿ: ಗಂಗಾ



ರಾಷ್ಟ್ರೀಯ ಪ್ರಾಣಿ: ರಾಯಲ್ ಬೆಂಗಾಲ್ ಹುಲಿ





ರಾಷ್ಟ್ರೀಯ ಪಕ್ಷಿ: ನವಿಲು

ರಾಷ್ಟ್ರ ಗೀತೆ: ರವೀಂದ್ರನಾಥ್ ಠಾಗೂರ್



ರಾಷ್ಟ್ರ ಪ್ರಾರ್ಥನೆ: ವಂದೇ ಮಾತರಂ, ಬಂಕಿಂ ಚಂದ್ರ ಚಟರ್ಜಿ



ರಾಷ್ಟ್ರ ಜಲಚರ ಪ್ರಾಣಿ: ಡಾಲ್ಫಿನ್

ಭಾರತ ರಾಷ್ಟ್ರೀಯ ಪಂಚಾಂಗ(ಶಕ ಪಂಚಾಂಗ)

ಕ್ರ. ಸಂ.	ತಿಂಗಳು	ಆರಂಭವಾಗುವ ದಿನ		ಋತು	ಕಾಲಗಳು
1	ಚೈತ್ರ	ಮಾರ್ಚ್	22	ವಸಂತ	
2	ವೈಶಾಖ	ಎಪ್ರಿಲ್	21		
3	ಜೇಷ್ಠ	ಮೇ	22	ಗ್ರೀಷ್ಮ	ಬೇಸಿಗೆ
4	ಆಷಾಢ	ಜೂನ್	22		
5	ಶ್ರಾವಣ	ಜುಲೈ	23		
6	ಭಾದ್ರಪದ	ಆಗಸ್ಟ್	23	ವರ್ಷ	ಮಳೆಗಾಲ
7	ಅಶ್ವಯುಜ	ಸೆಪ್ಟೆಂಬರ್	23	ಶರದ್	ಈ.ಋ. ಪವನಗಳ ಕಾಲ
8	ಕಾರ್ತಿಕ	ಅಕ್ಟೋಬರ್	23		
9	ಮಾರ್ಗಶಿರ	ನವಂಬರ್	22	ಹೇಮಂತ	ಚಳಿಗಾಲ
10	ಪುಷ್ಯ	ಡಿಸೆಂಬರ್	22		
11	ಮಾಘ	ಜನೆವರಿ	21	ಶಿಶಿರ	
12	ಫಾಲ್ಗುಣ	ಫೆಬ್ರವರಿ	20		

ರಾಷ್ಟ್ರೀಯ ಕ್ಯಾಲೆಂಡರ್: ಶಕ ವರ್ಷವನ್ನಾಧರಿಸಿದೆ (ಚೈತ್ರ ಮಾಸದಿಂದ ಫಾಲ್ಗುಣ ಮಾಸದ ವರೆಗೆ) ಪ್ರಪಂಚ ದೇಶಗಳಂತೆ ಗ್ರೆಗರಿಯನ್ ಕ್ಯಾಲೆಂಡರನ್ನು ಅಧಿಕಾರ ಕ್ಯಾಲೆಂಡರಾಗಿ ಉಪಯೋಗಿಸುತ್ತೇವೆ.

ಭಾರತದ ಪ್ರಾಮಾಣಿಕ ಕಾಲಮಾನ 82 ½° ಪೂರ್ವ ರೇಖಾಂಶ ಆಧಾರಿತ ಗ್ರೀನ್ವಿಚ್ ಪ್ರಾಮಾಣಿಕ ಕಾಲಕ್ಕಿಂತ ನಮ್ಮ ದೇಶದ ಕಾಲವು 5.30 ನಿ. ಮುಂದೆ ಇದೆ.



ರಾಷ್ಟ್ರ ಪರಂಪರೆಯ ಪ್ರಾಣಿ: ಆನೆ -

SCERT TELANGANA

ಶಾತವಾಹನ ರಾಜರ ಕಾಲ ಕ್ರಮಣಿಕೆ

(ಕ್ರಿ.ಪೂ. 230 – ಕ್ರಿ.ಶ. 225)

ಶ್ರೀಮುಖ	ಕ್ರಿ.ಪೂ. 271 – ಕ್ರಿ.ಪೂ. 248
ಕೃಷ್ಣ	ಕ್ರಿ.ಪೂ. 208 – ಕ್ರಿ.ಪೂ. 230
ಶಾತಕರ್ಣಿ–I	ಕ್ರಿ.ಪೂ. 230 – ಕ್ರಿ.ಪೂ. 220
ಶಾತಕರ್ಣಿ–II	ಕ್ರಿ.ಪೂ. 184 – ಕ್ರಿ.ಪೂ. 128
ಹಾಲ	ಕ್ರಿ.ಶ. 42 – ಕ್ರಿ.ಶ. 51
ಗೌತಮಿಪುತ್ರ ಶಾತಕರ್ಣಿ	ಕ್ರಿ.ಶ. 62 – ಕ್ರಿ.ಶ. 86
ವಶಿಷ್ಟ ಪುತ್ರ ಪುಲೋಮಾವಿ	ಕ್ರಿ.ಶ. 86 – ಕ್ರಿ.ಶ. 114
ಶಿವಶ್ರೀ ಶಾತಕರ್ಣಿ	ಕ್ರಿ.ಶ. 114 – ಕ್ರಿ.ಶ. 128
ಯಜ್ಞಶ್ರೀ ಶಾತಕರ್ಣಿ	ಕ್ರಿ.ಶ. 128 – ಕ್ರಿ.ಶ. 157

ಚೋಳ ರಾಜರ ಕಾಲ ಕ್ರಮಣಿಕೆ

(ಕ್ರಿ.ಶ. 900 – ಕ್ರಿ.ಶ. 1279)

ವಿಜಯಾಲಯ	ಕ್ರಿ.ಪೂ. 850 – ಕ್ರಿ.ಪೂ. 871
ಆದಿತ್ಯ ಚೋಳ	ಕ್ರಿ.ಪೂ. 871 – ಕ್ರಿ.ಪೂ. 905
ಪರಾಂತಕ–I	ಕ್ರಿ.ಪೂ. 905 – ಕ್ರಿ.ಪೂ. 907
ರಾಜರಾಜ–I	ಕ್ರಿ.ಪೂ. 985 – ಕ್ರಿ.ಪೂ. 1016
ರಾಜರಾಜ ಚೋಳ	ಕ್ರಿ.ಶ. 1016 – ಕ್ರಿ.ಶ. 1044
ರಾಜಾಧಿರಾಜ	ಕ್ರಿ.ಶ. 1044 – ಕ್ರಿ.ಶ. 1052
ವೀರರಾಜೇಂದ್ರ	ಕ್ರಿ.ಶ. 1064 – ಕ್ರಿ.ಶ. 1069
ಕುಲೋತ್ತುಂಗ ಚೋಳ	ಕ್ರಿ.ಶ. 1070 – ಕ್ರಿ.ಶ. 1121
ರಾಜ ರಾಜ – II	ಕ್ರಿ.ಶ. 1173 – ಕ್ರಿ.ಶ. 1178
ಕುಲೋತ್ತುಂಗ ಚೋಳ–III	ಕ್ರಿ.ಶ. 1178 – ಕ್ರಿ.ಶ. 1219
ರಾಜೇಂದ್ರ – III	ಕ್ರಿ.ಶ. 1256 – ಕ್ರಿ.ಶ. 1270

ತೆಲಂಗಾಣ ರಾಜ್ಯದ ಮಾಹಿತಿ

* ದೇಶ	:	ಭಾರತ
* ಪ್ರಾಂತ	:	ದಕ್ಷಿಣ ಭಾರತ
* ಅವತರಣ ದಿನ	:	ಜೂನ್ 2, 2014
* ರಾಜಧಾನಿ	:	ಹೈದರಾಬಾದ್
* ಜಿಲ್ಲೆಗಳ ಸಂಖ್ಯೆ	:	10(ಹೈದರಬಾದ್,ಮಹಬೂಬ್ ನಗರ್, ರಂಗಾರೆಡ್ಡಿ, ಮೆಡಕ್, ನಲ್ಗೊಂಡ, ಕರೀಂನಗರ್, ನಿಜಾಮಾಬಾದ್, ಖಮ್ಮಂ, ಅದಿಲಾಬಾದ್,ವರಂಗಲ್)
* ರಾಜ್ಯ ಭಾಷೆ	:	ತೆಲುಗು, ಉರ್ದು
* ವಿಧಾನ ಸಭಾ ಸ್ಥಾನಗಳ ಸಂಖ್ಯೆ	:	119
* ವಿಧಾನ ಪರಿಷತ್ ಸದಸ್ಯರ ಸಂಖ್ಯೆ	:	40
* ಲೋಕಸಭಾ ಸ್ಥಾನಗಳ ಸಂಖ್ಯೆ	:	17
* ರಾಜ್ಯಸಭ ಸ್ಥಾನಗಳ ಸಂಖ್ಯೆ	:	07
* ಪ್ರಮುಖ ನದಿಗಳು	:	ಗೋದಾವರಿ, ಕೃಷ್ಣಾ, ಮಂಜೀರ, ಮೂಸೀ
* ಜಿಲ್ಲಾ ಪ್ರಜಾಪರಿಷತಗಳ ಸಂಖ್ಯೆ	:	9
* ಮಂಡಲ ಪ್ರಜಾಪರಿಷತಗಳ ಸಂಖ್ಯೆ	:	443
* ಮುನ್ಸಿಪಲ್ ಕಾರ್ಪೋರೇಷನಗಳ ಸಂಖ್ಯೆ	:	06
* ಪುರಪಾಲಕ ಸಂಘಗಳ ಸಂಖ್ಯೆ	:	38
* ರೆವೆನ್ಯೂ ಮಂಡಲಗಳ ಸಂಖ್ಯೆ	:	464
* ಗ್ರಾಮ ಪಂಚಾಯತಗಳ ಸಂಖ್ಯೆ	:	8778
* ಜನಸಂಖ್ಯೆ (2011ರ ಜನಗಣತಿ ಪ್ರಕಾರ)	:	351.94 ಲಕ್ಷ
* ಪುರುಷರ ಸಂಖ್ಯೆ	:	177.04 ಲಕ್ಷ
* ಸ್ತ್ರೀಯರ ಸಂಖ್ಯೆ	:	174.90 ಲಕ್ಷ
* ಸ್ತ್ರೀ ಪುರುಷಲಿಂಗ ನಿಷ್ಪತ್ತಿ	:	998:1000
* ಜನಸಾಂದ್ರತೆ (1 ಚ.ಕಿ.ಮಿ.)	:	307
* ಸಾಕ್ಷರತೆಯ ದರ	:	66.46%
* ಪುರುಷರ ಸಾಕ್ಷರತಾ ದರ	:	74.95%
* ಸ್ತ್ರೀಯರ ಸಾಕ್ಷರತಾದರ	:	57.92%

SCERT TELANGANA

ಆಶಿಸಿದ ಅಭ್ಯಾಸದ ಫಲಿತಾಂಶಗಳು

ಸಮಾಜಶಾಸ್ತ್ರ
7ನೇ ತರಗತಿ

ವಿದ್ಯಾರ್ಥಿಗಳು ಇವನ್ನು ಕಲಿಯುತ್ತಾರೆ.....

- ಪ್ರವಾಹದಂತಹ ವೈಪರಿತ್ಯಗಳು ಉಂಟಾದಾಗ ತೆಗೆದುಕೊಳ್ಳಬೇಕಾದ ನಿವಾರಣೆ ಚರ್ಯೆಗಳು ಮತ್ತು ಕಾರಣಗಳನ್ನು ವಿವರಿಸುತ್ತಾರೆ.
- ಕಾಕತೀಯ, ಮೋಘಲ ಮತ್ತು ವಿಜಯನಗರ ರಾಜರು ಸೈನಿಕ ವ್ಯೂಹಗಳು ಮತ್ತು ಪರಿಪಾಲನೆ ಕುರಿತು ವಿವರಿಸುತ್ತಾರೆ.
- ವಿವಿಧ ದೇವಾಲಯಗಳು, ಸಮಾಧಿಗಳು ಮತ್ತು ಮಸೀದಿಗಳ ನಿರ್ಮಾಣದಲ್ಲಿ ಅವಲಂಭಿಸಿದ ವಿವಿಧ ಅಭಿವೃದ್ಧಿ ರೀತಿಗಳನ್ನು, ಮತ್ತು ಸಾಂಕೇತಿಕತೆಯನ್ನು, ಕುರಿತು ವಿವರಿಸುತ್ತಾರೆ.
- ವಿವಿಧ ಮತಗಳ, ಉದ್ಯಮಗಳ ಆವಿರ್ಭಾವನೆಗೆ ಮಾರ್ಗವಾದ ಕಾರಣಗಳನ್ನು ವಿಶ್ಲೇಷಿಸುತ್ತಾರೆ.
- ತಮ್ಮ ಸ್ವಂತ ನಿಯೋಜಕವರ್ಗವನ್ನು ತಮ್ಮ ರಾಷ್ಟ್ರ ನಕ್ಷೆಯಲ್ಲಿ ಗುರ್ತಿಸುತ್ತಾರೆ.
- ನಕ್ಷೆಗಳನ್ನು, ವರ್ಗೀಕರಿಸಿ, ಅವುಗಳ ಉಪಯೋಗಗಳನ್ನು ವಿವರಿಸುತ್ತಾರೆ.
- ಎತ್ತರ ಪ್ರದೇಶಗಳಲ್ಲಿ ಹಾಗೂ ತಗ್ಗು ಪ್ರದೇಶಗಳಲ್ಲಿ ನಿವಸಿಸುವ ಪ್ರಜೆಗಳ ಜೀವನ ವಿಧಾನದಲ್ಲಿನ ವ್ಯತ್ಯಾಸಗಳನ್ನು, ಪಟ್ಟಿಕೆಯ ರೂಪದಲ್ಲಿ ತಯ್ಯಾರಿ ಮಾಡುತ್ತಾರೆ.
- ಜಲಚಕ್ರವನ್ನು ವಿವರಿಸುತ್ತಾರೆ.
- ಮೀನುಗಾರರ ಜೀವನದ ಸ್ಥಿತಿಗತಿಗಳ ಬಗ್ಗೆ ಪ್ರತಿಸ್ಪಂದಿಸುತ್ತಾರೆ.
- ಐರೋಪದಲ್ಲಿ (ಖಂಡಗಳಲ್ಲಿ) ಪ್ರವಹಿಸುವ ನದಿಗಳ ವಿವರಣೆಗಳನ್ನು, ಶೇಖರಿಸಿ ಪಟ್ಟಿಕೆ ತಯ್ಯಾರಿಸುತ್ತಾರೆ.
- ಆಫ್ರಿಕಾದಲ್ಲಿನ ಮರುಭೂಮಿಗಳನ್ನು, ಆಫ್ರಿಕಾ ನಕ್ಷೆಯಲ್ಲಿ ಗುರ್ತಿಸಿ ಅವುಗಳನ್ನು ವಿವರಿಸುತ್ತಾರೆ.
- ಬಾಲಕಾರ್ಮಿಕ ವ್ಯವಸ್ಥೆ ಬಗ್ಗೆ ಕರಪತ್ರವನ್ನು, ತಯ್ಯಾರಿಸುತ್ತಾರೆ.
- ಪಾರಿಶ್ರಾಮಿಕಾಕರಣದಿಂದ ಉತ್ಪತ್ತಿ ರಂಗದಲ್ಲಿ ಬಂದ ಬದಲಾವಣೆಗಳನ್ನು, ವಿಶ್ಲೇಷಿಸುತ್ತಾರೆ.
- 1857ರ ಪ್ರತಿಭಟನೆ (ಜಳುವಳಿ)ಯ ಕಾರಣಗಳನ್ನು, ವಿವರಿಸುತ್ತಾರೆ.
- ರಾಷ್ಟ್ರ ಶಾಸನ ಸಭೆಯ ಕಾನೂನುಗಳನ್ನು ತಯಾರಿಸುವ ವಿಧಾನವನ್ನು ವಿವರಿಸುತ್ತಾರೆ.
- ಇಟ್ಟಿಗೆ ಭಟ್ಟಿಯಲ್ಲಿ ಕೆಲಸಮಾಡುವ ಕಾರ್ಮಿಕರ ಸ್ಥಿತಿಗತಿಗಳನ್ನು, ವಿವರಿಸುತ್ತಾರೆ.
- ದೇವಾಲಯಗಳ ವಿಧ್ವಂಸದ ಬಗ್ಗೆ ಪ್ರತಿಸ್ಪಂದಿಸುತ್ತಾರೆ.

© SCERT TELANGANA

ತೆಲಂಗಾಣ ವಿದ್ಯಾ ಶಾಖೆ
ತೆಲಂಗಾಣ ಸರಕಾರ
ಎನ್‌ಸಿಈಆರ್‌ಟಿ
NCERT